VARDHAMĀNA PURĀṆAM

OF

ĀCHAṆṆA

EDITED

BY

M. MARIAPPA BHAT, M.A., L.T.
Head of the Department of Kannada

AND

M. GOVINDA RAO, M.A., B.O.L.
Junior Lecturer in Kannada

UNIVERSITY OF MADRAS

ಮದ್ರಾಸು ಯುನಿವರ್ಸಿಟಿ ಕರ್ನಾಟಕ ಗ್ರಂಥಮಾಲೆ: ಸಂಖ್ಯೆ ೧೧.

ಆಚಣ್ಣಕವಿ ವಿರಚಿತಂ

ಶ್ರೀ ವರ್ಧಮಾನ ಪುರಾಣಂ

ಸಂಪಾದಕರು:

ಎಂ. ಮರಿಯಪ್ಪ ಭಟ್ಟ, ಎಂ. ಎ., ಎಲ್. ಟಿ.

ಎಂ. ಗೋವಿಂದ ರಾವ್, ಎಂ. ಎ., ಬಿ. ಒ. ಎಲ್.

೧೯೫೪

PRINTED BY
THOMPSON AND CO., LTD.,
MADRAS.

PREFACE

Vardhamana Purana is a beautiful work in Kannada, written in champu style, by the poet Achanna or Achiraja. It deals with the story of the twentyfourth Thirthankara, Sri Vardhamana Mahavira, and his previous births. In this great work, we have a harmonious blending of Kavya Dharma and Jaina Dharma. The stories depicted here are very interesting and fascinating and all the tenets of the Jaina faith are embedded in them, making the work very instructive and useful to one and all, especially to those who belong to the Jaina religion. It is written in Halagannada or old Kannada and, by virtue of its intrinsic merit, it has won a place in the hearts of those who are interested in the Karnataka culture, language and literature. And that is why Parsva Pandita, a great poet, who lived in the beginning of the 13th century, has spoken very high of this work. Here we have fine descriptions and noble sentiments, suited to the occasion. The poet seems to excel in the art of embellishment of words and their meanings. Examples for this can be had in plenty throughout the work and, in order to do this, Achanna had a vast vocabulary of Sanskrit and Kannada words—some of which are very rare and out of use now. He had also a large fund of beautiful phrases and proverbs which are scattered throughout his work. His use of alliterations, his compositions of 'Chitra kavita' such as '*dvyakshari*' and '*gatapratyagata*', some of the rare metres, both desi and margi, that he has used, his ornate and dignified style etc., contribute to the greatness of his work. A critical account of the work has been furnished in the Kannada Introduction and to facilitate the comprehension of the main trend of the story, a short summary of it has been given elsewhere.

Besides this great work, Achanna has written a smaller one, entitled "Sripadashithi". This work contains about

ninetyfour verses in *kanda* metre, and deals with the greatness of the 'Pancha Paramestis' i. e., Arhanta, Siddha, Sadhu, Upadhyaya and Acharya. This might perhaps be the earlier attempt of Achanna in poetic composition.

Now, about the life of the poet, we get a good deal of materials from his work, Vardhamana Purana, itself. It is said that the poet is the son of Kesiraja or Kesavaraja and Mallambika. 'Vanivallabha' is his title. He is of the Bharadvaja gotra and is the disciple of an ascetic named 'Nandiyogindra'. His patron is 'Recharasa' the famous minister of the Kalachurya kings, who lived during the end of the 12th century and the beginning of the 13th century. About this minister, Recharasa, a fund of information can be gathered from inscriptions. The poet praises very much the good qualities of his patron in his work and, in fact, the work seems to have been undertaken only out of love for and to perpetuate the memory of Recharasa who is also called 'Vasudhaika Bandhava'. The poet says that, according to the wishes of his patron Recharasa, his father Kesiraja together with 'Thikkana, and 'Chavana' undertook to write the work. In the last chapter, however, we find the names of only two persons, namely 'Kesiraja' and 'Chama' who made all the preliminary preparations and left it at that. Thikkana seems to have deserted them even in the beginning. On account of his great regard for his patron on the one hand, and the request of the learned people on the other Achanna undertook to finish the work; and he executed it to the full satisfaction of his patron and the men of learning at the royal court.

A study of the inscriptions pertaining to the Kalachurya Kings gives us some hints about the persons mentioned by our poet. From Shikaripura 119 (Ep . Car. Vol. VII) we find that the Kalachurya King Ahavamalla (1180-82) had five able ministers, named 'Laxmana Dandesha', 'Chandugideva' 'Rechana Dandanatha' 'Sovana Chamupathi' and 'Kavana Dandanayaka'. Surrounded by these great ministers, the above named king Ahavamalla called for the great minister 'Kesimayya Danda-

nayaka', son of 'Holalamarasa' and 'Durgambika' and grandson of Kesavadeva and Pampambika of Bharadvaja Gotra and gave him the governance of Banavase country which he accepted as a distinguished favour. From the same inscription, we find also that Kesimayya or Kesavadeva Dandanatha had the following principal councillors—Narasinga Nayaka, Thikkaraja, Bachayya, Sovideva, Chamayya, Bichiraja and Dasiraja. Thus the three names mentioned by Achanna in his *Vardhamana Purana* occur in this inscription also. Shikaripura 123 also gives the name of Thikkarasa and praises him to be the best among ministers of Kesiraja. So it can be safely assumed that Kesiraja, along with two of his councillors, Thikkaraja and Chamayya, undertook to write this work according to the wishes of Recharasa, the minister of Kalachurya Ahavamalla. If this assumption is correct, it follows that our poet Achanna is the son of Kesimayya. But one point against this assumption is that the name of the poet's mother Mallambika does not occur in the inscriptions referred to above (i. e., Sh.119 and 123), but we find that Kesimayya had two wives named Laxmidevi and Siridevi. It is therefore difficult to say whether one of these two had the additional name of Mallambika or she is altogether a different person and is the third wife of Kesimayya. In the last chapter of his work, the poet describes himself to be the brother of Shankha, the lord of the city of Purikara (Puligere). This name is undoubtedly the shortened form of Shankara or Shankama. It was common, in those days, for the superior officers of the state to name their children after their kings or to assume those names themselves. So this Shankara must have been the son of an officer under Shankama, the predecessor of Ahavamalla. This officer, from what has been said already, is none other than Kesimayya, the father of Achanna.

The reign of Shankamadeva seems to have been eventful, for there seems to have been some trouble during that time. Kavana or Kavanayya is said to have proved himself to be the "upraiser of the sovereignty of the Kalachuryas" (Honnali 50, dated in 1180 A.D.) Apparently, he put down certain of the

feudatories and probably also some of the more troublesome independent neighbours among whom must be classed the rulers of the Velnada, Choleya, Hoysala and Konkana. We find also that Shankamadeva Chakri marched against the Ballala King so as to bring him down to his lotus feet for service. The ocean of his valour roared aloud while he marched on and caught hold of his Goddess of Fortune by the hand and brought her along with him (Shikaripura 197). This clearly shows that there were frequent wars between the Hoysalas and the Kalachuryas for supremacy and hence the Karnataka country was in an unsettled condition at that time. Shankama was succeeded by his brother Ahavamalla in or about 1181 A.D., who ruled for about three or four years only. With him, the supremacy of the Kalachuryas in Karnataka ended and Hoysala Vira Ballala took most of their territories. Even the faithful followers of the Kalachuryas were seen at the Court of Vira Ballala, serving under him. The General, Vasudhaika Bandhava Rechimayya or Recharasa, who had rendered eminent services to the Kalachuryas, joined Ballala II and became one of his ministers. He caused to be built about 1220 A.D. at Arsikere the Sahasrakuta Jinalaya and endowed it with the sanction of the king (Arsikere 77 dated 1220 A.D.) The record which mentions this fact states also that Arsikere at that time contained a thousand steadfast Jaina families and was styled the southern Ayyavale (i. e., Aihole). Recharasa set up also the God Shanthinatha at Jinanathapura, near Sravana Belgola (E C. II Sr. Bel. 380). We can infer from this that Recharasa spent the latter part of his life in piety, building Jinalayas and giving endowments to them, and also that the times were more propitious and peaceful than before to write a work of this type. So, what his father with his assistants could not accomplish, the poet was able to do under favourable circumstances and win all glory for himself.

As regards the date of composition of the work, we can definitely say that it is not earlier than 1189 A.D. For, the poet refers to Aggala who wrote his *Chandraprabha Purana* in the year 1189 (Kavicharite Vol. I P. 284). Parsva Pandita, who wrote his *Parsvanatha Purana* in or about the year 1205 A. D., has

praised this poet in his work. Hence, Achanna must have written his work between the years 1190 and 1205 A.D. Nandiyogindra, the guru of the poet, seems to have been living in the year 1189 A. D. according to an inscription (Kavi. Vol. I P. 300). This also corroborates the fact that the poet belonged to the latter half of the 12th century and the first half of the 13th century.

This work is based on a single palm-leaf manuscript belonging to the Jaina Central Library, Arrah. A press copy of it had been prepared in the Department some time back by Sri H. Sesha Iyengar (since retired). An attempt was made to procure one or more manuscript copies of this work for comparison but in vain. The work was however undertaken for publication in the Kannada series of the University of Madras so that at least now, this great Kannada classic might see the light of day. The manuscript that has been used seems to have been first written in the year 1429 A. D. and afterwards a copy was prepared by Chikka Thamma for Hiriyanna Setty. One of the important peculiarities of this manuscript is that it gives meanings of some of the words used by the poet and also parallel quotations from Sanskrit and Kannada works for some of the verses. It is in this manuscript that we find Nagavarma's name associated with the work *Vardhamana Purana*, leaving us to infer that Nagavarma wrote this Purana in Kannada.

It now remains for us to thank all those who have helped us in publishing this work. First of all, we must thank the curator of the Jaina Central Library, Arrah for having sent the manuscript and Sri H. Sesha Iyengar for preparing the press copy. Our thanks are due to Sri M. Govinda Pai, the poet Laureate, for his helpful suggestions with regard to the life of the poet and also to Messrs. Thompson & Co., Madras for the good printing and the fine get-up of the book. Finally, we thank very sincerely the authorities of the University of Madras, for permitting us to include this work in the publication series of the Department.

ವಿ ಷ ಯ ಸೂ ಚಿ

ಮುನ್ನುಡಿ

ಅಪ್ರಕಟಿತವಾದ ಪ್ರಾಚೀನ ಗ್ರಂಥಗಳನ್ನು ಬೆಳಕಿಗೆ ತರುವುದು ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ಶಾಖೆಯ ಉದ್ದೇಶಗಳಲ್ಲಿ ಒಂದಾಗಿದ್ದು ಈ ಬಗ್ಗೆ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ, ಅನಿವಾರ್ಯ ಕಾರಣಗಳಿಂದಾಗಿ ನಾವು ನೆನಸಿದಷ್ಟು ಗ್ರಂಥಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಶ್ರೀವರ್ಧಮಾನ ಪುರಾಣದ ಮುದ್ರಣ ಪ್ರತಿಯು ಹಿಂದೆಯೇ ಸಿದ್ಧವಾಗಿತ್ತು. ಇದರ ಮೂಲಪ್ರತಿಯು ಆರಾ ಸೆಂಟ್ರಲ್ ಜೈನ ಲೈಬ್ರರಿಯಲ್ಲಿರುವ ಒಂದು ತಾಳೆಯೋಲೆಯ ಹಸ್ತಲಿಖಿತ ಪ್ರತಿಯಾಗಿದೆ. ಅದು ಶಕವರ್ಷ ೧೩೫೧ನೆಯ ಕೀಲಕ ಸಂವತ್ಸರದ ಚೈತ್ರ ಶುದ್ಧ ೭ರಲ್ಲಿ ಪ್ರತಿ ಮಾಡಲ್ಪಟ್ಟದ್ದಾಗಿ ತಿಳಿದುಬರುತ್ತದೆ. ಆ ಪ್ರತಿಯಲ್ಲಿ ಹಲವು ಗ್ರಂಥಪಾತಗಳೂ ಸ್ಖಾಲಿತ್ಯಗಳೂ ಇದ್ದುದರಿಂದ ಅವುಗಳನ್ನು ಸರಿಪಡಿಸುವುದಕ್ಕಾಗಿ ಬೇರೊಂದು ಪ್ರತಿಯನ್ನು ಪಡೆಯಲು ಮಾಡಿದ ಪ್ರಯತ್ನವು ವಿಫಲವಾಯಿತು. ಆದುದರಿಂದ ಈ ಗ್ರಂಥವನ್ನು ನಮಗೆ ದೊರೆತ ಒಂದೇ ಒಂದು ಹಸ್ತಲಿಖಿತ ಪ್ರತಿಯ ಆಧಾರದಿಂದ ಪ್ರಕಟಿಸುವ ಸಾಹಸವನ್ನು ಮಾಡಿರುವೆವು.

ನಮಗೆ ದೊರೆತ ಹಸ್ತಲಿಖಿತ ಪ್ರತಿಯಲ್ಲಿ ಕಂಡುಬಂದ ಕೆಲವು ವೈಶಿಷ್ಟ್ಯಗಳನ್ನು ಇಲ್ಲಿ ಹೇಳದಿರಲಾರೆವು. ಮೊದಲನೆಯದಾಗಿ, ಗ್ರಂಥದಲ್ಲಿ ಉಪಯೋಗಿಸಲ್ಪಟ್ಟಿರುವ ಕೆಲವು ಕಠಿಣ ಶಬ್ದಗಳಿಗೆ ಓಲೆಯ ಪಕ್ಕದಲ್ಲಿ ಅರ್ಥ ಬರೆದಿದೆ. ಕೆಲವು ಸಂದರ್ಭಗಳಲ್ಲಿ ಆ ಅರ್ಥಗಳಿಗೆ ಆಕರಗಳಾಗಿರುವ ಗ್ರಂಥಗಳ ಹೆಸರನ್ನೂ ಹೇಳಿದೆ. ಹಲವು ಕಡೆಗಳಲ್ಲಿ ಕವಿಯ ಮಾತುಗಳನ್ನು ಸಮರ್ಥಿಸುವುದಕ್ಕಾಗಿ ಉತ್ತರ ಪುರಾಣವೇ ಮುಂತಾದ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳನ್ನು ಎತ್ತಿ ಬರೆದಿದೆ. ಒಂದು ಸಂದರ್ಭದಲ್ಲಿ ನಾಗವರ್ಮಕೃತ ವರ್ಧಮಾನ ಪುರಾಣದಿಂದ ಒಂದು ಕಂದ ಪದ್ಯವು ಉದ್ಧರಿಸಲ್ಪಟ್ಟಿದೆ. ಕರ್ಣಾಟಕ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಈ ವಿಷಯವು ಅತಿ ಮಹತ್ವದ್ದಾಗಿದೆ. ನಾಗವರ್ಮನೆಂಬ ಕವಿಯು ಒಂದು ಪುರಾಣವನ್ನು ರಚಿಸಿರುವುದಾಗಿ ಜನ್ನಕವಿಯು ತನ್ನ ಅನಂತನಾಥ ಪುರಾಣದಲ್ಲಿ ಹೇಳಿರುತ್ತಾನೆ. ಆದರೆ ಆ ನಾಗವರ್ಮನಾರು? ಅವನು ಬರೆದ ಪುರಾಣದ ಹೆಸರೇನು? ಎಂಬುದು ಚರ್ಚಾಸ್ಪದವಾದ ವಿಷಯವಾಗಿತ್ತು. ಇಲ್ಲಿ ದೊರೆತಿರುವ ವಿಷಯವು ಈ ಪ್ರಶ್ನೆಗಳ ಮೇಲೆ ಸ್ವಲ್ಪ ಮಟ್ಟಿಗೆ ಬೆಳಕನ್ನು ಬೀರುತ್ತದೆ. ನಾಗವರ್ಮನು ವರ್ಧಮಾನ ಪುರಾಣವನ್ನು ಬರೆದಿರುವನೆಂಬುದು ಇದರಿಂದ ಸ್ಪಷ್ಟವಾ

ಯಿತು. ಎರಡನೆಯ ನಾಗವರ್ಮನು ತನ್ನ ಕಾವ್ಯಾವಲೋಕನ ಮತ್ತು ವಸ್ತುಕೋಶ ಎಂಬ ಎರಡು ಗ್ರಂಥಗಳ ಮಂಗಳ ಪದ್ಯಗಳಲ್ಲಿ ಶ್ರೀ ವರ್ಧಮಾನ ಸ್ವಾಮಿಯನ್ನು ಸ್ತುತಿಸಿರುವ ಕಾರಣ, ಆತನೇ ಈ ವರ್ಧಮಾನ ಪುರಾಣವನ್ನೂ ಬರೆದಿರಬಹುದೆಂಬ ಶಂಕೆಗೆ ಪ್ರಬಲವಾದ ಆಧಾರವು ಸಿಕ್ಕಿದಂತಾಯಿತು.

ಈ ಗ್ರಂಥದ ಓಲೆಯ ಪ್ರತಿಯನ್ನು ಕಳುಹಿಸಿಕೊಟ್ಟ ಅರಾ ಸೆಂಟ್ರಲ್ ಜೈನ ಲೈಬ್ರರಿಯ ಅಧಿಕಾರಿಗಳಿಗೂ, ಇದರ ಮುದ್ರಣದ ಪ್ರತಿಯನ್ನು ತಯಾರಿಸಿದ ಶ್ರೀ ಎಚ್. ಶೇಷ ಅಯ್ಯಂಗಾರರಿಗೂ, ಇದನ್ನು ಅಂದವಾಗಿ ಮುದ್ರಿಸಿಕೊಟ್ಟ 'ಥಾಮ್‌ಸನ್ ಎಂಡ್ ಕೊ'—ಅವರಿಗೂ ನಮ್ಮ ಕೃತಜ್ಞತೆಗಳನ್ನರ್ಪಿಸುವೆವು. ಕೊನೆಯದಾಗಿ, ಇದನ್ನು ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡಶಾಖೆಯ ಗ್ರಂಥಮಾಲೆಯಲ್ಲಿ ಸೇರಿಸಿ, ಪ್ರಕಟಿಸುವುದಕ್ಕೆ ಸಮ್ಮತಿಯನ್ನು ಕೊಟ್ಟು, ಸಕಲ ವಿಷಯಗಳಲ್ಲಿಯೂ ಸಹಾಯ ವನ್ನಿತ್ತ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವೆವು.

ಶ್ರೀ ವರ್ಧಮಾನ ಪುರಾಣಂ

ಕವಿಕಾವ್ಯ ವಿಚಾರಂ

ಶ್ರೀ ವರ್ಧಮಾನ ಪುರಾಣವಂಬ ಈ ಚಂಪೂಗ್ರಂಥವನ್ನು ಬರೆದ ಕವಿಯು ತನ್ನ ವಿಷಯವಾಗಿ ಕೆಲವಂಶಗಳನ್ನು ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ಅದರಿಂದ ಅವನ ಹೆಸರು ಆಚಣ್ಣ[1] ಅಥವಾ ಆಚಿರಾಜ[2] ಎಂದೂ, ಅವನು ಭಾರದ್ವಾಜಗೋತ್ರದವನೆಂದೂ, ಅವನ ತಂದೆ ಕೇಶಿರಾಜ ಅಥವಾ ಕೇಶವರಾಜ[3]ನೆಂದೂ, ತಾಯಿ 'ಸಾರೋದಾರ ಪವಿತ್ರತಾದಿ' ಗುಣವುಳ್ಳ ಮಲ್ಲಾಂಬಿಕೆಯೆಂದೂ, ಅವನಿಗೆ ವಾಣೀವಲ್ಲಭನೆಂಬ ಬಿರುದಿದ್ದಿತೆಂದೂ ತಿಳಿದುಬರುತ್ತದೆ. 'ತಾರೇಶೋಜ್ಜ್ವಳಕೀರ್ತಿ ಜೈನರುಚಿ'[4] ಎಂದು ಕವಿಯು ತನ್ನನ್ನು ವಿಶೇಷಿಸಿಕೊಂಡಿರುವುದರಿಂದ, ಈತನು ಬಹಳ ಪ್ರಖ್ಯಾತನಾಗಿದ್ದನೆಂದೂ, ಜಿನಮತದಲ್ಲಿ ಬಹಳ ಆಸಕ್ತಿಯುಳ್ಳವನಾಗಿದ್ದನೆಂದೂ, ಪರಿಶುದ್ಧವಾದ ಆಚಾರವುಳ್ಳವನಾಗಿದ್ದನೆಂದೂ ಗೊತ್ತಾಗುತ್ತದೆ. ಇವನು ಅತಿ ಪ್ರಖ್ಯಾತನಾದ ಕವಿಯಾಗಿದ್ದರೂ, ತಾನು ಬುದ್ಧಿವಂತನೆಂಬ ಹೆಮ್ಮೆ ಇವನಿಗಿರಲಿಲ್ಲ. ಇವನು ತನ್ನ ವಿನಯಶೀಲವನ್ನು ಈ ಕೆಳಗಿನ ಪದ್ಯದಲ್ಲಿ ತೋರ್ಪಡಿಸಿಕೊಂಡಿದ್ದಾನೆ:—

ಗಣಧರರಿಂ ಬಹುಶ್ರುತರಿನಾದಮೆ ವರ್ಣಿತಮಾದುದಂ ಜಗ।
ತ್ಪ್ರಣುತಮನೊಲ್ದು ವೀರಜಿನಚಾರುಚರಿತ್ರಮನಾತ್ಮಶಕ್ತಿಯಂ॥
ಗಣಿಯಿಸದಲ್ಪಧೀಧನನೆನಾನಭಿವರ್ಣಿಸಿದಪ್ಪೆನಾಜಿನಾ।
ಗ್ರಣಿಯಪದಾರವಿಂದಯುಗಭಕ್ತಿಸುಧಾನುಭವೋತ್ಥ ಶಕ್ತಿಯಿಂ॥

(ಆ ೧. ಪ ೨೫)

ಈ ಪದ್ಯದಲ್ಲಿ ಕವಿಯು ತನ್ನನ್ನು 'ಅಲ್ಪಧೀಧನ' ನೆಂದು ಹೇಳಿಕೊಂಡಿರುವನು.

---

1 ವರ್ಧಮಾನ ಪುರಾಣಂ ಪು. 4 ಪ. ೨೪

2 ,, ,, ಪು. 284 ಪ. ೯೨.

3 ,, ,, ಆಶ್ವಾಸಾಂತದ ಗದ್ಯ.

4 ,, ,, ಪು. 4 ಪ. ೨೪.

ಅಷ್ಟೇ ಅಲ್ಲದೆ, ಕೊನೆಯ ಆಶ್ವಾಸದ ೯೧ನೆಯ ಪದ್ಯದಲ್ಲಿ :—

ವರವಸುಧೈಕಬಾಂಧವನ ಬಂಧುರ ಭಾಗ್ಯನ ದಂಡನಾಥ ರೇ।
ಚರಸನ ಮಾನಸಪ್ರಿಯಮೆನಿಪ್ಪ ಜಗನ್ನುತ ವರ್ಧಮಾನಸ॥
ಚ್ಚರಿತಮನಿಂತಿದಂ ನಯದೆ ಭಾವಿಸಿ ಭಾವಿಸಿ ನೋಡಿ ಬಿಟ್ಟುದು।
ಚ್ಚರಮನತಿಪ್ರಮೋದದೊಳೆ ತಿರ್ದುಗೆ ಕಾವ್ಯಕಳಾವಿಶಾರದರ್॥

ಎಂದು ತನ್ನ ಗ್ರಂಥವನ್ನು ತಿದ್ದುವಂತೆ ಕವಿಯು ವಿದ್ವಜ್ಜನರನ್ನು ಪ್ರಾರ್ಥಿಸಿಕೊಂಡಿದ್ದಾನೆ. ಇದೂ ಅವನ ವಿನಯವನ್ನೇ ತೋರಿಸುತ್ತದೆ.

ಕವಿಯು ತನ್ನ ಪೋಷಕನಾದ ರೇಚವಿಭುವನ್ನು ಬಹಳವಾಗಿ ಕೊಂಡಾಡಿದ್ದಾನೆ.[5] ಆತನಿಗೆ ವಸುಧೈಕಬಾಂಧವನೆಂಬ ಬಿರುದಿದ್ದಂತೆ ತಿಳಿಯುತ್ತದೆ. ಅವನು "ಜಿನೇಂದ್ರ ಮತಾಬ್ಜಭಾನು; ಪುಣ್ಯಾಕರಂ; ಅರ್ಥಿಕಲ್ಪತರು; ಭೋಗಪುರಂದರಂ; ಅಂಗಜೋಪಮಂ; ಭೀಕರವೈರಿವಾರಣ ವಿದಾರಣಕೇಸರಿ; ಸತ್ಕಳಾಢ್ಯಂ" ಆಗಿ ರಂಜಿಸುತ್ತಿದ್ದನೆಂದು ಕವಿಯು ವರ್ಣಿಸಿದ್ದಾನೆ. ಅವನಿಗೆ ರೇಚಿಮಯ್ಯ ಅಥವಾ ರೇಚರಸ[6] ನೆಂದೂ ರೇಚಣಚಮೂಪತಿ[7] ಯೆಂದೂ ಹೆಸರಿದ್ದಂತೆ ತಿಳಿಯುತ್ತದೆ. ಆ ರೇಚಣನು ಕಾಲಚೂರ್ಯ ರಾಜರ ಆಶ್ರಯದಲ್ಲಿದ್ದು, ಅವರಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದನು. ಕಾಲಚೂರ್ಯ ಆಹವಮಲ್ಲನಿಗೆ (1180-1183) ಲಕ್ಷ್ಮಣ, ಚಂದಣ, ರೇಚಣ, ಸೋವಣ, ಕಾವಣರೆಂಬ ಸಮರ್ಥರಾದ ಐದುಮಂದಿ ಮಂತ್ರಿಗಳಿದ್ದರು. ಕೇಶಿಮಯ್ಯನೆಂಬ ದಂಡನಾಯಕನು ಆಹವಮಲ್ಲನಿಗೆ ಮಾಡಿದ ಸೇವೆಗೆ ಪ್ರತಿಫಲವಾಗಿ ಆತನಿಂದ ಬನವಸೆ ನಾಡಿಗೆ ಒಡೆಯನಾಗಿ ನೇಮಕಹೊಂದಿದನು.[8]

---

5 ವ. ಪು. ಪು. 4 ಪ ೨೨.

6 Mysore Gazetteer by C. Hayavadana Rao. Vol. II Part II.

7 ವ. ಪು. ಪು. 4 ಪ ೨೩.

8 ಶಿಕಾರಿಪುರ 119 ರಲ್ಲಿ—ಕೇಶವದೇವ ದಂಡನಾಯಕನ ಕುರಿತು ಹೀಗಿದೆ:—

ವ ll ಅಂತನೇಕ ಗುಣಗಣಾಳಂಕೃತ ಮಹಾಪ್ರಧಾನರ್ ಸಹಿತಂ। ಶ್ರೀಮದಾಹವಮಲ್ಲ ಮಹೀಪಾಲಕಂ ಶ್ರೀಮನ್ಮಹಾಪ್ರಧಾನಂ ಸಕಲಗುಣಾಧಾನಂ ಭಾರಧ್ವಾಜಗೋತ್ರಪವಿತ್ರಂ। ಕೇಶವದೇವಪಂಪಾಂಬಿಕಾ ಪೌತ್ರಂ। ಹೊಳಲಮರಸ ದುರ್ಗಾಂಬಿಕಾ ಪುತ್ರಂ। ಲಕ್ಷ್ಮಾದೇವೀ ಮನೋನಯನ ವಲ್ಲಭಂ। ಭಯಲೋಭ ದುರ್ಲಭಂ। ಕದನತ್ರಿನೇತ್ರಂ। ವಿಬುಧಜನಮಿತ್ರಂ। ಪುರಾತನಾಮಾತ್ಯ ಚರಿತ್ರಂ। ಸಕಳಗುಣಪಾತ್ರಂ। ಸಮಧಿಗತ ಪಂಚಮಹಾಶಬ್ದ ಮಹಾಸಾಮಂತ ಸೇನಾಪತಿ ಬಾಹತ್ತರನಿಯೋಗಾಧಿಷ್ಠಾಯಕಂ। ಸಕಳ ಲಕ್ಷ್ಮೀ ನಾಯಕಂ। ವೈರಿಭಯದಾಯಕನೆಂಬೀಬಿರುದಗುಣನಾಮಯಥಾರ್ಥ ಶ್ರೀಮತ್ಕೇಶಿಮಯ್ಯದಂಡನಾಯಕನಂ ಕರದು ದಕ್ಷಿಣ ದಿಗ್ಭಾಗದ ಭಂಡಾರವಾಡದೇಶಮಂಬಪ್ಪನೆ ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂ ಮಾಳ್ಪುದೆಂದು ಬನವಸೆನಾಡಂ ಕುಡಲ್ ಮಹಾಪ್ರಸಾದಮೆಂದು ಕಯ್ಕೊಂಡ ಮಹಾಮಾತ್ಯನ ಮಹದ್ಗುಣಗಳೆಂತೆಂದಡೆ—

ಆದರೆ ಪ್ರತಾಪಶಾಲಿಯಾದ ಹೊಯ್ಸಳ ವೀರಬಲ್ಲಾಳನು (1173—1220) ಕಾಲಚೂರ್ಯ ರಾಜ್ಯವನ್ನು ವಶಮಾಡಿಕೊಂಡದ್ದರಿಂದ, ಈ ಅಧಿಕಾರಿಗಳೆಲ್ಲರೂ ಒಬ್ಬೊಬ್ಬರಾಗಿ ಹೊಯ್ಸಳರಾಜನ ಆಶ್ರಯವನ್ನು ಪಡೆದಂತೆ ತೋರುತ್ತದೆ. ಸುಮಾರು ಕ್ರಿ. ಶ. 1220ರಲ್ಲಿ ರೇಚರಸನು ಅರಸಿಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿ, ಬಲ್ಲಾಳರಾಜನ ಅನುಮತಿಯಿಂದ ಅದಕ್ಕೆ ದತ್ತಿಯನ್ನು ಬಿಟ್ಟಂತೆ ಒಂದು ಶಾಸನದಿಂದ ತಿಳಿಯುತ್ತದೆ[9]. ಆ ಕಾಲದಲ್ಲಿ ಅರಸಿಕೆರೆಯಲ್ಲಿ ನಿಶ್ಚಲಭಕ್ತಿಯುತರಾದ ಒಂದು ಸಾವಿರ ಜೈನ ಮನೆತನದವರಿದ್ದರೆಂದೂ, ಈ ಕಾರಣದಿಂದ ಅದಕ್ಕೆ ದಕ್ಷಿಣದ ಐಹೊಳೆಯೆಂಬ ಪ್ರಸಿದ್ಧಿಯುಂಟಾಗಿತ್ತೆಂದೂ, ಅದೇ ಶಾಸನದಿಂದ ಗೊತ್ತಾಗುತ್ತದೆ. ರೇಚರಸನು ಶ್ರಾವಣಬೆಳ್ಗೊಳದ ಸಮೀಪದಲ್ಲಿರುವ ಜಿನನಾಥಪುರದಲ್ಲಿ ಶಾಂತಿನಾಥ ತೀರ್ಥಂಕರನ ವಿಗ್ರಹವನ್ನು ಪ್ರತಿಷ್ಠಿಸಿದನೆಂದು ತಿಳಿದುಬರುತ್ತದೆ.[10] ಈ ಕಾರಣದಿಂದ ಕವಿಯು ಇವನನ್ನು "ಜಿನೇಂದ್ರಮತಾಬ್ಜ ಭಾನು; ಪುಣ್ಯಾಕರಂ" ಎಂದು ಹೊಗಳಿರುವುದು ಉಚಿತವಾಗಿಯೇ ಇದೆ.

ಅರಸಿಕೆರೆ 69ನೆಯ ಶಾಸನದಲ್ಲಿ ಒಬ್ಬ ರೇಚಣ ಮಂತ್ರಿಯನ್ನು ಈ ರೀತಿಯಾಗಿ ವರ್ಣಿಸಿದೆ :—

"ಕುಲಮುಂ ಪೇೞಿಱ್ವಡೆ ವಾಜಿವಂಶತಿಲಕಂ ಸನ್ಮಂತ್ರಮಂತ್ರಿತ್ವದೊಳ್ ।
ಪಲರುಂ ಜೀಯೆನೆ ದೇವಮಂತ್ರಿಯೊಲವಂ ಸಲ್ಲೀಲೆಯಿಂ ತೋಱುವಂ ॥
ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ್ ।
ನಲವಿಂ ರೇಚಣಮಂತ್ರಿಯಾರ್ಗಮಧಿಕಂ ಸಾಹಿತ್ಯವಿದ್ಯಾಧರಂ" ॥

ಚಂ॥ ಮನುಜಯ ಸೇವ್ಯವೃತ್ತಿ ನಿಜವೃತ್ತಿ ಪುರಾತನ ರಾಜನೀತಿತಾಂ ।
ತನಗಳವಟ್ಟ ನೀತಿಯುಪರಾರ್ಥಮೆತಂನಭುಜಾರ್ಜಿತಾರ್ಥವಾ ॥
ಳ್ದನವುಹಿಮೋನ್ನತಿತ್ವಮೆನಿಜೋನ್ನತಿಯಾಶ್ರಿತತುಷ್ಟಿ ತನ್ನದೆಂ ।
ದೆನಿಪನೆಗಳ್ತೆಯಿಂದೆ ಸಲೆ ಜೀವಿಸೆ ಕೇಶವದಂಡನಾಯಕಂ ॥

ಮಲೆವವರಿಲ್ಲ ಗಂಡೆಸೆವರಿಲ್ಲಿದಿರಿಪ್ಪವರಿಲ್ಲ ತೇಜಮೆಂ ।
ದುಲಿವವರಿಲ್ಲ ಟಂಟಣಿಪರಿಲ್ಲುಱದಿರ್ಪವರಿಲ್ಲ ಕಾಯ್ದುಬಂ ॥
ದಲೆವವರಿಲ್ಲ ತನ್ನ ಬಿರುದಲ್ಲದೆ ಕಬ್ಬದಗೀತದಲ್ಲಿಮೂ ।
ರ್ತಲೆಯವರಿಲ್ಲ ಕೃಷ್ಣವಿಭು ಕೇಶವದೇವ ಚಮೂಪರಾಜ್ಯದೊಳ್ ॥

ಕಂ। ಇಮ್ಮಡಿ ಚಾಣಕ್ಯಂಗೆ ಪ ।
ದಿರ್ಮಡಿ ಶಕಳುಕಂಗೆ ಭೃಗುಗೆಂತುಂತಾಂ ॥
ನೂರ್ಮಡಿ ಹರಿಯಿಂದಂ ಸಾ ।
ಸಿರ್ಮಡಿಯೆನಲೆಸೆವ ಮಂತ್ರಿ ಕೇಶವದೇವಂ ॥

9 E. C. Vol. V. Ar. 77.

10 Mysore Gazetteer by C. H. Rao Vol. II Part II.

ಆಚಣ್ಣನು ತನ್ನ ಪೋಷಕನನ್ನು "ಭೀಕರವೈರಿವಾರಣವಿದಾರಣಕೇಸರಿ" ಯೆಂದೂ "ಸತ್ಯಶ್ಲಾಘ್ಯನೆಂದೂ" ವಿಶೇಷಿಸಿದ್ದರೆ, ಈ ಪದ್ಯದಲ್ಲಿ ಅವಕ್ಕೆ ಸಮಾನಾರ್ಥಕಗಳಾದ "ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ್" ಎಂದೂ "ಸಾಹಿತ್ಯವಿದ್ಯಾಧರಂ" ಎಂದೂ ಇರುವುದು. ಆದುದರಿಂದ ಈ ಪದ್ಯವೂ ಆಚಣ್ಣನ ಪೋಷಕನಾದ ರೇಚಣ್ಣನನ್ನೇ ಕುರಿತು ಬರೆದಿರುವಂತೆ ತೋರುತ್ತದೆ. ಅದು ಹೇಗೂ ಇರಲಿ. ಈ ರೇಚರಸನು ವಿದ್ಯಾಭಿಮಾನಿಯೂ, ಕವಿಜನಪೋಷಕನೂ ಎಂಬುದರಲ್ಲಿ ಸಂದೇಹವೇ ಇಲ್ಲ. ಹಲವು ಶಾಸನಗಳಲ್ಲಿ ಇವನನ್ನು ವಿಶೇಷವಾಗಿ ಹೊಗಳಿರುವುದು ಕಂಡುಬರುತ್ತದೆ. (ಅನುಬಂಧ ೧ನ್ನು ನೋಡುವುದು.)

ಕವಿಯು ಈ ವರ್ಧಮಾನ ಪುರಾಣವನ್ನು ಬರೆಯುವುದಕ್ಕೆ ಕಾರಣವನ್ನು ಈ ರೀತಿಯಾಗಿ ಹೇಳಿದ್ದಾನೆ:—

ಶ್ರೀವಸುಧೈಕಬಾಂಧವನ ಬಂಧುರಭಕ್ತಿಗೆ ಮೆಚ್ಚಿ ಕೇಶಿರಾ।
ಜಾವನಿದೇವನಾ ವಿಬುಧಚಾಮುಸಮನ್ವಿತನಂದು ಪೇಟುತುಂ॥
ದೈವನಿಯೋಗದಿಂದೆ ಗಡ ನಿಂದುದನೀವರವೀರ ಕಾವ್ಯಮಂ।
ಭಾವಿಸಿಯಾಚಿರಾಜವಿಭು ಪೂರಿಸಿದಂ ಜಿನಭಕ್ತಿ ಸೂಕ್ತಿಯಿಂ॥

(ಆ. ೧೬, ಪ. ೬೦)

ರೇಚಣನ ಭಕ್ತಿಗೆ ಮೆಚ್ಚಿ ಕೇಶಿರಾಜನೂ ಚಾಮನೂ ಆರಂಭಿಸಿ, ದೈವಯೋಗದಿಂದ ನಿಂತುಹೋದ ಈ ಪುರಾಣವನ್ನು ತಾನು ಪೂರ್ತಿಮಾಡಿದಂತೆ ಈತನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಇಲ್ಲಿ ಹೇಳಿರುವ ಕೇಶಿರಾಜನೂ ಪೂರ್ವೋಕ್ತ ಶಾಸನದಲ್ಲಿ ಹೆಸರಿಸಲ್ಪಟ್ಟ ಕೇಶಿರಾಜನೂ ಒಬ್ಬನೇ ಆಗಿರಬೇಕು. ಅವನೇ ಕವಿಯ ತಂದೆಯಾಗಿರಬಹುದು. ಕೇಶಿರಾಜನಿಗೆ ಲಕ್ಷ್ಮೀದೇವಿ, ಸಿರಿದೇವಿಯರೆಂಬ ಇಬ್ಬರು ಹೆಂಡಿರಿದ್ದಂತೆ ಶಿಕಾರಿಪುರ 123ನೆಯ ಶಾಸನದಿಂದ ಗೊತ್ತಾಗುತ್ತದೆ. ಕವಿಯ ತಾಯಿಯಾದ ಮಲ್ಲಾಂಬಿಕೆಯು ಇವರಲ್ಲೊಬ್ಬಳಾಗಿರಬಹುದು ಅಥವಾ ಆತನ ಮತ್ತೊಬ್ಬಳು ಹೆಂಡತಿಯಾಗಿರಬಹುದು. ಚಾಮನು ಕೇಶಿರಾಜನ ಮಂತ್ರಿಯಾಗಿದ್ದಂತೆ ಶಿಕಾರಿಪುರ 119ರಿಂದ ತಿಳಿಯುತ್ತದೆ.[11] ಪೀಠಿಕಾ ಪ್ರಕರಣದ ಪದ್ಯ ೩೩ರಲ್ಲಿ "ಮಿಕ್ಕ ಸುದಾನಿ ರೇಚಣ ಚಮೂಪತಿಯರ್ಥಿಸೆ ಕೇಶಿರಾಜನಾ। ತಿಕ್ಕಣ ಚಾವಣರ್ ಬೆರಸು ಪಕ್ರಮಿಸಿರ್ದುದನೆಯ್ದೆ ಪೇಳ್ದು" ಎಂದು ಇನ್ನೊಬ್ಬನ ಹೆಸರನ್ನು

---

11 ಶಿಕಾರಿಪುರ 119ರಲ್ಲಿ ಚಾಮುಯ್ಯನ ಕುರಿತು ಹೀಗಿದೆ:—

ಪತಿಯಮನದಲ್ಲಿ ಕಾರ್ಯ|
ಪ್ರತತಿಯೆ ತನಗುಜ್ಜವಮದಿದೆಯೊಳ್ ಮೃತ್ಯ||
ಪ್ರತತಿಯೆ ಬೇಡಲ್ ಸುರಭಿ|
ಪ್ರತತಿಯೆ ತಾನೆನಿಸಿ ತೋರ್ಪನಂ ಚಾಮುಯ್ಯಂ॥

ಹೆಚ್ಚಾಗಿ ಹೇಳಿದೆ. ಈ ಪದ್ಯದಲ್ಲಿರುವ ಚಾವಣನು ಚಾಮನೇ ಇರಬೇಕು. ಇನ್ನೊಬ್ಬ ತಿಕ್ಕಣನಾರೆಂಬುದನ್ನು ವಿಚಾರಿಸಬೇಕಾಗಿದೆ. ಶಿಕಾರಿಪುರ 119, 123ರಲ್ಲಿ ಈತನ ಹೆಸರು ಬರುತ್ತದೆ.[12] ಇವನೂ ಕೇಶಿರಾಜನ ಮಂತ್ರಿಗಳಲ್ಲಿ ಒಬ್ಬನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಅಂತೂ, ಈ ಮೂರುಮಂದಿ ಕವಿಗಳಿಂದ ಮುಗಿಯದ ಕಾರ್ಯವನ್ನು ಆಚಣ್ಣನು ಪೂರೈಸಿ ಕೃತಕೃತ್ಯನಾಗಿದ್ದಾನೆ. ಹಿಂದೆ ಹೇಳಿದಂತೆ ಕಾಲಚೂರ್ಯರಲ್ಲಿ ದಂಡನಾಯಕನಾಗಿದ್ದ ಕೇಶಿರಾಜನೇ ಕವಿಯ ತಂದೆಯಾಗಿದ್ದ ಪಕ್ಷದಲ್ಲಿ, ಈ ತಂದೆಮಕ್ಕಳಿಬ್ಬರಿಗೂ ರೇಚಣನಲ್ಲಿ ಅತುಲವಾದ ಭಕ್ತಿಯಿರುವುದು ಸ್ವಾಭಾವಿಕವಾಗಿಯೇ ಇದೆ. ರೇಚಣನಂತೆಯೇ ಕೇಶಿಮಯ್ಯನೂ ಕಾಲಚೂರ್ಯರ ಅಧಃಪತನವಾದ ಬಳಿಕ, ಹೊಯ್ಸಳ ವೀರಬಲ್ಲಾಳನನ್ನು ಆಶ್ರಯಿಸಿರಬಹುದು. ಮಾತ್ರವಲ್ಲದೆ, ರೇಚಣನ ಪುಣ್ಯಕಾರ್ಯಗಳಲ್ಲಿ ಭಾಗಿಯಾಗಿದ್ದಿರಬಹುದು.

ಕವಿಯು ಕೊನೆಯ ಆಶ್ವಾಸದ ೯೨ನೆಯ ಪದ್ಯದಲ್ಲಿ "ಸಂದಾಚಿರಾಜಂ ಪುರಿಕರ ನಗರಾಧೀಶ ಶಂಖಾಗ್ರಜಾರ್ಹತ್ಸೇವಾಸಕ್ತಾಶಯುಂ" ಎಂದು ಹೇಳಿರುವುದರಿಂದ, ಈತನು ಪುರಿಕರ ನಗರಕ್ಕೆ (ಪುಲಿಗೆಱೆ) ಒಡೆಯನಾದ ಶಂಖನೆಂಬವನ ಅಣ್ಣನೆಂದು ತಿಳಿಯುತ್ತದೆ. 'ಅರ್ಹತ್ಸೇವಾಸಕ್ತಾಶಯುಂ' ಎನ್ನುವುದರಿಂದ ಈತನು ಜಿನಭಕ್ತನೆಂಬುದರಲ್ಲಿ ಸಂಶಯವೇ ಇಲ್ಲ. ಆಶ್ವಾಸಾಂತದ ಗದ್ಯದಿಂದ ಈತನ ಗುರು ಶ್ರೀನಂದಿಯೋಗೀಂದ್ರನೆಂದು ಗೊತ್ತಾಗುತ್ತದೆ ಈ ನಂದಿಯೋಗೀಂದ್ರನು 1189ರಲ್ಲಿ ಇದ್ದಂತೆ ಕವಿಚರಿತೆಗಾರರು ಹೇಳುತ್ತಾರೆ.[13] ಶಿಕಾರಿಪುರ 119ನೆಯ ಶಾಸನವು ಕ್ರಿ. ಶ. 1181ರಲ್ಲಿ ಹುಟ್ಟಿದುದು. ಆದುದರಿಂದ ಕವಿಯು ಸುಮಾರು ಆ ಕಾಲದವನಾಗಿರಬೇಕು.

ಪೂರ್ವಕವಿಸ್ತವಾವಸರದಲ್ಲಿ ಈತನು ಶ್ರೀವಿಜಯ, ಗಜಾಂಕುಶ, ಗುಣವರ್ಮ, ನಾಗವರ್ಮ, ಅಸಗ, ಹಂಪ, ಹೊನ್ನಿಗ, ರನ್ನಿಗ, ಅಗ್ಗಳ, ಬೊಪ್ಪ—ಈ ಕವಿಗಳನ್ನು ಸ್ತುತಿಸಿದ್ದಾನೆ. ಇವರಲ್ಲಿ ಶ್ರೀವಿಜಯನು ನೃಪತುಂಗನ (814—877) ಸಮ

---

12 ಶಿಕಾರಿಪುರ 119ರಲ್ಲಿ ತಿಕ್ಕರಾಜನ ಕುರಿತು ಹೀಗಿದೆ:—

ಕಂ || ಬಲ್ಮೆಯುಮೂತಿನೊಳೇಂ ಕಲಿ ।
ಕಲ್ಮಷರಹಿತಂಗೆ ತಿಕ್ಕರಾಜಂಗುಳಿದೀ ||
ಪುಲ್ಮಾನಸರಂ ದೊರೆಯೆನೆ ।
ಕಲ್ಮಣಿಕದಂತುಟೆಂದಡೆಂತಂತೆ ದಿಟಂ ||

ಶಿಕಾರಿಪುರ 123 ರಲ್ಲಿ ತಿಕ್ಕರಸನ ಕುರಿತು ಹೀಗಿದೆ:—

ಸಚಿವಾಗ್ರಣಿಕಾರ್ಯಾಕಾ ।
ರ್ಯಚತುರತಾಗುಣಬೃಹಸ್ಪತಿಸುತಂ ನಿತ್ಯೋ ||
ಪಚಿತ ಯಶೋಧನನಾಶ್ರಿತ ।
ನಿಚಯ ವಿವರ್ಧಕನುದಾರನಿಧಿ ತಿಕ್ಕರಸಂ ||

13 ಕರ್ಣಾಟಕ ಕವಿಚರಿತೆ ಸಂ. I. ಪು.300.

ಕಾಲೀನನೆಂದೂ, ಚಂದ್ರಪ್ರಭಪುರಾಣವನ್ನು ಬರೆದಿರುವನೆಂದೂ ಪ್ರತೀತಿಯಿದೆ. ಗಜಾಂಕುಶನು. ಸು. 1050ರಲ್ಲಿ ಇದ್ದಿರಬೇಕೆಂದು ಕವಿಚರಿತೆಗಾರರು ನಿಶ್ಚಯಿಸಿರುವರು. ಇವನೂ ಒಂದು ಜೈನ ಪುರಾಣವನ್ನು ಬರೆದಿರಬೇಕೆಂದು ಊಹಿಸಲವಕಾಶವಿದೆ. ಗುಣವರ್ಮನು ಸುಮಾರು ಅದೇ ಕಾಲದಲ್ಲಿದ್ದು ನೇಮಿನಾಥ ಪುರಾಣ (ಹರಿವಂಶ) ವನ್ನೂ ಶೂದ್ರಕವೆಂಬ ಇನ್ನೊಂದು ಗ್ರಂಥವನ್ನೂ ಬರೆದಿರುವಂತೆ ತಿಳಿಯುತ್ತದೆ. ನಾಗವರ್ಮನೆಂಬ ಹೆಸರಿನ ಒಬ್ಬ ಕವಿಯು ವರ್ಧಮಾನ ಪುರಾಣವನ್ನು ರಚಿಸಿರುವುದಾಗಿ ತಿಳಿದುಬರುತ್ತದೆ.[14] ಅವನೇ ಈತನಾಗಿರಬೇಕು. ಅಸಗನು ಸು. 945ರಲ್ಲಿದ್ದ ಜೈನಕವಿ. ಇವನ ಕನ್ನಡ ಗ್ರಂಥವಾವುದೂ ದೊರಕಿಲ್ಲ. ಈತನು ಸಂಸ್ಕೃತದಲ್ಲಿ ವರ್ಧಮಾನ ಪುರಾಣವನ್ನು ಬರೆದಿರುವುದಾಗಿ ತಿಳಿಯುತ್ತದೆ.[15] ಅದನ್ನೇ ಕನ್ನಡಕ್ಕೆ ಪರಿವರ್ತಿಸಿದ್ದರೂ ಇರಬಹುದು. ಪಂಪನು (ಸು. 941) ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳನ್ನು ಬರೆದ ಆದಿಪಂಪನೇ. ಹೊನ್ನಿಗನು ಸು. 945ರಲ್ಲಿದ್ದ ಶಾಂತಿಪುರಾಣದ ಕರ್ತೃವಾದ ಪೊನ್ನನು. ರನ್ನಿಗನು ಸು. 993ರಲ್ಲಿದ್ದು ಅಜಿತಪುರಾಣವನ್ನೂ, ಸಾಹಸಭೀಮವಿಜಯವನ್ನೂ ಬರೆದ ರನ್ನನೆಂಬುದರಲ್ಲಿ ಸಂದೇಹವಿಲ್ಲ. ಅಗ್ಗಳನು 1189ರಲ್ಲಿ ಚಂದ್ರಪ್ರಭ ಪುರಾಣವನ್ನು ಬರೆದವನು. ಬೊಪ್ಪನು ಸು.1180ರಲ್ಲಿದ್ದು ಗೊಮ್ಮಟ ಸ್ತುತಿ, ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ ಮುಂತಾದ ಗ್ರಂಥಗಳನ್ನು ಬರೆದ ಬೊಪ್ಪಣ ಪಂಡಿತನೇ ಆಗಿರಬೇಕು. ಈತನೂ ಒಂದು ಜೈನ ಪುರಾಣವನ್ನು ಬರೆದಿರಬಹುದು. ಆದರೆ ಅದು ನಮಗೆ ಉಪಲಬ್ಧವಾಗಿಲ್ಲ. ಹೀಗೆ ಆಚಣ್ಣನು ತನ್ನ ವರ್ಧಮಾನ ಪುರಾಣದಲ್ಲಿ ಸ್ತುತಿಸಿರುವ ಕವಿಗಳೆಲ್ಲರೂ ಜೈನರು, ಮಾತ್ರವೇ ಅಲ್ಲದೆ ಹೆಚ್ಚಿನವರು ಜೈನಪುರಾಣ ಕರ್ತೃಗಳೂ ಆಗಿರುವರೆಂದು ಹೇಳಿದರೆ ತಪ್ಪಾಗದು. ಈ ಕವಿಗಳೆಲ್ಲರೂ ಕ್ರಿ.ಶ. ಸು. 1190ಕ್ಕೆ ಹಿಂದೆ ಇದ್ದವರೆಂದು ವ್ಯಕ್ತವಾಗುತ್ತದೆ. ಆದುದರಿಂದ ಅವರನ್ನು ಸ್ತುತಿಸುವ ಆಚಣ್ಣನು ಆ ಕಾಲಕ್ಕಿಂತ ಈಚೆಯವನಾಗಿರಬೇಕು. ಇವನನ್ನು ಪಾರ್ಶ್ವಪಂಡಿತನು ತನ್ನ ಪಾರ್ಶ್ವನಾಥ ಪುರಾಣದಲ್ಲಿ ಸ್ತುತಿಸಿದ್ದಾನೆ.[16] ಈ ಪುರಾಣದ ಕಾಲವು ಕ್ರಿ. ಶ. 1205 ಎಂಬುದಾಗಿ ಕವಿಚರಿತೆಗಾರರೂ,[17] ಕ್ರಿ. ಶ. 1218 ಅಥವಾ 1222 ಎಂಬುದಾಗಿ ಶ್ರೀ ಎ. ವೆಂಕಟಸುಬ್ಬಯ್ಯನವರೂ[18] ಅಭಿಪ್ರಾಯಪಡುತ್ತಾರೆ. ಆದುದರಿಂದ ಆಚಣ್ಣನು ಕ್ರಿ. ಶ. ಸು. 1222ಕ್ಕೆ ಹಿಂದೆ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಈ ಕಾರಣ

---

14 Annals of Oriental Research Vol. VII Part I

15 ಕ. ಕ. ಚ. ಸಂ. I. ಪು. 39.

16 ಶ್ರೀಗುಣಗರ್ಭಂ ಕೀರ್ತಿಕೆ । ಳಾಗರ್ಭಂ ಸೂಕ್ತಿಸಂಗತಾಧ್ಯಾತ್ಮಂ ಜೈ ॥
ನಾಗಮಗರ್ಭಮಿದೆನೆ ಜಗ । ತೀಗುರು ನೆಗಟ್ದಂ ಪ್ರಸನ್ನಗುಣನಾಚಣ್ಣಂ ।
ನವರಸದೊಳಮಿತರರಸ । ಕ್ಕವಕಾಶಂಗುಡದೆ ತಳೆಯೆ ಶಾಂತರಸಮನಂ ॥
ತವಿಚಳನಮವುಂ ಕರೆಗ । ಣ್ಮುವವೆನೆ ಪೃಥುಹೃದಯನಾದನೆಂತಾಚಣ್ಣಂ ।

17 ಕ. ಚ. ಸಂ. I ಪು. 322.

18 ಕೆಲವು ಕನ್ನಡ ಕವಿಗಳ ಕಾಲವಿಚಾರ ಪು. 196.

ಗಳಿಂದ, ಶ್ರೀ ವರ್ಧಮಾನಪುರಾಣವು ಕ್ರಿ. ಶ. 1190 - 1222 ಈ ಮಧ್ಯದಲ್ಲಿ ರಚಿತವಾಗಿರಬೇಕು.

ಇವನ ವರ್ಧಮಾನ ಪುರಾಣದಲ್ಲಿ 24ನೆಯ ತೀರ್ಥಂಕರನಾದ ಶ್ರೀವರ್ಧಮಾನಮಹಾವೀರನ ಚರಿತವು ಅಡಕವಾಗಿದೆ ಶ್ರೀ ವರ್ಧಮಾನನು ಅಥವಾ ಮಹಾವೀರನು ಚಾರಿತ್ರಿಕ ಪುರುಷನು. ಚತುರ್ವಿಂಶತಿ ತೀರ್ಥಂಕರರಲ್ಲಿ ಈತನು ಕೊನೆಯವನು. ಈ ಚತುರ್ವಿಂಶತಿ ತೀರ್ಥಂಕರರ ಕಥೆಗಳನ್ನು ಅನೇಕ ಮಂದಿ ಜೈನ ಕವಿಗಳು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಬರೆದಿರುತ್ತಾರೆ. "ಆದಿಯಲ್ಲಿ ಕೂಚಿ ಭಟ್ಟಾರಕರೂ, ನಂದಿ ಮುನೀಶ್ವರರೂ ಚತುರ್ವಿಂಶತಿ ತೀರ್ಥಕರರ ಮಹಾಪುರಾಣವನ್ನು ವಿರಚಿಸಿದರು. ಅನಂತರ ಕವಿಪರಮೇಶ್ವರರು ತ್ರಿಷಷ್ಟಿಶಲಾಕಾಪುರುಷ ಪುರಾಣವನ್ನು ಬರೆದರು."[19] ಗುಣಭದ್ರ ಮುನೀಶ್ವರರು ತ್ರಿಷಷ್ಟಿ ಪುರುಷ ಪ್ರತಿಬಂಧ ಪುರಾಣವನ್ನು ಅದರ ಆಧಾರದಿಂದಲೇ ರಚಿಸಿದರು. ಚಾವುಂಡರಾಯ (ಕ್ರಿ.ಶ. 978 ನೆಂಬ ಕನ್ನಡ ಕವಿಯು ಅದನ್ನೇ 'ತ್ರಿಷಷ್ಟಿಲಕ್ಷಣ ಮಹಾಪುರಾಣ'ವೆಂಬ ಹೆಸರಿನಿಂದ ಕನ್ನಡದಲ್ಲಿ ಗದ್ಯರೂಪವಾಗಿ ವಿರಚಿಸಿದನು. ಅದರಲ್ಲಿರುವ ಶ್ರೀವರ್ಧಮಾನನ ಚರಿತವನ್ನು ಪ್ರತ್ಯೇಕವಾಗಿ ಕೊಟ್ಟಿರುವೆವು.[20] ಅದರ ಸಹಾಯದಿಂದ ಚಾವುಂಡರಾಯನು ಹೇಳಿದ ಕಥೆಗೂ, ಆಚಣ್ಣನ ಕಥೆಗೂ ಇರುವ ವ್ಯತ್ಯಾಸವನ್ನು ತಿಳಿಯ ಬಹುದು. ಆಚಣ್ಣನು ಸ್ತುತಿಸಿರುವ ಕವಿಗಳಲ್ಲಿಯೂ ಒಬ್ಬಿಬ್ಬರು ವರ್ಧಮಾನ ಪುರಾಣವನ್ನು ಕನ್ನಡದಲ್ಲಿ ಬರೆದಿರಬಹುದೆಂಬುದನ್ನು ಹಿಂದೆಯೇ ಸೂಚಿಸಿರುವೆವು. ಆದರೆ ಆ ಗ್ರಂಥಗಳಾವುವೂ ಸಿಕ್ಕದಿರುವ ಕಾರಣ, ಈ ಪುರಾಣಕ್ಕೂ ಅವುಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಯಲು ಸಾಧ್ಯವಿಲ್ಲ.

ಆಚಣ್ಣನು ವರ್ಧಮಾನ ಪುರಾಣವನ್ನಲ್ಲದೆ "ಶ್ರೀಪದಾಶೀತಿ"ಯೆಂಬ, ಸುಮಾರು 94 ಕಂದಗಳಿರುವ, ಒಂದು ಗ್ರಂಥವನ್ನು ರಚಿಸಿದ್ದಾನೆ. ಇದು ಪಂಚಪದಗಳ ಮಹಿಮೆಯನ್ನು ತಿಳಿಸುವ ಒಂದು ಪ್ರೌಢವಾದ ಗ್ರಂಥ. ಅಂದರೆ, ಇದರಲ್ಲಿ ಅರ್ಹಂತ, ಸಿದ್ಧ, ಸಾಧು, ಉಪಾಧ್ಯಾಯ, ಆಚಾರ್ಯ—ಇವರ ಮಹಿಮಾವರ್ಣನೆಯು ಅಡಕವಾಗಿದೆ.

ಆಚಣ್ಣನ ಕವಿತಾಧೋರಣೆ

ಈ ಕವಿಯು ವರ್ಧಮಾನ ಪುರಾಣದಲ್ಲಿ ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಹೀಗೆ ಹೇಳಿದ್ದಾನೆ:—

ಸದಳಂಕಾರದಗಾರಮುದ್ಧುರಸಭಾವಾನೀಕಜೋೕಕಂ ಸದ।
ರ್ಥದ ಸಾರ್ಥಂ ಪರಶಬ್ದವೃಂದದ ವಿರಾಜನ್ಮಂದಿರಂ ನಾಡೆಯುಂ॥
ಮೃದುಸಂದರ್ಭದಗರ್ಭಮಿಂತಿದೆನಿಸಲ್ ಸಾಲ್ದಿರ್ದ ಕಾವ್ಯಂ ಸಭಾ।
ಸದರಂತಃಕರಣಕ್ಕದೇಂ ಕಱಿಯದೇ ಸೌಖ್ಯಾಮೃತಾಸಾರಮಂ॥

(ಆ ೧. ಪ ೨೧)

19 ಕ. ಚ. ಸಂ I ಪು. 47.

20 ಅನುಬಂಧ ೨.

ಸತ್ಕವಿಗಳ ಸಾಮರ್ಥ್ಯವನ್ನು ಇವನು ಹೀಗೆ ವರ್ಣಿಸಿದ್ದಾನೆ:—

ಕರಮೆಸೆವ ಕಾವ್ಯಮುಕುರದೊ।
ಳಿರದೆ ಚಿರಂತನರನೇಗಳುಂ ತೋಱುವರೀ॥
ಧರೆಯೊಳ್ ಸಮರ್ಥರೇನ!
ಲ್ಲರೆ ಪೇೞ್ ಸತ್ಕವಿಗಳವರ್ಗಳಂ ಮೆಚ್ಚದರಾರ್।

(ಆ ೧ ಪ ೧೭)

ವಚನರುಚಿನಿಚಯದಿಂದಂ।
ಸುಚತುರಕವಿರವಿಗಳಖಿಳ ಚೇತೋಗಗನ॥
ಪ್ರಚುರ ತಮುಸ್ತಿಮಿರಮನಳ।
ಱಿ ಚಳಯಿಸಲ್ ನೆಱಿಗುಮುೞಿದವರ್ ನೆಱಿದಪರೇ॥

(ಆ೧ ಪ ೧೯)

ತನ್ನ ಕಾವ್ಯವು 'ಸದಳಂಕಾರದಗಾರಂ; ಉದ್ಧುರಸಭಾವಾನೀಕದೋಕಂ; ಸದರ್ಥದ ಸಾರ್ಥಂ; ಪರಶಬ್ದವೃಂದದ ವಿರಾಜನ್ಮಂದಿರಂ; ಮೃದು ಸಂದರ್ಭದ ಗರ್ಭಂ' ಎಂಬುದಾಗಿ ಕವಿಯು ಹೇಳಿಕೊಂಡಿರುವನಷ್ಟೆ! ಇವು ಕೇವಲ ಒಣ ಹೆಮ್ಮೆಯ ಮಾತುಗಳಲ್ಲವೆಂಬುದು ಈತನ ಕಾವ್ಯವನ್ನು ಪರಿಶೀಲಿಸಿದವರಿಗೆ ಹೊಳೆಯದಿರದು. ಈತನ ಗ್ರಂಥವು ಪ್ರೌಢವಾಗಿಯೂ, ಸಂಸ್ಕೃತಪದಭೂಯಿಷ್ಠವಾಗಿಯೂ ಇದೆ. ಪ್ರಾಸಯಮಕಾದಿ ಶಬ್ದಾಲಂಕಾರಗಳನ್ನು ಉಪಯೋಗಿಸುವುದೆಂದರೆ ಕವಿಗೆ ಬಹಳ ಪ್ರೀತಿಯೆಂದು ತೋರುತ್ತದೆ. ಕೆಲವು ಸಂದರ್ಭಗಳಲ್ಲಿ ಪದಗಳು ಏನೊಂದು ಪ್ರಯತ್ನವಿಲ್ಲದೆಯೇ, ಒಂದರ ಹಿಂದೊಂದು ಬಂದು, ಸುಂದರವಾದ ಯಮಕಾಲಂಕಾರದಲ್ಲಿ ಪರ್ಯವಸಾನ ಹೊಂದುತ್ತವೆ:

ವಕುಳೇ ಸಪರಿಮಳ ಪ್ರಸ।
ವಕುಳಂ ಸೌರಭ ಸಮಾಗತ ಭ್ರಮರಾರಾ॥
ವಕುಳಂ ಸೊಗಯಿಸಿದತ್ತೆಸೆ।
ವಕುಳಂಬಿತವಿಟಪಮವನಿ ಸಂಸ್ಥಾವಕುಳಂ॥

(ಆ ೨ ಪ ೭)

ಕೇಸರಿ ನಿಮಗೇಸರಿ ದೇ।
ವೀ ಸಡಗರಮಾದುದುಚಿತಮಾಗಿರೆ ಬೆಸಸಿಂ॥
ಕೇಸರಿಯುಂ ಕಡೆಪಟ್ಟಾ।
ವೇಸರಿಯುಂ ಕೆಡಪುಮಂತೆ ಕೆಡಪದೆ ಮಾಣೆಂ।

(ಆ ೩ ಪ ೩೯)

ಆನವನಂ ಮಾನವನಂ ।
ನೀನೀಗಳೆ ಪುಗಿಸು ಮತ್ಸಭಾಭವನಮನೆಂ ॥
ದಾ ನರಪತಿ ಬೆಸಸುವುದುಂ ।
ತಾನವನಂ ಪುಗಿಸಿದಂ ಪ್ರತೀಹಾರವರಂ ।

(ಆ. ೩, ಪ. ೫೩)

ಹೀಗೆ ಎಷ್ಟೋ ಉದಾಹರಣೆಗಳನ್ನು ಗ್ರಂಥದಿಂದ ಆರಿಸಿ ಕೊಡಬಹುದು.

ಕವಿಯು ದ್ವ್ಯಕ್ಷರಿ, ಗತಪ್ರತ್ಯಾಗತ ಮುಂತಾದ ಚಿತ್ರಕವಿತೆಗಳನ್ನೂ ತನ್ನ ಗ್ರಂಥದಲ್ಲಿ ಉಪಯೋಗಿಸಿರುವನು. ಅವುಗಳನ್ನು ಇಲ್ಲಿ ಕೊಟ್ಟಿರುವೆವು:—

ದ್ವ್ಯಕ್ಷರಿ:—

ಕಲಿಕೊಂಕಲ್ಕೇಕಕ್ಕುಂ ।
ಕೆಲಕ್ಕೆ ಕೋಲಿಕ್ಕೆ ಲಕ್ಕೆ ಲೆಕ್ಕಕ್ಕೆಲ್ಲಂ ॥
ಕಲಿಕೊಲಲೆ ಕಲಲ್ಕಕ್ಕುಂ ।
ಕುಲಕಕ್ಕುಂ ಕಲಿ ಕಲಂಕಿ ಕೊಂಕೆ ಕಲಂಕಂ ॥

(ಆ ೭, ಪ ೫೨)

ಗತ ಪ್ರತ್ಯಾಗತ:—

ಕುಂದಿನಿಂದೆಚ್ಚನದುಬಂ । ಟಂದವಲ್ಲದೆ ನೀದುದೆಂ ॥
ದೆಂದು ನಿಂದೆಲ್ಲಮದಟಂ । ಬಂದುನಚ್ಚದೆ ನಿಂದಿಕುಂ ॥

(ಆ ೭ ಪ ೫೩)

ಕನ್ನಡದಲ್ಲಿ ಪ್ರಸಿದ್ಧವಾಗಿರುವ ಆರು ಸಂಸ್ಕೃತ ವೃತ್ತಗಳನ್ನು ಮಾತ್ರವೇ ಅಲ್ಲದೆ ದ್ರುತವಿಳಂಬಿತ, ಮಲ್ಲಿಕಾಮಾಲೆ, ಮಾಳಿನಿ, ಶಾರ್ದೂಲ, ಸ್ವಾಗತ, ಪೃಥ್ವೀ, ಹರಿಣಿ, ರಥೋದ್ಧತೆ, ತರಳ, ಉತ್ಸವ, ಉಪಜಾತಿ ಮುಂತಾದ ಹಲವು ಅಪೂರ್ವ ವೃತ್ತಗಳನ್ನೂ, ರಗಳೆ, ತ್ರಿಪದಿಗಳೆಂಬ ಶುದ್ಧ ಕನ್ನಡ ವೃತ್ತಗಳನ್ನೂ, ಕವಿಯು ಉಪಯೋಗಿಸಿದ್ದಾನೆ.

ಉಪಮಾದಿ ಅರ್ಥಾಲಂಕಾರಗಳನ್ನು ಕವಿಯು ಹಿತವಾಗಿಯೂ, ಮಿತವಾಗಿಯೂ ಬಳಸಿಕೊಂಡಿದ್ದಾನೆ.

ಸಿಂಗದ ಶಿಶುವಂ ಕಂಡಕು ।
ರಂಗದ ಮಱಿಯಂತೆ ಬೆದಱಿ ದೆಸೆಗೆಟ್ಟು ಕರಂ ॥
ಬೆಂಗೊಟ್ಟೋಡಿದನವನು ।
ತ್ತುಂಗ ಕರಂಗಳ ಮರಂಗಳೆಡೆದೆಱಪುಗಳೊಳ್ ॥

(ಆ. ೨, ಪ.)

ಎಂಬ ಪದ್ಯದಲ್ಲಿರುವ ಉಪಮಾಲಂಕಾರವು ಎಷ್ಟು ಹೃದಯಂಗಮವಾಗಿದೆ!

ಈ ಕೆಳಗಿನ ಪದ್ಯದಲ್ಲಿರುವ ರೂಪಕಾಲಂಕಾರವು ಎಷ್ಟು ಚಿತ್ತಾಕರ್ಷಕವಾಗಿದೆಯೆಂಬುದನ್ನು ವಾಚಕರೇ ತಿಳಿಯಬಹುದು:—

ಆಕೆಯ ವಕ್ತ್ರವಾರಿಜದ ಲೋಚನನೀಳಸರೋಜದೋಷ್ಠಬಿಂ।
ಧೂಕದ ದಂತಕುಂದದ ನಖಾಂಕುರ ಕೇಶಕದಂಬ ಮೋಹನ॥
ಶ್ರೀಕರಮೆಂದಿದೈದು ತೆಱದಂಬನೆ ನಚ್ಚಿನ ಕೆಯ್ದು ಮಾಡಿ ಮೂ।
ಲೋಕದೊಳೆಯ್ದೆ ಪಂಚಶರನುಂ ಕುಸುಮಾಸ್ತ್ರನುಮಾದನಂಗಜಂ॥

(ಆ. ೩, ಪ. ೬೪)

ಹಾಗೆಯೇ

ಕರಪೀಡನಮುರುಕುಚದೊಳ್।
ತರುಣೀಜನ ಮಧ್ಯದೊಳ್ ದರಿದ್ರತೆ ಚಿಂತಾ॥
ಪರತೆ ಮುನೀಶ್ವರರೊಳ್ ತಾಂ।
ದೊರೆಕೊಳ್ಗುಮದಲ್ಲದಿಲ್ಲ ತಜ್ಜನಪದದೊಳ್॥

(ಆ. ೧, ಪ. ೪೭)

ಎಂಬ ಪದ್ಯದಲ್ಲಿರುವ ಪರಿಸಂಖ್ಯಾಲಂಕಾರವು ಎಷ್ಟು ಚಮತ್ಕಾರವಾಗಿದೆ!

ಇದೇ ರೀತಿ ಪ್ರತಿಯೊಂದು ಅಲಂಕಾರಕ್ಕೂ ಒಂದೆರಡಲ್ಲ, ಹಲವು ಉದಾಹರಣೆಗಳನ್ನು ಈ ಗ್ರಂಥದಿಂದ ಆಯ್ದು ಕೊಡಬಹುದು. ಆದುದರಿಂದ 'ಸದಳಂಕಾರದಗಾರಂ' ಎಂದು ಕವಿಯು ಹೇಳಿರುವುದು ಅತಿಶಯೋಕ್ತಿಯೇನೂ ಅಲ್ಲ.

ಯಾವುದಾದರೊಂದು ಭಾವವನ್ನು ಮನಮುಟ್ಟುವಂತೆ, ಹೃದಯವನ್ನು ತಟ್ಟುವಂತೆ, ವರ್ಣಿಸುವ ಶಕ್ತಿಯು ಈ ಕವಿಗಿರುವುದು. ಅಂತಹ ವರ್ಣನೆಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿರುವೆವು. ಸಂಸಾರದ ಅಸಾರತೆಯನ್ನು ಕುರಿತು ಕವಿಯು ಹೀಗೆ ವರ್ಣಿಸುತ್ತಾನೆ:—

ಉರಗನ ದಾಡೆಯೊಳಮೃತಮು।
ನುರಿವಗ್ನಿಯೊಳಧಿಕ ಶೈತ್ಯಮಂ ಮೂರ್ಖ ಸಭಾಂ॥
ತರದೊಳ್ ವಿವೇಕಮುಂ ಭವ।
ಶರನಿಧಿಯೊಳ್ ಸಾರಸುಖಮನೇನಱಸುವುದೇ॥

(ಆ. ೧, ಪ. ೧೦೧)

ಕತ್ತಲೆಯು ಎತ್ತೆತ್ತಲೂ ವ್ಯಾಪಿಸಿಕೊಂಡಿತೆಂಬುದನ್ನು ವರ್ಣಿಸುವಾಗ ಕವಿಯು ಹೀಗೆನ್ನುವನು:—

ಇನಿತುಬೞಸದೆ ಕತ್ತುರಿಚಂ।
ದನಮುಂ ಕಲೞಿಪೆಱಿಯನಿಂದ್ರನೀಲಂ ಮುತ್ತಂ॥
ನನೆಯನಳಿ ಗಂಗೆಯುಂ ಜಗು।
ನೆ ನುಂಗಿದಂತಾಯ್ತು ನುಂಗೆ ಕಜ್ಜಲೆ ಬೆಟಗಂ॥

ಸ್ತ್ರೀಯರ ರೂಪಸೌಂದರ್ಯಾದಿಗಳನ್ನು ವರ್ಣಿಸುವಾಗಲೂ ಕವಿಯು ತನ್ನ ಜಾಣ್ಮೆಯನ್ನು ತೋರಿಸಿದ್ದಾನೆ. ವನವಿಹಾರವನ್ನು ಮಾಡುತ್ತಿದ್ದ ಕಾಂತೆಯರು ವನವನ್ನು ಹೋಲುತ್ತಿದ್ದರೆಂದು ಕವಿಯು ಬಹಳ ಚಮತ್ಕಾರವಾಗಿ ಚಿತ್ರಿಸಿದ್ದಾನೆ:—

ಕಳಹಂಸಂಗಳ ಯಾನಮಂ ನೆಗೞ್ದಯಾನಂ ಕೋಕಿಳಧ್ವಾನಮಂ।
ವಿಳಸಧ್ವಾನಮನೂನ ಬರ್ಹಿಗಳ ಬರ್ಹಾನೀಕಮಂ ಸತ್ಕಚಾ॥
ವಳಿ ಕಂಕೆಲ್ಲಿ ದಳಂಗಳಂ ಪದತಳಂ ಪೊದ್ರ್ಯಲ್ಲತಾಜಾಳಮಂ।
ಲಳಿತಾಂಗಂ ನೆಱೆ ಪೋಲೆ ತದ್ವನದವೋಲ್ ಕಣ್ಗೊಪ್ಪುವರ್ ಕಾಂತೆಯರ್॥

(ಆ ೨, ಪ ೧೨)

ನವರಸಗಳಲ್ಲಿ ಶೃಂಗಾರವೇ ಸಾರಭೂತವಾದುದೆಂದು ಪ್ರತೀತಿಯಿದೆ. ಅದರಲ್ಲಿಯೂ ವಿಪ್ರಲಂಭ ಶೃಂಗಾರವು ಅತ್ಯುತ್ತಮವಾದುದು. ಈ ಪುರಾಣದಲ್ಲಿ ಶೃಂಗಾರರಸವನ್ನು—ಅವರಲ್ಲಿಯೂ ವಿಪ್ರಲಂಭ ಶೃಂಗಾರವನ್ನು—ಕವಿಯು ಯಥೋಚಿತವಾಗಿ ಬಹಳ ಚೆನ್ನಾಗಿ ವರ್ಣಿಸಿರುವನು. ಚತುರ್ಥಾಶ್ವಾಸದ ಉದ್ದಕ್ಕೂ ಸ್ವಯಂಪ್ರಭೆಯ ವಿರಹತಾಪದ ವರ್ಣನೆಯಿದ್ದು, ಅದು ವಿಪ್ರಲಂಭ ಶೃಂಗಾರದಿಂದ ತುಂಬಿಕೊಂಡಿದೆ. ಅದರಿಂದ ಒಂದೆರಡು ಪದ್ಯಗಳನ್ನು ಇಲ್ಲಿ ಉದ್ಧರಿಸುವೆವು. ಮಾವಿನ ಮರದ ಸಮೀಪಗತೆಯಾದ ಬಾಲಿಕೆಯು, ಆ ಚೂತಕುಜಕ್ಕೆ ಕೈಮುಗಿದು, ಹೀಗೆ ಪ್ರಾರ್ಥಿಸುವಳಂತೆ:—

ಎಲೆ ಚೂತ ತುಂಬಿಗಂ ಕೋ।
ಗಿಲೆಗಂ ಕೈಗೊಟ್ಟು ನೀನುಮಿಂದೆನ್ನಂ ಬಂ॥
ದಲೆವುದಿದುಚಿತಮೆ ಭಾವಿಸು।
ಸಲೆ ನೀರೆಱೆದೋವಿ ನಡಪಿದಂದಿನ ನಲವಂ।

(೩೬ • ಪ. ೬೪

ವಿಪ್ರಲಂಭ ಶೃಂಗಾರದ ಕೊನೆಯ ಅವಸ್ಥೆಯನ್ನನುಭವಿಸುತ್ತಿದ್ದ ಸ್ವಯಂಪ್ರಭೆಯನ್ನು ಕವಿಯು ಹೀಗೆ ಚಿತ್ರಿಸಿದ್ದಾನೆ:—

ಕದಪಿನೊಳೊತ್ತು ಶೀತಳಿಕೆಯಂ ಕುಚಮಂ ನಳಿನೀದಳಂಗಳಿಂ।
ಪೊದಯಿಸಮುರ್ಚು ಕಂಠತಟದೊಳ್ ಬಿಸಮಂ ತಳಿ ಚಂದನಾಂಬುವಂ॥
ಹೃದಯದೊಳೆಂದು ಸಂಭ್ರಮಿಪ ಖೇಚರಿಯರ್ಕಳ ಮುಂದೆ ಬೇಗೆ ತಾ।
ಗಿದ ಲತೆವೋಲ್ ಬಟಿಲ್ದು ಪರಿತಾಪದೆ ಬಂಬಳ ಬಾಡಿವೋಪಳಂ॥

(ಆ೪, ಪ ೭೮)

ಇದು ಶೃಂಗಾರ ರಸದ ವಿಷಯವಾಯಿತು. ಭವಭೂತಿಯು ರಸಗಳಲ್ಲಿ ಯಾವುದನ್ನು ಶ್ರೇಷ್ಠವೆಂದಿರುವನೋ ಆ ಕರುಣರಸದ ಚಿತ್ರಕ್ಕೂ ಈ ಗ್ರಂಥದಲ್ಲಿ ಪ್ರಾಶಸ್ತ್ಯ ದೊರೆತಿದೆ. ನಿಜಾನುಜನ ಕಳೇವರವನ್ನು ಕಂಡು ಬಲರಾಮನು ಮಾಡುವ ಪ್ರಲಾಪವು ಎಂಥವರ

ಕಣ್ಣಿನಲ್ಲಿಯೂ ನೀರನ್ನು ತರುವಂತಿವೆ. ಅದನ್ನಿಲ್ಲಿ ಕೊಡುತ್ತೇವೆ:—

ಹಾಹಾ ಮನುಕುಲ ಮಂಡನ।
ಹಾಹಾ ಸುರಖಚರ ಮನುಜ ಚೂಡಾರತ್ನಾ॥
ಹಾಹಾ ಗುರುಜನವತ್ಸಲ।
ಹಾಹಾ ಬುಧಬಂಧುವಂದಿಕಲ್ಪಮಹೀಜಾ॥

(ಅ. ೯, ಪ. ೬೧)

ಗರುಡಿಯೊಳಾರೊಳಿನ್ನಳವಿ ಮಾಡುವೆನಾರೊಡನೇಱಿ ತೋರುವೆಂ।
ಕರಿತುರಗಂಗಳಂ ನಗುವೆನಾರೊಡನಾರೊಡನಣ್ಣ ಮೆಚ್ಚಿದಂ॥
ತಿರೆ ಮನವಿಚ್ಚೆಯುಂ ನುಡಿವೆನಾರೊಡನಾಡುವೆನಕ್ಕಟಾ ಸಹೋ।
ದರನನನಾಥನಂ ಬಿಸುಟು ಕೆಮ್ಮನೆ ತಮ್ಮನೆ ಪೋಗಲಕ್ಕುಮೇ॥

(ಅ. ೯, ಪ ೬೪)

ಸರಸತಿ ನಿನ್ನ ಭಾಗ್ಯವರೆಯಾದುವೆ ಹಾ! ನಿನತೋಲಿವಾಗ್ಯವ್ರೋ!
ಸರಿಸಿದುದೇ ಧರಿತ್ರಿ! ಸಿರಿ ನಿನ್ನಯ ಮೆಯ್ಸಿರಿ ಸೂಱೆವೋಯ್ತೆನೆ॥
ಯ್ಗೆಱೆಮದೆ ವೀರಲಕ್ಷ್ಮಿ ನಿನತೆಯ್ದೆತನಂ ಬಿದಿ ಮೇರೆವಪ್ಪಿನಿ।
ಷ್ಕರುಣವೆ ನಿಮ್ಮ ಬಾಚಿಮ್ಮದಲನಕ್ಕಟ! ವಂಚಿಸಿ ಕೊಂಡುವೋದನೇ॥

(ಅ. ೯, ಪ. ೭೦)

ಸೊಗಯಿಪ ನಿನ್ನ ನುಣ್ಚರದ ಗೀತಕೆ ಮೆಚ್ಚುವರಾರೊ ಭೃಂಗ ಕಂ।
ತುಗೆ ಬರವೀವ ನಿನ್ನ ಬರವಿಂಗಿದಿರ್ವರ್ಪವರಾರೊ ಚೂತ ದೇ।
ಸೆಗೆ ನೆಲೆಯಾವ ನಿನ್ನಯ ಮಗುಳ್ನಗೆಯುಂ ಬಗೆಗೊಳ್ವರಾರೊ ಮ।
ಲ್ಲಿಗೆ ಮಱಪಿಕ್ಕಿ ನಿಮ್ಮರಸನಂ ಜವನೊಯ್ದುದನಿತ್ತ ಕೇಳಿರೇ॥

(ಅ. ೯, ಪ. ೭೧)

ರಸಭಾವನೆಗಳನ್ನು ಹೀಗೆ ಮನಮುಟ್ಟುವಂತೆ ವರ್ಣಿಸುವುದಕ್ಕೆ ಅನುಕೂಲವಾದ ಶಬ್ದಭಂಡಾರವು ಆಚಣ್ಣನಲ್ಲಿತ್ತು. ಅವನು ಉಚಿತ ಸಂದರ್ಭಗಳಲ್ಲಿ ಹಲವು ಸಂಸ್ಕೃತ ಪದಗಳನ್ನೂ ಅಪೂರ್ವವಾದ ಕೆಲವು ಅಚ್ಚಗನ್ನಡಶಬ್ದಗಳನ್ನೂ ಉಪಯೋಗಿಸಿರುವನು. ಅನೇಕ ಸಂಸ್ಕೃತ ಶ್ಲೋಕಗಳೂ, ಕನ್ನಡ ಗಾದೆಗಳೂ, ನುಡಿಗಟ್ಟುಗಳೂ ಅವನ ಗ್ರಂಥದಲ್ಲಿ ದೊರಕುತ್ತವೆ. ದಿಗ್ದರ್ಶನಾರ್ಥವಾಗಿ ಈ ಕೆಳಗಿನವುಗಳನ್ನು ನೋಡಬಹುದು:—

(1) ಅಚ್ಚಗನ್ನಡ ಶಬ್ದಗಳು—ತೆಳೆಯಿಸು (1, ೧೯) ಅಳಲು (3, ೧೯) ಅಗುಂದಲೆ (7, ೯೩) ದಾಟಣ (7, ೯೫) ತಂಱುಗು (8, ೫೮) ಅಡ್ಡಣ (10, ೬೫) ಗಱು (15, ೯೯) ನೆಱೆವಂ (18, ೩) ಅಂಚಿದಕೆ (18, ೩) ಬೀದೆ (19, ೪) ಉಪ್ಪರವಟ್ಟ (19, ೬) ಅರಂಟು (21, ೨೧) ಕಸಱಿಸು (24, ೩೫) ಬಳಸಿಗಂ (25, ೭) ಸೋವತ (26, ೪೦)

ಒಟ್ಟಜೆ (27, ೪೭) ತೇಱುವು (27, ೪೮) ಮುರ್ಕುರ್ (27, ವ) ತಡೆ (28, ೫೨) ತೊಂತು (28, ೫೨) ಪೊಬ್ಬು (30, ೫೯) ದೂಸಱ್ (30, ೫೯) ಹೊಱಸು (31, ೬೮) ಕೆಱು (34, ೫) ದಡಿ (34, ೫) ಪಲ್ಲಣೆ (34, ೫) ಪದುಳಿಕೆ (34, ೯) ಲಂದಣಿಗ (35, ವ) ತಾರ್ಕಣ್ಡು (47, ವ) ಪಱ್ಬುಗಸು (57, ೭) ಜಿನುಗು (59, ವ) ಅದಪಱಲ (59, ವ) ತುಱುಗಲ್ (59, ವ) ಸುಗಿ (59, ೫೮) ಪುಗುಱು (60, ವ) ಬಂಬಳಿಪ (61, ವ) ಬವಸೆ (62, ೬೮) ತಡಂಗಲಿಸು (63, ೭೬) ಚಿನ್ನಪೂ (67, ೫) ತಗುಳ್ (68, ವ) ಬಿಚ್ಚಳಿಸು (68, ವ) ಅವಟೈಸು (71, ವ) ಗೊಂದಳಿಸು (72, ೭೮) ಪಾಱು (72, ೩೧) ಕಡೆ (73, ೩೩) ಪುದು (73, ೩೪) ಮಿಳ್ಳಿಸು (73, ೩೮) ಎಳಱಿಸು (74, ವ) ಮದಿಲ್ (76, ೫೨) ಮುಸುಱು (77, ೫೬) ಬೀಡಿಕೆ (77, ವ) ಸೆಲಗು (79, ವ) ಬರುಂಟು (79, ವ) ರಪಣ (83, ವ) ಪುಡುಕುನೀರ್ (83, ೯) ಪಱುಗೆಱೆಲ್ (84, ೧೨) ಪೆಬ್ಬಳಿಸು (85, ೧೪) ಬಾದವಣ (85, ೧೫) ಪೇರಿಗ (87, ವ) ತಲೆವರಿಗೆ (91, ೬೯) ಪಗಲ್ (94, ೫೦) ಅಡಹಡಿಸು (9 , ವ) ಜವಳಿ (97, ವ) ಗಸಣೆ (98, ವ) ಹೆಡಲಗೆ (98, ವ) ಪರಿಯುಳ (99, ವ) ಇಟ್ಟಣ (99, ವ) ಸಯ್ಯೇಱಿಸು (99, ೫) ಮಾಱುಂಡಳ (99, ವ) ಲಂಬಳಿಕೆ (100, ವ) ಕೊಗ್ಗಿ (100, ವ) ಮಾಱಡಕ (101, ವ) ಮಟ್ಟಲಕ್ಕಿಪೊಯ್ಯು (101, ವ) ಕೆಯ್ಯೊರೆಱಿ (102, ವ) ಸಿಪ್ಪುರ್ (106, ವ) ಇಡುಕುರ್ (106, ವ) ಕಿಱುಪಱುಗುಲ್ (107, ವ) ಪುಡುಕೆ (109, ೫೦) ಮಾಱುಂಕೆ (109, ೫೪) ಜೂಬು (110, ವ) ಜಾವಳಿಸು (110, ೫೮) ಮೂರಿಪಿಡು (118, ೨೪) ದೊಮ್ಮಳಿಸು (121, ವ) ಅಣೆ (124, ವ) ಅಡಕಿಲ್ (137, ವ) ಎಗ್ಗು (137, ವ) ಅಱೋಡಿಸು (137, ವ) ಮಿಱುಪಿಗ (138, ವ) ಲುಳಿಯಿಸು (138, ವ) ಮುಱುಕ (138, ವ) ಜೈಸಿಕೆ (138 ವ) ಅಳ್ಳವಿಳ್ಳಿಯಾಗು (140, ೫೩) ಅಪ್ಪಳಿಸು (141, ವ) ಸಾಹಣಿ (141, ವ) ನೀಡಱಿಂ (141, ೫೮) ಜವಲಿ (143, ವ) ಕಿಱಿಪಿದ (148, ವ) ಕಡಾರ (148, ವ) ಅಚ್ಚುಕತನ (155, ವ) ಬೆಳುಕ (156, ವ) ಉಱಿಗಿರು (159, ೫೭) ಪೆಳಱ್ (168, ೨೪) ಒಳಱ್ (169, ೨೮) ಲವಲವಿಸು (169, ೩೦) ಕೆರಕು (170, ೩೬) ಮಿದಿಸು (170, ೩೭) ಪಡಿಕೆ (171, ೩೮) ಚೆನ್ನಿಗ (171, ೩೯) ಗೋರಿಗೊಳಿಸು (171, ೪೧) ಕೊಕ್ಕರಿಸು (179, ೮೨) ತವಿಲ್ (183, ೧೦೫) ದರವುರ, (185, ೧೧) ಈಡಿತ (2 4, ೬) ಬಾದೇಂ (220, ೮೦) ಪಿಂಪಿಣಿ (23 , ೧) ಅಕ್ಕಳಿಸು (250, ೩೮) ಬಱುತು (251, ವ) ಮುಱುಗು (253, ವ) ಕೊಚ್ಚನಿಕ್ಕು (254, ವ) ಚುಬುಕೆಂದು (268, ೨) ಮುಂತಾದುವು.

(2) ನುಡಿಗಟ್ಟುಗಳು, ಗಾದೆಗಳು ಮತ್ತು ಶ್ಲೋಕಗಳು—ಆಗಸದ ನೀಳಮಂ ಗೞಿಯೊಳಳೆಯಲೇಂ ಬಂದಪ್ಪುದೇ? (ಪು 15, ಪ ೯) ಸೊಗಯಿಸುಗುಮೆ ಚೋರಂಗೆ ಚಂದ್ರಿಕಾವಿಸ್ತಾರಂ? (24, ೩೫) ಜೀವನವಿಲ್ಲದ ತನುವಿನಂದಂ (25, ೩೮) ಒಡೆಯರ್ ಪಿಂಗಿದ ಗೇಹದಲ್ಲಿ ಸುನಕಂ ಪೊಕ್ಕಂಡದಿಂ (28, ೫೧) ತನ್ನಿಱಿವ ಪಗೆಯನೆತ್ತಿಱಿದುದು (35, ವ) ನಿಧಾನಂ ಪೋದ ಕುಱಿಯಂತೆ, ಜೀವಂ ಪೋದೊ

ಡಲಂತೆ (56, ೧೯) ಕಿರ್ಚಿಂಗೆ ಕಿರ್ಚು ಮರ್ದಕ್ಕುಂ (63, ೭೧) ಕಾಮಿಗೆ ತನ್ನಯ ನಲ್ಮೆಯೊಂದೆ ಸೌಖ್ಯದ ನೆಲೆ (80, ೬೪) ತರುವನಡರ್ದು ನಿಮಿರ್ದ ಲತೆಯಂ ಬೞಿಕ್ಕೆ ಬರ್ಕುಮೆ ತೆಗೆಯಲ್? (88, ೨೬) ಪ್ರಭುರ್ಯದ್ದೇವೇಚ್ಛತಿ ತತ್ಕರೋತಿ (95, ವ) 'ಆಜ್ಞಾಫಲಮೈಶ್ವರ್ಯಂ' (105, ೩೫) ಕಾಳೋರಗನೆಂಜಲಿಸಿದ ಪಾಲಂ ಕುಡಿಯಿಪ್ಪುದೆ ಮಱಿದುಮಱಿಯದ ಶಿಶುವಂ? (106, ೩೮) ಅಟ್ಟಿಗೆಲವ್ರೋ ತಲೆಬಿಣ್ಣಿತ್ತೆಂಬ (111, ೬೨) 'ಪಿತೃಸಮೋ ಜ್ಯೇಷ್ಠ' (132, ೧೬) ಸಂಸಾರದೊಳಾರಯ್ಯೆ ಕಷ್ಟಮವಿವೇಕಮೆದಲ್ (158, ೩೦) ನಾಯ್ ನಾಯ್ಗಳೊಳ್ ಪೋರ್ವವೋಲ್ (167, ೧೮) ಕಟ್ತಲಿಸುವ ರಾತ್ರಿಯೊಳ್ ಕಾಣ್ಬ ಗೂಗೆಗಳಂತೆ (167, ವ) ಕಳ್ಳರ್ ಕಳ್ಳರಂ, ಪಾಂಬರ್ ಪಾಂಬರಂ ಮುನಿದು ಮೂದಲಿಸುವಂತೆ (167, ವ) ದೊರೆಕೊಂಡ ನಿಧಿಯನೊಡೆದು ಕಳೆವ ಮರುಳಿನಂತೆ (174, ವ) ತಳಿರ್ತ ಬನಮಂ ಕಾಟ್ಗಿಚ್ಚು ಪರ್ವಿದಂತೆ (174, ವ) ಅನಳಜ್ವಾಳೆಯುಮಂ ಜಳಪ್ರವಾಹಮುಮಂ ಕಂಡಂದೆ ಕೆಳರ್ವಪಸ್ಮಾರದಂತೆ (176, ವ) ಆಮಳಕರಸದಿಂ ಕಷಾಯಿತಾಸ್ಯನಾದಂಗೆ ನೀರುಂ ಕ್ಷೀರರುಚಿಯಾಗಿ ತೋರ್ಪಂತೆ (176, ವ) ಮರುಳ ಕೆಯ್ಯ ಮಸೆದಲಗಿನವೋಲ್ (177, ೭೦) ಉಗ್ರಾಗ್ನಿ ಗಾಳಯೊಡಗೂಡಿದವೋಲ್ (185, ೧೦) ದರವುರಮಲ್ಲದರುಜೆ ತುಚ್ಛವೈದ್ಯರಿಂ ತೀರ್ದಪುದೇ? (185, ೧೧) ಉರಿ ತಾಗಿದ ಬಿತ್ತಿಂಗೆಣೆಯಕ್ಕುಂ (186, ೧೭) ಬಡವಂ ನಿಧಿಗಂಡ ಮಾಣಿಕ್ಕಯಿಂ (219, ೭೮) ತುಂಗತರಾವನೀಧರಮಂ ಗುಂಗುಱು ಕಾಯ್ದವೋಲ್ (251, ೪೦) ವಿಧುಲೇಖೆಯಂ ವಿಧುಂತುದಂ ಪಿಡಿವಂತೆ (253, ವ) ರವಿಪಾದಂ ಬೆಳಪಲ್ಲಿ ನಿಲ್ಕುಮೆ ತಮಂ? (282, ೮೨)—ಮುಂತಾದುವು.

ಈ ಪುರಾಣದಲ್ಲಿ ಬಳಸಲ್ಪಟ್ಟಿರುವ ಕೆಲವು ಪ್ರಯೋಗವಿಶೇಷಗಳು ಗಮನಾರ್ಹವಾಗಿವೆ. ಪು. ೫೦ ಪ. ೯ರಲ್ಲಿ ಉಪಯೋಗಿಸಲ್ಪಟ್ಟಿರುವ 'ತಳೆವೋ' ಎಂಬ ಶಬ್ದರೂಪವು 'ತಳೆಯುವೆ' ಎಂಬುದರ ಪ್ರಾಚೀನ ರೂಪವಾಗಿದೆ. ಪು. 60 ಪದ್ಯ ೬ ರಲ್ಲಿರುವ ಕಿತ್ತುಸಿರ್ ಎಂಬುದು ಕಿಱಿದು + ಉಸಿರ್ ಎಂಬುದರ ಸಮಸ್ತರೂಪವಾಗಿದೆ. ಪು. 64 ಪದ್ಯ ೮೦ರಲ್ಲಿ 'ಚೆಚ್ಚರಮುನ್ನ ಪೇೞ್ದುದಂ' ಎಂಬಲ್ಲಿ ವಿಭಕ್ತಿ ಪಲ್ಲಟವಾಗಿದೆ. 86ನೆಯ ಪುಟದಲ್ಲಿರುವ 'ರಪಣ'ವೆಂಬ ಶಬ್ದವು ಪಂಪ ಮಹಾಕವಿಯಿಂದ ಉಪಯೋಗಿಸಲ್ಪಟ್ಟಿರುವ 'ರಪಣ' ಶಬ್ದದ ರೂಪಾಂತರವಾಗಿ ತೋರುತ್ತದೆ (ಪ.ಭಾ.ಆ ೭, ವ ೩.) ಪುಟ 106 ಪದ್ಯ ೩೯ ರಲ್ಲಿ 'ಎಂಬೋ' ಎಂಬ ಅಪೂರ್ವ ಪ್ರಯೋಗವಿದೆ. ತಮಿಳಿನಲ್ಲಿ ಹೆಚ್ಚು ರೂಢಿಯುಳ್ಳದ್ದು, ಕನ್ನಡದಲ್ಲಿ ಅಪೂರ್ವವಾಗಿರುವ 'ಒಳಱ್' ಎಂಬ ಶಬ್ದವು ಪು. 169 ಪದ್ಯ ೨೮ರಲ್ಲಿ ಉಪಯೋಗವಾಗಿದೆ. ಪು. 7 ಪದ್ಯ ೪೨ರಲ್ಲಿರುವ 'ಸೋಯದೆ' ಎಂಬ ನಿಷೇಧ ರೂಪವು ಬಹಳ ಅಪೂರ್ವವಾಗಿದೆ. 'ಅಮ್ಮಡೆ' (18,೩) ಅರಂಟು (21,೨೧) ಎಂಬ ಶಬ್ದಗಳು ತುಳುವಿನ 'ಅಂಬಡೆ', 'ಅರಂಟು' ಎಂಬವುಗಳ ಸಮಾನ ರೂಪಗಳಾಗಿವೆ. 'ಕಲುತಿರ್ಪರ್', (16, ೪) ಎಂಬುದು ಹೊಸಗನ್ನಡದ 'ಕಲಿಯುತ್ತಿರುವರು' ಎಂಬುದರ ಹಳೆಯ ರೂಪ. "ಕೋಕಂ ಜಳಜಾಕರದ ಕೆಲದೊಳುಲಿವುವು" (20, ೧೯) "ಅಳಿಯಲರಿಂ ಬಂಡುಗೆ ಪೆಣೆದು ನೆನೆಯಿಪವು" (21, ೩೦)—ಎಂಬವುಗಳು ಹಳೆಗನ್ನಡ ವ್ಯಾಕರಣದಲ್ಲಿ

ಜಾತ್ಯೇಕವಚನದ ಪ್ರಯೋಗಗಳೆನಿಸಿವೆ. ಸೈರಿಸನೆ (36, ೨೧) ನೀನಾರ್ಗೆ (44, ೫೬) ಬಾರ ನೀಂ (50, ೫) ಮನುಮಥ (58, ವ) ಫಳನೊಗೆದುದು (63, ೭೦) ದುರ್ಜನಾಗ್ರಣಿ ಯಾವೊಂ (64, ೮೨) ನೂಂಕೆಪಟ್ಟು (65, ೮೬) ಪೋಗುಗೆ (75, ೪೬) ತನತು (79, ೬೨) ಈತೋರ್ಪುದೆ (84, ೧೦) ಪೋಬಟಿಯುಂ (88, ೨೮) ಏಗಳಗೆಯ್ವೆ (159, ೫೮) ಕಾಗು (159, ೫೮) ಇನ್ನರೆ ತತ್ವವಿಮೂಢರೆನ್ನರುಂ (160, ೬೦) ಆ ಜಂಪತಿ (203, ೧೦೨) ಇರವೆಂತುಗೆ ಪೇಳ್ (206, ೧೪) ತಮ್ಮುತ್ರಿರ್ಬರ (217, ವ) ಅಱುಗುಲಿ (253, ವ) ವಕ್ಕಣಿಪ (268, ವ) ಮೊದಲಾದ ಪ್ರಯೋಗಗಳಲ್ಲಿ ಒಂದಲ್ಲ ಒಂದು ವಿಶೇಷವು ಕಂಡುಬರುತ್ತದೆ.

ಆಚಣ್ಣನ ವರ್ಧಮಾನ ಪುರಾಣದಲ್ಲಿ ಕಾವ್ಯ ಲಕ್ಷಣಗಳೂ, ಪುರಾಣಲಕ್ಷಣಗಳೂ ಬೆರೆತುಕೊಂಡಿವೆ. ಆದುದರಿಂದ ಇದನ್ನು ಒಂದು ಮಹಾಕಾವ್ಯವೆಂದು ಅಥವಾ ಒಂದು ಮಹಾಪುರಾಣವೆಂದು ಹೇಳಬಹುದು. ಮಹಾಕಾವ್ಯಗಳಲ್ಲಿ ಈ ಕೆಳಗೆ ಹೇಳಿರುವ ಹದಿನೆಂಟು ವಿಷಯಗಳನ್ನು ವರ್ಣಿಸುವುದು ಕವಿಗಳ ಪದ್ಧತಿ:—

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ ।
ಭೋರುಹವೈರಿ ಮಿತ್ರರುದಯಂ ಋತುನಂದನಮುಂಬುಸೀಧುಕಾಂ ॥
ತಾರತಿ ಚಿಂತೆ ಮಂತ್ರ ಚರಯಾನ ವಿರೋಧಿ ಜಯಂಗಳೆಂಬಿವಂ ।
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ॥

(ಸೂಕ್ತಿಸುಧಾ. ಪು. 14, ಪ. ೭೬)

ಆಚಣ್ಣನ ವರ್ಧಮಾನ ಪುರಾಣದಲ್ಲಿ ಈ ಮೇಲೆ ಹೇಳಿದ ಹದಿನೆಂಟು ಕಾವ್ಯಾಂಗಗಳು ವರ್ಣಿಸಲ್ಪಟ್ಟಿವೆ. ಪಂಪನು ಪುರಾಣಲಕ್ಷಣವನ್ನು ಹೇಳುವಾಗ ತನ್ನ ಆದಿಪುರಾಣದಲ್ಲಿ ಹೀಗೆಂದಿರುವನು:— "ಲೋಕಾಕಾರ ಕಥನಮುಂ ದೇಶನಿವೇಶೋಪದೇಶಮುಂ, ನಗರ ಸಂಪತ್ಸರಿ ವರ್ಣನಮುಂ, ರಾಜ್ಯ ರಾಮಣೀಯಕಾಖ್ಯಾನಮುಂ, ತೀರ್ಥಮಹಿಮ ಸಮರ್ಥನಮುಂ, ಚತುರ್ಗತಿ ಸ್ವರೂಪ ನಿರೂಪಣಮುಂ, ತಪೋದಾನ ವಿಧಾನವರ್ಣನಮುಂ, ತತ್ಫಳ ಪ್ರಾಪ್ತಿ ಪ್ರಕಟನಮುಮೆಂದಿಂತವಯವಗಳೆಂಟಕ್ಕುಂ". ಈ ಎಂಟು ಪುರಾಣ ಲಕ್ಷಣಗಳನ್ನೂ ವರ್ಧಮಾನ ಪುರಾಣದಲ್ಲಿ ಕಾಣಬಹುದು. ಇವುಗಳನ್ನು ಸಂದರ್ಭಾನುಸಾರವಾಗಿ ಮುಂದೆ ಸೂಚಿಸುತ್ತೇವೆ.

ಕ ಥಾ ಸಾ ರ ೦ .

ಪ್ರಥಮಾಶ್ವಾಸಂ.

ಗ್ರಂಥಾವತಾರದಲ್ಲಿ ಕವಿಯು ಶ್ರೀವರ್ಧಮಾನ ಜಿನನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು, ಸರಸ್ವತಿ, ಯಕ್ಷಿ, ಯಕ್ಷ, ಗೌತಮ, ಭೂತಬಲಿ, ಪುಷ್ಪದಂತ, ಗೃಧ್ರಪಿಂಛ, ಸಮಂತಭದ್ರ, ಪೂಜ್ಯಪಾದ, ಅಕಳಂಕ—ಇವರ ಸ್ತೋತ್ರಗಳಿವೆ. ಪೂರ್ವ ಕವಿಗಳನ್ನೂ, ತನ್ನ ಪೋಷಕನನ್ನೂ ಸ್ತುತಿಸಿದ ಬಳಿಕ, ತನ್ನ ವಿಚಾರವನ್ನೂ, ಗ್ರಂಥದ ಉತ್ಕೃಷ್ಟತೆಯನ್ನೂ ಹೇಳಿ ಕವಿಯು ಕಥೆಗೆ ಆರಂಭಿಸುತ್ತಾನೆ.

ಲೋಕಾಕಾರಕಥನವು ಆ. ೧ ಪದ್ಯ ೨೭ರಿಂದ ಆರಂಭವಾಗುತ್ತದೆ. ಲವಣಸಮುದ್ರದಿಂದ ಪರಿವೇಷ್ಟಿತವಾದ ಜಂಬೂದ್ವೀಪದ ನಟ್ಟನಡುವೆ ಮಂದರ ಪರ್ವತವು ಶೋಭಿಸುತ್ತಿರುವುದು. ಅದರ ದಕ್ಷಿಣ ದಿಶಾಭಾಗದಲ್ಲಿ ಭರತಭೂಮಿಯ ಮುಖಸರಸಿರುಹದಂತೆ ಮಗಧ ವಿಷಯವು ಕಂಗೊಳಿಸುವುದು. ಪದ್ಯ ೪೮ರ ವರೆಗೆ ದೇಶ ವರ್ಣನೆಯಿದೆ. ಆ ಮೇಲೆ ಪುರವರ್ಣನೆಯು ೭೩ನೆಯ ಪದ್ಯದ ವರೆಗಿದೆ. ಆ ಪುರವನ್ನು ವಿಶ್ವಭೂತಿಯೆಂಬ ರಾಜನು ಆಳುತ್ತಿದ್ದನು. ಜೈನೆಯೆಂಬವಳು ಅವನ ರಾಣಿ. ವಿಶ್ವಭೂತಿಗೆ ಅತಿ ಪ್ರತಾಪಶಾಲಿಯೂ, ವಿವೇಕ ವಿಭೂತಿಯೂ, ರಮ್ಯರೂಪನೂ ಆದ ವಿಶಾಖಭೂತಿಯೆಂಬ ತಮ್ಮನಿದ್ದನು. ಆ ತಮ್ಮನಿಗೆ ಯುವರಾಜಪದವಿಯನ್ನಿತ್ತು, ತಾನು ಅಧಿರಾಜನಾಗಿ, ವಿಶ್ವಭೂತಿಯು ಅಶೇಷ ಭೋಗವನ್ನು ಭೋಗಿಸಿ, ಸುಖವಾಗಿದ್ದನು. ಅವನಿಗೆ ವಿಶ್ವನಂದಿಯೆಂಬ ಕುಮಾರನುದಿಸಿದನು. ವಿಶಾಖಭೂತಿಗೆ ಸುಂದರಿಯೆಂಬ ಹೆಂಡತಿಯೂ, ವಿಶಾಖನಂದಿಯೆಂಬ ಮಗನೂ ಇದ್ದರು. ಒಂದು ದಿನ ವಿಶ್ವಭೂತಿಯು ಒಡ್ಡೋಲಗದಲ್ಲಿರಲು, ಅಲ್ಲಿಗೆ ಬಂದ ವೃದ್ಧ ಕಂಚುಕಿಯೊಬ್ಬನನ್ನು ಕಂಡು, ನಿರ್ವೇಗಪರಾಯಣನಾಗಿ, ವಿಶಾಖಭೂತಿಗೆ ಅಧಿರಾಜ ಪದವಿಯನ್ನೂ, ವಿಶ್ವನಂದಿಗೆ ಯುವರಾಜಪದವಿಯನ್ನೂ ಕೊಟ್ಟು, ತಪಸ್ಸಿಗೆ ಹೊರಟುಹೋದನು. ಇತ್ತ ವಿಶಾಖಭೂತಿಯು ವೈರಿರಾಜರನ್ನು ಗೆದ್ದು, ಬೇಡಿದವರ ಇಷ್ಟಾರ್ಥವನ್ನು ಸಲಿಸಿ, ವಸುಧೈಕಬಾಂಧವನಾಗಿ, ತನ್ನ ಕೀರ್ತಿಯಿಂದ ಜಗವನ್ನೇ ಬೆಳಗಿದನು. [ಆಶ್ವಾಸಾಂತ್ಯದ ಎರಡು ಪದ್ಯಗಳು ವಿಶಾಖಭೂತಿಗೂ, ರೇಚಣನಿಗೂ ಅನ್ವಯಿಸುವಂತಿವೆ. ಆದುದರಿಂದ ಈ ಕವಿಗೆ, ಕಥೆಯಲ್ಲಿ ಬರುವ ಪಾತ್ರಗಳೊಡನೆ ತನ್ನ ಪೋಷಕನನ್ನು ಹೋಲಿಸಿ, ವರ್ಣಿಸುವ ಉದ್ದೇಶವಿದ್ದಂತೆ ತೋರುತ್ತದೆ. ಕೊನೆಯ ಒಂದು ಪದ್ಯವನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಕೊಟ್ಟಿರುವೆವು:—

ಎಱಗಿಸಿ ತನ್ನ ಚಾರುಚರಣಾಂಬುರುಹದ್ವಿತಯಕ್ಕೆ ಮಿಕ್ಕನಾ ।
ಡೆಱೆಯರನೆಲ್ಲರಂ ವಿಬುಧವಂದಿಜನಂಗಳ ವಾಂಛಿತಾರ್ಥಮಂ ॥
ಕಱೆದು ಶರನ್ನಿಶಾಕರ ಕರೋತ್ಕರದಂತೆ ಕರಂ ತೊಳಪ್ಪ ತ ।
ನ್ನಱಿಕೆಯ ಕೀರ್ತಿಯಿಂ ಬೆಳಗಿದಂ ಜಗವಂ ವಸುಧೈಕಬಾಂಧವಂ] ॥

ದ್ವಿತೀಯಾಶ್ವಾಸಂ.

ವಿಶ್ವನಂದಿಯು ಕೇಳಿಗೆಂದು ಪುರಪಾರ್ಶ್ವದಲ್ಲಿ ಸುಂದರವಾದ ಒಂದು ನಂದನ ವನವನ್ನು ಮಾಡಿಸಿದನು. [ಇಲ್ಲಿ ಕವಿಯು ನಂದನದ ವರ್ಣನೆಯನ್ನು ವಿಸ್ತಾರವಾಗಿಯೂ, ಹೃದಯಂಗಮವಾಗಿಯೂ ಮಾಡಿರುವನು.] ಇತ್ತ ಆ ನಂದನದ ಸೊಬಗನ್ನು ನೋಡಿ ವಿಶ್ವನಂದಿಯು ಸಂತೋಷದಿಂದ ಕಾಲವನ್ನು ಕಳೆಯುತ್ತಿರಲು, ಅತ್ತ ಕಾಮರೂಪ ದೇಶದ ರಾಜನು ವಿಶಾಖಭೂತಿ ಮಹಾರಾಜನ ಆಜ್ಞೆಯನ್ನು ಪರಿಪಾಲಿಸದೆ ಸೊಕ್ಕಿನಿಂದಿದ್ದನು. ಚಾರಕರು ಬಂದು ಆ ಸಮಾಚಾರವನ್ನು ರಾಜನಿಗೆ ಹೇಳುವರು. ಅದನ್ನು ಕೇಳಿದ ವಿಶಾಖಭೂತಿಯು, ಕಾಮರೂಪಾಧಿಪತಿಯ ಅಹಂಕಾರವನ್ನು ತಗ್ಗಿಸುವುದಕ್ಕಾಗಿ ತಾನು ಆತನೊಡನೆ ಯುದ್ಧಕ್ಕೆ ಹೋಗುವುದಾಗಿಯೂ, ವಿಶ್ವನಂದಿಯು ಪುರರಕ್ಷಣೆಯನ್ನು ಮಾಡಿಕೊಂಡಿರಬೇಕಾಗಿಯೂ ಹೇಳಿದನು. ಅದಕ್ಕೆ ವಿಶ್ವನಂದಿಯು ಒಪ್ಪದೆ, ತಾನೇ ಯುದ್ಧಕ್ಕೆ ಹೋಗುವುದಾಗಿ ಹೇಳಿ, ರಾಜನಿಂದ ಅಪ್ಪಣೆಯನ್ನು ಪಡೆದು, ಹೊರಟುಹೋದನು. ಅಲ್ಲಿ ತನ್ನ ಶತ್ರುವನ್ನು ವಶಪಡಿಸಿಕೊಂಡು, ಕಪ್ಪಕಾಣಿಕೆಗಳನ್ನು ಸ್ವೀಕರಿಸಿ, ದಿಗ್ವಿಜಯವನ್ನು ಮಾಡಿ, ಮರಳಿದನು. ಇತ್ತ ವಿಶಾಖನಂದಿಯು ಧನಮದ, ರೂಪಮದ, ಯೌವನಮದಗಳಿಂದ ಕೂಡಿದವನಾಗಿ, ದುಶ್ಚರಿತವೇ ಮೂರ್ತಿವೆತ್ತಂತೆ ವರ್ತಿಸುತ್ತ, ವಿಶ್ವನಂದಿಯ ನಂದನವನವನ್ನು ವಶಪಡಿಸಿಕೊಂಡನು. ವಿಶ್ವನಂದಿಯು ವಿಶಾಖಭೂತಿಯನ್ನು ಕಂಡು, ಆತನಿಂದ ಪರಕೆಗೊಂಡು, ತನ್ನ ಅರಮನೆಗೆ ಬರಲು, ನಂದನವು ವಿಶಾಖನಂದಿಯ ವಶವಾಗಿರುವುದನ್ನು ಚಾರರು ತಿಳಿಸಿದರು. ಇದನ್ನು ಕೇಳಿ ಕೋಪೋದ್ರೇಕದಿಂದ ವಿಶ್ವನಂದಿಯು ಬನಕ್ಕೆ ನಡೆದು, ಅಲ್ಲಿದ್ದವರನ್ನು ಸೋಲಿಸಿ, ಅದನ್ನು ವಶಪಡಿಸಿಕೊಂಡನು. ವಿಶಾಖನಂದಿಯು ಹೆದರಿ, ಓಡಿಹೋಗಿ ತಲೆಮರೆಸಿಕೊಂಡನು. ಆದರೂ ವಿಶ್ವನಂದಿಯು ಅವನನ್ನು ಬಿಡದೆ, ಬೆನ್ನುಹತ್ತಿ ಹೊಡೆದನು. ವಿಶಾಖನಂದಿಯು ಹೆದರಿ, ಕ್ಷಮೆಯನ್ನು ಬೇಡಿದನು. ಇದರಿಂದ ವಿಶ್ವನಂದಿಯ ಕೋಪವು ಶಾಂತವಾಯಿತು. ಕೆಡೆದ ದಾಯಾದನನ್ನು ಮೇಲಕ್ಕೆತ್ತಿ, ಸಮಾಧಾನಪಡಿಸಿದನು. ನಿರ್ವೇಗಮನನಾಗಿ, ರಾಜ್ಯಭೋಗವನ್ನೊಲ್ಲದೆ, ಆತನು ತಪೋವನಕ್ಕೆ ಹೊರಟುಹೋದನು. ಇದನ್ನು ಕೇಳಿದ ವಿಶಾಖಭೂತಿಯು ತಾನೂ ಆತನೊಡನೆ ತಪಸ್ಸಿಗೆ ಹೊರಟುಹೋದನು. ಅವನ ರಾಜ್ಯವು ವಿಶಾಖನಂದಿಯ ಕೈಸೇರಿತು. ವಿಶಾಖಭೂತಿಯು ನಿರಶನಾದಿ ಘೋರ ತಪಸ್ಸನ್ನು ಮಾಡಿ, ಆಯುರವಸಾನದಲ್ಲಿ ಸುರನಾಗಿ ಉದ್ಭವಿಸಿ, ಶತಾರಕಲ್ಪದಲ್ಲಿ ಅನೇಕ ಭೋಗೋಪಭೋಗಗಳನ್ನು ಅನುಭವಿಸುತ್ತಿದ್ದನು. ಇತ್ತ ವಿಶ್ವನಂದಿ ಯೋಗೀಶ್ವರನು ಲೋಕಸ್ತುತವಾದ ಏಕವಿಹಾರಿತ್ವ ಪ್ರತಿಜ್ಞೆಯನ್ನು ತಳೆದು, ದೇಶದಲ್ಲೆಲ್ಲ ಸಂಚರಿಸುತ್ತಿದ್ದನು.

ತೃತೀಯಾಶ್ವಾಸಂ.

ಒಮ್ಮೆ ವಿಶ್ವನಂದಿ ಮುನೀಶ್ವರನು ಉತ್ತರ ಮಧುರೆಯೆಂಬ ನಗರಿಗೆ ಬಂದನು. ಆಗ ನಡು ಮಧ್ಯಾಹ್ನವಾಗಿತ್ತು. ಅಲ್ಲೊಂದು ಉದ್ಯಾನದಲ್ಲಿ ಒಂದು ಮಾವಿನ ಮರದ

ಕೆಳಗೆ ನಿಂತು, ಮಾರ್ಗಾತಿಚಾರೋಚಿತ ನಿಯಮವನ್ನಾಚರಿಸಿ, ಪಾರಣೆಗಾಗಿ ಬರುತ್ತಿರಲು, ಪಶುವೊಂದು ಆತನನ್ನು ಹಾಯ್ದು, ಕೆಡವಿತು. ಆತನ ಬಸುರಿಂದ ಬಿಸುನೆತ್ತರ ಪೊನಲೂ, ಕರುಳ ಸೋಗೆಯೂ, ಹೊರಕ್ಕೆ ಬಂದುವು. ಈ ಅವಸ್ಥೆಯಲ್ಲಿದ್ದರೂ ಆ ಶಾಂತಾತ್ಮನು ಕಣ್ಣುಗಳನ್ನು ಮುಚ್ಚಿಕೊಂಡು, ಧ್ಯಾನಾಧೀನ ಮನಸ್ಕನಾಗಿದ್ದನು. ಅವನನ್ನು ನೋಡಿ, ಪಟ್ಟಣಿಗರೆಲ್ಲರೂ ಮರುಗುತ್ತಿದ್ದರು.

ವಿಶಾಖಭೂತಿಯೂ ವಿಶ್ವನಂದಿಯೂ ತಪಸ್ಸಿಗೆ ಹೊರಟುಹೋದುದನ್ನು ಕೇಳಿ, ಇತ್ತ ಕಾಮರೂಪಾಧಿಪತಿಯು, ಅದೇ ತನಗೆ ಸುಸಮಯವೆಂದು ಬಗೆದು, ವಿಶಾಖನಂದಿಯ ಮೇಲೆ ದಂಡೆತ್ತಿ ನಡೆದು, ಆತನನ್ನು ಸೋಲಿಸಿ, ಸೆರೆಯಲ್ಲಿಟ್ಟನು. ಆದರೆ ವಿಶಾಖನಂದಿಗೆ ಉದರಂಭರಣವೇ ಅತಿ ಮುಖ್ಯವಾಗಿದ್ದುದರಿಂದ, ಅವನು ಲಜ್ಜಾಹೀನನಾಗಿ ತನ್ನ ವೈರಿಯ ಪಾದಾನತನಾಗಿ, ಅವನ ಲೇಖವಾಹಕನಾದನು. ಹೀಗಿರುವಾಗ, ಆ ದಿನ ಅವನು ಉತ್ತರ ಮಧುರೆಯ ಧರೇಶ್ವರನಿಗೆ ಓಲೆಯನ್ನು ತಂದುಕೊಟ್ಟು, ಮಾರ್ಗದಲ್ಲಿ ಬರುತ್ತಿರಲು, ಜನರ ಗುಂಪನ್ನು ನೋಡಿ, ಅಲ್ಲಿಗೆ ಹೋದನು. ಅಲ್ಲಿ ಬಿದ್ದಿರುವವನು ವಿಶ್ವನಂದಿಯೆಂಬುದನ್ನು ಗುರುತಿಸಿ, ಅವನು ಆತನನ್ನು ನಾನಾ ರೀತಿಯಿಂದ ಮೂದಲಿಸಿದನು. ಇದರಿಂದ ವಿಶ್ವನಂದಿಮುನೀಶ್ವರನ ಮನವು ಕದಡಿತು, ಕೋಪವು ಮೇರೆ ಮೀರಿ ಹರಿಯಿತು. ಆದರೂ ಸೈರಣೆಯನ್ನು ತಂದುಕೊಂಡು, ಈ ಜನ್ಮದಲ್ಲಿ ಸಾಧ್ಯವಾಗದಿದ್ದರೂ ಮುಂದಿನ ಜನ್ಮದಲ್ಲಾದರೂ ಈತನನ್ನು ತಾನು ಸಂಹರಿಸುವುದಾಗಿ ನಿಶ್ಚಯಿಸಿ ಅಸುವನ್ನು ತೊರೆದನು. ಬಳಿಕ, ಶತಾರಕಲ್ಪದಲ್ಲಿ ಸುರನಾಗಿ ಜನಿಸಿ, ವಿಶಾಖಭೂತಿಚರಸುರವರನೊಡನೆ ಸ್ನೇಹದಿಂದಿದ್ದು ಸುಖವನ್ನನುಭವಿಸುತ್ತಿದ್ದನು.

ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಸುರಮ್ಯವೆಂಬ ವಿಷಯವು ರಮ್ಯವಾಗಿ ಶೋಭಿಸುತ್ತಿದ್ದಿತು. ಪೌದನನಗರವೇ ಅದರ ರಾಜಧಾನಿ. ಪ್ರಜಾಪತಿ ಮಹಾರಾಜನು ಅದಕ್ಕೊಡೆಯನು. ಜಯಾವತಿ ಮತ್ತು ಮೃಗಾವತಿ ಎಂಬವರು ಆತನ ರಾಣಿಯರು. ಜಯಾವತೀದೇವಿಯಲ್ಲಿ ವಿಶಾಖಭೂತಿಚರ ಸಾಮಾನಿಕಾಮರನು ಬಂದು ವಿಜಯನೆಂಬ ಮಗನಾಗಿ ಜನಿಸಿ, ಬಲದೇವನಾದನು. ವಿಶ್ವನಂದಿಚರಸುರವರನು ಮೃಗಾವತೀ ದೇವಿಯಲ್ಲಿ ತ್ರಿಪೃಷ್ಟನೆಂಬ ಮಗನಾಗಿ ಹುಟ್ಟಿ, ವಾಸುದೇವನಾದನು. ಈ ಬಾಲಕರೀರ್ವರೂ ಬಹಳ ಅನ್ಯೋನ್ಯರಾಗಿದ್ದು, ಸಮಸ್ತ ವಿದ್ಯೆಗಳಲ್ಲಿಯೂ ಪಾರಂಗತರಾದರು. ಆಗ ವಸಂತನೆಂಬ ಒಬ್ಬ ನಿಮಿತ್ತವೇದಿಯು ಸಭೆಯಲ್ಲಿ ರಾಜನೊಡನೆ ಆತನ ಕಿರಿಯ ಮಗನು ತ್ರಿಖಂಡ ಪೃಥ್ವಿಗೊಡೆಯನಾಗುವನೆಂದು ಹೇಳಿ ಹೊರಟುಹೋದನು. ಕೆಲವು ದಿನಗಳು ಕಳೆದ ಬಳಿಕ, ಒಂದು ದಿನ, ಒಬ್ಬ ಚರನು ಬಂದು, ಮಹಾಕೇಸರಿಯೊಂದು ದೇಶದಲ್ಲಿ ವಿಪ್ಲವವನ್ನು ತಂದೊಡ್ಡಿರುವುದಾಗಿ ಹೇಳಿದನು. ಇದನ್ನು ಕೇಳಿ, ರಾಜನು ರೋಷಾವೇಶದಿಂದ ತಕ್ಷಣವೇ ಹೊರಟುಹೋಗಿ, ಆ ದುಷ್ಟ ಸಿಂಹವನ್ನು ಕೊಂದು, ಲೋಕವನ್ನು ನಿಷ್ಕಂಟಕಪ್ರಾಯವಾಗಿ ಮಾಡಿ ಬರುವುದಾಗಿ ಹೇಳಿದನು. ಆ ಮಾತನ್ನು ಕೇಳಿ ತ್ರಿಪೃಷ್ಟನು, ಆ ಬಡ ಸಿಂಹವನ್ನು ಕೊಲ್ಲುವುದಕ್ಕೆ ಆತನು ಹೋಗಬೇಕಾಗಿಲ್ಲವೆಂದೂ,

ತನುಗೆ ಅಪ್ಪಣೆಯನ್ನಿತ್ತರೆ, ತಾವು ಆ ಕಾರ್ಯವನ್ನು ಕ್ಷಿಪ್ರದಲ್ಲಿಯೇ ನೆರವೇರಿಸುವೆವೆಂದೂ ಹೇಳಿದನು. ರಾಜನು ಇದಕ್ಕೆ ಸಮ್ಮತಿಯನ್ನು ಕೊಟ್ಟು, ಬಾಲಕರನ್ನು ಸಿಂಹದೊಡನೆ ಹೋರಾಡಲು ಕಳುಹಿಸಿದನು. ಅವರು ಕಾಡಿಗೆ ಹೋಗಿ, ಭಯಂಕರವಾದ ಆ ಸಿಂಹವನ್ನು ಅನಾಯಾಸವಾಗಿ ಕೊಂದು ಮರಳಿದರು.

ಒಂದು ದಿನ ಪ್ರಜಾಪತಿ ಮಹಾರಾಜನು ಒಡ್ಡೋಲಗಗೊಟ್ಟಿರಲು, ರಾಯಭಾರಿಯೊಬ್ಬನು ಬಂದು ಹೀಗೆಂದನು:—"ರಾಜನೇ, ವಿಜಯಾರ್ಧವೆಂಬ ಕ್ಷೋಣೀಧರವರದ ದಕ್ಷಿಣ ದಿಶಾಭಾಗದಲ್ಲಿ ರಥನೂಪುರವೆಂಬ ಪಟ್ಟಣವು ಜ್ವಲನಜಟಿ ಮಹಾರಾಜನ ರಾಜಧಾನಿಯಾಗಿ ಶೋಭಿಸುತ್ತಿರುವುದು. ಆ ಜ್ವಲನಜಟಿ ಮಹಾರಾಜನಿಗೆ ವಾಯುವೇಗೆಯೆಂಬವಳು ರಾಣಿ. ಅರ್ಕಕೀರ್ತಿಯೆಂಬವನು ಮಗ. ಸ್ವಯಂಪ್ರಭಾದೇವಿಯು ಮಗಳು. ಆ ಕನ್ಯಾಮಣಿಗೆ ಯೌವನವು ಪ್ರಾಪ್ತವಾಗಲು, ರಾಜನು ಆಕೆಯ ಪರಿಣಯದ ವಿಷಯದಲ್ಲಿ ಚಿಂತಾಕುಲನಾದನು.

'ಸಿರಿಯಿಂ ಸತ್ಕುಲದಿಂ ಪೊದಟ್ದ ಸೊಬಗಿಂ ಸೌಂದರ್ಯದಿಂ ಶೀಲದಿಂ ।
ವರಚಾತುರ್ಯದಿನುದ್ಧಯೌವನದಿನಿಂತೀ ಕಾಂತೆಗಿನ್ನಾವನೀ ॥
ಧರೆಯೊಳ್ ಖೇಚರ ಭೂಚರ ಕ್ಷಿತಿಪರೊಳ್ ಸಾದೃಶ್ಯಮುಂ ಪೆತ್ತ ಸ ।
ದ್ವರನೆಂದೀತೆಱದಿಂದೆ ಚಿಂತಿಸಿದನಂದಾಖೇಚರಾಧೀಶ್ವರಂ' ॥

ಬಳಿಕ ನಿಮಿತ್ತಶಾಸ್ತ್ರವಿಚಕ್ಷಣನಾದ ಸಂಭಿನ್ನನೆಂಬವನನ್ನು ಬರಿಸಿ, ತನ್ನ ಚಿಂತಾಕಾರಣವನ್ನು ತಿಳಿಸಲು, ಆತನು ಆಕೆಗೆ ಪ್ರಜಾಪತಿ ಮಹಾರಾಜನ ಪುತ್ರನೂ, ಅತಿಧೈರ್ಯಶಾಲಿಯೂ ಆದ ತ್ರಿಪೃಷ್ಟನು ವರನಾಗುವನೆಂದು ಹೇಳಿದನು. ಇದರಿಂದ ಸಂತುಷ್ಟನಾದ ಜ್ವಲನಜಟಿ ಮಹಾರಾಜನು, ಆತನನ್ನು ಉಚಿತೋಪಚಾರದಿಂದ ಸತ್ಕರಿಸಿ ಕಳುಹಿ, ನಂದನೆಯ ಪರಿಣಯದ ಕುರಿತು ಚಿಂತಿಸುತ್ತಿದ್ದನು.

ಚತುರ್ಥಾಶ್ವಾಸಂ.

ಸ್ವಯಂಪ್ರಭೆಯ ಸಖಿಯರು ಮುಕುಂದನ ಸೌಂದರ್ಯ, ಸೌಕುಮಾರ್ಯಗಳನ್ನು ನೋಡಿ ಬಂದು, ತಮ್ಮ ಸಖಿಗದನ್ನು ವರ್ಣಿಸಲು, ಆಕೆಯು ಮಾಧವನಲ್ಲಿ ಕಿವಿವೇಟವನ್ನು ಪಡೆದು, ವಿರಹ ತಾಪಕ್ಕೊಳಗಾದಳು. ಇದನ್ನು ತಿಳಿದ ರಾಜನು, ಒಂದು ದಿನ, ಇಂದುವೆಂದು ಹೆಸರುಳ್ಳ ನನ್ನನ್ನು ಕರೆದು, ಸ್ವಯಂಪ್ರಭೆಯ ವಿವಾಹದ ದಿನವನ್ನು ನಿಶ್ಚಯಿಸಿಕೊಂಡು ಬರುವಂತೆ ಹೇಳಿದನು. ಅದಕ್ಕಾಗಿ ನಾನು ನಿನ್ನಲ್ಲಿಗೆ ಬಂದಿರುವೆನು" ಎಂದು ಹೇಳಿ, ತಾನು ತಂದ ಕಾಣಿಕೆಗಳನ್ನು ಸಮರ್ಪಿಸಿದನು. ಇದರಿಂದ ಸಂತುಷ್ಟನಾದ ಪ್ರಜಾಪತಿ ಮಹಾರಾಜನು ಸಂಭ್ರಮಸಮನ್ವಿತನಾಗಿ, ವಿವಾಹ ಮುಹೂರ್ತವನ್ನು ನಿಶ್ಚಯಿಸಿ, ಇಂದುವನ್ನು ಕಳುಹಿಸಿಕೊಟ್ಟನು. [ಪದ್ಯ ೧೧ರಿಂದ ೯೦ರ ವರೆಗೆ ವಿಪ್ರಲಂಭ ಶೃಂಗಾರದ ವರ್ಣನೆಯಿದೆ].

ಪಂಚಮಾಶ್ವಾಸಂ.

ಪಂಚಮಾಶ್ವಾಸದ ಆದಿಯಲ್ಲಿ ಪದ್ಯ ೧೪ರಿಂದ ೨೩ರ ವರೆಗೆ ತ್ರಿಪೃಷ್ಟನ ವಿರಹ ವ್ಯಥೆಯ ವರ್ಣನೆಯಿದೆ. ಸ್ವಯಂಪ್ರಭೆಯ ಬರವನ್ನು ಆತನು ನಿರೀಕ್ಷಿಸುತ್ತಿದ್ದ ರೀತಿಯನ್ನು ಕವಿಯು ಬಹಳ ಚಮತ್ಕಾರವಾಗಿ ವರ್ಣಿಸಿರುವನು:—

'ಘನತೃಷ್ಣಾತುರನುತ್ಕಂ ।
ಠನಭಿನವೋದ್ಗತಪಯೋಧರಾಗಮನಮನಾ ॥
ಜನಪತಿ ಪಾರ್ದುವಿಯತ್ಪಥ ।
ಮನೆ ನೋಡುತ್ತಿರ್ದನಾಸ್ಯೆಯಿಂ ಚಾದಗೆವೋಲ್' ॥

ಅಷ್ಟರಲ್ಲಿ ಗಗನಮಾರ್ಗದಿಂದ ಜ್ವಲನಜಟಿ ಮಹಾರಾಜನು ತನೂಜೆವೆರಸು ಅಖಿಳಾಂತಃಪುರಪರಿಜನಪರೀತನಾಗಿ ಪೌದನಪುರಕ್ಕೆ ಬರಲು, ಪ್ರಜಾಪತಿ ಮಹಾರಾಜನು ಆತನನ್ನು ಸಂಭ್ರಮದಿಂದ ಇದಿರ್ಗೊಂಡು, ಉಪಚರಿಸಿದನು. ಬಳಿಕ, ತ್ರಿಪೃಷ್ಟ ಸ್ವಯಂಪ್ರಭೆಯರ ಪ್ರಥಮ ನೋಟದ ವರ್ಣನೆಯಿದೆ. [ಪದ್ಯ ೬೨ರಲ್ಲಿ 'ಕವಿಜನಮಿತ್ರನೋಉವ ನಿಬಂಧಮಿವಂಗಜಬಂಧು ಬಾಜಿಪಾ' ಎಂಬಲ್ಲಿ ಕವಿಯು ತನ್ನ ಮಿತ್ರನಾದ ರೇಚರಸನನ್ನು ಪ್ರಕಾರಾಂತರವಾಗಿ ವರ್ಣಿಸಿರುವಂತೆ ತೋರುತ್ತದೆ].

ಷಷ್ಠಾಶ್ವಾಸಂ.

ಆರನೆಯ ಆಶ್ವಾಸದ ಪದ್ಯ ೨೨ರಿಂದ ೪೭ರ ವರೆಗೆ ರಾತ್ರಿ, ಚಂದ್ರೋದಯ, ಮತ್ತು ಚಂದ್ರಿಕೆ—ಇವುಗಳ ವರ್ಣನೆಗಳಿವೆ. ಬಳಿಕ ಅಭಿಸಾರಿಕಾರತಿಯ ವರ್ಣನೆಯಿದೆ. ಪದ್ಯ ೫೪-೫೫ರಲ್ಲಿ ಸೂರ್ಯೋದಯದ ವರ್ಣನೆಯಿದೆ.

ಸಪ್ತಮಾಶ್ವಾಸಂ.

ಸಪ್ತಮಾಶ್ವಾಸದಲ್ಲಿ ತ್ರಿಪೃಷ್ಟ ಸ್ವಯಂಪ್ರಭೆಯರ ವಿವಾಹದ ವರ್ಣನೆಯಿದೆ (೧—೨೦). ವಿವಾಹ ಸಂಭ್ರಮವು ಮುಗಿದ ಬಳಿಕ, ಖಚರರಾಜನೂ ಪ್ರಜಾಪತಿ ಮಹಾರಾಜನೂ ಒಡ್ಡೋಲಗಗೊಟ್ಟಿರಲು, ವಿದ್ಯಾಧರ ಚಕ್ರವರ್ತಿಯ ಕಡೆಯ ಚಾರಕನೊಬ್ಬನು ಬಂದು, ಈ ರೀತಿಯಾಗಿ ಬಿನ್ನಯಿಸಿದನು—"ದೇವಾ, ಅಳಕಾಪುರೀಶನಾದ ಅಶ್ವಗ್ರೀವನು ನನ್ನನ್ನಿಲ್ಲಿಗೆ ಕಳುಹಿಸಿರುವನು. ಆತನು ಬಹು ಪ್ರತಾಪಶಾಲಿಯಾದರೂ, ನಿಮ್ಮ ಮೈತ್ರಿಗೆಳಸುವನು. ಆದುದರಿಂದ ಆತನೊಡನೆ ಮಿತ್ರತ್ವವನ್ನು ಸಂಪಾದಿಸಿ,' ಇಂದುವುಮಿರುಳುಂ, ದಿನಮಣಿಯುಂ ದಿನಮುಂ, ಮಣಿಯುಂ ಮಸೆವ ಕೇವಣಮುಂ ತಾಮೊಂದಿದವೋಲ್' ನೀವು ಒಟ್ಟಿಗೆ ಕೂಡಿಕೊಂಡಿರುವುದು ಉಚಿತವು". ಈ ಮಾತಿಗೆ ರಾಜನು ಉತ್ತರ ಕೊಡದ ಕಾರಣ, ಆ ಚರನು ತನ್ನ ಒಡೆಯನು ಹೇಳಿದ ನಿಷ್ಠುರವಚನಗಳನ್ನು ಅವರ ಮುಂದೆ ಸಾರಿದನು:—'ಜ್ವಲನಜಟಿ ಮಹಾರಾಜನು ತನ್ನ ನಂದನೆಯನ್ನು ನಮ್ಮ ಒಡೆಯ

ನಿಗೆ ಕೊಡುವುದಾಗಿ ಮಾತು ಕೊಟ್ಟು, ಈಗ ವಂಚಿಸಿ, ನಿಮ್ಮ ಮಗನಿಗೆ ಕೊಟ್ಟಿರುವನು. ಈ ವಾರ್ತೆಯನ್ನು ಕೇಳಿ, ನಮ್ಮ ರಾಜನಿಗೆ ಸಹಿಸಲಾರದಷ್ಟು ಕೋಪವುಂಟಾಗಿರುವುದು. ಆದುದರಿಂದ ಈಗಲಾದರೂ ಕನ್ಯೆಯನ್ನು ತಂದೊಪ್ಪಿಸಿದರೆ, ನೀವೂ ನಮ್ಮೊಡೆಯನೂ ಮೈತ್ರಿಯಿಂದ ಸುಖವಾಗಿ ಬಾಳಬಹುದು. ಇಲ್ಲವಾದರೆ, ಸುರಮ್ಯರಾಜ್ಯವನ್ನು ನಾಶ ಮಾಡುವುದಕ್ಕಾಗಿ ನಮ್ಮ ರಾಜನು ಸಿದ್ಧನಾಗಿರುವನು". ಬಳಿಕ ಜ್ವಲನಜಟಿ ಮಹಾರಾಜ ನನ್ನುದ್ದೇಶಿಸಿ ದಿಟ್ಟತನದಿಂದ ಹೀಗೆಂದನು:—"ಮುಂದಿನ ಹಾನಿವೃದ್ಧಿಯನ್ನರಿಯದೆ ನಮ್ಮೊಡೆಯನಪೇಕ್ಷಿಸಿದ ಈ ಬಾಲೆಯನ್ನು, ಈ ತ್ರಿಪೃಷ್ಟನಿಗೆ ತಂದೀಯುವುದೇ? ನೀನು ಮಾಡಿದ ಕಾರ್ಯವು, ಏನೂ ತಿಳಿಯದ ಶಿಶುವಿಗೆ ಕಾಲೋರಗನೆಂಜಲಿಸಿದ ಹಾಲನ್ನು ಕುಡಿಯಿಸಿದಂತಾಯಿತು''. ಈ ಮಾತುಗಳನ್ನು ಕೇಳಿ ಹಲಧರನಿಗೆ ಕೋಪವುಂಟಾಯಿತು. ಆದರೂ ದೂತನನ್ನು ಹೊಡೆಯಬಾರದೆಂದು ಅವನು ಸುಮ್ಮನಾದನು. ಆ ದೂತನು ಬಾಯಿಗೆ ಬಂದಂತೆ ಗಳಹಲು, ಅಲ್ಲಿದ್ದ ರಾಜರೆಲ್ಲರೂ ವೀರಾವೇಶದಿಂದ ಕೂಡಿದವರಾಗಿ, ಸಮರಸನ್ನದ್ಧರಾದರು. ಜ್ವಲನಜಟಿಯ ಸಹಾಯದಿಂದ ಜನಾರ್ಧನನು ಅವಲೋಕಿನೀ ಮೊದಲಾದ ವಿದ್ಯೆಗಳನ್ನು ಸಾಧಿಸಿ, ಕೀರ್ತಿಭಾಜನನಾದನು.

ಅಷ್ಟಮಾಶ್ವಾಸಂ.

ಅಷ್ಟಮಾಶ್ವಾಸದ ಆದಿಯಲ್ಲಿ ಯುದ್ಧಪ್ರಯಾಣದ ವರ್ಣನೆಯಿದೆ. ಪದ್ಯ ೨೨ರಿಂದ ೨೬ರ ವರೆಗೆ ಸೂರ್ಯಾಸ್ತ ವರ್ಣನೆಯೂ, ೨೭ರಿಂದ ೩೦ರ ವರೆಗೆ ರಾತ್ರಿಯ ವರ್ಣನೆಯೂ, ೩೧ರಿಂದ ೩೬ರ ವರೆಗೆ ಚಂದ್ರೋದಯ, ಕೌಮುದಿ, ಚಂದ್ರಾಸ್ತಗಳ ವರ್ಣನೆಗಳೂ, ೩೭ರಲ್ಲಿ ಸೂರ್ಯೋದಯದ ವರ್ಣನೆಯೂ ಇವೆ. ಪದ್ಯ ೬೨ರ ವರೆಗೆ ಯುದ್ಧವರ್ಣನೆಯೂ, ೬೮ರ ವರೆಗೆ ದಿಗ್ವಿಜಯ ವರ್ಣನೆಯೂ ಇವೆ. ಬಳಿಕ, ಮುಕುಂದನು ಮಾವನಿಗೂ, ಇತರ ರಾಜರಿಗೂ ಯಥೋಚಿತವಾಗಿ ಉಡುಗೊರೆಗಳನ್ನು ಕೊಟ್ಟು, ಅವರನ್ನು ಅವರವರ ರಾಜ್ಯಕ್ಕೆ ಕಳುಹಿಸಿಕೊಟ್ಟ ವೃತ್ತಾಂತವಿದೆ. ಮುಕುಂದನ ರಾಜ್ಯದಲ್ಲಿ ಕಾಲಕಾಲಕ್ಕೆ ಮಳೆಬಂದು, ಬೆಳೆಬೆಳೆದು, ಜನರೆಲ್ಲರೂ ಸುಖಸಂತೋಷ ದಲ್ಲಿದ್ದರು. ಜನಾರ್ಧನನು—

'ಸುರನಗದಂತೆ ಸುಸ್ಥಿರತೆಯಂ ಗಗನಾಂಗಣದಂತೆ ಕಾವ್ಯಗೋ ।
ಚರತೆಯ-ನಿಂದ್ರನಂತೆ ಸುಮನೋರಮಣತ್ವಮನಬ್ಧಿಯಂತೆ ನಿ ॥
ರ್ಭರ ನಿಜಜೀವನತ್ವಮನಹರ್ಪತಿಯಂತೆ ತತಪ್ರತಾಪ ಭಾ ।
ಸುರತೆಯನಾಂತನಾ ನೆಗಟ್ದ ಚಕ್ರಧರಂ ವಸುಧೈಕಬಾಂಧವಂ' ॥

ನವಮಾಶ್ವಾಸಂ.

ಹೀಗಿರಲು, ಒಂದು ದಿವಸ, ಜ್ವಲನಜಟಿ ಮಹಾರಾಜನು ಚಾರಣ ಮುನಿಗಳಿಂದ ಸಂಸಾರಾಸಾರತೆಯನ್ನು ಸವಿಸ್ತರವಾಗಿ ತಿಳಿದು, ವೈರಾಗ್ಯವನ್ನು ತಾಳಿ, ತನ್ನ ರಾಜ್ಯವನ್ನು ಮಗನಾದ ಅರ್ಕಕೀರ್ತಿಗೊಪ್ಪಿಸಿ, ತಾನು ದೀಕ್ಷೆಗೊಂಡನು. ಈ ವರ್ತಮಾನವನ್ನು ಕೇಳಿ ಪ್ರಜಾಪತಿ ಮಹಾರಾಜನೂ ನಿರ್ವೇಗವನ್ನು ಹೊಂದಿ, ಮಕ್ಕಳನ್ನು ಒಡಂಬಡಿಸಿ, ತಪ

ಸ್ಸಿಗೆ ಹೊರಟುಹೋದನು. ಬಳಭದ್ರನು ರಾಜ್ಯಾಧಿಪತ್ಯದಲ್ಲಿಯೂ, ವಾಸುದೇವನು ಚಕ್ರಧರ ಪದವಿಯಲ್ಲಿಯೂ ನೆಲಸಿ, ಸುಖದಿಂದರಸುಗೆಯ್ಯುತ್ತಿದ್ದರು. ಮುಕುಂದ ನಿಗೆ ಸ್ವಯಂಪ್ರಭೆಯಲ್ಲಿ ಶ್ರೀವಿಜಯನೆಂಬ ಮಗನೂ, ಜ್ಯೋತಿಃಪ್ರಭೆಯೆಂಬ ಮಗಳೂ ಹುಟ್ಟಿದರು. ಆ ಜ್ಯೋತಿಃಪ್ರಭೆಯು ಬಳೆದು ದೊಡ್ಡವಳಾಗಿ, ಮದನನ ಮದದಾನೆ ಯಂತೆ ನಡೆಯುತ್ತ, ಒಂದು ದಿನ, ತಂದೆಯ ಓಲಗಕ್ಕೆ ಬಂದಳು. ಪಾದಕ್ಕೆರಗಿದ ಸುತೆ ಯನ್ನು ಬರಸೆಳೆದು ಅಪ್ಪಿಕೊಂಡು, ಮುಂಗುರುಳನ್ನು ತಿದ್ದುತ್ತ, ಅತ್ಯಂತ ಪ್ರೀತಿ ಯಿಂದ ಕೂಡಿದವನಾಗಿ, ಮುಕುಂದನು ಆಕೆಯು ಬಂದ ಕಾರಣವನ್ನು ವಿಚಾರಿಸಿದನು. ಈ ಮಾತನ್ನು ಕೇಳಿ, ಲಜ್ಜೆಯಿಂದ ಅವಳು ತಲೆಯನ್ನು ತಗ್ಗಿಸಿಕೊಂಡು, ಯಾವ ಮಾತನ್ನೂ ಆಡದಿದ್ದಳು. ಆಗ ಅವಳ ಸಖಿಯಾದ ಸಮಯಗತಿಯೆಂಬವಳು ಆಕೆಯ ಮನೋ ಭಾವವನ್ನು ಪ್ರಕಾರಾಂತರದಿಂದ ಸೂಚಿಸಿದಳು. ಅದರಿಂದ ರಾಜನು ತನ್ನ ಕರ್ತವ್ಯ ವನ್ನು ತಿಳಿದು, ಮಗಳ ಮದುವೆಯ ವಿಚಾರವನ್ನು ಮಾಡತೊಡಗಿದನು. ಅವಳಿಗೆ ಅನು ರೂಪನಾದ ವರನನ್ನು ಹುಡುಕಿಕೊಂಡು ಬರಬೇಕೆಂದು ಹೇಳಿದ ಮುಕುಂದನ ಮಾತನ್ನು ಕೇಳಿ, ಸಕಲ ಕುಲವೃದ್ಧ ಪಾರ್ಥಿವರು, ರೂಪದಲ್ಲಿಯೂ, ಗುಣದಲ್ಲಿಯೂ, ಕುಲದಲ್ಲಿ ಯೂ, ಸಂಪತ್ತಿನಲ್ಲಿಯೂ ಆಕೆಗೆ ಅನುರೂಪನಾದ ವರನು ತಮಗೆ ತಿಳಿದಂತೆ ಯಾರೂ ಇಲ್ಲವೆಂದು ಹೇಳಿದರು. ಆಗ ಬಲಭದ್ರನು ಆಕೆಯ ಸ್ವಯಂವರವನ್ನು ಏರ್ಪಡಿಸಿ, ಅವಳು ತಾನಾಗಿಯೇ ಯೋಗ್ಯನಾದ ವರನನ್ನು ಆರಿಸುವಂತೆ ಮಾಡಬೇಕೆಂದು ಹೇಳಿ, ಹರಿಯ ನ್ನದಕ್ಕೆ ಒಡಂಬಡಿಸಿದನು. ಬಳಿಕ, ಸ್ವಯಂವರಕ್ಕೆ ಬೇಕಾದ ಸನ್ನಾಹಗಳನ್ನು ಮಾಡಿ ದರು. ಎಲ್ಲಾ ದೇಶದ ರಾಜರೂ ಬಂದು ಸೇರಿದರು. ಆ ಕನ್ಯೆಯು ನೆರೆದರಸುಗಳ ನಡುವೆ ಬಂದು, ತನ್ನ ಕೈಯ್ಯಲ್ಲಿದ್ದ ಮಾಲೆಯನ್ನು ಅರ್ಕಕೀರ್ತಿಯ ಮಗನಾದ ಅಮಿತ ತೇಜನ ಕೊರಳಲ್ಲಿ ಹಾಕಿದಳು. ಆ ಮೇಲೆ ಅವರೊಳಗೆ ವಿಧಿಯುಕ್ತವಾಗಿ ವಿವಾಹ ವಾಯಿತು. ಅರ್ಕಕೀರ್ತಿಯು ತನ್ನ ಮಗಳಾದ ಸುತಾರೆಯನ್ನು ಜನಾರ್ಧನನ ಮಗ ನಾದ ಶ್ರೀವಿಜಯನಿಗೆ ಕೊಟ್ಟು, ಈ ಸಂಬಂಧವನ್ನು ದ್ವಿಗುಣಿಸಿದನು. ಕೆಲವು ದಿನಗಳ ಮೇಲೆ ಅರ್ಕಕೀರ್ತಿಯು ಮಗನಾದ ಅಮಿತತೇಜನನ್ನೂ ಸೊಸೆಯಾದ ಜ್ಯೋತಿಃ ಪ್ರಭೆಯನ್ನೂ ಕೂಡಿಕೊಂಡು, ನಿಜನಗರಿಗೆ ನಡೆದನು. ಹಲವು ವರ್ಷಗಳ ವರೆಗೆ ಜನಾರ್ಧನನೂ ಸ್ವಯಂಪ್ರಭೆಯೂ ಸುಖದಿಂದ ಕಾಲಕಳೆದರು. ಒಂದು ದಿವಸ ಅಂತಃ ಪುರದಲ್ಲಿ ಸ್ತ್ರೀಜನದ ಆರ್ತಾಲಾಪವು ಕೇಳಿಸಿತು. ಅದೇನೆಂದು ವಿಚಾರಿಸಲು ಹೋದ ಬಲರಾಮನ ದೃಷ್ಟಿಗೆ ಕೆಡೆದಿದ್ದ ತಮ್ಮನ ಕಳೇವರವು ಕಾಣಿಸಿತು. ಅದನ್ನು ನೋಡಿ ಬಲರಾಮನು ಬಹಳವಾಗಿ ಮರುಗಿದನು. ಅವನಿಗೆ ಸಂಸಾರದ ಅನಿತ್ಯತೆಯನ್ನೂ, ಅಸಾ ರತೆಯನ್ನೂ ತಿಳಿಸಿ, ಪುರೋಹಿತ ಪ್ರಧಾನಾದಿಗಳು ಅವನನ್ನು ಸಮಾಧಾನಪಡಿಸಿದರು. ಬಳಿಕ ಅವನೇ ಬಂಧುಜನಗಳನ್ನು ಸಂತೈಸಿ, ತಮ್ಮನ ತನುಸಂಸ್ಕಾರ ವಿಧಾನವನ್ನು ನೆರ ವೇರಿಸಿ, ಶ್ರೀವಿಜಯನಿಗೆ ರಾಜ್ಯಭಾರವನ್ನು ಕೊಟ್ಟು, ಕೀರ್ತಿಯನ್ನು ಪಡೆದನು.

ದಶಮಾಶ್ವಾಸಂ.

ಬಲದೇವನು ಪಿಹಿತಾಶ್ರವ ಯತೀಶ್ವರನಿಂದ ಜಿನದೀಕ್ಷೆಯನ್ನು ಪಡೆದು, ದೇಹ ತ್ಯಾಗವನ್ನು ಮಾಡಿ, ಅಷ್ಟಮ ಭೂತಳಕ್ಕಡರಿದನು. ತ್ರಿಪೃಷ್ಟನು, ಧರ್ಮಗುಣ ಪರಿ

ಚ್ಯುತಿಯಿಂದ, ಏಳನೆಯ ನರಕಬಿಲದಲ್ಲಿ ಬಿದ್ದು, ನಾನಾವಿಧ ದುಸ್ಸಹವಾದ ಮಹಾ ದುಃಖವನ್ನನುಭವಿಸಿ, ಜೀವಿತಾವಸಾನದಲ್ಲಿ ಈ ಭರತ ಭೂತಳದ ಸಿಂಹಗಿರಿ ಕಂದರದಲ್ಲಿ ಸಿಂಹಾಕೃತಿಯಿಂದ ಉದಯಿಸಿದನು; ಆ ಸಿಂಹವು—

ಜವನೆ ಮೃಗವೈರಿಯಾದಂ ।
ತೆವೊಲೆಱಗುವ ಸಿಡಿಲೆ ಸಿಂಗಮಾದಂತೆವೊಲೆ ॥
ತುತ್ತವ ಮಿಱುತ್ತವೆ ಹರಿಯಾದಂ ।
ತೆವೊಲಾಂತುದು ವಿವಿಧವಧವಿನೋದಾದ್ಭುತಮುಂ ॥

ಹೀಗೆ ಭಯಂಕರವಾದ ಹಿಂಸಾವೃತ್ತಿಯಿಂದ ಮಡಿದ ಸಿಂಹವು, ಪ್ರಥಮ ನರಕ ಭೂಮಿಯಲ್ಲಿ ಹುಟ್ಟಿ, ಅಪಾರ ದುಃಖವನ್ನನುಭವಿಸಿ, ಆಯುರವಸಾನದಲ್ಲಿ ತಿರುಗಿ ಭರತಭೂಮಿಯ ವರಾಹಗಿರೀಂದ್ರದ ಕಂದರದಲ್ಲಿ ಮೃಗರಾಜನಾಗಿ ಹುಟ್ಟಿತು. ಹಲವು ಕಾಲ, ಅದು ಹಿಂಸಾನಂದ ವೃತ್ತಿಯಿಂದ ಕಾಲವನ್ನು ಕಳೆದು, ಬಳಿಕ ಒಂದು ದಿನ ಅರಿಂಜಯ ಅಮಿತಗುಣರೆಂಬ ಚಾರಣರಿಂದ ತನ್ನ ಹಿಂದಿನ ಜನ್ಮ ವೃತ್ತಾಂತಗಳನ್ನು ತಿಳಿದುಕೊಂಡಿತು.

ಜಂಬೂದ್ವೀಪದ ಭರತಖಂಡದ ಪೂರ್ವವಿದೇಹದ ಸೀತಾನದಿಯ ಬಡಗಣ ದೆಸೆಯ ಪುಷ್ಕರಾವತೀ ವಿಷಯದಲ್ಲಿ ಮಧುಕರವೆಂಬ ಕಾನನವು ಸೊಗಯಿಸುತ್ತಿತ್ತು. ಅಲ್ಲಿ ಆ ಸಿಂಹವು ಹಿಂದಣ ಭವದಲ್ಲಿ ವನೇಚರಾನ್ವಯದಲ್ಲಿ ಪುರೂರವನೆಂಬ ಹೆಸರಿಂದ ಹುಟ್ಟಿ, ಅತಿ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದಿತು. ಒಮ್ಮೆ ಅಲ್ಲಿಗೆ ಪುಂಡರೀಕಿಣೀ ಪುರದಿಂದ ಧರ್ಮಸ್ವಾಮಿಯೆಂಬವನು ಬಂದು ಬೀಡುಬಿಟ್ಟನು. ಅಲ್ಲಿಯ ವನಚರರು ಆ ಬೀಡನ್ನು ಹಾಳುಗೆಡಹಿದರು. ಸಾಗರಸೇನರೆಂಬ ಮುನೀಂದ್ರರು ಆ ಮಾರ್ಗವಾಗಿ ಬರುತ್ತಿದ್ದು, ಮಾರ್ಗ ತಪ್ಪಿದವರಾಗಿ, ತೊಳಲಾಡುತ್ತಿದ್ದರು. ಅವರನ್ನು ದೂರದಿಂದಲೇ ಕಂಡು ಪುರೂರವನು ಅದೊಂದು ಅಪೂರ್ವ ಮೃಗವೆಂಬುದಾಗಿ ಭಾವಿಸಿ, ಅದನ್ನು ಹೊಡೆಯುವುದಕ್ಕೆ ಬಾಣವನ್ನು ಹೆದೆಗೆ ಜೋಡಿಸಿದನು. ಆಗ ಅವನ ಹೆಂಡತಿ ಕಾಳಿಯೆಂಬವಳು ಆತನನ್ನು ತಡೆದು, ಇದುರಿಗೆ ಬರುತ್ತಿರುವುದು ಮೃಗವಾಗಿರಲಾರದೆಂದೂ, ಅದನ್ನು ಪರೀಕ್ಷಿಸಿ ನೋಡಬೇಕೆಂದೂ ಹೇಳಿದಳು. ಅಷ್ಟರಲ್ಲಿ ಮುನಿಯು ಸಮೀಪಗತನಾದನು. ಆತನನ್ನು ಕಂಡು ವನೇಚರನು ತನ್ನ ತೀವ್ರಾಚಾರವನ್ನು ಬಿಟ್ಟು, ಆ ಯತಿಪತಿಗೆ ನಮಸ್ಕರಿಸಿದನು. ವಿನಯದಿಂದೆರಗಿದ ಪುರೂರವನನ್ನು ಧರ್ಮವೃದ್ಧಿಪುರಸ್ಸರವಾಗಿ ಮುನೀಶ್ವರನು ಅನುಗ್ರಹಿಸಿ, ಬಳಿಕ ವ್ರತಗಳ ಫಲಸ್ವರೂಪವನ್ನು ಆತನು ತಿಳಿಯುವ ಹಾಗೆ ವಿವರಿಸಿದನು. ಅದನ್ನು ಕೇಳಿದ ಪುರೂರವನು ಮದ್ಯಮಾಂಸ ಮಧು ವಿರತಿವ್ರತವನ್ನು ಸ್ವೀಕರಿಸಿ, ನಿವೃತ್ತಿಮಾತ್ರ ಫಲದಿಂದ ಆಯುರವಸಾನದಲ್ಲಿ ಸೌಧರ್ಮಾಮರ ಕಲ್ಪದಲ್ಲಿ ಸುರನಾಗಿ ಹುಟ್ಟಿದನು. ಅಲ್ಲಿ ಹಲವು ಕಾಲ ಸುಖವನ್ನನುಭವಿಸಿ, ಆಯುಷ್ಯಾಂತದಲ್ಲಿ ಆತನು ಈ ಭರತಭೂಮಿಯಲ್ಲಿ ಬಂದು ಜನಿಸಿದನು. ವೃಷಭೇಂ

ದ್ರನ ಅಗ್ರತನುಜಾತನೂ, ಮನುವಂಶಲಲಾಮನೂ, ಪ್ರಥಮ ಚಕ್ರವರ್ತಿಯೂ ಆದ ಭರತೇಶ್ವರನಿಗೂ ಆತನ ರಾಣಿಯಾದ ಅನಂತಸೇನೆಗೂ ಈತನು ಮರೀಚಿಯೆಂಬ ಮಗನಾದನು. ಶಸ್ತ್ರದಲ್ಲಿಯೂ, ಶಾಸ್ತ್ರದಲ್ಲಿಯೂ ಈತನು ಬಹಳ ಪ್ರವೀಣನೆನಿಸಿದನು. ಪುರುಷೋತ್ತಮನಾದ ವೃಷಭೇಶ್ವರನು ದೀಕ್ಷೆಯನ್ನು ಧರಿಸಲು, ಕಚ್ಛಮಹಾಕಚ್ಛಾದಿ ನೃಪಕುಮಾರರು ಆ ವೃಷಭಸ್ವಾಮಿಯನ್ನು ಮೆಚ್ಚಿಸುವುದಕ್ಕಾಗಿ ತಾವೂ ವ್ರತವನ್ನು ಕೈಕೊಂಡರು. ಅವರ ಜೊತೆಯಲ್ಲಿ ಮರೀಚಿಯೂ ತಪಸ್ಸನ್ನಾರಂಭಿಸಿದನು. ಆ ತಾಪಸಕುಮಾರರು ನಾಭಿನಂದನನ ನಿಯಮದವಸಾನವನ್ನು ನಿರೀಕ್ಷಿಸುತ್ತಿದ್ದು, ಅದು ತೀರುವುದನ್ನು ಕಾಣದೆ ಬೇಸತ್ತು, ಕ್ಷುತ್ಪಿಪಾಸೆಗಳಿಂದ ಪೀಡಿತರಾಗಿ, ಸೈರಿಸಲಾರದೆ, ವ್ರತಭಂಗವನ್ನು ಮಾಡಿದರು.

ತಗುಳೆ ತೃಷೆ ನೀರ್ಗೆ ಮಡುವಂ ।
ಪುಗುವರ್ವಿಸೆ ಪಸಿವು ಪಣ್ಗೆ ಮರನೇಱುವ ಚೇ ॥
ಷ್ಟೆಗಳಿಂ ಪ್ರಕಟಿಸಿದರವರ್ ।
ಮಿಗೆ ಮುಂ ಬೆಂಕೊಂಡ ಕರ್ಮವೈರಿಯ ಭಯಮಂ ॥

ಯುಕ್ತಾಯುಕ್ತ ವಿಚಾರಮಾಡದೆ ಅವರೆಲ್ಲರೂ ವೇಷಾಂತರದಿಂದ ಎಲ್ಲೆಲ್ಲಿಗೋ ಹೊರಟುಹೋದರು. ಹೀಗಿರಲು, ಮರೀಚಿಯು ಅದೃಢಮನನಾಗಿ, ವ್ರತವನ್ನು ತ್ಯಜಿಸಿ, ಕೌಪೀನದಂಡ ಮೌಂಜೀ ಶಿಖಾದಿ ವೇಷವನ್ನು ಧರಿಸಿ, ಹಲವು ದೇಶಗಳಲ್ಲಿ ಸಂಚಾರವನ್ನು ಮಾಡುತ್ತ, ವೃಷಭೇಶ್ವರನ ಕೇವಲಜ್ಞಾನೋತ್ಪತ್ತಿಯ ಸಮಯದಲ್ಲಿ ಸಮವಸರಣಕ್ಕೆ ಬಂದು, ಉಚಿತ ಸ್ಥಾನದಲ್ಲಿ ಕುಳ್ಳಿರಲು, ಸಮಯೋಚಿತವಾಗಿ ಭರತ ಮಹೀಶ್ವರನು ಗಣಧರ ಸ್ವಾಮಿಗಳನ್ನು ಕುರಿತು 'ಈ ನೆರೆದ ಸಭೆಯಲ್ಲಿ ಪುರುಸ್ವಾಮಿಯಂತೆ ತೀರ್ಥಂಕರರಾಗತಕ್ಕವರಿರುವರೇ?' ಎಂದು ಕೇಳಲು, ಆ ಮುನಿಪತಿಯು "ನಿನ್ನ ಮಗನಾದ ಈ ಮರೀಚಿಯು ಬಹುವಿಧ ಭವಗಳನ್ನು ಕಳೆದು, ಅಖಿಳ ಕರ್ಮಪಂಕವನ್ನು ತೊಳೆದು, ಕಡೆಯ ತೀರ್ಥಕರನಾಗುವನು" ಎಂದು ಹೇಳಿದನು. ಇದನ್ನು ಕೇಳಿದ ಮರೀಚಿಯ ಸಂತೋಷಕ್ಕೆ ಪಾರವೇ ಇರಲಿಲ್ಲ. ದುರ್ವಾರವಾದ ಸಂಸಾರ ಸಾಗರವನ್ನು ಅಂದೇ ದಾಟಿದವನಂತೆ ಮನೋಬಲವನ್ನು ಪಡೆದನು. ಸಕಲ ಶಾಸ್ತ್ರವನ್ನೂ ಹೇಳಿ, ಲೋಕಕ್ಕೆ ತಿಳಿಯಪಡಿಸಿ, ತನ್ನ ಪಿತಾಮಹನಂತೆ ತಾನೂ ಜಗದೀಶ್ವರನಾಗಬೇಕೆಂದು ಬಗೆದನು. ಆದರೇನು? ಕರ್ಮಬಲದಿಂದಾಗಿ ಅವನಿಗೆ ಆ ಗಣಧರಸ್ವಾಮಿಯ ಸಮಕ್ಷಮದಲ್ಲುದಿಸಿದ ಜ್ಞಾನವೂ ನಾಶವಾಯಿತು. ಬಳಿಕ ಅವನು ಸಾಂಖ್ಯವೆಂಬ ತರ್ಕಸೂತ್ರವನ್ನು, ಬರೆದು ಕಪಿಳಾದಿ ಶಿಷ್ಯರ್ಗುಪದೇಶಿಸಿ, ಪರಿವ್ರಾಜಕ ವೇಷದಿಂದ ಎಲ್ಲಾ ದೇಶಗಳನ್ನು ಸಂಚರಿಸಿ, ಆಯುರವಸಾನದಲ್ಲಿ ಬಾಹ್ಯನಿವೃತ್ತಿ ಸುಕೃತಫಲದಿಂದ ಬ್ರಹ್ಮಕಲ್ಪದಲ್ಲಿ ಜನಿಸಿ, ಸುರಲೋಕಸುಖವನ್ನನುಭವಿಸಿದನು. ಮತ್ತೆ ಈ ಭರತಭೂಮಿಯ ಅಯೋಧ್ಯೆಯಲ್ಲಿ ಕಪಿಳನಿಗೂ ಆತನ ಹೆಂಡತಿ ಕಾಪಿಲ್ಯೆಗೂ ಜಟಿಳನೆಂಬ ಮಗನಾಗಿ ಹುಟ್ಟಿ, ಪೂರ್ವಭವವಾಸನೆಯಿಂದ ಶೈಶವದಲ್ಲಿಯೇ ಪರಿವ್ರಾಜಕನಾಗಿ, ಜೀವಿತಾವಸಾನದಲ್ಲಿ ಪ್ರಥಮ ಕಲ್ಪದಲ್ಲಿ ಹುಟ್ಟಿ, ಅಲ್ಲಿಯ ಅನಲ್ಪ ಸುಖವನ್ನನುಭವಿಸಿ, ಸತ್ತು ತಿರುಗಿ

ಈ ಭೂಮಿಯಲ್ಲಿ ಹುಟ್ಟಿದನು. ಈ ಜನ್ಮದಲ್ಲಿ ಆತನು ಸ್ಥೂಣಾಗಾರವೆಂಬ ಪುರದಲ್ಲಿ ಭಾರಧ್ವಾಜನೆಂಬ ಬ್ರಾಹ್ಮಣನಿಗೂ ಆತನ ಹೆಂಡತಿಯಾದ ಪುಷ್ಪದಂತೆಗೂ ಪುಷ್ಪಮಿತ್ರನೆಂಬ ಮಗನಾಗಿ ಹುಟ್ಟಿ, ಜನ್ಮಾಂತರ ವಾಸನೆಯಿಂದ, ಉಪನಯನವಾದ ಮೇಲೆ ಪರಿವ್ರಾಜಕದಿ ಕ್ಷಿತನಾಗಿದ್ದು, ಆಯುರವಸಾನದಲ್ಲಿ ಮತ್ತೆ ಮೊದಲ ಕಲ್ಪದಲ್ಲಿ ಹುಟ್ಟಿ, ಅಲ್ಲಿಯ ಜನ್ಮ ತೀರಿದ ಬಳಿಕ, ಪುನಃ ಭರತಭೂತಳದ ಶ್ವೇತಕಪುರದಲ್ಲಿ ಅಗ್ನಿಭೂತಿಗೂ, ಗೌತಮಿಗೂ ಅಗ್ನಿಸಖನೆಂಬ ಮಗನಾಗಿ ಹುಟ್ಟಿದನು. ಈ ಜನ್ಮದಲ್ಲಿ ಆತನು ವೇದಶಾಸ್ತ್ರಪುರಾಣಾದಿಗಳನ್ನು ಚೆನ್ನಾಗಿ ತಿಳಿದು, ವೈರಾಗ್ಯದಿಂದ ಮಸ್ಕರಿತಪಸ್ಸನ್ನು ಮಾಡಿ, ಪ್ರಾಣತ್ಯಾಗ ಮಾಡಿದನು. ಮುಂದಿನ ಜನ್ಮದಲ್ಲಿ ಆತನು ಸನತ್ಕುಮಾರ ಕಲ್ಪದಲ್ಲಿ ಹುಟ್ಟಿ ಯಥೇಷ್ಟ ಸುಖವನ್ನನುಭವಿಸಿ, ಆಯುರವಸಾನದಲ್ಲಿ ತಿರುಗಿ ಭರತಭೂಮಿಯ ಮಂದಿರಪುರದಲ್ಲಿ ಗೌತಮನಿಗೂ ಆತನ ಧರ್ಮಪತ್ನಿ ಕೌಶಿಕೆಗೂ ಅಗ್ನಿಮಿತ್ರನೆಂಬ ಮಗನಾದನು. ಹಿಂದಿನಂತೆಯೇ, ಈ ಜನ್ಮದಲ್ಲಿಯೂ ಆತನು ಪರಿವ್ರಾಜಕತ್ವವನ್ನು ಕೈಕೊಂಡು, ನಿಜಾಯುವನ್ನು ಕಳೆದು, ಬಳಿಕ ಮಾಹೇಂದ್ರಕಲ್ಪದಲ್ಲಿ ಸುರನಾಗಿ ಹುಟ್ಟಿ, ಅಲ್ಲಿ ಅತುಳವಾದ ಸುಖವನ್ನನುಭವಿಸಿ, ಅಲ್ಲಿಯ ಆಯುಷ್ಯವು ಮುಗಿದ ಬಳಿಕ, ಮತ್ತೆ ಮಂದಿರಪುರದಲ್ಲಿ ಶಾಲಂಕಾಯನನೆಂಬ ಪಾರ್ವನಿಗೂ ಆತನ ಪತ್ನಿಯಾದ ಮಂದಿರೆಗೂ ಭಾರದ್ವಾಜನೆಂಬ ತನೂಜನಾಗಿ ಜನಿಸಿದನು. ಆ ಜನ್ಮದಲ್ಲಿ ಆತನು ಸಕಲ ಶ್ರುತಿಸ್ಮೃತಿಪುರಾಣಗಳನ್ನೂ ಅರಿತು, ಪರಿವ್ರಾಜಕನಾಗಿ ನಿಧನಹೊಂದಿ, ಮತ್ತಿನ ಜನ್ಮದಲ್ಲಿ ಪುನಃ ಮಾಹೇಂದ್ರ ಕಲ್ಪದಲ್ಲಿ ಹುಟ್ಟಿದನು. ಅಲ್ಲಿ ದಿವ್ಯಸುಖವನ್ನು ಹಲವು ಕಾಲದ ವರೆಗೆ ಅನುಭವಿಸಿ, ಅಂತ್ಯ ಕಾಲವು ಸಮೀಪಿಸಲು, ಅಲ್ಲಿಯ ಸುಖೋಪಭೋಗವನ್ನು ತ್ಯಜಿಸಬೇಕಾಗಿ ಬಂದುದರಿಂದ ಬಹಳವಾಗಿ ಚಿಂತಿಸಿದನು. ಆದರೂ ಕೃತಾಂತನ ದವಡೆಗೆ ಆಹುತಿಯಾಗುವುದನ್ನು ತಪ್ಪಿಸಿಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ. ಭೂವಳಯದಲ್ಲಿ ಕುಮಾರ್ಗವನ್ನು ಹಿಡಿದು ನಡೆದುದರಿಂದಾಗಿ ಅವನು ಬಹಳ ಕಾಲದ ವರೆಗೆ ಸ್ಥಾವರಯೋನಿಯಲ್ಲಿ ನವೆಯಬೇಕಾಯಿತು. ಬಳಿಕ ರಾಜಗೃಹವೆಂಬ ಪುರದಲ್ಲಿ ಶಾಂಡಿಲ್ಯನೆಂಬ ಬ್ರಾಹ್ಮಣನಿಗೂ ಆತನ ಹೆಂಡತಿ ಪಾರಾಶರಿಯೆಂಬವಳಿಗೂ ಸ್ಥಾವರನೆಂಬ ಹೆಸರಿನ ಮಗನಾಗಿ ಹುಟ್ಟಿದನು. ಆ ಜನ್ಮದಲ್ಲಿ ಆತನು ಭಿಕ್ಷುಪ್ರಧಾನವೃತ್ತಿಯನ್ನಾಂತು ಮರಣವನ್ನು ಹೊಂದಿದನು. ತಿರುಗಿ ಮಾಹೇಂದ್ರಕಲ್ಪದಲ್ಲಿ ಸುರನಾಗಿ ಜನಿಸಿ, ದಿವ್ಯಸುಖವನ್ನನುಭವಿಸಿ, ಕೊನೆಗೆ ಪರಿತ್ಯಕ್ತ ಸುರಶರೀರನಾಗಿ, ಮಗಧದೇಶದ ರಾಜಗೃಹದ ಪ್ರಭುವಾದ ವಿಶ್ವಭೂತಿಗೆ ಜೈನೆಯೆಂಬ ರಾಣಿಯಲ್ಲಿ ವಿಶ್ವನಂದಿಯೆಂಬ ಮಗನಾಗಿ ಹುಟ್ಟಿದನು. ಆ ವಿಶ್ವನಂದಿಯು ಪಾವನಕರವಾದ ಜಿನದೀಕ್ಷೆಯನ್ನು ತಳೆದು, ಶರೀರತ್ಯಾಗವನ್ನು ಮಾಡಿ, ಶತಾರಕಲ್ಪದಲ್ಲಿ ಸುರವರನಾಗಿ ಹುಟ್ಟಿದನು. ಅಲ್ಲಿ ಅವನು ದಿವ್ಯಕಾಂತಾಕದಂಬದೊಡನೆ ದಿವ್ಯ ಸುಖವನ್ನು ಆಯುರವಸಾನದ ವರೆಗೆ ಅನುಭವಿಸಿ, ಸುರಮ್ಯವಿಷಯದ ಪೌದನಪುರದಲ್ಲಿ ಅರಸುಗೈಯ್ಯುತ್ತಿದ್ದ ಪ್ರಜಾಪತಿ ಮಹಾರಾಜನಿಗೂ ಆತನ ರಾಣಿ ಮೃಗಾವತೀದೇವಿಗೂ ತ್ರಿಪೃಷ್ಟನೆಂಬ ಮಗನಾದನು. ಆತನೇ ಮೊದಲನೆಯ ವಾಸುದೇವನಾದ ನೀನು! ಈ ಜನ್ಮದಲ್ಲಿ ನೀನು ಬಹಳ ಪ್ರಸಿದ್ಧಿಯನ್ನು ಪಡೆದು,

ನಿನ್ನ ವಲ್ಲಭೆಗೆ ಆಶೆಪಟ್ಟು ದಂಡೆತ್ತಿ ಬಂದ, ವಿಶಾಖನಂದಿಚರನೂ, ವಿಧ್ಯಾಧರ ಚಕ್ರವರ್ತಿಯೂ ಆದ ಅಶ್ವಗ್ರೀವನೆಂಬ ಪ್ರತಿವಾಸುದೇವನನ್ನು ಕೊಂದು—

ಆಳವಟ್ಟ ಪಿರಿಯ ಸಿರಿ ನ ।
ಲ್ಲಳ ನಡೆವಳಿಯೊಳ್ಸು ದೇಹದ ರುಜುತೆ ಮುದಮಂ ॥
ಬಳಯಿಪ ಸದ್ಗೋಷ್ಠಿಮನಂ ।
ಗೊಳುತಿರೆ ಪಲಕಾಲಮರಸುಗೆಯ್ಯುತ್ತಿರ್ದೈ ॥

ಒಂದು ದಿನ, ನೀನೂ ನಿನ್ನ ರಾಣಿಯೂ ಸಂಭೋಗದ ಪರಮಾನಂದ ಸುಖವನ್ನು ಪಡೆದು, ನಿನ್ನ ಹೆಂಡತಿಯ ಮುಖಾರವಿಂದವನ್ನು ನೀನು ಪ್ರೀತಿಯಿಂದ ನೋಡುತ್ತ, ಆಕೆಯನ್ನು ಬಯಸಿ ಬಂದ ಕಾಮಾಂಧನಾದ ಅಶ್ವಗ್ರೀವನ ದುರಾಚಾರವನ್ನು ನೆನೆದು, ಕ್ರೋಧವನ್ನು ತಾಳಿದೆ. ಮಾತ್ರವಲ್ಲದೆ, ಆತನನ್ನು ವಿಚಾರಣೆಗೆ ಗುರಿಪಡಿಸಿ, ನೀನೂ ನಿನ್ನ ಹೆಂಡತಿಯೂ ಆಸ್ಥಾನದ ನಡುವೆ ಸಿಂಹವಿಷ್ಟರದಲ್ಲಿ ಕುಳಿತುಕೊಂಡು ಆತನನ್ನು ದಂಡಿಸುತ್ತಿರದೆ, ಬೇಗನೆ ಕೊಂದುಬಿಟ್ಟುದಕ್ಕಾಗಿ ಪಶ್ಚಾತ್ತಾಪ ಪಡುತ್ತ, ಶಯ್ಯಾತಳದಲ್ಲಿ ಒರಗಿಕೊಂಡಿದ್ದೆ. ಹೀಗಿರಲು ನಿದ್ರೆಯು ಆವರಿಸಿಕೊಂಡು, ನಿನ್ನನ್ನು ಸಪ್ತಮಾವನಿ ಗಿಳಿಸಿತು. ಆ ನರಕದಿಂದ ಹೇಗಾದರೂ ಹೊರಟು ಬಂದು ನೀನು ಸಿಂಹನಾದೆ. ಬಳಿಕ ಆ ಜನ್ಮದಲ್ಲಿ ನಾನಾ ಮೃಗಗಳನ್ನು ಹಿಂಸಾನಂದದಿಂದ ಕೊಂದು, ಮೊದಲ ನರಕಕ್ಕಿಳಿದೆ. ಅಲ್ಲಿಂದ ಪಾರಾಗಿ ತಿರುಗಿ ಸಿಂಹರೂಪದಲ್ಲಿ ಜನಿಸಿದೆ. ನಾವು ಧರ್ಮಾನುರಾಗದಿಂದ ಕಮಳಾಧರಜಿನಪತಿಯನ್ನು ಕಂಡು, ಬಲಗೊಂಡು, ನಮಸ್ಕರಿಸಿ, ಭಾವಿ ಜಿನನಾಗತಕ್ಕ ಮರೀಚಿಯು ಈಗ ಯಾವ ರೂಪದಲ್ಲಿರುವನೆಂದು ವಿಚಾರಿಸಲು, ನೀನು ಸಿಂಹರೂಪದಲ್ಲಿರುವುದನ್ನು ಅವರು ನಮಗೆ ಹೇಳಿದರು."

ಏಕಾದಶಾಶ್ವಾಸಂ.

ಈ ಆಶ್ವಾಸದ ಆರಂಭದಲ್ಲಿ ನರಕ ವರ್ಣನೆಯಿದೆ. ಇದನ್ನು ಕೇಳಿದ ಸಿಂಹರಾಜನು ತನ್ನ ಅನುಭವಕ್ಕೆ ಬಂದಿದ್ದ ನರಕಯಾತನೆಯನ್ನು ಇದರೊಡನೆ ಹೋಲಿಸಿ ನೋಡಿದನು ಚಾರಣರು ಹೇಳಿದ್ದೂ ತನ್ನ ಅನುಭವಕ್ಕೆ ಬಂದದ್ದೂ ಒಂದೇ ತೆರನಾಗಿದ್ದುದರಿಂದ ಸಿಂಹರಾಜನು ಅತ್ಯಂತ ಆಶ್ಚರ್ಯಪಟ್ಟನು. ಮತ್ತು ಚಾರಣರಿಗೆ ನರಕವೃತ್ತಾಂತವನ್ನು ಉಪದೇಶ ಮಾಡಿದ ಸರ್ವಜ್ಞನಾದ ತೀರ್ಥಂಕರನನ್ನು ಕೊಂಡಾಡಿದನು. ತಾನು ಜನ್ಮಜನ್ಮಾಂತರಗಳಲ್ಲಿ ಮಾಡಿದ ಪಾಪವನ್ನು ನೆನೆನೆನೆದು ಮರುಗಿದನು. ಆಗ ಚಾರಣರು ಆಗಿಹೋದುದನ್ನು ನೆನೆಸಿ ಈ ರೀತಿ ಚಿಂತಿಸಬಾರದೆಂದೂ, ಮುಂದೆ ಸುಖವನ್ನುಂಟು ಮಾಡುವ ಸದ್ಧರ್ಮವನ್ನು ಮನಸ್ಸಿನಲ್ಲಿ ಭಾವಿಸಬೇಕೆಂದೂ ಉಪದೇಶಿಸಿದರು. ಬಳಿಕ ಸಮ್ಯಕ್ತ್ವದ ಮಹತ್ವವನ್ನು ವಿವರಿಸಿದರು; ಮಿಥ್ಯಾತ್ವದ ಪ್ರಭಾವವನ್ನೂ ಜಿನಮತದ ತತ್ವಗಳನ್ನೂ ಚೆನ್ನಾಗಿ ಬೋಧಿಸಿ, ಜಿನಮತವೇ ಸರ್ವಶ್ರೇಷ್ಠವಾದುದೆಂಬುದನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿದರು. ಚಾರಣರ ಸದ್ಬೋಧದಿಂದ ಮೃಗರಾಜನಲ್ಲಿ ಸಮ್ಯಕ್ತ್ವವು ದೊರಕೊಂಡಿತು.

ದ್ವಾದಶಾಶ್ವಾಸಂ.

ಮೃಗರಾಜನು ಚಾರಣ ಮುನಿಗಳನ್ನು ಕಂಡು ತಾನು ಮಾಡಿದ ಪಾಪವು ಹೇಗೆ ಪರಿಹಾರವಾದೀತೆಂದು ಕೇಳಲು, ಆ ಚಾರಣರು ಹೀಗೆನ್ನುವರು:—"ಎಲೈ ಸಿಂಹವೇ, ನಿನಗೆ ಹೆದರಿ ಆನೆಗಳು ಭಯದಿಂದ ಓಡುತ್ತಿರುವುವು. ಆದುದರಿಂದ ಅವುಗಳನ್ನು ನೀನು ನೋಡಲೇ ಬಾರದು. ನಿನ್ನನ್ನು ಮಲೆಯುತ್ತಿರುವ ಇಂದ್ರಿಯ ಗಜದ ದರ್ಪವನ್ನು ಕಿಡಿಸು. ಮನವನ್ನು ಜಿನೇಂದ್ರಪದದಲ್ಲಿಯೂ, ತನುವನ್ನು ಪ್ರಾಯೋಪಗಮನದಲ್ಲಿಯೂ ನಿಯಮಿಸಿ, ನಿನ್ನ ಮುನ್ನಿನ ರೌದ್ರಭಾವವನ್ನು ತೊರೆಯಲು, ಪಾಪಬಂಧವು ನಾಶವಾಗುವುದು. ಭವಹರಣಕ್ಕೆ ಜಿನಸ್ಮರಣವೇ ಸಾಧನವು; ಅದರ ಜೊತೆಗೆ ತಪವು ಸೇರಲು ದುರಿತೇಂಧನವು ಬೇಗನೆ ಉರಿದುಹೋಗುವುದು. ಆದುದರಿಂದ ಜಿನಸ್ಮರಣಪೂರ್ವಕವಾಗಿ ಪ್ರಾಯೋಪಗಮನವೆಂಬ ವ್ರತವನ್ನು ಕೈಕೊಳ್ಳಬೇಕು." ಇದನ್ನು ಕೇಳಿ, ಆ ಸಿಂಹರಾಜನು ಹಾಗೆಯೇ ಮಾಡುವುದಾಗಿ ನಿರ್ಧರಿಸಿದನು. ಅಲ್ಲಿಂದ ಹತ್ತನೆಯ ಭವದಲ್ಲಿ ತೀರ್ಥಕರತ್ವವು ಆ ಸಿಂಹರಾಜನಿಗೆ ದೊರಕೊಳ್ಳುವುದೆಂಬುದಾಗಿ ಚಾರಣರು ಹೇಳಲು, ಮೃಗಪತಿಯು ಅತ್ಯಾನಂದವನ್ನು ಪಡೆದನು. ಆಗ ಅದಕ್ಕೆ ಲಭಿಸಿದ ದರ್ಶನರತ್ನವು ಮಸುಳದೆ ಉಜ್ವಳವಾಗಲೆಂದು ಹರಸಿ, ಚಾರಣರು ಹೊರಟು ಹೋಗಲುದ್ಯುಕ್ತರಾದರು. ಅವರ ಅಗಲಿಕೆಯನ್ನು ಸೈರಿಸಲಾರದೆ ಮೃಗರಾಜನು ಕಣ್ಣೀರನ್ನು ಸುರಿಸಿದನು. ಇದನ್ನು ಕಂಡು ಚಾರಣರು ಅವನ ಸಮೀಪಕ್ಕೆ ಬಂದು ಕಾರುಣ್ಯದಿಂದ ಆತನ ಮಸ್ತಕವನ್ನು ಹಿಡಿದೆತ್ತಿ, ಒಂದೇ ತಿಂಗಳೊಳಗೆ ಆತನಿಗೂ ತಮಗೂ ಪುನರ್ದರ್ಶನವಾಗುವುದೆಂದು ಸಮಾಧಾನಪಡಿಸಿ, ಹೊರಟು ಹೋದರು. ಬಳಿಕ ಆ ಸಿಂಹವು, ಚಾರಣರು ಮಂಡಿಸಿದ್ದ ಬಂಡೆಯ ಮೇಲೆ ಬಿದ್ದುಕೊಂಡು, ಏಕಪಾರ್ಶ್ವ ನಿಯಮಸ್ಥಿತಿಯಿಂದ, ಒಂದು ತಿಂಗಳ ವರೆಗೆ ಕಠಿಣ ತಪಸ್ಸನ್ನಾಚರಿಸಿ, ಪ್ರಾಯೋಪಗಮನದಿಂದ ಜಿನಚರಣವನ್ನು ಧ್ಯಾನಿಸುತ್ತ ಪ್ರಾಣವನ್ನು ಬಿಟ್ಟಿತು. ಮುಂದಿನ ಜನ್ಮದಲ್ಲಿ ದೇವಗತಿಯನ್ನು ಹೊಂದಿ, ಪ್ರಥಮ ಕಲ್ಪದಲ್ಲಿ ಜನಿಸಿತು. ಅಲ್ಲಿ ದೇವಿಯರು ಆ ದೇವನನ್ನು ಓಲಗಿಸುತ್ತಿರಲು, ಪರಿವಾರಾಮರರು ಪರಸುತ್ತಲೂ, ಪೊಡಮಡುತ್ತಲೂ ಇರಲು, ಸುರದುಂದುಭಿಯು ನಭದಲ್ಲಿ ಭೋರ್ಗರೆಯುತ್ತಿರಲು, ಗಾಳಿಯು ಸೌರಭ್ಯಯುಕ್ತವಾಗಿ ಬೀಸುತ್ತಿರಲು, ದಿವ್ಯಾಂಬರ ದಿವ್ಯಭೂಷಣಾದಿಗಳಿಂದ ತನ್ನ ಕೋಮಲಾಂಗವಿಲಾಸವು ಸೊಗಯಿಸುತ್ತಿರಲು, ಇವನ್ನೆಲ್ಲ ಕಂಡು ಆ ದೇವನಿಗೆ ಆಶ್ಚರ್ಯವಾಯಿತು. ಭವಪ್ರತ್ಯಯಜ್ಞಾನದಿಂದ ತಾನಾರೆಂಬುದನ್ನರಿತುಕೊಂಡನು. ಜಿನಸ್ಮರಣ ಮಾತ್ರದಿಂದ ಇಷ್ಟು ಐಶ್ವರ್ಯವನ್ನು ಪಡೆಯಬಹುದಾದರೆ, ಪ್ರತ್ಯಕ್ಷವಾಗಿ ಜಿನೇಶ್ವರನನ್ನು ಕಂಡು ಆರಾಧಿಸುವವನ ಭಾಗ್ಯಕ್ಕೆ ಸಮಾನವಾದುದು ಬೇರೊಂದುಂಟೆ? ಆದುದರಿಂದ ತಾನು ಆ ತರದ ಅಗಣ್ಯ ಪುಣ್ಯಕ್ಕೆ ಭಾಜನನಾಗಬೇಕೆಂದು ಬಗೆದು, ಸಮಸ್ತ ಸನ್ನಾಹದೊಡನೆ ಕಮಳಾಧರ ಜಿನೇಂದ್ರನ ದಿವ್ಯ ಮಂದಿರದತ್ತ ನಡೆದು, ತ್ರಿಪ್ರದಕ್ಷಿಣಪೂರ್ವಕವಾಗಿ ಪರಮಜಿನಾರ್ಚನೆಯನ್ನು ಮಾಡಿ, ಕೈಮುಗಿದು ಸ್ತುತಿಸತೊಡಗಿದನು. ಅನೇಕ ಸ್ತೋತ್ರಗಳಿಂದ ಜಿನನನ್ನು ಸ್ತುತಿಸಿ, ಬಳಿಕ ಅರಿಂಜಯಾಮಿತಗುಣರೆಂಬ ಚಾರಣ ಯುಗಳವನ್ನು ಕಂಡು, ನಿರ್ಮಲ ಭಕ್ತಿಯಿಂದ ಅವರ ಅಡಿದಾವರೆಗಳಿಗೆರಗಿ, ವಿವಿಧಾರ್ಚನೆ

ಗಳಿಂದರ್ಚಿಸಿ, ಅವರ ಉಪಕಾರ ಸ್ಮರಣೆಯನ್ನು ಮಾಡಿ, ತನ್ನ ವಿಮಾನಕ್ಕೆ ಮರಳಿ,
ಅನಂತಸುಖವನ್ನನುಭವಿಸುತ್ತಿದ್ದನು. ಕೊನೆಗೆ, ಆಯುರವಸಾನದಲ್ಲಿ ಮೂಡಣ ಮುಂದ
ರದ ಪೂರ್ವವಿದೇಹದ ಕಚ್ಛಮಹಾವಿಷಯದ ಕನಕಪುರದಧೀಶ್ವರನಾದ ಕನಕಪ್ರಭ
ನಿಗೂ ಆತನ ವಲ್ಲಭೆಯಾದ ಕನಕಮಾಲೆಗೂ ಕನಕಧ್ವಜನೆಂಬ ಮಗನಾದನು. ಆತನಿಗೆ
ಕನಕಪ್ರಭೆಯು ವಲ್ಲಭೆಯಾದಳು. ಆ ದಂಪತಿಗಳಿಗೆ ಕನಕಪೂರ್ವರಥ ಪ್ರಭುಪುತ್ರ್ಯ
ರೆಂಬ ಮಕ್ಕಳಾದರು. ಕನಕಪ್ರಭನು ಪುತ್ರಪೌತ್ರಾದಿಗಳೊಡಗೂಡಿ ಸುಖದಿಂದಿದ್ದನು.
ಒಂದು ದಿನ ಆತನು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಿರಲು, ಬಿಳಿಯ ತಲೆ
ಗೂದಲು ಆತನಿಗೆ ಕಾಣಿಸಿತು. ಕೂಡಲೇ ಅವನಿಗೆ ವೈರಾಗ್ಯವುಂಟಾಯಿತು. ತನ್ನ
ಮಗನಾದ ಕನಕಧ್ವಜನಿಗೆ ಪಟ್ಟವನ್ನು ಕಟ್ಟಿ, ಸುಮತಿವ್ರತಿಯ ಸನ್ನಿಧಿಯಲ್ಲಿ ಜಿನದೀಕ್ಷೆ
ಯನ್ನು ಕೈಕೊಂಡನು. ಇತ್ತ ಕನಕಧ್ವಜನೂ ಕೆಲವು ಸಮಯ ಸುಖದಿಂದ ರಾಜ್ಯ
ವಾಳಿ, ವಸಂತಸಮಯದೊಳೊಮ್ಮೆ ವನಾಂತರದಲ್ಲಿ ತಪವನ್ನಾಚರಿಸುವ ಮುಮುಕ್ಷು
ವನ್ನು ಕಂಡು, ಆತನಿಂದ ಅಣುವ್ರತ ದೀಕ್ಷೆಯನ್ನು ಪಡೆದು, ನಿಜನಿವಾಸಕ್ಕೆ ಮರಳಿದನು.
ಅಲ್ಲಿ ಒಮ್ಮೆ ದೊಡ್ಡ ಮುಗಿಲೊಂದು ಗಗನಾಂತರದಲ್ಲಿ ಕಾಣಿಸಿಕೊಂಡು, ಕೂಡಲೇ ಮಾಯ
ವಾದುದನ್ನು ಕಂಡು, ಕನಕಧ್ವಜನು ವೈರಾಗ್ಯವನ್ನು ಹೊಂದಿದನು. ಕನಕರಥನಿಗೆ ರಾಜ್ಯ
ಭರವನ್ನು ಕೊಟ್ಟು, ಸುವ್ರತಮುನೀಶ್ವರನ ಸನ್ನಿಧಿಯಲ್ಲಿ ಆತನು ದೀಕ್ಷೆಯನ್ನು ಪಡೆ
ದನು. ಆ ರೀತಿ ತಪೋನುಷ್ಠಾನ ನಿಷ್ಠೆಯಿಂದ ಆಯುಷ್ಯವನ್ನು ಕಳೆದು, ಮರುಭವದಲ್ಲಿ
ಕನಕಾಪಿಷ್ಠ ಕಲ್ಪದಲ್ಲಿ ದೇವಾನಂದನೆಂಬ ದೇವನಾಗಿ ಹುಟ್ಟಿ, ಅನೇಕ ಸುಖವನ್ನನು
ಭವಿಸಿ, ಮುಂದಿನ ಜನ್ಮದಲ್ಲಿ ಮಾಳವದೇಶದ ಉಜ್ಜಯಿನೀಪುರದಲ್ಲಿ ವಜ್ರಸೇನ ಭೂ
ಪಾಲನಿಗೂ ಆತನ ರಾಣಿ ಸುಶೀಲೆಗೂ ಹರಿಷೇಣನೆಂಬ ಮಗನಾದನು. ವಜ್ರಸೇನ ಭೂಪಾ
ಲನು ಹಲವು ಕಾಲ ರಾಜ್ಯವಾಳಿ, ಒಮ್ಮೆ ಶ್ರುತಸಾಗರನೆಂಬ ಮುಮುಕ್ಷುವನ್ನು ಕಂಡು,
ಆತನ ಉಪದೇಶದಿಂದ ವೈರಾಗ್ಯವನ್ನವಲಂಬಿಸಿದನು. ಇತ್ತ ಹರಿಷೇಣನು ಅಧಿರಾಜಪದವಿ
ಯನ್ನು ಪಡೆದು, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತ, ವಿಶೇಷವಾದ
ಕೀರ್ತಿಗೆ ಪಾತ್ರನಾಗಿ, ಸುಪ್ರತಿಷ್ಠ ಯತಿಶ್ರೇಷ್ಠನ ಪ್ರಭಾವದಿಂದ ವಿರಾಗವೃತ್ತಿಯನ್ನ
ನುಸರಿಸಿ, ಮಹಾವ್ರತವನ್ನು ಕೈಕೊಂಡು, ಸಲ್ಲೇಖನದಿಂದ ಸಮಾಧಿ ಪಡೆದು, ಮಹಾ
ಶುಕ್ರ ಕಲ್ಪದ ಪ್ರೀತಿವರ್ಧನ ವಿಮಾನದಲ್ಲಿ ಪ್ರೀತಿಂಕರನೆಂಬ ದಿವಿಜನಾದನು. ಅಲ್ಲಿ ಆ
ದೇವನು, ದೇವಲೋಕದ ಅನೇಕ ಭೋಗಗಳನ್ನು ಭೋಗಿಸಿ, ಆಯುರವಸಾನದಲ್ಲಿ,
ಪೂರ್ವ ವಿದೇಹದ ಪುಷ್ಕಲಾವತೀ ವಿಷಯದ, ಪುಂಡರೀಕಿಣೀಪುರದ, ಸುಮಿತ್ರನೆಂಬ ರಾಜ
ನಿಗೂ ಆತನ ಪ್ರಿಯೆ ಸುಮಿತ್ರೆಗೂ ಪ್ರಿಯಮಿತ್ರನೆಂಬ ಮಗನಾಗಿ ಜನಿಸಿದನು. ಆ
ಕುಮಾರನು ಶಸ್ತ್ರಶಾಸ್ತ್ರಾಭ್ಯಾಸದಲ್ಲಿ ಎಲ್ಲರನ್ನೂ ಮೀರಿಸಿದನು. ಒಂದು ದಿನ ಕ್ಷೇಮಂ
ಕರ ಜಿನಪತಿಯ ಸಮವಸರಣವು ಬರಲು, ಭುವನತ್ರಯಸ್ವಾಮಿಯನ್ನು ವಂದಿಸಿ, ಅರ್ಚಿ
ಸುವ ಉದ್ರೇಕದಿಂದ, ಸುಮಿತ್ರ ಮಹೀಶನು ಮಹಾಸಂಭ್ರಮದಿಂದ ಅಲ್ಲಿಗೆ ನಡೆದು,
ಜಿನಪತಿಗೆ ತ್ರಿಃಪ್ರದಕ್ಷಿಣೆಗೆಯ್ದು, ವಂದನಾರ್ಚನೆಗಳಿಂದ ಸಂತುಷ್ಟನಾಗಿ, ಹೇಯೋಪಾ
ದೇಯ ತತ್ವವನ್ನು ಚೆನ್ನಾಗಿ ತಿಳಿದುಕೊಂಡು, ನಿರ್ವೇಗಪರಾಯಣನಾಗಿ, ಪ್ರಿಯಮಿತ್ರ

ನಿಗೆ ರಾಜ್ಯವನ್ನಿತ್ತು, ಪರಮಪಾವನವಾದ ಜಿನದೀಕ್ಷೆಯನ್ನು ಪಡೆದನು. ಪ್ರಿಯಮಿತ್ರನು ತನಗೆ ಪ್ರಾಪ್ತವಾದ ರಾಜ್ಯವನ್ನು ನಯವಿಕ್ರಮಗಳಿಂದ ಪರಿಪಾಲಿಸುತ್ತ, ತನ್ನ ಪುಣ್ಯಪರಿಪಾಕದಿಂದೊದಗಿದ ಚಕ್ರರತ್ನದ ಸಹಾಯದಿಂದ, ದಿಗ್ವಿಜಯಕ್ಕೆ ಹೊರಟು, ಸಮಸ್ತ ರಾಜರನ್ನು ಜಯಿಸಿದನು. ಆ ಚಕ್ರೇಶ್ವರನು ಮಹಾವೈಭವದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದು, ಒಂದು ದಿವಸ, ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಿರಲು, ನರೆಯೊಂದು ಕಾಣಿಸಿಕೊಂಡು, ಆತನನ್ನು ವಿರಕ್ತಿಮಾರ್ಗಕ್ಕೆ ತಿರುಗಿಸಿತು. ಬಳಿಕ ಆ ಚಕ್ರವರ್ತಿಯು ಸರ್ವಮಿತ್ರನೆಂಬ ನಿಜಾಗ್ರಪುತ್ರನಿಗೆ ಧರಣೀಭಾರವನ್ನಿತ್ತು, ಕ್ಷೇಮಂಕರ ತೀರ್ಥಂಕರನ ಸನ್ನಿಧಾನದಲ್ಲಿ ದೀಕ್ಷೆಯನ್ನು ಪಡೆದನು. ನಿರತಿಚಾರಾಚರಣದಿಂದ ತನ್ನ ಆಯುಷ್ಯವನ್ನು ಕಳೆದು, ಸಹಸ್ರಾರ ಕಲ್ಪದಲ್ಲಿ, ರುಚಕಾಖ್ಯ ವಿಮಾನದಲ್ಲಿ, ಸೂರ್ಯಪ್ರಭನೆಂಬ ದೇವನಾಗಿ ಜನಿಸಿದನು. ಅಲ್ಲಿ ಹಲವು ಕಾಲ ಸುಖವನ್ನನುಭವಿಸಿ, ಆಯುರವಸಾನದಲ್ಲಿ ಜಂಬೂದ್ವೀಪದ ಭರತಖಂಡದ ಪೂರ್ವದೇಶದ ಸಿತಕಚ್ಛವೆಂಬ ಪುರದ ನಂದಿವರ್ಧನನೆಂಬ ರಾಜನಿಗೂ ವೀರವತಿಯೆಂಬ ರಾಣಿಗೂ ನಂದನನೆಂಬ ಮಗನಾದನು.

ತ್ರಯೋದಶಾಶ್ವಾಸಂ

ಆ ನಂದನಕುಮಾರನು ಸಮಸ್ತಕಳಾಪ್ರವೀಣನಾಗಿ ಶೋಭಿಸಿದನು. ಪ್ರಿಯಂಕರಿಯೆಂಬವಳು ಆತನ ಚಿತ್ತವಲ್ಲಭೆಯಾದಳು. ನಂದಿವರ್ಧನ ಮಹಾರಾಜನು ನಿಜನಂದನನಾದ ನಂದನನಿಗೆ ರಾಜ್ಯಭಾರವನ್ನು ವಹಿಸಿ, ವೀರವತೀದೇವಿಯೊಡನೆ ಸುಖೋಪಭೋಗದಲ್ಲಿರುತ್ತಿರಲು, ಒಂದು ದಿವಸ, ಆಕಾಶದಲ್ಲಿ ಕಾಣಿಸಿಕೊಂಡ ಮುಗಿಲೊಂದನ್ನು ಕಂಡು, ಆತನು ನಿರ್ವೇಗವನ್ನು ಹೊಂದಿದನು. ಪಿಹಿತಾಸ್ರವನೆಂಬ ಮುನಿಪತಿಯನ್ನು ಹೊಂದಿ, ದೀಕ್ಷೆಯನ್ನು ಪಡೆದು, ಉಗ್ರತಪಸ್ಸಿನಿಂದ ನಿಜದೇಹವನ್ನು ತ್ಯಜಿಸಿದನು. ಇತ್ತ ನಂದನ ನರಪತಿಯು ನಂದನೆಂಬ ಪ್ರಿಯಪುತ್ರನನ್ನು ಪಡೆದು ಪ್ರಿಯಂಕರೀ ಮಹಾದೇವಿಯೊಡನೆ ಸುಖೋಪಭೋಗವನ್ನನುಭವಿಸುತ್ತಿದ್ದನು. [ಪದ್ಯ ೧೦ರಲ್ಲಿ ವಸಂತಸಮಯದ ವರ್ಣನೆಯಿದೆ.] ಒಂದು ದಿನ ಬಹಿರುದ್ಯಾನಕ್ಕೆ ಮುನಿಶ್ರೇಷ್ಠನೊಬ್ಬನು ಬಂದುದನ್ನು ವನಪಾಲಕರಿಂದರಿತು, ಆತನನ್ನು ಕಾಣುವ ಕುತೂಹಲದಿಂದ ನಂದನನು ಮಹಾವಿಭವದೊಡನೆಯ್ತಂದನು. ಅಲ್ಲಿ ಯತಿಜನಗಳ ನಡುವಿನಲ್ಲಿ ಶೋಭಿಸುತ್ತಿದ್ದ ಯತಿರಾಜನನ್ನು ಕಂಡು, ಭಕ್ತಿಯಿಂದ ಪೂಜಿಸಿ, ಆತನ ಸಮೀಪದಲ್ಲಿ ಕುಳಿತುಕೊಂಡನು. ಬಳಿಕ ಆ ಗುರುಮುಖದಿಂದ ಚತುರ್ಗತಿ ಸ್ವರೂಪವನ್ನೂ, ತನ್ನ ಮುನ್ನಿನ ಭವಾವಳಿಯ ಕಥೆಯನ್ನೂ ಸವಿಸ್ತರವಾಗಿ ತಿಳಿದು, ಸಂಸಾರದಲ್ಲಿ ನಿರ್ವೇಗವನ್ನು ಹೊಂದಿ, ತನ್ನ ನಂದನನಾದ ನಂದನಿಗೆ ಭೂತಳಾಧಿಪತ್ಯವನ್ನೊಪ್ಪಿಸಿ, ತಾನು ಆ ತಪಸ್ವಿಯ ಸನ್ನಿಧಾನದಲ್ಲಿ ಜಿನದೀಕ್ಷೆಯನ್ನು ಪಡೆದನು. ಅತಿ ಕಠಿಣವಾದ ತಪಸ್ಸನ್ನಾಚರಿಸಿ, ಆಯುರವಸಾನದಲ್ಲಿ ಪ್ರಾಯೋಪಗಮನವಿಧಿಯಿಂದ ಶರೀರತ್ಯಾಗಮಾಡಿ, ಷೋಡಶಕಲ್ಪದಲ್ಲಿ ಪುಷ್ಪೋತ್ತರವೆಂಬ ವಿಮಾನದಲ್ಲಿ ಇಂದ್ರನಾದನು.

ಇತ್ತ ಜಂಬೂದ್ವೀಪದ ಭರತಖಂಡದ ವಿದೇಹದೇಶದ ರಾಜಧಾನಿಯಾದ ಕುಂಡ ಪುರದಲ್ಲಿ, ಸಿದ್ಧಾರ್ಥನೆಂಬ ಮಹಾರಾಜನು ಆಳುತ್ತಿದ್ದನು. ಆ ಮಹೀಪತಿಗೆ ಪ್ರಿಯ ಕಾರಿಣಿಯೆಂಬವಳು ಅರಸಿ. ಆ ದಂಪತಿಗಳು ಧರ್ಮಾರ್ಥಗಳ್ಗೆ ವಿರೋಧವಿಲ್ಲದೆ ಕಾಮ ಸುಖವನ್ನನುಭವಿಸುತ್ತ ಸುಖದಿಂದಿದ್ದರು. ಅತ್ತ ಪುಷ್ಪೋತ್ತರ ವಿಮಾನಪತಿಯಾದ ಅಚ್ಯುತೇಂದ್ರನ ಆಯುಷ್ಯವು ಇನ್ನು ಆರು ತಿಂಗಳು ಮಾತ್ರ ಉಳಿದಿತ್ತು. ಆಗ ಸೌಧರ್ಮೇಂದ್ರನ ಆಸನಕಂಪವಾಯಿತು. ನಿರ್ಮಲವಾದ ಅವಧಿಬೋಧದ ದೆಸೆಯಿಂದ ಭಾವಿಜಿನನ ಗರ್ಭಾವತರಣವನ್ನರಿತು, ಅವನು ಆ ಮಂಗಳಕಾರ್ಯಕ್ಕೆ ಬೇಕಾದ ಸಿದ್ಧತೆ ಯನ್ನು ಅನುಗೊಳಿಸಿದನು. ವೈಶ್ರವಣನನ್ನು ಕರೆದು, ಸಿದ್ಧಾರ್ಥನಿರುವ ಪುರದಲ್ಲಿ ರತ್ನ ವೃಷ್ಟಿಯನ್ನು ಕರೆಯುವಂತೆ ಹೇಳಿದನು. ಈ ವಸುವೃಷ್ಟಿಯಿಂದಾಗಿ ಕುಂಡಪುರದ ಮನೆಮನೆಯಲ್ಲಿಯೂ ಸಿರಿಯು ಹೆಚ್ಚಿತು. ಬಳಿಕ ಅಮರ್ತ್ಯನಾಥನು ಜಿನಜನನಿಯ ಗರ್ಭಶೋಧನಾದಿ ಕಾರ್ಯಗಳಿಗೆ ಸಮರ್ಥೆಯರಾದ ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿಯರೇ ಮೊದಲಾದ ದೇವಕಾಂತೆಯರನ್ನು ನಿಯಮಿಸಿದನು. ಆರು ತಿಂಗಳು ಕಳೆಯಲು, ಪ್ರಿಯಕಾರಿಣಿಯು ಪುಷ್ಪವತಿಯಾದಳು. ಚತುರ್ಥಿನ ಕಳೆದ ಮೇಲೆ ದೇವಿಯು ದಿವ್ಯ ವಸ್ತ್ರಾಭರಣಗಳನ್ನು ಧರಿಸಿ ಶೋಭಿಸಿದಳು. ಬಳಿಕ ಆಕೆಯು ನಿಜಜೀವಿ ತೇಶ್ವರನೊಡಗೂಡಿ ಸುಖದಿಂದ ಪವಡಿಸಿದ್ದು, ಬೆಳಗಿನ ಜಾವದಲ್ಲಿ ದಿವ್ಯಸ್ವಪ್ನವನ್ನು ಕಂಡಳು. ಅವಳು ಮದಗಜವನ್ನೂ, ವೃಷಭವನ್ನೂ, ಸಿಂಹವನ್ನೂ, ಲಕ್ಷ್ಮೀದೇವಿ ಯನ್ನೂ, ಪುಷ್ಪದ್ವಯವನ್ನೂ, ವಿಧುವನ್ನೂ, ಸೂರ್ಯನನ್ನೂ, ಝಷಯುಗವನ್ನೂ, ಘಟಯುಗವನ್ನೂ, ಸರಸಿಯನ್ನೂ, ಸಮುದ್ರವನ್ನೂ, ಸಿಂಹಾಸನವನ್ನೂ, ನಿಳಿಂಪವಿ ಮಾನವನ್ನೂ, ಆಲಯವನ್ನೂ, ರತ್ನರಾಶಿಯನ್ನೂ, ಶಿಖಿಶಿಖೆಯನ್ನೂ ಸ್ವಪ್ನದಲ್ಲಿ ಕಂಡು ಮರುದಿವಸ ಬೆಳಿಗ್ಗೆ, ತಾನು ಕಂಡ ಕನಸನ್ನು ತನ್ನ ಜೀವಿತೇಶನಿಗೆ ನಿವೇದಿಸಿದಳು. ಆಕೆಯ ಷೋಡಶ ಸ್ವಪ್ನವೃತ್ತಾಂತವನ್ನು ಕೇಳಿ ಸಂತುಷ್ಟನಾದ ಸಿದ್ಧಾರ್ಥ ಮಹಾರಾಜನು ಆಕೆಯ ಉದರದಲ್ಲಿ ಲೋಕೈಕನಾಥನಾದ ತೀರ್ಥಂಕರನು ಜನಿಸುವನೆಂದು ಅವಳಿಗೆ ಹೇಳಿದನು. ಪ್ರಿಯಕಾರಿಣಿಗೂ ಈ ವೃತ್ತಾಂತವನ್ನು ಕೇಳಿ ಸಂತೋಷವಾಯಿತು. ಅಷ್ಟ ರಲ್ಲಿ ಪುಷ್ಪೋತ್ತರ ವಿಮಾನವಾಸಿಯಾದ ದಿವಿಜೇಂದ್ರನು ತನ್ನ ಆಯುಷ್ಯವು ಮುಗಿ ಯಲು, ಈ ಭೂಮಿಗಿಳಿದು ಪ್ರಿಯಕಾರಿಣೀಮಹಾದೇವಿಯ ಉದರದಲ್ಲಿ ಪ್ರವೇಶಿಸಿದನು. ಇದನ್ನು ತಿಳಿದ ದೇವೇಂದ್ರನು ಇಂದ್ರಾಣಿ ಮತ್ತು ಸುರಸಮಿತಿ ಸಹಿತನಾಗಿ ಬಂದು ಗರ್ಭಾವತರಣ ಮಹಾಕಲ್ಯಾಣವನ್ನು ನೆರವೇರಿಸಿದನು. ಬಳಿಕ ಆಕೆಯ ಗರ್ಭವು ಬೆಳೆದು, ಪರಿಪೂರ್ಣ ಪ್ರಸವ ಸಮಯವು ಸಮನಿಸಲು—

ಚೈತ್ರಸಿತತ್ರಯೋದಶಿಯೊಳುತ್ತರೆ ಸಾರ್ತರೆ ಸನ್ಮುಹೂರ್ತದೊಳ್ ।
ಪುತ್ರನನುಬ್ಬಿಯಿಂ ಪಡೆದಳಾ ಪ್ರಿಯಕಾರಿಣಿ ಚಾರುಗಾತ್ರನಂ ।
ಗೋತ್ರಪವಿತ್ರನಂ ಭುವನಮಿತ್ರನನಾತತ ಕರ್ಮಕಂಪಳೀ ।
ಗಾತ್ರನಸುಪ್ತಬೋಧ ಸುಖಪಾತ್ರನನಂಬುಜಪತ್ರನೇತ್ರನಂ ।

ಆಗಳಾ ಪುರಜನದ ಸಂತೋಷಕ್ಕೆ ಪಾರವೇ ಇರಲಿಲ್ಲ. ದೇವಲೋಕದಲ್ಲಿ ವಾದನವಿಲ್ಲದೆ ಅನಕಸ್ವನವುಂಟಾಯಿತು. ಅಕಾರಣವಾಗಿ ಸುರರಿಗೆ ಆಸನಕಂಪವಾಯಿತು. ಸುರತರುಗಳು ಕುಸುಮದಾಸಾರವನ್ನು ಸುರಿದುವು. ದೇವತೆಗಳ ಶಿರಗಳು ಬಾಗಿದುವು. ಸೌಧರ್ಮೇಂದ್ರನು ತನ್ನ ಅವಧಿಬೋಧ ಜ್ಞಾನದಿಂದ ಇದರ ಕಾರಣವನ್ನರಿತು, ಸುರಸಮಿತಿಯೊಡಗೂಡಿಕೊಂಡು, ಜಿನಜನ್ಮಾಭಿಷೇಕ ಕಲ್ಯಾಣವನ್ನು ನೆರವೇರಿಸುವುದಕ್ಕಾಗಿ, ಧರೆಗಿಳಿದು ಬಂದನು. ಬಹಳ ಸಂಭ್ರಮದಿಂದ ಅವರು ದ್ವಿತೀಯ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿದರು. ಆ ಬಾಲಕನಿಗೆ ವೀರನೆಂದು ನಾಮಕರಣ ಮಾಡಿದರು.

ಪರಿಜನ ಪುರಜನ ಗುರುಜನ।
ಸುರಜನ ಬಂಧುಜನ ಬುಧಜನಂಗಳ ಹರ್ಷಂ।
ಬೆರಸು ಸಿರಿವೆರಸು ಧರ್ಮಂ।
ಬೆರಸು ಜಸಂಬೆರಸು ಬಾಲಕಂ ವರ್ಧಿಸಿದಂ॥

ಹೀಗೆ ವರ್ಧಿಸುವ ಬಾಲಕನಿಗೆ ವರ್ಧಮಾನನೆಂಬ ದ್ವಿತೀಯ ನಾಮವನ್ನು ಇಟ್ಟರು. ಒಮ್ಮೆ ಸಂಜಯವಿಜಯರೆಂಬ ಚಾರಣಯುಗಳಕ್ಕೆ ಆಗಮಾರ್ಥದಲ್ಲಿ ಒಂದೆಡೆ ಸಂಶಯ ತೋರೆ, ಅವರು ಬಂದು ತೀರ್ಥಕರ ಬಾಲಕನನ್ನು ಕಂಡು ಪ್ರದಕ್ಷಿಣೆಗೆಯ್ಯಲು ಸಂಶಯ ನಿವೃತ್ತಿಯಾಯಿತು. ಆದುದರಿಂದ ಅವರು ಸನ್ಮತಿ ಸಮುತ್ಪತ್ತಿಗೆ ಕಾರಣವಾದ ಆ ಚಿನ್ಮಯ ಮೂರ್ತಿಗೆ 'ಸನ್ಮತಿ' ಯೆಂಬ ತೃತೀಯ ನಾಮವನ್ನಿಟ್ಟು ಹೋದರು.

ಒಮ್ಮೆ ದೇವೇಂದ್ರನು ತನ್ನ ಸಭೆಯಲ್ಲಿ ವೀರಜಿನಕುಮಾರಕನಂತೆ ನಿರ್ಭಯರಾರೂ ಇಲ್ಲವೆಂದು ಕೊಂಡಾಡುತ್ತಿರಲು ಸಂಗಮಕನೆಂಬ ದೇವನು ಇದು ಅಸಂಗತವೆಂದು ಬಗೆದು ಇದನ್ನು ಪರೀಕ್ಷಿಸುವ ನೆವದಿಂದ ಧರೆಗಿಳಿದು ಬಂದನು. ಅವನು ಕುಂಡಪುರದ ಬಹಿರುದ್ಯಾನದಲ್ಲಿ ಒಂದು ವಿಶಾಲವಾದ ವಟವೃಕ್ಷದ ಶಾಖೆಗಳ ಮಧ್ಯೆ ಮರಗೊಂಬನಾಡುತ್ತಿದ್ದ ರಾಜಕುಮಾರರ ಮತ್ತು ಸುರಕುಮಾರರ ಮಧ್ಯದಲ್ಲಿದ್ದ ವೀರಜಿನಕುಮಾರನನ್ನು ಕಂಡನು. ಬಳಿಕ ಭಯಂಕರವಾದ ಸರ್ಪಾಕಾರದಿಂದ ಅವನು ಮರದ ಕೊಂಬೆಗೆ ಸುತ್ತಿಕೊಂಡು ಭುಸುಗುಟ್ಟುತ್ತಿರಲು, ಇತರ ಬಾಲಕರೆಲ್ಲರೂ ಭಯವಿಹ್ವಲರಾಗಿ ಕೊಂಬೆಯಿಂದ ಕೊಂಬೆಗೆ ಹಾರಿ ಕೆಳಗೆ ಬಿದ್ದರು. ಆದರೆ ಜಿನಬಾಲಕನು ಮಾತ್ರ ಸ್ವಲ್ಪವೂ ಹೆದರದೆ ಮರದ ಕೊಂಬೆಯ ಮೇಲೆಯೇ ಇದ್ದನು. ಆ ಮೇಲೆ ಆ ಧೀರಕುಮಾರನು ಏಣಿಯನ್ನು ಮೆಟ್ಟಿ ಉಪ್ಪರಿಗೆಯಿಂದಿಳಿವಂತೆ, ಆ ಸರ್ಪರಾಜನ ಹೆಡೆಗಳನ್ನು ಮೆಟ್ಟಿ, ಮರದಿಂದಿಳಿದನು. ಇದನ್ನು ಕಂಡು ಪರಮಾಶ್ಚರ್ಯದಿಂದ ಸಂಗಮಕನು ನಿಜರೂಪವನ್ನು ಧರಿಸಿ, ವೀರಜಿನನನ್ನು ಬಾಯಿತುಂಬ ಹೊಗಳಿ ಹೊರಟು ಹೋದನು. ಅಂದಿನಿಂದ ಆ ಜಿನನಿಗೆ ಮಹಾವೀರನೆಂಬ ಚತುರ್ಥಾಭಿಧಾನವಾಯಿತು. ವಸುಧಾಜನಕ್ಕೆ ಹಿತವನ್ನೆಸಗುವವನಾದ ಕಾರಣದಿಂದ ಆತನಿಗೆ ವಸುಧೈಕಬಾಂಧವನೆಂಬ ಬಿರುದೂ ಉಂಟಾಯಿತು. ಇಂದ್ರನು ಜಿನನ ಪರಿನಿಷ್ಕ್ರಮಣ ಕಲ್ಯಾಣವು ಸಮೀಪಿಸಿದುದನ್ನು ಅವಧಿಬೋಧದಿಂದರಿತು, ಮಹಾಸಂಭ್ರಮದಿಂದ ಭೂತಲಕ್ಕೆ ಬಂದು, ವಸುಧೈಕ ಬಾಂಧವ ಶ್ರೀಜಿನನ ತೃತೀಯ ಕಲ್ಯಾಣೋತ್ಸವಕ್ಕೆ ಸಿದ್ಧತೆಯನ್ನು ಮಾಡಿದನು.

ಪಂಚಮಾಶ್ವಾಸಂ

ದೇವತೆಗಳಿಂದಿಯು ರಮಣೀಯವಾದ ಚಂದ್ರಪ್ರಭವೆಂಬ ವಿಮಾನವನ್ನು ಸಿದ್ಧಗೊಳಿಸಲು, ನಾನಾವಿಧರತ್ನ ಮಂಡಿತವಾದ ಪೀಠದಲ್ಲಿ ದೇವೇಂದ್ರನ ಹಸ್ತಾವಲಂಬನವಾಗಿ ಆ ಜಿನನು ಕುಳಿತುಕೊಂಡನು. ಆಗ ದೇವದುಂದುಭಿಯು ನಾದವು ಎಲ್ಲಾ ದಿಕ್ಕುಗಳಲ್ಲಿಯೂ ವ್ಯಾಪಿಸಿತು. ಜಿನನು ಉಡುಗೆತೊಡುಗೆಯನ್ನೆಲ್ಲ ವಿಸರ್ಜಿಸಿ, ಬರಿಯ ದಿಗಂಬರನಾಗಿ ಕುಳಿತು, ಶುಭ ಮುಹೂರ್ತದಲ್ಲಿ ತನ್ನ ತಲೆಯ ಕೂದಲನ್ನು ತನ್ನ ಕೈಯಿಂದಲೇ ಕಿತ್ತು, 'ಸಿದ್ಧೇಭ್ಯಃ ನಮಃ' ಎಂದು ಹೇಳುತ್ತ, ಅಖಿಳ ಸಂಗವಿರತಿ ಸಮೇತನಾಗಿ, ತಪಸ್ಸಿಗೆ ಆರಂಭಿಸಿದನು. ಈ ತಪದಿಂದಾಗಿ ಆತನಿಗೆ ಮನಃಪರ್ಯಯಜ್ಞಾನವುಂಟಾಯಿತು. ಮರುದಿನ ಆತನು ಷಷ್ಠೋಪವಾಸ ಪಾರಣೆಗಾಗಿ ಕೂಲಪುರವನ್ನು ಹೊಕ್ಕನು. ಅಲ್ಲಿಯ ರಾಜನು ಆ ಸಮಾಚಾರವನ್ನು ಕೇಳಿ, ಕೂಡಲೇ ಹೊರಟುಬಂದು, ಆತನನ್ನು ಕಂಡು ಪೂಜಿಸಿ, ತನ್ನ ನಿಲಯಕ್ಕೆ ಕರೆದುಕೊಂಡು ಹೋಗಿ, ವಿವಿಧಾಹಾರಗಳಿಂದುಪಚರಿಸಿದನು.

ಇಂದೀ ಮದೀಯ ಜನ್ಮಂ।
ಸಂದುದಿಯುಮೇಂ ಸಫಲಮಾಯ್ತು ಜಗದಾರಾಧ್ಯಂ।
ಬಂದಂ ಮದಿರಕೆಂದಾ।
ನಂದದೊಳೊಂದಿದನುದಾತ್ತ ಕವಿಜನಮಿತ್ರಂ।

ಜಿನನು ಅಲ್ಲಿಂದ ಹೊರಟು, ಅನೇಕ ಕಡೆಗಳಲ್ಲಿ ಸಂಚರಿಸುತ್ತ, ಒಂದು ದಿವಸ ಸಾಯಂಕಾಲ ಪುರೋದ್ಯಾನಂತದ ಅತಿಮುಕ್ತಕ ಸ್ಮಶಾನದಲ್ಲಿ ಪ್ರತಿಮಾಯೋಗದಲ್ಲಿ ನಿಂ-ದನು. ರುದ್ರನು ಆ ತಪೋನಿಧಿಯನ್ನು ಕಂಡು ಭಕ್ತಿಭಾವದಿಂದ ಕೈಮುಗಿದನು. ಗಿರಿನಂದನೆಯು ವಿಸ್ಮಯದಿಂದ ನೋಡುತ್ತ, ಈತನಾರೆಂದು ತನ್ನ ಪತಿಯೊಡನೆ ವಿಚಾರಿಸಿದಳು. ಆಗ ರುದ್ರನು ಆತನ ವೃತ್ತಾಂತವನ್ನೆಲ್ಲ ಹೇಳಿ, ಆತನನ್ನು ಸ್ತುತಿಸುವುದನ್ನಾರಂಭಿಸಿದನು. ಪಾರ್ವತಿಗೆ ಆ ಜಿನೇಶ್ವರನ ಶಕ್ತಿಯನ್ನು ಪರೀಕ್ಷಿಸಬೇಕೆಂಬ ಅಪೇಕ್ಷೆಯುಂಟಾಗಿ, ತನ್ನ ಇಚ್ಛೆಯನ್ನು ನಡೆಸಬೇಕೆಂದು ಪತಿಯೊಡನೆ ಆಕೆಯು ಬೇಡಿಕೊಂಡಳು. ಮಹದೇವನು ಸತಿಯನ್ನು ಮನ್ನಿಸಲೊಪ್ಪಿದನು. ನೋಡುತ್ತಿರುತ್ತ, ಆಕೆಯು ಇಷ್ಟಾರ್ಥವನ್ನು ನೆರವೇರಿಸುವ ಉದ್ದೇಶದಿಂದ ತನ್ನ ಕಡೆಯ ಶಿವಗಣ ನಿಶಾಚರರಿಗೆ ತನ್ನ ಮನೋಗತವನ್ನು ತಿಳಿಸಿದನು. ಆ ಭಯಂಕರ ಶಿವಗಣನಿಶಾಚರರು ಅನೇಕ ಉಪಸರ್ಗಗಳನ್ನು ಹೂಡಿ, ನಾನಾ ರೀತಿ ಬಾಧೆಯನ್ನು ಕೊಟ್ಟರು. ಆ ಜಿನಸ್ವಾಮಿಯ ಧೈರ್ಯವನ್ನು ಕೆಡಿಸಲಸಮರ್ಥರಾದರು. ಇದರಿಂದ ಸಂತುಷ್ಟರಾದ ಪಾರ್ವತೀಪರಮೇಶ್ವರರು ಆತನನ್ನು ಅನೇಕ ವಿಧದ ಪೂಜಿಸಿ, ಮಹಾವೀರನೆಂದೂ ಅತಿವೀರನೆಂದೂ ಆತನಿಗೆ ಹೆಸರಿಟ್ಟು ಹೋದರು. ಮರುದಿನ ಬೆಳಗ್ಗೆ ವರ್ಧಮಾನಸ್ವಾಮಿಯೂ ಅಲ್ಲಿಂದ ತೆರಳಿಹೋದನು.

ಇತ್ತ ಸಿಂಧುದೇಶದಲ್ಲಿ ವೈಶಾಲಿಯೆಂಬ ನಗರವು ಕೊಣಿಕಪುತ್ರಿಯ- ಅದನ್ನು ಸಮಗ್ರವಾದ ಪಿತ್ರುವಾದಿ ಗುಣಗಳಿಂದೊಪ್ಪುವ ಚೇಟಕನೆಂಬ ರಾಜನಾ-

ತ್ತಿದ್ದನು. ಆತನ ರಾಣಿಯೇ ಸುಭದ್ರೆ, ರಾಜನಿಗೆ ಆಕೆಯಲ್ಲಿ ಧನಚಂದ್ರನೇ ಮೊದಲಾದ ಹತ್ತು ಮಂದಿ ಪುತ್ರರೂ, ಪ್ರಿಯಕಾರಿಣಿಯೇ ಮೊದಲಾದ ಆರು ಮಂದಿ ಪುತ್ರಿಯರೂ ಹುಟ್ಟಿದರು. ಇವರೆಲ್ಲರಿಗಿಂತಲೂ ಕಿರಿಯವಳಾಗಿಯೂ, ರೂಪಾತಿಶಯದಿಂದೊಪ್ಪುವವಳಾಗಿಯೂ ಚಂದನೆಯೆಂಬವಳೊಬ್ಬಳು ಮಗಳಾದಳು. ಒಂದು ದಿನ ಆಕೆಯು ವನವಿಹಾರಕ್ಕೆ ಹೋಗಿರುವ ವೇಳೆ, ಮನೋವೇಗನೆಂಬ ಖಚರನೊಬ್ಬನು ಆಕೆಯ ಸೌಂದರ್ಯಾತಿಶಯವನ್ನು ಕಂಡು, ಮೋಹಗೊಂಡು, ಕೆಳಗಿಳಿದು ಆಕೆಯನ್ನು ಹಿಡಿದುಕೊಂಡು, ಗಗನಕ್ಕೆ ನೆಗೆದು, ವಿಮಾನದಲ್ಲಿರಿಸಿಕೊಂಡು ಹೋದನು. ಆದರೆ ಏನು ಮಾಡಿದರೂ, ಏನು ಹೇಳಿದರೂ, ಆ ಗುಣವತಿಯು ಆತನನ್ನೊಡಗೂಡಲೊಪ್ಪದಿದ್ದುದರಿಂದ, ಆಕೆಯನ್ನು ಅವನು ಒಂದು ಕಾಡಿನಲ್ಲಿಬಿಟ್ಟುಹೋದನು. ಎಲ್ಲಿಗೆ ಹೋಗುವುದಕ್ಕೂ ಆಕೆಗೆ ತಿಳಿಯಲಿಲ್ಲ. ಆದುದರಿಂದ ಅವಳು ಅಲ್ಲಿಯೇ ಕುಳಿತು ಜಿನಪಾದವೇ ಗತಿಯೆಂದು ಧ್ಯಾನಿಸಿದಳು. ಆಗ ಒಬ್ಬ ಕಿರಾತನು ಆ ಮಾರ್ಗವಾಗಿ ಬಂದು, ಆ ತರುಣಿಯನ್ನು ಕಂಡು ಮನದೆಗೊಂಡು, ಹಿಡಿದಿರಲು, ವತ್ಸದೇಶದ ಕೌಶಾಂಬಿ ನಗರದಲ್ಲಿ ವಾಸವಾಗಿದ್ದ ವೃಷಭದತ್ತನೆಂಬ ವೈಶ್ಯನು ಕಾರ್ಯಾಂತರದಿಂದ ಆ ಕಾಂತಾರಕ್ಕೆ ಬಂದು, ಆಕೆಯನ್ನು ಕಂಡು, ದಯಾಮಯನಾದ ಕಾರಣದಿಂದ, ಆ ಕಿರಾತನಿಗೆ ಸದುಪದೇಶವನ್ನು ಮಾಡಿ, ಆ ತರುಣಿಯ ಸೆರೆಯನ್ನು ಬಿಡಿಸಿ, ಆಕೆಯನ್ನು ತಾನಿರುವ ಪುರಕ್ಕೆ ಕರಕೊಂಡು ಹೋದನು. ಅಲ್ಲಿ ತನ್ನ ಹೆಂಡತಿಯ ವಶದಲ್ಲಿ ಆಕೆಯನ್ನು ಒಪ್ಪಿಸಿ, ಅವಳನ್ನು ಮಗಳಂತೆ ಸಾಕಬೇಕೆಂದು ಹೇಳಿ ಹೋದನು. ಆ ಸೆಟ್ಟಿತಿಯು ಚಂದನೆಯ ಚಂದವನ್ನು ನೋಡಿ, ಈಕೆ ಎಂದಾದರೂ ತನ್ನ ವಲ್ಲಭನನ್ನು ವರಿಸದಿರಲಾರಳೆಂದು ಮನದಲ್ಲಿ ನಿಶ್ಚಯಿಸಿ, ಉಪಾಯದಿಂದ ಆಕೆಯನ್ನು ಸೆರೆಯಲ್ಲಿಟ್ಟಳು. ಒಂದು ದಿನ ವೀರ ಭಟ್ಟಾರಕನು ಆ ಪುರಕ್ಕೆ ಬಂದು ಚರ್ಯಾಮಾರ್ಗದಲ್ಲಿ ಬರುತ್ತಿರಲು, ಚಂದನೆಯು ಆತನನ್ನು ನಿಲಿಸುವುದಕ್ಕಾಗಿ ಮುನ್ನಡೆದಳು. ಆಗ ಅವಳ ಬಂಧನವು ಕಳಚಿಹೋಯಿತು. ಆಕೆಯು ಜಿನಪತಿಯನ್ನು ನಿಜನಿವಾಸಕ್ಕೆ ಕರೆದುಕೊಂಡು ಹೋಗಿ ಉಪಚರಿಸಿದಳು. ಇದರಿಂದ ಸಂತುಷ್ಟನಾದ ಜಿನಪತಿಯು ಆಕೆಯನ್ನು ಹರಸಿ ಹೋದನು. ಚಂದನೆಯ ಮನೆಯಲ್ಲಿ ಪಂಚಾಶ್ಚರ್ಯವುಂಟಾಗಲು, ವೃಷಭದತ್ತನು ಆಕೆಯ ಮನೆಗೆ ಬಂದು, ವೃತ್ತಾಂತವೆಲ್ಲವನ್ನೂ ತಿಳಿದು, ಕೃತಘ್ನೆಯಾದ ತನ್ನ ಮಡದಿಯನ್ನು ಆ ಚಂದನೆಯ ಪಾದಗಳಿಗೆರಗಿಸಿ, ಮಹಾಸಂಭ್ರಮದಿಂದ ಆ ಚಂದನೆಯನ್ನು ಚೇಟಕ ಮಹಾರಾಜನಿದ್ದಲ್ಲಿಗೆ ಕರೆದುಕೊಂಡು ಹೋಗಿ, ಆಕೆಯ ತಂದೆಗೆ ಆಕೆಯನ್ನು ಒಪ್ಪಿಸಿ, ಸಂತೋಷಪಡಿಸಿದನು.

ಇತ್ತ ವೀರಜಿನನು ಜೃಂಭಿಕಾಪುರಕ್ಕೆ ಹೋಗಿ, ಅಲ್ಲಿಯ ರಿಜುಕೂಲೆಯೆಂಬ ಮಹಾತರಂಗಿಣಿಯ ತೀರದಲ್ಲಿ ಒಂದು ಶಾಲವೃಕ್ಷದ ಬುಡದಲ್ಲಿದ್ದ ಶಿಲಾಪಟ್ಟದ ಮೇಲೆ ಮೂಡುಮೊಗವಾಗಿ ನಿಂದಿರ್ದು ಪ್ರತಿಮಾಯೋಗನಿಯೋಗಿಯಾಗಿ ಶೋಭಿಸಿದನು. ಬಳಿಕ ತಪಸ್ಸಿನಿಂದ ಪ್ರಕೃತಿ ಕರ್ಮಾದಿಗಳನ್ನು ನಾಶಮಾಡಿ, ಗುಣಗಣವನ್ನು ಸಂಪಾದಿಸಿದನು. ವೈಶಾಖಮಾಸ ಶುಕ್ಲಪಕ್ಷದ ದಶಮಿ ದಿನದಲ್ಲಿ ಪರಮಜಿನನಿಗೆ ಕೇವಲಜ್ಞಾನೋದಯವಾಯಿತು. ತ್ರಿಭುವನದ ಜನರಿಗೂ ಆನಂದಾತಿಶಯವುಂಟಾಯಿತು. ಇದನ್ನು ಕಂಡು

ದೇವೇಂದ್ರನು ತೀರ್ಥಂಕರನ ಚತುರ್ಥ ಕಲ್ಯಾಣಮಹೋತ್ಸವವನ್ನು ನೆರವೇರಿಸುವು ದಕ್ಕಾಗಿ ಅಮರಸಮಿತಿ ಸಮೇತವಾಗಿ ಸುರಲೋಕದಿಂದ ಧರೆಗಿಳಿದು ಬಂದನು. ಬಳಿಕ ಅನೇಕ ಪೂಜಾದ್ರವ್ಯಗಳಿಂದ ಪರಮನನ್ನು ಪೂಜಿಸಿದನು.

ಷೋಡಶಾಶ್ವಾಸಂ

ಶ್ರೀವೀರತೀರ್ಥಂಕರನ ಸಮವಸರಣದ ಸಿರಿಯನ್ನು ಇಂದ್ರನು ಮನವಾರೆ ನೋಡಿ, ಬಾಯಾರೆ ಹೊಗಳಿದನು. ಒಮ್ಮೆ ಅವನು ಆ ಜಿನೇಂದ್ರನ ಸಮೀಪದಲ್ಲಿದ್ದ ಆಸನದಲ್ಲಿ ಕುಳಿತು, ಆತನ ವದನಾರವಿಂದದಿಂದ ಹೊರಡುವ ದಿವ್ಯರವವನ್ನಾಲಿಸಲುತ್ಸು ಕನಾಗಿದ್ದನು. ಆದರೆ ಗೌತಮನೆಂಬ ಗಣಧರನು ಬಾರದೆ ಅದಕ್ಕೆ ತಡೆಯಾಗಿದೆಯೆಂಬು ದನ್ನು ಆತನು ಅವಧಿಜ್ಞಾನದಿಂದ ತಿಳಿದನು. ಬಳಿಕ ತಾನೇ ಕಪಟ ವಟುವೇಷದಿಂದ ಗೌತಮಪುರಕ್ಕೆ ಬಂದು, ಪುರಮಧ್ಯದಲ್ಲಿ ಶೋಭಿಸುವ ಅಧ್ಯಯನ ಶಾಲೆಗೆ ಹೋಗಿ, ವೇದೋಕ್ತಮಾರ್ಗಾಚರಣನಾದ ಗೌತಮನನ್ನು ಕಂಡನು. ಈ ನವಮಾಣವಕನನ್ನು ಕಂಡು ಅಲ್ಲಿಯವರೆಲ್ಲರೂ ವಿಸ್ಮಯಾಕ್ರಾಂತಚಿತ್ತರಾಗಿದ್ದರು. ಗೌತಮನು ಇವನನ್ನು ಲಕ್ಷಿಸದೆ ತನ್ನ ಉಪನ್ಯಾಸವನ್ನು ಮುಂದುವರಿಸಿದನು. ಅವನ ವ್ಯಾಖ್ಯಾನವನ್ನು ಈ ಯುವಕನು ಅವಜ್ಞೆಗೆಯ್ದು ತಾನದಕ್ಕೆ ಬೇರೊಂದರ್ಥವನ್ನು ಹೇಳಿದನು. ಪರಕೀಯ ಸಿದ್ಧಾಂತ ಸಮರ್ಥನ ಪರವಾದ ವ್ಯಾಖ್ಯಾನವನ್ನು ಕೇಳಿ ಗೌತಮನು ತುಚ್ಛೀಭಾವ ದಿಂದ ಆತನ ಗುರುವಾರೆಂದು ಕೇಳಲು, ಆ ಮಾಣವಕನು ಮುಗುಳ್ನಗುತ್ತ —

> ಪರಮ ಶ್ರೀವೀರಭಟ್ಟಾರಕನಮಿತ ದಯಾಧಾರಕಂ ವಿಶ್ವವಿದ್ಯಾ ।
> ಭರಣಂ ನಿಶ್ಶೇಷಭವೋದ್ಧರಣನಖಿಲ ಲೋಕೈಕಪೂತಂ ಪ್ರಣೂತಂ ॥
> ಸ್ಮರದೂರಂ ನಿರ್ವಿಕಾರಂ ಸಮವಸರಣಕಾಂತಂ ಯಶಶ್ರೀನಿಶಾಂತಂ।
> ನಿರವದ್ಯಂ ಹೃದ್ಯನಸ್ಮದ್ಗುರು ಗುಣಗುರು ನಮ್ರಾಮರೇಂದ್ರಂ ಜಿನೇಂದ್ರಂ ।

ಎಂದು ಹೇಳಿದನು. ಇದನ್ನು ಕೇಳಿ ಪರಿಹಾಸದಿಂದ ಗೌತಮನು ಆ ನಿನ್ನ ಗುರುವು ಇಂದ್ರಜಾಲಿಗನ ವಿದ್ಯೆಯನ್ನು ಮಾತ್ರ ಬಲ್ಲವನು. ಅವನೊಡನೆ ವಾದಿಸಿ, ಆತನು ನಾಚಿಕೆಗೀಡಾಗುವಂತೆ ಮಾಡುವೆನೆಂದು ನುಡಿದು, ತನ್ನ ತಮ್ಮಂದಿರಾದ ಅಗ್ನಿಭೂತಿ ವಾಯುಭೂತಿಗಳೆಂಬವರನ್ನು ಕೂಡಿಕೊಂಡು, ವರ್ಧಮಾನ ಭಟ್ಟಾರಕರಿರುವಲ್ಲಿಗೆ ದರ್ಪ ದಿಂದ ನಡೆದನು. ಆದರೆ ಆ ಮಹಾನುಭಾವನನ್ನು ಸಮೀಪಿಸುತ್ತಲೇ ಆತನ ದರ್ಪವೆಲ್ಲ ಉಡುಗಿತು. ದೇವೇಂದ್ರನು ತನ್ನ ನಿಜರೂಪದಿಂದ ಅವನಿಗೆ ಕಾಣಿಸಿಕೊಂಡನು. ಗೌತ ಮನು ಪರಮಪ್ರೀತಿಯಿಂದ ಶ್ರೀವರ್ಧಮಾನಸ್ವಾಮಿಗೆ ಮೂರುಮೆ ಬಲವಂದು, ಸರ್ವಾಂಗ ಪ್ರಣತನಾಗಿ, ಮುಕುಳಿತಕರಸರೋಜನಾಗಿ, ಅನೇಕ ವಿಧವಾಗಿ ಸ್ತುತಿಸಿದನು. ಆ ಪರಮಜಿನನ ಪದಪೀಠೋಪಾಂತದಲ್ಲಿ ಸರ್ವಸಂಗಪರಿತ್ಯಾಗ ಮಾಡಿ, ತಮ್ಮಂದಿರೊಡನೆ ಪಾವನವಾದ ಜಿನದೀಕ್ಷೆಯನ್ನು ಪಡೆದನು. ಆಗ ಅವನಿಗೆ ಚತುರ್ಜ್ಞಾನಗಳು ಕೈಸೇರಿ ದುವು; ಪಂಚಮಹಾವ್ರತದ ಫಲವು ಲಭಿಸಿತು. ಅವನು ಪರಮಪೂಜ್ಯನಾದನು. ಗೌತ ಮನು ಅತಿ ಭಕ್ತಿಯಿಂದ ಲೋಕಾಕಾರ ಕಥನಾದಿಗಳನ್ನು ತನಗೆ ಬೆಸಸಬೇಕೆಂದು ಪ್ರಾರ್ಥಿ

ಸಿಕೊಳ್ಳಲು, ಜಿನೇಂದ್ರನಿಗೆ ದಿವ್ಯರವವು ಉಂಟಾಯಿತು. ಬಳಿಕ ಗೌತಮನು ಸನ್ಮತಿ ತೀರ್ಥಕರನಿಗೆ ವಿಶ್ವವಿಶ್ರುತ ಗಣಧರನಾಗಿ ಮಹಿಮೋನ್ನತಿವೆತ್ತು ಜಿನಧರ್ಮವನ್ನು ಬೋಧಿಸುತ್ತ ಭವ್ಯಸಂತತಿಯ ಮನವನ್ನು ತಣಿಸುತ್ತಿದ್ದನು. ಮಹಾವೀರನ ಸಮವಸರಣವು ವಿಹಾರಿಸುತ್ತ ರಾಜಗೃಹದ ಸಮೀಪವಿರುವ ವಿಪುಳಗಿರಿಗೆ ಬರಲು, ಮಗಧಾಧಿಪನು ಈ ವರ್ತಮಾನವನ್ನು ತಿಳಿದು ಮಹಾನಂದದಿಂದ ಆತನನ್ನು ಪೂಜಿಸುವುದಕ್ಕಾಗಿ ಸಕಲ ಸನ್ನಾಹದೊಡನೆ ಹೊರಟನು. ಶ್ರೇಣಿಕ ಮಹಾರಾಜನೂ ಚೇಳಿನೀ ಮಹಾರಾಣಿಯೂ ಅರ್ಚನ ಪೂಜಾದಿಗಳಿಂದ ಜಿನನನ್ನು ಸತ್ಕರಿಸಿ, ಮುಕುಳಿತಾಂಜಲಿಬದ್ಧರಾಗಿ ಸ್ತೋತ್ರಮಾಡಿದರು. ಬಳಿಕ ಗಣಧರ ಗೌತಮನನ್ನು ವಂದಿಸಿದರು. ಆ ಮೇಲೆ ಉಚಿತಸ್ಥಾನದಲ್ಲಿ ಕುಳಿತು ಗೌತಮನಿಂದ ತತ್ವಬೋಧೆಯನ್ನು ಸವಿಸ್ತರವಾಗಿ ತಿಳಿದರು. ತ್ರಿಷಷ್ಟಿಶಲಾಕಾ ಪುರುಷಪುರಾಣವನ್ನೂ ಆತನಿಂದಲೇ ಕೇಳಿ ತಿಳಿದುಕೊಂಡರು. ಈ ಧರ್ಮಕಥಾಶ್ರವಣದಿಂದ ಶ್ರೇಣಿಕ ಮಹಾರಾಜನ ಮನವು ತಣಿಯಿತು. ಅನಂತರ ಶ್ರೇಣಿಕ ಮಹಾರಾಜನು ತನ್ನ ಭವಾವಳಿಯನ್ನು ಕುರಿತು ಪ್ರಶ್ನೆಮಾಡಲು, ಗೌತಮಮುನಿಯು ಅದನ್ನು ಆತನಿಗೆ ವಿವರಿಸಿದನು :—

ಭರತಭೂಮಿಗೆ ಭೂಷಣದಂತೆ ಮೆರೆವ ವಿಂಧ್ಯಾಟವಿಯ ಸಮೀಪದಲ್ಲಿ ಕುಟಜವನವೆಂಬುದು ಶೋಭಿಸುತ್ತಿದ್ದಿತು. ಆ ವನಕ್ಕೆ ಖದಿರಸಾರನೆಂಬ ಶಬರನಾಯಕನು ಒಡೆಯನಾಗಿದ್ದನು. ಆತನು ಹಿಂಸಾಭಿರತನಾಗಿಯೂ ಮಧುಮದ್ಯಮಾಂಸಸೇವಾಭಿರತನಾಗಿಯೂ, ವಿಷಯಸುಖಾಭಿರತನಾಗಿಯೂ ಜೀವಿಸುತ್ತಿದ್ದನು. ಒಮ್ಮೆ ಜೈನಯೋಗಿಯೊಬ್ಬನು ಅಲ್ಲಿಗೆ ಹೋಗಲು, ಆತನ ಉಪದೇಶದಿಂದ ಖದಿರಸಾರನು ಮಾಂಸವಿರತಿವ್ರತವನ್ನು ಕೈಕೊಂಡನು. ಹೀಗಿರಲು, ಸ್ವಲ್ಪಸಮಯದಲ್ಲಿ ಅವನಿಗೆ ಕ್ಷಯರೋಗ ಪ್ರಾಪ್ತವಾಗಿ, ಬಂಧುಜನದ ಮನದುಮ್ಮಳವನ್ನು ಹೆಚ್ಚಿಸಿತು. ಇದನ್ನು ಕಂಡು ವೃದ್ಧ ಕಿರಾತನಾಯಕರು ಬಂದು ಕಾಗೆಯಡಗನ್ನು ತಿಂದರೆ ಕುತ್ತವು ಮಾಯುವುದೆಂದು ನುಡಿಯಲು, ಆತನು ಅವರ ಮಾತನ್ನು ಅಲ್ಲಗಳೆದು, ಪ್ರಾಣ ಹೋದರೂ ವ್ರತಕ್ಕೆ ಭಂಗವನ್ನು ಮಾಡಲಾರೆನೆಂದು ಹೇಳಿದನು. ಈ ವೃತ್ತಾಂತವನ್ನು ಕೇಳಿ ಅವನ ಮೈದುನನಾದ ಸೂರವೀರನು ಭಾವನಲ್ಲಿಗೆ ಬರಲು ಹೊರಟನು. ದಾರಿಯಲ್ಲಿ ರೂಪವತಿಯೂ, ಭೂಷಣಾನ್ವಿತೆಯೂ ಆದ ಸ್ತ್ರೀಯೋರ್ವಳು ಅಳುತ್ತಿರುವುದನ್ನು ಕಂಡು, ಅದಕ್ಕೆ ಕಾರಣವೇನೆಂದು ವಿಚಾರಿಸಿದನು. ಅದಕ್ಕವಳು ಹೀಗೆಂದಳು: "ಕಾಗೆಯ ಮಾಂಸವನ್ನು ತಿನ್ನದ ಸದ್ವ್ರತದಿಂದ ಸತ್ತು ಯಕ್ಷಿಯಾದ ನನಗೆ ಅದೇ ವ್ರತವನ್ನು ಕೈಕೊಂಡಿರುವ ಖದಿರಸಾರನು ಪತಿಯಾಗಲಿರುವನು. ನೀನು ಹೋಗಿ ಆ ವ್ರತವನ್ನು ಕೆಡಿಸಿ, ಆತನು ನರಕಕ್ಕೆ ಹೋಗುವಂತೆ ಮಾಡಿ, ನನ್ನ ಸುಖಕ್ಕೆ ಭಂಗವನ್ನುಂಟು ಮಾಡುವೆಯೆಂದು ನಾನು ಅಳುತ್ತಿರುವೆನು.'' ಇದನ್ನು ಕೇಳಿ ಕನಿಕರಪಟ್ಟು ಆ ಬೇಡನು ತಾನು ಹಾಗೆ ಮಾಡುವುದಿಲ್ಲವೆಂದು ಆಕೆಗೆ ಭರವಸೆ ಕೊಟ್ಟು, ಖದಿರಸಾರನಲ್ಲಿಗೆ ಹೋಗಿ, ಆತನ ದೃಢನಿಶ್ಚಯವನ್ನರಿತು, ಸಂತೋಷಪಟ್ಟು, ಯಕ್ಷಿಯು ಹೇಳಿದ ವೃತ್ತಾಂತವನ್ನು ಆತನಿಗೆ ತಿಳಿಸಿ, ಇನ್ನು ಮೂರು ದಿನಗಳಲ್ಲಿ ಆತನು ಸತ್ತು ದೇವಗತಿಯನ್ನು ಹೊಂದುವುದಾಗಿ ಹೇಳಿ

ಹೊರಟುಹೋದನು. ಖದಿರಸಾರನು ಮರುಭವದಲ್ಲಿ ದೇವನಾಗಿ ಹುಟ್ಟಿದನು. ಅಲ್ಲಿ ಅನಂತ ಸುಖವನ್ನನುಭವಿಸಿ, ಆಯುರವಸಾನದಲ್ಲಿ ಕುಣಿಕನೆಂಬ ರಾಜನಿಗೂ ಶ್ರೀಮತಿಗೂ ಶ್ರೇಣಿಕನೆಂಬ ಹೆಸರಿನಿಂದ ನೀನು ಈಗ ಮಗನಾಗಿ ಜನಿಸಿರುವೆ. ಮುಂದೆ ನೀನು ನರಕ ದುಃಖವನ್ನನುಭವಿಸಿ, ಮತ್ತೆ ಆದಿತೀರ್ಥಂಕರನಾಗಲಿರುವೆ.

ಈ ಮಾತುಗಳನ್ನು ಕೇಳಿ ದುಗುಡದಿಂದಲೂ, ಸಂತೋಷದಿಂದಲೂ ಕೂಡಿದವನಾಗಿ ಶ್ರೇಣಿಕ ಮಹಾರಾಜನು ನಿಜರಾಜಧಾನಿಗೆ ಮಹಾ ವಿಭವದಿಂದ ಹೋದನು. ಇತ್ತ ಮೂವತ್ತು ವರ್ಷಗಳ ವರೆಗೆ ತೀರ್ಥಕರನು ವಿಹಾರಿಸುತ್ತ, ಒಮ್ಮೆ ಪಾವಾಪುರದ ಬಹಿರುದ್ಯಾನಕ್ಕೆ ಬಂದನು. ಅಲ್ಲಿ ಸಮವಸರಣವನ್ನು ವಿಸರ್ಜಿಸಿ, ಒಂದು ಶಿಲಾಪಟ್ಟಕದ ಮೇಲೆ ಪ್ರತಿಮಾಯೋಗದಿಂದ ನಿಂತನು. ಕೊನೆಗೆ—

ಧ್ಯಾನಮಣಿಪ್ರದೀಪದಿನಘಾತಿಮಳೌಘ ಮಹಾಂಧಕಾರ ಸಂ।
ತಾನಮನೆಯ್ದೆ ತೂಳ್ದಿನೆಗಬ್ದಿಷ್ಟಗುಣಂಗಳ ಪುಷ್ಟಿ ತನ್ನೊಳ್॥
ನ್ಯೂನಮದಾಗೆ ಬೇಗದೆ ಜಗತ್ತ್ರಿತಯಾಗ್ರಮನೆಯ್ದಿ ಮೋಕ್ಷಲ।
ಕ್ಷ್ಮೀನಿಧಿಯಾದನಾ ಪರಮಪಾವನ ಸನ್ಮತಿ ತೀರ್ಥನಾಯಕಂ॥

ವೀರಭಟ್ಟಾರಕನು ನಿರ್ವಾಣಪದವಿಗೆ ಹೋದುದನ್ನು ತಿಳಿದು, ಇಂದ್ರನು ಚತುರ್ನಿಕಾಯಾಮರಸಮಿತಿ ಸಮೇತನಾಗಿ ಬಂದು, ಕೊನೆಯದಾದ ಜಿನಪರಿನಿರ್ವಾಣ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿದನು. ಅನಂತರ ಕರಕಮಲವನ್ನು ಮುಗಿದು ಇಂದ್ರನು ಹೀಗೆ ಸ್ತೋತ್ರ ಮಾಡಿದನು:—

ಹರಿಯಾದೈ ದೇವನಾದೈ ಖಚರರಮಣನಾದೈ ಮರುನ್ಮುಖ್ಯನಾದೈ।
ಹರಿಷೇಣಾಭಿಖ್ಯನಾದೈ ತ್ರಿದಿವಜನಿತನಾದೈ ಸುಚಕ್ರೇಶನಾದೈ॥
ಸುರನಾದೈ ನಂದನಾದೈ ಕ್ಷಿತಿತಳಪತಿಯಾದೈ ನಿಳಿಂಪೇಶನಾದೈ।
ವರವೀರಸ್ವಾಮಿಯಾದೈ ಬಳಿಕ ಶಿವಗತಿ ಶ್ರೀಶನಾದೈ ಮಹಾತ್ಮಾ॥

ಹೀಗೆ ಸ್ತುತಿಮಾಡಿ ದೇವೇಂದ್ರನು ದೇವಲೋಕಕ್ಕೆ ಹೋದನು. ಸಕಲ ವಿನೇಯ ಜನರು ಕೃತಾರ್ಥರಾಗಿ ತಮ್ಮತಮ್ಮ ದೇಶಗಳಿಗೆ ತೆರಳಿದರು.

[ಈ ಪುರಾಣದಲ್ಲಿ ಬರುವ ಭವಾವಳಿಯ ಕಥೆಗಳು ಬಹು ತೊಡಕಿನವಾಗಿರುವುದರಿಂದ, ಅವನ್ನು ಸುಲಭವಾಗಿ ತಿಳಿಯಲು ಚಾವುಂಡರಾಯಪುರಾಣದಲ್ಲಿ ಅಡಕವಾಗಿರುವ ಶ್ರೀವರ್ಧಮಾನ ಪುರಾಣದ ಕಥಾಭಾಗವನ್ನು ನೋಡಿಕೊಳ್ಳುವುದು.]

ಶ್ರೀ

ಶ್ರೀನಿವಾಸಾಯನಮಃ

ಶ್ರೀವೀತರಾಗಾಯನಮಃ

ಶ್ರೀ ಪಂಚಗುರುಭ್ಯೋನಮಃ.

ವರ್ಧಮಾನ ಪುರಾಣಮ್.

ವಾಣೀವಲ್ಲಭ ವಿರಚಿತಮ್

ನಮಸ್ಸಿದ್ಧೇಭ್ಯ :—

ಶಾ॥ ಶ್ರೀಮಚ್ಚಾಮರ ಸಿಂಹವಿಷ್ಟರ ವರಚ್ಛತ್ರತ್ರಯಾಶೋಕ ದಿ ।
ವ್ಯಾಮೇಯ ಧ್ವನಿ ಪುಷ್ಪವೃಷ್ಟಿ ಸುರಭೇರೀ ಭೂರಿ ಭಾಮಂಡಳ ॥
ಸ್ತೋಮಂ ಭಾಸ್ವದನಂತಬೋಧ ಬಳ ದೃಕ್ಸೌಖ್ಯತ್ವ ಲಕ್ಷ್ಮೀಸಮು ।
ದ್ದಾಮಂ ಮಾಳ್ಕುಮಗಳ್ಕುರಿಂದೆ ಶುಭಮಂ ಶ್ರೀವರ್ಧಮಾನಂ ಜಿನಂ ॥ (೧)

ಚಂ॥ ಅತನುವನೋವದಪ್ಪಳಿಸಿ ಮೋಹನಸಾಹಸಮಂ ಕಳಲ್ಚಿ ದುಃ ।
ಕೃತ ಖಳಸೇನೆಯಂ ತವಿಸಿ ವಿಶ್ವಗುಣೋಜ್ಜ್ವಳ ರತ್ನಕೋಶದೀ ॥
ಶತೆಪಡೆದಪ್ರತರ್ಕ್ಯಮಹಿಮೋದಯಮಂ ತಳೆದಿರ್ದ ಸಿದ್ಧಸಂ ।
ತತಿ ನಮಗೀಗೆ ಸಿದ್ಧಿರಮಣೀ ರಮಣೀಯ ನಿವಾಸ [ವಾಸ] ಮಂ ॥ (೨)

ಮ॥ ಸ್ರ॥ವರಪಂಚಾಚಾರ ಚಂಚತ್ಕುಳಿಸದೆ ಮದನೋದ್ಯತ್ಪ್ರತಾಪೋಚ್ಚಧಾತ್ರೀ ।
ಧರಮಂ ಮುಂನುರ್ಚು(ನೂ) ಬಿಪ್ಪಿನಮೊಡೆದು ತಪಃಪ್ರಾಜ್ಯ ಸಾಮ್ರಾಜ್ಯಲಕ್ಷ್ಮೀ॥
ಪರಿರಂಭ ಪ್ರಾಪ್ತಿಯಿಂದಂ ಪ್ರತಿದಿನಮಧಿಕಾನಂದಮಂ ತಾಳ್ದಿದಾಶಾಂ ।
ಬರಮುಖ್ಯರ್ ಮಾಳ್ಕೆ ಶುದ್ಧಾಚರಣಮನೆಮಗಾಚಾರ್ಯರಾಚಾರವರ್ಯರ್ ॥

ಇದು ಸಂಸಾರಸ್ವರೂಪಂ ಪರಿಕಿಪೊಡಿದು ಮುಕ್ತಿಸ್ವರೂಪಂ ದಲೆಂದ ।
ಗ್ಗದ ಸತ್ಯಾಧಿಷ್ಠಿತ ಶ್ರೀಜಿನ ವಚನದೊಳಿರ್ದಂದಮಂ ಪ್ರೀತಿಯಿಂ ತ ॥
ಪ್ಪದೆ ನಾನಾಜೀವಜಾಳಕ್ಕನುದಿನಮುಪದೇಶಂಗೆಯುತ್ತಿರ್ಪ ಸೌಜ ।
ನ್ಯದಯಾಂಭೋರಾಶಿಗಳ್ ಸುಶ್ರುತಜಳಧಿಗಳಂ ಮಾಳ್ಕುಪಾಧ್ಯಾಯರೆಮ್ಮಂ ॥ (೪)

ಚಂ॥ ಸಮರಸಭಾವಭಾವನೆಯೆ ಭಾವಮನಾವರಿಸಿತ್ತು ಮತ್ತೆ ಸಂ ।
ಯಮಗುಣಶೀಲಸಂತತಿ ಸಮಂತತಿ ಶೋಭೆಯನಾಂತುದಿನ್ನರಾ ॥
ರಮಮ ಸಮಸ್ತ ಭೂತಳದೊಳೆಂಬ ಸಮಾಖ್ಯೆಗೆ (ಸಂ) ದ ಸಾಧುಗಳ್ ।
ವಿಮಳಯಶೋನಿಧಾನರೆಮಗೀಗೆ ನಿಜೋತ್ತಮಸಾಧುವೃತ್ತಿಯಂ ॥ (೫)

ಚಂ॥ ಪರಮ ಜಿನೇಂದ್ರಬೋಧ ಹಿಮವನ್ನಗಜಾತೆಯನೇಕ ಭಂಗಭಂ।
ಗುರವಿಸರತ್ತರಂಗೆಯ ನಿಯೋಗ ಸಮು (ಜ್ಜ್ವಳಘೇ) ನ ಸಂತತ॥
ಸ್ಫುರಿತ ನಯಪ್ರಮಾಣ ಘನಘೋಷ ಲಸದ್ವಚನಾಮೃತಾಂಬು ಸ।
ದ್ಭರಿತೆ ಸರಸ್ವತೀ ಸುರತರಂಗಿಣಿ ಮನ್ಮತಿಗೀಗೆ ಸಿದ್ಧಿಯಂ॥ (೬)

ಕಂ॥ ಶ್ರೀ ಸಿದ್ಧಾಯಿನಿ ಯಕ್ಷಿಸು।
ರಾಸುರ ನರಖಚರನಿಚಯಕೀರ್ತಿತೆ ಭುವನೋ॥
ದ್ಭಾಸಿತೆ ಮತ್ಕೃತಿಗತುಳ ವಿ।
ಳಾಸವಿಕಾಸಂಗಳಂ ನಿಮಿರ್ಚುಗೆ ಸತತಂ॥ (೭)

ಧರ್ಮವಿರೋಧಿಗಳಂ ದು।
ಷ್ಕರ್ಮಪಯೋಧಿಗಳನಧಿಕಬಲನತಾಧಿಗಳಂ॥
ನಿರ್ಮೂಳಿಸುಗೆ ಗಜೇಂದ್ರಂ।
ಪೆರ್ಮೆಯ ಯಕ್ಷಂ ಜಿನೇಂದ್ರಮತಕೃತಿ ಪಕ್ಷಂ॥ (೮)

ಗೌತಮನಂ ಗತನತಜನ।
ತಾತಮನಂ ಸಕಲಲೋಕವರ್ತಿತ ಕೀರ್ತಿ॥
ಶ್ರೀತಮನಂ ಬಂದಿಸುವೆಂ।
ಪ್ರೀತಮನಂ ನಿಖಿಲ ಗಣಧರೌಘೋತ್ತಮನಂ॥ (೯)

ಶರಣಕ್ಕೆಮಗೆಂದುಂ ಭಾ।
ಸುರತರ ಭೂತಬಲಿ ಪುಷ್ಪದಂತಾಖ್ಯರ ಸ॥
ಚ್ಚರಣಸರಸಿರುಹಯುಗಳಂ।
ವರಭವ್ಯಮಧುವ್ರತೋತ್ಕರ ಪ್ರೀತಿಕರಂ॥ (೧೦)

ಚಂ॥ ವಿಮಳಕಳಾವಿಳಾಸದಧಿಕತ್ವಮನಾಂತು ದಿಗಂಬರ ವ್ರತಾ।
ನಮನನುರಾಗದಿಂ ಬೆಳಗಿ ತೋಳ್ದು ಕುಮಾರ್ಗತಮಃ ಸಮೂಹಮಂ॥
ಪ್ರಮುದಮನಿತ್ತು ಸತ್ಕುವಳಯಕ್ಕೆ ಜಗನ್ನುತ ಗೃಧ್ರಪಿಂಛ ಸಂ।
ಯಮಿವರನಿಂದುಮಂಡಳದವೋಲೆಸೆದಂ ನಿಸದಂ ಧರಿತ್ರಿಯೊಳ್॥ (೧೧)

ಕೃತಜಿನಮಾರ್ಗವಾರಿಜವಿನಿದ್ರನನುಜ್ಜ್ವಳ ಕೀರ್ತಿಭದ್ರನಂ।
ವಿತತ ದಯಾಸಮುದ್ರನಶೇಷ ಜನಸ್ತುತ ಶೀಲಮುದ್ರನಂ॥
ಗತಮಕರಧ್ವಜೇಭರಿಪುರೌದ್ರನನಪ್ರತಿಮಾಂಕರೌದ್ರನಂ।
ಯತಿಪ ಸಮಂತಭದ್ರನನಿಕಾ (ವರ್ಣಯಂ) ನಲವಿಂದೆ ಕೀರ್ತಿಕುಂ॥ (೧೨)

ಮನಪೊಲವಿಂದೆ ಬಂದಿಸುವುದುರ್ವ್ವರೆ ಲಬ್ಧಜಿನಪ್ರಸಾದನಂ।
ಮುನಿವಿಹಿತಪ್ರಮೋದನನಕೀಣ ವಿನೂತಕಳಾ ವಿನೋದನಂ॥
ಕುನಯುಸಿಕಾಯ ಭೇದನನವಾತ್ತ ವಿಷಾದನನಪ್ರಮಾದನಂ।
ಜನಪತಿ ಪೂಜ್ಯಪಾದನನನೂನ (ಗುಣಾಂ) ಬುಧಿ ಪೂಜ್ಯಪಾದನಂ॥ (೧೩)

ಕಂ॥ ಕುನಯಾಚಳ ಶತ ಶತಧಾ।
ರನ ಧೀರನ ಕೃತಪರೋಪಕಾರನ ಗತಶಂ॥
ಕನ ನೆಗೞ್ದಕಳಂಕನ ದೇ।
ವನಪಾವನ ಪದಪಯೋಜಮೀಗೆಮಗೊಳ್ಪಂ॥ (೧೪)

ಮಾನಧನಂ ವಿಳಸಿತ ವಿ।
ದ್ಯಾನಿಳಯಂ, ವಿಮಳಚಿತ್ತನಮಳ ಚರಿತ್ರಂ॥
ಭೂನುತಮೆನಿಸುವ ಕವಿಸಂ।
ತಾನಂ ತಾ (ನಿಂ) ಪ್ರಸನ್ನಮಕ್ಕೆಮಗೆಂದುಂ॥ (೧೫)

ಚಂ॥ ನಿರತಿಶಯಾರ್ಥ ಸಾರ್ಥಮಿವೆನಿಪ್ಪಿನಮೊಪ್ಪುವನೇಕಕಾವ್ಯಮಂ।
ಪರಹಿತಮಾಗೆ ರಾಗದೆ ವಿನಿರ್ಮಿಸಿ ನಿರ್ಮಳ ಕೀರ್ತಿಯಂ ದಿಗಂ॥
ಬರಧರಣೀತಳಾವಳಿಯೊಳಾದಮ ಪರ್ವಿಸಿದಾ ಕವೀಂದ್ರರಂ।
ವಿರಹಿತ ತಂದ್ರರಂ ಪೊಗೞದಂಗೆ ತದಾಶ್ರಿತವಾಣಿ ಕೂರ್ಪಳೇ॥ (೧೬)

ಕಂ॥ ಕರಮೆಸೆವ ಕಾವ್ಯಮುಕುರಮೊ।
ಳಿರದೆ ಚಿರಂತನರನೇಗಳುಂ ತೋಱುವರೀ॥
ಧರೆಯೊಳ್ ಸಮರ್ಥರೇನ।
ಲ್ಲರೆ ಪೇೞ್ ಸತ್ಕವಿಗಳವರ್ಗಳಂ ಮೆಚ್ಚದರಾರ್॥ (೧೭)

ಉ॥ ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾ ಜಗ।
ತ್ಪಾವನ ನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ॥
ಭಾವಕ ಚಕ್ರಿ ಹೊನ್ನಿಗನಿಳಾನುತ ರನ್ನಿಗನಗ್ಗದಗ್ಗಳಂ।
ಧೀವಿಭು ಬೊಪ್ಪನೆಂಬ ಕವಿದರ್ಶಕರಿಂದೆಸೆದತ್ತು ಭೂತಳಂ॥ (೧೮)

ಕಂ॥ ವಚನರುಚಿನಿಚಯದಿಂದಂ।
ಸುಚತುರ ಕವಿರವಿಗಳಖಿಳ ಚೇತೋಗಗನ॥
ಪ್ರಚುರ ತಮಸ್ತಿಮಿರಮನಳ।
ಱ ಚಳಿಯಿಸಲ್ ನೆಱಗುಮುಬ್ಬಿದವರ್ ಸೆಱದಪರೇ॥ (೧೯)

ಖಳತತಿಯೊಳಿತರ ಕೃತಿನುತಿ।
ಗಳನಾರಯ್ವಂದಮೆಂತುಟೆಂದಪವಿತತೋ॥
ಪಳದೊಳ್ ವಿಕಸಿತಮೆನಿಸುವ।
ನಳಿನಮನಾರಯ್ವ ತೆಱನೆ ಪೆಱತಾದಪುದೇ॥ (೨೦)

ಮ॥ ಸದಳಂಕಾರದಗಾರಮುದ್ವರಸಭಾವಾನೀಕದೋಕಂ ಸದ ।
ರ್ಥದ ಸಾರ್ಥಂ ವರಶಬ್ದವೃಂದದ ವಿರಾಜನ್ಮಂದಿರಂ ನಾಡೆಯುಂ ॥
ಮೃದುಸಂದರ್ಭದ ಗರ್ಭಮಿಂತಿದೆನಿಸಲ್ ಸಾಲ್ದಿರ್ದ ಕಾವ್ಯಂ ಸಭಾ ।
ಸದರಂತಃಕರಣಕ್ಕದೇಂ ಕಱಿಯದೇ ಸೌಖ್ಯಾಮೃತಾಸಾರಮಂ ॥ (೨೧)

ಉ॥ ಶ್ರೀ ಕರಣಾಗ್ರಗಣ್ಯನಭಿಮಾನಿ ಜಿನೇಂದ್ರ ಮತಾಬ್ಜ[ಭಾ]ನು ಪು ।
ಣ್ಯಾಕರನರ್ಥಿಕಲ್ಪತರು ಭೋಗಪುರಂದರನಂಗಜೋಪಮಂ ॥
ಭೀಕರವೈರಿ ವಾರಣವಿದಾರಣಕೇಸರಿ ಸತ್ಕಳಾಢ್ಯನ ।
ಸ್ತೋಕಯಶೋರ್ಥಿ ರೇಚವಿಭು ರಂಜಿಸಿದಂ ವಸುಧೈಕಬಾಂಧವಂ ॥ (೨೨)

ಮಿಕ್ಕಸುದಾನಿ ರೇಚಣ ಚಮೂಪತಿಯರ್ತಿಥಿಸೆ ಕೇಶಿರಾಜನಾ ।
ತೆಕ್ಕಣ ಚಾವಣರ್ ಬೆರಸುಪಕ್ರಮಿಸಿರ್ದುದನೆಯ್ದೆ ಪೇೞ್ದ ಲೋ ॥
ಕಕ್ಕನುರಾಗಮಂ ಜನಿಯಿಸಣ್ಣ ಮನೋಮುದದಿಂದಮೆಂದು ಸಂ ।
ದಕ್ಕರ ಜಾಣರಾಗ್ರಹಿಸೆ ವೀರಜಿನೇಶ್ವರ ಚಾರುಕಾವ್ಯಮಂ ॥ (೨೩)

ಶಾ॥ ಭಾರದ್ವಾಜ ಪವಿತ್ರಗೋತ್ರತಿಳಕಂ ಶ್ರೀ ಕೇಶಿರಾಜಾತ್ಮಜಂ ।
ಸಾರೋದಾರ ಪವಿತ್ರತಾದಿ ಗುಣಭೃನ್ಮಲ್ಲಾಂಬಿಕಾನಂದನಂ ॥
ತಾರೇಶೋಜ್ಜ್ವಳ ಕೀರ್ತಿ ಜೈನರುಚಿ ವಾಣೀವಲ್ಲಭಂ ನಿರ್ಮಳಾ ।
ಚಾರಂ ನಿರ್ಮಿಸಿ ಪೆರ್ಮೆವೆತ್ತನೊಲವಿಂದಾಚಣ್ಣನೀಧಾತ್ರಿಯೊಳ್ ॥ (೨೪)

ಚಂ॥ ಗಣಧರರಿಂ ಬಹುಶ್ರುತರಿನಾದಮ ವರ್ಣಿತಮಾದುದಂದಾ ಜಗ ।
ತ್ಪ್ರಣುತಮನೊಲ್ದು ವೀರಜಿನಚಾರುಚರಿತ್ರಮನಾತ್ಮಶಕ್ತಿಯಂ ॥
ಗಣಿಯಿಸದಲ್ಪಧೀಧನನನಾನಭಿವರ್ಣಿಸಿದಪ್ಪೆನಾಜಿನಾ ।
ಗ್ರಣಿಯ ಪದಾರವಿಂದಯುಗಭಕ್ತಿಸುಧಾನುಭಕ್ತಿಯಿಂ ॥ (೨೫)

ನುತಜಿನನಾಥ ದಿವ್ಯರವನಂದನಜಂ ಶ್ರುತಕಲ್ಪಭೂರುಹಂ ।
ಚತುರನಿಯೋಗ ಚಾರುಚತುರುನ್ನತ ಶಾಖೆಗಳಿಂ ವಿರಾಜಿಕುಂ ॥
ಪ್ರತಿದಿನಮಲ್ಲಿ ಸನ್ಮತಿಯ ಸತ್ಕಥೆ ತಾಂ ಪ್ರಥಮಾನುಯೋಗಮೆಂ ।
ಬತಿಶಯ ಶಾಖೆಗಾದುದುಪಶೋಭಿ ವಿಬುಧೇಷ್ಟ ಫಲಪ್ರದಾಯಕಂ ॥ (೨೬)

ವ॥ ಅದೆಂತೆನೆ—

ಮ॥ಸ್ರ॥ ಜಿನಬೋಧಾಗಾರ ತೋಯಾಶಯದ ನಡುವೆ ಸರ್ವಾಂತರಿಕ್ಷಂ ಸರೋಜಾ ।
ತನಿಭಂ ವಿಭ್ರಾಜಿಕುಂ ಮತ್ತದಱ ನಡುವೆ ಸತ್ಕರ್ಣಿಕಾಕಾರಮಂ ನೆ ॥
ಟ್ಟನೆ ತಾಳ್ದಿರ್ಕುಂ ತ್ರಿಲೋಕಂ ತ್ರಿಪವನಸುಪರಾಗಾವೃತಂ ಚೇತನಾಚೇ ।
ತನಷಡ್ದ್ರವ್ಯೋರುಬೀಜಂ ಸಹಜಪರಿಣತಿ ಸ್ವಾ[ರಬಂ]ಧಾನುಬಂಧಂ ॥ (೨೭)

ಶಾ॥ ಆಲೋಕತ್ರಯ ಲಕ್ಷ್ಮಿಗಾದ ವಿಳಸನ್ಮಧ್ಯ ಪ್ರದೇಶಂಬೊಲೇಂ ।
ಲೀಲಾಲಂಬನಮಾಯ್ತು ತಿರ್ಯಗಭಿಧಾನಂ ಲೋಕಮಸ್ತೋಕ ಸ ॥
ದ್ವೀಳಾಲಂಕೃತ ವಾರಿರಾಶಿವಿಪುಳ ದ್ವೀಪಾವಳೀವೃತ್ತ ಶೋ ।
ಭಾಲಕ್ಷ್ಮಿಂ ನಯನ ಪ್ರಮೋದಕರ ಜಂಬೂದ್ವೀಪನಾಭೀಸ್ಥಳಂ ॥ (೨೮)

ವ॥ ಅಂತಾಶ್ಚರ್ಯಕರಮಾದ ತಿರ್ಯಗ್ಲೋಕದ ನಡುವೆ—

ಕಂ॥ ಮದನನವೋಲ್ ಮಕರಾಂಕಂ ।
ತ್ರಿದಶಾಧೀಶ್ವರನವೋಲ್ ಸವಜ್ರಂ ಸ್ತ್ರೀವ ॥
ಕ್ಷದವೋಲ್ ಸಪಯೋಧರಮೆನಿ ।
ಪುದು ಲವಣಸಮುದ್ರಮುಚ್ಚಳದ್ರುವರೌದ್ರಂ ॥ (೨೯)

ನೆಗಳ್ದಾ ಜಳನಿಧಿ ಬಳಸಿರೆ ।
ಸೊಗಯಿಸುಗುಂ ಸುಪ್ರಸಿದ್ಧ ಜಂಬೂದ್ವೀಪಂ ॥
ಸ್ವಗತಾಶೇಷಕುಳಾಚಳ ।
ಸುಗಭೀರ ಮಹಾನದೀ ಬಹುಕ್ಷೇತ್ರಕುಳಂ ॥ (೩೦)

ತನ್ಮಧ್ಯದೊಳಿರ್ಪುದು ವಿಳ ।
ಸನ್ಮಣಿಮಯ ಶಿಖರಚುಂಬಿತಾದ್ಯತ್ರಿದಿವಂ ॥
ಮನ್ಮಥಮದಭಂಜನ ಜಿನ ।
ಜನ್ಮಾಭಿಷವಾನುಕೂಲಮನಿಮಿಷಶೈಳಂ ॥ (೩೧)

ವ॥ ಆ ಕ್ಷೋಣೀಧರವರದ ದಕ್ಷಿಣದಿಶಾಭಾಗದಲ್ಲಿ—

ಕಂ॥ ಭರತ ಮಹೀಕಾಂತೆಯ ಭಾ ।
ಸುರಮುಖಸರಸೀರುಹಮೆನಿಸಿ ರಂಜಿಸುತಿರ್ಕುಂ ॥
ವರವಿಷಯಂ ಮಗಧಾಖ್ಯಂ ।
ಸ್ಮರವಿಷಯಂ ಸಕಳಮಂಗಳೋತ್ಕರ ವಿಷಯಂ ॥ (೩೨)

ಮ॥ ಅದನೇವಣ್ಣಿಪೆನೆಲ್ಲಿನೋಡಿದೊಡಮುದ್ಯಾನಂಗಳೆತ್ತೆತ್ತ ನೋ ।
ಡಿದೊಡಂ ತಣ್ಬುಳಿಲೆಲ್ಲಿ ನೋಡಿದೊಡಮಾವಾಳಂಗಳೆತ್ತೆತ್ತ ನೋ ॥
ಡಿದೊಡಂ ಪೂಗೊಳನೆಲ್ಲಿನೋಡಿದೊಡಮಿಕ್ಷುಕ್ಷೇತ್ರಮೆತ್ತೆತ್ತ ನೋ ।
ಡಿದೊಡಂ ಶಾಲಿವನಂಗಳಲ್ಲದ ನೆಲಂ ಬೇಜಿಲ್ಲ ಕಾಲೂಜಿರಲ್ ॥ (೩೩)

ವ॥ ಮತ್ತಂ

ಕಂ॥ ಕರಿವದನ ಗುಹೋರಗ ಬಂ ।
ಧುರ ಕಟಕ ಶಿವಾನ್ವಿತಂಗಳಾದುದಱಿಂ ತ ॥
ದ್ಗಿರಿನಿಕರಂಗಳ್ ಭಾವಿಸೆ ।
ಗಿರೀಶತಯನಾಂತುವೆಂಬುದೊಂದಚ್ಚರಿಯೇ ॥ (೩೪)

ಕಂ॥ ಜನಪದದ ಚೆಲ್ವನೀಕ್ಷಿಸೆ ।
ನೆನುತೆಯ್ತಂದಮೃತವಾರ್ಧಿ ಬಱಸುಱುಪದಿಂ ಭೋ ॥
ರೆನೆ ಪರಿಯುತ್ತಿರ್ದಪುದೆಂ।
ಬಿನಮುಮುಳಿನ ನವಿಗಳೆಸೆವುವದಱೊಳ್ ಪಲವುಂ ॥ (೩೫)

ಅಮರಾವತಿ ತದ್ಭೂತಳ ।
ದ ಮೇಲೆ ಸಲ್ಲೀಲೆನೆತ್ತು ಪಲವುಂರೂಪಿಂ ॥
ದಮೆ ನಿಂದುದೆಂಬ ತೆಱದಿಂ ।
ದಮೆಸೆವುವಂತಲ್ಲಿ ಸಂತತಂ ನಗರಂಗಳ್ ॥ (೩೬)

ವ॥ ಅಂತುಮಲ್ಲದೆ—

ಕಂ॥ ಧಾರಿಣಿಗೆ ದಿವಂಗಳನಾ ।
ಧಾರಂಗಳ್ ಗಗನದಿಂದೆ ಬಿಟ್ಟುವೆನಿಪ್ಪಂ ॥
ತಾರುಚಿರ ದೇಶದೂರ್ಗಳ್ ।
ಭೂರಿತರ ಶ್ರೀಯನಾಂತು ನಿಂದುವು ಪಲವುಂ ॥ (೩೭)

ವ॥ ಮತ್ತಮಲ್ಲಿ—

ಕಂ॥ ಎಳೆಯಂ ಪರ್ವಿದ ವಿಷಯಾ ।
ಧ್ವಳತಿಕೆಗಲ್ಲಲ್ಲಿಗೊಗೆವ ಫಳಮೆನಿಸಿದುವಾ ॥
ಕುಳ ಸುರಭಿಮಯ ರಸಾಮೃತ ।
ಕಳತಂಗಳ್ ಕಾಂಚನಪ್ರಸಾಕೂಟಂ[ಗಳ್] ॥ (೩೮)

ಚಂ॥ ಕಳಶಮನಾಗಳೆತ್ತುವುಮಾರ್ದ್ದಿಸೆ ತೋಳ್ದಱಿಂ ಮನೋಱನಾ ।
ಗಳೆ ಜಲಧಾರೆಗೆತ್ತು ನಖವೀಥಿತಿರೇಖೆಗೆ ಕಯ್ಯನೊಡ್ಡುವಾ ॥
ಕುಳತೆಯನಾ ಪ್ರಪಾಂಗನೆಯರೀಕ್ಷಿಸಿ ಪಾಂಥರಮೇಲೆ ಲೋಚನಾಂ ।
ಚಳದೊಳೆ[ಬೀಸು]ತುಂ ತಳವರುಚ್ಚಳಿತ ಸ್ಮಿತವಾರಿಬಿಂದುವಂ ॥ (೩೯)

ವ॥ ಮತ್ತಮಾವಿಷಯದೊಳ್—

ಉ॥ ಕೈರವವಾರಿಜಂಗಳಲರಂ ತಿಱಿದಾಡುವ ಭೃಂಗಮಾಲೆಯುಂ ।
ಬಾರಿಸಿ ಕಾಲಕರ್ಮುಡುಗಳೊಳ್ ಸೆಲನಂ ನಡೆ ನೋಟ್ಟಿ ಭೂಷಿಕಾ ॥
ಕಾರದ ಪಾಮುಱಿವಿತತಿ ಮಾರ್ಪೊಳೆವೀಕ್ಷಣದಿಂ ನಿಜಾಸ್ಯ[ಮುಂ] ।
ತೋರಗುರುಳ್ಗಳಿಂ ಪಡೆವುದೊಪ್ಪಮನಲ್ಲಿಗೆ ಮುನ್ನಿನಂದದಿಂ । (೪೦)

ಕಂ॥ ಕೂರೆಲೆಗಳ ಬಾಯ್ದಾರೆಗೆ।
ಕೋರೈಸಿ ಮುಸುಂಕಿದಂತೆ ಪರಿಕಾಲ್ಗಳ ಪಂ।
ಕೇರುಹ ಕಜದೊಳ್ ಪೊರೆದು ಸ।
ಮೀರಂ ನವಗಂಧಶಾಳಿ ವನದೊಳ್ ಸುೞಗುಂ॥ (೪೧)

ಚಂ॥ ಮಿಳಿರ್ವೆಲೆಪಕ್ಕದಂತರುಣಿಮುತ್ತ್ವದಿನೊಳ್ದನೆ ಕುಂಡದಂತೆ ಕ।
ಣ್ಗೊಳೆ ಗಿಳಿವೆಣ್ಬೊಲಿರ್ದ ಕಳಮಸ್ತಬಕಾಗ್ರಮನೇಱಿ ಪಾಲುಣ॥
ಲ್ಕೆಳಸುವ ರಾಜಕೀರಮನಿದೋಪವಳೊಳ್ ನೆರೆದಪ್ಪುದಾಗದೇ।
ಗಿಳಿಯನಗಲ್ದಲಿಂದಬಲೆ ಪಾಮರಿ ಸೋಯದೆ ನೋಡಿ ಪಿಂಗುವಳ್॥ (೪೨)

ವ॥ ಮತ್ತಮಲ್ಲಿ—

ಮ॥ ಎಲರ್ವೊಯ್ಲಿಂದೊಸರ್ವಿಕ್ಷುಕಾಂಡರಸದಿಂ[ನಾಂ]ದಿಕ್ಕೆ ತವ್ಮ್ಮೆಳ್ಪಳಂ।
ಚಲಿವೊಳ್ಗೊಂಚಲ ಕಾಯೊಳಾರ್ಕುವೆಳನೀರಿಂದಂ ಬನಂಗಳ್ಗುಂ॥
ದಲೆ ನೀರೂಟಮಿದೇಕೆ ಕೆಮ್ಮನೆ ತೋಳಲ್ವತ್ತಿರ್ಪರಿಂತೆಮ್ಮನೆಂ।
ದುಲಿವಂತಿರ್ಪುವು ರಾಟಣಂಗಳಸಕೃದ್ಘೂತ್ಯಘಾಕ್ಷ ಚೀತ್ಕಾರದಿಂ॥ (೪೩)

ಅಲರ್ದಂಭೋರುಹಮೆಂಬ ಕಣ್ಮಲರಿನಾದಂ ನೋಡಿ ನೀಡುಂ ತೃಷಾ।
ಕುಲಿತಶ್ರಾಂತಿ ಸಮೇತಪಾಂಥ ತತಿಯಂ ಕೇಳೀಮರಾಳಾಳಿ ಕೋ॥
ಮಲನಾದಂಗಳನಾತ್ಮ ನಿರ್ಮಳತರಾಂಭಃ ಪಾನಮುಂಮಾಡಿ ಮಿಂ।
ದೊಲವಿಂದಂ ಕರೆವಂತೆ ಕಣ್ಗೊಳಿವುವೆಂದುಂ ತತ್ಸರಸ್ಸಂಕುಳಂ॥ (೪೪)

ಕಂ॥ ಕಳಮಕ್ಷೇತ್ರಂಗಳ ಪರಿ।
ಮಳಕ್ಕೆ ಮಂಡಳಿಸುವಳಿಗಳಿಂದೆಸೆವವಿಯ॥
ತ್ತಳಮಸಿತ ಬಳಾಹಕಮಂ।
ತಳೆದುದಕಾಲದೊಳಮೆಂಬ ಶಂಕೆಯನೀಗುಂ॥ (೪೫)

ಪರಿಕಿಪೊಡಂತಾವಿಷಯಂ।
ನಿರಂತರಂ ಬಂಧುರಾಗರಮಣೀಯಕರಂ॥
ಪರಿಪಾಳಿತ ಘನಶೋಭಾ।
ಕರಂಡಕಂ ಬಂಧುರಾಗರಮಣೀಯಕರಂ॥ (೪೬)

ವ॥ ಮತ್ತಮಾವಿಷಯಂ ವಿಯನ್ಮಂಡಲದಂತೆ ನಿತ್ಯಮಹೋತ್ಸವೋಪೇತಮುಂ, ನಿರ್ವಾಣಪದವಿಯಂತೆ ನಿರ್ವಾದಸೌಖ್ಯಾಭಿರಾಮಮುಂ, ಸಿತಪಕ್ಷಪ್ರಚಾರದಂತೆ ಪ್ರವರ್ಧಮಾನ ಸೋಮೋದಯಮುಂ, ಸುರುಚಿರ ಸರಸೀಸಂತತಿಯಂತೆ ವಿಕಸ ತ್ಕಮಳಾವಭಾಸಿತಮುಂ, ಸಂವತ್ಸರಪ್ರಕರದಂತೆ ವಿಜಯವಿಕ್ರಮ ವಿಭವಪ್ರಭವ ಪಾರ್ಥಿವಾಯತ್ತಮುಂ, ವಲ್ಮೀಕಾನೀಕದಂತೆ ಭಾಸ್ವದ್ಭೋಗಿ ಸಮಾಜವಿರಾಜಿತಮುಂ, ಪ್ರಸಿದ್ಧಕವಿಕೃತಶ್ರವ್ಯಕಾವ್ಯದಂತೆ ಸಮಾಹಿತಾಶೇಷ ಸರಸ[illegible]ರ್ಥ ಸಾರ್ಥ[illegible]ಂ

ಕಾರಮುಂ, ಸಮಾಸಪ್ರಕರಣದಂತೆ ಬಹುವ್ರೀಹಿ ವಿಭ್ರಾಜಿತಮುಂ, ನಿಘಂಟುನಾಮಕ ಶಸ್ತ್ರದಂತೆ ವಿಭಾಸ್ವದ್ವಂಶಶೋಭಾವಿಳಾಸಮುಂ, ವರ್ಷಾಕಾಲೋದಯದಂತೆ ಕಮನೀಯಕರಕಾನನಮುಂ, ಸಮುದ್ರಮಥನದಂತೆ ವಿವಿಧನಾಗಮಂಡಿತಮುಂ, ಮಾರ್ತಂಡಮಂಡಳದಂತೆ ಗೋಜಾಲವಿರಾಜಿತಮುಂ, ಸರಿನ್ನಾಥಸಂತತಿಯಂತೆ ನಾನಾರತ್ನನ್ನವನಾಕರೋಪಶೋಭಿತಮುಂ, ಗ್ರಹಸಮೂಹದಂತೆ ಭಾಸ್ವನ್ಮಂಗಳಸಂಗತಮುಂ, ಭಾಸುರವಾಸವನಿವಾಸದಂತೆ ಸುಧರ್ಮಾವಭಾಸಿತಮುಮೆನಿಪ್ಪುದಂತುಮಲ್ಲದೆಯುಂ —

ಕಂ॥ ಕರಪೀಡನಮುರುಕುಚದೊಳ್ ।
ತರುಣೀಜನ ಮಧ್ಯದೊಳ್ ದರಿದ್ರತೆ ಚಂಚಾ ।
ಪರತೆ ಮುನೀಶ್ವರರೊಳ್ ತಾಂ ।
ದೊರೆಕೊಳ್ಗುಮದಲ್ಲದಿಲ್ಲ ತಜ್ಜನಪದದೊಳ್ ॥ (೪೭)

ಕಂ॥ ಪರಿಕಿಸುವೊಡವಗ್ರಹಮು ।
ದ್ಧುರಸಿಂಧುರ ಬಂಧುರಾಂಗದೊಳ್ ಗುಣಲೋಪಂ ।
ವರಶಬ್ದಶಾಸ್ತ್ರದೊಳ್ ತಾಂ ।
ದೊರೆಕೊಳ್ಗುಮದಲ್ಲದಿಲ್ಲ ತಜ್ಜನಪದದೊಳ್ ॥ (೪೮)

ವ॥ ಅಂತತಿಪ್ರಸಿದ್ಧಮುಂ ಶೋಭಾಸಮೃದ್ಧಮುಮೆನಿಪ ಮಗಧಮಹೀಭಾಗದೊಳ್ —

ಕಂ॥ ಕರಮೆಸೆವುದು ರಾಜಗೃಹಂ ।
ಪುರಮುರುತರ ವಿಭವವಿಜಿತ ಸುರರಾಜಗೃಹಂ ।
ಸುರುಚಿರರಾಜಗೃಹಂ ರಾ ।
ಜರಾಜ ಗೃಹಸದೃಶ ವರವಣಿಗ್ರಾಜಗೃಹಂ ॥ (೪೯)

ಇರೆ ತರತರದಿಂ ತುಱುಗಿದ ।
ಪರಿಗೆಗಳೆಸೆ ದಕ್ಷಿಣೋತ್ತರಾಯಣ ಗತಿಯೊಳ್ ।
ಪರಿವ ರವಿರಥದ ಗಾಲಿಯ ।
ಪರಿಕಣಿಯೆನೆ ಪೊನ್ನಕೋಂಟೆ ಸೊಗಯಿಸಿ ತೋರ್ಕುಂ ॥ (೫೦)

ವ॥ ಆ ಮಹೋದಾರ ಪ್ರಾಕಾರಮಂ ಪರಿವೇಷ್ಟಿಸಿ —

ಕಂ॥ ಶ್ರೀತರುಣೀ ಕೇಳಿಗೃಹಂ ।
ಭೂತಳವಿಭ್ರಾಜಿತಂ ಲಸಜ್ಜೀವನ ವಿ ।
ಖ್ಯಾತಂ ತಾನೆಸೆವುದು ಪರಿ ।
ಖಾತಂ ಪೃಥು ಪುರುಷಸಂಪದಿಂದಾನಮಿತಂ ॥ (೫೧)

ಮ॥ ಪರಿಯೋಜಿಸ್ಸ ಸಮಂ ಪುರಂ ಪುರಮನೊಳ್ಕೊಂಡೋಂಟೆ ಕೋಂಗೋಂಟೆಯುಂ ।
ತರುಷಂಡಂ ತರುಷಂಡಮಂ ಬಿಸುತಟಾಕಂಗಳ್ ತಟಾಕಂಗಳಂ ।
ಪರಿಕಾಲ್ಗಳ್ ಪರಿಕಾಲ್ಗಳಂ ಬೆಳೆದ ಕೆಯ್ಗಳ್ ಕೆಯ್ಗಳಂ ಸುತ್ತಿ ಪಾ ।
ಮರಿಯರ್ ತಳ್ತಿಳಕಿಪ್ಪ ಬೆಳ್ಪನೊಳಕೊಂಡಿರ್ಕುಂ ತದುಪೀಠಕಳಂ ॥ (೫೨)

ಕಂ॥ ಫಲಿತ ಪನಸಾಮ್ರ ಸನ್ನಾ ।
ತುಳಂಗ ದಾಡಿಮ ತಮಾಳ ಪಾಟಳ ಕದಳೀ ।
ತಿಳಕಾಶೋಕಾ ನೋಕಹ ।
ಕುಳಂಗಳಿಂದೆಸೆವುವಲ್ಲಿ ಬಹೂದ್ಯಾನಂ ॥ (೫೩)

ವ॥ ಅಂತುಮಲ್ಲದೆಯುಂ—

ದಿಕ್ಕ್ಯಾಮಿನಿಯರ್ ಕಂಡಂ ।
ದಕ್ಕ್ಯಂ ಕಣ್ಣಿಂಬಳೆಂದು ಧಾತ್ರೀಪುರಶ್ರೀ ।
ಗಿಕ್ಕಿದ ಪಚ್ಚೆಯ ಜವನಿಕೆ ।
ಯಕ್ಕುಮಿದೆನಿಸಿರ್ದುದು ಬಳಸಿದುಪವನಷಂಡಂ ॥ (೫೪)

ಚಂ॥ ಸರಸಫಳಾಳಿ ಭಾರಮನುರಾಗ ಸಮನ್ವಿತಕೀರಮಾತ್ತ ಬಂ ।
ಧುರ ಪಿಕವಾರಮುದ್ಧಮಧುಲಿಟ್ಪರಿವಾರಮಶೇಷ ಸತ್ಕವೀ ।
ಶ್ವರನುತಿಸಾರಮಾಶ್ರಿತ ವಿಯೋಗಿ ಕುಠಾರಮುದಾರಕಂ ಮನೋ ।
ಹರಮೆನಿಕುಂ ವಿಶಾಲಸಹಕಾರ ಮಹೀರುಹವಾನನಾಂತದೊಳ್ ॥ (೫೫)

ಚಂ॥ ನೆನೆದು ತನತ್ತು ಪರ್ವುಗೆಗೆ ಮುನ್ನೆಡೆಗೊಟ್ಟುಪಕಾರಮಂ ದಿನೇ ।
ಶನ ಘನತೀವ್ರರಶ್ಮಿನಿಚಯಂಗಳಿನಾದಮೆ ಬೆಂದ ತನ್ನ ಭೋಂ ।
ಗನೆಯುತಿತಾಪಮಂ ಕಿಡಿಸಲೆಂದು ಸುಧಾಕಳಶಂಗಳಂ ಮನಾಂ ।
ಗನೆ ಕೊಡುವಂತೆ ಕಣ್ಗೆಸೆವುವಲ್ಲಿ ಫಳಾವಳಿ ನಾಳಿಕೇರದಾ ॥ (೫೬)

ಚಂ॥ ವಿರಹಿಗೆ ಶೋಕಭಾರಮನಪಾರಮನಿತ್ತು ಮಶೋಕನಾಮಮಂ ।
ಧರಿಯಿಪ ಪಾಂಗಿದಾವ ತರುಗುಂಟು ವಿಯೋಗಿಜನಸ್ಥರಾಗಮಂ ।
ನೆರದತಿರಾಗಮಂ ತಳೆದ ಪಲ್ಲವವಾನಮುರಕ್ತದುಂಟೆನು ।
ತ್ತುರುಮುದದಿಂದೆ ಕಂತು ಪರಿಕೀರ್ತಿಪಶೋಕಮನೀಜಮೊಪ್ಪುಗುಂ ॥ (೫೭)

ಕಂ॥ ಸಮಳಿನಮಳಿಕುಳಮೆಂದಾ ।
ದಮೆ ತತ್ಸಂಗತಿಯನುಜ್ಜಿದು ಸುಮನಸ್ಸಂತಾ ।
ನಮುನೆಯ್ದಿ ಸತತಮತ್ತ್ಯು ।
ತ್ತಮರಂದದಿನೆಸೆವುವಲ್ಲಿ ಚಂಪಕನಿಕರಂ ॥ (೫೮)

ವ॥ ಮತ್ತಮಾ ನಗರಿಯೊಳ್ —

ಕಂ॥ ಬಿಸುಗದಿರನ ಬೆಂಕೆಗೆ ಸ್ಫೈ ।
ರಿಸವೆ ನಭೋಂಗಣದಿನಿಬಿಡಿಮುಕ್ತಾವಳಿಗಳ್ ಪೊಂ ।
ಜಿಸಿದಾ ಮಣಿಗಾಜವಸರದ ।
ಪೊಸಮುತ್ತಿನ ಸೆವದಿನಿಪ್ಪ್ರಗವಿರುಳಪ್ಪಿಸೆಗಂ । (೫೯)

ಪರಿಪಾರಿಸಿ ಜನಾಕೃತಿಯುಂ ।
ಪುರಲಕ್ಷ್ಮಿಗೆ ನುಡಿದು ತನ್ನ ಸಿರಿಯುಂ ರಚ್ಯಾ ।
ಕರನೋಂತಿರ್ದಪ್ಪುದೆನೆ ರ ।
ತ್ನರಾಶಿಯುಂ ವಿಪಣಿವೀಧಿ ಸೊಗಯಿಸಿ ತೋರ್ಕುಂ । (೬೦)

ಪಳಕಿನ ಕುಟ್ಟಿಮದೊಳ್ ನಖ ।
ವಿಳೋಕನಮುಂ ಕಾಣವೇಡಿ ಕರೆವಪ್ಪುವು ತವಾಂ ।
ಗುಳಿಗಳೆನಿಸಿಮುದು ಸತಿಯರ ।
ಪಳಂಚಿನಂಗುದದ ವಿರುತಿ ಪುರವೀಧಿಗಳೊಳ್ । (೬೧)

ವಿವರಂಗಳಿಂದನೊಗೆವಗು ।
ರುವ ಪೊಗೆ ನಾರಿಜಕೆ ಮೇಲೆ ಮುಸುಕಿದ ಛ್ಯಂಗೀ ।
ನಿವಹದ ಗಜಿ ಗಜಿಗೊಳೆಯೆನೆ ।
ಗವಾಕ್ಷಮುಂಗಜನ ದೊಣಗೆ ತೊಳಲ್ದುನಿಸಿಕರ್ಕುಂ । (೬೨)

ನನೆಗೆಳ್ವವತುಂಬಿ ಗಜಿಯೆನೆ ।
ಕೊನೆನವೆಳಗಿಂ ನಿವಿಡವ ಬಳ್ಳಿವೆಳಗುದ್ದಿರದ ಕಾ ।
ಲೆನೆ ಗಜಿಗಟ್ಟುವುದತನುಗೆ ।
ನನೆಗಟ್ಟುವ ನೆವದೆ ಪುಷ್ಪಲಾವೀನಿವಹಂ । (೬೩)

ಚಂ॥ ಮುಗುಳ್ಗಳ ಮಾಲೆ ಸುಯ್ಯ ನಸುಗಂಪಿನೊಳೆಮುಗಿದಿಂಗಮನಾಗೆ ಪೆ ।
ಣ್ಗುವರೆಳಗಿಂದದಳ್ಗಳ ದಳಂ ದಳವೇಳೆ ಮುದಾಳಿ ಮೆಲ್ಲ ಮೆ ।
ಲ್ಲನೆ ಸುತ್ತಿಗೂಡೆ ಕಂಕಣದ ಸುಗ್ಗದೊಳ್ ಮುಡಿಗಟ್ಟಿ ಕಂತು ಕಾ ।
ದಿಂಗಳನುಸಂಗಳೊಳ್ ಗಣಾದಿಂದಲರ್ಗಟ್ಟುವುದಂಗನಾಜನಂ । (೬೪)

ಜಗಮುಣಿಹಾರದೊಳ್ ತೊಡರ್ದ ತಳಿ ಮಾಗುವ ಕಂದು ಕಂತುಗಿಂ ।
ಮೊಳದ ವಿನೋದಮುಂ ಕುಣೆ ಮನೋಜನಿಹಾದಿಯ ಕಾಂಧಕಂಧದೊಳ್ ।
ತೊಳಗುವ ಪೂಸನಮ್ಮ ದಮುಡಿಸೆ ಮುತ್ತಿಕದಂಡಕಂ ಕ್ಷಣಂ ।
ಗಳೆಗೊಳದಾಡೆ ರೆಗುಡೆ ಪೆಟ್ಟ ಮುಗುಳ್ವುದಂಗನಾಜನಂ । (೬೫)

ಚಂ॥ ಅಗುರುವ ಧೂಪಧೂಮದೊದವಿಂ ದೆಸೆಗಾಣದೆ ಭೃಂಗ್ಯ ಪೌರಜಾ ।
ಮಿಗಲ್ ಕದ್ದೊಳ್ ಕಂಠ ಘಟಿಕಂಟಕ ಜಾಲದೊಳಾಣ್ಪದಂತೆ ಮಿ ।
ಲ್ಲಗೆ ಸಡೆದಲ್ಪ್ರದಳೆ ಸ್ಗನೆಗಳಿಂ ಸುರಿಸಂಗಸಣಾಬಳೆಗೇಧಾ ।
ರೆಗಳೆಸಮೆಂದುಕಾಂತಮನಸಂಬುಸಯುಜ್ಮಗಳಾಗೆ ತಂಬೆಲರ್ ॥ (೬೬)

ಮಸ್ರ॥ ಪ್ರತಿಸರ್ಮ್ಯಂ ಕಾಂತಕಾಂತಾರತಿ ಕಲಹದೊಳಾಂದೊಳ್ ಕೇಳಿಕ್ರಿಯಾ ಸಂ ।
ಗತಿಯೊಳ್ ಸಂಗೀತ ರಂಗಾಂತರದೊಳಮ್ಮತದೊಳಾಃ ಕರಾಳಂಬನಂ ಸು ।
ತ್ರಿಕೊಳಲ್ಪಲ್ಲಿ ಪುಟ್ಟಂ ಕಳೆವುದು ಗಣಿಕಾದ್ವಾರ ಘಂಟಾರವಮಾ ।
ಹತನಿದ್ರಂ ದಕ್ಷಿಣಾಶಾಪಿರಾ ರಜನಿಯೊಳ್ ಮಂದಜಾರಂ ಸಮೀರಂ ॥ (೬೭)

ಉ॥ ಕೋಮಳ ಚಂದ್ರಕಮ್ಯಜನ ಚಿಹ್ನಮಧಿಷ್ಠಿತ ದರ್ಪಣಪ್ರಭಾ ।
ಕೌಮುದಿ ಮಂಚಕಾಂಘ್ರಿಮಣಿ ಪೀಠವಿಳಂಬಿತ ಹಾರತಾರಕಂ ।
ಕಾಮುಕ ಲೋಕಮೊತ್ತೆ ವಿಳಾಸಮನೀವುದು ತದ್ವಿಳಾಸಿನೀ ।
ಧಾಮದೊಳಾಗಸಂ ಧವಳತಲ್ಪ ತಳಾಮಳ ಚಂದ್ರಮಂಡಳಂ ॥ (೬೮)

ಮ॥ ಸ್ರ॥ ಅಳಕಾಸಕ್ತೈಕಪುಷ್ಪಂ ತಿಲಕಶುಕ ಪರಿಪಾಲನ ಪ್ರಫುಲ್ಲೈಕಗಂಡ ।
ಸ್ಥಳ ಮಾದಕಾರ್ತಿಕೈಕಪ್ರಬಮುಖಚತುಮೀವಾಗ್ವಿಲಸೈಕ ಕರ್ಣಂ ।
ಕಳಪಿಕಾಳಂಬಿತೈಕಸ್ತನಮೆಸೆವುದು ಕಾಂತಾಜನಂ ರತ್ನಪೀಠಂ ।
ಗಳೊಳೇಕೈಕಾಂಗಲೀಲಾ ಬಲಮನೆ ರತಿನಾಥಂಗೆ ತೋರ್ಪಂದದಿಂದಂ ॥ (೬೯)

ದ್ರುತವಿಳಂಬಿತಂ॥ ಸಕಳಸಂಗಜ ಮಂದಿರಮಂತೆ ಪ ।
ದ್ಧಿಕವಿಳಾಸಕಂಬ ಮಹತ್ವದಿಂ ।
ಸಕಳಸಂ ಮಣಿಧರ್ಮಮಯುಂ ಪಿರಾ ।
ಜಿಕಾಮನಾರತವಾರ್ಪಿತ ಮಂದಿರಂ ॥ (೭೦)

ಚಂ॥ ಪದಗತಿ ಪಾಪದಕ್ಕರಮನುಗ್ಗಳಿಪಂತಿರೆ ತಾಳಕದೊಳ್ ಗೀ ।
ತದ ಲಯಮಾನಮಂ ಪಡೆವಂತಿರೆ ಭಾವರಸಂ ನಿಜಾಂತರಂ ।
ಗದ ಮಧುರತ್ವಮಂ ಪ್ರಕಟಿಪಂತಿರೆ ರಂಜಿಸಿ ನೃತ್ಯಗೀತ ವಾ ।
ದ್ಯದ ಸುಖಮೇಕರೂಪಮಯುಮಾಯ್ತೆನೆ ನರ್ತಿಸುವಲ್ಲಿ ಕಾಂತೆಯರ್ ॥ (೭೧)

ವ॥ ಮತ್ತಂ—

ಕಂ॥ ಉದಧಿಗೆ ಮೇರುಗೆ ಗಾಂಭೀ ।
ರ್ಯದೊಳುನ್ನತಿಯೊಳ್ ಪಡೆಯುಗುಂ ತದ್ರಾಜಾ ।
ಸ್ಪದದಗಳುಂ ಮದಿಲುಮವಿ ।
ಲ್ಲದಂದು ಸಜ್ಜನತೆಗೆಂತು ನೆಲೆಯಾದವುದೋ ॥ (೭೨)

ಕಂ॥ ಪ್ರತಿಹಾರನೇತ್ರಪುತ್ರಿಕ।
ಮತಿವಿಪುಳ ಕವಾಟ ವಕ್ಷ್ಮದೆಸೆವುದು ರಾಜಾ।
ಯತನಕ್ಕೆ ನೊಸಲ ಕಣ್ಣನಿ।
ಸಿತೇಜಮುಂ ತೆಱೆಯ ಮೆಱೆವ ಪೂರ್ವದ್ವಾರಂ॥ (೭೩)

ಮ॥ಸ್ರ॥ ಕ್ರಮವಿಕ್ಷೇಪ ಕ್ವಣನ್ನೂಪುರ ವಿವರ ಪುರಸ್ಸಾರಿ ಶಿಂಜ್ಞಸ್ವರಂ ಸ್ಮೇ।
ರ ಮುಖೇಂದುದ್ಯೋತ ಜಾತದ್ಯುತಿ ಮಿಲಿತ ಸವಾಲಕ್ತ ರಕ್ತೀಭವ(ತ್ಪ್ರಾ)॥
ದ್ರಮುಪಗಾಪ್ರಾಂಗಣಂ ಭಂಗುರತರಳ ಕಟಾಕ್ಷಾಂತಕೋದೀರ್ಣ ವಿದ್ಯು।
ದ್ಭ್ರಮವಿಭ್ರಾಮ್ಯನ್ಮರಾಳಂ ಸುಟಿವುದು ನೃಪತಿಪ್ರೇಷ್ಯ ಯೋಷಿತ್ಕದಂಬಂ॥

ಕಂ॥ ಎಳವುಲ್ಗೆತ್ತು ಹರಿನ್ಮಣಿ।
ವಳಯಾಂಶುಗೆ ಸಾರ್ದ ದೀವದೆರಲೆಗೆ ಶಶಿಮುಂ।
ದಳದೆರಲೆಯ ಪದವಿಯನಾಕುಳ।
ವಳತ ಕಟಾಕ್ಷರುಚಿಯನಬಲೆಯರೀವರ್॥ (೭೫)

ಅರಸಿಯರ ವಿತತಭವನೋ।
ತ್ಕರಂಗಳಂತವಱ ಬಳಸಿಯೋಲಗಿಸಲ್ ಬಂ॥
ದುರು ಶೈಳಂಗಳವೋಲಿರೆ।
ಗಿರೀಂದ್ರಮೆಂಬಂತಿರಿರ್ದುದಾ ನೃಪಭವನಂ॥ (೭೬)

ಅಭಿಮಾನಿ ಸತ್ಯಭಾಷಣ।
ನಭಿ[ಯಾತವಿಭೀ]ಷಣಂ ಯಶೋಭೂಷಣನ।
ಸ್ತ್ರಭಯಂ ನಯವಿಕ್ರಮಿ ವಿ।
ಶ್ವಭೂತಿ ವಿಶ್ವಂಭರಾಧಿಪತಿಯವನಾಳ್ವಂ॥ (೭೭)

ದಿವಸೇಂದ್ರನಂತೆ ಸತತಂ।
ಭುವನವ್ಯಾಪ್ತಪ್ರತಾಪನಂಭೋನಿಧಿಯಂ।
ತವಿಕಳ ಗಾಂಭೀರ್ಯಯುತಂ।
ಕುವಳಯಪತಿಯಂತೆ ಮತ್ತೆ ಸಾನ್ವತವೃತ್ತಂ। (೭೮)

ದಳಿತ ಲಸತ್ಕುಂದದ್ಯುತಿ।
ಯಳಂಕೃತಾಶೇಷಭುವನಮಿನ್ನೃಪಸಂಯುತಂ।
ಬಳಯಿಪುದರಿನೃಪ ವನಿತೋ।
ಜ್ಜ್ವಳಮುಖ ಚಂದ್ರಂಗೆ ಮಳನತೆಯನಿದುಚಿತ್ರಂ। (೭೯)

ಕಂ॥ ವಿತತಾಶಾಚಕ್ರಮನೆ ।
ದ್ವಿತೀಯತೇಜದೊಳೆ ಸತತಮಾಕ್ರಮಿಪಾಭೂ ॥
ಪತಿಯೊಳ್ ಸಹಸ್ರತೇಜಃ ।
ಪ್ರತಾನದಿಂ ವ್ಯಾಪಿಸರ್ಕನೆಣೆಯೆನಿಸುವನೇ ॥ (೮೦)

ಅರಿಬಾಂಧವದಾನಾರ್ಥಂ ।
ವರಕೋಶದಿನೆಸೆವ ಖಡ್ಗರತ್ನಂಗಳನಾ ॥
ದರದಿಂ ತೆಗೆದು ನರೇಂದ್ರಂ ।
ನಿರುತಂ ಕೋಪಪ್ರಸಾದ ಸಿದ್ಧಿಯನಾಂಪಂ ॥ (೮೧)

ಆತನಮಳಾಂಕಮಾಲೆಯ ।
ನೋತಚ್ಚರಸಿಯರೆ ಪಾಡೆ ಕೇಳ್ವವಸರದೊಳ್ ॥
ಮಾತೇನಿಂದ್ರಂ ತದ್ಗೃಹ ।
ಜಾತಪ್ರತಿಸಿನದತತಿಗೆ ಕರಮೆ ಕಸಲ್ವಂ ॥ (೮೨)

ಚಂ॥ ಅಮಳತರ ಸ್ವಭಾವಸಕಳಂಕಚರಿತ್ರ ವಿರಾಜಿತಂ ಜಿಸಂ ।
ದ್ರಮತಸರೋಜಿನೀ ವಿನುತ ಕೇಳಿಮರಾಳನಶೇಷಸಂಸ್ತುತೋ ॥
ತ್ತಮ ಮಹಿಮಾವಳಂಬನಪದಾತ್ರಯಶೋನಿಧಿ ವೀತಮತ್ಸರಂ ।
ವಿಮಳಗುಣಾಂಬುರಾಶಿಯೆನಿಪಂ ನಿಸದಂ ಕುಸುಮಾಸ್ತ್ರ ಸನ್ನಿಭಂ ॥ (೮೩)

ಕಂ॥ ಪ್ರಜೆಗಳ ಪೆರ್ಚುಗೆಗೆಂದವಿ ।
ಳಜನಾರ್ಥಿತಫಳದ ನಯಸುರದ್ರುಮಮಂ ವಿ ॥
ಶ್ವಜಗನ್ನುತನವನಳನ ಬು ।
ದ್ಧಿಜಳದೆ ಬಳೆಯಿಸಿದನೇನುದಾರನೊ ಭೂಪಂ ॥ (೮೪)

ಆ ವಿಶ್ವಭೂತಿ ಭೂಪನ ।
ದೇವಿ ವಲಂ ಜೈನೆಯೆಂಬಳಾವಧು ವಿಬುಧ ।
ವ್ಯಾವರ್ಣನೀಯರೂಪಗು ।
ಣಾವಳಿಗಳ ಸಿರಿಯ ಸೊಬಗನಾಗರಮೆನಿಪಳ್ ॥ (೮೫)

ಚಂ॥ ನಗೆಯಲರ್ದಿರ್ದ ಪೂವೆಸೆವ ಕಣ್ಬೆಳಗಂತದು ಜೊನ್ನಮಾವಗಂ ।
ಸೊಗಯಿಪ ಕಮ್ರನಪ್ಪುಸಿರೆ ತಂಕಣ ತಣ್ಣೆಲರಿಂಚರಂಕರಂ ॥
ಬಗೆಗೊಳಿಸಿರ್ದ ಕೋಗಿಲೆಯ ನುಣ್ದನಿಯಾಗೆ ಜಗಜ್ಜಯಕ್ಕೆ ತಾಂ ।
ಮಿಗೆನೆರಮೆಂಬನಾಸತಿಯ ಜವ್ವನಮೆಂಬ ವಸಂತಮಂ ಸ್ಮರಂ ॥ (೮೬)

ಕಂ॥ ಆ ಲಲನೆಯುರವಪದು ಜನ ।
ತ್ರಾಲೋಚನ ಮಧುಪತತಿಗೆ ಮಂದಾರದ ಪೂ ॥
ಮಾಲೆಯುವೋಲನವರತಂ ।
ಲೀಲೆಯನಾಗಿಸುವುದೆಂದೊಡಾರ್ ಪೊಗಳದವರ್ ॥ (೮೭)

ಕಂ॥ ತನಗಿಂದ್ರಾಣಿಯೆ ಸರಿ ಗೌರಿ ।
ಮುನಿಯೆ ಸಮಾನಂ ಸರಸ್ವತೀ ದೇವಿಯೆ ನ ॥
ಟ್ಟನೆ ಪಡಿ ರತಿ ರಮಣಿಯೆ ಕೆಣೆ ।
ಯೆನೆ [illegible] ॥ (೮೮)

ರತಿಪತಿಯುಂ ರತಿಯುಂ ಸುರ ।
ಪತಿಯುಂ ತತ್ಸತಿಯುಮಿನಾಪ್ಪಂತಾಭೂ ।
ಪತಿಯುಂ ತತ್ಸ್ವದತಿಯುಮ ।
ನ್ನತಿವಿನೋದತೆಯುಮಾಸ್ತ್ವಿತರ್ ಚಿರಮಿರ್ದರ್ ॥ (೮೯)

ಉ॥ ಇಂತಿವರ್ಗೆ ಪಾರಿಜಾತದ್ರುಮದಂತೆ ಪುಟ್ಟಿದಂ [illegible] ಮಹಾ ।
ನಂದನ ವಿಶ್ವಭೂತಿಗೆ ವಿಶಾಖಭೂತಿ ವಿಶಾಖಭೂತಿಯುಂ ।
[illegible] ।
ಸ್ಪಂದಿತ [illegible] ॥ (೯೦)

ಚಂ॥ ಎನೆ ವಿಶಾಖಭೂತಿಗೆ ನಿಜಾವರಜಂಗೆ ಸಮಸ್ತಧಾತ್ರಿ ಕೀ ।
[illegible] ।
ನಿಸದೆ ವಿಶ್ವಭೂತಿ ವಸುಂಧರಾಪತಿ [illegible] ಭೋ ।
ಗಿಸಿದನ [illegible] ॥ (೯೧)

ಕಂ॥ ಆ ವಿಶ್ವಭೂತಿಗಂ ಜೈ ।
ನೀವನಿತೆಗಮುಂದು ವಿಶ್ವನಂದಿಕುಮಾರಂ ॥
ಭಾವಭವಭಾಸುರಾಂಗಂ ।
ಭೂವಿನುತ [illegible] ॥ (೯೨)

ಕಂ॥ ಮತ್ತಂ ವಿಶಾಖಭೂತಿಗ ।
ಮುತ್ತುಂಗ [illegible] ಲೋ ॥
ಕೋತ್ತಮೆ ಸುಂದರಿಗಂ ಪೆಸ ।
[illegible] ವಿಶಾಖನಂದಿ ನಂದನನಾದಂ ॥ (೯೩)

ಮಲ್ಲಿಕಾಮಾಲೆ ॥ ವಿಶ್ವನಂದಿ ವಿಶಾಖನಂದಿಗಳ [illegible] ಗತಿಕ್ರಿಯಾ ।
ವಿಶ್ವ [illegible] ।
ವಿಶ್ವಭೂತಿ [illegible] ।
ವಿಶ್ವಭೂತಿ ವಿಶಾಖಭೂತಿಗಳ [illegible] ॥ (೯೪)

ಕಂ॥ ವಿನಯಾಳಂಕರಣಂ ಪಾ ।
ವನಚರಿತಂ ನೀತಿನಿಪುಣನಪರಿಮಿತ ಯಶಂ ।
ಘನತೇಜಂ ಶೌರ್ಯಾಂಬುಧಿ ।
ಮಿಸೆಗಿಟ್ಟಂ ವಿಶ್ವನಂದಿ ವಂದಿತಭುವನಂ ॥ (೯೫)

ಮ ಒಂದು ದಿವಸನಾವಿಶ್ವಭೂತಿ ವಿಶ್ವಂಭರಾಧೀಶ್ವರಂ ಸುರೇಶ್ವರನಂತೆ ವಿತತ ವಿಭವ ವಿಭ್ರಾಜಿತಂ, ನಿಜಸಭಾಸದನಮನಲಂಕರಿಸಿರ್ದು —

ಚಂ॥ ಪಡಿದಲೆಯೊರ್ವನಮಿದ ಜರಾರುಜೆಯಿಂ ಶ್ಲಥ ಜೀರ್ಣಮಪ್ಪೊಡಲ್ ।
ಕಡೆವಪ್ಪೊಲಾಗೆ ಬಾಗಿ ಮಿಗೆ ಕೆಮ್ಮಿ ಬಿಳಿಲ್ಪಡಿಗೆವಿಡಿರ್ದು ನಿಂದು ಬಿ ।
ಟ್ಟಡೆಯಿದು ತಪ್ಪನುಪ್ಪಿನ ಜನ್ಮನಮೆಂದಡಸುತ್ತು ಮಿರ್ಪವೊಲ್ ।
ನಡುಗುತುಮಾನತೋನ್ನತಮುಖಂ ಬರುತಿರ್ಪುದುಮಾಗಳಾತನಂ ॥ (೯೬)

ಕಂ॥ ಎವೆಯಿಕ್ಕದೆ ನೋಡುಂ ಪೋ ।
ದಿ ಮನದೊಳೆಂತೆಂದನಕಟ! ಪಂಚೇಂದ್ರಿಯ ಸೌ ।
ಖ್ಯಮನಭಿಲಾಷಿಪ ಜೀವಂ ।
ಭ್ರಮಿಯಿಸುಗುಮಪಾರಘೋರ ಜನ್ಮಾಟವಿಯೊಳ್ ॥ (೯೭)

ಭೂರಿಕ್ಲೇಶಾನ್ವಿತಮವಿ ।
ಚಾರಿತರಮಣೀಯಮುಚಿರವ್ಯಕ್ತಿಯನೇಕಾ ।
ಕಾರಘನ ದುಃಖದಾಯಿಯು ।
ಸಾರಂ ಸಂಸಾರಸೌಖ್ಯಮೆಂತಿದು ಭೋಗ್ಯಂ ॥ (೯೮)

ಜನನ ಜಲನಿಧಿಯೊಳುದಯಿಪ ।
ಘನತರದುಃಖಂಗಳೆನಿತೆಯುಂ ಮಾಣ್ಬನವಾ ।
ವನೊ ಸಾಕಲ್ಯದಿನಾಗಸ ।
ದನಿತುಮಂ ಗಣಿಯೊಳ್ ಕೆಯಲೆಂ ಬಂದಪ್ಪುದೇ ॥ (೯೯)

ವಿಷಯಾಭಿಲಾಷೆಯೆಂಬೀ ।
ವಿಷಮ ಮಹಾನದಿಯ ಸುಳಿಯೊಳೊಯ್ದುಕ್ಕಿಸುವ ಕೆ ।
ಲ್ತೃಷಪತಿಯುಂ ಮೋಹಮಹಾ ।
ವಿಷಧರನಂ ಗೆಲ್ದಂಗಮಲ್ಲಿತ್ತ್ರೋ ಸುಖಂ ॥ (೧೦೦)

ಉರಗನ ದಾಡೆಯೊಳಮೃತಮು ।
ನುರಿವಗ್ನಿಯೊಳಧಿಕ ಶೈತ್ಯಮುಂ ಮೂರ್ಖಸಭಾಂ ।
ತರದೊಳ್ ವಿವೇಕಮುಂ ಭವ ।
ಶರನಿಧಿಯೊಳ್ ಸಾರಸುಖಮುಮೇನೆಂಜಸುವುದೇ ॥ (೧೦೧)

ಶಾ॥ ಎಂತೆಂತೀಕ್ಷಿಪೊಡಂ ಸಮಂತು ವಿವಿಧ ಕ್ಲೇಶಂಗಳಂ ಜಂತುಗ ।
ತ್ಯಂತಂ ಸಂತತಮಿಾವುದಾವ ತೆಱದಿಂದಾರಯ್ವೊಡಂ ಸೌಖ್ಯಲೀ ।
ಸಂತನ್ನೊಳ್ ತಲೆದೋಱಲಾಱದೆ ಹಹಾ ನಿಸ್ಸಾರಸಂಸಾರದಿಂ ।
ಭ್ರಾಂತೇಂ ಪಿಂಗುಗುಮಂಗಜಾರಿ ಜಿನಪಾದಾಂಭೋಜ ಸೇವಾರತಂ ॥ (೧೦೨)

ವ॥ ಎಂದು ನಿಸ್ಸಾರಸಂಸಾರೋದ್ವಿಗ್ನನುಂ, ಭೂರಿವೈರಾಗ್ಯ ಸುಧಾವಾರಿ ನಿಮಗ್ನನುಮಾಗಿ—

ಉ॥ ತನ್ನ ಸಹೋದರಂಗೆ ಪರಮೋತ್ಸವದಿಂದೆ ವಿಶಾಖಭೂತಿಗಾ ।
ಸನ್ನುತ ವಿಶ್ವಭೂತಿಯಧಿರಾಜವಿಭೂತಿಯನಿತ್ತು ಮತ್ತೆ ಲೋ ।
ಕೋನ್ನತ ವಿಶ್ವನಂದಿಗೆ ನಿಜೋರ್ಜಿತಸೂನುಗೆ ಯೌವರಾಜ್ಯಮಂ ।
ತಾನ್ನಿಖಿಳಪ್ರಧಾನ ಪರಿವಾರ ಸಮನ್ವಿತನಿತ್ತನುತ್ತಮಂ ॥ (೧೦೩)

ವ॥ ಅಂತು ಪಂಡಿತಪುರುಷಪರಿಷತ್ಪೂಜ್ಯಂ ನಿಜರಾಜ್ಯಭಾರದಿಂ ಪಿಂಗಿ—

ಮ॥ ವರವೈರಾಗ್ಯ ರಸಪ್ರಪೂರ್ಣಹೃದಯರ್ ಭೂಪೇಂದ್ರರಯ್ನೂರ್ವರಾ ।
ದರದಿಂದಂ ಬರೆ ತನ್ನ ಕೂಡೆ ವಿಬುಧಸ್ತುತ್ಯಂ ಧರಾಧೀಶ್ವರಂ ॥
ಪುರದಿಂದಂ ಪೊಱಮಟ್ಟನಂದು ವಿಳಸತ್ಪೌರಾಂಗನಾನೀಕ ಭಾ ।
ಸುರ ನೇತ್ರೋತ್ಪಳ ಮುಕ್ತಕಜ್ಜಳ ಜಳಾದ್ರೀಭೂತ ವೀಥೀಚಯಂ ॥ (೧೦೪)

ವ॥ ಅಂತು ತನ್ನಗಲ್ಕೆಯುಂ ನಿಕ್ಕುವಂ ಸೈರಿಸದ ಪೌರಜನದ ಮಱುಗದ ಬಳಗಂ ಬೞಿಸಲುತ್ತುಮಿರೆ ಪರಿತ್ಯಕ್ತ ಪರಿಗ್ರಹಂ ಪರಮಾನಂದದಿಂ ಪೋಗಿ—

ಮಾಲಿನಿ॥ ವ್ರತಸಮಿತಿ ಸುಗುಪ್ತಿ ಶ್ರೀಧರಶ್ರೀಧವಾಖ್ಯ ।
ವ್ರತಿಪತಿ ಪದಪದ್ಮದ್ವಂದ್ವಮಂ ಭಕ್ತಿಯಿಂದಂ ।
ಕ್ಷಿತಿಪತಿಕೃತಪುಣ್ಯಂ ಪೊರ್ದಿ ಜೈನೇಂದ್ರದೀಕ್ಷಾ ।
ವಿತತವಿಭವದೊಳ್ಪಂ ಪೆತ್ತನುತ್ಕೃಷ್ಟಚಿತ್ತಂ ॥ (೧೦೫)

ವ॥ ಅಂತಾ ವಿಶ್ವಭೂತಿ ಭೂತಳಾಧಿಪಂ ಭೂತಳಪ್ರಣುತ ಜಿನಮತಪ್ರಣೀತ ಮಹಾತಪೋನುಷ್ಠಾನ ಪ್ರಾಜ್ಯರಾಜ್ಯಭಾರದೊಡೆಯನಾದನಿತ್ತಲ್ ವಿಶಾಖಭೂತಿ ಮಹಾರಾಜಂ—

ಮ॥ ಜನತಾಜಂಗಮಪಾರಿಜಾತನನವದ್ಯಾಚಾರಪೂತಂ ಲಸ ।
ದ್ವನಿತಾ ಸಂಕುಳಚಿತ್ತಜಾತನವನೀಚಕ್ರಪ್ರಣೂತಂ ಸದಾ ॥
ವನತಾಶೇಷ ವಿರೋಧಿಜಾತನಭಿಮಾನಾಯತ್ತಚಿತ್ತಂ ದಯಾ ।
ಘನತಾಕೇತನನಾದನೂರ್ಜಿತಮಹಾಂಭೋರಾಶಿ ಪಾರಾಧಿಪಂ ॥ (೧೦೬)

ಚಂ। ಎಱಗಿಸಿ ತನ್ನ ಚಾರುಚರಣಾಂಬುರುಹದ್ವಿತಯಕ್ಕೆ ವಿಶ್ವ ನಾ।
ಡೆಱೆಯರನೆಲ್ಲರಂ ವಿಬುಧವಂದಿಜನಂಗಳ ವಾಂಛಿತಾರ್ಥಮಂ॥
ಕಱೆದು ಶರನ್ನಿಶಾಕರ ಕರೋತ್ಕರದಂತೆ ಕರಂ ತೊಳಪ್ಪ ತ।
ನ್ನಱಿಕೆಯ ಕೀರ್ತಿಯಿಂ ಬೆಳಗಿದಂ ಜಗಮಂ ವಸುಧೈಕಬಾಂಧವಂ॥ (೧೦೭)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಮಿತಮುಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ
ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಮಪ್ಪ
ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್
ವಿಶಾಖಭೂತಿರಾಜ್ಯಲೀಲೋದಯ ವರ್ಣನಂ.
ಪ್ರಥಮಾಶ್ವಾಸಂ.
ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ

ಶ್ರೀ

ದ್ವಿತೀಯಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀ ವಿನಯಾದಿ ಗುಣಪ್ರಭ ।
ಪಾವನಿಯೆನಿಸಿದುದು ಬಗೆಯೆ ನಿಜಚರಿತಮೆನಿ ॥
ಪ್ಪೀವಿಖ್ಯಾತಿಗೆ ಸಂದಂ ।
ಪಾವನಮತಿ ಪಂಚಪರಮಗುರುಪದವಿನತಂ ॥ (೧)

ವ॥ ಅಂತಾ ವಿಶಾಖಭೂತಿಭೂತಳೇಶ್ವರಂ ವಿನತ ವಿಶ್ವನಂದಿಯುವರಾಜ ಸಮೇತಂ ಸಾತಿಶಯ ಲಕ್ಷ್ಮೀಭೋಗಭಾಗಿಯಾಗಿರ್ಪುದುಂ—

ಉ॥ ನಂದನವಂದದಿಂದೆಸೆವಿನಂ ಬನಮುಂ ಮನವಟ್ಟಿಱಿಂದೆ ಸಂ ।
ಕ್ರಂದನಸನ್ನಿಭಂ ತ್ರಿದಿವಸನ್ನಿಭ ತತ್ಪುರಪಾರ್ಶ್ವದೊಳ್ ಯಶೋ ॥
ನಂದಿತ ವಿಶ್ವನಂದಿವಿಭು ಮಾಡಿಸಿದಂ ನಿಜಕೇಳಿಗೆಂದುಮಾ ।
ನಂದನನುಂದಗಂಧವಹ ಚೈತ್ರವಿಚಿತ್ರ ನಿವಾಸಮಪ್ಪುದಂ ॥ (೨)

ವ॥ ಅಲ್ಲಿ—

ಉ॥ ಆವಗಮುಬ್ಬಜಂ ಮಣಿಕರಂಡಕಮಾಲೆಯುನಿಲ್ಲಿನೇಱಿದಂ ।
ತೀವಿ ರಸಂಗಳಾಱುಮನೆನಿಪ್ಪುವು ಬಿನ್ನನೆ ಕೊಂಬುಗೊಂಬಿನೊಳ್ ॥
ತೀವಿರೆ ತೆಂಗು ತಾಱ್ ಬದರಿ ದಾಡಿಮ ಮುಮ್ಮಡೆ ಮಾತುಳಂಗವಿ ।
ಮ್ಮಾವರನೇಱಿಲಿಂಚಡಕೆ ಬಾೞೆ ಬೆೞಲ್ ಹಲಸೀಬಿೞ ಕಮ್ಮರಂ ॥ (೩)

ಕಂ॥ ಕೆಂಬಿತ್ತನುಗಿಯುತುಂ ದಾ ।
ಡಿಂಬದ ಬೀಡೆಯೊಳೆ ಒಲ್ಕಿತುಂಡಂ ಕೀರ್ಕೀ ॥
ರೆಂಬ ಮಱಿಗಿಳಿಗಳೊಳ್ ಮುಖ ।
ಚುಂಬನ ಸೀತ್ಕೃತಮನಬಲೆಯರ್ ಕಲಿತಿರ್ಪರ್ ॥ (೪)

ಬಿಡದೆಱಗಿ ಕೊಂಬುಗೊಂಬಿನೊ ।
ಳೆಡೆಗೊಱಿದರಗಿಳಿಯ ಗಱಿಯ ತುಂಡವ ಪುದುವಿಂ ॥
ಪಡೆವುದು ಪಣ್ತಲಮಿದೆನೆ ।
ಬೆಡಂಗನವಿರಳಿತ ಫಲಪರೀತಂ ಚೂತಂ ॥ (೫)

ವ॥ ಮತ್ತಮತಿಪಾವನದೊಳಾವನದೊಳ್—

ಉ॥ ಪಲ್ಲವದಿಂದೆ ರಂಜಿಸ ಕುಜಂ ಪೆಂತಾವುದೊ ಭಾವಿಸಂದು ಕಂ।
ಕೆಲ್ಲಿವೊಲಿಂದು ಮೆಚ್ಚಿಯುದಜಃಕೂಳ್ದಳರಂ ಕಡುಚೆಲ್ವುವೆತ್ತ ಸ॥
ತ್ಫುಲ್ಲಶರಕ್ಕೆ ಪುಕ್ಕ ಗಜಿಯಾಗ ಪಿನಿರ್ಮಿಸಿ ಕವ್ಪುಗಸಿಲ್ಗದೇಂ।
ಸಿಲ್ಲದೆ ಕಂತು ಮಾಡಿದನೊ ತೋಮರದುಪ್ಪರವಟ್ಟದೊಪ್ಪಮಂ॥ (೬)

ವ॥ ಮತ್ತಂ—

ಕಂ॥ ವಕುಳಂ ಸಪರಿಳಮುಪ್ರಸ।
ವಕುಳಂ ಸೌರಭಸಮಾಗತ ಭ್ರಮರಾರಾ॥
ವಕುಳಂ ಸೊಗಯಿಸಿದತ್ತೆ ಸೆ।
ವಕುಳಂಬಿತ ವಿಟಪಮುವೆಸಿಸಂಸ್ಥಾವಕುಳಂ॥ (೭)

ತಿಳಕಂ ವರವನಲಕ್ಷ್ಮೀ।
ತಿಳಕಂ ದತ್ತಪ್ರಿಯಾಸಮನ್ವಿತ ಜನ ಸ॥
ತ್ಪುಳಕಂ ಸುಮನಃ ಕಳಮಂ।
ಜುಳಕಂ ತಾನಾದುದತನು ಕೀರ್ತ್ಯುಜ್ಜ್ವಳಕಂ॥ (೮)

ಪಾದಪ ಪೂಗಂಪಿಂಗೆಜ।
ಹಾದರಿಪಳಿಗಳ ಕುಳಕ್ಕೆ ನಿರವಧಿರಾಗೋ॥
ತ್ಪಾದಪಟುವಾಯ್ತು ವಿಳಸ।
ತ್ಪಾದಪ ಜಾತಿಯೊಳದೊಂದೆ ಸುಂದರಮುತ್ತೀ॥ (೯)

ಮ॥ ಸ್ರ॥ ಅಲದೊರ್ಪಂಚಿತ್ತುದತ್ತಂ ಕೊಸಗು ಮಿಗೆ ತಮಾಳಂ ತಳತರ್ಾವಗಂ ಕ।
ಟ್ಟಲಿಸುತ್ತಿರ್ದತ್ತು ಮುತ್ತಂ ಮುಗುಳ ಬಳಗಮಂ ಪೇಜಿ ತೋರುತ್ತು ಸತ್ತ್ಯ॥
ಟ್ಟಲಮಂ ಕೆಯ್ಕೊಂಡುಪಾದಂ ಸರಳತರು ಶಿರೀಷಾಳಿ ಚೆಲ್ವಾಯ್ತು ಪೂಗೊಂ।
ಚಲನಾಂತೇಂ ಕಣ್ಗೆ ವಂದಿರ್ದುದೊ ನೃಪತನಯೋದ್ಯಾನಮಾಶ್ಚರ್ಯತಾನಂ॥

ಉ॥ ಪೆರ್ಮೊಲೆಗಳ್ ರಥಾಂಗಮಿಥುನಂಗಳನಾನನಮಂಬುಜಾತಮಂ।
ನಿರ್ಮಳಿನಾಂಗರೋಚಿ ಜಳಮಂ ಲುಳಿತಾಳಕಮುನ್ಮದಾಳಿಯಂ॥
ಧರ್ಮವಿಭೂಷಣದ್ಯುತಿ ಪರಾಗಮುನಾದಮೆಪ್ಪೋಲೆ ಸುತ್ತಿ ಬ।
ರ್ಪಮ್ಯ್ರಗನೇತ್ರೆಯರ್ ಸರಸಿಗಳ್ ಸುಬಿವಂತೆ ವನಾಂತರಾಳದೊಳ್॥ (೧೧)

ವ॥ ಅಂತುಮಲ್ಲದೆಯುಂ:—

ಮ॥ ಕಳಹಂಸಂಗಳ ಯಾನಮಂ ನೆಗಟ್ದ ಯಾನಂ ಕೋಕಿಳಧ್ವಾನಮಂ।
ವಿಳಸದ್ಧ್ವಾನಮನೂನ ಬರ್ಹಿಗಳ ಬರ್ಹಾನೀಕಮಂ ಸತ್ಕಚಾ॥
ವಳಿ ಕಂಕೆಲ್ಲಿ ದಳಂಗಳಂ ಪದತಳಂ ಪ್ರೋದ್ಯಲ್ಲತಾ ಜಾಳಮಂ।
ಲಳಿತಾಂಗಂ ನೆಜಿಪೋಲೆ ತದ್ವನದವೊಲ್ ಕಣ್ಗೊಪ್ಪುವರ್ ಕಾಂತೆಯರ್॥ (೧೨)

ವ॥ ಮತ್ತಮಲ್ಲಿ—

ಮ॥ ತರುಣೀಧೈರ್ಯರ್ಥನಿತ್ರಿ ಬಾಯ್ವಡುವಿನಂ ವಾರಾಂಗನಾರಾಗ ಸಾ।
ಗರಪೂರಂ ಕಡದೇಱುವಿನಂ ಮದವತೀ ಮಾನಾವಳೀಪಾಟಳಂ।
ಬಿರಿವನ್ನಂ ಬಧಿರೀಭವತ್ಪಥಿಕಲೋಕಂ ಬಾಳ ಚೂತೋದ್ಗತಾಂ।
ಕುರಕೋಣಕ್ಷುಭಿತಂ ಪೊದಱ್ದುದು ಪಿಕವ್ಯಾಹಾರ ಭೇರೀರವಂ। (೧೩)

ಚಂ॥ ಅಳಿನಿಯ ಚುಂಬನಂಗಳನರಲ್ವಲರಂ ಗಿಳಿವೆಣ್ಣ ನಲ್ಮೆಯಿಂ।
ಬಳೆಯಿಪ ಪಣ್ಗಳಂ ಲತೆಗಳಪ್ಪಿಸೊಳರ್ಪ ಮರಂಗಳಂ ಪಿಕಾ।
ವಳಿಯ ನಖಾಂಕಮಂ ಮೆಱೆವ ಕೋರಕಮುಂ ನಡೆನೋಡಿ ಲೋಚನಾಂ।
ಜಳಿಪುಟದಿಂ ವನಕ್ಕೆ ಮಿಗೆನೀರೆಱೆವರ್ ಪಥಿಕರ್ ನಿರಂತರಂ॥ (೧೪)

ಕಂ॥ ಉರಿಗೊಡ್ಡಿದರಗಿಡೆಂಬಿನೆ।
ವರಗಿಳಿಗಳ ಚಂಚು ತಾಗಲೊಡನೊಡೆದೋರಂ॥
ತಿರೆ ಸುರಿವಪಣ್ಗಳಂದಮೆ।
ಯರನೇಱಿಲ ಮರಗಳಲ್ಲಿ ಸೊಗಯಿಸಿ ತೋರ್ಕುಂ॥ (೧೫)

ಚಂ॥ ಸವಿತವದಂತು ಜೇರ್ವಿಡಿದು ಪಣ್ಬರೆಗಂ ವನಮೆಯ್ದೆ ಸೇವ್ಯಮಾ।
ಯ್ತವನಿಗೆ ಕೂಡೆ ಜೇರ್ಪರಿದ ಸಾಲ್ಮಡಲಿಟ್ಟ ಕವುರ್ವ ಪ॥
ಲ್ಲವಿಸಿದಶೋಕಮುಳ್ಳಲರ್ವ ಮಲ್ಲಿಗೆ ಕಾಯ್ತೆಳದೆಂಗು ಪಣ್ತಬ।
ರ್ಕೆವಲಸು ಕಮ್ಮಕಮ್ಮೆನೆವ ಮೆಯ್ಸಿರಿಯುಂ ಸಲೆಬೀಱುತಿರ್ಪಿನಂ॥ (೧೬)

ಕಂ॥ ಆವನದಂತರ್ಭಾಗದೊ।
ಳಾವನೆದಂ ನೋಡೆ ಪಿಂಗುವನನೆನಿಸಿದಕೋ॥
ಭಾವಿಭವದ ಮಣಿಮಯ ಕೃತ।
ಕಾವನಿಧರವರದ ತಲದ ತಿಳಗೊಳನೆಸೆಗುಂ। (೧೭)

ಅದು ಸುರಭಿ ಕುಮುದ ವಾಸಿತ।
ಮುದವಾಸಿತರದ್ವಿಹಂಗ ಸಮ್ಮದ ಕಲಹಂ॥
ಮದ ಕಲಹಂಸದ ನಿಳಯಂ।
ಸದನಿಳಯಂತ್ರಿತಸರಾಗ ಪಂಜರಕೀರಂ॥ (೧೮)

ಕಂಜಮಲದೊರ್ಪ್ಪಿತಿನ್ನೇ
ಕಂಜನೊ ಹರನೆಸಗೆನುತ್ತೆ ವರಮುಕರಪಠಾ॥
ಕಂ ಜಡಿದುನುಡಿವವೋಲ್ ಕೋ।
ಕಂ ಜಾಜಾಕರದ ಕಲಮೊಳವಿರ್ಪವು ನೆಲವಿಂ। (೧೯)

ಕಂ॥ ಅಂಬುಜ ನಿಚಯದೊಳಳಿಯುಲ ।
ರಿಂ ಬಂಡುಗೆ ಸೆಣೆದು ನನೆಯಿಪುವು ಬಾಳೆಯ್ವಾಯೊಳ್ ।
ತಂಬುಲಮನಿಕ್ಕುತುಂ ಪ್ರಿಯ ।
ಚುಂಬಪುದಂ ಪಥಿಕಜನಕೆ ಪದ್ಮಾಕರದೊಳ್ । (೨೨)

ವ॥ ಮತ್ತಂ—

ಕಂ॥ ನೀಳಮಣಿಸ್ಥಲಿಯೊಳ್ ನೀ ।
ಳಾಳಕಮಂ ನೆಟಲೊಳನಿಸುಕಾಣದೆ ತಲೆಯುಂ ॥
ಬಾಳಕಿಯರಂಟುತುಂ ನೃಪ ।
ಬಾಳನನಾನಗದ ರತ್ನಗುಹೆಯೊಳ್ ನಗಿಪರ್ ॥ (೨೧)

ಕ್ರೀಡಾಸರಸಿಯೊಳಳಿಗಳ್ ।
ಪಾಡುವ ಲಯಗತಿಗೆ ಕೃತಕ ಗಿರಿಯೊಳ್ ನವಿಲೆ ॥
ಳ್ದಾಡುವುದಂ ಪಥಿಕರ್ ನಡೆ ।
ನೋಡುವರೆರ್ದೆ ಥಕ್ಕೆ ವಾಜಿಸುತ್ತಿರ್ಪಿನೆಗಂ ॥ (೨೨)

ವ॥ ಇಂತು ಕೃತಕ ಕುತ್ಕೀಳ ಕೇಳೀ ಸರಸ್ಸಂತತಿಗಳಿಂ ಸಮಂತು ಶೋಭಾನಿಶಾಂತಮಾದ—

ಕಂ॥ ವನವನವನತಲತೋಜ್ಜೀ ।
ವನವನವನವತನು ಸಿಬಿಗಿದೆಂದು ಜಗತ್ಪಾ ॥
ವನವನವನಳಿವಿಳಾಸ ಭ ।
ವನವನವನಜಾತಪೂರ್ವಮೆನೆ ಮಾಡಿಸಿದಂ ॥ (೨೩)

ವ॥ ಅಂತು ನಿರಂತರಂ ಕಂತುಕಾಂತಸ್ವಾಂತ ಸಂತರ್ಪಣ ಸಮರ್ಥಮುಂ, ಸರ್ವರ್ತು ಸಾರಸರ್ವಸ್ವಸಾರ್ಥಮುಂ, ನಿರತಿಶಯ ಪರಿಮಳಾಕಳಿತ ಶೀತಳೀಭೂತ ಮಂದಮಂದ ವಿಚಳನ್ಮಳಯಾನಿಳನಿಳಯಮುಂ, ವ್ಯಾಪ್ತಗಗನ ದಿಗವನೀವಳಯಮುಂ ಮೆನಿಸಿ ಪಿರಚಿಸಿ ಸುಖಾವಳಂಬನಮಾದ ಬನದೊಳನುದಿನಂ ವಿಶ್ವನಂದಿಕುಮಾರಂ ಮಾರವೈಭವಂ ಸ್ಮೇರವದನಾರವಿಂದೋದಾರ ವಿದಗ್ಧನಾರೀಜನ ಸಮನ್ವಿತಂ ಸಂಸಾರಸಾರ ಸುಖಕ್ಷೀರ ನೀರಾಕರ ತರಂಗಿತಾಂತರಂಗನಾಗಿ ರಾಗದಿಂದಿರ್ಪಿನಮೊಂದು ದೆವಸಂ—

ಚಂ॥ ಒದವಿದ ಗರ್ವದಿಂದಖಿಳಗದೊರ್ವನೆ ದೋರ್ವಳಶಾಲಿ ಕಾಮರೂ ।
ಪದ ಧರಣೀಶನಿರ್ದೊಳಿಡಬನಂ ಜನನಾಥನೆ ಕಾನನಾಂತರಾ ॥
ಳದೊಳರದಿಕ್ಕಿ ಮಿಕ್ಕ ನಿಜವಿಕ್ರಮಲಕ್ಷ್ಮಿಗೆ ಭೂತಳಸುತ್ತಾ ।
ಭ್ಯುದಯಮನೀವೆನೆಂಬ ಬಗೆಯಂ ಬಗೆದಂ ಜಗತೀತಳೇಶ್ವರಂ ॥ (೨೪)

ವ॥ ಅಂತು ರೋಷಾವೇಶಮಂ ತಳೆದು ಬಳಪದ್ವಿರೋಧಿ ನಗರೀ ನಿರೋಧಯೋ ಧನಾವರೋಧ ವಧೂವೈಧವ್ಯವಿಧಿ ವಿಧಾತವ್ಯಮೆಂದು ಮಂತ್ರಿಸಂತತಿಯೊಳ್ ನಿತಾಂತಂ ನಿಶ್ಚಯಿಸಿ ನಿಶ್ಚಳ ಪರಾಕ್ರಮಭಾಜನಂ ವಿಶ್ವನಂದಿ ಯುವರಾಜನಂ ಬರಿಸಿ ವಿಶಾಖ ಭೂತಿ ಭೂತಳೇಶ್ವರಂ ವಿನಯವಿನಂತನಂ ನಿಜನಿಕಟಾವಿಕಟ ಮಣಿಮಯಾಸನದೊಳ್ ಕುಳ್ಳಿರಿಸಿ—

ಚಂ॥ ಮಗನೆ ಮದಾಜ್ಞೆಯಂ ಕೊಳೆದಪುಲ್ಗೆ ವಲಂ ಸರಿಗಂಡು ತನ್ನ ವಿ।
ಕ್ರೊಗೆದ ಮಹಾಮದಂ ಮದಿರೆಯಿಂದದೆ ಸೊರ್ಕಿಸೆ ಶೌರ್ಯದುನ್ನತಿ।
ಕ್ಕೆಗೆ ವಿಗೆ ಕಾಮರೂಪದ ನೃಪಂ ಜಿಜಿತಿರ್ದಪನೆಂದು ಪೇಱಿ ಚಾ।
ರಗಣಮಗಣ್ಯರೋಷರಸದೊಳ್ ಮುಱುಗಿತ್ತು ಮದೀಯಮಾನಸಂ॥ (೨೫)

ಕಂ॥ ಅದು ಕಾರಣದಿಂ ರಣದಿಂ।
ತದುದ್ಧತನ ದುಷ್ಟಚೇಷ್ಟೆಯುಂ ಮಱಿಗ್ಗಿಸಿ ಬ॥
ರ್ಪುದೆ ಕಾರ್ಯಮೆನಗೆ ಕಾದಿ।
ರ್ಪುದೆ ಕಾರ್ಯಂ ಪೆಱಗೆ ನಿನಗವಿಾಪುರವರಮಂ॥ (೨೬)

ವ॥ ಎಂಬುದುಮದಂ ಕೇಳ್ದು ಯುವರಾಜಕಂಠೀರವಂ ವೀರವಂ ಮೆಱೆವ ಪದನಿದಾಮದೆಂದು ರಾಗರಸಪ್ರವಾಹಾವಗಾಹಮಾನಮಾನಸನಾಗಿ ಮುಕುಳಿತ ಕರ ಕಮಳಯುಗ್ಮನಿಂತೆಂದು ಬಿನ್ನಪಂಗೆಯ್ದಂ—

ಶಾರ್ದೂ॥ ದೇವ ನೀಂ ನಡೆವಲ್ಲಿಪರಂ ಪೇಱಿನ್ನೊ ನಿನ್ನಯ ವೈರಿಯಾಕ।
ಕಾವೊಡಂ ಕಡಿಕೆಯ್ದು ದಿರಾಂತಂದಾತನಸಾಱುಯೊಳಂತಕಂ
ಗೀವೆನೋವದೆ ಭೀತಿಯೊಳೆಯ್ತಂದಾತನಾದೊಡೆ ಕಾದು ತಂ।
ದಾವಗಂ ನಿನಗೊಪ್ಪಿಸುವೆಂ ಕೂರ್ತೀಯೆನಗೀ ಬೆಸನೊಂದುವಂ॥ (೨೭)

ವ॥ ಎಂದು ಪೂಣ್ದು ವಿಶ್ವನಂದಿಯಂದು ತಂದೆಯೊಳ್ ನಿರ್ಬಂದದಿಂದೆ ಬೆಸನಂ ಬೇಡಿ ಪಡೆದು ಬೀಱಿಕೊಂಡು ಮೌಹೂರ್ತಿಕಪ್ರಕಾಂಡ ಪ್ರದತ್ತ ಶುಭಾಯತ ಮುಹೂರ್ತದೊಳ್ ಜಿನರಾಜಪಾದಪಯೋಜಪೂಜಾನಿಬದ್ಧ ಸಿದ್ಧಶೇಷಾಕ್ಷತ ನಿಕರ ತಾರತಾರಕಿತ ನಿಜೋತ್ತಮಾಂಗನಭೋರಂಗನುಂ, ಸನ್ನಾಹ ಭೇರೀಭೂರಿಘೋಷ ಹೇಷಾಕ್ಲೇಷ ಬಧಿರಿತಾಶಾಂತರಂಗನುಮಾಗಿ ಮಹಾವಿಭೂತಿಯಿಂ ಪೊಱಲಂ ಪೊಱಮಟ್ಟು—

ಚಂ॥ ಕುದುರೆಗಳಾಳ್ಗಳಾನೆಗಳುದಗ್ರ ರಥಂಗಳನಿತ್ತನಿತ್ತವೆಂ।
ದೊದವಿದ ರಾಗದಿಂದೆ ಗಣಿಯಿಪ್ಪನೆವಾವನನಿಪ್ಪಭೂರಿ ಭಾ॥
ರದ ಚತುರಂಗಸೇನೆವೆರಸಾನರನಾಥತನೂಭವಂ ಪ್ರತಾ।
ಪದ ನಿಧಿಯೆಯ್ದಿದಂ ತ್ರಿದಿವಕಾಂತಮನಾರಿಪುವಿರ್ದ ದೇಶಮಂ॥ (೨೮)

ವ॥ ಅಂತು ಸಂಕೇತಪ್ರಯಾಣದಿಂ ಸಕಳಸಂಪತ್ತಿಧಾಮಮೆನಿಸಿದ ಕಾಮರೂಪ ನಾಮಧೇಯ ದೇಶಮಂ ಪ್ರವೇಶಿಸುವುದುಂ—

ಚಂ॥ ಮದವದರಾತಿಮಂಡಳಿಕ ಮಂಡಳಮಂಡನ ದುರ್ಗವರ್ಗಮೊ ।
ರ್ಮೊದಲೊಳೆ ಧಂಧಗದ್ಧಗಿಧಗದ್ಧಗಿಯೆಂದುರಿವಂತು ಸುಟ್ಟು ಬೇ ॥
ಗದೆ ನೆಱೆ ಸೂಱೆಗೊಂಡು ವರವಾಹನ ವಸ್ತುಸಮೂಹಮಂ ಸಮಂ ।
ತೊದವಿದ ತದ್ಬಳಂ ವಿಳಯಮುಂ ವಿಷಮುಕ್ಕಿರದಿತ್ತು ದೆತ್ತಲುಂ ॥ (೨೯)

ವ॥ ಆ ಪ್ರಸ್ತಾವದೊಳ್—

ಕಂ॥ ಚರಜಾಳಂ ಜಂಘಾಳಂ ।
ಪರಿದಾವಿಷಯಕ್ಕೆ ಸಮನಿಸಿದ ವಿಪ್ಲವದು ॥
ಬ್ಬರಮಂ ತತ್ಪತಿಗಱಿಪಿದು ।
ದರಾತಿನಿರ್ಭೀತ ಬಹುಪದಾತಿಕ ಕೃತಮಂ ॥ (೩೦)

ವ॥ ಆಗಳದಂ ಕೇಳ್ದು ಕಾಮರೂಪಭೂಪಂ ಸಾಟೋಪಮುರ್ವಿ ನಿಜದೋರ್ವ ಳೌರ್ವಾನಳನನಳನಳಿತ ಶಿಖಾಜಾಳದೆಸಕಮನಸದಳಂ ಪಸರಿಸಿ ತೋರ್ಪಂತೆ ಕೋಪೋ ದ್ದೀಪನಕಲುಷತೆಯಿಂ ಕೆಂಪಡರ್ದಕಣ್ಗಳಿಂ ದುರ್ನಿರೀಕ್ಷಣ ದಾರುಣಾರುಣವದನ ವನಜನಾಗಿ ಕದನಕೇಳೀಲೋಳತೆಯಿಂ ಸಭಾಸಮಕ್ಷದೊಳಾಕ್ಷೇಪರೂಕ್ಷವಚನ ರಚನಾ ವಿಚಕ್ಷಣಮಂ ಬಿಡದೆ ಸಡಗರಿಸುವುದನವಧರಿಸಿ ಸಂಪ್ರಾಪ್ತ ಸಮಸ್ತ ನೀತಿ ಶಾಸ್ತ್ರ ಪ್ರಾವೀಣ್ಯರುಂ, ದೀರ್ಘದರ್ಶಿವರೇಣ್ಯರುಂ, ಬುದ್ಧಿಸಮೃದ್ಧರುಮನ್ವಯಾಗತ ವಿಶುದ್ಧರುಮಪ್ಪ ಮಂತ್ರಿಗಳಿಂತೆಂದರ್—

ಚಂ॥ ನಿಜಗತಿ ನೀತಿನೈಪುಣನಪಾರರಥಾಶ್ವಪದಾತಿಕುಂಜರ ।
ವ್ರಜನಖಿಳಾಯುಧಾತಿಕುಶಲಂ ನತವಿಶ್ವಮಹೀಶಮಂಡಳಂ ॥
ವಿಜಯದಲೆತ್ತಿ ಬಂಡನಪನಂ ರಣದೊಳ್ಗೆಲಲಾಱಿಪಂತಜಂ ।
ಪ್ರಜೆಗಳ ರಕ್ಷಣಾರ್ಥಮಿದಿರ್ವೋಗಿಯೆ ಕಾಣ್ಬುದು ಕಾರ್ಯಮಲ್ಲದೆ ॥ (೩೧)

ವ॥ ಎಂದು ಮತ್ತಮನೇಕ ಯುಕ್ತಿವ್ಯಕ್ತಸೂಕ್ತಿ ಮಂತ್ರಂಗಳಿಂ ನಿಜಮಹೀ ಶನ ಮನದವಿಗ್ರಹದುರಾಗ್ರಹಮಂ ನಿಗ್ರಹಿಸುವುದುಮಿದೆ ಕರಣೀಯಮೆಂದು ಮನದೆ ಗೊಂಡು—

ಮ॥ ಇವಱಿಂದುತ್ತಮಮಿಲ್ಲೆನಿಪ್ಪ ವಿಳಸನ್ಮಾತಂಗಜಾತಂಗಳಂ ।
ಜವಸಂಪತ್ತಿಯ ವಾಜಿರಾಜಿಗಳನುದ್ಯತ್ಕಾಂತಿಮನ್ಮೂತ್ನರ ॥
ತ್ನವಿಶೇಷಂಗಳನಂಗಜಾಸ್ತ್ರವರವಾರಸ್ತ್ರೀಯರಂ ಮತ್ತಮ ।
ನ್ಯವಿಶಿಷ್ಟಾರ್ಥಚಯಂಗಳಂ ನೆರಪಿ ಮುಂದಿಟ್ಟಂದು ಬಂದಂ ನೃಪಂ ॥ (೩೨)

ವ॥ ಅಂತು ಬಂದು ಚರಾಚರಸಾರತರವಸ್ತುಗಳಂ ನಿಜಾಪರಾಧ ನಿಷೇಧಾರ್ಥಮಾ ಪಾರ್ಥಿವಂ ವಿಶ್ವನಂದಿಗಿತ್ತು ಮತ್ತಂ ಪ್ರಾಣರಕ್ಷಣಯಾಚನೋಚಿತ ವ್ಯಾಹಾರಪೂರ್ವಕಂ ಪಾದಪೀಠೋಪಾಂತ ಪ್ರದೇಶಸರ್ವಾಂಗ ಪ್ರಣತನಾಗಿ ತದೀಯಚೇತೋನಿಕೇತನದಿಂ ಕ್ರೋಧವ್ಯಾಧನಂ ಪೊಱಮಡಿಸಿ ಕಳೆಯೆ—

ಕಂ॥ ಅಭಯಮನಿತ್ತಂ ಮುನ್ನಿನ ।
ವಿಭವಮನಿತ್ತಂ ಪ್ರತಾಪಜಳನಿಧಿ ಜಯದುಂ ॥
ದುಭಿರವ ಬಧಿರಿತ ದಿಗವನಿ ।
ನಭಸ್ಥಳಂ ಕಾಮರೂಪಭೂಪಂಗೆ ನೃಪಂ ॥ (೩೩)

ವ॥ ಅನಂತರಮಲ್ಲಿಂ ತಳರ್ದು ಮತ್ತಮನಂತ ಜನತಾಧೀಶ್ವರಂ ತನತು ಪದಪ ಯೋಜಕ್ಕೆಱಗಿಸುವ ಬಗೆಯಿನಲ್ಲಲ್ಲಿಗೆ ನಿಜವಿಜಯ ವೈಜಯಂತೀ ವಿರಾಜಮಾನ ವೀರಭಟ ಕೋಟಿಯಂ ಕಳಿಪಿ ಭೀತಿಚಕಿತ ಶರಣಾಯಾತರಂ ಪ್ರೀತಿಪೂರ್ವಕಂ ಕಾಣಿಸಿ ಕೊಳುತ್ತುಮಭಯಮಂ ಕೊಡುತ್ತುಮಾವರವಸಾಧಿಯಿಂ ಶಾರ್ವರದೆ ನೆರೆದು ಬರ್ಪ ವಿಬುಧವಂದಿವೃಂದದ ಮನೋಮುದಮನೊದವಿಸುತ್ತುಮಿರ್ದನನ್ನೆಗಮಿತ್ತಲ್—

ಚಂ॥ ಸಿರಿಯ ತೆರಳ್ಕೆ ಜವ್ವನದಪೇರ್ಕುಗೆ ರೂಪವಿಳಾಸದೇಳ್ಗೆ ಸುಂ ।
ದರಿಯರ ಸೋಲಮಂ ಜನಿಯಿಪೊಳ್ಪು ಬಗಾಳ್ತನದೊಂದಳುರ್ಕೆಯು ।
ಬ್ಬರದ ಮದಕ್ಕೆವಾಗೆ ಮಿಗೆ ಕಾರಣಮಂದು ವಿಶಾಖನಂದಿ ದು ।
ಶ್ಚರಿತಮೆ ಮೂರ್ತಿವೆತ್ತುದೆನೆ ವರ್ತಿಸಿದಂ ಗಡ ಮೆಚ್ಚಿದಿಚ್ಚೆಯಿಂ ॥ (೩೪)

ಕಂ॥ ಬಸನಿಗಳ ಗೊಟ್ಟಿತನಗಾ ।
ಗಿಸೆ ಸಂತಸದೊದವನುತ್ತಮರಗೊಟ್ಟಿಕರಂ ॥
ಕಸಱಿಸಿದುದರ್ದೆಯನೇಂ ಸೊಗ ।
ಯಿಸುಗುಮೆ ಚೋರಂಗೆ ಚಂದ್ರಿಕಾವಿಸ್ತಾರಂ ॥ (೩೫)

ವ॥ ಮತ್ತಮಾಖಳಂ ಖಳಭೂತಳದಂತೆ ನಿಕೃಷ್ಟಯೋಗ್ಯನುಂ, ಕಪಿಲದಾಸ ನಾವಭಾಷಿತಾತ್ಮನಂತೆ ಗುಣವಿರಹಿತನುಂ, ಪರೇತವನದಂತೆ ಕಲ್ಮಷಾಕ್ಷಾಲಕ್ಷಿತನುಂ ಸೂರ್ಪಕಾರಾತಿಯಂತೆ ವಿಷಮಬಾಣನುಂ, ದಗ್ಧವನದಂತೆ ವಿಚಾರಶೂನ್ಯನುಂ ಪರ್ವತ ನಿತಂಬದಂತೆ ಕುಜನಕುಲಪರೀತನುಂ, ಪರಚಕ್ರಾಕ್ರಮಣಶೀಲನಂತೆ ಬಹುವಿಷಯಾ ಸಕ್ತನುಂ, ಭಾರತಕಥಾಪ್ರಸರದಂತೆ ದುಶ್ಶಾಸನಭೀಮಾಚರಣನುಂ, ಚರಮನೃಪಾ ರಿತವೃತ್ತದಂತೆ ಅತಿಕ್ರಾಂತಗುರೂಪದೇಶನುಂ, ಪೃಥಾಜನಿತಜೀಮೂತ ಜಾತದಂತೆ ನಾರ್ದ್ರಹೃದಯನುಮೆನಿಪನಂತುಮಲ್ಲದೆಯುಂ—

ಕಂ॥ ಅಹಿವೊಲ್ ಸವಕ್ರಗಮನಂ ।
ಮಹಿವೊಲ್ ಸತತಂ ರಜೋನ್ವಿತಂ ಗಿರಿಗುಹೆವೋಲ್ ॥
ಬಹಳತಮಂ ಹಿಮರುಚಿವೋಲ್ ।
ಗೃಹೀತನಿಕ್ಷೇಪದೋಷನೆನಿಸಿದನಾತಂ । (೩೬)

ವ॥ ಅಂತು ದುಶ್ಶೀಲ ದುರಾಚಾರ ದುರ್ಯಶೋನಂದಿಯಾದ ವಿಶಾಖನಂದಿಯುಂದಿಂಗೆ ಕುವಿಟಪೇಟಕಪ್ರೇರಿತಂ ಸ್ವೈರವಿಹಾರವಿನೋದಾರ್ಥಂ ಪುರವರಾಂತರ್ಬಹಿರ್ಭಾಗಪರಿಭ್ರಮಣ ಪರಿಣತನಾಗಿ ತೊಳಲ್ವೊನೊಂದುದೆವಸಂ—

ಕಂ॥ ವಿನಮನ್ಮದಮಧುಕರಸೇ ।
ವನಮಂ ವರವಿಶ್ವನಂದಿಯಂತರ್ಧನಮಂ ॥
ಘನಮಂ ಬನಮಂ ಕಂಡಂ ।
ಮನಮಂ ಮೋಹಿಸುವ ಶೋಭೆಯಂ ತಾಳ್ದಿದುದಂ ॥ (೩೭)

ವ॥ ಅಂತು ಭೋಂಕನೆ ಕಂಡು ಕೌತುಕಾತಿರೇಕವ್ಯಾಕುಳತೆಯಿಂ ಪತ್ತೆಸಾರ್ದು ವಿಸಟಂಬರಿವ ನಿಜವಿಲೋಚನಂಗಳೊಡನೆ ಮಚ್ಚರಿಸಿದಂತೆ ಮಸಗಿ ಬಳಸಿಗಂ ಪರಿದು ವಸಂತಲಕ್ಷ್ಮೀವಯಸ್ಯೆಯಪ್ಪ ವನಲಕ್ಷ್ಮಿಯ ಬೆಡಂಗಿನೊಡನೆ ಗಡಣಮನೊಡರಿಸುವ ಕಾತರಚೇತಮನೇತೆಱದೊಳಂ ನಿಯಮಿಸಲ್ ನೆಱೆಯದೆ ತದೀಯಲಾಭಲೋಭಂ ತನ್ನೊಳ್ ತಿಣ್ಣಮಾಗೆ ಮೇಗಱಿಯದೆ ತದುಪಾಯ ಕೋಟಿಗಳಂ ನೆನೆನೆನೆದು ಕೋಟಲಿಗೊಂಡು ವಿಶಾಖನಂದಿ ವಿಲೂನವೈಶಾಖ ಕಂದರಿಯುಂದದಿಂದಂದು ಕರಮೆ ಕೊರಗಿ—

ಕಂ॥ ಇನಿವಿರಿಯ ಸಿರಿಯುಮಿನಿವಿರಿ ।
ಯನಿಚಿತ ಯೌವನಮುಮಿನಿವಿರಿಯ ಭೋಗಮುಮಿಾ ॥
ವನಮಿಲ್ಲದಂದೆನಗೆ ಜೀ ।
ವನಮಿಲ್ಲದ ತನುವಿನಂದಮೇನಾಗದೆ ಪೇೞ್ ॥ (೩೮)

ವ॥ ಎಂದು ತನ್ನೊಳೆ ಪರಿಭಾವಿಸಿಯಜೇಯ ಭುಜಪರಾಕ್ರಮನಪ್ಪ ನಿಜದಾಯಾದನಾದಮೆ ದೂರದೇಶಸ್ಥಾಯಿಯಾದೀಪದದೊಳೆ ಹೃದಯನಯನ ಸುಖಾವಳಂ ಬನಮಂ ಬನಮನಿದನೆನಗೆ ಬಲಾತ್ಕಾರದಿಂ ಬಸದಾಗಿ ಮಾಡಿಕೊಳ್ವುದೆ ಕಾರ್ಯಮೆಂದು ವಿಪಶ್ಚಿನ್ನಿಂದಿತಂ ನಿಶ್ಚಯಿಸಿ ವೃಶ್ಚಿಕವಿಷಮರೆನಿಪ ದುಶ್ಚರಿತ ಪರಿವಾರಜನಂಗಳಂ ಕೂಡಿಕೊಂಡು ಧೂರ್ತಂ ಸಾರ್ತಂದು ವನರಕ್ಷಾವಕ್ಷರೊಳೇನಾನುಮೊಂದು ನೆವಮನೆ ವಳಂಬಿಸಿ ಬಂದು ಭಾವಪ್ರಭಾವಮನಾವಗಂ ಪೊಱಿದು ತೆಱಯಿಸಿ ಬನದ ಬಾಗಿಲಂ ಬೇಗದಿಂ ಪೊಕ್ಕು ರಕ್ಕೆಯಾಳ್ಗಳಂ ಲೆಕ್ಕಿಸಿ ನೋಡಿ ಕೆಲಂಬರೆಂಬುದನಱಿದು ನಾಡೆಯುಂ ನಲಿದು ಮೆಲ್ಲಮೆಲ್ಲನೆ ತನ್ನ ಬಲಮಂ ಬಲಿದು—

ಕಂ॥ ಕಾಪಿನ ಕಟ್ಟಾಳ್ಗಳನಾ ।
ಪಾಪಾತ್ಮಂ ಕಾದಿಬಹಳ ಬಳನಪ್ಪುದಱಿಂ ॥
ಲೋಪಿಸಿದಂ ಬಟಿಕಮುವಂ ।
ವ್ಯಾಪಿಸಿದಂ ಬನಮನುರ್ವರಾ ಪಾವನನುಂ ॥ (೩೯)

ಕಂ॥ ಆವನ ಕಣ್ ಸೆಯದೆ ನಿ।
ಹ್ಸ್ರಾವಸಮಾವಿಭುವಿಯೋಗ ಪದದೊಳ್ ತೊದಲಿಕೆಂ॥
ಕಾವಲನಿರವಿಂಗಾದುದು।
ಸೋವತಮೇ ಪೇಳ್ವುದಣ್ಣ ವಿಧಿವಿಳಸನೆವಂ॥ (೪೦)

ವ॥ ಅನಂತರಂ.—

ಮ॥ ಅದಱಿಕೊಳ್ ಸಂತತಮಾಖಳಂ ಪ್ರಮುದದಿಂ ಮುಕ್ತಾ ಮೃಣಾಳೋರುಹಾ।
ರದ ಕಲ್ಹಾರದ ಕರ್ಣಪೂರದ ಲಸದ್ಗಾರಾಂಗನಾಗೀತ ಪೂ॥
ರದ ಕರ್ಪೂರದ ಚಾರುಚಂದನದ ಕಸ್ತೂರೀಕದಂಬಾನುಲೇ।
ಪದ ತಾಂಬೂಲದ ಕಾಮಿನೀರತದ ಭೋಗಾಭೋಗದಿಂದಿರ್ದನಂ॥ (೪೧)

ವ॥ ಅತ್ತಲಾ ವಿಶ್ವನಂದಿ ಯುವರಾಜ ಮೃಗರಾಜಂ.—

ಮ॥ ಸ್ರ॥ ಅನತೋರ್ವೀಪಾಳರಂ ಕಾಳೆಗದೊಳೆ ವಿರಥರ್ಮಾಡಿ ಸರ್ವಸ್ವಮಂ ಸದ್ವಾ।
ಹನ ಸತ್ಕನ್ಯಾನಿಕಾಯಂಗಳನೆ ತಳೆದು ದೋರ್ದಂಡದೊಳ್ ವೀರಸದ್ಗೋ॥
ಮಿನಿಯಂ ತಾಂ ಸುಸ್ಥಿಯಪ್ಪಂತಿರಿಸಿ ಮಗುಟ್ದು ಸದ್ರಾಗದಿಂ ಬಂದುವಿಖ್ಯಾ।
ವನಿವಿಖ್ಯಾತಂ ಸ್ವಕೀಯೋರ್ಜಿತಪುರವರಮಂ ಪೊಕ್ಕನುದ್ಯದ್ಭಟಾರ್ಕಂ॥ (೪೨)

ವ॥ ಆ ಪ್ರಸ್ತಾವದೊಳ್.—

ಶಾ॥ ಪೌರಸ್ಮೇರಮುಖಾರವಿಂದ ವನಿತಾಸಂದೋಹಮೊಯ್ತಂದು ತ।
ನ್ನಾಕಾರನನತ್ಯುದಾರನನಿಳಾಲೋಕೈಕ ಸದ್ವೀರನಂ॥
ಪಾರಾವಾರಗಭೀರನಂ ಸಮುಚಿತಪ್ರೋದ್ಭಾಸಿ ಶೃಂಗಾರನಂ।
ಚಾರೂದ್ಯನ್ನಯನಾಂಶುಚಂದ್ರಿಕೆಗಳಿಂ ನೀರಾಜಿಸುತ್ತಿತ್ತಲುಂ॥ (೪೩)

ವ॥ ಅಂತುಪುರವರದೊಳುರುತರ ಕೌತುಕಾತಿಪ್ರಮೋದಂಗಳನುತ್ಪಾದಿಸುತ್ತುಂ ಬಂದು ಪ್ರಶಂಸಾಲಾಲಸ ಭುವನಮುಂ ಭೂಪತಿಭವನಮುಂ ಪೊಕ್ಕು—

ಮ॥ ಸ್ರ॥ ಪರಪೃಥ್ವೀಪಾಳರಂಸಾಧಿಸಿ ಪಡೆದ ಸಮಸ್ತಪ್ರಶಸ್ತಾರ್ಥ ಸಾಹೋ।
ತ್ಕರಮಂ ಮುಂದಿಟ್ಟು ಕಂಠಾಭರಣ ಕಿರಣ ಸತ್ಪುಷ್ಪದಾಮಂಗಳಿಂದಂ॥
ಚರಣಾಂಭೋಜಾತಮಂ ಪೂಜಿಸಿದ ತನಯನಂ ತತ್ಪಿತೃವ್ಯಂ ಧರಾಧೀ।
ಶ್ವರನಾಶೀರ್ವಾಕ್ಯಮೇತಂ ತೆಗೆದು ಬಿಗಿದು ತಬ್ಬಿಸಿದಂ ಪ್ರೀತಿಯಿಂದಂ॥

ವ॥ ತದನಂತರಂ.—

ಚಂ॥ ಮಗನೆ ಮದನ್ವಯಕ್ಕೆ ಮಣಿದರ್ಪಣಸೈ ಮರುದಗ್ರ ಪುಣ್ಯವಾ।
ರ್ಧಿಗೆ ಮೃಗಲಕ್ಷ್ಮನೈ ಮದಭಿವಾಂಛಿತ ಕಾರ್ಯವನಕ್ಕೆ ಚೈತ್ರನೈ।
ನೆಗಪ್ಪ ಮದಂಬಕವ್ರಯ ಕಳಾಪಿಗೆ ಚಾಪಳಮೇಘ ಜಾಳನೈ।
ಜಗದಧಿಕಪ್ರತಾಪ ನಿನಗಾರ್ ದೊರೆ ಮಾನವರೀ ಧರಿತ್ರಿಯೊಳ್॥ (೪೫)

ವ॥ ಎಂದಾನಂದದಿಂ ಪೊಗೞ್ದು ನಂದನನಂದುತಂದು ತನ್ನ ಪಾದಾಂಬುಜದ್ವಂದ್ವದೊಳ್ ಎಱಗಿಸೆ ತುಱುಗಿ ಮೆಱೆವ ಭೂಮಿರೂಢಕಾಮರೂಪಪ್ರಮುಖಭೂಪರಂ ಗಳಿತಾವಳೇಪರಂ ಭೂರಿಕಾರುಣ್ಯವೀಕ್ಷಣದಿನೀಕ್ಷಿಸಿ ಮಹಾವಿಭವವಿಭುತ್ವಭೂಷಿತನಾಗಳಪರನಭಯದಾನಮಾನಿತರ್ಮಾಡಿ ನಿಜನಿಜನಗರಿಗಳ್ಗೆ ಕಳಿಪಿ ಕುಳಪತಾಕನಂ ಯುವರಾಜಪ್ರವೇಶನಂ ಸಮುಚಿತಪ್ರತಿಪತ್ತಿಪೂರ್ವಕಂ ನಿಜನಿಳಯಮನಲಂಕರಿಸೆಂದು ಬೀೞ್ಕೊಳಲೊಡಂ.—

ಉ॥ ವಾಸವಲೀಲೆಯಿಂ ನಿಜನಿವಾಸಮನಾವಿಭು ಪೊಕ್ಕು ಕೇಳ್ದು ವಿ।
ಶ್ವಾಸಿಗಳೆಲ್ಲರಂ ಮಡಿಪಿ ವೀಕ್ಷಿಸೆ ಮುಂದಿ ವಿಶಾಖನಂದಿ ಶೋ॥
ಭಾಸಮುಪೇತಮಪ್ಪ ಬನಮಂ ತನಗಾಗಿಸಿ ರಾಗದಿಂದೆ ಕೇ।
ಳೀಸಖಸಂಗತಂ ತಳರದಿರ್ದಪನೆಂದುಸಿರ್ದಾಪ್ತರುಕ್ತಿಯಂ॥ (೪೬)

ಕಂ॥ ತೊಟ್ಟನೆ ಕೋಪಜ್ವಲನಂ।
ಪುಟ್ಟಿ ಭುಗಿಲ್ ಭುಗಿಲೆನುತ್ತ ಮನದೊಳ್ ಕುವರಂ॥
ಕಟ್ಟಾಳ್ ಕಡುಕೆಯ್ದೆಯ್ದಿದ।
ನೊಟ್ಟಜೆಯಿಂ ಒನಕೆ ಜನಕೆ ಜನಿಯಿಸೆ ರಾಗಂ॥ (೪೭)

ವ॥ ಅಂತು ಮಸಗಿದಂತಕನಂತೆ ಪಾರದಾರುಮಂ ಭೋರೆನೆ ಪರಿದು ಪರಿವೇಷ್ಟಿಸಿ ಬನಮನನುದಿನಂ ಕಾದಿರ್ಪ ದರ್ಪಿಷ್ಠ ಚಟುಳಭಟರ ಮೂರ್ಧಂಬಿಡಿದುಪಾಱಿ ಕರತಳಕರಾಳಕರವಾಳದಿಂ ತಱಿದು ತುಱುಗಿ ಮೆಱೆವ ಬನಮನೊಳಪೊಕ್ಕು ರಕ್ಕಸನಂತೆ ಘಟ್ಟನೆಯ್ತರ್ಪ ವಿಶ್ವನಂದಿಯಂ ಮುಂದೀಕೃತ ಮುಖಮಯೂಖಂ ವಿಶಾಖನಂದಿ ಮಂದಭಾಗಧೇಯನಂದು ಮುಂದೆ ಭೋಂಕೆನೆ ಕಂಡು—

ಕಂ॥ ಸಿಂಗದ ಶಿಶುವಂ ಕಂಡಕು।
ರಂಗದ ಮಱಿಯಂತೆ ಬೆದಱಿ ದೆಸೆಗೆಟ್ಟುಕರಂ॥
ಬೆಂಗೊಟ್ಟೋಡಿದನವನು।
ತ್ತುಂಗ ಕರಂಗಳ ಮರಂಗಳೆಡೆದೆಱಪುಗಳೊಳ್॥ (೪೮)

ವ॥ ಅಂತು ತಲ್ಲಣಿಸಿ ನಿಲ್ಲಹನಲ್ಲಿಯುಂ ನಿಲ್ಲದೆ ವಲ್ಲೀವೇಲ್ಲಿತಪಲ್ಲವೋಲ್ಲಸಿತ ಕಂಕೆಲ್ಲಿ ಸಲ್ಲಕೀ ಸಂಫುಲ್ಲಮಲ್ಲಿಕಾಸಲ್ಲಲಿತವನದೊಳೋಡುತ್ತುಂ ಪ್ರಹರಣಪ್ರಹತನಿಖಿಳ ಪರಿಜನನೆಲ್ಲಿಯುಮಡಂಗಲೆಡೆವಡೆಯದೆ ವಾಯುವೇಗದಿಂ ಪರಿಯೆ ಪಱಿಸಿ ಪರಧನ ಹರಣನ ಹರಣಮಂ ಪರಿಯಿಪ ಪರಿಣತೆಯನುರವಣಿಸಿ ಬೆನ್ನೊಳೆಪರಿದು ಬಿಡದೆ ಜಡಿದಡಪಿ ಪೊಡೆಪಪದದೊಳ್ ಕರ್ಕಶಮಪ್ಪೇನಾನುಮಂ ಸೆಕ್ಕಸೆತಾಗಿತರ್ಕಿಱಿದಂತೆ ಮುಕ್ಕುಱಿ ಪೋಪ ಭಯಂಕರದಕರದ ಕರವಾಳುಮಂ ಪರಿಕಿಸಿ ಪರಿಹರಿಸಿ ಸರಸೀಪರಿಸರದೊಳ್ ನಟ್ಟುಮುಗಿಲಂ ಮೆಟ್ಟುವಂತೆ ಮುಂತಿರ್ದ ಕಲ್ಲತೋರಗಂಬಮಂ ಸ್ತಂಬೇರಮಮುಂಬುಜಪಮಂ ಕೀೞ್ವಂತೆ ಕಿೞ್ತುಕಟ್ಟಲೆಯನಟ್ಟುವುದಯಾದಿತ್ಯ ಪ್ರಕಾಶದಂದದಿ ನಟ್ಟಮುಟ್ಟ ಪೊಯ್ಯೆ ಪೊಯ್ಯೆ:—

ಕಂ॥ ಎಸೆವ ತಟಿಲ್ಲತೆ ಮೇಘ ।
ಪ್ರಸರದೊಳಂತಿಂತು ಪೊಳೆದಡಂಗುವತೆಱದಿಂ ॥
ಮಿಸುಪ ವನಾಂತರದೊಳ್ ವಂ ।
ಚಿಸಿ ಪೊಝ್ದಂ ಪೊಳೆದು ತತ್ಫಳಂ ಮಿಗೆಪೋದಂ ॥ (೪೯)

ವ॥ ಅಂತು ಮಿಕ್ಕುಪೋಗಿ ಬಱಲೆ ವಿಗ್ರಹಂ ಕಱಲೆ ಕಣ್ಗಳಿಂ ಜಲಲವಂಗಳ್ ತೊಱಲಲಾಱದಱಲನಯ್ದುದ ಪೊೞಲೊಡೆಯನ ಮಗಂ ಪುೞಿಲನಾವರಿಪ ಸೞಲನೊಳ ಕೊಂಡ ಬೞಲವುದಿಂ ಘಳಲನಕಂಡು ತಳವೆಳಗಾಗಿ ಮಱೆಗೊಂಡಿರ್ಪುದುಂ—

ಮ॥ ಬೞಲಂ ಬೇಗದಿನೆಯ್ದೆ ಬೇರ್ವರಸಿ ಕಿೞ್ತಾ ಧೂರ್ತನಂ ಪೊಯ್ಯಲ ।
ವ್ವಳಿಪಾಗಳ್ ಅನುಕಂಪಮುಬ್ಬರಿಸೆ ಹೀನದ್ವಾನ ದೀನಾನನಂ ॥
ಗಳಿತೋದ್ಯನ್ಮದನಾಗಿ ತತ್ಪದಪಯೋಜಾತಂಗಳೊಳ್ " ನೀಂ ದಯಾ ।
ಜಳಧೀ ರಕ್ಷಿಸು ರಕ್ಷಿಸೆಂ"ದು ಕೆಡೆದಂ ನಿಂದಾರೆ ಬಂದಾಜನಂ ॥ (೫೦)

ವ॥ ಆ ಸಮಯದೊಳ್—

ಮ॥ ಒಡೆಯನ್ ಪಿಂಗಿದನೇಪದಲ್ಲಿ ಸುನಕಂ ಪೊಕ್ಕಂವದಿಂದೀ ಬನ ।
ಕ್ಕೊಡೆಯಂ ರೂಢಿಯ ವಿಶ್ವನಂದಿಯುವರಾಜಂ ಕಾಳೆಗಕ್ಕಂದು ತಾಂ ॥
ಗಡ ಪೋಗಿರ್ದೊಡೆ ಪಿಂತೆಪೊಕ್ಕನಿದನೀ ಕಷ್ಟಂಗೆ ದುಷ್ಟಂಗೆ ಕೇ ।
ಡಡಸಲ್ ತಕ್ಕುದೆನುತ್ತುಮೊಲ್ದುನುಡಿದತ್ತಲ್ಲಲ್ಲಿ ನೋೞ್ಪಾಜನಂ ॥ (೫೧)

ಕಂ॥ ಕರದ ಪಿರಿದಪ್ಪತರುವಿಂ ।
ತರುವಲಿಸುಂ ತಱಮೊದೆದು ಮಂತಕವದನಾಂ ॥
ತರದೊಳ್ ತೂಂತದೆ ಟಕ್ಕಿಂ ।
ಪೊರೆದವೊಲಿಂತೇಕೆ ನಿಂದನೆಂದರ್ ಕೆಲಬರ್ ॥ (೫೨)

ಅನ್ನೆಯದಿಂ ನಡೆಥವನಂ ।
ತನ್ನಯ ಬನಮುಂ ಕಡಂಗಿ ಕೊಂಡವನಂ ಸಾ ॥
ವನ್ನಂ ಪಲತೆಱದಿಂದಂ ।
ಬನ್ನಂಬಡಿಸುವುದೆ ಕಾರ್ಯಮೆಂದರ್ ಕೆಲಬರ್ ॥ (೫೩)

ವ॥ ಅಂತು ಪೌರಕಳಕಳಂ ಕರಮೆ ಕೆೞರ್ದೆ—

ಕಂ॥ ಅವನ ವಿಳೋಚನೆ ಘನದಿಂ ।
ಕವಿತರ್ಪ ಪಯಃಪ್ರಪೂರದಿಂದಂ ಕರುಣಾ ॥
ರವದಿಂದಂ ನಂದಿದುದಂ ।
ದು ವಿಶ್ವನಂದಿಯ ಮಾನಸಸ್ಥಕೋಪಜ್ವಲನಂ ॥ (೫೪)

ಪೃಥ್ವೀ॥ ಪೊಡರ್ವುಗಿಡೆ ದೈನ್ಯದಿಂ ನಿಜಪದಾಬ್ಜದೊಳ್ ಬಿಱ್ಬ ಬಾ ।
ಯ್ವಿಡುತ್ತುಮಿರ ನೋೞ್ಪ ಪೇಡಿಯುನದೆಂತು ಕೊಂದಪ್ಪೆನಂ ॥
ದಡಂಗಿಸಿದನಾತ್ಮಕೋಪಮನಗಣ್ಯಕಾರುಣ್ಯದೊಳ್ ।
ತೊಡಂಕೆ ಮನಮಾಗಳಾ ವಿಜಯವಿಶ್ವನಂದ್ಯಾಹ್ವಯಂ ॥ (೫೫)

ವ॥ ಅಂತು ಕರುಣಾರಸತರಂಗಿಣೀತರಂಗಾಯಮಾಣಮಾನಸನಾಗಿ ನಿಜಚರಣ ನಿಕಟನಿಪತದ್ಗಾತ್ರನನಸ್ಪಂದನೇತ್ರದಿಂ ಕಿಱಿದು ಪೊೞ್ತು ನೋಡುತ್ತುಮಿರ್ದು—

ಉ॥ ನೋಡದೆ ಮತ್ಪಿತೃವ್ಯನ ಜಗನ್ನುತ ಭವ್ಯನ ಮಾೞ್ಪಮೋಹಮಂ ।
ಬೇಡದ ಕಾಡಬಳ್ಳಿ ಮರನೆಂಬಿವನಾದಮ ನೋಡಿನಾಡೆಯುಂ ॥
ಮಾಡಿದೆನಾತನಾತ್ಮ ಜನೊಳಿಂತಭಿಮಾನದ ಹಾನಿಯಂ ವಲಂ ।
ನೋಪುವೆನೆಂತೊ ತನ್ಮುಖಮನೆಂದತಿ ಲಜ್ಜಿತನಾದನೂರ್ಜಿತಂ ॥ (೫೬)

ವ॥ ಅಂತು ಚೇತೋನಿಕೇತನದೊಳ್ ಲಜ್ಜೆ ಪಜ್ಜಳಿಸೆ—

ಚಂ॥ ಕರದ ಕಪಿತ್ಥಮಂ ಬಿಸುಟು ಮೆಲ್ಲನೆ ತಲ್ಲಣಿಸುತ್ತುಮಿರ್ದ ಕಾ ।
ಪುರುಷನ ಶೀರ್ಷಮಂ ನೆಗಪಿಯಂಜದಿರಂಜದಿರೆಂಬ ತನ್ನ ಬಂ ॥
ಧುರತರವಾಕ್ಸುಧಾರಸದಿನಾತನನಾಱಿಸಿ ವಿಶ್ವನಂದಿ ಮಂ ।
ದರಧರಣೀಧರಸ್ಥಿರಗುಣಂ ತಳೆದಂ ಜನದಿಂ ಪೊಗೞ್ತೆಯಂ ॥ (೫೭)

ವ॥ ಅಂತು ಭೂರಿಭೀರಸಾಕ್ರಾಂತಸ್ವಾಂತನಾದ ದುಷ್ಟದಾಯಾದಂಗಭಯ ಪ್ರದಾಯಕನಾಗಿ ತಂನೊಳಿಂತೆಂದಂ—

ಚಂ ಮರಗಿಡುಬಳ್ಳಿಗಳ್ ನೆಗೞ್ದ ಬಂಧುಜನಂಗಳೊಳಿಂತು ವೈರಮಂ ।
ನಿರವಧಿದುಃಖಕಾರಣಮನಾಗಿಸಲಾರ್ತುಮಿವೆಂದೊಡುರ್ವರಾ ॥
ಭರಪರಿಪೂಜ್ಯರಾಜ್ಯರಮೆ ಮಾಡದೆ ಮಾಣ್ಗುಮೆ ಚಿಃ ನಿರರ್ಥಮಿ ।
ನ್ನಿರಲಣಮಾಂಪೆನಾಂ ಪರಮಪಾವನ ದೀ[ಕ್ಷೆಯನಾತ್ಮ(ರ]ಕ್ಷೆಯಂ ॥ (೫೮)

ವ॥ ಎಂದು ತಪೋನುಷ್ಠಾನದತ್ತಚಿತ್ತನಾಗಿ—ಬೇಗದಿಂ ರಾಗದ್ವೇಷ ದೋಷ ದೂಷಿತಮುಂ, ಬಹುವಿಧಾಯಾಸವಾಸಿತಮುಮೆನಿಪ ಗೃಹಸ್ಥಾವಸ್ಥಾನಮಂ ಸಾರಾ ಸಾರವಿಚಾರವಿಶಾರದಂ ಪತ್ತುವಿಟ್ಟು ವಿಮನೋವಿಷಾದವಿಷಮವನಮಂ ಸುಟ್ಟು ವಿಶಾಖನಂದಿಗಂದು ನಾಡೆಯುಂ ಕ್ಷಮೆಯಂ ಕೊಟ್ಟು, ಮುಕ್ತಿಕಾಂತೆಗೆ ಕಣ್ಣಿಟ್ಟು, ತದ್ವಿಶಾಳ ಕೇಳೀವನಮಂ ಬಿಟ್ಟು, ನಿಖಿಲಭುವನಪಾವನತಪೋವನಾಭಿಮುಖನಾಗಿ ಪೋಗುತ್ತುಮಿರೆ ತತ್ಪ್ರಪಂಚಮಂ ಕೇಳ್ದು ಜಳಧರಪಟಳಪಟುರಟನಮಂ ಕೇಳ್ದಕಳ ಹಂಸನಂತೆ—

ಮ॥ ಕ್ಷಿತಿಕಾಂತಂ ಚಕಿತಾಂತರಂಗನತಿವೇಗಂ ಬಂದು ತಾಂ ಬಂಧುಜಾ।
ಸ್ವಿತಸಂದಾಯುಪರಾಜರಾಜಿತ ಪದಾಂಭೋಜಾತದೊಳ್ ಮೊಟ್ಗೆ ಸ॥
ನ್ನುತಶೌರ್ಯಾಂಬುಧಿ ನೀನಿದೇಕೆ ಮಗನೇ ಬಿಟ್ಟೆನ್ನನನ್ಯಾಯಸಂ।
ಗತನೆಪ್ಪೀತನ ಬೂಸಱಿಂದೆ ಕೆಳೆವೋನ್ವಾಪೇಕ್ಷೆಯಂ ದೀಕ್ಷೆಯಂ॥ (೫೯)

ವ॥ ಅದಲ್ಲದೆಯುಂ—

ಮ॥ ಧರಣೀಭಾರಮ ಎರೊ ಪೇತ್ತ ಪರಿದಂ ನೀಂ ಪೋಗಿ ಭಾಸ್ವತ್ತಪೋ।
ಭರಮಂ ತಾಳ್ದದೊಡಿನ್ನೆಗಂ ಕಿಡದೆ ಬಂದೀಪ್ರಾಜ್ಯರಾಜ್ಯಂ ವಿನ॥
ಶ್ವರಮಕ್ಕುಂ ಸ್ಥಿರಮಕ್ಕುಮೇ ಪದೆದಿದಂ ಕೆಯ್ಕೊಂಡು ನಮ್ಮನ್ವಯಂ।
ಚಿರರಾಜ್ಯೋದಯವಾದುದೆಂಬ ಜಸಮಂ ನೀಂ ಪರ್ವಿಸೀಯುರ್ವಿಯೊಳ್॥ (೬೦)

ವ॥ ಎಂದು ಬಹುವಿಧ ಲಾಲನಾಲಾಲಿತಂಗಳುಂ ಪರಮಸ್ನೇಹಾವಗಾಹಿತಂಗಳು ಮಾದ ಪಲತೆಱದ ವಚನಂಗಳನುಚ್ಚರಿಸುತ್ತುಮುಚ್ಚಳಿಪ ವಿಳೋಚನಜಳಂಗಳಿಂ ಕ್ರಮ ಕಮಳಯುಗಳಮಂ ಕ್ಷಾಳಿಸುವ ಪಿತೃವ್ಯನಂ ಭವ್ಯವರಪುಂಡರೀಕಂ ಪುಂಡರೀಕಹಸ್ತೋಪ ಮಮೆನಿಪ ನಿಜಪ್ರಶಸ್ತಹಸ್ತದಿಂ ನೆಗಂಪಿ ಕೆಯ್ಗಳಂ ಮುಗಿದು.—

ಮ॥ ಧರೆಯೊಳ್ ಬಲ್ಲಿದರಪ್ಪ ವೈರಿನೃಪರಂ ನಿಮ್ಮಾಜ್ಞೆಯಿಂ ಗೆಲ್ದ ಮ।
ತ್ತರಿದಾರ್ಗಂ ಗೆಲಲೆಂಬ ಕರ್ಮಬಲಮಂ ನಿರ್ಮೂಲನಂ ಗೆಯ್ಯದೋ॥
ಸರಿಸಿರ್ದಂದು ಮದೀಯ ವಿಕ್ರಮಕೆ ಬನ್ನಂ ಬಾರದೇ ದೇವ ಭೀ।
ಕರ ಕರ್ಮಾರಿಯನಿಕ್ಕಿ ಮಿಕ್ಕಜಯಮಂ ಕೆಯ್ಕೊಳ್ವೆನಾನೆಂತಱಿಂ॥ (೬೧)

ವ॥ ಅಂತುಮಲ್ಲದೊಡಮಿನ್ನುಮೊಂದನವಧರಿಪುದೆಂದು ಮತ್ತಮಿಂತೆಂದಂ.—

ಕಂ॥ ಪರಮಜ್ಞನವಚನದಿಂ ಸಂ।
ಸರಣಾಸಾರತೆಯನಱಿವನಿಮಗೀಗಳ್ ತಾಂ॥
ದೊರೆಕೊಂಡ ವಿರಕ್ತತೆಯಂ।
ಪರಿಹರಿಸುವುದೆಂಬುದುಚಿತಮೇ ಪೇೞಿಮಿದಂ॥ (೬೨)

ವ॥ ಅದುಕಾರಣದಿಂ—

ಕಂ॥ ಎನಗೆ ಹಿತೈಷಿಗಳಪ್ಪೊಡೆ।
ನೆನೆಯದಿರಿಂ ಪೆಱತನೊಂದುಮಂ ದೇವ ಜರಾ॥
ಜನನಮೃತಿನಾಶಕರಮಂ।
ಜಿನದೀಕ್ಷಾಭರಮನಾಗಿಪೊಂದನೆ ನೆನೆಯಿಂ॥ (೬೩)

ವ॥ ಎಂದು ಮಱುಪೂತಿಂಗೆಡೆಗುಡದ ನುಡಿಯುಂ ನುಡಿದು ಸಂಸಾರಸಾಗರ ಸಮುತ್ತರಣ ತರಣಿಯುಂ, ನಿಜಗುಣತಾಮರಸತರಣಿಯುಮೆನಿಪ ಪರಮ ತಪಸ್ಸರ ಣಿಯುಂ ಕೈವಲ್ಯಧರಣಿಯುಮೆಯ್ದುವುದ್ಯೋಗಮನೆಂತಾನುಮೊಡಂಬಡಿಸಿ ಸಮುಚಿತ ಕ್ಷಮಿತವ್ಯಕಥನಪೂರ್ವಕಂ ಪಡೆವಾಗಳ್—

ಮ॥ ಸ್ರ॥ ಅಸಕೃದ್ಭೋಗೋಪಭೋಗಂಗಳನತಿಮುದದಿಂ ಭೋಗಿಪೀಪ್ರಾಯದೊಳ್ ವ।
ರ್ಜಿಸಿ ರಾಜ್ಯಶ್ರೀಯನೀಯಂದದೆ ಸಿಸುವೆಸೆದಂ ತಾಳ್ದಿ ವೈರಾಗ್ಯಮಂ ಭಾ॥
ವಿಸೆ ಮತ್ತಾನಿನ್ನುಮೀರಾಜ್ಯದೊಳೆ ಗತವಯಸ್ಕಂ ವಲಂ ಲೀಲೆಯಿಂ ಲಾ।
ಲಸನಾಗಿರ್ದಂದು ಲೋಕಂ ಪೞಿಗು ಮಱುಗುವೊಳ್ಪಕ್ರಮಂ ಮಿಕ್ಕುಬರ್ಕುಂ॥

ವ॥ ಅದಲ್ಲದೆಯುಂ—

ಮ॥ ಸ್ರ॥ ಎನಿತಾನುಂ ಕಾಲಮೊಲ್ದಿಂದ್ರಿಯ ವಿಷಯಸುಖಾಸಕ್ತನಾಗಿರ್ದೊಡಂ ಜೀ।
ವನವಶ್ಯಂ ತೃಪ್ತನಾಗಂ ಬಗೆವೊಡಗಣಿತಾಶಾಲತಾಪಾಶದಿಂ ಬಂ॥
ಧನಮುಂ ತಾನೆಯ್ದಿ ಜನ್ಮಾಟವಿಯೊಳವಿರತಂ ಘೋರದುರ್ವಾರ ನಾನಾ।
ಘನ ದುಃಖಜ್ವಾಳ ಕೀಳಾವಳಿಕಬಳಿತನೀಯಂದದಿಂ ಬರ್ದುತಿರ್ಕುಂ॥ (೬೫)

ಕಂ॥ ಮನದಳಿಪಿಂದನುಚಿತಮೆನಿ।
ಪನೇಕವಿಧಪುದ್ಗಳಾನುಭವಮುಂ ಬಿಡದಿ॥
ರ್ಪ್ಪನೆರಂ ಭವಮುಂ ಬಿಡದಿ।
ರ್ಪನರಂ ತಾನೆವಲಮಿಲ್ಲಿ ಸಂದೆಯಮುಂಟೇ॥ (೬೬)

ಕಿಂಪಾಕದ ಪರಿಪಾಕದ।
ಸಂಪತ್ತಿಗಮಿದಱಪಾಕಸಂಪತ್ತಿ ಕರಂ॥
ಸೊಂಪಮರ್ದುದೆನಿಪ ಕಿಲ್ಮಿಷ।
ಕಿಂಪಾಕಮನಕಟ ಜೀವತತಿಯನುಭವಿಕುಂ॥ (೬೭)

ವ॥ ಎಂದು ಪರಿಭಾವಿಸುವ ವಿಶಾಖಭೂತಿಭೂತಳೇಶ್ವರಂ ವಿರಕ್ತಿಭೂತಿಭೂಷಿತ ಚೇತೋನಿಕೇತನನಾಗಿ—

ಕಂ॥ ಹೊಱಸಂ ವಿಶಾಖನಂದಿಯ।
ನಿಱಿಕೆಯ ನಿಜರಾಜ್ಯಪದವಿಯೊಳ್ ಸಕಳಜನಂ॥
ಮಱುಗಿಗುಜುಗುಜುಗೊಳುತ್ತಿರೆ।
ನಿಱಿಸಿದನಿರದಂದು ಮಂದಭಾಗ್ಯದ ಹೊಱಿಯಂ॥ (೬೮)

ವ॥ ತದನಂತರಮಾಜವಂಜವದವಕ್ಕೆ ನಿಕ್ಕುವಮಂಜಿ ವಿರಕ್ತಿವಾರಿಧಾರಾಸಿಕ್ತರಾದ ಸಾಸಿರ್ವರುರ್ವೀಪತಿಗಳ್ವೆರಸು ವಿಶ್ವನಂದಿಕುಮಾರನೊಡನೆ ನಡೆದು—

ಕಂ॥ ಆತನ ಗುಣಜಾತನ ಸಂ।
ಭೂತಯತೀಶ್ವರನ ಚರಣಸನ್ನಿಧಿಯೊಳ್ ವಿ॥
ಖ್ಯಾತರವರೆಲ್ಲರುಂ ಜಗ।
ತೀತಳನುತಮೆನಿಪ ಜಿನರ ದೀಕ್ಷೆಯನಾಂತರ್॥ (೬೯)

ವ॥ ಅಂತುನಿರಶನಾದಿ ನಿರುಪಮತಪಮನಾಂತು ನಿರತಿಶಯ ಪರಮಾಗಮ ಪ್ರವೀಣರುಂ ಬ್ರತಸಮಿತಿ ಗುಪ್ತಿ ಕೃತತ್ರಾಣರುಂ, ವಿಜಿತವಿಷಮಬಾಣರುಂ, ಷಡಾವಶ್ಯಕಾಕ್ಷೀಣರುಂ, ದಯಾನಿತಂಬಿನೀ ನಿಜಪ್ರಾಣರುಮೆನಿಸಿ, ದುರ್ಧರಾಚರಣಪರಿಣತರ್ ನೆಗಱುತ್ತುಮಿರ್ಪುದುಮವರೊಳ್—

ಚಂ॥ ಎಸೆವ ವಿಶಾಖಭೂತಿಯತಿನಾಯಕನಾಯುವಿನಂತ್ಯದಲ್ಲಿ ಸ।
ನ್ಯಸನಮನಾಂತು ಶಾಂತಹೃದಯಂ ನಿಜವಿಗ್ರಹಭಾರಮಂ ವಿಸ॥
ರ್ಜಸಿ ಸಹಜೋಲ್ಲಸದ್ವಸನ ಕೌಸುಮಶೇಖರ ರತ್ನಭೂಷಣ।
ಪ್ರಸರ ಶರೀರನುದ್ಭವಿಸಿದಂ ಸುರನಾಗಿ ಶತಾರಕಲ್ಪದೊಳ್॥ (೭೦)

ಕಂ॥ ಅನಿಮಿಷ ವನಿತಾಜನದೊಡ।
ನನೇಕ ಭೋಗೋಪಭೋಗಸಂದೋಹಮನಂ॥
ದನುಭವಿಸಿದನನುನಯದಿಂ।
ದನವದ್ಯ ಜಿನೇಂದ್ರ ತಪಮನೆಸಗಿದದೆಸೆಯಿಂ॥ (೭೧)

ವ॥ ಅಂತಾಸಾಮಾನಿಕಾಮರಂ ನಿಕಾಮರಾಮಣೀಯಕಾನೇಕನಾಕಲೋಕವಿನೋದೋತ್ಪಾದಿತ ಸಮಗ್ರಸುಖಸುಧಾಸರಿನ್ನಿಮಗ್ನಮಾನಸಂ ಜೈನಪೂಜಾವಿಧಾನ ದತ್ತಾವಧಾನನಾಗಿರ್ದನಿತ್ತಲಾವಿಶ್ವನಂದಿ ಯೋಗೀಶ್ವರಂ ಲೋಕಸ್ತುತಮಪ್ಪೇಕವಿಹಾರಿತ್ವ ಪ್ರತಿಜ್ಞೆಯಂ ಗುಣಗುರುಗಳನುಜ್ಞೆಯಿಂ ತಳೆದು ತಳರ್ದು—

ಕಂ॥ ಒಂದಂ ಗ್ರಾಮದೊಳೈದಂ।
ಸಂದ ನಗರದೊಳ್ ಬೞಿಕ್ಕೆ ಪತ್ತಂ ವನದೊಳ್॥
ಸಂದೆಯಮೇಂ ರಾತ್ರಿಯನೀ।
ಯಂದದಿ ಕಳಿಪುತ್ತುಮುತ್ತಮಂ ವಿಹರಿಸಿದಂ॥ (೭೨)

ಚಂ॥ ಕ್ಷಿತಿನುತ ಯೌವರಾಜ್ಯಪದದೊಳ್ ಮುದದಿಂದಮೆ ನಿಂದು ಮುನ್ನಮ।
ಪ್ರತಿಮವಿಳಾಸಸದ್ವಿತರಣೋರ್ಜಿತ ವೀರಗುಣಂಗಳಿಂ ಸಮು॥
ನ್ನತಿವಡೆದಾವಗಂ ಬೞಿಕ ಪಾವನಜೈನತಪಃಪ್ರಭಾವಸಂ।
ಗತನೆನೆ ಸಂದನೇನಧಿಕನೋ ರಸೆಯೊಳ್ ವಸುಧೈಕಬಾಂಧವಂ॥ (೭೩)

ಗದ್ಯಂ

ಇದು ನಿಖಿಳಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ
ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಮಪ್ಪ
ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್
ವಿಶ್ವನಂದಿಕುಮಾರ ಮಾರವಿಜಯ ವರ್ಣನಂ
ದ್ವಿತೀಯಾಶ್ವಾಸಂ ಶ್ರೀ.

ತೃತೀಯಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀ ಸಂಯಮಸಂಪತ್ತಿ ವಿ।
ಭಾಸಿತಸಂಪತ್ತಿ ಸಂತತಂ ಸಹಜಾತ್ಮಾ॥
ಭ್ಯಾಸಪ್ರವೃತ್ತಿ ನೆಗಱ್ದನಿ।
ಳಾಸೇವ್ಯಂ ಪಂಚಪರಮಗುರುಪದವಿನತಂ॥ (೧)

ವ॥ ಇಂತು ಪೆರ್ಮೆವೆತ್ತ ತನ್ಮುನೀಶ್ವರಂ ಗಂಭೀರೋದಾರಮಧುರಾವಿಧುರ ಸುವ್ಯಕ್ತಸೂಕ್ತಿಜೀಮೂತಸ್ತೋಮದಿಂ ನಿರ್ಮಳಧರ್ಮಾಮೃತಾಸಾರಮಂ ಧಾರಿಣಿಯೊಳ್ ಕಱೆವುತ್ತುಮಶೇಷ ಭವ್ಯಸಸ್ಯಸಂಪತ್ತಿಯಂ ನಿತ್ಯಮೊದವಿಸುತ್ತುಮೊರ್ಮೆ ಸಕಳಸಂಪದುತ್ತರಮೆನಿಸಿದುತ್ತರಮಧುರೆಯೆಂಬ ಪೆಸರಿನೆಸೆವ ನಗರಿಯನೆಯ್ದೆವರ್ಪುದುಂ—

ಕಂ॥ ಬಿಡದೊಡವಂದು ಬಟಿಲ್ದಿರ್।
ನಡೆಯಲ್ವೇಡೆಂದು ಮೊಟಿಗ್ಗಿ ಕಾಲ್ಗೆ ಅಗಿದವೋಲ್॥
ಅಡಿಮೊದಲಂ ಸಾರ್ದನೆಬಿಲ್।
ನಡುವಗಲಂ ನಿಗದಿಸಿತ್ತು ಮುನಿಪತಿಗಾಗಳ್॥ (೨)

ವ॥ ತದನಂತರಂ—

ಸ್ರ॥ ಮಾಕಂದಾಶೋಕಜಂಬೂಪನಸಕದಳಿಪುನ್ನಾಗಸನ್ನಾಳಿಕೇರಾ।
ನೀಕವ್ಯಾಭಾಸಿತೋದ್ಯಾನದ ವರಸಹಕಾರದ್ರುಮಾಧಃಸ್ಥ ಸತ್ಸ॥
ಟ್ಯಾಕಾರ ಸ್ಫಾಟಿಕಗ್ರಾವದೊಳತಿಮುದದಿಂದಿರ್ದು ನಿರ್ದುಷ್ಟಬೋಧಾ।
ಳೋಕಂ ಮಾರ್ಗಾತಿಚಾರೋಚಿತನಿಯಮನಮಂ ಮಾಡಿದಂ ಯೋಗಿವಂದ್ಯಂ॥ (೩)

ವ॥ ಅಂತು ನಿರ್ವರ್ತಿತನಿಯಮನಾದ ಯಮಿವರಂ ವಿಹಿತಸ್ವಹಿತಮಾಸೋಪವಾಸನಪ್ಪುದಱಿಂ ಭವ್ಯಸುಖಕಾರಣಂ ಪಾರಣಾನಿಮಿತ್ತಮತ್ಯಂತಪ್ರತಾಪವರ್ತನಂ ವಿಕರ್ತನಂ ವಿಯನ್ಮಧ್ಯವರ್ತಿಯಾದ ತತ್ಕಾಲದೊಳ್ ಪೊಱಲಂಪೊಕ್ಕು ನಿರ್ವಿಕಾರ ಯಾನಾವಧಾನಪನೂನಾತಿಥ್ಯಂ ರಥ್ಯಾಮಾರ್ಗದೊಳ್ ಬರುತಿರ್ದನನ್ನೆಗಂ—

ಮ॥ ಪರಿಯುತ್ತಪ್ಪಳಿಸುತ್ತುಮೆಣ್ದೆಸೆಗಮೊಂದೀದಾವು ಮೆಯ್ವೆರ್ಚೆ ಹೂಂ।
ಕರಿಸುತ್ತುಂ ಬಿಡೆ ಕಂಡಕಂಡವರ್ಗಳಂ ಚಿನ್ನಟ್ಟುತುಂ ಕರ್ಣಕಂ॥
ಬರೆ ಜೆನ್ನೊಳ್ ನಲವಿಂದದಂ ಮಿಗೆ ಮರಲ್ದಾಘ್ರಾಣಿಸುತ್ತುಂ ಪುರೀ।
ವರ ವೀಥ್ಯಂತರದೊಳ್ ಮಹಾರಭಸಮಂ ಮಾಡಿತ್ತು ತತ್ಕಾಲದೊಳ್॥ (೪)

ಚಂ॥ ಮನೆಮನೆದಪ್ಪದೋಡಿ ಪಡಿಯಂ ಕೆಱುತಿರ್ಪ ಗೃಹಂಗಳಗ್ರಮಂ ।
ತನತನಗೇಱುತಿರ್ಪ ದಡಿಗುಂ ಪಿಡಿದಬ್ಬರಿಸುತ್ತುಮಿರ್ಪ ತೊ ।
ಟ್ಟನೆ ಕೆಡೆಯುತ್ತುಮಿರ್ಪ ಬಿಡೆ ಕೂಗಿಡುತಿರ್ಪಳುತಿರ್ಪ ತತ್ಪುರೀ ।
ಜನದ ಪೊದಬ್ಬೆ ತಲ್ಲಣದ ಮಲ್ಲಣೆ ಬೀದಿಯೊಳಾದುದದ್ಭುತಂ । (೫)

ವ॥ ಆ ಪ್ರಸ್ತಾವದೊಳ್—

ಮ॥ ತಪದಿಂದಂ ಬಡಪಟ್ಟ ನಿಟ್ಟೊಡಲನಂ ನಿರ್ವ್ಯಗ್ರನಂ ತತ್ಪುರೋ ।
ರುಪದಪ್ರಾಪ್ತನನೆಬ್ಬಿ ಪಾಯ್ದುಪಸು ಕೂರ್ಗೋಡಿಂದೆ ಕೋದೆತ್ತಿ ಮಂ ॥
ಡಪ ಸೋಪಾನದ ಪಾರ್ಶ್ವದಲ್ಲಿ ಕೆಡವಂತೀಡಾಡಿದತ್ತತ್ತಲುಂ ।
ಗ್ಲಪಿತಾಸ್ಯರ್ ಪರಿದೆಯ್ದಿ ಪೌರರರೆಬರ್ ಹಾ ಹಾಯೆನುತ್ತಿರ್ಪಿನಂ ॥ (೬)

ಕಂ॥ ಬಸಿದಸಿಯ ದಸಿಯನನುಕರಿ ।
ಪ ಸೂಜಿಗೊಂಬುರ್ಚಿ ಸೀೞ್ದು ಬಸುಱಿಂ ನಿಸದಂ ॥
ಬಿಸುನೆತ್ತರ ಪೊನಲುಂ ಕರು ।
ಳ ಸೋಗೆಯುಂ ಕವಿದುವವನಿಗಾಯತಿಪತಿಯಾ ॥ (೭)

ಕಂ॥ ಅಂತಸುವಱಿಯಾಗಿಯುಮಾ ।
ಶಾನ್ತಾತ್ಮಂ ಜೀವಕರ್ಮಭೇದಂಗಳನ ॥
ತ್ಯಂತಂ ಭಾವಿಸುತಿರ್ದಂ ।
ಸ್ವಾಂತದೊಳೋರಂತೆ ಮುಚ್ಚಿದಕ್ಷಿಗಳಿಂದಂ ॥ (೮)

ವ॥ ಮತ್ತಂ—

ಕಂ॥ ಕರಮೆ ಪದುಳಕೆಯ ಸೊಂಪಾ ।
ವರಿಸಿದ ನಿಜಸದಯಹೃದಯ ಸದನದೊಳತ್ಯಾ ॥
ದರದಿಂ ಸಕಳತ್ಯಾಗ ।
ಸ್ವರೂಪ ಸನ್ಯಸನದೈವಮಂ ಸ್ಥಾಪಿಸಿದಂ ॥ (೯)

ವ॥ ಆ ಸಮಯದೊಳ್—

ಚಂ॥ ಮಸೆದಸಿಘೇನುವಂ ಮಿಗುವ ನೀಳ್ದ ವಿಷಾಣದ ಧೇನು ಬೀದಿಯೊಳ್ ।
ಮಸಗಿ ತಪೋಧನಂ ಬರುತುಮಿರ್ದೊಡೆ ಪಾಯ್ದುಱಿಪಕ್ಕಟಕ್ಕಟಾ ॥
ಬಿಸುಟುದು ಪಾಪಕರ್ಮಸಮನಾವನೊ ದುಷ್ಟಯೆನಿಂತು ಬಿಟ್ಟನಾ ।
ಪಸುವನೆನುತ್ತೆ ಮುತ್ತಿ ಮುಸುಱಿತ್ತು ಜನಂ ಕೆಡೆದಿರ್ದ ಯೋಗಿಯಂ ॥ (೧೦)

ಉ॥ ಓಡನೆ ಪಾಪಕರ್ಮನಡೆಯೊಡ್ಡಿದವರಾಱ್ಕೆಯೆಗಳ್ವರ್ಸಸ್ಕೆಯುಂ ।
ಕೋಡುಱಿಸಟ್ಟವೆಯ್ದೆ ಕರುಳೊಕ್ಕುವ ಜೀನಿಸಲಾಱಸಕ್ಕಟಾ ॥
ಪೋಡಱಪರ್ಷಸತ್ತ್ವನಸೂ ತಾಪಸನೆಂಬುದಱುತ್ತುಮೆಲ್ಲರುಂ ।
ನೋಡುತುಮಿರ್ದರಂದು ಪರಿತಂದು ಗಳದ್ರುಧಿರಪ್ರವಾಹನಂ ॥ (೧೧)

ವ॥ ಅನ್ನೆಗಂ ಮುಂಪೇೞ್ದ ಕಾಮರೂಪಭೂಮೀಶ್ವರಂ ಪರಾಕ್ರಮಾಕ್ರಾಂತ ಸರ್ವೋರ್ವರಾಚಕ್ರರುಂ ವಿಳಾಸೈಶ್ವರ್ಯವಿಜಿತಶಕ್ರರುಮೆನಿಸಿದ ವಿಶಾಖಭೂತಿ ವಿಶ್ವನಂದಿಗಳನಿಂದಿತಜಿನೇಂದ್ರದೀಕ್ಷಾಕೌಕ್ಷೇಯಕದಕ್ಷರಾಗಿ ಕರ್ಮಾರಿಬಳಮನಜಿಲಿಸಲ್ ನವೆದಿಂ ಬೞಿಯುಂ ಅಕ್ರಿಕಪಟನಪಷಸ್ಯಂದಿಯುಂ ವಿಶಾಖನಂದಿಯುಂ ಕ್ರಮಕ್ರಮ ಪರಿತ್ಯಕ್ತಪರಿವಾರನಂ ದುಃಕೃತಾಚಾರನಂ ದ್ಯೂತಾದಿವ್ಯಸನಾಭಿನಿವೇಶನಂ ರಿಕ್ತೀಭೂತ ಮುಕ್ತಾದಿ ರತ್ನಕೋಶನಂ ಪೋಗಿ ಬೇಗದಿಂ ಮುತ್ತ—

ಚಂ॥ ಅದಿರದೆ ಕಾದಿ ತನ್ನಗರ ಕೋಶಮನೋವದೆ ಸೂಱೆಗೊಂಡು ಸಿ ।
ಲ್ಕಿದ ಖಳನಂ ಪ್ರತಾಪಿ ಸೆಱೆಯಿಟ್ಟೊಡೆ ಮಾನವಿಹೀನನಾವುಪಾ ॥
ಯದೊಳಮೊಡಲ್ಗೆ ಕೂೞ್ವಡೆದು ಜೀವಿಪುದೊಂದೆ ವಿಧೇಯಮೆಂದೆ ತ ।
ತ್ಸದನತಿಲೇಖವಾಹಕತೆಯಂ ಪಡೆದಂ ಪಿರಿದಪ್ಪಲಲ್ಲೆಯಿಂ ॥ (೧೨)

ವ॥ ಅಂತಾದುರಾತ್ಮಂ ಕಾಮರೂಪಭೂಪಂಗೆ ಲೇಖವಾಹಕನಾಗಿ ಮನ್ನೆಯ ಮಂಡಲಿಕ ಸಾಮಂತಾದಿ ಮೇದಿನೀಪ್ರಭುಗಳ ಸಭೆಗೆ ಲೀಲೆಯಿನೋಲೆಯನಡಿಕಿ ಸಂಬಳಂಬಡೆದು ಜಗಂ ತೆಗಳೆ ಜೀವಿಸುತ್ತುಮುತ್ತರಮಧುರೆಯ ಧರೇಶ್ವರಂಗ ಮುಂದಿನ ದಿನಪೋಲೆಯಂ ತಂದಿಕ್ಕಿ ತತ್ಪುರದೊಳಿರ್ದ ವಿಶಾಖನಂದಿ ಪಸಿವಂ ನಂದಿಸಲೆಂದು ಲಂದಣೆಗರ ಮಂದಿರಕ್ಕೆ ಪೋಪವಂ ಮುಂದೆ ಸಂದಣಿಸಿ ನಿಂದ ನೆರವಿಯಂ ಭೋಂಕನೆ ಕಂಡು—

ಕಂ॥ ಸಿರದೊಳಮರ್ದೋಲೆ ಕೌಂಕುಳ ।
ಕರಪಾಳಿಕೆ ಮೆಟ್ಟದೆಕ್ಕಡಂ ತೊಟ್ಟಸೆವಾ ॥
ಕರಿಯ ನಡುಕಟ್ಟನಂಗಿಗೆ ।
ವೆರಸಿದ ತಲ್ಲೇಖವಾಹನುನ್ನತದೇಹಂ ॥ (೧೩)

ಚಂ॥ ಪರಿದತಿವೇಗದಿಂ ಬಗಿದು ಸಂದಣಿಯುಂ ಪುಗುತಂದು ಭಾವನಾ ।
ಪರನನತೀವ ಸಂವೃತನಿಜಾಂತನನಾದಮ ಪೂತಮುತ್ತದಂ ॥
ತಿರಿ ಕೆಡೆದಿರ್ದನಂ ಧರೆಗೆ ಕಣ್ಣೆ ಮುಟ್ಟಕ್ಕದೆ ನೋಡಿ ತದ್ದಿಗಂ ।
ಬರನನೆ ವಿಶ್ವನಂದಿಯುವನೆಂದಱಿದೊಂದಿದನಂದುರಾಗದಿಂ ॥ (೧೪)

ವ॥ ಅಂತು ಮುನ್ನಂ ತನ್ನಂ ಬನ್ನಂಬಡಿಸಿದುನ್ನತತೇಜನಂ ವಿಶ್ವನಂದಿಯುವರಾಜನಂ ವಿಗತವಿಷಾದನಂ ನಿಜದಾಯಾದನನಱಿದು "ತನ್ನಿಱಿವಪಗೆಯನತ್ತಱಿದುದು" ಎಂಬ ನಾಣ್ನುಡಿ ನನ್ನಿಯಾದುದೆಂದು ತನ್ನೊಳುನ್ನನ್ನನೆ ಪೆರ್ಚ್ಚಿ ಬಿಚ್ಚತ ಮುಚ್ಚರವದಿನಿಂತೆಂದು ಮೂದಲಿಸಿದಂ—

ಚಂ॥ ಅದಿರದೆ ವೀರವೈರಿಭಟರಂ ಘಟಕೋಟಿಗೆ ಪಾಟಗಂಡು ನು ।
ರ್ಗಿದ ಪಿಡಿದಪ್ಪ ಕಲ್ಲಕಡುಗಂಬಮನಾದ ಕರಾಗ್ರದಿಂದಮ ॥
ತ್ತಿದ ಕಪಿಕತ್ಥಮುಂ ಘನಕಪಿತ್ಥಮನಾನನದೊಳ್ ಕಡಂಗಿ ಕಿ ।
ತ್ತಪಟದು ಪೋದುದೇ ನಿನಗಮಾತೆಱಿಂ ಕಡೆವಂತುಟಾದುದೇ ॥ (೧೫)

ಕಂ॥ ಧರೆಪೊಗಲ್ವ ನಿನ್ನಮುನ್ನಿನ ।
ಪಿರಿದಪ್ಪಾಸಕ್ತಿ ಮುಕ್ತಿವೆತ್ತುದೆಯೆಂದಾ ॥
ಪುರವಣಿಸಿ ಬಿಟ್ಟುಪುಡಿಯೊಳ್ ।
ಪೊರಳ್ವದೌರ್ಬಲ್ಯಮಿಲ್ಲಿ ಪಲ್ಲವಿಸಿದುದೇ ॥ (೧೬)

ವ॥ ಎಂದಿಂತು ಮರ್ಮೋದ್ಘಾಟನಪಾಟನಮಂ ಸೂಚಿಸುವ ನಿಜಜನವಾಚಾವಿಡಂಬನಸ್ತಂಬೇರಮಂ ದಿಗಂಬರನ ಸಮರಸೋದಾತ್ತಚಿತ್ತ ಕಾಸಾರಮಂ ದಯಾಮರಾಳಿಕಾಸಾರಮಂ ಪೊಕ್ಕು ನೆಕ್ಕುವಂ ಕಲಂಕಿದಾಗಳ್—

ಕಂ॥ ದಿವಸಾವಸಾನದೊಳ್ ಪೆ ।
ರ್ಚುವಂತೆ ತಮದೊಡ್ಡು ಪೆರ್ಚಿದತ್ತಾಮುನಿಪುಂ ॥
ಗವನಂತರಂಗದಿಂ ಪಿಂ ।
ಗೆ ವಲಂ ಕ್ಷಮೆ ಸಾವಲೇಪಮುತ್ಕಟ ಕೋಪಂ ॥ (೧೭)

ವ॥ ಅಂತುನೋಕರ್ಮೋಪಾದೇಯನಾಸಾಧುವಿನ ಚೇತೋವೃತ್ತಿ ವೀತಸಮುಮುಂ ಸ್ಫೀತತಮಮುಮಾಗೆ ಮೆಲ್ಲಮೆಲ್ಲನೆ ಮರಳ್ದು ಸುರುಳ್ದು ಕಣ್ಗಳಂ ತೆಱೆದು—

ಚಂ॥ ಕರಮ ತಪಸ್ವಿ ಕಾಯ್ದುಡರೆ ನೋಡಿದನಂದು ವಿಶಾಖನಂದಿಯಂ ।
ನರಕಬಿಲಂಗಳೊಳ್ ಸುೞಿವ ನಾರಕನಂತಿರೆ ಕಣ್ಣಪಾಪೆ ವೈ ॥
ಅರಣಿವೊಲಾಗೆ ಬಾಷ್ಪಮಸಿಪತ್ರವನಕ್ಕೆಮ ಪಾಟಿಯಾಗೆ ಚೆ ।
ಚ್ಚರದಿನವಂಗೆ ದುರ್ಗತಿಯೆ ತಾನಿದಿರ್ವಂದುದೊ ಸುಂಗಲೆಂಬಿನಂ ॥ (೧೮)

ವ॥ ಆ ಸಮಯದೊಳ್—

ಕಂ॥ ದ್ವಾದಶತಪದಧಿದೇವತೆ ।
ಯಾದ ದಯಾಲಕ್ಷ್ಮಿಪೋದ ಬೞಿಕೆ ನಿಧಾನಂ ॥
ಪೋದ ಕುೞಿಯಂತೆ ಜೀವಂ ।
ಪೋದೊಡಲಂತಾದುದಾ ತಪೋಧನನ ಮನಂ ॥ (೧೯)

ಎಸೆವ ಜಿನಮುದ್ರೆ ಸಮತಾ ।
ರಸದಿಂ ಸಲೆತೊಯ್ದು ಜಾತರೂಪವಿದೆನೆ ರಂ ॥
ಜಿಸಿ ಬೞಿಕವಾದ ಮುಳಿಸಿಂ ।
ಕಿಸುಕಟ್ಟಂ ಪೋಲ್ತುದಾ ತಪೋಧನನ ಮನಂ ॥ (೨೦)

ಅತಿನಿಶಿತ ಪಶುವಿಷಾಣಾ ।
ಹತಿಗಂ ಸೈರಿಸಿ ತಪಸ್ವಿ ಸೈರಿಸನಿತದು ॥
ದ್ಧತನುಕ್ತಿಗೆ ಜೀವನ ಪರಿ ।
[illegible]ನುಂ ಕರ್ಮಧ ವಿಪಾಕಮುಂ ಚಿತ್ರತರಂ ॥ (೨೧)

ವ॥ ಮತ್ತಮಾಗಳ್—

ಕಂ॥ ಈತನನಾನೀಭವದೊಳ್ ।
ಘಾತಿಸಲಣಮಾಱದಿರ್ದೊಷಂ ಮಱುಭವದೊಳ್ ॥
ಘಾತಿಸುವೆನೆಕ್ಕೆನುತ್ತಾ ।
ಪಾತಕನೀಯಂದದಿಂ ನಿದಾನಂಗೆಯ್ದಂ ॥ (೨೨)

ಮುನಿಮುನಿಯುತಿರ್ದಪಂ ದು ।
ರ್ಜನಂಗೆ ನಮಗೇಕೆ ವಿಗ್ರಹಸ್ಥಿತಿಯೆಂಬಂ ॥
ತೆನಸುಂ ಹರಣಂಗಳ್ ತ ।
ತ್ತನುವಂ ಪರಿಹರಿಸಿ ಪೋದುವಂತಾಪದದೊಳ್ ॥ (೨೩)

ವ॥ ಅಂತು ನಿದಾನಾವಧಾನಮಾನಸಂ ಹೀನಸತ್ವನಾಗಿ ರಥ್ಯಾರಜಃಪಟಳ ಸಂಸ್ತರಣ ಮರಣಮನೆಯ್ದಿ ನಾಕಲೋಕಬದ್ಧಸಮೃದ್ಧಾಯುಷ್ಕನಪ್ಪುದಱಿಂ ವಿತತಸುಖಾವತಾರದೊಳಾಶತಾರದೊಳ್ ವೈಮಾನಿಕ ಸಾಮಾನಿಕಾಮರನಾಗಿ ಜನಿಯಿಸಿ—

ಕಂ॥ ಪ್ರಾತಿಪದಿಕಂಬೊಲಾತನ ।
ಧಾತುಕನವಿಭಕ್ತಿಭೂಷಿತಂ ನಿಯತಾರ್ಥೋ ॥
ಪೇತಂ ನಿಶ್ಚಿತನಾಮ ।
ಖ್ಯಾತಂ ತಾಂ ಪ್ರತ್ಯಯಾರ್ಹನಾದಂ ದಿವಿಜಂ ॥ (೨೪)

ಅನಿಮಿಷವನಿತಾಜನ ಸ ।
ದ್ಘನಕುಚಕಳಶಪ್ರವಾಳನಮರಪ್ರಮದಾ ॥
ಜನನಯನೋತ್ಪಳಸಂಮದ ।
ವನನಿಧಿವಿಧುವೆನಿಪನನುಪಮಾನವಿಳಾಸಂ ॥

ಚಂ॥ ಅನವಧಿ ಭೋಗದಾಗರಮನೇಕವಿನೋದದ ಸಾಗರಂ ಮನೋ ।
ಜನ ಶಿಃಸಾಯಕಂ ಸುರವಧೂಹೃದಯಂಗಮನಾಯಕಂ ಕಳಾ ॥
ವಸಧಿ ಕಳಾಧರಂ ಕುಮುದಕುಂದವಿಕಾಸಯಶೋಧರಂ ವಿವೇ ।
ಕನಿಧಿ ನಿರಂತರಂ ಪೊಗಬಿಪಂ ವಿಳಸದ್ಗುಣದಿಂ ಮಹನ್ತರಂ ॥ (೨೫)

ವ॥ ಅಂತು ವಿಶ್ರುತ ವಿಶ್ವನಂದಿಚರಸುರವರಂ ವಿಶಾಖಭೂತಿಚರಸುರವರನೊಳ್ ಪೂರ್ವಭವಾನುಬಂಧ ಬಂಧುರಸ್ನೇಹಸಂಬಂಧದಿಂ ಪರಮಮಿತ್ರತ್ವಮಂ ತಳೆದು ತಾನುಮಾತನುಂ ಪಲತೆಱದ ವಿನೋದಂಗಳಿಂ ನಲಿಯುತ್ತುಮುತ್ಕೃಷ್ಟಪುಣ್ಯರಷ್ಟಾದಶ ಪಾರಾವಾರಪ್ರಮಿತನಿಜಾಯುರವಸಾನಂಬರಮಳುಂಬಮಪ್ಪ ದಿವ್ಯಸುಖಮನವ್ಯಗ್ರತೆಯಿನನುಭವಿಸಿದರನ್ನೆಗಮಿತ್ತಲ್ —

ಮ॥ ಜಗದೊಳ್ ರೂಢಿಗೆ ಸಂದುದೊಂದು ಸಲೆ ಜಂಬೂದ್ವೀಪಮಾದ್ವೀಪದೊಳ್ ।
ಮಿಗೆ ವಿಖ್ಯಾತಿಯನಾಂತುದೊಂದು ಭರತಾಖ್ಯಕ್ಷೇತ್ರಮಾಕ್ಷೇತ್ರದೊಳ್ ॥
ಜಗತೀಮಂಡನಮಾದುದೊಂದು ನೆಗೞ್ದಾರ್ಯಾಖಂಡಮಾಖಂಡದೊಳ್ ।
ಪೊಗೞಲ್ಕಾದಮಳುಂಬಮಾಯ್ತು ವಿಷಯಂ ರಮ್ಯಂ ಸುರಮ್ಯಾಹ್ವಯಂ ॥ (೨೬)

ವ॥ ತದ್ವಿಷಯದೊಳ್—

ಕಂ॥ ಮೇದಿನಿಗೆಸೆವುದು ನಗರಂ ।
ಪೌದನಮುದ್ಯಜ್ಜಿನೇಂದ್ರಮಂದಿರಭೇರೀ ॥
ವಾದನಮಾಹ್ಲಾದನ ಸಂ ।
ಪಾದನತರ ನಿಖಿಳವಸ್ತುವಿಸ್ತೀರ್ಣತರಂ ॥ (೧೭)

ಪೃಥ್ವೀ॥ ಅಜೇಯಭುಜವಿಕ್ರಮಂ ವಿದಿತರಾಜನೀತಿಕ್ರಮಂ ।
ಗಜೇಂದ್ರಕರಕಲ್ಪ ಬಾಹುಯುಗಳಂ ಜಗನ್ಮಂಗಳಂ ॥
ನಿಜೋಜ್ಜ್ವಳಯಶಸ್ಸುಧಾಧವಳಿತಾವಳೀರಾತಟಂ ।
ಪ್ರಜಾಪತಿ ಮಹಾಮಹೀಪತಿ ಪುರಕ್ಕಧೀಶ್ವರಂ ॥ (೨೮)

ಚಂ॥ ಅಗಣಿತಶೋಭೆಯಂ ಸೊಬಗನಾಂತ ಜಯಾವತಿಯೆಂಬ ಕಾಂತೆಯುಂ ।
ಮೃಗಧರಕಾಂತಿಯಂ ಕಳೆಯನಾಂತ ಮೃಗಾವತಿಯೆಂಬ ಕಾಂತೆಯುಂ ॥
ಸೊಗಯಿಪ ಸದ್ಗುಣಂಗಳ ಗಣಂಗಳಿವರ್ಗೊಳವೆಂಬ ಪ್ರಿಯೆಮ್ಮೆಯಿಂ ।
ನೆಗೞ್ದತಮುರ್ವರಾಪತಿಗೆ ನಲ್ಮೆಯರಾಣಿಯರಾದರೀರ್ವರುಂ ॥ (೨೯)

ವ॥ ಅಂತು ಸಂತತಂ ರಂಜಿತ ಕುಂಜರೇಂದ್ರಕ್ಕೆ ಮದಲೇಖೆಗಳೆಂಬಂತೆಯುಂ, ಶರತ್ಸಮಯಸಮುದಿತ ತಾರಾಪತಿಗೆ ರಾಕಾರಾತ್ರಿಗಳೆಂಬಂತೆಯುಂ, ವಿಶಾಳಶೈಲೇಂದ್ರಕ್ಕುಪತ್ಯಕಾಧಿತ್ಯಕಾವನಿಯುಗಂಗಳೆಂಬಂತೆಯುಂ, ನವೋದಯ ದಿವಸೇಂದ್ರಂಗೆ ದೀಧಿತಿ ದಿನಲಕ್ಷ್ಮಿಗಳೆಂಬಂತೆಯುಂ, ಆಕ್ಷೋಣಿಪತಿಚೂಡಾಮಣಿಗಾರಾಣಿಯರುಂ ಪ್ರಾಣಪ್ರಿಯೆಯರಾಗಲಾಗಡಿಂ ಸಮಾಹಿತವಿಷಯಭೋಗೋಪಭೋಗಭೋಗಾನುಭೂತಿಯಂ ಖ್ಯಾತಿವಡೆದು ವರ್ತಿಸುತ್ತುಮಿರೆಯಿರೆ—

ಕಂ॥ ಮುನ್ನಂ ಪೇೞ್ದ ಶತಾರದ ।
ಸನ್ನುತ ಗೀರ್ವಾಣರಿರ್ವರುಂ ದೋರ್ವಳಸಂ ॥
ಪನ್ನಂಗೆ ಪೌದನೇಶಂ ।
ಗುನ್ನತವಿಭವಂಗೆ ಸಂದ ನಂದನರಾದರ್ ॥ (೩೦)

ವ॥ ಅಂತಾ ವಿಶಾಖಭೂತಿಚರಸಾಮಾನಿಕಾಮರಂ ಬಂದು ಜಯಾವತೀದೇವಿಗೆ ವಿಜಯನೆಂಬ ಪೆಸರಿನ ಬಲದೇವನಾದಂ. ಮತ್ತಮಾವಿಶ್ವನಂದಿಚರಸುರವರಂ ದಿವದಿನಿೞಿದು ಮೃಗಾವತೀದೇವಿಗೆ ತ್ರಿಪೃಷ್ಠನೆಂಬ ನಾಮದ ಮೊದಲ ವಾಸುದೇವನಾದನಂತಾ ಬಲಭದ್ರ ಜನಾರ್ದನರಿರ್ವರುಂ ಕ್ಷೀರಸಾಗರಾಂತರದೊಳ್ ಬಳೆವ ಪ್ರಾಲೇಯಕರಕಾಂತ ನೀಲಮಣಿಗಳಂಕುರಂಗಳಂತೆ ತನ್ನೃಪಾಲಕನಿಳಯದೊಳ್ ಬಳೆಯುವಳೆಯೆ—

ಕಂ॥ ಆಶಯಕುಶೇಶಯವ್ಯಾ।
ಕೋಶಮನಾಗಿಸಿತು ಜನಕೆ ಮಿಗೆ ಧೂಳೀ ಕೇ॥
ಳೀಶೋಭಿತ ತಾಲಧ್ವಜ।
ಕೇಶವಶೈಶವಮಶೇಷ ಮುಗ್ಧಾಚರಣಂ॥ (೩೧)

ಕಂ॥ ತಾಳಧ್ವಜ ಗರುಡಧ್ವಜ।
ಬಾಳಕ್ರೀಡಾವಿಡಂಬನಂ ಜನತಾ ಸೌ॥
ಖ್ಯಾಳಂಬನಮಾದುದು ಮು॥
ಗ್ಧಾಳಾಪಕಳಾಪ ಚಾಪಳೀಕೃತ ನಿಳಯಂ॥ (೩೨)

ವ॥ ಅಂತಶೇಷ ಮಹಿಮಾಮಾಂಗಲ್ಯವಾದ ಕಲ್ಯಾಣಾಂಗರ ಬಾಲ್ಯಂ ಮೆಲ್ಲ ನೋಸರಿಸೆ—

ಕಂ॥ ಇವರಱಿಯದ ಕಳೆ ಭಾವಿಸೆ।
ಭುವನಾಂತರದೊಳ್ ಖಪುಷ್ಪ ವಂಧ್ಯಾಗ್ರತನೂ॥
ಭವಂ ಖರ ವಿಷಾಣನಿಭಮೆಂ॥
ದವರಂ ಕವಿನಿವಹಮವಿರತಂ ಕೀರ್ತಿಸುಗುಂ॥ (೩೩)

ಚಂ॥ ಜನಕನನುರಾಗಮುಂ ಪಡೆವ ಚಾಗದ ಪೆಂಪುರಿ ಭೋಗದೇಳ್ಗೆ ಪೆಂ।
ಪಿನ ಪಸರಂ ಪರಾಕ್ರಮದಳುರ್ಕೆ ವಿಳಾಸದ ಪರ್ಸನಂ ಪ್ರಸಾ॥
ಧನದ ನಯಂ ವಿವೇಕದೊದವೊಳ್ಪಿನ ಪೆರ್ಮೆಳಸಾಬಳಂಗಮಾ।
ಪನರುಹಲೋಚನಂಗಮೆಸೆಗುಂ ನಿಸದಂ ವಸುಧಾತಳಾಗ್ರದೊಳ್॥ (೩೪)

ಉ॥ ಜೀವಮದೊಂದೆ ದೇಹಮೆರಡಿಂತಿವರ್ಗೆಂಬಭಿಶಂಕೆಯಂ ಧರಿ।
ತ್ರೀವಳಯಕ್ಕೆ ಮಾಡುವುದು ತಮ್ಮೊಳವಂದಿರ ನಲ್ಮೆಬಲ್ಮೆ ಶೋ॥
ಭಾವಹಮೂರ್ತಿಕೀರ್ತಿ ವಿನಯಂ ಸುನಯಂ ಬಲವೃದ್ಧಿ ಬುದ್ಧಿಯೆಂ।
ಬೀವಿವಿಧೋಲ್ಲಸದ್ಗುಣಗಣಂ ತೊದಳೇಂ ಸದೃಶಸ್ವರೂಪದಿಂ॥ (೩೫)

ಚಂ॥ ವರಭರತತ್ರಿಖಂಡಪತಿಯಾದಪನೀವಿಜಯಾನುಜಾತನೆಂ।
ದುರುಮಹಿಮಂ ವಸಂತಪೆಸರಿಂದೆಸೆದಿರ್ದ ನಿಮಿತ್ತವೇದಿಯಾ॥
ದರದೊಳೆ ತತ್ಪ್ರಜಾಪತಿ ಧರಾಪತಿಗೊರ್ವ ಸಭಾಂತರಾಳದೊಳ್।
ಬರೆದು ನಿಜಪ್ರತಿಜ್ಞೆಯ ಪದಂಗಳ ಪತ್ರಮನಿತ್ತನುತ್ತಮಂ॥ (೩೬)

ವ॥ ಮತ್ತೊಂದುದಿವಸಮಾ ಪೋದನಪುರವರಾಧೀಶ್ವರಂ, ವಿಜಿತಾಶೇಷ ವಿದ್ವಿಷ್ಟ ಮಂಡಲೇಶ್ವರಂ ಸುರೇಶ್ವರಸಭಾಸದದಂತೆ ಸುಧರ್ಮಾಖ್ಯಾನಮುಂ, ಅನೇಕ ವಿಬುಧ ವಿಭ್ರಾಜಿತಮುಂ, ನಭಸ್ಸದನದಂತೆ ಸಕಳರಾಜರಾಜಿತಮುಂ, ಆತತಜ್ಯೋತಿರ್ಮಂಡಲ ಮಂಡಿತಮುಮೆನಿಸಿದಾಸ್ಥಾನಭವನದೊಳ್ ನವೀನ ಯೌವನವನಸ್ಥಳಗಳೆನಿಸಿದ

ವಿಳಾಸವತಿಯರ ಬಳಗಂ ಬಳಸೆ ಬಳವದ್ಬಳಭದ್ರಜಳಜಾಕ್ಷಸಮನ್ವಿತನತುಳ ಶೃಂಗಾರಸಾರೋದಯನಾದರದಿಂ ಸಂಸಾರಸಾರಸುಖಪ್ರಭೂತ ಶೋಭೆಗಳ ಘಟ್ಟ ಯೆನಿಸಿ ದಿಟ್ಟಗೆವಂದೊಡ್ಡೋಲಗದೊಳನೇಕ ವಿನೋದಾಧೀನಮಾನಸಂ ಮಾನುಷೇಂದ್ರ ನಿರ್ಪುದುಮಾಪದದೊಳೊರ್ವಂ ಲಬ್ಧಾವಸರನಪ್ಪದೇಶಸಚಿವನಿಂತೆಂದು ಬಿನ್ನಪಂ ಗೆಯ್ದಂ—

ಉ॥ ಕೇಸುರಿಗಳ್ಗೆ ಪಾಸಟಿಗಳಾದಘನಾಯತ ಕೇಸರಂಗಳಿಂ।
ತ್ರಾಸಕರಂಗಳಾದ ನಖದಂಷ್ಟ್ರೆಗಳಿಂ ವಿವೃತಾಸ್ಯದಿಂ ಮಹಾ॥
ಕೇಸರಿಯೊಂದು ಬಂದು ಜವನೀನೆವದಿಂದವನು ಬಂದನೆಂಬವೋಲ್।
ದೇಶವನಾವಗಂ ಕೊಲುತುಮಿರ್ದಪುದಿಂತುಟು ದೇವವಿಪ್ಲವಂ॥ (೩೭)

ವ॥ ಎಂಬುದುಂ ದುರ್ನಿವಾರದಾರುಣ ಕ್ರೂರಸತ್ವಪ್ರಜನಿತಪ್ರಜೋಪದ್ರವೋದ್ರೇಕಮನಾಕರ್ಣಿಸಿ ಮೊದಲೊಳ್ ಸದಯ ಹೃದಯನಾಗಿ ತದನಂತರಂ ತದವನಿಪಾಳಂ ನಿಜಭುಜಾಪರಿಘಪಾಳನೀಯವಿಷಯಂ ಪಾಳಿಪ್ಪುದರ್ಕೆ ಸೈರಿಸದೆ ಪಂಚಾಸ್ಯಪಂಚತಾಪ್ರಪಂಚಹೇತುಭೂತ ಭೂರಿತರ ರೋಷಾವೇಶಮನಪ್ಪುಕೆಯ್ದು—

ಉ॥ ಜಾನಪದಾತಿವಿಪ್ಲವ ವಿಧಾಯಿಯನೋವದೆ ಪೋಗಿ ಪೊಯ್ದು ಪಂ।
ಚಾನನಮಂ ಯಮಾನನದೊಳಾಪಮೆ ತೂಂತುವೆನೆಂದು ಭೂಭುಜಂ॥
ಭೂಸುತನಾಗಳುಜ್ಜುಗಿಸೆ ತದ್ವಿಜಯಾವರಜಂ ಪ್ರತಾಪಪಂ।
ಚಾನನನಿಂತು ಬಿನ್ನವಿಸಿದಂ ಮುಕುಳೀಕೃತಪಾಣಿಪಂಕಜಂ॥ (೩೮)

ಕಂ॥ ಕೇಸರಿ ನಿಮಗೇಸರಿ ದೇ।
ವೀಸಡಗರಮಾದುದುಚಿತಮಾಗಿರೆ ಬೆಸಸಿಂ॥
ಕೇಸರಿಯಂ ಕಡೆಪಟ್ಟಾ।
ವೇಸರಿಯಂ ಕೆಡಪುವಂತೆ ಕಡಪದೆಮಾಣೆಂ॥ (೩೯)

ವ॥ ಎಂಬುದುಂ ನಿಜನಿಕಟಸಮುಚಿತಾಸನಾಸೀನರಪ್ಪ ನಂದನರ ಮುಖಾರವಿಂದಮಂ ನೋಡಿ—

ಉ॥ ಅಪ್ರತಿಮಪ್ರತಾಪನಿಧಿಗಳ್ ವಿನಯಾಂಬುಧಿಗಳ್ ಮದಾತ್ಮಜರ್।
ಕ್ಷಿಪ್ರಮೆ ಸಿದ್ಧಿಸಲ್ ನೆರೆಯಿವರ್ಮೀಪ್ಸಿತ ಕಾರ್ಯಮನೆಂದು ತನ್ಮೃಗಾ॥
ಧಿಪ್ರಭುವಂ ಪ್ರಮರ್ದಿಸಲಿಳಾರಮಣಂ ಬೆಸನಿತ್ತನೀಯೆ ಲೋ।
ಕಪ್ರಿಯರಾಕುಮಾರರವನೀಪತಿಗಾನತರಾಗಿ ಬೇಗದಿಂ॥ (೪೦)

ವ॥ ರಾಜದ್ರಾಜಭವನದಿಂ ಪೊರಮಟ್ಟು ಶೋಭಾಸನಾಥಮಪ್ಪಪುರವೀಥಿಯೊಳ್ ಪೋಪಾಗಳ್—

ಮ॥ ಮರುಳಾದಂ ಜನಪಂ ಸಮಸ್ತಹನನವ್ಯಾಸಂಗಮಂ ಸಿಂಗಮಂ ॥
ನಿರಿಯಿಂ ನೀಮದನೆಂದು ಮಕ್ಕಳನಿವಂ ತಾನಟ್ಟಿದಂ ಮಂತ್ರಿಮು ॥
ಖ್ಯರುಮಯ್ಯೋ ವಿನಿವಾರಿಸಲ್ಕಱಿದರಿಲ್ಲೆಂತಕ್ಕುಮೋ ಎಂದು ಚೆ ।
ಚ್ಚರಮೆಯ್ತಂದು ನಿರೀಕ್ಷಿಸಿತ್ತವರ್ಗಳಂ ತತ್ಪೌರ ನಾರೀಜನಂ ॥ (೪೧)

ವ॥ ಅಂತು ಮುಗ್ಧಸ್ನಿಗ್ಧ ವನಿತಾಜನ ಚಿತ್ತಾಂದೋಳನಮಂ ಮಾಡುತ್ತುಂ ಪೋಗಿ ನಾಗಾರೀ ಖಂಡಿತಮುಂ ಮಂಡಲಮುಂ ಪೊಕ್ಕು—

ಉ॥ ನಿರ್ಮೃಗಮಾಯ್ತರಣ್ಯತತಿ ನಿರ್ನ್ನರಮಾಯ್ತು ಶುಕೌಘಮತ್ತಲುಂ ।
ದುರ್ಮೃತಿವೆತ್ತು ಬಿದ್ದತನುಭೃತ್ಕಣಪಾವಳಿ ಕಾಣಲಾಯ್ತು ದು ॥
ಷ್ಕರ್ಮಮನೆಂತುಪಾರ್ಜಿಸಿತೊ ದೇಶಮಶೇಷಮೆನುತ್ತೆ ರಾಜಪು ।
ತ್ರರ್ನ್ಮೃಗರಾಜನಿರ್ದವಿಷಮಸ್ಥಳಮಂ ಬಳವಂತರೆಯ್ದಿದರ್ ॥ (೪೨)

ವ॥ ಆ ಪ್ರಸ್ತಾವದೊಳ್—

ಚಂ॥ ಪಟುಪಟಹಂಗಳುಚ್ಚರವಮುಂ ಭಟಪೇಟಕಮಾರೆ ಪೊಣ್ಮುವು ।
ದ್ಭಟರವಮುಂ ನಿಮಂಜಗತಕುಂಜರವೈರಿಗೆ ಮಾಡೆ ಕೋಪದು ॥
ತ್ಕಟತೆಯನಾಗಸಕ್ಕೆ ಮಿಗೆ ಲಂಘಿಸಿ ಗರ್ಜಿಸಿ ತಾರಕಾ ಪಥಂ ।
ಸ್ಫುಟೆಯಿಸಿದತ್ತೊ ಪೇಱನಿಸಿ ಮಾರ್ದನಿ ನೀಳ್ದುದು ದಿಕ್ತಟಂಗಳೊಳ್ ॥ (೪೩)

ವ॥ ಆಗಳಾ ಗರ್ಜನವಜ್ರಪಾತದಿಂ ನೆರೆದೊಡವಂದ ಬಿರುದಿನ ಬೀರರೆರ್ದೆವೆಟ್ಟುಗಳ್ ತೊಟ್ಟನೆ ಬಿರಿಯೆ ಸುರುಳ್ದುರುಳ್ದು ತೆರಳ್ದು ಪರೆದೋಡೆ ವಿಜಯನೊರ್ವನೆ ವಿಜಯಾರ್ಧದಂತೆ ಗೋವರ್ಧನನಕೆಲದೊಳಚಳಿತನಾಗಿ ನಿಂದುನೋಡಿ –

ಉ॥ ಮಾರಿಯ ಮೂರಿ ಮೇಲೆಱಗುವಂದದೆ ಭೋಂಕನೆ ಮೇಲೆವಾಯ್ದ ಕಂ ।
ಠೀರವಮುಂ ಮಹಾರವಮನಾಕೃತಿ ಭೈರವಮುಂ ಸಮುಗ್ರಮು ॥
ದ್ಗಾರವಯಂ ನಿಜಾವಯವಚಾರವಮುಂ ಕಡಿಕೆಯ್ದು ಕೆಯ್ದುವಂ ।
ಪಾರದೆ ಕೆಯ್ಯೊಳಪ್ಪಳಿಸಿ ಘಾತಿಸಿದಂ ವಿಜಯಪ್ರಿಯಾನುಜಂ ॥ (೪೪)

ವ॥ ಅಂತು ಪಂಚಾಸ್ಯನಂ ಪಂಚತ್ವಮೆಯ್ದಿಸಿ ಜನಪದಮನನುಪದ್ರವಪದಮಂ ಮಾಡಿ ನಾಡೆಯುಂ ಪ್ರಜಾಪ್ರಶಂಸಾಶೀರ್ವಚನನಿಚಯಂಗಳನಂಗೀಕರಿಸಿ ಮರಳ್ದು ಬರುತ್ತುಂ—

ಉ॥ ಕೋಟಿಕನಾಮಧೇಯ ಶಿಲೆ ಮುಂದಿರೆ ಭೋಂಕನೆ ಕಂಡು ಮಿಂಡರು ।
ತ್ಪಾಟಿಪೆನೆಂದು ಪೂಣ್ದಖಿಳಶಕ್ತಿಯಿನೆತ್ತುತುಮಳ್ಕಿಪ್ರೊಯ್ಯೆ ನಿಃ ।
ಪಾಟವರಾಗಿ ಪಿಂಗೆ ದರಹಾಸವಿಳಾಸಮುಖಂ ಮುಕುಂದನು ॥
ತ್ಪಾಟಿಸಿಲೀಲೆಯಿಂ ಪೊಗೞೆ ವಿಶ್ವಜನಂ ತಿಱಿಕಲ್ಲನಾಡಿದಂ ॥ (೪೫)

ವ॥ ಅಂತು ಕೋಟಿಭಟಪೇಟಕಮುಮುತ್ಪಾಟಿಸಲಾಱದೆ ಕೋಟಲೆಗೊಂಡು ಪೂಣ್ದ ಕೋಟಿಕಶಿಲೆಯುನಯತ್ನದಿನುತ್ಪಾಟಿಸಿದ ತನ್ನ ಬಾಹುಪಾಟವಮಂ ನೋಟಕಜನಂಗಳ್ ಕೋಟಿಪ್ರಕಾರದಿನುದ್ಘಾಟಿಸಿ ಪೊಗೞ್ದು ನಾಟಕಂ ನಲಿಯೆ ತಜ್ಜನಾರ್ಧನಂ ಲಜ್ಜಾನತಾನನನಾಗಿ ಬಂದು ಪುರಂದರಪುರಪ್ರತಿಮಮಪ್ಪ ನಿಜಪುರಮನುರುಮುದದಿಂ ಪುಗುವಾಗಳ್—

ಚಂ॥ ಮೃಗರಿಪುವಂ ಮೃಗಾವತಿಯ ನಂದನನೆೊರ್ವನೆ ನಿಂದುಕೊಂದು ನಾ।
ಡಿಗರಮನಕ್ಕೆ ಮಿಕ್ಕ ಪರಿತೋಷಮನಿತ್ತು ಬರುತ್ತುಮಿರ್ತ್ತಯಿಂ॥
ನೆಗಪಿದನೊಂದೆಹಸ್ತದೊಳೆ ಕೋಟಿಕನಾಮದ ಶೈಳಮಂ ಗಡೆಂ।
ದಗಣಿತ ರಾಗದಿಂ ನೆರೆದು ನೋಡಿದುದಚ್ಚುತನಂ ಪುರೀಜನಂ॥ (೪೬)

ವ॥ ಅಂತು ಮುನ್ನಂ ತಮ್ಮ ಪೋಗಿಂಗುಮ್ಮಳಿಸಿದ ಪುರಜನಂಗಳುಮ್ಮಳಮನೊರ್ವೊದಲೊಳೆನಿ ಮುರ್ಾಳಿಸಿ ಪರಮಪ್ರಮೋದಮನುತ್ಪಾದಿಸುತ್ತುಂ ಮಹಾವಿಭವದಿಂ ಮಹೀಪತಿಮಂದಿರಮಂ ಪೊಕ್ಕು—

ಕಂ॥ ವಿಜಯಯುತಂ ವಿಜಯಯುತಂ।
ವಿಜಯಾನುಜನಜಡವಿಕ್ರಮಂ ಪಿತೃಪದಪಂ॥
ಕಜಕೆಱಗೆ ತೆಗೆದು ತಕ್ಕೈರ್।
ಪಿ ಜನೇಶಂ ಪರಸಿ ಹರ್ಷಮಂ ಮಿಗೆ ತಳೆದಂ॥ (೪೭)

ಅಳವಿಗಱಿದೊಗೆದ ಪುಳಕಾ।
ವಳಿ ಪರಿರಂಭಣಕೆ ಪಡೆಯೆ ಶಿಥಿಲತೆಯಂ ಭೂ॥
ತಳಪತಿ ಸಮುಚಿತ ಪೀಠ।
ಸ್ಥಳಿಯೊಳ್ ಕುಳ್ಳಿರಿಸಿದಂ ನಿಜೋರ್ಜಿತಸುತರಂ॥ (೪೮)

ವ॥ ಆಗಳ್—

ಕಂ॥ ವಿಜಯಂ ನಿಜಾನುಜಾತನ।
ಭುಜಬಳದುನ್ನತಿಯನಾಳ್ದದಂ ಕಥಿಯಿಸೆಯುಂ॥
ಸುಜನನುತಂ ನತವದನಾಂ।
ಬುಜನಾದನಿದೇನುದಾತ್ತನೋ ವನಜಾಕ್ಷಂ॥ (೪೯)

ವ॥ ಮತ್ತಮೊಂದು ದಿವಸಮಾ ಸುರಮ್ಯಾಧೀಶ್ವರಂ ಸಾಶ್ಚರ್ಯಸೌಂದರ್ಯನಿಧಾನಜನ್ಮಭೂಮಿಗಳೆನಿಸಿದ ಕಾಮಿನಿಯರ ನಿಕಾಮಕೋಮಳಾವಯವಾಗಣ್ಯಲಾವಣ್ಯಮೆಂಬ ಪುಣ್ಯಜಳಂಗಳಿಂದಮುಂ, ಮದನಮಂತ್ರದೇವತೆಯರೆನಿಸಿದ ವಾಮ

ಲೋಚನೆಯರ ವಿಶಾಳಲೋಳಲೋಚನಂಗಳೆಂಬ ಉತಸ್ಸಾರೀನಂಗಳಿಂದಮುಂ, ಮನೋಜರಾಜ ಪ್ರಾಜ್ಯರಾಜ್ಯಗೋಮಿನಿಯರೆನಿಸಿದ ವಿಳಾಸವತಿಯರ ವಿಳಾಸಾವಾಸದರಹಾಸಂಗಳೆಂಬ ಡಿಂಡೀರಪಿಂಡಂಗಳಿಂದಮುಂ ರತಿಜೀವಿತೇಶ್ವರನ ವಿದ್ಯಾದೇವತೆಯರೆನಿಸಿದ ಶಿರೀಷದಾಮಕೋಮಳ ಬಾಹುಲತಾಯುಗಳೆಯರ ಬಾಹುವಲ್ಲರಿಗಳೆಂಬ ಕಲ್ಲೋಳಮಾಳೆಗಳಿಂದಮುಂ, ಕಂದರ್ಪನ ಮಣಿದರ್ಪಣ ಕಲ್ಪೆಯರೆನಿಸಿದ ವನರುಹವದನೆಯರ ನಗೆಮೊಗಂಗಳೆಂಬ ವಿಕಚವಾರಿಜಂಗಳಿಂದಮುಂ, ಚಿತ್ತಜನ ವಿಜಯವೈಜಯಂತಿಗಳೆನಿಸಿದ ಚಕ್ರವಾಕನಿಬಿಡಸ್ತನೆಯರ ವೃತ್ತೋತ್ತುಂಗ ವಕ್ಷೋಜಂಗಳೆಂಬ ರಥಾಂಗಂಗಳಿಂದಮುಂ, ವಿಷಮಾಯುಧನ ಕೂರ್ಗಣೆಗಳೆನಿಸಿದ ನಿತಂಬವತಿಯರ ನಿತಂಬಬಿಂಬಂಗಳೆಂಬ ವಿಶಾಳಕೂಳಂಗಳಿಂದಮುಂ, ಕುಸುಮಕೋದಂಡನ ಮಂಡಲಾಗ್ರಲತೆಗಳೆನಿಸಿದ ಶೃಂಗಾರವತಿಯರ ರಮಣೀಯಮಣಿಭೂಷಣ ಕ್ವಣನಂಗಳೆಂಬ ಮರಾಳಕಾಕಳಕ್ವಣನಂಗಳಿಂದಮುಂ, ಮನ್ಮಥನ ಮನೋರಥಸಿದ್ಧಿಗಳೆನಿಸಿದಳಿನೀಳಕುಟಿಲಕುಂತಳೆಯರ ನಿತಾಂತಕಾಂತಕುಂಡಳಂಗಳೆಂಬ ಮದವನ್ಮಧುಕರನಿಕರಂಗಳಿಂದಮುಮೆಸೆದು ಕಣ್ಗೆ ಕರಂ ಸೊಗಯಿಪಭಿನವಸರೋವರಮೆಂಬಂತಿರ್ದ ನಿಜಸಭಾಸದನದ ನಡುವೆ ಬೆಡಂಗುವಡೆದ ವಿವಿಧಮಣಿಖಚಿತ ವಿಷ್ಟರಾಂಬುಜದ ಮೇಲೆ ಲೀಲೆಯಿಂದುಪವಿಷ್ಟನಾಗಿ ನಿಜವಿರಾಜಮಾನ ರಾಜಹಂಸತ್ವಮಂ ಪ್ರಕಟಿಸುತ್ತುಮಿಂತು—

ಕಂ॥ ಗೀತದ ವಾದ್ಯದ ರೀತಿಯ ।
ಚಾತುರ್ಯಂ ಪೂರ್ತಿವೆತ್ತುದೆನಿಸಿದ ವಿಬುಧ ॥
ವ್ರಾತದೆ ಮಂತ್ರಿ ಪುರೋಹಿತ ।
ಜಾತದೆ ಪರಿವೇಷ್ಟಿತಂ ನೃಪಂ ರಂಜಿಸಿದಂ ॥ (೫೦)

ವ॥ ಆಸಮಯದೊಳ್—

ಕಂ॥ ಕರಧೃತವೇತ್ರಂ ಸಮ್ಮುಖ ।
ನಿರೂಪಿತಾತ್ಮೀಯ ಗಾತ್ರನನಿಮಿಷನೇತ್ರಂ ॥
ಸ್ಫುರಿತಾಧರಪತ್ರಂ ಪಳಿ ।
ತರಾಜಿಪಾತ್ರಂ ದಲೆನಿಪ ಪಡಿಯಱನೊರ್ವಂ ॥ (೫೧)

ಬಂದುಪೊಡವಟ್ಟುದೇವಸ ।
ಮಂದೇವರ್ಕಳೊಳೆನಿಪ್ಪನೊರ್ವಂ ಮುದದಿಂ ॥
ಬಂದಂಬರದಿಂ ಭರದಿಂ ।
ನಿಂದಿರ್ದಪನೀಕ್ಷಣಾರ್ಥಿ ಬಾಗಿಲೊಳೀಗಳ್ ॥ (೫೨)

ವ॥ ಎಂದು ಬಿನ್ನಪಂ ಗೆಯ್ಯೆ—

ಕಂ॥ ಆನವನಂ ಮಾನವನಂ।
ನೀನೀಗಳೆ ಪುಗಿಸು ಮತ್ಸಭಾಭವನನಮೆನೆಂ॥
ದಾ ನರಪತಿ ಬೆಸಸುವುದುಂ।
ತಾನವನಂ ಪುಗಿಸಿದಂ ಪ್ರತೀಹಾರವರಂ॥ (೫೩)

ಪುಗುವವನಂ ಪರಿದಾಗಳೆ।
ಬಿಗಿಯುಪ್ಪಿದುವಖಿಳ ಸಭೆಯ ನಯನದ್ಯುತಿಮಾ॥
ಳೆಗಳಳಮಾಳೆಗಳಂದದೆ।
ಸೊಗಯಿಪ ಪರಿಮಳದ ಪೊಚ್ಚ ಪೊಸಬಾಸಿಗಮಂ॥ (೫೪)

ವ॥ ಅಂತು ವಿಸ್ಮಯಸ್ಮೇಯಮಾನೇಯ ಕಾಯವಿಳಾಸನಾ ಸಭಾಂತರಾಳಮಂ ಪೊಕ್ಕನೇಕ ರಾಜಲೋಕಾನೀಕ ಮಣಿಮಕುಟ ಮರೀಚಿಮಂಜರೀಪುಂಜರಂಜಿತ ಪದಪಯೋಜನನಂ, ಪ್ರಜಾಪತಿ ಮಹಾರಾಜನಂ ಕಂಡು ವಿನಯ ವಿನಮಿತೋತ್ತಮಾಂಗಂ ಪ್ರಭುನಿರೂಪಿತ ಸಮೀಪಸ್ಥಿತ ಸಮುಚಿತಾಸನದೊಳ್ ಕುಳ್ಳಿರ್ದುದುಂ—

ಉ॥ ಸ್ಪಂದನಮಿಲ್ಲದಕ್ಷಿಗಳಿನೀಕ್ಷಿಸುತಿರ್ದುದು ಟಕ್ಕಿನುಂಡೆಯುಂ।
ತಿಂದವೊಲಾಗಳೊಂದಿನಿತು ಪೊಱಿತ್ತಿನೊಳಾ ಸಭೆ ಭೂಭುಜಂಬೞಿ॥
ಕ್ಕೊಂದಿದರಾಗದಿಂದಮವನಂ ಬೆಸಗೊಂಡನುದಗ್ರದಂತ ಭಾ।
ವೃಂದದ ಕೂಡೆ ನಾಡೆ ಕುಣಿದಾಡೆ ಸರಸ್ವತಿ ವಕ್ತ್ರರಂಗದೊಳ್॥ (೫೫)

ಶಾ॥ ನೀನಾರ್ಗೆತ್ತಣಿನೆತ್ತವಂದೆಯಭಿಧಾನಂ ತಾನದೇಂ ಕಾರ್ಯಮೇ।
ನೀನಿನ್ನಾಗಮನಕ್ಕೆ ಪೇೞೆನೆ ಕರಂ ಸಂಪ್ರೀತಿಯಿಂ ನೂತನಂ॥
ತಾನಿಂತೆಂದು ನಿವೇದಿಸಲ್ ತೊಡಗಿದಂ ಪ್ರಸ್ಪಷ್ಟಮೃಷ್ಟಾಕ್ಷರ।
ಧ್ವಾನಂ ಸೂನೃತವಾದಿ ಕಾರ್ಯಘಟನಾಚಾತುರ್ಯ ಚಕ್ರೇಶ್ವರಂ॥ (೫೬)

ಮ॥ ಸ್ಥಿರಸಿದ್ಧಾಯತನಾದಿಕೂಟನವಕಂ ಶ್ರೇಣಿದ್ವಯಾಂಕಂ ದಶೋ।
ತ್ತರ ವಿಖ್ಯಾತಶತೋಲ್ಲಸತ್ಪುರವರಂ ವಿದ್ಯಾಧರೋತ್ಪತ್ತಿಮಂ॥
ದಿರಮಂಭೋಧಿ ತರಂಗಸಂಗಮುಕರಂ ಧಾವಲ್ಯಸಂಪತ್ತಿಸುಂ।
ದರಮೊಂದುಂಟು ಪರಾರ್ಧ್ಯಮಿಲ್ಲಿ ವಿಜಯಾರ್ಧಂ ಭೂಮಿಭೃದ್ವಲ್ಲಭಂ॥ (೫೭)

ಕಂ॥ ಅನತಿಶಯ ವಿಭವಕೃತ ನಿಖಿ।
ಳನಗೇಂದ್ರಾನೀಕ ಸತತವಿತತ ಸ್ಪರ್ಧಂ॥
ಜಿನಗೃಹಮುಹಿತ ನಿಜೋರ್ಧ್ವಂ।
ವಿನೂತಿನೆತ್ತುದು ಧರಿತ್ರಿಯೊಳ್ ವಿಜಯಾರ್ಧಂ॥ (೫೮)

ವ॥ ಆ ಕ್ಷೋಣೀಧರವರದ ದಕ್ಷಿಣಶ್ರೇಣಿಗಳಂಕಾರವಾಗಿ—

ಕಂ॥ ಪುರವನವರತಂ ರಥನೂ ।
ಪುರಮೆಸೆವುದು ಲಸಿತಧರ್ಮನಿರ್ಮಿತಸದ್ಗೋ ॥
ಪುರಮುಗಪತಿ ಲಕ್ಷ್ಮೀನೂ ।
ಪುರಮೆಸೆಸಂ ಜ್ವಲನಜಟಿ ವಿರಾಜಿಪನದಱೊಳ್ ॥ (೫೯)

ಜ್ವಲದರಿಕುಲ ಕಾಂತಾರ ।
ಜ್ವಲನಂ ಜ್ವಲನಜಟಿ ಭೂಭುಜಂ ಪೋಲ್ವಂ ಪ್ರೋ ।
ಜ್ವಲನಂ ಶಶಾಂಕನಂ ಕೋ ।
ಮಲನಂ ಸದ್ವೃತ್ತತಾ ಕಳಾಕಾಂತಿಗಳಿಂ ॥ (೬೦)

ಸ್ವಾಗತಂ॥ ಆಯಶೋನಿಧಿಗೆ ವಲ್ಲಭೆಯಾದಳ್ ।
ವಾಯುವೇಗೆ ರಮಣೀಜನರತ್ನಂ ॥
ಶ್ರೀಯು ಭಾರತಿಯು ಸನ್ನಿಭೆ ಪುಣ್ಯೋ ।
ಪಾಯಧರ್ಮರತಮಾಕೆಯಚಿತ್ತಂ ॥ (೬೧)

ಕಂ॥ ಅರ್ಕಂ ಬುಧಜನವನಜವನ ।
ಕ್ಕರ್ಕಂ ರಿಪುವಿಪುಳತಿಮಿರಸಮಿತಿಗೆ ತೊದಳೇ ॥
ನರ್ಕಂ ಕುನಯೋತ್ಪಳತತಿ ।
ಗರ್ಕದ್ಯುತಿಯರ್ಕಕೀರ್ತಿ ತತ್ಸುತನಾದಂ ॥ (೬೨)

ವ॥ ಮತ್ತಂ—

ಕಂ॥ ನಯನೋತ್ಸವಕರಿ ರತಿಪತಿ ।
ಜಯಲಕ್ಷ್ಮೀ ಸಮಸ್ತ ಸತ್ಕಳಾಕೋವಿದೆ ಪು ॥
ಣ್ಯಯಶೋರ್ಥಿನಿ ಪೆಸರ್ವೆತ್ತಳ್ ।
ಸ್ವಯಂಪ್ರಭಾದೇವಿಯಾತನನುಜಾತೆ ವಲಂ ॥ (೬೩)

ಉ॥ ಆಕೆಯ ವಕ್ತ್ರವಾರಿಜದ ಲೋಚನನೀಳಸರೋಜದೋಷ್ಠಬಿಂ ।
ಧೂಕದ ದಂತಕುಂದದ ನಖಾಂಕುರ ಕೇಶಕದಂಬುಮೋಹನ ॥
ಶ್ರೀಕರಮೆಂದಿದ್ವೈದುತೆಱದಂಬನೆ ನಚ್ಚಿನ ಕೆಯ್ದುಮಾಡಿ ಮೂ ।
ಲೋಕದೊಳೆಯ್ದೆ ಪಂಚಶರನುಂ ಕುಸುಮಾಸ್ತ್ರನುಮಾದನಂಗಜಂ ॥ (೬೪)

ವ॥ ಮತ್ತಂ—

ಕಂ॥ ಕುವಳಯದಳನಯನೆಗೆ ನೆಗ।
ಳ್ದ ವಿಯಚ್ಚರಸತಿಯ ಸುತೆಗೆ ಸತಿಯರ ಪೆಜರಾ ॥
ರೊ ವಿಚಾರಿಸೆ ಸರಿಯಪ್ಪರ ।
ಭುವನಸ್ತವನೀಯರೂಪರಮಣೀಯತೆಯಿಂ ॥ (೬೫)

ವ॥ ಒಂದು ದೆವಸಮಾ ಜ್ವಲನಜಟಿಮಹಾರಾಜಂ ವಿದ್ಯಾಧರರಾಜಸಮಾಜ ವಿರಾಜಿತಮುಂ, ಅಂಬರಚರನಿತಂಬಿನೀಕದಂಬಕಸದಂಬಕಪ್ರಭಾಭರಿತಮುಂ, ಎನಿಸಿ ಮನಮನುಜಿಕ ಸೆಜಕವಿಡಿವ ನಿಜಸಭಾನಿವಾಸದೊಳ್ ವಿಳಾಸಂಬೆತ್ತು ಮಣಿಮಯೋತ್ತುಂಗ ವಿಷ್ಟರೋಪವಿಷ್ಟನಾಗಿ ವಿದಗ್ಧವಿದ್ಯಾಧರೀಕರಪಲ್ಲವೋಲ್ಲಸಿತ ವಲ್ಲಕೀವಾದನೋದಿತ ವಿವಿಧರಾಗಮಯಮಧುರನಾದೋತ್ಪಾದಿತ ನಿಜಾಂಕಮಾಳಾಕಳಿತ ಲುಳಿತ ಗೀತಾಕರ್ಣನಂ, ವಂದಿವೃಂದಾನಂದನಂದಿತವಿತರಣಾದಿಗುಣವರ್ಣನಂ, ಕಿಜಿದು ಪೊತ್ತಂ ಕಳಿಪಿ ವದನಾವಲೋಕನ ದರಹಸನ ಸಹಭಾಷಣ ತಾಂಬೂಳ ಪ್ರದಾನಾದಿ ಸಮುಚಿತ ಪ್ರತಿಪತ್ತಿಗಳಿಂ ತುಷ್ಟಿವೆತ್ತ ಸೇವಾಸಕ್ತಸಾಮಂತಾದಿಂಗಳಂ ವಿಸರ್ಜಿಸಿ ಪಕ್ಕದೊಳಿರ್ದ ಸ್ವಯಂಪ್ರಭೆಯಂ ವದನಕಾಂತಿ ಸಂತಾನಾಧಃಕೃತ ವಿಧುಪ್ರಭೆಯಂ ಪ್ರಸನ್ನೇಕ್ಷಣದಿನೀಕ್ಷಿಸಿ—

ಚಂ॥ ಮಗಳೆ ಮನೋನುರಾಗದೊಳೆ ಪೋಗಿ ನಿಜಾಳಯದಂತರಾಳಮಂ।
ಸೊಗಯಿಪ ನಿನ್ನಮೂರ್ತಿರಮೆಯಿಂ ರಮಣೀಯಮನಾಗಿಸೆಂದು ಮೆ॥
ಲ್ಲಗೆ ತೆಗೆದಪ್ಪಿ ತಂಬುಲಮನಿಕ್ಕಿ ವಿಸರ್ಜಿಸೆ ಮುಂದೆ ನಿಂದವಳ್ ।
ದುಗುಲದಮೇಲುದಂ ತೆಗೆದು ಭಾವಕಿ ಸಾವಗಿಸಾಗಳಾ ನೃಪಂ॥ (೬೬)

ಸ್ಮರಮದಕುಂಭಿಕುಂಭಯುಗಮೆಂಬಿನಮಾವಗಮಿಂಬುವೆತ್ತ ಪೀ।
ವರ ಕುಚಮಂಡಳಂ ಮದನಕೇಳಿನಗೇಂದ್ರನಿತಂ ಮೆಂಬಿನಂ॥
ಕರಮೆಸೆ ವಾಕೆಯುನ್ನತ ನಿತಂಬಮನಂಗರಾಜ್ಯಮೆಂಬಿನಂ।
ಸ್ಫುರಯಿಪ ಜವ್ವನಂ ಮುದಮನೀಯೆನಿರೀಕ್ಷಿಸಿದಂ ಕುಮಾರಿಯಂ॥ (೬೭)

ವ॥ ಅಂತು ನೋಡಿ—

ಚಂ॥ ಇವಳ ಕಟಾಕ್ಷವೀಕ್ಷಣಮನೀಕ್ಷಿಸುವಿಕ್ಷುಧನುರ್ಧರಂ ಮಹೋ।
ತ್ಸವಮನವಶ್ಯಮೆಯ್ದುವನೆ ಕೆಯ್ದುವನನ್ಯಮನೊಲ್ಲದೊಪ್ಪುವೀ॥
ಯುವತಿಯ ಹಾವಭಾವಮನೆ ಭಾವಿಪ ಭಾವಭವಂ ಭವಂಗಮಂ।
ಜವಳೆಯ ನೋವದೀವನೆ ವಿಚಾರಿಪೊಡೆತ್ತಣದಿಲ್ಲ ಸಂದೆಯಂ॥ (೬೮)

ವ॥ ಎಂದು ನಿಜಾತ್ಮಜೆಯ ನವೀನ ಯೌವನಾವಷ್ಟಂಭಮಂ, ಭಾವಿಪ ಭೂವಲ್ಲಭನಂತರಂಗರಂಗಕ್ಕೆ ಚಿಂತಾನರ್ತಕಿಯವತರಿಸೆ—

ಮ॥ ಸಿರಿಯಿಂ ಸತ್ಕುಲದಿಂ ಪ್ರೌಢಬ್ದಿ ಸೊಬಗಿಂ ಸೌಂದರ್ಯದಿಂ ಶೀಲದಿಂ ।
ವರಚಾತುರ್ಯದಿನುದ್ಧ್ಯಯೌವನದಿನಿಂತಿ ಕಾಂತೆಗಿನ್ನಾವನೀ ॥
ಧರೆಯೊಳ್ ಖೇಚರಭೂಚರಕ್ಷಿತಿಪರೊಳ್ ಸಾದೃಶ್ಯಮಂ ಪೆತ್ತ ಸ ।
ದ್ವರನೆಂದೀ ತೆಜದಿಂದೆ ಚಿಂತಿಸಿದನಂದಾ ಖೇಚರಾಧೀಶ್ವರಂ ॥ (೭೯)

ವ॥ ಅಂತು ಚಿಂತಾಕ್ರಾಂತಸ್ವಾಂತನಾತ್ಮೀಯ ಮಂತ್ರಿಸಂತತಿಯೊಳ್ ಆಲೋಚಿಸಿಯುಮಾತ್ಮಜೆಗನುರೂಪನಪ್ಪ ವರನನಜಿಯಲ್ ಸೆಜಿಯದೆ ಜಿನಮತಪ್ರಸಿದ್ಧ ಸಮೃದ್ಧಾನೇಕನಿಮಿತ್ತ ಶಾಸ್ತ್ರವಿಚಕ್ಷಣನುಂ, ಗಾಂಭೀರ್ಯಾದಿ ಗುಣಲಕ್ಷಣನುಮಪ್ಪ ಸಂಭಿನ್ನನೆಂಬ ಕಾರ್ತಾಂತಿಕೋತ್ತಮನಂ ಬರಿಸಿ ಯುಕ್ತಾಸನದೊಳಿರಿಸಿ—

ಮ॥ ವರಗಂಧಾಕ್ಷತ ಪುಷ್ಪಪೂಗಫಲಕರ್ಪೂರಾದಿಯಿಂದಾವುಸೋ ।
ಹರನಂ ಮನ್ನಿಸಿ ತನ್ನನಂದನೆಗಧೀಶಂ ಭಾವಿಪಂದಾವ್ರೊನಿ ॥
ಧರಣೀಚಕ್ರದೊಳಾಗಲಿರ್ದಪನ್ನಿದಂ ಸಂಭಿನ್ನ ಪೇಟ್ಬ್ರಿನ್ನದು ।
ರ್ಧರಚಿಂತಾಭರಮಂ ಕಬಲ್ವಿಕಳೆ ನೀನೆಂದಂ ಖಗಾಧೀಶ್ವರಂ ॥ (೭೦)

ವ॥ ಎಂಬುದುಮಾನಿಮಿತ್ತಜ್ಞಮನೋಜ್ಞಂ ಮುನ್ನಂ ತನ್ನ ಶಾಸ್ತ್ರಕ್ರಮದಿಂ ನಿರ್ನಿಕ್ತಮಾಗಿರ್ದುದನವಧಿಜ್ಞಾನಿಗಳ ಪೇಟ್ಕೆಯಿಂ ತಾರ್ಕಂಡುದನಿಂತೆಂದು ಪೇಟ್ದಿಂ—

ಕಂ॥ ವಿಜಯತ್ರಿಪಿಷ್ಠರೆಂಬರ ।
ಪ್ರಜಾಪತಿಕ್ಷಿತಿಭುಜಂಗೆ ಪೌದನಪತಿಗಾ ॥
ತ್ಮಜರಾದರ್ ಪ್ರಥಮಬಳಾಂ ।
ಬುಜನಾಭರ್ ದೇವ ಬಗೆವೊಡವರತುಳಬಳರ್ ॥ (೭೧)

ಅವರೊಳ್ ತ್ರಿಪಿಷ್ಠನೆಂಬಾ ।
ತಿವಿಕ್ರಮಂ ಕೂಸುತನದೊಳಂ ಕೇಸರಿಯಂ ॥
ತವೆ ಕೊಂದು ಕೋಟಿಶಾದ್ರಿಯ ।
ನವಜ್ಞೆಯಿಂ ಕಿಬ್ತು ಬಿಸುಟನಿಂತಪ್ಪಧಟಂ ॥ (೭೨)

ಆತಂ ಮುನ್ನಿನ ಜನ್ಮದ ।
ರಾತಿಯನಾವಾಜಿಗಳನನಾಜಿಕ್ಷಿತಿಯೊಳ್ ।
ಘಾತಿಸಿದಪಂ ತ್ರಿಖಂಡೋ ।
ರ್ವೀತಳಮಂ ಚಕ್ರದಿಂದಮಾಕ್ರಮಿಸಿದಪಂ ॥ (೭೩)

ಮಲ್ಲಿಕಾಮಾಲೆ॥ ಆ ಮುಕುಂದನೆ ನಿನ್ನ ನಂದನೆಗಾದಪಂ ಸ್ಥಿರವಲ್ಲಭಂ ।
ಕಾಮಸನ್ನಿಭಮೂರ್ತಿ ನಿರ್ಮಳಕೀರ್ತಿ ಭೋಗಪುರಂದರಂ ॥
ಪ್ರೇಮದಿಂ ಪಲರುಂ ತನೂಜರನೀಕಯೊಳ್ ಪಡೆದಪ್ಪನು ।
ದ್ದಾಮರಾಗ ಪಯಃಪಯೋಧಿಮೃಗಾವತೀ ಪ್ರಿಯನಂದನಂ ॥ (೭೪)

ಚಂ॥ ಎನೆನೆಗಟ್ಟಿದ್ದ ಬುಧೋತ್ತಮನ ಸೂಕ್ತಿ ಮನಕ್ಕನುರಾಗದೇಳ್ಗೆಯಂ।
ಜನಿಯಿಸೆ ನೂತ್ನರತ್ನಕನಕಾಭರಣಾಂಬರದಾನಪೂರ್ವಮಾ॥
ತನನವನೀತಳಪ್ರಭು ವಿಸರ್ಜಿಸೆ ಭಾವಿಸುತ್ತಿರ್ದನಂದು ನಂ।
ದನೆಯ ವಿವಾಹವರ್ತನದುಪಾಯಮನಾ ವಸುಧೈಕಬಾಂಧವಂ॥ (೭೫)

ಗದ್ಯಂ

ಇದು ನಿಖಿಳ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ
ಖ್ಯಾತಜಿನಸಮಯ ಕಮಳನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಮಪ್ಪ
ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್

ಸ್ವಯಂಪ್ರಭಾ ಪ್ರಭಾವವರ್ಣನಂ.

ತೃತೀಯಾಶ್ವಾಸಂ.

ಶ್ರೀ

ಚತುರ್ಥಾಶ್ವಾಸಂ

ವೀತರಾಗಾಯನಮಃ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀವರ ವಿದ್ಯಾಧರಜನ ।
ತಾವಿಭು ನಿಜಸುತೆಗೆ ಸಮನಿಪತಿಶಯ ಭಾಗ್ಯ ॥
ಕ್ಕಾವಗವೊಸೆದಂ ಮನದೊಳ್ ।
ಭೂವಿನುತಂ ಪಂಚಪರಮಗುರು ಪದವಿನತಂ ॥ (೧)

ಚಂ॥ ಸುಭಗೆ ಸುರೂಪೆ ಸನ್ನುತೆ ಕಳಾವಿದೆ ಮಾನನಿಧಾನೆ ದಲ್ ಸ್ವಯಂ ।
ಪ್ರಭೆ ದಿಟದಿಂ ಮದೀಯಸಖಿಗೀಕೆಗೆ ವಲ್ಲಭನಾದಪಂ ಗಡಂ ॥
ವಿಭವಸಮೇತನಾತನಿರವೆಂತುಟೊ ನೋೞ್ಪೆಮೆನುತ್ತೆ ಖೇಚರ ।
ಪ್ರಭುಸುತೆಯಾಳಿಯರ್ ಕೆಲಬರಪ್ರಕಟಾಂಗಿಯರಾಗಿ ರಾಗದಿಂ ॥ (೨)

ಉ॥ ಪೋಗಿ ಮುಕುಂದನಂದಮನಲಂಪಿನೊಳೀಕ್ಷಿಸಿ ವೀಕ್ಷಣೋತ್ಸವಾ ।
ಭೋಗಮನಾವಗಂ ಪಡೆದು ಬಂದು ತದೀಯ ವಿಳಾಸದೇೞ್ಗೆಯಂ ॥
ಬೇಗದೆ ಪೇೞಿ ಕೇಳ್ದು ಕಿವಿವೇಟಮೆ ಪಲ್ಲವಿಸುತ್ತುಮಿರ್ಪುದುಂ ।
ಪೂಗಣೆಗಳ್ಗೆ ತಲ್ಲಲನೆ ಮೆಲ್ಲೆರ್ದೆಯಂ ಗುಱಿಯಾಗೆ ಮಾಡಿದಳ್ ॥ (೩)

ವ॥ ಅಂತಾ ಖಚರರಾಜತನೂಜೆ ರಾಜೀವಲೋಚನನ ಘನತರ ವಿಳಾಸ ವಿಭವವರ್ಣನಾಕರ್ಣನಾನಂತರಂ ಕಂತುಸಂತಾಪಾಕ್ರಾನ್ತಸ್ವಾನ್ತೆಯಾಗಿ ತತ್ಸಮಾಗಮ ಸಮುತ್ಸುಕವೃತ್ತಿಯಿಂ ಕತಿಪಯದಿನಂಗಳನನಂಗೋನ್ಮಾದದಿನೆಂತಾನುಂ ಕಳಿಪುತ್ತು ಮಿರೆಯಿರೆ—

ಕಂ॥ ಸುತೆಗುಚಿತಸ್ಥಾನದೊಳೊಗೆ ।
ದತೀವ ಬಹುಳಾನುರಾಗಮುದು ತನಗಾಕ ॥
ರ್ಣಿತಮಾಗೆ ವಿವಾಹೋದ್ಯೋ ।
ಗತತ್ಪರಂ ಮತ್ತಮೊಂದು ದಿನಮಾ ಖಗಪಂ ॥ (೪)

ವ॥ ತನ್ನಪಕ್ಕದೊಳಿರ್ದ ಪರಮವಿಶ್ವಾಸಭೂಮಿಯುಪ್ಪಿಂದುವೆಂಬ ಪೆಸರಿನೆಸೆವೆನ್ನ ವದನಮುಂ ಪಡೆದು ನೋಡಿ—

ಮಲ್ಲಿಕಾಮಾಲೆ॥ ಇಂದು ನಾಳೆ ದಲೆನ್ನದೀಗಳೆ ಪೋಗಿ ಭಾವನ ನಂದನಂ।
ಗಿಂದುವಕ್ತ್ರೆಯನೀಸ್ವಯಂಪ್ರಭೆಯಂ ಖಗಪ್ರಭುವಿತ್ತನಾ॥
ನಂದದಿಂದವನೆ ನಿನ್ನ ಮೆಯ್ಯುನೆನೆಂದು ಪೇೞ್ದು ವಿವಾಹಯೋ।
ಗ್ಯಂ ದಲಿಂತಿದೆನಿಪ್ಪಪಾಸರಮಂ ವಿಚಾರಿಸಿ ಬಾರ ನೀಂ॥ (೫)

ವ॥ ಎಂದಾ ನಮಿವಂಶಲಲಾಮಂ ಬಾಹುಬಲಿಕುಲೋತ್ತಂಸನಪ್ಪ ನಿನ್ನಲ್ಲಿಗೆನ್ನ ನಟ್ಟಿದನಿದು ಪದಾಗಮನವೃತ್ತಕಮೆಂದು ಸವಿಸ್ತರಂ ಪೇೞ್ದು ತನ್ನ ತಂದ ಪಾಗುಡಮಂ ಮುಂದಿಡುವುದುಮದನಾದರದಿಂ ಕೆಯ್ಕೊಂಡು ಮನದೊಳ್ ಗುಡಿಗಟ್ಟಿ—

ಕಂ॥ ಕರಮೆಸೆವನುಬಂಧಂ ಪಿರಿ।
ಯರೊಳಾದುದು ಪೋದುದೆನಿಸದೀಗಳ್ ತಾನು॥
ದ್ಧರಿಸಿದನೆ ಬಂಧು ಭಾವನು।
ನರರೆ ಖಗಾಧೀಶನಲ್ತೆ ಗೋತ್ರಪವಿತ್ರಂ॥ (೬)

ವ॥ ಅದುಕಾರಣದಿಂ ಚಿರಕಾಲ ವ್ಯವಹಿತಮಾದ ನಮ್ಮ ತಮ್ಮನ್ವಯದನು ಬಂಧಮಂ ಸಂಬಂಧಿಸಲೆಂದು ಬಗೆದಂದ ವಿಯಚ್ಚರರಾಜನ ವಿವೇಕಮಚ್ಚರಿಯನಾರ್ಗೆ ಮಾಡದೆಂದು ಮೆಚ್ಚಿ ವಿಚ್ಚಳಿಸಿ ಪೊಗೞೞ ತದವಸರದೊಳ್ ಮುದವೊದವೆ ವಿಯಚ್ಚರ ಚರಂಗಭ್ಯಾಗತ ಪ್ರತಿಪತ್ತಿಯನಾಚರಿಪ ಬಗೆಯಿನಿಂದುವಂ ತಂದೆಯನುಮತಿಯಿಂ ವಿಜಯಂ ನಿಜಮಂದಿರಕ್ಕೊಡಗೊಂಡು ಪೋಗಿ ಮಜ್ಜನ ಭೋಜನ ತಾಂಬೂಲಾನುಲೇಪ ನಾದಿಗಳಿಂ ಪ್ರಮೋದಮನುತ್ಪಾದಿಸುವುದುಂ—

ಕಂ॥ ನಗಧರನ ಕೊಡೆ ಸಂಭಾ।
ಷೆ ಗೆಯ್ಯಲೆಂದೆಳಸೆ ತನ್ನ ಚಿತ್ತಂ ಮತ್ತಾ॥
ಖಗನಾ ವಿಜಯನನುಜ್ಞೆಯಿ।
ನಗಣಿತಮತಿ ತನ್ನಿವಾಸದಲ್ಲಿಗೆ ಪೋದಂ॥ (೭)

ವ॥ ಅಂತು ಪೋಗಿ ಮುನ್ನಮೆ ತನ್ನಂ ಬರಿಸಿ ಕನ್ನೆಯಂದಮಂ ವಿಸ್ತರಮಱಿಯ ಲೆೞ್ಚೈಸುತಿರ್ದ ಜನಾರ್ದನನಂ ಮೆಲ್ಲನೆ ಸಾರ್ದು ನಿಜವಚೋ ನಟೀ ನಾಟ್ಯಾರಂಭದೊಳ್ ಸೂಸುವ ಕುಸುಮಾಂಜಳಿಯನನುಕರಿಪ ದರಹಾಸವಿಳಾಸಮಂ ಮೊದಲೊಳ್ ಮೆಱೆದು—

ಕಂ॥ ಲೋಕನುತ ಖಚರಪತಿ ರ।
ತ್ನಾಕರಸುತೆಯಂ ಸ್ವಯಂಪ್ರಭಾ ಶ್ರೀಸತಿಯಂ॥
ಸ್ವೀಕರಿಸಿ ನೀಂ ಬೞಿಕ್ಕಂ।
ಶ್ರೀಕಾಂತನೆನಿಪ್ಪ ರೂಢಿಯಂ ತಾಳ್ದಿದಪೈ॥ (೮)

ವ॥ ಎಂದು ನುಡಿವ ಸಭಚರನ ಕರಮಂ ಕರಮೆ ಪದೆದು ಪಿಡಿದು ಸ್ವಯಂಪ್ರಭಾ ನಾಮಶ್ರವಣ ಮಾತ್ರದಿಂ ಕಾಮುಕಂಕಪತ್ರ ಪಾತ್ರೀಭೂತ ಗಾತ್ರನಾದಶ[ಕ]ತ ಪತ್ರ

ನೇತ್ರಂ ನಿರ್ಜನ ಸ್ಥಾನನಿವೇಶನೇಚ್ಛೆಯಿಂ ನಿಜನಿಶಾಂತದ ಪಿಂತಣ ಪೂಗ ಪುನ್ನಾಗ ಚೂತ ಚಂಪಕ ಪನಸ ಪಾಟಳ ಕದಳ ಕಾಂಚನಾಳಕಾದಿ ಮೇದಿನೀರುಹಂಗಳಿನಾದಮೆಸೆವ ಸಪವನಮನುಪವನಮುನಪರಿಮಿತ ರಾಗದಿಂ ಪೊಕ್ಕು—

ಚಂ॥ ಕರತಳದಂದಮಂ ಕಿಸಲಯಂ ಲತೆಗಳ್ ನಳಿತೋಳ್ಗಳಂದಮಂ।
ಗುರುಕುಚದಂದಮಂ ಸ್ತಬಕಮುಳ್ಳಲರ್ಗಳ್ ನಗೆಗಣ್ಗಳಂದಮಂ॥
ಧರಿಯಿಸೆ ತನ್ನ ಕಣ್ಗೆ ನಿಜವಲ್ಲಭೆಯಂದಮೆ ಮುಂದೆ ತೋಱುತುಂ।
ಬರೆ ಸೊಗಯಿಪ್ಪ ಕೇಳಿವನ ಲಕ್ಷ್ಮಿಯನಿಂದುಗೆ ತೋಱುತುಂ ನೃಪಂ॥ (೯)

ವ॥ ಬಂದೊಂದು ಮಾಧವೀಲತಾ ಮಂಡಪದ ತಣ್ಣೆೞಲೊಳ್ ವನಪಾಲಕನಿಕ್ಕಿದೆಳವಳರ ಪಾಸಿನೊಳ್ ಕುಳ್ಳಿರ್ದು ತಣ್ಮುಗಿಲ ಪುೞಿನದ ಮೇಲೆ ಪೊಸನಸೆಯೊಳೆಳಸಿ ಮೇಳಸುವ ಹಂಸಮಿಥುನಮಂ ನೋಡಿ ನಸುನಗುತ್ತುಮಿವುಬೇರ್ಪಡಿಸುಗುಂ ತೊಲಗಿಮೆಂದು ನೆವದಿನಿರ್ದ ಕತಿಪಯಪರಿಜನಮುಮಂ ತೊಲಗಿಸಿ ಕೆಲದೊಳಿಕ್ಕಿದ ಪಲ್ಲವಾಸನದೊಳಿಂದುವಂ ಕುಳ್ಳಿರಲ್ವೇೞ್ದು—

ಕಂ॥ ಅನುಲೇಪನ ಕರ್ಪೂರಾ।
ದ್ಯನೂನ ವಸ್ತುಪ್ರತಾನದಿಂದಿಂದುಗೆ ತಾಂ॥
ಜನಿಯಿಸಿದಂ ಸಂತೋಷಮ।
ನನಂಗನುಪದೇಶದಿಂದಮಾನೃಪತನಯಂ॥ (೧೦)

ವ॥ ಆ ಪ್ರಸ್ತಾವದೊಳ್—

ಚಂ॥ ಖಗಸುತೆಯಂದಮಂ ಚರಣೊಳಾಲಿಪ ಲಾಲನೆಯಿಂದೆ ಕರ್ಣವೀ।
ಥಿಗೆ ಪಟಿತರ್ಪ ಚಿತ್ತಮುನನಂಗಿದೆ ತೋಱಲೆ ನಿಱಿಕ್ಸಿದಪ್ಪುದಿ॥
ಲ್ಲಿಗಿಡೆನೆ ಕೆನ್ನಯಂ ತುಡುಕೆ ದೃಷ್ಟಿ ಕಟಾಕ್ಷಿಸಿ ನೋಡಿದಂ ಮುದಾ।
ಳಿಗಳುಲಿಪಕ್ಕೆ ಸೈರಿಸದೆ ಪಕ್ಕದೊಳಿರ್ದಲಗೊಂಚಲಂ ನೃಪಂ॥ (೧೧)

ವ॥ ಅನ್ನೆಗಂ ಮುನ್ನವೆ ಬಿನ್ನವಿಸಲವಸರಂಬಾರುತ್ತುಮಿರ್ದವಿದ್ಯಾಧರಚರಂತನಗೆ ಕಣ್ಸನ್ನೆಗೆಯ್ದನೆನಿಸಿ ಸರಸಿಜಾಕ್ಷನೀಕ್ಷಿಸಿದಲರ್ಗುಡಿಯುಂ ತನ್ನ ವಚೋ ನಿರ್ಗಮಕ್ಕೆ ಮುಂಗುಡಿಯಾದುದಿದೆಂದು ಮನದೊಳ್ ಗುಡಿಗಟ್ಟ—

ಕಂ॥ ಸುಮನಶ್ಶಿಲೀಮುಖಾಕ್ರಾಂ।
ತಮಿದಲರ್ಗುಡಿ ದೇವ ತನ್ನೊಳುತ್ಕಳಿಕೆ ಕರಂ॥
ನಿಮಿರ್ದಿರೆ ನಿನಗೆಱಿಕಮನಾಂ।
ತು ಮೆಱಿದಪುದು ತತ್ಸ್ವಯಂಪ್ರಭಾ ಚೇಷ್ಟಿತಮುಂ॥ (೧೨)

ವ॥ ಎಂದು ವಿದ್ಯಾಧರಕನ್ನೆಗೆ ತನ್ನೊಳಾದ ಪೂರ್ವಾನುರಾಗಮಂ ಪ್ರಸ್ತಾವಿಸುವ ನೆವದಿಂ ಶ್ರವಣನಾಳದೊಳ್ ಸುಖಸುಧಾರಸಮನಸದಳಂ ತಳಿಯೆ—

ಕಂ॥ ಇನಿಯವಳೊಲವಿನ ನುಡಿಗೇ।
ಳ್ದನಿತಱೊಳಲರ್ದತ್ತು ಚಿತ್ತಭವನೆಚ್ಚ ಮುಕುಂ॥
ದನ ಮನಮೇಂ ಮೃತಸಂಜೀ।
ವನ ಯೋಗಮೊ ಕಾಮಿಗಂಗನೆಯರನುರಾಗಂ॥ (೧೩)

ವ॥ ಆಗಳ್—

ಕಂ॥ ಇನಿಯವಳಂ ಮುನ್ನುರ್ಚಿದ।
ನನೆಗಣೆ ತಳ್ಪೊಯ್ದುದೆರ್ದೆಯನೆಂಬುತ್ಸವದಿಂ॥
ತನಗೆ ಹಿತಕಾರಿಯಾಗಿರೆ।
ಮನೋಜನಂ ನೃಪತಿ ಬಗೆದನಾರ್ದಿಸುತಿರೆಯುಂ॥ (೧೪)

ವ॥ ಅಂತೊದವಿದ ಮದನಾನುರಾಗ ಮದಿರಾ ಮದದಿನುನ್ಮತ್ತಮಾದ ಚಿತ್ತಮ ನವಹಿತ್ಥಮಯಕಟಾಕ್ಷ ಪಟದಿನಾಚ್ಛಾದಿಸುತ್ತುಮಿನಿಯವಳೊಲವನನಿತಱೊಳೆ ನಂಬದೆ ನಂಬಿ ನುಡಿಯಿಸುವ ಬಗೆಯಿನಿದುಚಿತ ಕವಿಪರಿಚಿತ ಚಾಟು ಚಾಪಳಮಿದೆಮ್ಮ ಮನಮನಾರಯ್ವ ನಿನಗೆ ನೆವಮಪ್ಪುದೆಂದು ಪುಸಿಮಾಡಿ ನಸುನಗುವುಪೇಂದ್ರನ ಮುಖೇಂದುಗಿಂದು ಮಂದಸ್ಮಿತ ಚಂದ್ರಿಕೆಯನೋಲಗಿಸಿ—

ಕಂ॥ ಆ ಕನ್ನೆಯಿರವು ನಿನಗಿಂ।
ದಾಕೆಯೆ ಹೃದಯದೊಳಗಿರ್ದೊಡಂ ಮನುಕುಳ ರ॥
ತ್ನಾಕರ ಸೌಭಾಗ್ಯಮದೋ।
ದ್ರೇಕದಿನದು ದಿಟಮೆ ವಿದಿತಮಾಯಿತ್ತಲ್ಲಕ್ಕುಂ॥ (೧೫)

ಮೇಲಿಕ್ಕಿ ಪೆಱರ್ ನೆಱೆವರ್।
ಸೋಲಿಸಲಿರ್ದೆಡೆಯೊಳಿರ್ದು ಖಗಪತಿ ಸುತೆಯಂ॥
ಸೋಲಿಸಿದೈ ನೃಪ ನಿನ್ನಯ।
ಲೀಲಾ ಚಕ್ರಾಸ್ತ್ರಮಾದನೆನೆ ಕುಸುಮಾಸ್ತ್ರಂ॥ (೧೬)

ವ॥ ಅದೆಂತೆಂದೆನೆ ಮನುಕುಲವರಿಷ್ಠಂ ತ್ರಿಪೃಷ್ಠನಪ್ಪ ಪುರುಷೋತ್ತಮನೆ ವಲ್ಲಭಂ ಸ್ವಯಂಪ್ರಭೆಗೆಂದಾದೇಶಮುಂ ಸವಿಶೇಷಮಱಿವ ಸಹಚರಿಯರಪ್ಪ ಖಚರಿಯರ್ ತಮ ತಮಗೆ ವಿವಿಧವಿದ್ಯಾವಿಶೇಷ ಕೌಶಲದರ್ಶನದೊಳೆಲ್ಲಮಾಕೆಯ ಮುಂದೆ ಭವದೀಯಾ ಮೇಯ ರೂಪ ರಾಮಣೀಯಕಾದಿಗಳಪ್ಪಱಿಕೆಯೆಱಕದ ಗುಣಂಗಳನೆ ಕೊಂಡು ಕೊನೆದು ಕಿವಿವೇಟಕ್ಕೆ ಪಕ್ಕಪ್ಪಿನೆಗಮಿಂತೆಂದು ಪೇೞ್ವರ್—

ಕಂ॥ ಅಳನೀ ರುಚಿಯುಂ ನವಕ।
ಜ್ಜಳರೇಖಾ ಶ್ರೀಯನಾಂತ ಕೃಷ್ಣನ ರೂಪಂ॥
ನಳಿನಾಕ್ಷಿಯರಾರ್ ಕಂಡೊಡ।
ಮಲರ್ಗಣ್ಗಳೊಳಿಡಲೆ ಬಗೆವರಿದು ತಕ್ಕುದೆ ದಲ್॥ (೧೭)

ಪೀಲಿಯನೆತ್ತಿ ವಮಿರೆ ಬಾ ।
ಚ್ಚೀಲಿಯವೋಲ್ ಬಳಸಿ ಪರಿಯೆ ಯುವತಿಕಟಾಕ್ಷಾ ॥
ವಾಳಜಳಮೆಸೆವುದತನುವ ।
ಕೇಳೀವನಮೆನಿಸಿ ಕೇಶವನ ಕೇಶವನಂ ॥ (೧೮)

ವನಿತಾಕಟಾಕ್ಷತೂಳಿಕೆ ।
ಯಿನತನು ಸೌಭಾಗ್ಯರೂಪಮಂ ಚಿತ್ರಿಪ ನೂ ॥
ತನ ಚಿತ್ರಫಳಕಮೆನಿಪುದು ।
ವನಜಾಕ್ಷನ ಭಾಳಫಳಕಮುಜ್ಜ್ವಳತಿಳಕಂ ॥ (೧೯)

ಈರೆಲೆವೋದತನುವ ಕೇ ।
ಳೀ ರಂಭಾಕಾಂಡಮೆನಿಪ ನಾಸಾವಂಶಂ ॥
ಭ್ರೂರೇಖಾ ಶಾಖೆಗಳಿಂ ।
ರಾರಾಜಿಪುದಬಳೆ ಮನುಜಕಂಠೀರವನಾ ॥ (೨೦)

ಕರಿಯಾಲಿಯ ನೆವದಿಂ ಚಂ ।
ಚರೀಕಮಂ ನೇತ್ರಪುತ್ರಿಕೆಯ ನೆವದಿಂದಂ ॥
ಸಿರಿಯಂ ತಳೆದೆಸೆದಿರ್ಪುದು ।
ಸರೋರುಹಾಕ್ಷನ ದರಸ್ಮಿತಾಕ್ಷಿ ಸರೋಜಂ ॥ (೨೧)

ಸ್ಮರನಿಂದುಬಿಂಬಮಂ ಪೋ ।
ಲ್ತಿರೆ ತದ್ವದನೇಂದುಬಿಂಬದೊಳ್ ಕತ್ತುರಿಯಿಂ ॥
ಬರೆದನೆನೆ ತನುತರಶ್ಮ ।
ಶ್ರುರೇಖೆ ನಿಶ್ವಾಸಸುರಭಿತಂ ಸೊಗಯಿಸುಗುಂ ॥ (೨೨)

ಎಱಗಿದ ಮಱಿದುಂಬಿವೊಲಿರೆ ।
ಮಿಱುಪ ಕೊನೆವಿರ್ಸೆ ಸೂಸೆ ವರಹಾಸಶ್ರೀ ॥
ನಱುಗಂಪಂ ಕೃಷ್ಣನ ಬಾ ।
ಯ್ದೆಱೆ ನಗುವುದು ರಾಗಮೇಱಿ ಬಂದುಗೆಯಲರಂ ॥ (೨೩)

ಸ್ಮರಕಲ್ಪಕುಜಸ್ಕಂಧದ ।
ಸಿರಿ ನೆಲಸಿರೆ ನೀಳ್ದ ಬಾಹುಶಾಖೆಯಿನೆಸೆವಾ ॥
ಹರಿಯದೃಢಸ್ಕಂಧಮನ ।
ಪ್ಪಿರೆ ಭುಜಲತೆ ಸಫಳಮಾದಪುವು ಸಖಿ ನಿನ್ನಾ ॥ (೨೪)

ಆ ಮನುಜಲಲಾಮನ ತೋಳ್ ।
ಕಾಮನ ಬಾಳೆನಿಸಿ ಹೊಗರಿಡಲ್ ತಕ್ಕುವು ನಿ ॥
ನ್ನೀ ಮೃಗಮದ ನವಲಿಖಿತ ಲ ।
ತಾಮಳಿನ ಕಪೋಲಘರ್ಷಣ ಕ್ರೀಡಿತದಿಂ ॥ (೨೫)

ಸಲಿಲಾಯತ ಹಾರದ್ಯುತಿ ।
ವಳಯಿತಮಾ ನೃಪನುರಸ್ಥಳಂ ನವಪುಳಿನ ॥
ಸ್ಥಳದವೊಲೆಸೆದುವು ತಕ್ಕುದು ।
ಲಳನೆ ಭವತ್ಕುಚರಥಾಂಗ ಮಿಥುನಕ್ಕೆಳಸಲ್ ॥ (೨೬)

ಸಿರಿಯನುರವಾಂತು ಮೇಲಾ ।
ಗಿರೆ ಪಿಂಗದ ನಿಜದರಿದ್ರತೆಗೆ ಲಜ್ಜಿಸಿದಂ ॥
ತಿರೆ ಬಾಸೆಯ ಮಱಿಯೊಳಡಂ ।
ಗಿ ರಂಜಿಸುತ್ತಿರ್ಪುದಾ ನೃಸಿಂಹನಮಧ್ಯಂ ॥ (೨೭)

ತುಂಗತೆಯಿಂ ಸಿಂಹಾಸನ ।
ಸಂಗತಿಯುಂ ಕಣ್ಗೆವರೆ ಘನಚ್ಛಾಯೆಯನಾಂ ॥
ತೇಂ ಗೆಡೆಗೊಂಡುದೊ ಪೃಥುಳತೆ ।
ಯಂ ಗಿರಿಯ ನಿತಂಬದಂತೆ ಹರಿಯ ನಿತಂಬಂ ॥ (೨೮)

ಎಂತೆಣೆಯೆಂಬೆನಸಾರತೆ ।
ಯಂ ತಾಳ್ದಿದ ಕನಕ ಕದಳ ದಂಡಮನಾಶಾ ॥
ದಂತಿಗಳ ಕರಶ್ರೀಯಂ ।
ಕಾಂತಿಗಳಿಂ ತೊಡೆವ ತೊಡೆಗಳೊಳ್ ಕೇಶವನಾ ॥ (೨೯)

ಪರಿಭವಿಸಿ ಹರಿಯ ಮೇಗಾಲ್ ।
ನೆರೆಯೆ ನಿಜಶ್ರೀಯೊಳೋಡಿ ಕೂರ್ಮಂ ಲಜ್ಜಾ ॥
ಭರದೆ ಪುಗೆಲನನೆಳೆಯಂ ।
ಧರಿಯಿಸಿದುದು ಕೂರ್ಮಮೆಂಬರದಱಿಂದಕ್ಕುಂ ॥ (೩೦)

ತೊಳೆವುವು ನಖರೋಚಿರ್ಮಯ ।
ಜಳದಿಂ ನಡೆವೆಡೆಯೊಳವನಿಯುಂ ನೃಪನ ಪದಾಂ ॥
ಗುಳಿಗಳುಱಿದಂತು ಮನುಕುಳ ।
ತಿಳಕಂ ಮುಟ್ಟುವನೆ ತದ್ರಜೋದೂಷಿತೆಯಂ ॥ (೩೧)

ಕಂ॥ ಕಿಸುಸಂಜೆ ತನ್ನ ದೋಷಾ।
ಭಿಸಂಧಿವರ್ತನೆಗೆ ಸೆಡೆದು ಕಾಲ್ವಿಡಿದನುರಂ॥
ಜಿಸಿದಪ್ಪುದೆನಿಸಿ ತೋರ್ಪುದು।
ಮಿಸುಗುವ ಕೇಸಡಿಯು ಕೆಂಪು ಕಮಲೇಕ್ಷಣನಾ॥ (೩೨)

ವ॥ ಅಂತುಮಲ್ಲದೆಯುಂ—

ಚಂ॥ ಸುಗಿವುವು ತಿಗ್ಮದೀಧಿತಿಯೆ ಗೆತ್ತವನಂ ನಡೆ ನೋಡಿ ನೋಡೆ ದಿ।
ಟ್ಟಿಗಳಮೃತಾಂಶುವಂ ಕಿವಿಗಳಾತನ ಮೆಲ್ನುಡಿಗೇಳ್ದು ಕೇಳೆ ಮೆ॥
ಯ್ದೆಗೆವುವು ಕೀಚಕಧ್ವನಿಯೆ ಗೆತ್ತು ವಿಪಂಚಿಯ ನುಣ್ಣರಕ್ಕದೆಂ।
ತುಗೆ ಬಗೆದಂದಪರ್ ಪೆಱರ್ಗೆ ಕೂಡಿದ ಕಾಂತೆಯರಾ ಕುಮಾರನಂ॥ (೩೩)

ಕಂ॥ ಎಂದಿಂತು ತಮ್ಮತಮ್ಮಱಿ।
ವಂದದಿನಾಖಚರಿಗಂಬರೇಚರ ದೂತೀ॥
ವೃಂದಂ ಪೇೞ್ವುದು ನಿನ್ನೀ।
ಸೌಂದರ್ಯಮನೆಯ್ದೆ ಪೊಗೞಲಾರ್ ನೆಱೆದಪರೋ॥ (೩೪)

ಶ್ರೀಕಾಂತ ಭವದ್ಗುಣನಿವೆ।
ಹಾಕರ್ಣನ ಮಾತ್ರದಿಂದೆ ಖಗಪತಿಸುತೆಗ॥
ತ್ಯಾಕುಳತೆ ಮದನರಾಗೋ।
ದ್ರೇಕ ಪ್ರಭವಂ ಪ್ರಘೂರ್ಣಿಸಿತ್ತಾಶಯದೊಳ್॥ (೩೫)

ಉ॥ ಆಡುವ ಮುಗ್ಧಬಾಳಕಿಯರುಂ ನುಡಿಜಾಣೆಯರಾದರೀಗಳಿಂ।
ಪೋಡದ ನಿನ್ನ ಮಾತುಗಳನಾಡಿಯೆ ಕೇಳಿಸಲಾವ ಮೆಯ್ಯೊಳಂ॥
ಹಾಡುವರಾದಗೋವನಿಗೆವಾಡುವರುಂ ನೃಪ ನಿನ್ನ ಗೀತಮಂ।
ಹಾಡಿಯೆ ಖೇಚರಾತ್ಮಜೆಗೆ ಭಾವಿಪೊಡಿಂತುಟೆ ಮುಯ್ಮೆ ಜೇಟದಾ॥ (೩೬)

ಕಂ॥ ಮುಱುಗಿ ಭವದ್ವೃತ್ತಾಂತಮ।
ನಱಸುವ ಕಿವಿಯಂ ಪಳಂಚೆ ಕುಮುದೋತ್ತಂಸ॥
ಕ್ಕೆಱಪಳಿಗಳದನಿ ನೋವಳೆ।
ಗಱಿಯಿಂದುಡಿವೇಱಿನೊಳಗನೆಳವುವ ತೆಱದಿಂ॥ (೩೭)

ಉ॥ ಕಾಮುಕವಲ್ಲಭಂ ಪ್ರಣಯಸೃಷ್ಟಿಕರಂ ಹೃದಯಾಸ್ಪದಂ ಸುಖ।
ಸ್ವಾಮಿ ರತೀಶನೆಂದರಸ ನಿನ್ನನೆ ಹಾಡಿಸಿ ಕಾಮನಾಮದಿಂ॥
ಕಾಮನ ನೋಂಪಿಯೊಳ್ ನಿಜಸಖೀ ಲಿಖಿತತ್ವದಪೂರ್ವವಿದ್ಧಮಂ।
ಕಾಮಿನಿ ಲೋಚನೋತ್ಪಳದಿನರ್ಚಿಪಳಶ್ರುಕಣಾಕ್ಷತಾನ್ವಿತಂ॥ (೩೮)

ಕಂ॥ ಕಿವಿಯುಂ ಬಂಚಿಸಿ ಕೇಳ್ದಳ್ ।
ಛವಮುಕ್ತಿಯನೀಕ್ಷಣಂಗಳ್ ಬಂಚಿಸಿ ನಿ ।
ಸ್ಸಿವಯುವಗಳ ನೋಬ್ಬಳ್ ತಾ ।
ಬ್ಬ ವಾಕ್ಯಂ ಕುಟಿಲಜನಕ್ಕಾವಕ್ಯನೋ । (೩೯)

ಶಾರಿಕೆಯುಂ ಶುಕಮೊಳ್ ಸಹ ।
ಕಾರದೊಳೆಲುತೆಯನಚ್ಚಿಯಂ ಕೊಡುವಳು ।
ವೀರರಮಣ ಭವತ್ಸಂಭೋ ।
ಗಾರಂಭಣ ಫಳಮನಾಕೆ ಕಾವಿಟಿಸಿ ಮನದೊಳ್ । (೪೦)

ವ॥ ಅಂತವಿಶ್ರಾಂತಿಸ್ವಾಸಮಾದ ಪೂರ್ವಾನುರಾಗ ವಿಪ್ರಲಂಭದೊಳ್—

ಕಂ॥ ವಿಮಳಾತ್ಮ ಕುವಲಯ ಪ್ರಿಯ ।
ಹಿಮಶೀತಳಮಪ್ಪ ನಿನ್ನ ಗುಣಮಾಳಿಗೆ ತಾ ।
ಪಮನೊದವಿಸಿದುದು ಕಮಳಾ ।
ಯಮಾನೆಯುಪ್ಪವಚ್ಚನರಸ ಮೊದಲೊಳರಿಯುಂ । (೪೧)

ವ॥ ಅದು ಕಾರಣದಿಂ—

ಕಂ॥ ಅನುಲೇಪನದೊಳ್ ಚಂದನ ।
ಮನೆ ಹಾರದೊಳತ್ತಮುತ್ತಿನಾರಮನೆ ನಿಕೇ ।
ತನದೊಳ್ ಧಾರಾಗೃಹಮನೆ ।
ವಿನೋದದೊಳ್ ವಾರಿಕೇಳಿಯನೆ ಪಡೆದಳವಳ್ । (೪೨)

ವ॥ ಮತ್ತಂ—

ಚಂ॥ ಲಲನೆ ಮೃಣಾಳಮಂ ಭುಜದೊಳುತ್ಪಳಮಂ ನಗೆಗೊಟ್ಟಳಬ್ಜಕು ।
ಟ್ಮಲಮುಮಂ ಕುಚದೊಳ್ ಕದಳಿಕಾಂಡಮನೂರುವಿನೊಳ್ ಪ್ರವಾಳಮಂ ।
ತಳದೊಳಮಿಟ್ಟುಕೊಂಡು ಪದಿಯುಟ್ಟಿದೆನಿಂತಿವನೆಂದು ಮನ್ಮಥಾ ।
ಕುಳೆ ಸಖಿಯರ್ಗೆ ಸಾರ್ದು ನೆಗಪ್ಪದ ನೆವದಿಂ ಶಿಶಿರೋಪಚಾರಮಂ । (೪೩)

ಕದಳಿಯೊಳೊತ್ತಲಾಯ್ತು ಮಣಿದರ್ಪಣವಿರಾಸ್ಸಿಸಲಾಯ್ತು ಹಾಸಲಾ ।
ದುದು ಕುಸುಮೋತ್ಕರಂ ಮುಡಿಯಲಾದುದೆ ಬೊಟ್ಟಿಡಲಾಯ್ತು ಚಂದನಂ ।
ಪ್ರದಮದೊಳಿಟ್ಟಲಾಯ್ತು ಬಿಸದಿಕ್ಕಿರಲಾದುದೆ ಮನ್ಮಥಾಗ್ನಿಗಾ ।
ಇದೆ ಪ್ರಗಲಾಯ್ತು ಪ್ಪಮಲಕಾಂತ್ಯವಿರಾಗಳನಿಳ್ದು ಭೂಮಿಪತೀ । (೪೪)

ವ॥ ಅದಲ್ಲದೆಯುಂ—

ಚಂ॥ ಕನಲ್ದುಱಿದುತ್ತರಂಗಯುತ ದುಗ್ಧನ ಸಂಚಿತ ಗಿರಿಟ್ಟ ಕೆಳ್ಳ ಪಾ ।
ರುವ ಸುರದುಷ್ಪ ಗೇಹದ ರಸಾಗಾಶಿಸುವಾಂಯುವ ಲಾಸ್ಯಲೀಲೆ ತಿಪ್ ।
ರುವ ಮನದುಷ್ಟಿಯಿಂ ಬರೆದ ಚಿತ್ರಮನಳ್ಕೆ ವಿಹಸ್ತ ರೂಪಸದಂ ।
ದುವು ಬಹುಕೇತಕುಗಿಂ ಮಾಜಯಿಯಿಕುಂ ವಿರಹವ್ಯಥೆಯಂ ಸಮಾಜನಂ । (೪೫)

ಆಗೆಮಿಗೆ ಬೆಳ್ಪುವಸ್ತ್ರಗಳನಿಂಬು ಪಟೆಮಾಳ್ಪಿ ಮೊಟ್ಟೆದಿಟ್ಟಿಯಂ ।
ನೆಗಬಿದೆ ಕೆಳ್ವ ಪಾಡು ಜಗೆ ಸಜ್ಜಿದುವ ಕೂಪ ಪಗೆ ಪೆಲ್ವ ತಂಬುಲಂ ।
ಪಗೆ ಬಗೆಗಪ್ಪ ಮೇಲಂ ಬ್ರಯುಮುದಂ ಪಗೆಯಪ್ಪುದೆ ದೇವಹಿತಿಬುದಿಂ ।
ಪಗೆ ಪೆಜದೇಕನಾಗದೆನಡೆ ಬಾಸ್ಪುರದೇಂ ತಪವೋ ಪರಾಭವೋ । (೪೬)

ವ॥ ಎಂದು ಪರಿತಾಪ ಜಾಲಜಾಲದಿ ವಿರಹಾಭಿಘಾತದಿಂದ್ವೇಗ ಭಾವಮಸಾಳ್
ಕರಯಿ ವಿದ್ಯಾಧರಪತಿಂ ಮತ್ತಮಿಂತೆಂದಂ—

ಕಂ॥ ನೆನೆಮಿರಹಿತಿಪಿಗೆ ಹಸಿಯಾ ।
ದುನ್ನದಳನೀವಂಗಹಾಸಮಂ ಮಾಡ್ಪ ಸಾ ।
ಜಪೆ ತಳಿವ ಮಳಯಜಾಂ ಸವಿ ।
ಸುವಾಲಿಸಿೞ ಮೇಲೆ ಸುರಿವ ಕಪ್ಪುರದರಜಂ । (೪೭)

ವ॥ ಅಂತು ಕಂದರ್ಪದುರ್ವಾರ ದಹನಾಹಮುಪರಿಯುತ ಶಿಶಿರೋಪಚಾರವಿಧಿಗ
ಳೊಳಮುಪಶಮಿಸದುದ್ದಮುರಿಯೆ—

ಕಂ॥ ಮುಗುಱಿಱಲ್ಪುಗಲಾಕ್ಷಬದೆಸಳ್ ।
ಮೊಗಸದೆ ಪೊಜಪೊಜಗೆ ಪೊಱಗಳೆದುವುದಿನಿಸಂ ।
ಸಾರದೊಳಗಳುರ್ವ ಮನೋಜಾ ।
ಗ್ನಿಗದೆನಿಸುವುದವಳ ಸರಳದೀರ್ಘನಿಶ್ವಾಸಂ । (೪೮)

ಬಿಸುಸುಯ್ಯಲರಿಂ ಗಜ್ಜಿ ಪಿ ।
ದು ಸೌರಭಕ್ಕೆಱಗದಳಿಗಳುರುಳುತ್ತಿರೆ ಮುಂ ।
ಧೆಸಿ ನಾಸಾಮುಕುಳಂ ಪೊಸ ।
ಯಿಸಿದುದು ಸಂಪಗೆಯ ಕೆಳೆಯನಾ ಕೋಮಳೆಯಾಂ (೪೯)

ಒಳಗಳುರ್ದುರ್ಕೆಳ್ವ ಮದನಾ ।
ನಳವುಟಪೇಧದೆ ಬೆಮರ್ತ ನೇತ್ರಸರೋಜಂ ।
ಗಳಿಸಿದೆ ಪುಷ್ಪದ್ರವದವ ।
ಕುಳವೆಸಕ್ಕವೆನಿಸಿ ಸುರಿಸುವುವು ಕಣ್ಬನಿಗಳ್ । (೫೦)

ವ॥ ಅದಲ್ಲದೆಯುಂ—

ಕಂ॥ ನೆಗೆದ ಮೊಲೆಯೆಂಬ ಪ್ರೋಣರ್ವ।
ತ್ಯಗೆ ಕುಡುಕಂ ತಳೆಯುತಿರ್ದನ್ನವು ಕಣ್ಗಳ್ ಪಾ।
ನೆಗಳೆನೆ ಸುರಿಯುತ್ತಿರ್ದಳ್।
ಮೃಗಾಕ್ಷಿ ಗುಡುಗುಡನೆ ಬಾಷ್ಪಜಳಬಿಂದುಗಳಂ। (೫೧)

ಇನೆಯಂ ಪೋಕುಂ ಹೃದಯ।
ಸ್ಥನೆಂದು ಬಾಯ್ದೆಱೆಯಲಣ್ಮದಿರ್ದಂತೆ ಮನೋ।
ಜನ ಶಬ್ದವೇಧಶರಭಯ।
ದಿನುಸಿರದಿರ್ದಂತೆ ಕಾಂತೆ ನುಡಿ ಮಱೆದಿರ್ದಳ್। (೫೨)

ಕೆಳದಿಯ ದನಿಗಂ ಪಿಕಕಳ।
ಕಳಭಯದಿಂ ಮಳಯಪವನಭಯದಿಂ ಕದಳೀ।
ದಳದೆಲರ್ಗಮಿಂದುಭಯದಿಂ।
ಬೆಳಗುವ ಕನ್ನಡಿಗಮುಬ್ಬೆಗಂಬಡುವಳವಳ್। (೫೩)

ವ॥ ಮತ್ತಂ

ಕಂ॥ ಬಸದಾಗಿ ತಾನೆಮುನ್ನೋ।
ದಿಸಿದರಗಿಳಿ ಪೊರೆದ ಹಂಸೆ ನಡಪಿದ ಪಿಕಮಾ॥
ಡಿಸಿದ ನವಿಲಿಂದು ತನ್ನೆರ್ದೆಗಿ।
ಡಿಸಿದುವೆಂದೊಡೆ ವಿಜಾತಿಕೃತಮಱಿದಪ್ಪುವೆ॥ (೫೪)

ಶುಕಮುಸುರ್ದು ಕನಲಿಪಿನಿತ।
ಲ್ತು ಕವಂಪಂ ತಳೆದತಳದ ಕೆಂಪಡರ್ದಿರೆ ಮೌ।
ಕ್ತಿಕ ಕರ್ಣಪೂರಮಂ ಶಿಖಿ।
ರಕಾಂಕ್ಷೆಯಿಂ ಸೆಳೆದುಸೆಳೆದು ಕನಲಿಪ್ಪುದವಳಂ॥ (೫೫)

ಬಱಿದೆ ಕಿಸುಗಣ್ಣ ಪಿಕಮನಿ।
ತಱಿಕೊಳೆದಿರ್ದಪ್ಪುದೆ ಬಱಿಲ್ದು ಚಿಂತಾರತದಿಂ।
ಮಱೆದಿರೆ ಮಱುವಕ್ಕವಳೆ।
ಚ್ಚಱಿ ಜಡಿದಬ್ಬರಿಪಿ ಮಗುಟಿ ಬಳಯಿಪ್ಪುದಮಲಂ। (೫೬)

ವ॥ ಅಂತವಳ ಸುಕುಮಾರ ಕಮನೀಯ ಭಾವಂಗಳೆಲ್ಲಮನುಸ್ಮೃತ್ಯ ಭಾವಂಗಳಾಗಿ ಸಕಳ ವಿಷಯಾನುಷಂಗ ಪರಿತಾಪಮುಸ್ಥೆಯುಂ ಕ್ಷಣಕ್ಷಣ ವಿವರ್ಧಮಾನ ಮನ್ಮಥಾವಸ್ಥೆಯುಮಾಗಿ—

ಕ॥ ಕುಳಿರ್ವ ಕೊಳಂಗಳೆ ಕೋಡುವ ।
ಪುಳಿನಂಗಳೆ ತಣ್ಣನಪ್ಪಧಾರಾನಿಳಯಂ ।
ಗಳೆ ನೆಲೆಯಾಗಿ ಮನೋಜ ।
ಜ್ವರನಾಕುಳೆ ದಿವಸಭಾರಮಂ ಪಿಂಗಿಸುವಳ್ ॥ (೫೭)

ನುಗಿದಲರ್ಗಣೆಗೆ ಶಿಲಾಗ ।
ರ್ಭಗೂಢೆಯಾಗಿರ್ದಳೆನೆ ನಿಜಾಕೃತಿ ಮಣಿಭಿ ।
ತ್ತಿಗಳೊಳ್ ಮಾರ್ಪೊಳೆಯುತ್ತಿರೆ ।
ಮೃಗಾಕ್ಷಿ ಶಶಿಕಾಂತ ಗೃಹದೊಳಿರುಳಂ ಕಳೆವಳ್ ॥ (೫೮)

ವ॥ ಮತ್ತಮೊರ್ಮೆ ಚಿಂತಾಪಿಸಾರ ಭರದೊಳೞಲ್ದು ನಸುಮುಚ್ಚಿದ ವಿಳೋಚನದಿನಿೞಿದು ಪೆರ್ಮೊಲೆಯ ಕೆಲದೊಳ್ ಪನಿವ ಕಣ್ಬನಿಯ ಸಪ್ಪುಳ್ಗೆ ಪೆರ್ವಳಿಸಿ ಬೆಱಿದೆ ಕಂಪಿಸುವಳೊರೊರ್ಮೆ ನಿರ್ಭರ ಮನೋರಥಪ್ರಾಪ್ತಿಯನೆ ಬಯಸಿ ಮನಸಿಶಯಮಂತ್ರಸೇವೆಯುಂ ಮಾಡಿಪಳೆನಿಸಿ ಶಿಶಿರೋಪಚಾರ ವಸ್ತುಚರ್ಚಿತ ಲತಾನಿಳಯದೊಳ್ ದರನಿಮೀಳಿತಲೋಚನೆಯಾಗಿ ಬೞಿದೆ ಜಿನುಗುತ್ತಿರ್ಪಳ್. ಓರೊರ್ಮೆ ದೂತೀಪ್ರಯೋಗಕರಣಮನೆ ಮನದೊಳಳವಡಿಸಿ ಬಗೆಯುತುಂ ಬನದೊಳಸವಸದಿನೆೞ್ದು ಸುೞಿವೆಡೆಯೊಳದಿರ ಕೃತಕಾಚಲದ ರತ್ನಪತ್ರದೊಳ್. ಮಾರ್ಪೊಳೆವ ತನ್ನನೆೞಲನಾದರಿಸಿ ನಿನ್ನವೃತ್ತಕಮನುಸಿರ್ದು ಬೆಸಗೊಳ್ವಳ್. ಓರೊರ್ಮೆ ಸಂಕಲ್ಪಸುರತಸಮ್ಮದದೊಳೊರ್ಮೊದಲೆ ನೆಗೆವ ಮೆಯ್ನವಿರ ತುದಿಗಳೊಳ್ ತೊಡರ್ದೊಗೆದ ಬೆಮರ ಬಿಂದುಗಳ ಪುದುವಿಂ ಪನಿಪುಲ್ಲೊರೆದ ಶಾಡ್ವಲಸ್ಥಳಿಯನಿೞಿಕೆಯ್ವಳ್. ಓರೊರ್ಮೆ ನಿಜಸಂಜ್ವರಾರ್ಚಿಯಿಂ ಕಂದಿದೆಳದಳಿರ ಪಸೆಯೊಳ್ ಸುರುಳ್ದು ಬಿೞ್ದಿರ್ದ ಮುಗ್ಗುಲೊಳೆ ಮಿಡುಕದುಡುಗಿದ ಕೃಶಾಂಗಯಷ್ಟಿಯಿಂ ರಾಹುವ ಮುಖಾಂತರದ ಮಿಱುಗುವೆಳವೆಱೆಯ ಕೆಳೆಯನೊಳಕೆಯ್ವಳ್. ಓರೊರ್ಮೆ ವಿರಹಾನಳಸನ್ನಿಧಿ ವಿದಾಹದಿಂ ಕೆಂಪಡರೆ ಕಾಯ್ದುವೆನಿಪ ಕೆಂದಾವರೆಯ ಪಾಸಿನೊಳ್ ಕೆಡೆದು ಮಿಡಮಿಡ ಮಿಡುಂಕುವಪವಜಲ ಪೆರ್ಚಿನಿಂ ಕಿಚ್ಚಿನೊಳ್ ಬಿಟ್ಟ ಕಿಡಿಯುಂ ನೆನೆಯಿಸುವಳ್. ಓರೊರ್ಮೆ ನಿಜತನುವ ತಾಪದಿಂ ಕಾಯ್ದುಪೆತ್ತ ಮುತ್ತಿನ ನುಣ್ಮಳಲ ಪುಡಿಯೊಳ್ ಪೊರಳ್ವ ಜೀವಸದೊಳಾವರಿಸಿ ದೂಸೆಯೊಳ್ ಬಿಟ್ಟ ಪಾವಿನಂದಮಂ ಮುಂದಿಡುವಳ್. ಓರೊರ್ಮೆ ತಣ್ಮಲಿವ ಕಪ್ಪುರದ ಜಗಲಿಯೊಳ್ ಕರಮೆ ಕೊರಗಿದ ಶರೀರವಲ್ಲರಿಯನೀಡಾಡಿ ನಿರ್ಭರಸ್ತಬ್ಧಭಾವದಿಂ ಚಂದ್ರಬಿಂಬದಕಳಂಕಲಕ್ಷ್ಮಿಯನಳಂಕರಿಪಳ್. ಓರೊರ್ಮೆ ವಿರಹಸಂಜ್ವರವ್ಯಥೆಗೆ ಸೈರಿಸದೆ ನೆಲನನೋಡಿಪೊಕ್ಕಪಳೆನಿಸಿಯುಪವನದೀರ್ಘಿಕಾರತ್ನಸೋಪಾನಪಟ್ಟದೊಳ್ ಮಾರ್ಪೊಳೆವಳ್. ಓರೊರ್ಮೆ ಮೆಯ್ಯ ಬಿಸುಪಿನೆಸಕದಿಂ ಪೊಕ್ಕ ನೀರ್ಕದಡಿ ಕುದಿವಿನಂ ಕೃತ್ರಿಮತರಂಗಿಣಿಯ ಪೂನಲೊಳ್ ಪೊರಳ್ದು ನೀರೂಡಲಿಕ್ಕಿದಂಗಜನ ಕೂರಲಗಿನೊಳೋರನ್ನಮಪ್ಪಳ್. ಓರೊರ್ಮೆ ಕಂಕೆಲ್ಲಿ ವಲ್ಲರಿಯ ಕಾವಣದ ಕೋಣೆಯೊಳ್ ಕುಳಿರ್ವ ಶೀತಳಿಕೆಗಳ ತುಱುಗಲಂ ಪೇೞಿ ಜೇಗೆಗಿಚ್ಚಳುರ್ದ ಮಱಿಯೊಳ್ ಸಿಲ್ಕಿ ಬಸವೞಿದ ಚಮರಿಯಿರವನನುಕರಿಪಳ್. ಓರೊರ್ಮೆ ಧಾರಾಗೃಹಾಂತರದೊಳಂತುಱುಂತುಮುಣ್ಮುವ ಹಿಮಾಂಬುಧಾರೆಗಳ್

ಬಳಸೆ ಬೆಗಡುಗೊಂಡು ನೇಣ್ವಲಿಯ ತೊಡರೊಳ್ ತೊಡಂಕಿ ನಡುಗುವ ಕುರುಂಗಿಯೊಳ್ ದೊರೆಯಪ್ಪಳ್. ಓರೊರ್ವಳ್ ಕೋಮಳ ಮೃಣಾಳನಾಳಮನಲಂಕರಿಸಿ ಮನಸಿಶಯಪಾಶಬಂಧಮುಂ ದ್ವಿಗುಣಿಸುವಳ್. ಓರೊರ್ವಳ್ ಕುಳಿರ್ವ ಕಪ್ಪುರದ ಪಟ್ಟಮನನುರ್ಚಿ ಮನ್ಮಥಜ್ವಲನಪಾತದಿಂ ಮೆಯ್ವಿಗೆ ಪುಗುಟ್ತುದೆಂಬ ಸಂಕೆಯುಂ ಕೆಳದಿಯರ್ಗೆ ಬಳಯಿಸುವಳ್. ಓರೊರ್ವಳ್ ಪಲ್ಲವಾಸ್ತರಣದೊಳ್ ಮೆಯ್ಯನೀಡಾಡಿ ಮನಸಿಜನ ಸರಲ ಕೆಂಗಱಿಯ ಸೋಂಕನಿರ್ಮುಡಿಪಳ್. ಓರೊರ್ವಳ್ ಪಾಸಿದಲರ್ವಸೆಯನೆಸಿ ಕುಸುಮ ಶರಶಯ್ಯೆಯುಮಂ ಪ್ರಕಟಿಪಳ್. ಮತ್ತಮವಳ್ಗವಿಗಱಿದಂಗಜಜ್ವಳನ ಸಂಜ್ವರೋದ್ರೇಕಮಂ ಪೇೞ್ವೊಡತನುವ ಕರಿಂಕುವರಿದ ಕೃತಕಾಚಳಂಗಳೆನೆ ಕಾಯ್ಪನೊಳ್ಕೊಂಡ ಕುಚಮಂಡಲಾಂತರದೊಳೆಡೆವಿಡದೆ ತಳಿವ ಮಳಯಜ ಹಿಮದ್ರವಂ ಕಾವಲಿಯೊಳೆಱೆದ ಕರ್ಬಿನರಸಮನನುಕರಿಪುದು. ಅವಳ್ ಬಿಸುಸುಯ್ಯ ಬೆಂಕೆಯೊಳ್ ಬೆರಸಿದನಿತಱಿಕೂಳಿ ತಣ್ಮಲೆವ ತೆಂಗಾಳಿಯುಂ ನಂಜಿನ ಘಾಳಿಯೆನಿಸಿ ವನಕುಸುಮ ಕಿಸಲಯಪ್ರಕರಮುಂ ಕೊರಗಿಸುವುವು. ಅವಳೆಳಸಿ ಪೊಕ್ಕ ಪೂಗೊಳಂ ಕಾಯ್ದ ಕರ್ವೊನ್ನ ಪುತ್ಥಳಿಯನಿಕ್ಕಿದಂತಿರುರ್ಕುವುದಂತುಮಲ್ಲದೆಯುಂ—

ಕಂ॥ ಸ್ಮರನೊತ್ತಿದಗುಂಡಿಗೆಯಂ ।
ಬಿರುದಿಂಗೀಧರೆಯ ಬೆನ್ನೊಳೆನಿಸಿರ್ಪುವು ತ ॥
ದ್ವಿರಹಾರ್ತೆ ಮೆಯ್ಯನಿಕ್ಕಿರೆ ।
ಕರಿಂಕುವೋದೆಡೆಯ ಪಜ್ಜೆ ತಣ್ಪಸಲೆಗಳೊಳ್ ॥ (೫೯)

ತನುತಾಪದಿಂದೆ ಪೊರ್ದಿದ ।
ಬನಮುರಿವುದು ಪೊಕ್ಕ ಪೂಗೊಳಂ ಬತ್ತುವುವಿ ॥
ರ್ದ ನೆಲಂ ಪೊತ್ತುವುದಾಕೆಗೆ ।
ಜನಪತಿಸುತ ನೀನೆ ದಲ್ ಶರಣ್ ಪೆಱತುಂಟೇ ॥ (೬೦)

ವ॥ ಮತ್ತಮನತಿಶಯಮಾದ ಮನಸಿಶಯವಸೆಯೊಳ್ ನಿಷಿದ್ಧ ನಿಖಿಳೇಂದ್ರಿಯ ವಿಹಾರೆಯುಮಂತರ್ವಿಲೀನ ಮಾನಸೆಯುಮಾಗಿ—

ಮ॥ ಪಿರಿದುಂ ಸ್ವಪ್ನರತೋತ್ಸವಾತಿಶಯಮೋ ಚಿಂತಾರತಾಹೇಶ ನಿ ।
ರ್ಭರಮೋ ಪೇೞ್ವುಸದೇನನಾಡಿಸುವ ತೋಳ್ ತೇರಯ್ವುಬಾಯ್ ತಪ್ಪಿಬ ॥
ರ್ಸರಿವಾತುಣ್ಮುವ ಕಿತ್ತುಸಿರ್ ನೆಗಟ್ದುಮಾಣ್ಪನ್ನಂ ಸುಖೋದ್ರೇಕಮಂ ।
ತರೆಯಾದಂತೆವೊಲಿರ್ದು ಬೆರ್ಚಿದವೊಲೆೞ್ದೇನಾನುಮಂ ಚೇಷ್ಟಿಪಳ್ ॥ (೬೧)

ವ॥ ಅನಂತರಂ ವಿಭ್ರಾಂತಮಾದಂತರಂಗದೊಳ್ ಪಿಂಗದುನ್ಮಾದಭಾವಮೆ ನೆಲಸೆ ನೆನಪದೊಳಂ ಕನಸಿನೊಳಂ ಮನಸಿನೊಳಂ ಆದಮೆ ಸನ್ನಿಧಮಾದ ವಲ್ಲಭಾಗಮನದೊಳ್ ಬಳೆವ ರತಿಕಲಹ ನಿರ್ಭರಮನೆ ದಿಟಂ ಮಾಡಿ—

ಕಂ॥ ಅಕುಟಿಳೆಯನೆನ್ನನೆಲಿ ಚೂ ।
ತಕಳಾಧರ ಮಳಯಪವನ ಪಿಕಶುಕ ನೀವಿಂ ।
ತಕಟೆನ್ನಿನಿಯನವೋಲ್ ಬಂ ।
ದು ಕಾಯ್ದು ಬಿಡೆ ಬೇಸಿ ಜಡಿದು ನುಡಿದಳಳಿಪ್ಪುದೇ । (೬೨)

ವ॥ ಎನುತುಮುಸವಸದಿಸಿರ್ದೆಡೆಯುನೆೞ್ದು ಬಿಸುಸುಯ್ದು ಬೞ್ಚಿದೆ ಬೆಜ್ಜಗಾಗಿ ತುಱುಗೆವೆಯ ತೆರ್ಕೆಯೊಳ್ ಬಂಬಳಿಪ ಕಣ್ಬನಿಗಳೊಸರೆ ಮಸುಳಸಾದ ದಿಟ್ಟಿಯುಂ ಬಲ್ಪಿನಿಂ ನಿಲಿಸಿ ತನ್ನಿದಿರೊಳಂಗಜಾನಳನ ಕೇಸುರಿಯ ರಾಶಿಯೆನೆ ಕೆಂಕಮಾದ ಕಂಕೆಲ್ಲಿ ವಲ್ಲರಿಯುಂ ನೋಡಿ—

ಕಂ॥ ಮುನಿದೊಡೆದೆನೆ ತಳಿರ್ಗಳ ಸಿರಿ ।
ನಿನಗಕ್ಕೆಂದೊದೆದೊಡದನೆ ತಪ್ಪಂ ಮಿಗೆಮಾ ॥
ಡಿ ನಿಸರ್ಗಬಂಧುಗೆನಗಸು ।
ಕೆ ನೀನುಮೆಳದಳಿರ ನೆವದಿನುರಿವುದು ಗುಣಮೇ । (೬೩)

ವ॥ ಎಂದದಱ ಮುಂದೆ ನಿಂದಿರಲಣ್ಮದೋಸರಿಸಿ ನಿಜಕುರವಿಕೀರ್ಣ ಪಾನೀಯ ಪೂರಪರಿವರ್ಧಿತಮನಳಿಪಿಕಶುಕಾವಳೀ ವಿರಾವಮುಖರಿತೋದ್ಯಾನ ಭೂರುಹಮುಮಂ ಬಾಳ ಸಹಕಾರ ಭೂರುಹಮನೆಯ್ದಿ ಕೆಯ್ಗಳಂ ಮುಗಿದು—

ಕಂ॥ ಎಲೆಚೂತ ತುಂಬಿಗಂ ಕೋ ।
ಗಿಲೆಗಂ ಕೆಯ್ಗೊಟ್ಟು ನೀನುಮಿಂದೆನ್ನಂ ಬಂ ॥
ದಲೆವುದಿದುಚಿತಮೆ ಭಾವಿಸು ।
ಸಲೆ ನೀರೆಱೆದೋವಿ ನಡಪಿದಂದಿನ ನಲವಂ ॥ (೬೪)

ವ॥ ಎನುತ್ತುಮದಱೊಳ್ ಮಱುಮಾತುವಡೆಯದುದ್ವೇಗದೆ ಮಗುೞ್ದು ಮೃಗಧರಮಯೂಖ ಶೃಂಖಳಾಪಾತ ಪರಿಭೂಯಮಾನೆಯನತಿಮ್ಲಾನ ದೀನ ವದನೆಯಂ ಪದ್ಮಿನಿಯನಿದಿರೊಳ್ ಕಂಡು—

ಕಂ॥ ಮುಸಿದೆನ್ನನೊಡೆಯರಿಲ್ಲದ ।
ಳನಳಲಿಪಂತಳಲಿಸಿದನೆ ನಿನ್ನುಮನೀ ದು ॥
ರ್ಜನನಿನ್ನುಮಱಿಯನೇ ನಿ ।
ನ್ನಿನಿಯಂ ಕಾಯ್ದುಯ್ದು ನಾಳೆ ನಿಸ್ತೇಜಿಪುದಂ ॥ (೬೫)

ವ॥ ಎನುತುಮೆಯ್ದೆವಂದು ದಿನಕರ ಸಂಗಮನಾನಂತರ ಶ್ರಾಂತಿಯಿಂ ಕಣ್ಗೆಯ್ದು ತೆಱದಿನಿರ್ದ ತತ್ಪದ್ಮಿನಿಯುಂ ಕೇಳಿದಿಯರ ಪಕ್ಕದೊಳನಾದೃತೆಯಾದವೋಲ್ ವಿಷಾದ ಮನಪ್ಪುಕೆಯ್ದು—

ಕಂ॥ ಎಸೆವ ಶಿಶಿರೋಪಚಾರದೊ ।
ಳಸುವಱಿಮಾಡಿದರಿವಂದಿರೆಂದುಸಿರ್ದಳಲಾ ॥
ಱಿಸಲೆಳಸಿರೆ ಮೊಗಮಿಾಯದೆ ।
ಪುಸಿನಿದ್ದೆಯಿನಕಟ ನಳಿನಿ ಕಡೆಗಣಿಸುವುದೇ ॥ (೬೬)

ವ॥ ಎಂದಿಂತು ಪಲತೆಱದೆ ಮಱುಗಿ ಮನದ ನೋಸನಾರೊಳಂ ನುಡಿದುಮಲ್ಲಲ್ಲಿ ಬಱಿದೆ ಕಿವಿಯನಿತ್ತಾಲಿಸಿಯುಮೇನಾನುಮಂ ಮನದೊಳವಧರಿಸಿ ನಿಂದು ತಲೆದೂಗಿ ಕೆಲನನಾರಯ್ದು ನಿಶ್ವಸಿ ನೆಗಬ್ವಿತೆಱದೆ ಕಿಱಿದೆಡೆಯನೆಯ್ದೆವಂದುಪವನದ ಬೀದಿಯೊಳ್ ಬಳಸಿಯುಂ ತೊಳಲ್ವಳ್ ಅತ್ತಮಿತ್ತಣಿಂ ಬರ್ಪ ತೆಂಗಾಳಿಗಿದಿರೆಬ್ದು ಮನ್ನಿಸಿ ನಿಜೇಶ್ವರನ ವಾರ್ತೆಯಂ ಬೆಸಗೊಳ್ವಳ್. ಇದಿರೊಳುಲಿದೆಬ್ದು ಪೋಪ ಕೇಳೀವಿಹಂಗ ಮಂಗಳ್ಗೆ ಕೈಯ್ಯೊಡ್ಡಿ ನಿಜವಿರಹವೇದನೆಯನೋಪನಂಗೆ ಪೇೞ್ವುದೆಂದು ದೈನ್ಯಂ ಬಡುವಳ್. ಅಂತುಮಲ್ಲದೆಯುಂ—

ಚಂ॥ ಪುದಿದಡೆವೊತ್ತಿದಪ್ಪುದದೆ ಬಂದುಗೆ ಮುಂದೆ ತಮಾಳಕುಂಜಮಿಂ ।
ತಿದೆ ಪೊಗೆದಪ್ಪುದತ್ತಲದೆ ಕಾಯ್ದುರಿದಪ್ಪುದಶೋಕವೋವೊವೋ ॥
ವದೆ ಸುರಿಯುತ್ತುಮಿರ್ದಪುದು ಮುಂಮುರಿಯಂ ಮದನಾಗ್ನಿ ಸುತ್ತಿಮು ।
ತ್ತಿದುದೆನುತುಂ ದವಾವೃತ ಕುರಂಗಿವೊಲಾಕುಳಿಯಾಗಿ ನೋಡುವಳ್ ॥ (೬೭)

ಕಂ॥ ಅಸಕಳಿದ ತಾಪಮಂ ಸೈ ।
ರಿಸಲಾಱದೆ ಸಾವ ಬಸಸೆಯಿಂ ಪೊರ್ದುವಳ ॥
ರ್ಬಿಸುವ ಪುಲಿಯೆಂದು ಮಧುಪ ।
ಪ್ರಸೂನ ಸಂಕೀರ್ಣ ಕರ್ಣಿಕಾರದ್ರುಮಮಂ ॥ (೬೮)

ವ॥ ಮತ್ತಂ—

ಕಂ॥ ನಿಮಿರ್ವ ಶಶಿರಶ್ಮಿಕುಂತ ।
ಕ್ಕೆ ಮೆಯ್ಯನೊಡ್ಡುವಳಶೋಕಕುಸುಮಾರ್ಚಿರ್ಜಾ ॥
ಳಮನೆಯ್ದೆ ಪುಗುವಳಾವ್ರೋ ।
ನ್ನಮಿತಾಂಕುರ ಬಾಳ ಭುಜಗಮುಂ ಬರೆತೆಗೆವಳ್ ॥ (೬೯)

ವ॥ ಎಂದು ಪಲತೆಱದೆ ತೆಱಿಯೆ ಪೇೞ್ದಿಂದುವ ಮುಖೇಂದುವಿಂದೆಡೆವಿಡದೆ ಪಸರಿಸುವ ವಲ್ಲಭಾ ವಿಪ್ರಲಂಭ ಶೃಂಗಾರರಸಮಯ ಸುಧೀಪ್ಲವದೋಳೋಲಾಡಿ ಕೋಡಿ ದಂದದಿಂ ಗಾತ್ರಮುತ್ಕಂಪ ರೋಮಾಂಚಭಾವಕ್ಕೆ ಪಕ್ಕಾಗೆಯುಂ ತತ್ಪ್ರೀತಿ ನಿರ್ಭರ ರಸಪ್ರವಾಹಮ ತನುವನಾವಗಂ ತೀವಿ ಪೊಱಪೊಣ್ಮಿದಪ್ಪುವೆನೆ ಬಾಷ್ಪವಾರಿಪ್ಲವಂ ತುಱುಗೆಮೆಯ ಮೇರೆಯಂ ಮಿಾಱಿಲೊಡರಿಸೆಯುಂ ಅಬ್ಜಲೋಚನನಪರಾನಂದ ಭಾರ ಮಂ ತಾಳ್ದಿ—

ಕಂ॥ ಆಗಳೆ ಯೌವನರಾಜ್ಯ ।
ಶ್ರೀಗವುರ್ದುದು ಚಕ್ರರತ್ನಮುದ್ಭವಭೂಜ ॥
ಕ್ಕಾಗಳೆ ಫಳನೊಗೆದುದು ಮದ ।
ಮಾಗಳೆ ಸೌಭಾಗ್ಯದಂತಿಗಾಯ್ತೆನೆ ಬಗೆದಂ ॥ (೭೦)

ವ॥ ತದನಂತರಂ—

ಕಂ॥ ಹಿಮಮುಳಯಜ ಜಳದೊಳಮುಪ ।
ಶಮಿಸದ ವಿರಹಾಗ್ನಿ ಮಾಣ್ದುದೆರ್ದೆವುಗೆ ತತ್ಕಾಂ ॥
ತೆ ಮನೋಭವಾನಳೋಷ್ಮಾ ।
ಯಮಾಣೆ ಕೀರ್ಣಿಂಗೆ ಕಿರ್ಚು ಮರ್ದಕ್ಕುಮೆನಲ್ ॥ (೭೧)

ಹರಿಣಿ॥ ಅಳುರ್ವ ತನುಸಂತಾಪಕ್ಕುಳ್ಳಟಿಕ್ಕಿ ನಲ್ಲವಳಿಂಬು ಕೆ ।
ಯ್ವಳೆವಸಲೆಯಂ ಕೇಳೀಶೈಳಂಗಳಂ ಪುಳಿನಂಗಳಂ ॥
ಕುಳಿರ್ವಕೊಳನಂ ಧಾರಾಗೇಹಂಗಳಂ ಸೆಱಗೆಯ್ದನಾ ।
ಕುಳಮೆನೆ ಕುಳಿರ್ಕೊಂಡಿತ್ತಾಗಳ್ ಮನಂ ಮನುಜೇಂದ್ರನಾ ॥ (೭೨)

ವ॥ ಅಂತು ತಣ್ಮಲೆದು ನಲಿವ ಮನದೊಳ್ ತದೀಯವಿರಹೋಪಚಾರಿತ ಚೇಷ್ಟೆಗಳೆ ಮತ್ತಮವಿಚಳಂಗಳಾಗೆ—

ಚಂ॥ ತೆರೆಗೊನೆಯೊಳ್ ತೆರಳ್ದ ನಿಱಿಗಟ್ಟದ ಕತ್ತುರಿಯೊಳ್ಗೆ ಸರ್ಕಮು ।
ಲ್ವರಿಯೊಳಡಿರ್ಪುತಿರ್ಪ ಕುಸುಮದ್ಯುತಿಯೊಳ್ವೊನಲೊಳ್ ಕಳಲ್ವ ಕ ॥
ಪ್ಪುರದ ಪುಳಿಲ್ ಪಲ್ತಲರ ಬಂಡಿನ ಸಣ್ಣಮಣಲ್ ಮನಕ್ಕೆ ಬಂ ।
ದಿರೆ ಕೃತಕಪ್ರವಾಹಿನಿಯು ತಣ್ಮಳಲಂ ಬಿಡದಿರ್ಪ ನಲ್ಲಳಂ ॥ (೭೩)

ಕನಕಪರಾಗದಿಂ ಪಳಿಕಿನಂಚೆಗಳಂ ಪೊಣರ್ವಕ್ಕಿ ಮಾಣ್ಬಿಕಾಂ ।
ಚನ ಕಮಲಾಳನೀಳದಳಮಾಳಿಕೆಯಿಂದಸಿತಾಬ್ಜಮಾಳೆಯಂ ॥
ಬಿನಮೆಸೆವಿಂದುಕಾಂತ ಕುಮುದಾವಳಿತಳ್ತ ಘನೋಪಳಾಂಬುವಿಂ ।
ನೆನೆದರುಮಂ ಕುಳಿರ್ಕೊಳಿಪ ಪೂಗೊಳನಂ ಸೆಱಗೆಯ್ದ ನಲ್ಲಳಂ ॥ (೭೪)

ಕಂ॥ ಮುಲರ್ದಲರ್ದ ಬಯಲ್ದಾವರೆ ।
ಯಲರ್ವಂಡಂ ಮೊಗೆದು ತಳಯುತಿರೆ ತಣ್ಣೆಲರಿ ॥
ರ್ಕೆಲದ ಪರಿಕಾಲ್ಗಳಿಂ ತ ।
ಣ್ಣಲೆವೆಳವಸಲೆಗಳನೆಳಸಿ ಸುಟಿವೆಳೆಯುವಳಂ ॥ (೭೫)

ಚಂ॥ ನಲಿವೊಲಿಯೊತ್ತಿನಿಂದೊಗೆವ ಕೋರಕಮುಂ ಪುಳಕಂಗಳುಂ ತಡಂ ।
ಗಲಿಸೆ ಲತಾಂಗಮುಂ ಕುರವಕಾವನಿಜಾತಪಮೇಲೆ ಸಾರ್ಚಿ ಕಾ ।
ದಲನೆಡೆಗೆಯ್ದಿ ಬರ್ಪ ಖಚರೀನಿಚಯಕ್ಕಿದಿರ್ವೋಗಿ ದಿಟ್ಟಗಳ್ ।
ಪೊಲಗಿಡೆ ಚಿತ್ತದುಜ್ಜುಗಮುಮಂ ಮಱೆದಿರ್ದವೊಲಿರ್ದ ನಲ್ಲಳಂ ॥ (೭೬)

ಚಂ॥ ಮುರಿಯೆ ಕೊರಲ್ ಕಲಕ್ಕೆ ಮುಡಿಜೋಲ್ವಿನೆಗಂ ಕರಮಂಕದಂಪು ಸಾ ।
ರ್ತರೆ ಮೊಗಮೊಯ್ಯನೋರ್ಗುಡಿಪಿನಂ ನಡುಬಳ್ಕುವಿನಂ ವಳಿತ್ರಯಂ ॥
ತೆರಳೆ ಚಿರೋಪವಿಷ್ಟಶಶಿಕಾಂತ ಶಿಲಾನಿಹಿತೈಕಪಾಣಿಯಾ ।
ಗಿರೆ ಕರುವಿಟ್ಟ ಚಿಂತೆಯನೆ ಚಿತ್ರಿಸಿದಂತೆವೊಲಿರ್ದ ನಲ್ಲಳಂ ॥ (೭೭)

ಕದಪಿನೊಳೊತ್ತು ಶೀತಳಿಕೆಯಂ ಕುಚಮಂ ನಳಿನೀದಳಂಗಳಂ ।
ಪೊದಯಿಸಮುರ್ಚು ಕಂಟತಟದೊಳ್ ಬಿಸಮಂ ತಳಿ ಚಂದನಾಂಬುವಂ ॥
ಹೃದಯದೊಳೆಂದು ಸಂಭ್ರಮಿಪ ಖೇಚರಿಯರ್ಕಳ ಮುಂದೆ ಬೇಗೆ ತಾ ।
ಗಿದ ಲತೆವೋಲ್ ಬಱಲ್ದು ಪರಿತಾಪದೆ ಬಂಬಳ ಬಾಡಿದೋಪಳಂ ॥ (೭೮)

ಕಂ॥ ನರಪತಿ ಭಾವಿಸಿ ಮತ್ತಂ ।
ಚರನುಕ್ತಿಗೆ ವಿಷಯಮಾಗದೋಪಳವಸ್ಥಂ ॥
ತರಮುಂ ನಿಜಚಿಂತಾಗೋ ।
ಚರಮಾಗಿರೆ ಮನ್ಯುಮಿಕ್ಕು ತನ್ನಯ ಹೃದಯಂ ॥ (೭೯)

ಚಂ॥ ನೆನೆನೆನೆದಕ್ಕಟಾ ಕುಸುಮಕೋಮಳೆಯೊ ವಿರಹಾಗ್ನಿಯಿಂದಮಿಂ ।
ನೆನೆವಿರಿದಪ್ಪವಸ್ಥೆಯುಮನೆಯ್ದುಗುಮೊ ದಯೆಗೆಟ್ಟು ಮತ್ತೆಯುಂ ॥
ಮನಸಿಜನೆಚ್ಚೊಡಾವ ತೆಱನಕ್ಕುಮೊ ಚೆಚ್ಚರಮೆನ್ನ ಪೇೞ್ದುದಂ ।
ತಱೆಗಿವನೆಯ್ದಿ ಬಿನ್ನವಿಪಿನಂ ಪಿಡಿದಿರ್ಕುಮ ದೇವ ಜೀವಮಂ ॥ (೮೦)

ವ॥ ಎಂದು ಮತ್ತಂ—

ಕಂ॥ ಎನಗೋಸುಗಮಾಕೆಯನಿನಿ ।
ತನೆವಸ್ಥೆಯನೆಯ್ದಿಪಲ್ಲಿ ಬೆಸಗೊಂಡು ನೆಗ ॥
ೞ್ದನೆ ಮದನನಕಾರಣ ಮಿ ।
ತ್ರನಿನ್ನು ಮೆನಗೊಲ್ದೊಡೋಪಳಂ ಪಾಳಿಸುಗುಂ ॥ (೮೧)

ಸುಜನರಗುಣಮಾರ್ಗಂ ಪ್ರೀ ।
ತಿಜನಕಮೆಲ್ಲಿಯುಮದಿರ್ಕೆ ಮಾಯ್ದೆನ್ನ ಗುಣಂ ॥
ಸ್ವಜನಮನೆ ನೋಯಿಸಿದುದಕ ।
ಟ ಜಗದೊಳೆನ್ನಂತು ದುರ್ಜನಾಗ್ರಣಿಯಾವೊಂ ॥ (೮೨)

ವ॥ ಎಂದು ಮನದೊಳೆ ವಿಕಲ್ಪಿಸುತ್ತುಂ—

ಕಂ॥ ಪ್ರಿಯಜನದಿನಲ್ಲದಾಱುಗು ।
ಮೆ ಯುವತಿಯ ವಿರಹಶಿಖಿ ಸಖೀಕೃತಶಿಶಿರ ॥
ಕ್ರಿಯೆಯಿಂ ಹಿಮಕಣಗಣ ವ್ಯ ।
ಪ್ಪಿಯಲರ್ಚುಗುಮೆ ಸುಧಾಂಶುವೋಲ್ ಕುಮುದಿನಿಯಂ ॥ (೮೩)

ಉ॥ ಕೋಮಲಪಾಣಿಪಲ್ಲವಮನೊತ್ತಿ ಕುಚಂಗಳೊಳೂರುದಂಡರಂ।
ಭಾಮಳ ಕಾಂಡದೊಳ್ ಪದವಮುರ್ಚಿ ನವೋದ್ಗತರೋಮಹರ್ಷವ॥
ಕ್ಷೋಮ್ಮೃದು ಶಾಡ್ವಲಸ್ಥಳಿಯೊಳಿಟ್ಟು ತದಂಗಜತೀವ್ರತಾಪಮಂ।
ಕೋಮಳೆಗಾನೆ ಪಿಂಗಿಸುವೆನಿಂ ಸಖಿಯರ್ಕಳ ಪಂಗದೇವುದೋ॥ (೮೪)

ವ॥ ಎಂದು ತದ್ವಿರಹಪರಿತಾಪಾಪನೋದನೋಪಾಯ ಪ್ರಪಂಚದೊಳವೋಪಳ ಕೂಟಮನೆ ಕಾಮಿಸಿ ತದೀಯ ದುಸ್ತರ ಸ್ಮರದಶಾವ್ಯತಿಕರಕ್ಕೆ ತಲ್ಲಣಿಸಿ ಕಾಮೋತ್ಕಂಠೆಯಿಂ ಕಂಠತಟಪ್ರತಿಷ್ಠಾನುವಾದ ನಲ್ಲಳಸುವನಾಂ ಸಾಹಸದೊಳ್ ತಗುಳ್ಚಿನಿಲೆ ಪಿಡಿವ ನಯಮಂ ಬಗೆದು—

ಕಂ॥ ಕಾಣದ ಪದದೊಳ್ ಹೃದಯದ।
ಕೋಣೆಯೊಳರ್ದೆನ್ನ ಮಾನಧನಮಂ ಕೊಂಡಳ್॥
ಕಾಣಲೊಡವೊಪ್ಪಿಸದೆ ಪೋ।
ಮಾಣೆಂ ಕೆಯ್ವಿಡಿದು ಕಾಮಚಕ್ರಿಗೆ ತನ್ನಂ॥ (೮೫)

ವ॥ ಎಂಬಿವು ಮೊದಲಾಗೆ ನಿಜಮನಃಪ್ರಿಯ ಪ್ರಕಾಶ ಸಂದೇಶಪದಕಮಂ ರತ್ನ ಪದಕಮೆನಿಸಿ ನಿಜಹೃದಯದೊಳ್ ವಿರಚಿಸಿ ನಲ್ಲಳೆಡೆಗೆ ನುಡಿದಟ್ಟುವುಜ್ಜುಗದಿ ನಾಗಳಾಕೆಯೊಲವಿನೊಸಗೆಯುಂ ತಂದು ತನ್ನಮನಮಂ ಮುನ್ನಮೆ ಮೆಚ್ಚುವಡೆದ ಖೇಚರಚರಂಗೆ ನಿಜಹೃದಯದಾನ ಪೌನರುಕ್ತ್ಯಮಂ ಮಾಡಲಿಚ್ಛೈಸಿ—

ಕಂ॥ ಚಿತ್ತವನೆಡೆಗೊಂಡೋಪಳೊ।
ಳೊತ್ತೊತ್ತಿಂ ನೂಂಕೆಪಟ್ಟು ಪೊಱಮಡುವವೊಲಂ॥
ದೊತ್ತರಿಪ ಸುಯ್ಯನಳವಡಿ।
ಸುತ್ತಂತರ್ಭರಿತ ವಾಗ್ಭರಸ್ಫುರಿತೋಷ್ಠಂ॥ (೮೬)

ಕಂ॥ ತೆರೆಮುಸಗಿ ಬಾಷ್ಪಜಳಮೊ।
ತ್ತರಿಸೆ ಮೊದಲ್ ನಾಂದು ಬಿಣ್ಪುವೆತ್ತೆಮೆದೊಱೆಯುಂ॥
ಭರದಿಂ ತಾಂಗಿ ನಿಜಾದ್ರಾರ್ಂ।
ತರಂಗಭರಮಂ ನಿವೇದಿಪಂತೀಕ್ಷಿಸಿದಂ॥ (೮೭)

ವ॥ ಅಂತು ನಿಜಮನೋರಥ ವಿವಕ್ಷೆಯಿನೀಕ್ಷಿಸುವ ಗಾಂಭೀರ್ಯವಾರಿಧಿಯ ಜಿಹ್ವಾಲೋಳಕಲ್ಲೋಳಲತೆಯನಡ್ಡಯ್ಸುತಿರ್ಪಲಂಘ್ಯ ಲಜ್ಜಾ ಮರ್ಯಾದೆಗೆ ನೆರಂ ಬರ್ಪಂತೆ ಬಂದೊರ್ವ ಪಡಿಯಱಂ ಪೊಡೆವಟ್ಟು ದೇವ ಖೇಚರರಾಜದೂತಂ ಬೆರಸೋಲಗಕ್ಕೆ ಬಿಜಯಂಗೆಯ್ವುದೆಂದರಸಟ್ಟಿದ ನಿಯಾಮಮೆಂದು ಬಿನ್ನವಿಸೆ ಕೇಳ್ದಿಂದುವಿಂಗೆ ಮನದೊಳರ್ದುದಂ ನುಡಿಯಲೆಡೆವಡೆಯದೆ ತತ್ಪ್ರಸಂಗ ರಸಭಂಗದೊಳ್ ಕೊರಗುವ ಮನಃಕಮಳಮನವಿಳಂಬಿತೋಪಲಪ್ಸ್ಯಮಾನ ಪ್ರಾಣೇಶ್ವರೀ ಪಾಣಿಗ್ರಹಣ ಕಲ್ಯಾಣೋದ್ಯೋಗ ರಾಗರಸದಿನಲರ್ಚುತ್ತುಮಿಂದುವಿನ ಮೊಗಮಂ ನೋಡಿ—

ಕಂ॥ ಹೃದಯಂಬುಗಿಸಿ ಮನೋಜಾ।
ಗ್ನಿದಗ್ಧಯುಷ್ಪವಳನೆನಗಮನುತಾಪಮನಿಂ॥
ತೊದವಿಸಿದ ನಿನ್ನ ಸಂಸ।
ರ್ಗದೊಳನ್ನಿರಲಾಗದೆಂದು ನಸುನಗೆ ನಗುತುಂ॥ (೮೮

ಸ್ಮರನಱಿದು ಮಡನಮುದಾ್ರ।
ಸ್ವರೂಪರಂ ಕಾಸಿ ಬೆಚ್ಚನೆನಿಸಿದಪುದು ನೀಂ॥
ನೆರಪಿದೊಡೆನ್ನೊಳ್ ಪೂರ್ವಾ।
ನುರಾಗ ಪರಿತಪ್ತೆಯಾದ ತತ್ಕನ್ಯಕಿಯುಂ॥ (೮೯)

ಎಂಬಿನಿತನೆ ಬಲ್ಲಿಂ ತ।
ದ್ಬಿಂಭಾಧರೆಗಟ್ಟುವುಚಿತ ಸಂದೇಶಮನೇ॥
ನೆಂಬುದದನೆ ನೀನೆಂತಾ।
ನೆಂಬುದುಮಂ ಹೃದಯವರ್ತಿ ನೀನೆ ದಲಱಿವೈ॥

ವ॥ ಎನುತ್ತುಮಲ್ಲಿಂ ತಳರ್ದು ನಿಜವಿಳಾಸ ಕೇಳೀವನಮನುಪಕಂಠ ಪಕ್ಷದ್ವಾರದಿಂ ಪೊಱಮಟ್ಟು ಮುಂದೆ ಸಾರ್ಚಿದಂದಣಮನೇಱಲೊಲ್ಲದಿಂದುವಿನ ಕೆಯ್ಯಂ ಪಿಡಿದು ವಲ್ಲಭಕಳಭಂ ಬೆರಸು ಯೂಥಪತಿ ಬರ್ಪಂತೆ ಪುರಃಪ್ರಚಳಿತಾಕೀರ್ಣಜನ ವಿಭಕ್ತರಿಕ್ತೀಭೂತರಾಜವೀಥಿಯಂ ದರಹಾಸಫೇನಿಳಾವಳೋಕನ ಸುಧಾಪ್ರವಾಹದಿಂ ಪೂರಿಸುತ್ತುಮೆಯ್ದಿ ಬಂದು—

ಚಂ॥ ಧರೆಯು ಸಮುಸ್ತ ಸಜ್ಜನ ಪದಂಗಳ ಸಂಗತಿವೆತ್ತ ಸಾರ ಸೌಂ।
ದರತೆಯುದೆಲ್ಲಮೊಂದೆಡೆಗೆ ಬಂದವೊಲಾದಮೆ ಕಣ್ಗೆ ವಂದ ಬಂ॥
ಧುರ ನರಪಾಲನೋಲಗದ ಶಾಲೆಯನಾ ಹರಿಪೊಕ್ಕು ಭೂಮಿಭೃ।
ಚ್ಚರಣ ಸರೋರುಹಕ್ಕೆಱಗಿದಂ ಮುದದಿಂ ವಸುಧೈಕಬಾಂಧವಂ॥ (೯೧)

ಗದ್ಯಂ

ಇದು ನಿಖಿಳಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ
ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಮಪ್ಪ
ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್
ಸ್ವಯಂಪ್ರಭಮದನೋನ್ಮತ್ತ ವರ್ಣನಂ
ಚತುರ್ಥಾಶ್ವಾಸಂ.

ಪಂಚಮಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀವಿಜಯಾಂಕನ ಪಕ್ಕದ ।
ಸೌವರ್ಣಾಸನಮನೊಸೆದಳಂಕರಿಸಿದನಾ ॥
ಶ್ರೀವತ್ಸಾಂಕಂ ಗಾಂಭೀ ।
ರ್ಯಾವಸಥಂ ಪಂಚಪರಮಗುರು ಪದವಿನತಂ ॥ (೧)

ವ॥ ಆಗಳಧಿರಾಜ ಪ್ರಸಾಧನಾದರಾಹೂತಂ ವಿಯಚ್ಚರದೂತಂ ಪೊಡೆವಡುತ್ತುಂ ತದೀಯದೃಷ್ಟಿ ನಿರ್ದಿಷ್ಟ ಸಮುಚಿತ ವಿಷ್ಟರೋಪವಿಷ್ಟನಾಗಿ—

ಕಂ॥ ಅನಿಮಿಷನಕ್ಕುಮಿವಂ ಖಚ ।
ರನಲ್ಲನೆಂಬಿನೆಗಮಾಗಳೆಮೆಯಿಕ್ಕದಲಂ ॥
ಪಿನೊಳವನಿಪನೊಡ್ಡೋಲಗ ।
ಮನೆ ನೀಡುಂ ನೋಡುತಿರ್ದನಾ ಖಚರಚರಂ ॥ (೨)

ವ॥ ಅಂತು ತನಗೆ ದೃಷ್ಟಾಪೂರ್ವಮೆನಿಸಿ ಸೊಗಯಿಪ ಸುರಮ್ಯ ರಾಜನಾಸ್ಥಾನ ಮನಶೇಷ ಲಕ್ಷ್ಮೀನಿಧಾನಮುಂ ನೋಡಿ, ಸಮಯೋಚಿತ ವಚೋವಿಳಾಸ ಪ್ರಕಾಶ ಮುಖರನಾಗಿ—

ಕಂ॥ ನರಪಾಳಮೌಳಿಮಾಳಾ ।
ಪರಸ್ಪರಪ್ರೋತರತ್ನ ರುಗ್ಜಾಳದಿನಂ ॥
ಬರಮಿದಪೂರ್ವಂ ದಿವ್ಯಾಂ ।
ಬರಮಾದುದು ಭವನಲಕ್ಷ್ಮಿ ಗೇವೊಗಟ್ಟಿನಿದಂ ॥ (೩)

ಬಳಸಿರ್ದೆಳೆವೆಂಡಿರ ಕ ।
ಣ್ಬೆಳಗಿಂಗಗಿದೋಡಿ ಪೊಕ್ಕಪುದು ಕಟ್ಟಿಲೆ ಭೂ ॥
ತಳಮನಿದೆ ತಳದ ಮೃಗಮದ ।
ಜಳಕ್ಕೆ ಬಂದೆಜಿಗುವಳಿಕದಂಬದ ನೆವದಿಂ ॥ (೪)

ಅಳಮಾಳೆ ಬಳಸಿದೀ ಪೂ
ವಲಿಯಲರ್ಗಳ್ಗುರುಳ ಚಿನ್ನಪೂವಿನ ಚೆಲ್ವಂ ॥
ನೆಲವೆಣ್ಗೆ ಪಡೆದಿದೇಂ ಕ ।
ಣ್ಮಲರನಲರ್ಚಿದುವೊ ಮಣಿಮಯಾಂಗಣತಳದೊಳ್ ॥ (೫)

ಕಂ॥ ಬಿಡುಮುತ್ತಿನ ಕಡೆಯಂ ಕೇ।
ಸಡಿವೆಳಗಿಂ ಮುಸುಕಿ ಚರಣನಖರುಚಿಯಿಂದೇಂ॥
ಪಡೆದಪರೊ ಬೇಱಿ ಮುತ್ತಿನ।
ಕಡೆಯಂ ರಾಜಾಂಗಣಕ್ಕೆ ಬರ್ಪೆಳವೆಂಡಿರ್॥ (೬)

ಯುವತಿಯರ ಮುಡಿಗಳೊಳ್ ಧೂ।
ಪವರ್ತಿಕಾ ಧೂಮಲೇಖೆವಿಡಿದಿವು ಮೊರೆಯು॥
ತ್ತಿವೆ ಕೇಳಿಸಿದಪುವಂಗೋ।
ದ್ಭವಶಿಕ್ಷಿತ ವಂಶವಾದ್ಯಮಂ ಸಭೆಗಳಿಗಳ್॥ (೭)

ನೆಗೆವ ಪೊಗೆ ಗುಡಿಗಳಿಂದೇಂ।
ಸೊಗಯಿಸುತಿರ್ದಪುವೊ ಸುತ್ತಲುಂ ಕಟ್ಟಲಿಯಂ॥
ಮಿಗೆ ಕುಡಿದಬ್ಬಿಸಲಾಱದೆ।
ನುಗುಬಿದ್ದಿವೆ ಕಾಱಿದಪುವೆನಿಸಿ ಕೆಯ್ದೀವಿಗೆಗಳ್॥ (೮)

ಪ್ರತಿಬಿಂಬಚ್ಛಲದಿಂ ನೃಪ।
ಸುತರಾ ಭುಜಪಂಜರಂಗಳಂ ಸಾರ್ದುದಿಳಾ॥
ಪತಿ ನಿಜರಾಜನ ದೀಪ।
ಪ್ರತತಿ ಚಳಚ್ಚಾಮರಾನಿಳಾಹತಿ ಭಯದಿಂ॥ (೯)

ವ॥ ಎಂದಿಂತು ವಿವಿಧ ಸಾಹಿತ್ಯ ಸೂಕ್ತಗಳಿಂ ಸಭೆಯ ಶೋಭೆಯುಮಂ, ಸಾಮ್ರಾಜ್ಯದುನ್ನತಿಯುಮನೆಡೆವಿಡದೆ ಬೆರಲ್ಮಿಡಿದು ಬಿಚ್ಚಳಿಸಲ್ ತಗುಳ್ದಿಂದುಮಂ ನಿಜಸ್ತವನ ಲಜ್ಜಾಭಿನಯ ವಿಜೃಂಭಿತ ಮುಖಾಂಭೋಜಂ ಪ್ರಜಾಪತಿ ಮಹಾರಾಜ ನನಿತಱೊಳೆ ನಿಲಿಸಿ ಪೂರ್ವ ಪ್ರಕೃತಮಂ ಪುರೋಹಿತ ಪ್ರಧಾನಪರ್ಯಾಳೋಚಿತ ನಿಶ್ಚಿತ ಮನಾತ್ಮಸುತವಿವಾಹ ಕಲ್ಯಾಣಕಾರ್ಯಮನಾ ಖಚರ ದೂತನೊಳ್ ಸವಿಸ್ತರಂ ನುಡಿ ದೊಡಂಬಟ್ಟು ಮೌಹೂರ್ತಿಕರಂ ಬರಿಸಿ ಪೂಜಾಪುರಸ್ಸರಂ ಬೆಸಗೊಂಡು ವೈವಾಹಿಕ ವಿಶುದ್ಧಲಗ್ನಮಂ ಕೆಯ್ಕೊಂಡು ಪರಮೋತ್ಸವದಿನಿಂದುವನಪೂರ್ವದಿವ್ಯಾಂಬರ ವಿಭೂಷ ಣಾದಿ ಪ್ರಸಾದದಾನಮಂ ಪ್ರಾರ್ಥಿಸಿ ಕೆಯ್ಕೊಳಿಸಿ ಬೀೞ್ಕೊಳಿಸುವುದುಂ ಆತನಾ ನೃಪನ ಬಹುಮಾನಕ್ಕೆ ಪರಿತುಷ್ಟನಾಗಿ—

ಕಂ॥ ಗಗನದೊಳೆ ಪಾಱುವತಿಲಘು।
ಗೆ ಗುರುತ್ವಮನೆನಗೆ ಮಾಡಿ ಪೆಂಪಂ ಮೆಱೆದಯ್॥
ಮಿಗೆ ಮನ್ನಿಸಿ ಪೋಗಲ್ಕಂ।
ಘ್ರಿಗಳೆೞ್ದಪುವಿಲ್ಲ ನಿನ್ನಪಕ್ಕದಿನದಱಿಂ॥ (೧೦)

ವ॥ ಎಂದು ನಿಜಪ್ರತಿಪತ್ತಿಯಂ ಪ್ರಕಟಿಸಿ ನುಡಿದು ಬೀೞ್ಕೊಂಡು ಬಲಗೆಲ ದೊಳಿರ್ದ ಬಲದೇವಂಗೆ ನಿಜಮುಖಾವಳೋಕನಿಷ್ಠನಂ ತ್ರಿಪೃಷ್ಠನನಿಂದು ಮಂದಸ್ಮಿತ ಮುಖೇಂದು ಮೆಲ್ಲನೆ ತೋಱಿ—

ಕಂ॥ ಅನುಬಂಧಿಸಿ ಗುಣದಿಂ ಮ ।
ನ್ಮನಮಂ ಸೆಱೆವಿಡಿದನೆನ್ನತಂದೀವಬಳಾ ॥
ಜನರತ್ನಮೆಯ್ದೆ ಕೆಯ್ಸಾ ।
ರ್ವಿನಮೆನ್ನಂ ನಂಬದಿರ್ಕುಮಿಾ ನಿನ್ನನುಜಂ ॥ (೧೧)

ವ॥ ಎನುತುಮೆೞ್ದು ತನ್ನ ನುಡಿದ ಸಮುಚಿತ ಸ್ನೇಹಧರ್ಮ ನರ್ಮೋಕ್ತಿಗೆ ನಗುವ ತತ್ಸಭಾಜನದ ಹರ್ಷಹಾಸಮೆ ನಿಜಪ್ರಯಾಣಮಂಗಳಪಟಹರಭಸಮಾಗೆ ಸಭೆಯಿಂ ತಳರ್ದು—

ಚಂ॥ ಪೊಳೆಯೆ ಕಟಾಕ್ಷಮಾ ಮಗುೞ್ದು ನೋೞ್ಪನೆ ಪಿಂದೆ ದುಕೂಲ ಚೇಲಮಾ ।
ಮಿಳಿರ್ದುದೆ ಕಂಕಣಂಗಳವೆ ಘಣ್ಘಣಿಲೆಂದಪುವಿನ್ನುಮಾ ಮುಗಿ ॥
ಲ್ಗಳ ಮಱೆಯೊಳ್ ತಟಿಲ್ಲತೆವೊಲಾ ಪೊಳೆದಪ್ಪನೆ ನೋಡಿಮೆಂದು ಗೋಣ್ ॥
ಬಳೆವಿನಮಿಾಕ್ಷಿಸುತ್ತುಮಿರೆ ತತ್ಸಭೆ ಪೋದನವಂ ಘನಾಧ್ವದೊಳ್ ॥ (೧೨)

ವ॥ ಅನಂತರಂ ಪ್ರಜಾಪತಿನೃಪತಿ ನಿಜಸಭೆಯಂ ವಿಸರ್ಜಿಸಿ ಸೆಜ್ಜೆವನೆಗೆ ಬಿಜಯಂಗೆಯ್ಯೆ—

ಕಂ॥ ಗುರುಜಘನಭಾರೆಯೆನಿಸಿದ ।
ತರುಣಿಯಿನಾಕ್ರಾಂತ ಹೃದಯನಾದುದನಱಿಪು ॥
ತ್ತಿರೆ ಮಂಥರಗತಿ ನಿಜಮಂ ।
ದಿರಕ್ಕೆ ವಂದಂ ಮುಕುಂದನಸವಸದಿಂದಂ ॥ (೧೩)

ವ॥ ತದನಂತರಂ—

ಕಂ॥ ಇನಿಯವಳೊಲವಿನ ವೃತ್ತಕ ।
ಮಿನಿಸಂ ನೃಪನಾತ್ತಿರ್ಯಯಂ ನಿವರ್ತಿಸಿ ಮಗುೞ್ದಂ ॥
ಮನಸಿಜತಾಪಕ್ಕುದ್ದೀ ।
ಪನಮಾದುದಕಾಲವರ್ಷಪಾತದ ತೆಱದಿಂ ॥ (೧೪)

ವ॥ ಆಗಳಳವಿಗೞಿದ ವಲ್ಲಭಾಸಮಾಗಮೌತ್ಸುಕ್ಯ ತೃಷ್ಣಾವೇಗಮಂತರಂಗದೊಳ್ ತಗುಳ್ದು ಮನೋಜಸಂಜ್ವರಮನುದ್ದಮುರಿಪೆ—

ಕಂ॥ ನೆಗೆದೊಗೆವಗುರುವ ಧೂಪದ ।
ಪೊಗೆಯಂ ಮಣಿದೀಪದೀಪ್ತಿಯಂ ಬೀಱಿ ವಿಳಾ ॥
ಸಗೃಹಂ ತಾಪಮನಿತ್ತುದು ।
ಪುಗೆ ನೃಪತಿಗನಂಗ ವಹ್ನಿಕುಂಡದ ತೆಱದಿಂ ॥ (೧೫)

ಕಂ॥ ಒಳಗಡೆವೊತ್ತುವ ಮದನಾ।
ನಳನಂ ಚಮರೀಜ ಧಾರಿಣೀ ಚಾಳಿತ ಕೋ॥
ಮಳ ತಾಳವೃಂತ ಮಂದಾ।
ನಿಳಮುರಿಪಿದುದೊದವಿ ನೃಪನ ನಿಡುಸುಯ್ಯೆಲರಿಂ॥ (೧೬)

ಗವಸಣಿಗೆಗಳೆದು ಕುಡೆ ನೋ।
ಡಿ ವೀಣೆಗಾ ನೃಪತಿ ನೀಡಲಣ್ಮನೆ ಕರಪ॥
ಲ್ಲವಮಂ ಪೆರೆಗಳೆದ ಮನೋ।
ಜ ವಿಷೋರಗಮೆಂದು ಬಗೆದನಕ್ಕುಂ ಮನದೊಳ್॥ (೧೭)

ಅವತಂಸ ಕುಮುದದೊಳ್ ಜಿನು।
ಗುವಳಿಗೆ ಕಿವಿಯಿತ್ತನುಸಿರಲಿನಿಯಳ ಮಾತಂ॥
ಕಿವಿವುರ್ಚಿದವುದೆಗೆತ್ತ।
ಣ್ಮುವ ನಲ್ಲಂ ಕೇಳಲೆಂತುಮಳಿನಿಸ್ವನಮಂ॥ (೧೮)

ಆ ಕೃಷ್ಣನ ಕಣ್ಗಳೊಳಿರು।
ಳೇಕಾಂತದೆ ಖಚರಕನ್ಯೆ ತೊಳಲುತ್ತಿರೆ ದೋ॥
ಷೈಕಾಭಿನಿವೇಶಿನಿ ನಿ।
ದ್ರಾಕಾಮಿನಿ ಪುಗಳೆ ಮಱೆದುಮಿದು ತಕ್ಕುದೆ ದಲ್॥ (೧೯)

ಏಗೆಯ್ದೊಡಮಾ ನೃಪತಿಗೆ।
ಪೋಗದು ಪೊೞ್ತನಿಸಿ ಪೋದುವಂತೆ ದಿನಂಗಳ್॥
ಸಾಗರದೊಳ್ ನಿಂದಿರ್ಪವೊ।
ಲಾಗಿರ್ಪತ್ತೆಱಿದಂಗೆ ಪರಿವ ಬಹಿತ್ರಂ॥ (೨೦)

ವ॥ ಮತ್ತಂ—

ಉ॥ ಗಾನೋದ್ಯೋಗದೆ ಪೋಗಿ ಮೌನದೆ ವಲಂ ಜಾನಿಪ್ಪನೆಟ್ಟಂದು ತಾ।
ರಾನಾಥೇಕ್ಷಣ ಕಾಂಕ್ಷಣಂ ನಯನಮಂ ಪ್ರಚ್ಛಾದಿಪಂ ಕೆಯ್ಗಳಿಂ॥
ತಾನೀಡಾಡಲೆ ಸಾರ್ದು ಮೆಯ್ಯನಿರದೆೞ್ದಂಚದಿಂ ಪೋಪನಿಂ।
ತೇನಂ ಪೇೞ್ವುದೊ ಮಾಣದಾ ಕುವರನಂ ಕಾಡಿತ್ತು ಕಾಮಗ್ರಹಂ॥ (೨೧)

ವ॥ ಅದಲ್ಲದೆಯುಂ—

ಉ॥ ಪೂಗೊಳದಿಂ ಪುಳಿಲ್ಗೆ ಪುಳಿಲಿಂ ಜಳಯಂತ್ರ ಗೃಹಕ್ಕೆ ಯಂತ್ರಧಾ॥
ರಾಗೃಹದಿಂ ಬನಕ್ಕೆ ಬನದಿಂ ಲತಿಕಾ ಭವನಕ್ಕೆ ಬರ್ಪನು॥
ದ್ವೇಗದಿನೆಲ್ಲಿಯುಂ ನಲಿಸಲಾಱದೆ ಮೆಯ್ಯನಹರ್ನಿಶಂ ನೃಪಂ।
ಪೂಗಣೆದೊಟ್ಟುಕಂತು ಬೞಿಸಂಧಿಸೆ ಸುತ್ತಲುಮೋಡುತಿರ್ಪವೋಲ್॥ (೨೨)

ವ॥ ಅಂತು ಕಂತು ಸಂತಾಪ ಚಿಂತಾವ್ಯತಿಕರದೊಳ್ ಪರಿಣಯನ ಲಗ್ನಾಂತರಾಳ ಕತಿಪಯ ದಿನಂಗಳ್ ದಿನಸಹಸ್ರಾಯಮಾನಂಗಳಾಗಿ ಪೋಗೆ—

ಕಂ॥ ಘನತೃಷ್ಣಾತುರನುತ್ಕಂ।
ಠನಭಿನವೋದ್ಗತ ಪಯೋಧರಾಗಮನಮನಾ॥
ಜನಪತಿ ಪಾರ್ಮ ವಿಯತ್ಪಥ।
ಮನೆ ನೋಡುತಿರ್ದನಾಸೆಯಿಂ ಚಾದಗೆವೋಲ್॥ (೨೩)

ವ॥ ಅಂತು ಗಗನಮಾರ್ಗದೊಳ್ ವಿಯಚ್ಚರ ಕುಮಾರಿಗವತರಿಸಲವಳೋಕನಾಳೋಕವೀಚೀಚ್ಛಲದಿಂ ಮೃದುಮೃಣಾಳನಾಳಲೀಲಾನಿಶ್ಶ್ರೇಣಿಕೆಯನವಟೈಸುತಿರ್ಪ ವಾಸುದೇವನ ವಿಳೋಚನ ಚಂಚರೀಕಕ್ಕಪೂರ್ವ ಸುರಭಿಸಮಯಾಗಮನಮೆನಿಸಿ—

ಮ॥ ಗಗನಾಗ್ರೋತ್ಕರ ಪಾಳಿಕೇತನ ವಿಮಾನಚ್ಛತ್ರ ಪಿಂಛಾತಪ।
ತ್ರಗಣಚ್ಛಾಯೆ ವಿಲೀಯಮಾನ ದಿವಸಶ್ರೀಯಂ ವಿಭೂಷಾಮರೀ॥
ಚಿಗಳಿಂ ಪುಟ್ಟಿಸಿ ಧಾತ್ರಿಯಂ ಬೆಳಗುತುಂ ಬಂದಂ ಖಗೇಂದ್ರಂ ಸ್ವಗೋ।
ತ್ರ ಗುರುಜ್ಞಾತಿ ಪರೀತನಾತ್ಮ ಸುತೆಯಂ ಮುಂದಿಟ್ಟು ಮೇಘಾಧ್ವದಿಂ॥ (೨೪)

ವ॥ ಅಂತುಮಲ್ಲದೆಯುಂ—

ಚಂ॥ ಎಳವಿಸಿಲಂ ವಿಯಚ್ಚರ ಕುಮಾರ ಸಹಸ್ರಕಿರೀಟರತ್ನಸಂ।
ಕುಳ ರುಚಿ ಬೇಱಿ ಬಿತ್ತರಿಪಿನಂ ನವಚಂದ್ರಿಕೆಯಂ ವಿಯಚ್ಚರೀ॥
ಚಳನಯನಾಂಶು ಮುಂದಿಡುವಿನಂ ನಭದಿಂದೊಗೆತಂದನಂದು ಕ।
ಣ್ಗೊಳೆ ಖಗರಾಜನುರ್ವಿಗೆ ವಿಡಂಬಿಸುತುಂ ಖಗರಾಜಲೀಲೆಯಂ॥ (೨೫)

ವ॥ ಅಂತು ಬರ್ಪಲ್ಲಿ—

ಕಂ॥ ಗಗನದೊಳಚ್ಚರಿಯೆನೆ ನೆಗೆ।
ದೊಗೆದುದು ಕೆಂಧೂಳಿ ಖಚರಿಯರ ಸೋರ್ಮುಡಿಯಿಂ॥
ದುಗುವಿರವಂತಿಯ ಸಂಪಗೆ।
ಯ ಗೊಜ್ಜಗೆಯ ಸುರಯಿಯರಲ ರಜದುರ್ವಿನದಿಂ॥ (೨೬)

ಚಂ॥ ಪೊಳೆಯೆ ಕಟಾಕ್ಷರಶ್ಮಿ ಕುಡುಮಿಂಚಿನವೋಲ್ ಸುರಚಾಪಲಕ್ಷ್ಮಿವೊಲ್।
ಬಳಸೆ ವಿಭೂಷಣಾಂಶುಲತೆ ತಂದಲ ಬಿಂದುವೊಲುಣ್ಮೆ ತೆಳ್ವಮ॥
ರ್ಗಳಿಯಿಸೆ ಮೇಘಮಾಳೆವೊಲದೇನೆಸೆದತ್ತೊ ನಭಃಪ್ರಯಾಣದೊಳ್।
ಚಳದಳಕಾಳ ಮೇಚಕಿತ ದಿಗ್ವಳಯಂ ಖಚರಾಂಗನಾಜನಂ॥ (೨೭)

ಚಂ॥ ಪೊಳೆವಲರ್ಗಂಗಳುಂ ಕಚಭರಂಗಳುಮುಚ್ಚಕುಚಂಗಳುಂ ಕುರು ।
ಳ್ಗಳುಮೊಡನೋಳಿಗೊಂಡಿರೆ ಚಕೋರ ಮಯೂರ ರಥಾಂಗ ಭೃಂಗಮಂ ॥
ಡಳಿ ನಲಿವಾಱಿದಪ್ಪುವು ತರಂತರದಿಂದೆನಿಸಿತ್ತು ಕಣ್ಗೆ ಗೊಂ ।
ದಳಿಸಿ ಬರುತ್ತುಮಿರ್ಪ ಖಚರೀಜನಮಾಳೆ ನಭೋಂತರಾಳದೊಳ್ ॥ (೨೮)

ವ॥ ಮತ್ತಮಲ್ಲಿ—

ಕಂ॥ ತೆರೆಮುಗಿಲ ಮಱಗೆ ನಲ್ಲಂ ।
ಬರೆ ತೆಗೆದೆಳಸುವುದು ಮೊಗೆವ ಸುಯ್ಯೆಲರ್ಗಳಿನಾ ॥
ನೆರೆದ ಮುಗಿಲ್ ಕರಗೆ ವಿಯು ।
ಚ್ಚರಿಗೆಂ ಕಲಿಸಿದುದೊ ಲಜ್ಜೆಯೊಳ್ ಕರಗುವುದಂ ॥ (೨೯)

ಖಗರಾಜನ ಬರವಂ ಕಂ ।
ಡೊಗೆತಂದುವು ಗಗನಲಕ್ಷ್ಮಿಗಾನಂದ ಭರಾ ॥
ಶ್ರುಗಳೆನಿಸಲಾಯ್ತು ಖೇಚರಿ ।
ಯರುರುಸ್ತನ ತಾಡಿತಾಭ್ರ ಮುಕ್ತಾಸಾರಂ ॥ (೩೦)

ವ॥ ಅಂತು ವಿವಿಧ ವಿದ್ಯಾಧರಾವಳೀ ವಿಳಾಸಾಡಂಬರದಿನಂಬರಂ ಭೂಭವನ ವಿರಚಿತ ವಿಚಿತ್ರ ಚಿತ್ರಾಂಬರಮೆನಿಸಿ ಕಣ್ಗೊಳಸೆ ಬಂದು—

ಕಂ॥ ಭೂಕಾಂತೆಗೆಱಗಿದಂ ಖಗ ।
ಲೋಕಾಗ್ರಣಿ ನಿಜವಿಯೋಗ ಸಮುದಿತ ಘನಕಾ ॥
ರ್ಷ್ಣ್ಯಕೃತಿಯನುಱದು ಗಗನ ।
ಶ್ರೀಕಾಂತೆಯನಿಂತುಟಲ್ತೆ ಪಾಱುಗಳಂದಂ ॥ (೩೧)

ಖಗಪತಿ ಸಾರ್ತರೆ ಪೌದನ ।
ನಗರೀ ಪಾರ್ಶ್ವಕ್ಕೆ ತನ್ನನುಱದಾಗಳದೇಂ ।
ಸೊಗಯಿಸದೆ ಬಿನ್ನನಿರ್ದುದು ।
ಗಗನಶ್ರೀ ಪೆಱಗೆ ಸರ್ವಶೂನ್ಯಾಕೃತಿಯಿಂ ॥ (೩೨)

ವ॥ ಅಂತೆನಿಸಿದ ಗಗನಮಾರ್ಗದಿಂ ಜ್ವಳನಜಟಿ ಮಹಾರಾಜಂ ತನೂಜೆವೆರಸ ಶೇಷಾಂತಃಪುರ ಪ್ರಧಾನ ಪರಿಜನ ಸುಹೃಜ್ಜನ ಪರೀತಂ ಪರಿಣಯನ ಲಗ್ನಮಂ ಮುಂದಿಟ್ಟು ಪೌದನಪುರಮನೆಯ್ದೆವರೆ ಬರ್ಪನಿಬ್ಬಣದ ಬರವಂ ಪುರಃಪ್ರೇಷಿತ ತದೀಯ ದೂತವಿಜ್ಞಾಪನದಿಂ ಕೇಳ್ದು ತದಾಕರ್ಣನೋದ್ಘಾಟಿತ ಕರ್ಣದ್ವಾರದೊಳ್ ಮುನ್ನಂ ಮಹೋತ್ಸವಮೊದವೆ ಘೂರ್ಣಮಾನಲೋಚನಾಂಚಳದಿಂ ಗುಡಿಗಟ್ಟಿ ಪುಳಕೋದ್ಗಮ ದಿನಿದಿರ್ಗೊಳ್ವ ಘನಪ್ರಮೋದ ವೃತ್ತಿಯುಂ ದ್ವಿಗುಣಿಸಿ ಪರಮೋತ್ಸಾಹಾವಗಾಹ ಸಭಾಂತಸ್ಸ್ವಾಂತಂ ಪ್ರಜಾಪತಿ ಮಹೀಕಾಂತನಾತ್ಮೀಯ ಪುರಶ್ರೀಯಂ ವಿಶಿಷ್ಟ ಶೋಭೆಯಿನಳಂಕರಿಸವೇೞ—

ಕಂ॥ ವಸುಧೆಗದೇಂ ಗಂಧಾಕ್ಷತ।
ಕುಸುಮಾರ್ಚನಮಾಯ್ತೊ ತಳಿಯೆ ಕುಂಕುಮಜಳಮಂ॥
ಪೊಸಮುತ್ತಿನ ಕಡೆಯಂ ವಿರ।
ಚಿಸಿ ಪೂವಲಿಗೆದಱಿ ಪುರಜನಂ ಮನೆಮನೆಯೊಳ್॥ (೩೩)

ಬಳೆದಿರ್ದ ಬಳ್ಳಿಮಾಡಂ।
ಗಳೆ ದಾಂಗುಡಿವಿಟ್ಟುವೆನಿಸಿ ಕಟ್ಟಿದ ಗುಡಿಗಳ್॥
ಮಿಳಿರ್ದೆಸೆದುವು ನಭದೊಳ್ ಗೊಂ।
ದಳಿಸಿ ತೆಱಂಬೊಳೆವ ನಿಱಿಮುಗಿಲ್ಗಳ ಪುದುವಿಂ॥ (೩೪)

ತೆರೆಮುಸಗಿದುದೊಂದು ವಿಯ।
ಚ್ಚರ ರಾಜೋದಯದೊಳೊದವಿ ತತ್ಪುರರತ್ನಾ॥
ಕರಮೆತ್ತೆತ್ತಂ ಪವನೋ।
ತ್ತರಳಿತಮಣಿತೋರಣ ಪ್ರತಾನಚ್ಛಲದಿಂ॥ (೩೫)

ಧರೆ ತತ್ಖೇಚರರಾಜನ।
ಬರವಿಂಗಿದಿರೆದ್ದಳೆನಿಸಿದುದು ಪುದಿದು ನಭಂ॥
ಮೆರೆದು ಪುರಪುರಂಧ್ರೀಬ್ರಜ।
ಕರಪಂಕಜ ಪುಟವಿಕೀರ್ಣಪಟವಾಸರಜಂ॥ (೩೬)

ವ॥ ಅನಂತರಮಾ ನೃಪಂ ಪ್ರಧಾನಸೇನಾಪತಿಪುರೋಹಿತಕುಮಾರವರ್ಗಂ ಬೆರಸು ಕೆಯ್ಗೆಯ್ದು ರಾಗದಿನಿದಿರ್ಗೊಳಲು ತಾತ್ಕಾಲಿಕ ಕುಲೋಚಿತಾಚಾರ ಪ್ರಶಸ್ತವಸ್ತೂಪಾಯನ ಸ್ತಬಕಿತ ಹಸ್ತಾಂಬುಜ ನಿಜಾಂತಃಪುರ ಸುವಾಸಿನೀ ಸಹಸ್ರಪುರಸ್ಸರಂ ಪೊಱಮಟ್ಟು ನಡೆಯೆ—

ಕಂ॥ ಇವೆ ಪುಟ್ಟಿಪುವಸ್ಮತ್ಪ್ರತಿ।
ರವಮಂ ಪ್ರತಿಪಕ್ಷಮೆಮುಗಿವೆಂದೋವದೆ ಪೊ॥
ಯ್ವವೊಲೆಯ್ದೆ ದಿಙ್ಮುಖಂಗಳ।
ನವುಂಕಿ ತಳ್ಪೊಯ್ದುವಾನಕ ಧ್ವಾನಂಗಳ್॥ (೩೭)

ಪೊಗಟಿಲ್ ತದ್ವೈಭವಮಂ।
ಗಗನಶ್ರೀದೇವಿ ತಳೆದ ವೈಕುರ್ವಣ ಜಿ॥
ಹ್ವೆಗಳೆನೆ ಮಿಳ್ಳಿಸಿದುವು ಪಡಿ।
ಯಿಗೆಗಳ್ ಮೃದುಪವನ ರಟರಟತ್ಕೃತಿ ಪಟುಗಳ್॥ (೩೮)

ಚಂ॥ ಪೊಡರ್ವಳಕಾಳ ಹೂಡಿದ ಹೆಯಾಳಿ ತೆಱಂಬೊಳವೋಲೆ ಗಾಲಿ ಪೂ।
ಮುಡಿ ಚಳಕೇತುವಾಗೆ ಮದವೇಱಿದ ಸಾರಥಿಯಾಗೆ ವಿಭ್ರಮಂ॥
ಬಡೆದ ನಿಜಾಸ್ಯಪಙ್ಕ್ತಿ ಗಳಿನಿಟ್ಟೆಡೆಯಾಗಿರೆ ಪಣ್ಯವೀಧಿಯೊಳ್।
ನಡೆದುದು ಪೆಂಡವಾಸಮೆತನುಧ್ವಜಿನೀ ರಥಯೂಥಮೆಂಬಿನಂ॥ (೩೯)

ತೊಳಗುವ ದರ್ಪಣಂ ನನೆಯಬಾಸಿಗಮಕ್ಷತರಾಜಿ ದೂರ್ವೆಮಂ।
ಗಳಕಳಶಂಗಳೊಪ್ಪಿರೆ ಕರಂಗಳೊಳಾತ್ಮ ಕಪೋಳವೀಕ್ಷಣಂ॥
ಗಳ ಸುಲಿಪಲ್ಲ ಪುರ್ವಿನ ಕುಚಂಗಳ ಭಂಗಿಯನುರ್ವಿಗೆಲ್ಲಮಂ।
ತಳೆದೊಳಗಿಕ್ಕಿ ತೋಱುವವೊಲಂದೆಸೆದತ್ತು ವಿಳಾಸಿನೀಜನಂ॥ (೪೦)

ವ॥ ಅಂತೆಸೆವ ಪೆಂಡವಾಸದ ವಿಳಾಸದಿನಸಂಗ ರಾಜವಿಜಯ ಪ್ರಯಾಣಲೀಲೆಯನೆಳುಱಿಸುತ್ತುಮಿದಿರ್ವರ್ಪರ್ನ್ನೆಗಂ ಪುರಪರಿಸರ ಸರಿತ್ತೀರವನದ ತರುತಳದೊಳವತರಿಸಿ ನಿಜವಿಭವಪ್ರಕಾಶ ಭೂಷಣವಸನಕುಸುಮಾದಿ ಪ್ರಸಾಧನ ಕುತೂಹಳಕ್ಷುಭಿತಮಾಗಿರ್ದ ಖಚರಚಕ್ರದ ನಡುವೆ—

ಮ॥ ತರುಷಂಡ ಪ್ರತಿಬಿಂಬ ಸಂಕ್ರಮಣದಿಂ ಮುಕ್ತಾತಪತ್ರಂಗಳಂ।
ಬುರುಹೋನ್ನಾಳದಳಂಗಳಂತಿರೆ ಮೃಣಾಳೀಮಾಳೆವೋಲ್ ಮಿಳ್ಳಿಸು॥
ತ್ತಿರೆ ಚಂಚಚ್ಚಮರೀರುಹಂಗಳಮಳ ಕ್ಷಾವೋಜ್ಜ್ವಳಾಂಗಂ ವಿಯ।
ಚ್ಚರರಾಜಂ ಖಗರಾಜಚಕ್ರಯುತನಿರ್ದಂ ರಾಜಹಂಸೋಪಮಂ॥ (೪೧)

ವ॥ ಮತ್ತಂ—

ಕಂ॥ ನಯನೋತ್ಸವಮಂ ನೆವಕಳಿ।
ಕೆಯಿನುದ್ಯತ್ಪಳದಿನೀವಸಂತಾನದ ಲೀ॥
ಲೆಯನಾಂತು ಖಚರರಾಜಂ।
ಸ್ವಯಂಪ್ರಭೆಯುಮರ್ಕಕೀರ್ತಿಯುಂ ಬೆರಸಿರ್ದಂ॥ (೪೨)

ಬೆಳಗುವ ತೇಜೋಗುಣಮನೆ।
ಬೆಳಗುವ ಮೆಯ್ಸಿರಿಯಿನರ್ಕಕೀರ್ತಿಯ ರೂಪಂ॥
ತಳೆದವೊಲಿರ್ದಂ ವ್ಯಜನಾ।
ನಿಳನರ್ತಿತ ಹಾರನರ್ಕ ಕೀರ್ತಿಕುಮಾರಂ॥ (೪೩)

ಚಂ॥ ಮುಡಿಯಿಸುವಣ್ಪುನಿಕ್ಕುವಡಿಯುಡುವ ಕನ್ನಡಿದೋರ್ಪ ತಿರ್ದಿಬೊ।
ಟ್ಟಿಡುವಬಳಾಕದಂಬದಿನದೇನೆಸೆದಿರ್ದಳೊ ರತ್ನ ಪೀಠದೊಳ್॥
ನಡುವೆ ಖಗೇಂದ್ರಕನ್ಯೆ ದರಹಾಸಸುಧಾರುಚಿ ಪರ್ವೆ ಮಿಂಚುಗಳ್।
ಗಡಣಿಸಿಸುತ್ತೆ ಪೂರ್ವಗಿರಿಕೂಟದೊಳಿರ್ದ ಸುಧಾಂಶುರೇಖೆವೋಲ್॥ (೪೪)

ವ॥ ಮತ್ತಂ—

ಕಂ॥ ಎಳಸಿ ನೆವಪತ್ರಮಂಜರಿ ।
ಗಳ ಗುಚ್ಛದ ಮುಗುಳ ಚೆಲ್ವನಾತ್ಮಾಂಬಿಕೆ ಸಾ ॥
ರ್ದಳವಡಿಸುತ್ತಿರೆ ನನೆಯಿಸಿ ।
ದಳಬಳೆ ಮಧುಲಕ್ಷ್ಮಿ ಮೇಳಸಿರ್ದೆಳಲತೆಯಂ ॥ (೪೫)

ವ॥ ಅಂತು ನಿಜಾಂತಃಪುರಪುರಂಧ್ರಿಯರ್ ತಮತಮಗೆ ತತ್ಸತಿಂವರೆಯ ಮಂಗಳ ಪ್ರಸಾಧನ ವಿನೋದದೆ ಪುರಪ್ರವೇಶ ಪ್ರಶಸ್ತ ಲಗ್ನಾಂತರಾಳ ವೇಳಾವಿನೋದಮಾಗೆ ಲೀಲೆಯಿನಿರ್ದ ವಿದ್ಯಾಧರಾಧಿರಾಜನ ನಿಜಾಗಮೋತ್ಸವಕ್ಕೆ ನರ್ತಿಸಿದಪುವೆನಿಸಿ ಮಂಗಳಪಟಹಪಟುರವದಿಂ ತತ್ಸಭೆಯ ರತ್ನಪೀಠಂಗಳದಿರ್ದಿಸೆಮಿದಿರ್ವಂದು ಸಂಭ್ರಮಾಭ್ಯುತ್ಥಾನ ಸಂಸಮಾನ ಚೀನಾಂಚಳಾಚಲನ ಚಳಿತವಳಯೋನ್ಮುಖರ ಮುಖ ಪ್ರಾರ್ಥಿತಪರಿರಂಭನಂ ಬೀಯಗನೆನಟ್ಟಿಱಿಂ ತಚ್ಚಿಹ್ನ್ಯಸಿ ತತ್ಕರಪ್ರಸಭಾಕೃಷ್ಟನಿಕಟ ವಿಷ್ಟರೋಪವಿಷ್ಟಂ, ತತ್ಸಮಯ ಸಮುಚಿತ ಶೋಭನೋಪಚಾರಾಜ್ಞಾಪಿತ ಕುಲ ವೃದ್ಧ ಪುರಂಧ್ರೀಜನಸಮಾಜಂ ಪ್ರಜಾಪತಿ ಮಹಾರಾಜಂ ನಿಜಪದನಿಧಾನ ದೀಪ ವರ್ತಿಯಾದರ್ಕಕೀರ್ತಿಯಂ ತಚ್ಚಿಹ್ನ್ಯಸಿ ಪರಸುವುದುಮನತಿನಿಕಟದೊಳ್ ಕೆಳದಿಯರ ನಡುವೆ ಮನಸಿಜವಿಳಾಸ ಕೇಳೀಸಾರಿಕೆಯೊಲಿರ್ದ ನಿಜವಾರಿಕೆಯಂ ಜ್ವಳನಜಟಿಮಹಾ ರಾಜಂ ಪ್ರಣಯಲಾಲನೋಚಿತ ವಿಕೃತಾಭಿಧಾನ ಮುಖರ ಮುಖಾಂಭೋಜನಟ್ಟಿಱಿಂ ಕರೆದು—

ಕಂ॥ ತೆಗೆದುರದೊಳಮರ್ಚಿ ಮುಖೇಂ ।
ದುಗಾಕೆ ಮಱಿಮಾಡಿ ಪಿಡಿದ ಲೀಲಾಬ್ಜಮನೊ ॥
ಯ್ಯಗೆ ಕೆಲಕೆ ನೂಂಕಿದಂ ಪೋ ।
ಗುಗೆ ಪೊಡವಡಲಕ್ಕ ನಿಮ್ಮ ಮಾವಂಗೆನುತುಂ ॥ (೪೬)

ಇದಿರ್ಗೆಱಗುವುದಂ ಮುನ್ನಱಿ ।
ಯದೆ ಪಿಡಿಮಿಡಿಗೊಳ್ವ ಮುಗ್ಧೆಯಂ ಭರದೆ ಸಭಾ ॥
ಗ್ರದೊಳೆಱಗಿಸಿ ತಾಂ ಗುರುವಾ ।
ದುದು ಲಜ್ಜೆ ಖಗಾಧಿರಾಜನಂದನೆಗಾಗಳ್ ॥ (೪೭)

ವ॥ ಅಂತು ಸಹಜಸಾಧ್ವಸ ನಮ್ರತೆಯೆ ಭಕ್ತಿಪ್ರಣತೆಯಾಗಿ ಪರಿವರ್ತಿತಕಟಾಕ್ಷ ಕಿರಣಾಕ್ಷತಂಗಳಿಂ ನಿಜಾಂಘ್ರಿಗಳನರ್ಚಿಸುವ ಕನ್ಯಾರತ್ನಮಂ ನಿಜಕುಲಕ್ಕಿದುವೆ ಚೂಡಾ ರತ್ನಮೆಂದು ನೋಡಿ ಪಾರಯ್ಸಪಲವಂ ನಲ್ವರಕೆಯುಂ ಪರಸಿ ತದುತ್ಸವ ರಸೋತ್ಸುಕ ತಮನಃಪ್ರಮೋದವಶದಿನಾಗಳ್ ಸಮಾಹೃತ ಸಮಯೋಚಿತ ಗೋಷ್ಠೀವಿನೋದನೆಬ್ಬಿ ವಿದ್ಯಾಧರಾಧಿರಾಜನುಂ ಮುಂದಿಟ್ಟೊಡಗೊಂಡು ಬಂದು ನಿಜಪುರಮನುತ್ತುಂಗತೋರಣ ತರಂಗಿತ ಗೋಪುರಮನಷ್ಟಮಂಗಳೋಪಚಾರಪುರಸ್ಸರಂ ಪುಗಿಸೆ—

ಮ॥ ಸ್ರ॥ ಸುದತೀ ಸಂದೋಹದಾಕಾರದಿನವನಿತಳಂ ರತ್ನಭೂಷಾಪ್ರಭಾಕಾ।
ರದಿನಾಶಾಭಿತ್ತಿ ರೋಧಸ್ಥಳಿ ಚಮರರುಹಚ್ಛತ್ರಸಾಳಿಧ್ವಜಾಕಾ॥
ರದಿನೊಪ್ಪಂಬೆತ್ತು ರೂಪಾಂತರ ಪರಿಣತಮಾಯ್ತಲ್ಲದಂದೆತ್ತವೋದ।
ತ್ತದು ಪೇೞಿಂಬನ್ನಮಾಯ್ತಚ್ಚರಿ ಪುಗೆ ಪುರಮಂ ಬಂದು ವಿದ್ಯಾಧರೇಂದ್ರಂ॥

ಮ॥ ಸುರಚಾಪಂ ಕವಿದಿರ್ದ ಕಾರಮುಗಿಲೊಳ್ ಮೆಯ್ದೋರ್ಪವಿದ್ಯುಲ್ಲತೋ।
ತ್ಕರಮೆಂಬಂದದಿ ನೇಱಿದೋೞೆ ವಿಡಿಯೊಳ್ ಭಾಸ್ವನ್ಮಣಿಚ್ಛತ್ರಮಂ॥
ಜರಿ ತಳ್ತಿತ್ತಿರೆ ಭಂಗುರಾಂಗಲತಿಕಾ ಲಾವಣ್ಯಮಂದಲ್ಲಿ ನೋ।
ಟ್ಪರ ಕಣ್ಣೊಳ್ ಪೊಳೆದುಳ್ಕಿ ಬಂದುದು ಖಗೇಂದ್ರಾಂತಃಪುರಸ್ತ್ರೀಜನಂ॥ (೪೯)

ವ॥ ಅಂತು ಬರ್ಪಂತಃಪುರ ಕಾಂತೆಯರ ನಡುವೆ ಪೀಲಿದಱಿಯ ತುಱುಂಗಲೊಳ್ ಉದ್ಯಾನಷಂಡಂಬೆರಸು ವನದೇವತೆಯೆ ಬರ್ಪಂತೆ—

ಉ॥ ಕಾಂಡದವೋಲ್ ವಿಳಾಸಭೃತವಾರಿಜಮೇಱಿದ ರತ್ನಸೋಳಿ ಕಾ।
ದಂಡಿಕೆ ಚಾಪದಂಡದವೊಲಾತ್ಮವಪುರ್ಲತೆ ನಾರಿವೊಲ್ ಮನಂ॥
ಗೊಂಡಿರೆ ಬಂದಳಿಂದಿವಳ ಮೆಯ್ಸುಡಿಪಾಯ್ತು ಮನೋಭವಂಗೆ ಕೋ।
ದಂಡಸರಪ್ರಯೋಗಮೆನೆ ತಾಳ್ದಿ ವಿಯಚ್ಚರಕನ್ನೆ ಲೀಲೆಯಿಂ॥ (೫೦)

ವ॥ ಅಂತು ಮನಸಿಜವಿಜಯ ಚಕ್ರರತ್ನಮೆನಿಪ ಕನ್ಯಾರತ್ನಮುಂ ಮುಂದಿಟ್ಟು ಬರ್ಪ ನಿಬ್ಬಣದ ಬರವಿನಾಡಂಬರಮಂ ಪುರವರದೊಳೆಲ್ಲಮುಱಿತ್ತಯಿಂ ನೋಡಲೆಂದು—

ಕಂ॥ ಪೆಱಗುಳಿದಿರ್ದುವು ಪೊಱಮಡ।
ಲಱಿಯದೆ ಪಂಜರಶುಕಾದಿಗಳೆ ಪುರಗೃಹದೊಳ್॥
ಪೆಱಗಿನಿತಿರ್ಪವರಿಲ್ಲನೆ।
ಪೊಱಮಟ್ಟೈತಂದುದಂದು ಪುರಜನಮೆಲ್ಲಂ॥ (೫೧)

ಪುರವೀಥೀಲತೆಗಳ್ ಕುಡಿ।
ವಱಿದಪುವೆನೆ ಮುಂದೆ ತೆಱಿಪುವಡೆಯದೆ ಸುತ್ತುಂ॥
ಪರಿವಡೆದುದು ಪುರಜನಮಾ।
ಳ್ವರಿಗಳ ಕೊತ್ತಳದ ಮದಿಲಮಾಡದ ಮೇಲಂ॥ (೫೨)

ವ॥ ಮತ್ತಂ—

ಕಂ॥ ಪುರವಿಪಣಿಮಾರ್ಗರತ್ನಾ।
ಕರಮುಂದೇಂ ಘೂರ್ಣಿಸಿತ್ತೊ ಕವಿದೆತ್ತಂ ತೀ।
ವಿರೆ ಜನತಾವಾಹಿನಿಗಳ್।
ಪರಿತಂದುತ್ತುಂಗ ಹರ್ಮ್ಯಕೂಟಾದ್ರಿಗಳಿಂ॥ (೫೩)

ವ॥ ಆ ಸಮಯದೊಳ್—

ಚಂ॥ ಕುಸಿದಪುದೆಮ್ಮ ಬಿಣ್ಪನೊಳೆ ಹಾರದಮಾಲೆಯ ಬಿಣ್ಪನೆಂತೊ ಸೈ।
ರಿಸಿದಪುದೆಂದು ನೋಡಿನೆಗೞ್ವಿಂತುಪಕಾರಮನಂಗಯಷ್ಟಿ ಗಾ॥
ೞಿಸಿ ಪಱಿದಿಕ್ಕಿ ಹಾರಲತೆಯಂ ಮೊಲೆ ಸೋರ್ಮುಡಿ ಸೂಸೆ ಮಾಲೆಯಂ।
ಪಸರಿಸೆ ವಿಭ್ರಮಂಬಡೆದುದಂಗನೆಯರ್ಕೆ ಪರಿತರ್ಪ ಸಂಭ್ರಮಂ॥ (೫೪)

ಕಂ॥ ಬಂಡಾಡೆ ಮೇಲೆ ಮಧುಕರ।
ಮಂಡಳಿಗಳ್ ಬಿಟ್ಟು ಮಿಳಿರ್ವ ಮಡದಿಯ ಮುಡಿಮಾ॥
ರ್ಕೊಂಡುದು ಕಾರ್ಮುಗಿಲಡಿಯೊಳ್।
ತಾಂಡವಮಂ ಮೆಱೆವ ಸೋಗೆನವಿಲ ಬೆಡಂಗಂ॥ (೫೫)

ವ॥ ಮತ್ತಂ—

ಕಂ॥ ನಱುಸುಯ್ಗೆ ಮುಸುಱಿ ಬರುತಿರೆ।
ಮಱಿದುಂಬಿಯ ಪಿಂಡು ಪರಿವ ತರುಣಿಯ ಮುಖಮೇಂ॥
ಬೆಱಗಾಗಿಸಿದುದೊ ತಿಮಿರಮ।
ನಱಿಯಟ್ಟುವ ತಿಂಗಳೆನಿಸಿ ನೋಡುವ ವಿಟರಂ॥ (೫೬)

ವ॥ ಅಂತು ಪರಿತಂದು ನೋೞ್ಪ ನಗರ ನಾರಿಯರ ಲೋಚನಷಟ್ಚರಣ ಚುಂಬನದಿ ನಾನನಾಬ್ಜಮನಲರ್ಚಿಯುಮಿಕ್ಕುವ ಶೇಷಾಕ್ಷತಂಗಳಿನಳಕಲತಿಕೆಗಲರ್ಗೊಂಚಲಂ ನಿಮಿರ್ಚಿಯುಂ, ಎಳೆದಳಿರ ತೋರಣಂಗಳಿಂ ಪಟವಾಸರೇಣು ಧೂಸರಿತರತ್ನಾತ ಪತ್ರಮನುಜ್ಜ್ವಳಿಸಿಯುಂ, ಅತಿಪರಿಚಯಂಬಡೆದ ವಿಪಣಿ ವೀಥಿಯಂ ಸ್ವಯಂಪ್ರಭೆ ಮನಮಲ್ಲದ ಮನದಿನಗಲ್ವಿನಮೊಡಗೊಂಡು ಬಂದು ಪೌದನಾಧಿರಾಜಮಂದಿರದ ಕೆಲದ ಕೇಳೀವನದಂಗಣದೊಳೆತ್ತಿದ ಮುತ್ತಿನ ಮಂಡವಿಗೆಗಳ ತಂಡದಿಂ ವಿಯನ್ಮಂಡಳಮಕಾಲತಾರಕಿತಮಾಗೆ ಸೊಗಯಿಸುವ ಮಂಗಳ ಶಿಬಿರಮಂ ಬೀಡಿಕೆ ಗೊಟ್ಟು—

ಕಂ॥ ವಿಭವಮನೇಂ ಮೆಱೆದನೊ ದಿ।
ವ್ಯಭೋಜನಾಲೇಪ ಮಾಲ್ಯನಿಗೀತಾತೋದ್ಯ॥
ಪ್ರಭೃತಿ ಮಹಾಸತ್ಕಾರದಿ।
ನಭಿನವಸುರಶಾಖಿಯೆನೆ ಖಗೇಂದ್ರಂಗೆ ನೃಪಂ॥ (೫೭,

ವ॥ ಅನಂತರಂ ತದ್ವಸುಧಾಧಿಪತಿ ಕೃತಸ್ನೇಹ ನಿರ್ಭರೋಪಭೋಗ ಪರಿತೃಪ್ತಹೃದಯರ್ ನಿಜಾಂಬಿಕಾಜನಕರಿನಿಸು ವಿಶ್ರಮಿಸಿರ್ಪನಂ ಕ್ರೀಡೋಚಿತಾರ್ಘಯಾಮಾವಶೇಷವಾಸರಶಿಶಿರವೇಳೆಯೊಳಶೇಷ ಖಚರಕನ್ಯಕಾಪರಿಜನ ಪರೀತೆಯಾಗಿ ನಿಜವಿಳಾಸಮಂದಿರೋಪಚತ್ವರಮನೆಳಸಿ ಸುೞಿಯುತ್ತುಮಂಬರಚರೇಶ್ವರ ಕುಮಾರಿ ನಿಜಶಿಬಿರಾತ್ರಿನಿಕಟದೊಳೆಲರಿಸಲುಗುವೆಳೆದಳಿರ್ಗಳಿಂ ಕಯ್ಸನ್ನೆಗೆಯ್ದು ಕರೆವಂತಿರ್ದ ಕೇಳೀವನಮನಿದು ಮುಕುಂದನುದ್ಯಾನವನಮೆಂದು ಕೆಳದಿಯರ್ ತೋಱೆ ತದವಳೋಕನಕ್ಕಾಗ್ರಹಂಗೆಯ್ಯೆ

ಮುನ್ನಂ ನಿಜೇಶ ದರ್ಶನಾಭಿಲಾಷದಿಂ ತನ್ನಂ ಕೊಂಡೆಳವ ಕಣ್ಗಳಂ ನಿಲಿಸಲನ್ನೆಗಂ ನೆವಂಬಡೆದೆನೆಂದು ವನವಿಳೋಕನ ಕುತೂಹಲದಿನೆಯ್ದೆವರೆ—

ಮ॥ ಪುಗುತುಂ ಕಣ್ಬೆಳಗಿಂ ಲತಾಗೃಹದ ಮುರ್ವಂ ತೊಳ್ದೆ ಕೇಶಾಂಶುವಿಂ।
ಮಗುಳ್ದುತ್ತಾಪ್ತಸಿಸುತುಂ ವನಚ್ಛದಲತಾಂತಚ್ಛಾಯೆಯಂ ದೇಹದೀ॥
ಪ್ತಿಗಳಿಂ ಮುದ್ರಿಸಿ ಬೇಱೆ ಬಿತ್ತರಿಸುತುಂ ಭೂಷಾಮಣಿಕ್ಷಿಪ್ರ ಕಾಂ।
ತಿಗಳಿಂ ಬಂದುದಪೂರ್ವ ಸೃಷ್ಟಿಜನಕಂ ವಿದ್ಯಾಧರಸ್ತ್ರೀಜನಂ॥ (೫೮)

ವ॥ ಅಂತು ಸಹಜ ಸೌಂದರ್ಯಸಂದರ್ಶಿತ ಹರಣಭರಣ ಸಾಮರ್ಥ್ಯದಿಂ ಮದನ ನಧಿದೇವತೆಯುರಂತೆ ಬರ್ಪ ಯುವತಿಯರ ನಡುವೆ—

ಚಂ॥ ಧರಣಿಗೆ ತಾರಕಾವೃತ ಸುಧಾಕರ ಲೇಖೆಯಿದೆತ್ತ ಲೀಲತಾ।
ಪರಿವೃತ ಕಲ್ಪವಲ್ಲಿ ನರಪಾಳಕ ಕೇಳಿ ವನಕ್ಕಿದೆತ್ತಲ॥
ಚ್ಚರಿಯೆನೆ ಬಂದಳಂಗರುಚಿ ಪರ್ವೆ ದಿಗಂತಮ ನೀಕ್ಷಣಾಂಶುಮಂ।
ಜರಿತವನಾಂತರಾಳಿ ಗಗನೇಚರ ರಾಜತನೂಜೆ ಲೀಲೆಯಿಂ॥ (೫೯)

ವ॥ ಅಂತು ಪಂಕಜ ಪ್ರಭವ ಪರಮ ಪ್ರಯತ್ನ ವಿರಚಿತ ಸಂಚಾರಿತ ರತ್ನ ಪುತ್ರಿಕೆಯುಮಂಗಜ ಭುಜೋತ್ಖಾತ ನಿಶಿತಾಸಿ ಪುತ್ರಿಕೆಯುಮೆನಿಸಿ ಬರ್ಪ ವಿದ್ಯಾ ಧರಾಧಿಪತಿ ಪುತ್ರಿಕೆಯುನವನೀಪಾಳ ಪರಮರಹಸ್ಯ ಶಾಳಿಕೆಯುಂ ಅಕಳಿತಸಕಳಗುಣ ಮಾಳಿಕೆಯುಂ ಅಪ್ಪ ವನಪುಳಿಕೆಯೊರ್ವಳಿದಿರ್ವಂದು ತದ್ವನೋಚಿತೋಪಾಯನಪುರಸ್ಸರಂ ಕಂಡು ಮುಂದಿಟ್ಟೊಡಗೊಂಡುಪೋಗಿ ನಿಜವಿಳಾಸ ಕೇಳೀಕೌತುಕೋತ್ಪಾದಕಂಗಳಪ್ಪ ಕಮನೀಯ ಪ್ರದೇಶಂಗಳಂ ಕಂಡು—

ಚಂ॥ ಇದು ನಳಿನೇಕ್ಷಣಂ ಬಿನದದಿಂದಲರ್ಗಟ್ಟುವ ಮಲ್ಲಿಕಾಲತಾ।
ಸದನಮಿದಚ್ಯುತಂ ಸಮುಕೇಳಿಯನಾಡುವ ಪದ್ಮಸದ್ಮಮಿಂ॥
ತಿದು ಕಮಳಾಧಿಪಂ ಕಳೆಯ ಗೀತದ ಗೊಟ್ಟಿಯೊಳಿರ್ಪ ಚಂಪಕಾ।
ಸ್ಪದಮಿದು ಚಕ್ರಿಚಿತ್ರ ರಸಚರ್ಚೆಯೊಳಿರ್ಪರಸಾಳಮಂದಿರಂ॥ (೬೦)

ವ॥ ಎಂದು ತೋಱುತ್ತುಂಬರೆ ತತ್ತನ್ಮನೋಹಾರಿ ಚಾರುತೆಗೆ ಮೆಚ್ಚಿನೋಡುತ್ತು ಮೆಚ್ಚಿರ್ಪ ನಿಜವಿಳೋಚನ ಚಂಚರೀಕಂಗಳಂ ಅಭಿನವೋದ್ಗಮಸ್ತಬಕ ನಿಕುರುಂಬ ದೊಳೆಱಗಿಸುತ್ತುಂ, ವಸಂತರಾಜನೋಲಗಶಾಲೆಯುಂತೆ ಶುಕಪಿಕಮಧುವ್ರತ ಪ್ರಕರ ಮುಖರಾಯಮಾಣಮಾದ ಮಾಧವೀ ಮಂಡಪಮನೆಯ್ದೆವರೆ—

ಚಂ॥ ಒಸೆದು ನೃಪಾಳನಾಡಿಸಿದ ಸೋಗೆಗಳಿಂತಿವು ಚಕ್ರಿ ಬೀಣೆಬಾ।
ಜಿಸೆ ಸುತಿಗೂಡಿ ತಾರಯಿಪ ತುಂಬಿಗಳಿಂತಿವು ಭೂಪನೊಳ್ ಯಥಾ॥
ವಸರದೆ ಕಾವ್ಯನಾಟಕಮನೋದುವ ಕೀರಮಿದೆಂದು ತತ್ಕಳಾ।
ರಸಿಕನ ಚಿತ್ತವೃತ್ತಿಯ ಪಸಾಯಿತೆ ತೋಱೆ ಮನೋನುರಾಗದಿಂ॥ (೬೧)

ವ॥ ನೋಡಿ ನಾಡೆಯುಂ ತದೀಯ ಸೇವೋಪಚಾರಚಾಪಳಕ್ಕೆ ವಿಸ್ಮಯಸ್ತಿಮಿತ ಲೋಚನೆಯಾಗಿರ್ಪಿನಂ ಮನೋಹರಿ ಲತಾನಿಕೇತನಾಂತಃಪ್ರದೇಶಮಂ ತೋಱಿ—

ಚಂ॥ ಕವಿಜನಮಿತ್ರನೋದುವ ನಿಬಂಧಮಿವಂಗಜ ಬಂಧುಬಾಜಿಪಾ ।
ಳವಿಣೆಯಿವೊಲ್ದುದಂ ಬಹುಕಳಾಖನಿ ಚರ್ಚಿಪ ಶಿಲ್ಪಿಯಂತ್ರಮಿಂ ॥
ತಿವು ಹೃದಯಸ್ಥಮಂ ತನತು ವಿದ್ಧಮನಾ ಮನುವಂಶಮೇರು ತಿ ।
ಟ್ಟವನಿಡುವಲ್ಲಿಗಾ ಫಳಕಮಿಂತಿವು ನೋೞ್ಪುದು ದೇವಿನೀನಿವಂ ॥ (೬೨)

ವ॥ ಎಂದು ತದ್ವನಪ್ರದೇಶ ಲತಿಕಾವಾಸ ಪ್ರಶಂಸನ ಪ್ರಸಂಗದೆ ಮುಕುಂದಂಗೆ ತನ್ನೊಳಾದ ಪೂರ್ವಾನುರಾಗ ನಿರ್ಭರಾವಸ್ಥೆಯಂ ಪ್ರಸ್ತಾವಿಸಿದ ಮನೋಹರಿಯ ಸೂಕ್ತಿ ಸೂತ್ರಕ್ಕೆ ಸಾರ್ಥಕೋದಾಹರಣಂಗಳುಂ ತನಗೆ ಮುನ್ನವೆ ಬಿನ್ನವಿಸಿದಿಂದುವ ವಚೋ ರೂಪದರ್ಶನಕ್ಕೆ ದರ್ಪಣಂಗಳುಮೆನಿಸಿ—

ಕಂ॥ ಸುದತಿಗೆ ಕಣ್ಬೊಲನಾದುವು ।
ಮದನಾನಳಹತಿಗೆ ಸೆಡೆದು ನರಪತಿ ಮಱಿಯೊ ॥
ಡ್ಡಿದ ಹರಿಗೆಗಳೆನಿಸಿ ತದಂ ।
ಗಜಸಂಗದೆ ಕೊರಗಿ ಕೆಡೆದ ತಾವರೆಯೆಲೆಗಳ್ ॥ (೬೩)

ವ॥ ಅದಲ್ಲದೆಯುಂ ಕುಸುಮಕಾರ್ಮುಕನ ಪೊಡೆಗೆ ಪದವಡಿಸಿ ಕಾಸಿಕಂದಿಸಿದ ಸೆಲಗಿನಂಬಿನಲಗುಗಳವೆನಿಸಿ ಕಡುಗಂದಿಸೂಸಿದ ಪಾಸಿದೆಳೆದಳಿರ್ಗಳುಂ, ಪುಷ್ಪಸರ ಚಾಪನಿರ್ಮುಕ್ತನಾರಾಚನಿಚಯಮೆಂಬಿನಂ ಕಱಂಗಿ ಕೆದಱಿದ ಮೃಣಾಳನಾಳಮು ಮರೆಗರಿಂಕುವೋದ ಚಮರಿಗಳನನುಕರಿಸಿ ಕೊರಗಿಪರೆದ ಶೀತಳಿಕೆಗಳ ಬಳಗಮುಂ ಪೊಗೆಯಡಂಗೆಗವಿದ ದೂವೆಯಂತಿರೆ ಬರುಂಟಿದೊಡೆ ಬಿಸಿಯನುಗುೞ್ವ ಕಪ್ಪುರದ ನುಣ್ಮಳಲ ಜಗಲಿಯುಂ ಮತ್ತಮೋಱಿಱುೊಂದಱ ಸೌರಭಪ್ರಭೆಗಳೋರೊಂದನೆಳಸೆ ತನ್ನೊಳ್ ತಡಂಗಲಿಸಿ ತೊಳಪ ಕಪ್ಪುರದ ಮೌಕ್ತಿಕದ ತೊಡವನೊಳಕೊಂಡು ಪೊಳೆವ ಪಳುಕಿನ ಪರಿಯಣಂಗಳುಂ, ಶಶಿಕಳೆಯ ಮುಱಿಗಳಂ ಮುಕ್ಕುಳಿಸಿದೆಳಗಾರ ಕಿಱುಮುಗಿಲ ಜವಳಿಗಳೆನಿಸಿ ವಿಮಳಶೀತಳ ಮೃಣಾಳಶಕಳಮಂ ಸೆಱಗೆಯ್ದ ಶತಪತ್ರಪತ್ರಪುಟಿಕೆ ಗಳುಂ ಮಿಱುಪ ನೆಱಿದಿಂಗಳನೆ ಪೊರೆಯೆತ್ತಿ ತಾರಗೆಯ ತುಱಿಗಲನೆ ತಿಱಿದವೋಲೆಳ ವಾೞಿಯ ಪುದುವಿನೊಳ್ ಪಿಸುಪ ಮಲ್ಲಿಗೆಯಮೊಲ್ಲೆಯ ಮುಗುಳ್ಗಳುಂ, ಕಱಿಗಳಿದ ದೞಿಯೊಳಿಕ್ಕಿದ ಸುಧಾಫೇನಪಟಳಮೆನಿಸಿ ಚಕಚಕಿತ ಚಷಕದೊಳ್ ಪದನಿಕ್ಕಿದ ಕರ್ಪೂರಪಾಂಶುಪರಿಮಿಳಿತ ಮಳಯಜಾನುಲೇಪಮುಂ, ಮನ್ಮಥಾನಳನನಾಱಿಸಲ್ ತಳಿವ ಮಳಯಜದ ಸುರಿವ ಕರ್ಪುರದ ಮುಸುಂಕುವ ಮೃಣಾಳ ಸಂತತಿಯ ಕಾಂತಿಗಳ್ ವಿರಹ ಪರಿತಾಪ ಭೀತಿಯಿಂ ತೊಲಗಿ ನೀರ್ದಾಣಮನಳಪಿ ನಿಂದುವೆಂಬಂತಿರೊಳಗೆ ಪರಿವ ಪರಿ ಕಾಲ ಪೊನಲ್ಪರಿಯೊಳಿರ್ಪುವೊರೆದು ತಣ್ಪೆಱಲಿಕ್ಕಿದ ಮಡಿವರ್ಗದ ದುಗುಲಂಗಳುಂ ತಣ್ಗ

ದಿರ ತುಱುಗಲನೆ ನಿಜಿವಿಡಿದ ತೆಱದಿ ಮಿಸುಪ ಪೊಸಗೆಂಕಿನೊಳಗಣೆಳೆನಾರ ತೊಂಗಲಂ ಸಂಗಳಿಸಿ ಪೊರೆಗಳೆದ ಬಾಳೆಯೆಳೆಯ ಸಸಿಯ ದಂಟಿನೊಳು ಸುತ್ತಿ ಸಿರಿಖಂಡದ ಬಂಡಿ ನೊಳಲುಂಬಿ ತಳರ್ವಸೆಯ ಪಕ್ಕದೊಳ್ ನೇಱಿದ ನವೀನ ಚಮರಜಂಗಳುಂ, ಸನ್ನಿಹಿತ ವಿರಹಿಜನ ಸಂಜ್ವರವ್ಯತಿಕರದೊಳವಗಱಿಯ ಮಂದ ಘರ್ಮದಿಂದಿನ್ನುಮಿಕೋಮಳ ಲತಾಂಗದಿಂದುಣ್ಮುವ ಬೆಮರ ಬಿಂದುಗಳವೆನಿಸಿ ಮೇಲ್ಗಟ್ಟಿನೊಳ್ ಕೀಲಿಸಿದ ಚಂದನದ ಪೊಟ್ಟಣಂಗಳಂ ಪಟ್ಟನೆ ಪನಿವ ತಣ್ಬನಿಯ ತಂದಲುಂ, ಬಣ್ಣಂಬಡೆದ ತಣ್ಣೆಲರ ತನುವಿ ದೆನಿಸಿ ತೆಳ್ಪುವೆತ್ತ ಬಾಳೆಯೆಲೆಯ ಬಿಜ್ಜಣಿಗೆಯುಂ ಮೊದಲಾಗೆ ವಿರಹತಾಪ ಪರಿಚಯ ಮ್ಲಾನಮಳಿನಂಗಳುಂ ಮನ್ಮಥ ಹುತಾಶನೋಪಶಮ ಸಂವಿಧೇಯಂಗಳುಮಪ್ಪವಲ್ಲಭ ಮನಃಶಯನ ತಾಪಕ್ಕೆ ಶಿಶಿರೋಪಚಾರಪ್ರಪಂಚಿತ ವಸ್ತುಗಳನೆಡೆವಿಡದೆ ನೀಡುಂ ನೋಡಿ—

ಚಂ॥ ಒದವಿ ಭವದ್ರುಮಂ ಫಳಿತಮಾಯ್ತನುರಾಗರಸಂ ಸುಬದ್ಧಮಾ।
ದುದು ರತಿಕಾಮಧೇನು ಹಯನಾಯ್ತೆನಿಪುತ್ಸವದಿಂ ಸುಖಪ್ರಕಾಂ॥
ಡದ ಕಡೆಯೆಯ್ದಿದಳ್ ಬಗೆಯೆ ಕಾಮಿಗೆ ತನ್ನಯ ನಲ್ಮೆಯೊಂದೆ ಸೌ।
ಖ್ಯದ ನೆಲೆ ಮತ್ತೆ ತನ್ನವ್ರೊಲಿದಿರ್ತನನೊಲ್ದೊಡಮೇನನೆಂಬುದೊ॥ (೬೪)

ವ॥ ಅನಂತರಮಂತರಂಗದೊಳ್ ನಟ್ಟುಡಿದು ಸಿಲ್ಕಿದಲರಂಬಿನ ಪುಳುಂಬುಗಳೆ ಹೃದಯವಲ್ಲಭ ಪ್ರಣಯಮಯಾಯಸ್ಕಾಂತ ದರ್ಶನದಿನಿರದೆ ಪೊಱಮಟ್ಟಪುವೆನಿ ಪ್ಪಿನಂ ಮೆಯ್ಯನಿರ್ಗಳೊರ್ಮೊದಲೆ ಪೊಣ್ಮೆಯುಂ ನಿಜಮನೋರಮಣ ಸಂಜ್ವರಾಪ ನೋದನವ್ಯತಿಕರದೊಳ್ ಕರಮೆ ಕೊರಗಿದ ತದಾವಾಸ ಮಾಧವೀ ಸಹಚರಿಯ ಮೆಯ್ಪು ಸುಸನಾಱಿಸಲು ನಿಮಿರ್ವ ತೆಱದೆ ಸುಯ್ಯೆಲರ್ಗಳೊಗೆಯೆಯುಂ, ಕೆದಱಿಪೊಜಮಡುವ ಸುಯ್ಯೆಲರ್ಗಳೆಪದಿಂದಲುಗಿದಪುವೆನಿಸಿ ತನುಲತಿಕೆ ಕರಮೆ ಕಂಪಿಸೆಯುಂ ಆಗಳೆ ಮನಂ ಬುಗುವ ವಲ್ಲಭನ ಬರವಿನೊಸಗೆಗೆ ವಿಳೋಚನ ದ್ವಾರದೇಶದೊಳ್ ಕಡೆಯಿಕ್ಕಿದ ಬಿಡು ಮುತ್ತುಗಳ ತೆಱದೆ ತುಱುಗೆಮೆಯೊಳಶ್ರುಬಿಂದುಗಳು ಮಂದೈಸೆಯುಂ ಅಳರಳತ ಶಾಡ್ವಲಚ್ಛಲದೆ ಸಮುನ್ಮಗ್ನ ಮನ್ಮಥ ಶಿಳೀಮುಖ ಪಟಳಾನುಕೀ·ತ ಪದಾಬ್ಜೆಯುಂ, ಸ್ವೇದಾರ್ದ್ರಪದತಳಾಲಕ್ತಕರಸವ್ಯಾಜ ವಜ್ರಲೇಪ ದೃಢಘಟಿತ ಚರಣೆಯುಂ ಪ್ರಣಯ ಸಾದೃಶ್ಯ ದರ್ಶನ ಕೃತೋಪಕಾರ ಪ್ರಿಯಜನಮನೋಹಾರಿ ಗುಣನಿಗಳನಿಯಮಿತಾಂಘ್ರಿ ಯುಗಳೆಯುಮಾದಳೆನಿಸಿ ಪರಮಾನಂದ ಪಾರವಶ್ಯನಿರ್ಭರಸ್ತಬ್ಧ ಗಾತ್ರೆಯುಮಾಗಿ ದರ್ು ಕೆಱಿದಾನುಂ ಬೇಗದಿಂ ಸ್ವಕೀಯ ಸೌಭಾಗ್ಯ ಸಂಪತ್ಪ್ರಶಂಸಂಗಳಪ್ಪ ತತ್ಪ್ರ ಶಸ್ತ ವಸ್ತುಗಳ ಪರಿಚಯಕ್ಕೆ ನಾಣ್ಚಿದಂತೆಯುಂ ನಿಜೈಕಲೋಚನನಾದ ನಲ್ಲನಂ ತದವ ಳೋಕನೋತ್ಸುಕಂಗಳಪ್ಪ ಕಣ್ಗಳ್ಗೆ ತೋಱಲಾತುರಿಸುವಂತರಂಗದಿಂ ಪ್ರೇರಿತೆಯಾದಂತೆ ಯುಂ ತದ್ವಿಳಾಸಲತಿಕಾವಾಸದಿಂ ತಳರ್ದು ಕೆಲದ ಕೃತಕಾಚಳದ ತಪ್ಪಲೊಳ್ ತೋರ್ಪ ಕಂಕೆಲ್ಲಿವಲ್ಲರಿಯನೆಳಸುವಳಿಗಳೊಳ್ ಬೆರಸಿ ಪರಿವ ಕಣ್ಬೊಣರ ಬೆಂಬಱಿಯೊಳಸವಸದಿ ನೆಟ್ಟಿರುತ್ತುಮಿರ್ದಳಿರ್ಪುದುಂ ಆ ಪ್ರಸ್ತಾವದೊಳ್ ವಿಯಚ್ಚರೇಶ್ವರ ಶಿಬಿರದ ದರ್ಶನ

ಕುತೂಹಳದಿನುಪಚಿತಚ್ಛತ್ರಚಾಮರಾಧಿರಾಜಚಿಹ್ನನುಂ ಪರಿಚಿತ ತ್ರಿಚತುರ ಸಹಚರಪರೀತನುಮಾಗಿ ಬಿನದದಿಂ ಬನಮುನಿನಿಯುವಳಂ ನೋಡಲೆತ್ತಾನುಮಿತ್ತಲಿಟ್ಟಂದೊಡಸ್ವದ್ವ್ಯಾಚನೋಪಚಿತ ಪುಣ್ಯಲಕ್ಷ್ಮೀಪರಂಪರೆಯನೆನಲ್ ಬಳ್ರ್ಯಮೆಂದು ಬಗೆಯೊಳೆ ಬಯಸಿ ಪಾರುತ್ತುಂ ಬಂದು—

ಉ॥ ಆ ಪುರುಷೋತ್ತಮಂ ಸುರಪತಿ ಪ್ರತಿಮಾಕೃತಿ ತನ್ನ ರಮ್ಯ ಹ।
ರ್ಮ್ಯೋರ್ಪರಿಮೋಚ್ಚ ಭೂಮಿಕೆಯ ಭೂವಿನುತೆ ಪ್ರಘಣಾಗ್ರಭಾಗಶೋ॥
ಭಾಪದ ನೂತ್ನರತ್ನ ರಚಿತಾಂಗಣಮುಂ ಗುಣರತ್ನ ಭೂಷಣಂ।
ಭೂಪತಿ ತಾನಳಂಕರಿಸಿ ರಂಜಿಸಿದಂ ವಸುಧೈಕಬಾಂಧವಂ॥ (೬೫)

ಗದ್ಯಂ

ಇದು ನಿಖಿಳ ಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ
ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾರಿತಮುಪ್ಪ
ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್
ಖಚರರಾಜಾಗಮನ ವರ್ಣನಂ
ಪಂಚಮಾಶ್ವಾಸಂ.

ಷಷ್ಠಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀಧರನಭ್ಯುದಯಕರಂ ।
ಸೌಧೋತ್ಸಂಗಾಭಿ ಶೋಭಿತಂ ಗೆಲೆವಂದಂ ॥
ಭೂಧರವರಸಾನುಗತಾಂ ।
ಭೋಧರವುಂ ಪಂಚ (ಪರಮ) ಗುರುಪದವಿನತಂ ॥ (೧)

ವ॥ ಆಗಳಾ ಪಂಕಜೇಕ್ಷಣನ ದೃಗ್ದ್ದೀಪವರ್ತಿಗೆ ಮನೋಭವ ಮಹೋತ್ಸವ ನಿಧಾನ ಮೆನಿಸಿ ತತ್ಕನ್ಯಕಾರತ್ನಮನುಮಿತ ಪೂರ್ವಕಂ ಪುರೋವರ್ತಿಯಾಗೆ—

ಕಂ॥ ಎಱಗೆ ನನೆಗಣೆಯ ಸರಿ ಬೆಳ ।
ದೆಱಗೆ ಮನೋರಥ ಸಹಸ್ರಸಸ್ಯಂ ಕಾಯ್ಸಿಂ ॥
ದೆಱಗೆ ಮನೋಜಮದದ್ವಿಪ ।
ಮೆಱಗಿದುದಚ್ಯುತನ ದೃಷ್ಟಿ ತತ್ಕನ್ಯಕೆಯೊಳ್ ॥ (೨)

ವ॥ ಅಂತಭಿಮತಾಪೂರ್ವ ರೂಪಲಾಭ ವಿಲೋಭದಿಂ ಪರಿವ ಕಣ್ಗಳಂ ಮುನ್ನ ಮೋಪಳೊಳ್ ನೆರೆವ ತವಕದಿಂ ಪೊಱಮಡುವ ಮದನಸಂಘಟ್ಟನದಿನದಿರ್ವಂತೆಯೆರ್ದೆ ಬೆದಱಿ ಗೂಡುವಾಯೆಯುಂ, ಗೂಡುವಾಯ್ವ ಮೆಲ್ಲೆರ್ದೆಯ ತಲ್ಲಣಕ್ಕೆ ಬೆಱಗಾದ ತೆಱ ದಿನಖಿಳಾಂಗಸ್ಪಂದನಮುಂದಮಾಗೆಯುಂ, ಮಱಿದ ಬೆಱಗಾದ ತನುವನನುವಿಸಿ ಮನಃಪ್ರಿಯೆಯ ಪಕ್ಕಕ್ಕೆ ನಡೆಯೆಂದು ನೂಂಕುವಂತಿರೆಡೆವಿಡದೆ ನಡುಕಮೊಡರಿಸೆಯುಂ, ಅನುವಿಸುವ ಕಂಪನದ ಭರದಿನಖಿಳಾವಯವಮೊರ್ಮೊದಲೆ ಚೆಚ್ಚಱಮೆಚ್ಚಱುವ ತೆಱದೆ ಮೆಯ್ಯನವಿರ್ಗಳಾವಗಂ ನೆಗೆಯೆಯುಂ, ನೆಗೆವ ಮೆಯ್ಯನವಿರ ಸಂದಣಿಯ ಬಱಿಯೊಳೆಡೆವಡೆದಂತರಂಗದಿಂ ಪೊಱಮಡುವ ಲಜ್ಜಾರಸಮಿದೆಂಬಿನಂ ಬೆಮರಬಿಂದು ಗಳ್ ತುಱುಗಿ ತಲೆದೋಱಿಯುಂ, ಬೆಮರ ಬಿಂದುಗಳೆ ಸಕಳಾವಯವದೊಳಮುಣ್ಮಿದು ದನತಿಶೈಸುವಂತೆ ಕಯ್ಗಱಿಯೆ ಕಣ್ಬನಿಗಳೊಗೆಯೆಯುಂ ಅಬ್ಜನಾಭಂ ಸಂಭ್ರಮೌ ತ್ಸುಕ್ಯ ಹರ್ಷಜಡಿಮಾಪಹೃತಹೃದಯನುಂ, ಅವಿದಿತ ವಿಸಂಸ್ಥುಳ ವಿಕಾರಘಟನಾ ಪಟೀಯ ಸ್ಮರಪರಾಯತ್ತ ವೃತ್ತಿಯುಮಾಗೆ—

ಕಂ॥ ಮನದೊಲವಿಂ ಪ್ರಾಣಪ್ರಿಯೆ ।
ಯನಿದಿರ್ಗೊಳಲ್ ಪರಿವ ತೆಱದೆ ನಿಮಿರ್ದುವು ಸುಯ್ಗಳ್ ॥
ತನತನಗೆ ಸೋಂಕುವುತ್ಸುಕ ।
ತನದಿಂ ನಿಮಿರ್ವಂತೆ ಪೊಣ್ಮಿದುವು ಮೆಯ್ಯನವಿರ್ಗಳ್ ॥ (೩)

ವ॥ ಮತ್ತಂ—

ಕಂ॥ ಅಡಸಿದ ಧೈರ್ಯಾರ್ಗಳವೊಳ ।
ಗುಡಿವಿನೆಗಂ ತೀವಿ ತೆಗೆದು ಮನ್ಮಥನಾರ್ದ ॥
ಚೊಡ್ಡೆ ಭೋಂಕನಗಿದು ನೃಪನೆರ್ದೆ ।
ಪಡಿದೆಱದಂತಾಯ್ತು ಕರಂತೆ ಬಗೆವುಗುವಾಗಳ್ ॥ (೪)

ವ॥ ಅಂತು ಕಂತುಶರಪಟಳಪಾತದಿಂದೊಡೆದು ಶೂನ್ಯಮಾದ ಹೃದಯಮಂ ಸಂತೈಸಿ ಧೈರ್ಯಧನಸನಾಥಂ ಮಾಡೆ ರವಣಮಾದ ಜೂದುಗಾಱನಂತೆ ಮಗುಳ್ದು ಮಗುಳ್ದುಮಭ್ಯಾಸವಶದಿನಿನಿಯುವಳ ಕೂಟಮನೆ ಬಯಸಿ ಕಣ್ಗಳ ಸಹಾಯಮಂ ಸಾರೆ ತನ್ಮನದ ಮನೋರಥಮನೆಯ್ದಿಸಲ್ ಧುರಂಧರಂಗಳಾದುವೆನಿಸಿ—

ಕಂ॥ ವಿಕಸಿತಮುಖಾಬ್ಜದೊಳ್ ಶಿಥಿ ।
ಳಕಬರಿಕಾಳಿಂದಿಯೊಳ್ ಚಳೇಕ್ಷಣರುಚಿ ಚಂ ॥
ದ್ರಿಕೆಯೊಳಳಿಗಳ ಝುಷಂಗಳ ।
ಚಕೋರಿಗಳ ತೆಱದೆ ನಲಿದುವರಸನ ಕಣ್ಗಳ್ ॥ (೫)

ಅಂಬುಧಿಯ ಕಂಬುಕಂದಳ ।
ಮಂ ಬಳಸುವ ಮೀಂಗಳೆನಿಸಿ ಪೊಳೆದುವು ಲಾವ ॥
ಣ್ಯಾಂಬುಧಿಯೆನಿಪಿನಿಯಳ ಗಳ ।
ಕಂಬುವನಿನಿಸೆಳಸಿ ಬಳಸಿ ಕೃಷ್ಣನ ಕಣ್ಗಳ್ ॥ (೬)

ವ॥ ಅಂತುಮಲ್ಲದೆಯುಂ—

ಅವಿರಳ ಲಾವಣ್ಯ ಜಲ ।
ಪ್ಲವದೆಳವಾಳೆಗಳವೆನಿಸಿ ನಲ್ಲವಳ ಬೆಮ ॥
ರ್ತವಯುವದೊಳ್ ಪರಿಮುಱಿಯಾ ।
ಡುವಂತೆ ಪರಿದುವು ವಿಳೋಕನಂ ನೃಪವರನಾ ॥ (೭)

ಪಸುರ್ವಾಸೆ ಬಟ್ಟೆಯಿಂದು ।
ದ್ದೆಸಮುಱಿಯದೆ ನಡೆದು ಕುಚನಗಾಂತರದೊಳ್ ಪೊ ॥
ಕ್ಕುಸಿಲಿಂಕೆ ನೃಪನಮನನಾ ।
ರ್ದಿಸುತುಂ ನಾಣ್ಗೆಡಿಸಿ ಪಿಡಿದನಂಗಜ ಚೋರಂ ॥ (೮)

ವ॥ ಮತ್ತಂ—

ಅದಿರೆ ವಳಿತ್ರಯಸೋಪಾ ।
ನದೊಳೋವದುರುಳ್ದು ನಿಮ್ನನಾಭಿಸರೋಮ ॥
ಧ್ಯದೊಳಾೞ ಪುಡುಕುನೀರ ।
ಬಿದ್ದದನಬ್ಜೇಕ್ಷಣನ ಚಿತ್ತಮುಂ ಚಿತ್ತಭವಂ ॥ (೯)

ವ॥ ಅಂತು ಮನ್ಮಥೇಚ್ಛಾವಿಧಾನಭಾಜನನುಂ ಅವಿದಿತಾಂತರ್ಬಹಿಃ ನಿಜಕರಣ ಬಹುವಿಕಾರನುಂ, ಅಭಾವಿತಾನ್ಯ ಸದ್ಭಾವನುಂ ಈಕ್ಷಣೈಕಾವಳಂಬಿತ ಜೀವನನುಮಾಗಿ, ಕಮಳಲೋಚನನಿನಿಸಾನುಮಿರ್ಪಿನಂ ಮನೋಹರಿ ಸಮಯ ಸಮುಚಿತ ವಚೋಲಹರಿಯಾಗಿ ಪರಿವೆವಳ ಸತ್ಕಟಾಕ್ಷಕಾಂತಿವಲ್ಲರಿಗಳಿಂ ಕಂಕೆಲ್ಲಿವಲ್ಲಿಯನಪೂರ್ವ ಪುಷ್ಪಲಕ್ಷ್ಮಿಗೆ ನೆಲೆ ಮಾಟ್ಪಿ ಖಚರರಾಜಪುತ್ರಿಯಂ ಪರಿವೃತ್ತವದನೆಯುಪ್ಪಿನನುಭಿಮತ ಚಟೂಕ್ತಿಯಿಂ ಮೆಚ್ಚಿಸುತ್ತುಮಿಂತೆಂದಳ್—

ಕಂ॥ ಪುದಿದು ಭವದಂಗರುಚಿ ಕೌ।
ಮುದಿ ಬಳಸಿರೆ ಪೋಲ್ತು ಶಶಿವಿಮಾನಮನೀತೋ॥
ರ್ಪುದೆ ಗಗನತಳಮನೆಡೆಗೊಂ।
ಡು ದೇವಿ ನಿನ್ನೊಪ್ಪನಿರ್ಪ ಬಿನದದ ಮಾಡಂ॥ (೧೦)

ಎನೆ ಮುರಿದೀಕ್ಷಿಸಿದಳ್ ಲೋ।
ಚನಾಂಶು ಚಂದ್ರಿಕೆಯೊಳೊದವಿದಾನಂದ ಸುಧಾ॥
ವನನಿಧಿಯೊಳ್ ನೆಲೆಗೊಂಡ।
ಬ್ಜನಾಭನರ್ಣವಶಯತ್ವಮಂ ಪ್ರಕಟಿಪಿನಂ॥ (೧೧)

ಕರಿಯಾಲಿವಿಡಿದು ಪೊಳೆಯು।
ತ್ತಿರೆ ಕಣ್ಗಳ ಪಾಪೆ ಪಱುಗೊಲಿಕ್ಕುವ ತೆಱದಿಂ॥
ಪರಿದುವು ಲಾವಣ್ಯದ ಕಾ।
ಟ್ಪಿರಮೆನೆ ತರೆಮಸಗಿ ವಧುವ ಧವಳಕಟಾಕ್ಷಂ॥ (೧೨)

ವ॥ ಅಂತು ಶಶಿವಿಶದರಮ್ಯಹರ್ಮ್ಯಾವಳೋಕನ ಕುತೂಹಳಂಗಳೊಳಾತ್ಮೀಯ ಲೋಚನ ಚಕೋರಂಗಳವಿದಿತಪ್ರಾಪ್ತ ಪೀತಾಂಬರಾಂಗವಲ್ಲಿವಾಗುರೆಯೊಳಾಗಳೆ ಸಿಲುಂಕಿನಿಲ್ವುದುಮನಂತರಮುಪತ್ರಪಾಪ್ರಕೃತಿಯುಪ್ಪಿವಳ ಮನಮಂ ಮನಮುಱಿಯದವರಲ್ಲಿಗವಿಚಾರಮುಯ್ವುದು ನಿಮಗಯುಕ್ತಮೆಂದು ಕಣ್ಪೊಣರನಡ್ಡಯ್ವ ತೆಱದೆ ಪೊಱಡುವ ಕಣ್ಬನಿಯುಂ, ಕಣ್ಗಳ ಬಱಿಯೊಳುತ್ತವಳಿಸಿ ಪರಿವಚಿತ್ತಮಂ ನಿಲಿಸಲೆಯ್ದುವಂತೆ ನಿಮಿರ್ವ ಸುಯ್ಗಳುಂ, ನಿಡುಸುಯ್ವ ಪೊತ್ಕಾರ ರಭಸಮಂ ಮಱಿಯಿಸಲೊಡರ್ಚುವಂತೆ ಥಕ್ಕೆವಾಜಿಸುವ ಮೆಲ್ಲೆರ್ದೆಯುಂ, ಮೆಲ್ಲೆರ್ದೆಯ ನಡುಕಮಂ ಮಾಣಿಸಲ್ ಸಂಭ್ರಮಿಸುವಂತಿರಾಕಂಪಿಪವಯವಂಗಳುಂ, ಅವಯವಂಗಳಾ ಕಂಪಮನಾಚ್ಛಾದಿಸುವ ತೆಱದಿ ತುಱುಗಿ ನೆಗೆದ ಪುಳಕಂಗಳುಂ, ಮುನ್ನಮುತ್ಪುಳಕ ಸಂಕುಳಚ್ಛಲದಿನಾಲಿಂಗನೇಚ್ಛೆಯೊಳ್ ನಿಮಿರ್ವ ಗಾತ್ರಮಂ ತಳರಲೀಯದೆ ತಱುಂಬುವಂತಿರಗ್ಗಳಿಸಿದುತ್ಕಟಸ್ತಬ್ಧಭಾವಮುಂ, ಅತಿಸ್ತಬ್ಧ ಚೇಷ್ಟಮಾದ ತನುವನಿರ್ಪಿನೊಳ್ ಪೊರ್ದು ಸಂತೈಸುವಂತೆ ಮೆಯ್ಯೊರೆದ ಬೆಮರ ಬಿಂದುಗಳ ಮೊತ್ತಮುಂ, ಮತ್ತಮಂತರಂಗ ಶಬಳಿತೌತ್ಸುಕ್ಯ ಸಾಧ್ವಸ ವ್ರೀಡಾಜಡಿಮಾದಿ ವಿವಿಧ ಭಾವಮುಂ, ಉದೀರ್ಣ ರಾಗಾರ್ಣವ ಕ್ಷುಭಿತ ಕಲ್ಲೋಳಜಾಳಮೆಂಬಿನಂ ವಿಜೃಂಭಿಸಿದುವಂತುಮಲ್ಲದೆಯುಂ,—

ಚಂ॥ ಅದಿರೆ ನಿಜೇಶನುಂ ನಿಜವಿಳೋಚನ ಸಾಯಕದಿಂ ನಿಜಾಂತರಂ ।
ಗದ ಕುಸುಮಾಸ್ತ್ರನೆಚ್ಚೊದೆದು ಪುಟ್ಟಿಸಿರಾಗದಿನುರ್ವಿ ಥಿಂಕುವಾ ॥
ಱಿದಪನೆನಿಪ್ಪಿನಂ ಸ್ಮರಜಸಾಧ್ವಸದಿಂ ಧಿಗಿಲೆಂದು ಗೂಡುವಾ ।
ಯ್ದುದು ನೃಪಕನ್ನೆಗಾಗಳೆರ್ದೆ ನೋಡಲೊಡಂ ಮನುವಂಶಮೇರುವಂ ॥ (೧೩)

ನಡುಗಿ ಬೆಮರ್ಪ ಪೆಬ್ಬಳಿಸಿ ನೋೞ್ಪರ್ದೆ ಕಂಪಿಪ ತಲ್ಲಣಿಪ್ಪ ಕಾಲ್ ।
ತಡತಡಮಾಗೆ ಕೆಯ್ಕುಗ್ಗುಡುವಳಂ ನಸುನೆಮ್ಮುವ ಮೇಲುದಂ ಕುಚ ॥
ಕ್ಕಡಿಗಡಿಗೇಱಿ ಸಾರ್ಚುವಳಪಟ್ಟಿರೆಯುಂ ತೊಡವಂ ಕಬಿಲ್ದಿಸ ।
ಯ್ತಿಡುವ ವಿಕಾರಮಾಕೆಗಿದಿರೊಳ್ ಕರೆಗಣ್ಮಿದುದಂಬುಜಾಕ್ಷನಾ ॥ (೧೪)

ವ॥ ಮತ್ತಂ—

ಕಂ॥ ಪೂಗಣೆಯಿಂಬಾದವಣಂ ।
ಬೋಗಿರೆ ಹೃದಯಂ ನಿರರ್ಗಳಂ ಕವಿದಪುವಿಂ ॥
ತೀಗಳೆನೆ ತರುಣಿಗೊಗೆದುವು ।
ಬೇಗದಿಮತಿಸೂಱ ದೀರ್ಘ(ನಿ)ಶ್ವಾಸಂಗಳ್ ॥ (೧೫)

ಹೃದಯಮನಿನಿಯುಂ ಪುಗುವೆಡೆ ।
ಗಿದು ಮಱಯೊಂದೆತ್ತಿ ಕಳೆವತೆಱದಿಂದೀಡಾ ॥
ಡಿದುದು ನಿಡುಸುಯ್ಯೆಲರ್ ಮೇ ।
ಲುದನಾಕೆಗೆ ಪಿಡಿಯೆಯುಂ ಕುಚಪ್ರಸ್ವೇದಂ ॥ (೧೬)

ನಡುವಲರ್ಗಣೆಗಿನಿಸುಂ ಮಱ ।
ವಿಡಿದಪಳೆನೆ ಜಗುಬ್ಬಿ ಮೇಲುದಂ ನೆಲೆಮೊಲೆಯೊಳ್ ॥
ಬಿಡೆ ಸಂಧಿಸುವ ಬಟಲ್ಕೆಯೆ ।
ಮಡದಿಯ ಕರಕಂಪನಕ್ಕದೇಂ ನೆರಮಾಯ್ತೋ ॥ (೧೭)

ವ॥ ಅಂತುಮಲ್ಲದೆಯುಂ—

ಮ॥ ಪ್ರತಿಬಿಂಬಚ್ಛಲದಿಂ ಬೆಮರ್ತ ಕುಚದೊಳ್ ತಳ್ಪೊಯ್ದ ತನ್ನೋಪನಂ ।
ಸತಿ ನೀಡುಂ ಮಱಮಾಡಿ ಚುಂಬಿಸಿದಪಳ್ ಸಾರ್ದೆಂಬಿನಂ ಸುಯ್ಯೊಳೆ ॥
ತ್ತಿತೆರಳ್ವಂಶುಕಮಂ ಕುಚಕ್ಕೆ ನವಲಜ್ಜಾನಮ್ರವಕ್ತ್ರಾಬ್ಜೆ ಸಾ ।
ರ್ಚಿತು ಮಂದೋಪನ ಕೆಯ್ಗೆ ಸಾರ್ಚಿದಳನಂಗ ಪ್ರಾಚ್ಯ ಸಾಮ್ರಾಜ್ಯಮಂ ॥ ()

ಮ॥ ಸ್ರ॥ ಲುಳಿತಾಸ್ಯಸ್ವೇದದಿಂದಂ ಪರೆಯೆ ತಿಳಕಮಾಕಂಪದಿಂ ಜೋಲೆ ಕರ್ಣೋ ।
ತ್ಪಳಮಾಲಿಪ್ತಾಂಗರಾಗಂ ಮುಸುಳೆ ಪುಳಕದಿಂಪಿಂಗೆ ಹರ್ಷಾಶ್ರುವಿಂ ಕ ॥
ಜ್ಜಳಲೀಲಾಲಕ್ಷ್ಮಿ ಭೂಪಂಗೆಸೆದಳಬಳೆ ಚೆಲ್ವಿನ್ನೆಗಂ ಮಂಡನ ಶ್ರೀ ।
ಯೊಳಡಂಗಿರ್ದತ್ತಿದೆಂಬಂತೊಲವಿರೆ ಸತಿಯರ್ಗೇಕಳಂಕಾರ ಭಾರಂ ॥ (೧೯)

ವ॥ ಆಗಳತನು ಸನ್ಮೋಹನ ಶಿಳೀಮುಖ ವಿಮೂಢೆಯಾದ ಮುಗ್ಧೆಯಂ ಸಂತಯ್ಸಲು ವಯಸ್ಯೆಯಂತೆ ಸಾತ್ವಂದಮುರೆಯುಮುತ್ಕಳಿಕಾದಿಗಳ ಗಡಣದಿಂ ತನ್ನನಿಱಿಕೆಯ್ದುಗಲ್ಕೆಯುಂ ತತ್ಕ್ಷಣದೆ ಚೇತೋಭವ ಪ್ರಭವಪರಿಭವಾಕ್ರಾಂತೆಯಾದ ನಿಜ ವಯಸ್ಯೆಯಂ ಚಿರಪರಿಚಯೋಪರೋಧದಿನಾರಯ್ಯಲೆಳಸಿದಂತಿರೆಬ್ಬಿಂದ ಲಜ್ಜೆಯುಂ, ತದನುಚರನಿರತವೃತ್ತಿಯುಪ್ಪುದಱಿನಿರದೆ ಲಜ್ಜೆಯ ಬೆಂಬಳಿಯೊಳ್ ಎಳಸಿದವಹಿತ್ಥಮುಂ, ಮೊದಲಾಗೆ ಪೆಱವುಮುಚಿತಭಾವಂಗಳಾವರಿಸೆ ತತ್ಕ್ಷಣಂ ತದಧೀನಮಾನಸೆಯಾದಂತೆಗೆಯ್ದು —

ಚಂ॥ ಒಗೆವ ಬೆಮರ್ ಸಖೀಜನದ ಸಂದಣಿಗುಮ್ಮಳಿಪಂತೆಗೆಯ್ವಕೆ ।
ಯ್ಮಗೆ ನಿಡುಸುಯ್ಯೆಲರ್ ಬೆಮರ ಬಿಂದುವನಾಱಿಸಲೂದುವಂತೆ ಗೆ ॥
ಯ್ವುಗೆ ನಯನಾಂಬುಗಳ್ ಕುಸುಮದಾಳಿಗೆ ಪೇೞ್ವಳಿಪಂತೆಗೆಯ್ವ ಮಾ ।
ೞ್ಕೆಗಳೆ ನಿಜೋತ್ಥ ಮನ್ಮಥವಿಕಾರಮನಿರ್ಮಡಿಸುತ್ತುಮಿರ್ದಳಂ ॥ (೨೦)

ಅನಿಯತಮಾಳಿಯೊಳ್ ಬಱಿದೆ ಸಾರ್ದುವ ದೂತಿಯನೇನನಕ್ಕೆ ಕೆ ।
ಮ್ಮನೆ ಬೆಸಗೊಳ್ವ ಮೇಳದವಳಂ ಪಿಡಿವಬ್ಬದೆ ಪೊಯ್ವ ಕುಳ್ಳಿರು ॥
ತ್ತನುವಿಸಿ ಪೋಪಮೆಂಬ ಮಗುೞ್ದೀಕ್ಷಿಸಿ ಮಾಡಮನೊಲ್ದು ಬಣ್ಣಿಪೀ ।
ಬಿನವದೆ ಕಾಂತೆ ಕಂತುನಟನಾಡಿಸುವಂದದಿನಾಡುತಿರ್ದಳಂ ॥ (೨೧)

ಕಂ॥ ತರಣಿ ವಧೂವರರ ಪರ ।
ಸ್ಪರ ನಯನಪ್ರೀತಿ ದರ್ಶನೋದ್ದೀಪಿತ ರಾ ॥
ಗರಸೋತ್ಕಂಠಿತನಾದಂ ।
ತಿರೆಳಸಿದಂ ಮೆಲ್ಲನಂದು ಸಂಧ್ಯಾವಧುವಂ ॥ (೨೨)

ಇನನಿಂನೀರ ಕರಸ್ಪ ।
ರ್ಶನದೆ ಬೆಮರ್ದೀ ವಿಳಾಸವತಿಯುರ ಸೋಂಕಿಂ ॥
ದನುರಕ್ತನಾದನೆಂಬ ।
ತ್ತೆ ನಿಮಿರ್ದವೊಲ್ ದಿವಸಲಕ್ಷ್ಮಿಯುಂ ಬಡವಾದಳ್ ॥ (೨೩)

ವ॥ ಅನಂತರಂ ತತ್ಕ್ಷಣದೊಳೊದವಿದ ನಿಜತ್ರಪಾಚ್ಛಾದನಮುಂ ಮುಟ್ಟಲಱಿಯದೇವಯ್ಸಿ ಬೆಳಗಿಂಗೆ ಮುಳಿದು ತನ್ನನಡರೆ ನೋಡುವ ಖಗೇಶ್ವರಾತ್ಮಜೆಯ ಕಡೆಗಣ್ಣ ಕೆಂಪಿನೊಳ್ ಪುದಿದನೆಂಬಂತೆಯುಂ, ಬಿಸಿಲೊಳ್ ಬೆಮರ್ತ ವಿದ್ಯಾಧರ ಪ್ರಮದೆಯರ ಕದಪುಗಳ ಕುಂಕುಮದ್ರವಮನಾತ್ಮಪ್ರಸಾರಿತ ಕರಂಗಳಿಂ ತೆಗೆವಣ್ಪೆಕ್ಕೆಕೊಂಡನೆಂಬಂತೆಯುಂ, ಆಗಳಾಗಳಗಲಲಾಱದೆ ನಿಜಕರಂಗಳಿಂ ಬಱಿತೆಗೆದು ಪದ್ಮಿನಿಯುನಮರ್ದಪ್ಪಿ ತತ್ಪರಾಗಾಂಗರಾಗದೊಳ್ ಪೊರೆದನೆಂಬಂತೆಯುಂ, ವಿಪಾಕಪರಿಣತ ಸಾರಂಗರಂಗಮಂ ತಳೆದು ಭೂಭುವನಮನಿತುಮಂ ಪರಿಮುತ್ತುಗೊಳ್ವ ಕಟ್ಟಲೆಯ ಭಯದಿಂ ನಭೋಲಕ್ಷ್ಮಿ ಸಕಳಪ್ರಕಾಶಮಂ ಮೊಟ್ಟೆಗಟ್ಟಿಸಕ್ಕೆನೆಟ್ಟದಿಟ್ಟೆಡೆಗೆ ಕಳಿಪಿದ ಕಟ್ಟವದ ತೊಟ್ಟ

ಳಮಿದೆಂಬಿನಂ ದ್ಯುಮಣಿ ಚರಮಾಚಳ ಶಿರೋಮಣಿಯಪ್ಪುದುಂ, ಕಲ್ಲಕವಿಯ ಕುಸು ಕುಱ ಕೋಣೆಗಳೊಳೊತ್ತುಗೊಂಡ ಕಱ್ತಲೆಯ ಮೊತ್ತಕ್ಕೆ ಮಾರ್ತಂಡಂ ಕ್ಷೀಣಮಾದುದ. ಪೇೞ್ದು ಪೊಱಮಡಿಸಲ್ ಪರಿವ ಪೇರಿಗರಂತೆ ಕೇಳೀಕಪೋತಂಗಳುತ್ತುಂಗ ಕೃತಕ ಕುತ್ಕೀಳಕೂಟ ಕುಹರಂಗಳಂ ಸಾರೆಯುಂ, ಬನದ ಕುಂಜದೊಳ್ ಕೊಂಬುಗೊಂಡ ಕತ್ತಲೆಯ ಪೊೞ್ತಿನ ಬಲದಿನಿನಕರಾನೀಕಮನವುಂಕಿ ಬೆಂಕೊಂಡಳಱಿ ಸೂಱ್ಕೈಪ ಕಣ್ಣಗಾಳಿಯುಲಿಯೆನಿಸಿ ಗೂಡಿಂಗೆ ಸಾರ್ದುಱಿವ ಪಕ್ಕಿಗಳ ಕಳಕಳಂ ಬಳೆಯೆಯುಂ, ತತ್ತಮೋಬಳದ ಮುಂದೂಳ ದಾಱಿಯಾಳ್ವಂತಿರೋಳಿಯೊಳ್ ಕೇಳೀಮಯೂರಂಗಳ್ ಉದ್ದವೊಗೆದು ಪೊಂಗಡೆಯ ಪಕ್ಕಿವಣೆಗೆ ಪಾಱೆಯುಂ, ಇನನುಱಿದು ಪೋಪುದುಂ ಪಾರ್ದು ಪದ್ಮಿನಿಯೊಳೞಿಪಿ ನೆರೆವಾಸೆಯಿಂ ದೋಷಾಕರನೆ ಬನದಮಱೆಯೊಳೞಿಸಿದಪನೆನಿಸಿ ಪೆಂಚರೀಚಪಳನೂಪುರ ಕ್ವಣನಪರಿಚಯೋಪನ್ಯತ್ತಿಕರ ಮರಾಳಮಬ್ಜಾಕರಕ್ಕೆ ನಡೆಯಲೊಡರಿಸೆಯುಂ, ತಮ್ಮ ಮೆಯ್ಯೊವ್ವರೆದ ರವಿಕಿರಣ ಕವಚಮೊರ್ಮೊಡಲಿ ತೊಲಗೆ ತೆಱವುಗಂಡುತೂಳ್ದು ಸುತ್ತಿ ಮುಱಿಯುಟ್ಟುವಂಗಭವನಾಱಡಿಗೆ ಬೆಗಡುಗೊಂಡು ತಲ್ಲಣಿಸಿದಂತೆ ನಲ್ಲಳಂ ಬಿಸುಟು ದೆಸೆಗೆಟ್ಟು ಚಕ್ರವಾಕಂ ಕೋಕನದಸದನದಿನೆೞ್ದು ಪೋಗೆಯುಂ ಮೃಗಧರಮಯೂಖಂಗಳೆತ್ತಾನುಮಿಂತಿವಂ ಕಂಡೊಡಾಗಳಂತೆ ಸಂತಮಸ ಸಂತಾನಸಂಕೆಯಿಂ ಪಿಡಿಗುಮೆಂದುಮ್ಮಳಿಸಿ ತಮ್ಮತನಿವಂಡಸೂಡಿ ಸಡಪಿದ ಪೋಱಡಿಂ ಬಸಿಱಿಱೊಳಗೆ ಬಯ್ತು ಮುಚ್ಚುವಂತಿರಳಿವಳಗಮನೊಳಕೊಂಡು ನಳಿನಿಗಳ್ ಮುಗಿಯೆಯುಂ, ಪಗಲೊಳೊರ್ಮೆಯುಂ ತಮ್ಮನಂಡಲಿದು ಬಂಬಣ ಬಾಡಿಸಿ ಬಿಡದೆ ಕಡುಗಾಯ್ದು ಕಣ್ಣೊಳುಱ್ಕುವುಷ್ಣಕರನ ಬಿಸುಗದಿರ್ಗಳೆಯ್ದೆ ಮೆಯ್ದೆಗೆದುವೊ ಬನದೊಳಿರ್ದುವೊ ಮತ್ತಮೆಂಬುದಂ ಮೆಲ್ಲನೀಕ್ಷಿಸಲುಂ ಮಿಳ್ಮಿಳಿಸಿ ಕಣ್ದೆಱವತೆಱದೆ ಸಂಪಗೆಯ ಮಲ್ಲಿಗೆಯ ಮುಗುಳ್ಗಳುಳ್ಳಿರೆಯುಂ ಉಲ್ಲಸಿತ ಸಾಂಧ್ಯಶೋಣಿಮಚ್ಛಲದೆ ಬಳಸಿದಂಗಭವ ಹುತವಹ ಶಿಖಾವಳಿಗೆ ಸುಗಿದು ಸುರ್ಕುವಂತಿರೆ ಶಿರೀಷಮಾಳತೀ ಪ್ರಭೃತಿ ತರುಲತಾಗುಚ್ಛಸಂಪುಟಂಗಳಮರ್ದು ಸಂಕೋಚಿಸೆಯುಂ, ಉದ್ದೃಪ್ತ ಶೃಂಗಾರರಸಮಯಮುಮವಿರಾಮಕಾಮುಕ ಕದಂಬಕೋತ್ಕಳಿಕಾ ವಿಕಾಸಮಯಮುಂ ಆದ ಸಂಧ್ಯಾ ಸಮಯದೊಳ್ ತದುದ್ಯಾನವಿಷಯಮೌತ್ಸುಕ್ಯ ವಿಷಯಮುಮಾವೇಗ ವಿಷಯಮುಮುನ್ಮಾದವಿಷಯಮುಂ ವಿಮೋಹವಿಷಯಮುಮಾಗಿ ನಿಜಮಾನಸಾಂತರಾಳಮಂ ಭೋಂಕೆನೆ ಕಲಂಕಿ ನೆಲೆಗಿಡಿಸೆ—

ಉ॥ ಕೂಡುವ ಪಾರಿವಂಗಳುಲಿ ಕೇಳಿನಗಂಗಳೊಳುಣ್ಮೆ ಕೇಳ್ದಲಂ ।
ಪೋಡೆ ಕೊಳಂಗಳೊಳ್ ನೆರೆದು ಕಣ್ಗೆಯಲಾಟಿಪ ಹಂಸಯುಗ್ಮಮಂ ।
ನೋಡಿ ನವೋಢ ಬಿಂದು ಭರಮಂಥರ ದೃಷ್ಟಿಮೆರಳ್ದು ನಲ್ಲನಂ ।
ನೋಡಿದಳುರ್ವಿ ನೋಡೆ ಪೊರೆಯೋಱಿದ ತನ್ನಯ ಮುಯ್ಪುಸಂಗಜಂ ॥ (೨೪)

ರಥೋದ್ಧತೆ ॥ ಅನ್ನೆಗಂ ತಡೆದಮಾಟದತ್ತಿರ್ಗೆಯಿಂ ।
ದಿನ್ನೆಗಂ ಬನದೊಳಾಡುತಿರ್ಪ ಪೊ ॥
ಬಿನ್ನಿದಲ್ತು ನಡೆ ಪೋಪಮೆಂದು ತ ।
ನ್ನಂ ನಿಜಪ್ರಿಯ ಸಖೀಕದಂಬಕಂ ॥ (೨೫)

ಕಂ॥ ಅನುವಿಸೆಯುಮಿನಿಯನವಯುವ ।
ಮನಡರ್ದು ತೊಡರ್ದಾತ್ಮ ದೃಷ್ಟಿಯಂ ತೆಗೆಯಲ್ ಕಾ ॥
ಮಿನಿ ನೆಱೆಯಳೆ ತರುವನಡ ।
ರ್ದು ನಿಮಿರ್ದಲತೆಯಂ ಬೞಿಕ್ಕೆ ಬಳ್ಕುಮೆ ತೆಗೆಯಲ್ ॥ (೨೬)

ಪೃಥ್ವಿ ॥ ಅನಂತವಿಮುಖಾಬ್ಜದಿಂ ದಳಮೃಣಾಳಿಕಾನಾಳಮಂ ।
ಬಿನಂ ಬೞಿಯೊಳಬ್ಜವೀಕ್ಷಣನ ದೃಷ್ಟಿಗಳ್ ನೀಳ್ದು ಬ ॥
ರ್ಪಿನಂ ತಿರಿಪಿದಳ್ ಮುಖಾಂಬುಜಮನೊಯ್ಯನೆಂತಾನುಮಾ ।
ತನೂದರಿವಳರ್ ಕಟಾಕ್ಷರುಚಿ ಸುತ್ತೆ ದಿಗ್ಭಿತ್ತಿಯಂ ॥ (೨೭)

ವ॥ ಅಂತು ಸಹಚರೀನಿಕರದ ನಿರಂತರೋಪರೋಧದಿನಸವಸಂ ಮಗುೞ್ದು ನಿಜ ಮನೋರಮಣನಂಗಯಷ್ಟಿಯೊಳು ನಟ್ಟದಿಟ್ಟಿಯಂ ಬರೆತೆಗೆದು ಬೞಿಲ್ದಂತೆಯುಂ, ಬೞಿಯೊಳೆಳಸಿ ಬಳಸುವ ಸರೋಜಲೋಚನನ ದೃಷ್ಟಿಪಾತದೊಳ್ ತೊಡರ್ದು, ತೊಡೆಗಳೊಳ್ ತೊಡಂಕಿದಂತೆಯುಂ ಮದನನಾಜ್ಞೆಯಂ ಮೀಱಿಪೋಗದಿರೆಂದು ಚಪ್ಪರಿಸುವಂತಿರಡಿಗಡಿಗೆ ಜಡಿವ ಕೋಗಿಲೆಯ ದನಿಯನನುಕರಿಸುವಾತ್ಮೀಯ ಪ್ರತಿಪದನ್ಯಸನಸಿಂಜಾನ ಮಂಜೀರಕೋತ್ಕಳಕಳಕ್ಕೆ ಸೈರಿಸದೆ ನಿಲಿಸುವಂತೆಯುಂ ಕರಮೆ ಮಂಥರಿತಮಂದಗತಿಯೊಳೆಂತಾನುಂ ತದುದ್ಯಾನ ಪ್ರತೀಹಾರ ಧಾರಿಣಿಯನೆಯ್ದಿ ತತ್ಪ್ರದೇಶದೊಳೆ ವನಬಾಳಕಂಗಂ ಮನೋಹರಿಗಂ ಮೆಚ್ಚಿದಂಡದಿನುಡಲ್ಕೊಟ್ಟು ನಿಲಿಸಿ ನಿಜ ಖಚರ ಸಹಚರೀ ಸಮುದಯ ಸಮೇತಂ ಸ್ವಯಂಪ್ರಭೆ ನಿಜಶಿಬಿರ ರಾಜಭವನಕ್ಕೆ ಪೋಗೆ—

ಕಂ॥ ಅದೆ ಕೃಷ್ಣನ ತನುರುಚಿ ತ ।
ತ್ಸುದತಿಯ ಪೋಬೞಿಯನಱಸಲೆಳಸಿದುದೆಂಬಂ ॥
ದದೆ ವನವೀಥಿಯನಂದೆಳ ।
ಸಿದುದವಿರಳಮಂಧಕಾರಮತಿದುರ್ವಾರಂ ॥ (೨೮)

ಚರಮಾತಪಮಿಷದಿಂದಳು ।
ರ್ದುರಿಪಿಯೆ ಬೆಂದಾಱಿ ಕಂದಿದಂದದಿನಖಿಳಾಂ ॥
ಬರಮೇಂ ಕಱಂಗಿದುದೊ ಮೆ ।
ಯ್ವೆರೆದವಿರಳಮಾಗೆ ಪರೆದು ಪರ್ಬಿದ ತಮದಿಂ ॥ (೨೯)

ವ॥ ಮತ್ತಮಾಗಳಾಗಳಂದುವಿನ ನೆವದಿನುದಯಿಸುವ ಮದನಾನಳನ ಕರ್ಪೆನೆಯಿದೆನಿಸಿ ಬಿರಯಿಗಳ ಕಣ್ಗಳೊಳು ಕಣ್ಬನಿಯನೊದವಿಸೆಯುಂ ಸ್ಮರದಹನ ಧೂಮಪಟಳದೊಳ್ ಪುಟ್ಟಿಪುಂಜಳೀ ಪ್ರಮೋದ ಬಾಷ್ಪಬಿಂದುಗಳ ತಂದಲಂ ಕಱೆವ ಕಾರ್ಮುಗಿಲ ಮೊತ್ತಮೆನಿಸಿ ಪಥಿಕಸಂಕುಳಮರಾಳಮಂಡಳಮನಳಱಿಸೆಯುಮುಚಿತ ಸಂಧ್ಯಾ ಪ್ರದೀಪ ಸಂಜನಿತ ಸಿದ್ಧಾಂಜನಮಿದೆನಿಸಿ ಕೌಶಿಕಂಗಳ ಕಣ್ಗಳ ತಿಮಿರಮಂ ಪರಯ

ಸೆಯುಂ, ಬಿರಯಿಗಳ ಕಣ್ಣೀರಪೂರದೊಳ್ ಬಳೆಯಿಸಿದ ಮನಸಿಜನ ಕೇಳೀತಮಾಳ ಮಂಜರಿಯಿದೆನಿಸಿ ವಿಸರದಭಿಸಾರಿಕಾ ಲೋಚನ ಚಂಚರೀಕ ನಿಕರಮುಂ ನಲಿಯಿಸಿಯುಂ, ಉರ್ವರೆಯುಳುಬ್ಬರಮುರಿದು ನಂದಿದುಷ್ಣಕರನ ಬಿಸುಗದಿರ ಮಸಿಯ ರಾಶಿಯೆನಿಸಿ ನಿಜಸಂಗತಿ ವ್ಯತಿಕರದೊಳಖಿಳ ಲೋಕಮುಂ ಕಱಂಗಿಸಿಯುಂ, ಅಭಿಮತ ರತೋತ್ಸುಕ ಸ್ವೈರಿಣೀ ಸಂತತಿಗತಂತುಮಯ ನೀಳಚೇಳಮುಮಕಲ್ಕಮಯ ಕಸ್ತೂರಿಕಾಪಂಕಮುಮುಗ್ರಾವಮಯ ಮಹಾನೀಲಮಣಿ ಭೂಷಣಮುಮೆನಿಸಿ ಸಕಳಲೋಕಾವಳೋಕಲುಂಟಾಕಮುಂ, ಅಭಾವೀಕೃತಾಖಿಳ ಭಾವಮುಂ, ಅಖಿಳ ವರ್ಣಭೇದ ಭ್ರಂಶಕಮುಮಪ್ಪ ಭೂರಿತಮಂ ತಮಮಶೇಷ ಭುವನೋದರಮನಾವಗಂ ತೀವೆ—

ಕಂ॥ ಮೃಗಮೆಲ್ಲಂ ಕೃಷ್ಣಮೃಗಂ ।
ಖಗಮೆಲ್ಲಂ ಕೋಗಿಲೆಯೆ ನದೀನದಮೆಲ್ಲಂ ॥
ಜಗುನೆಯೆ ಗಿರಿಯೆಲ್ಲಂ ನೀ ।
ಲಗಿರಿಯೆ ಧಾರಿಣಿಯೊಳೀಗಳೆನಿಸಿದುದಾಗಳ್ ॥ (೩೦)

ಇನಿತುಱಿಸದೆ ಕತ್ತುರಿ ಚಂ ।
ದನಮುಂ ಕಱಿ ಪೆಱಿಯನಿಂದ್ರನೀಲಂ ಮುತ್ತಂ ॥
ನನೆಯನಳಿ ಗಂಗೆಯುಂ ಜಗು ।
ನೆ ನುಂಗಿದಂತಾಯ್ತು ನುಂಗೆ ಕತ್ತಲೆ ಬೆಳಗಂ ॥ (೩೧)

ಚಂ॥ ಉಱಿಯೆ ಜಳಾಹಿಯೆಂದು ಬಿಸವಲ್ಲಿಯನಂಜೆ ಶಿಳೀಮುಖಂಗಳೆಂ ।
ದಿಱಿಕೆಯೆ ಪೂಗಳಂ ಪಱಿಮೆ ಕೋಗಿಳೆಯೆಂದು ಪಿಕಂ ಬಳಾಕೆಯುಂ ॥
ಬಱಿಸಲಲಾಸೆಗೆಯ್ಯೆ ಕಳಹಂಸಕುಟುಂಬಿನಿಯುಂ ಮಯೂರಿಯೆಂ ।
ದೆಳಸೆ ಶಿಖಾವಳಂ ಪುದಿದುದಂಧತಮಂ ಭುವನಾಂತರಾಳಮಂ ॥ (೩೨)

ವ॥ ಅದಲ್ಲದೆಯುಮುದರ ಭೂಧರಪ್ರಭೃತಿ. ಗಿರಿದುರ್ಗವರ್ಗಮುಂ ಪರಿಮುತ್ತುಮುತ್ತಿ ಮಾರ್ತಂಡ ಚಂಡರೋಚಿಯನಜಸಲೆತ್ತಿ ಪೊತ್ತಿಸಿದ ದೀವಿಗೆಗಳೆನಿಸಿ ಮಿಸುಪ ಖದ್ಯೋತ ಜಾತಮುಂ ಸೆಗಪಿಯುಂ, ಪಗಲೊಳ್ ನಿಕುಂಜಗಹ್ವರ ದರೀಕುಹರದಿಟ್ಟೆಡೆಯೊಳೊತ್ತಿರ್ದ ಕತ್ತಲೆಯುಮಂ ಕೂಡಿಕೊಂಡು ದುರ್ಧರಾಧಿತ್ಯಕಾಸ್ಥಳಿಯನೆಡರ್ದು ಹರಿನೀಳಶೃಂಗಸಂಕುಳವ್ಯಾಜದಿಂ ನಿಜಜಯಸ್ತಂಭ ನಿಚಯಮುಂ ನಿಱಿಸಿಯುಂ, ಉಪವನಪ್ರದೇಶದೊಳ್ ಬೀಡುವಿಟ್ಟು ತಿಮಿರರಿಪುವ ಪಗೆಯುಂ ಬಗೆದು ಪದ್ಮಿನಿಯನಿನವಿಯೋಗ ವಿಧುರೆಯುಂ ಪರಿಭವಿಸಿ ತತ್ಕೋಶಲಕ್ಷ್ಮಿಯುಂ ಕೆಯ್ಕೊಂಡುಂ, ವಿಧುವಿನ ಮುನಿಸುತಂಪಾದಾಗಮೌತ್ಸುಕ್ಯ ವಾಸಕಸಜ್ಜೆಯುಂ ಕುಮುದ್ವತಿಯನುದ್ಧತ ಭ್ರಮರರೂಪದಿಂ ರಮಿಯಿಸಿಯುಂ, ಆತ್ಮಾಂಗಸ್ವರೂಪದೊಳೆ ರಾಜಾರ್ಕತೇಜಂಗಳುಮನಲಿದು ಸಲೆನಿಂದ ಬಲ್ಪಿನ ತಮಾಳಕ್ಕೆ ನಿಜರಾಜ್ಯಲಕ್ಷ್ಮಿಯುಂ ನಿರವಿಸಿಯುಂ, ಉಱಿದ ತರುಗಳುಮನಾತಮಾಳದ ಪದವಿಯೊಳ್ ಪೊರೆದುಮಿರದೆ ಪುರವರಂಗಳನುರವಣಿಸಿ ಪೊಕ್ಕು ಬೀದಿವೀದಿ

ಯೊಳ್ ಗಾಳಿ ನುಸುಳದಂದದಿಂ ಮಂಪಯ್ಸಿಯುಂ, ತನ್ನ ಬರವಿನಾತಂಕದೊಳ್ ಕೇಳೀ ಕಪೋತ ಕೂಜಿತವ್ಯಾಜದಿಂ ಕೂಗಿಡುವ ಗಣಿಕಾವಾಟಮಂ ಪ್ರೇಕ್ಯ ಮುಗ್ಧಮಧುಕರೋಕ್ತಿ ಸಾರಿಕೆಯರಪ್ಪ ಪಲರುಮಭಿಸಾರಿಕೆಯರಂ ಕೆಯ್ಕೊಂಡುಂ, ಉತ್ತುಂಗ ಚೈತ್ಯ ಕೂಟಕೋಟಿಗಳನಡರ್ದು ಕಣ್ಗೊಳಪ ಮಣಿಕನಕಕಲಶದೀಪ್ತಿಗಳನಪಹರಿಸಿಯುಂ, ಭರ ದಿನರಮನೆಗೆ ಪರಿಯಿಟ್ಟು ಕಟ್ಟಿದಾನೆಗಳ ದಂತಕಾಂತಿಯಂ ಕಿಟ್ಟಿ ಕಳೆದುಂ, ಉದ್ಧುರ ಸುಧಾಗಾರ ದೀಧಿತಿನಿಧಾನಮಂ ಸೂಱೆಗೊಂಡುಂ, ಉನ್ನತ ಹರ್ಮ್ಯಪಟಳ ಪ್ರಘಣ ಪಾಳಿಕೆಗಳನಾಮಯೂರರೂಪದಿಂ ಕಾಪುಗೊಂಡುಂ, ಅಂತಃಪುರವಧೂಕದಂಬ ಕದಂಬಕದ ಮುಡಿಗಳಂ ಪಿಡಿದು ಕಡೆಗಣ್ಣಕಾಂತಿಗಳೊಳಿಕ್ಕ ತುಳಿವಿಕ್ಕಿಯುಂ, ಮತ್ತಮೊತ್ತರಿಸಿ ಬಯಲೊಳ್ ಬೀದಿವರಿದುಂ, ಬಟ್ಟೆಯೊಳ್ ಬಿಟ್ಟಂಬರಿದುಂ, ಅಡವಿಯೊಳ್ ಬಿಸಟಂಬರಿದುಂ ಉರ್ವಿಯಂ ಪೂೞ್ದುಂ, ಆಗಸಮನೊತ್ತಿಯುಂ, ದೆಸೆಗಳಂ ಕೆತ್ತುಂ, ಇಂತು ತತ್ತವೋಲ್ಬಳಂ ಮುಳಿದು ಮದನಚಕ್ರಿ ಬೆಸಸಿದಾಟವಿಕ ಶಬರಬಳಮೆನಿಸಿ ಸಕಳ ಜಗಮನಂಡಲೆದು ನೆಲಸೆ—

ಕಂ॥ ಕ್ಷೋಣೀತಳಂ ತೀವೆ ತಮಂ ।
ಮಾಣದೆ ಸೋರ್ದುಡುಗೆ ಸುರಿದ ವಿವರಮುಖೀಗಳ್ ॥
ಕಾಣಲ್ ಬಂದಪುವೆನೆ ಗೀ ।
ರ್ವಾಣ ಪಥಾಂತರದೊಳುಣ್ಮಿದುವು ತಾರಗೆಗಳ್ ॥ (೩೩)

ವ॥ ಮತ್ತಂ—

ಕಂ॥ ಒಗೆದುವೊ ರವಿರೋಚಿಸ್ತ ।
ಪ್ತಿಗೆ ಬೆಮರ್ವನಿ ಗಗನಲಕ್ಷ್ಮಿಗತಿತಾಪದೆ ಮೇಣ್ ॥
ಪುಗುಱುಣ್ಮಿದುವೋ ಪೇೞಿನೆ ।
ಸೊಗಯಿಸಿದುವು ತರದೆ ತುಱುಗಿ ತಾರಾವಳಿಗಳ್ ॥ (೩೪)

ವ॥ ಆಸಮಯದೊಳ್—

ಕಂ॥ ಪುದಿದ ತಿಮಿರಾಳಿಕುಳಮಂ ।
ಬೆದಱಿಪ ಸಂಪಗೆಯ ಮಿಸುಪ ಮುಗುಳ್ಗಳಿವೆಂಬಂ ॥
ದದೆ ಬೆಳಗಿನ ಬಿತ್ತುಗಳೆನಿ ।
ಸಿದ ಸೊಡರ್ಗುಡಿ ತೊಳಗಿ ಬೆಳಗಿದುವು ಮನೆಮನೆಯೊಳ್ ॥ (೩೫)

ವ॥ ತದನಂತರಂ—

ಕಂ॥ ಅದಿರ್ದ ಸತೀನಯನಝಷಂ ।
ಬೆದಱೆ ತಮೋಹ್ರದದೋಳ್ತನು ನಾಗುರಿಕಂ ಬೀ ।
ಸಿದ ಜಾಳಮೆನಿಸಿ ನಿಮಿರ್ದ ।
ತ್ತುದಯಾದ್ರಿಯ ದರಿಯೊಳಮೃತಕರ ಕರಜಾಳಂ ॥ (೩೬)

ಕಂ॥ ಪರೆದು ತಮಕ್ಕೊಡ್ಡಿದ ಸಾಂ ।
ಧ್ಯರಾಗಮನಿತುಂ ನಿಜಾಭಿಭವಮಂ ಕಳೆಯಲ್ ॥
ನೆರೆದಿಂದ್ರನಾಸೆಯಿಂ ಮುಗು ।
ೞೞ ರೂಪುದೋಱುವವೊಲೊಗೆದುದ್ಯಂದವ ಬಿಂಬಂ ॥ (೩೭)

ವ॥ ಮತ್ತಂ—

ಕಂ॥ ಆಗಳೆ ಸಿಂಧೂರದ್ಯುತಿ ।
ಗಾಗಳೆ ಕೋಕನದ ಕಾಂತಿಗಾಗಳೆ ವಕುಳ ॥
ಶ್ರೀಗೆ ನೆಲೆಯಾಗಿ ಹಿಮಕರ ।
ನಾಗಳೆ ಸಂಸ್ಕೃತಿಯ ಸಿರಿಗೆ ಕನ್ನಡಿಯಾದಂ ॥ (೩೮)

ವ॥ ಆಗಳ್—

ಕಂ॥ ಮನದೊಳಮಾದರಿಸದೆ ತಂ ।
ನನೆಯುೞಿಕೆಯ್ದರ್ಪ ತುದಿಯ ದಿವಮನದಿರ್ಪಲ್ ॥
ಮುನಿದು ತಲೆವರಿಗೆಗೊಂಡತ ।
ನು ನಭಮನಡರ್ಪನೆನಿಸಿದಂ ಶಶಲಕ್ಷ್ಮಂ ॥ (೩೯)

ವ॥ ಅದಲ್ಲದೆಯುಮಾವಗಂ ಪಗಲೊಳೆ ಹಿಮದಾಮದೀಧಿತಿ ಪಿಮರ್ದದಿನುದ್ದ ಮುರಿವ ರವಿಸಿಳಾಜ್ವಾಳಾಜಾಳದೆ ಕರಿಂಕುವರಿದುದಯಭೂಧರಮನಾತ್ಮಕರಸಂಭೃತಸುಧಾಸೇಕದಿನಾಱಿಪೆಡೆಯೊಳ್ ಉಣ್ಮಿದ ತದೂಷ್ಮಪಾತದಿಂ ಕಂದಿದಂತೆಯುಂ, ನಿಜಕರದೆ ಬರೆ ತೆಗೆದು ತವೆ ಪೀರ್ದ ಸಂತಮಸಮಾತ್ರೀಯ ವಿಶದಾತಿಶಯದಿಂ ಪೊಱಗಣ್ಗೆ ಮಿಱುಗಿದಪುದೆಂಬಂತೆಯುಂ ಭೂಭುವನಮಾವಗಂ ತೀವೆ ಕವಿವ ಕೌಮುದೀಪ್ರವಾಹದ ನಿರ್ಗಮದ್ವಾರದಂತೆಯುಂ, ಕಾಂತಿವೆತ್ತ ನಿಜಲಕ್ಷ್ಮಲಕ್ಷ್ಮಿಯಿಂ ಮನಸಿಜನ ವಿಜಯಧ್ವಜದ ಮಕರಪಾಳಿಕೆಯೊಳ್ ಕೀಲಿಸಿದ ಬಿರುದಿನ ಕನ್ನಡಿಯುದೆನಿಸಿಯುಂ, ವಿರಹಿಮಾರಣಕ್ಕೆ ಮದನಸಿದ್ಧನುದ್ಧರಿಸಿದ ಯಂತ್ರಪಟಮಿಂತಿದೆನಿಸಿಯುಂ, ಗಗನಕಾಮಿನಿಯ ಕೆಯ್ಯೊಳ್ ಪದನಿಕ್ಕಿದಂಪಿನ ಕತ್ತುರಿಯ ಬೆಳ್ಳಿವಟ್ಟಲೆನಿಸಿಯುಂ ನಿಶೀಥಿನೀನಾಥನಂಬರತಳಾಂಬುಧಿಗೆ ಕಂಬುಕಂದಳಮಾಗೆ—

ಕಂ॥ ಇಡಿದ ತಮಮೊರ್ವೊದಲ್ ತೆಗೆ ।
ದಡಂಗೆ ಜಗಮೆಯ್ದೆ ಕಾಣಲಾದತ್ತಿತರರ್ ॥
ನುಡಿವವೊಲಗಸ್ತ್ಯಮುನಿ ಪೀ ।
ರ್ದೊಡೆ ಕಡಲೀ ತೆಱದಿನಿರ್ಕುಮೆಂಬಂತಾಗಳ್ ॥ (೪೦)

ವ॥ ತದನಂತರಂ—

ಕಂ॥ ಕಳೆಯೆ ವಿಧು ಕರಸಹಸ್ರಂ ।
ಗಳನೊಳಗಣ ತಿಮಿರಪಂಕಮಂ ಶಶಿಮಣಿ ನಿ ॥
ರ್ಮಳ ಸಲಿಲ ಶ್ರುತಿ ಭುವನ ।
ಸ್ಥಳಮಂ ತೀವಿದವೊಲಾದುದೆಳವೆಳ್ದಿಂಗಳ್ ॥ (೪೧)

ಆರೆ ನವವಿಧತಮೋಮಯ ।
ವಾರಿದತತಿ ಕಱೆದು ಕರಗೆ ತೀವಿದುದು ಪಯಃ ॥
ಪೂರದೆ ಭುವನೋದರಮೆನೆ ।
ರಾರಾಜಿಸಿದುದು ಸುಧಾಂಶು ರುಚಿವಿಸ್ತಾರಂ ॥ (೪೨)

ತರಳ॥ ದೆಸೆಯೆ ಮುತ್ತಿನಭಿತ್ತಿ ಧಾತ್ರಿಯೆ ಚಂದ್ರಕಾಂತದ ರಂಗಮಾ ।
ಗಸಮೆ ಚೀನವಿತಾನಮಾಗೆ ವಿಚಿತ್ರಮಂಡಪಮಂ ವಿಗು ॥
ರ್ವಿಸಿದನಾತ್ಮಸುತಾವಿವಾಹ ಮಹೋತ್ಸವಕ್ಕೆ ಖಗೇಶ್ವರಂ ।
ಪೊಸತಿದೆಂಬಿನೆಗಂ ಪ್ರಕಾಶಿಸಿದಂ ಸುಧಾದ್ಯುತಿ ಲೋಕಮಂ ॥ (೪೩)

ವ॥ ಮತ್ತಮುತ್ತುಂಗ ಪ್ರಾಸಾದಸೌಧಸದನಂಗಳ ನೆಬಿಲನೆವದಿನೊತ್ತುಗೊಂಡ ಕಟ್ಟಲೆಯಂ ತತ್ಸ್ವರೂಪದೊಳೆ ಗಳಿಲೆನೆ ನುಂಗಿಯುಂ, ಪ್ರತಿಬಿಂಬಮಂಡಲ ಚ್ಛಲದೆ ಹರಿನೀಳಕುಟ್ಟಮತಮಃಸಮುದಯಕ್ಕೆ ಮುನಿದಱಗಿಯುಂ, ಮುಡಿವೊಱೆಯ ವಿಷಯದೆ ಮುಱಗೆವಂದಂಧತಮಸಮಂ ಪೆಱಗಿಕ್ಕಿ ತನ್ನೊಳ್ ಮಲಿನ ಲಲನೆಯರ ವದನವಿಧುಬಿಂಬದೊಳ್ ಕಪೋಳಸಂಭೃತ ಪ್ರತಿಕೃತಿಚ್ಛದ್ಮದಿಂ ಪೊಕ್ಕು ಪೋರ್ಕುಳ ಯಿಕ್ಕೆಯುಂ, ಅಳಿವ್ರಜವ್ಯಾಜದಿಂ ಮರ್ವನೊಳಕೆಯ್ದು ನಳಿನಿಯಂ ಬಳಸಿ ಕಳಹಂಸ ಮೂರ್ತಿಯಿಂ ಮುತ್ತಿಯುಂ, ಪೆರ್ಮರಂಗಳೆಲೆ ಮಱೆಗಳೊಳ್ ತಲೆಗರೆದಿರ್ದ ತಿಮಿರದ ಬಳಗಮಂ ಬಳಾಕವ್ಯಪದೇಶದಿಂದೆಱಗಿ ಸೆಱೆಗೆಯ್ದುಂ, ಅಧೋಭುವನವಿವರಮನೋಡಿ ಪೊಕ್ಕ ಸಂತಮಸಸಂತತಿಯ ಬಱಿಯೊಳೆಳೆಯಂ ಬಗಿದು ಪುಗುವಂತಿರೆಳಸಿ ತ್ರಿಳಿಗೋಳಂಗ ಳೊಳು ಮಾರ್ಪೊಳೆದುಂ, ಆತ್ಮೀಯ ಪರಮಸುಖಮನಸಿಶಯ ದಾಸೀಕೃತಾಖಿಳ ವಿಳಾಸಿನೀಲೋಕಂ ಲೋಕಾವಳೋಕನಾನಂದನಂ ವಿಭಾಪರೀವದನಮುಳಯರುಹ ತಿಳ ಕನುಮೆನಿಪ ತಾರಕಾವಲ್ಲಭಂ ನಭೋಮಂಡಳಾಸ್ಥಾನಮಂಡಪಮಧ್ಯವರ್ತಿಯಾಗೆ—

ಕಂ॥ ರಜತಗಿರಿ ನಿಜಖಗೇಶಾ ।
ತ್ಮಜೆಯ ವಿವಾಹಕ್ಕೆ ಕಳಿಪಿದುದು ನಿಬ್ಬಣಮಂ ॥
ನಿಜಕಾಂತಿ ಸಂತತಿಯನೆನೆ ।
ವಿಜೃಂಭಿಸಿತ್ತಮಳ ಕೌಮುದೀವಿಸ್ತಾರಂ॥ (೪೪)

ವ॥ ಅನಂತರಮಂತರ್ನಿಮಗ್ನ ಸಕಳಜಗದವದಾತ ದ್ರವ್ಯಸರ್ವಸ್ವಮಾದ ನಿಜ ನಿಬಿಡ ಬಹಳ ಪ್ರವಾಹದೊಳಾಸ್ಯಗತ ಬಿಸಕಬಳ ಶಕಳಮಂ ಕಳಹಂಸ ಕಾಣದೆ ಕೊಳನ ತೆರೆಗೊನೆಯ ತುಱುಗಲೊಳ್ ಪಱಿವಱಿಯಾಡಿ, ಮಿಱುಗುವ್ವೆಂದವ ಪ್ರತಿಕೃತಿಗಳಂ ಕರ್ದುಂಕಿ ಕೋಟಲೆಗೊಳೆಯುಂ, ಅಲಗೊರ್ಂಚಲಂ ಚಂಚರೀಕಶಾಬಕಂ ಕಾಣದುದ್ದೆಶಕ್ಕೆ

ಬಯಲೊಳೆಱಗಿ ಬಱಿದೆ ಬೇಸಸಂಬಡೆಯೆಯುಂ, ಅರ್ಥಿಯಿಂ ಪೂಗೊಯ್ವ ಮುಗ್ಧಲಲನೆಯರ್ ಮಲ್ಲಿಗೆಯ ಗಿಡುಗಳೊಳ್ ಮುಗುಳ್ಗಳಂ ಕಾಣದೆಱಗಿರ್ದ ಬಱಿಯ ಪಱಿಮೆಗಳ ಮಾಲೆಯನೆ ಕಂಡು ಕರಿಯಮಲ್ಲಿಗೆಯಿವೆತ್ತಣವೆಂದು ನಿಂದು ನೋಡೆಯುಂ, ಮೇಲ್ಮೊಂಡದುಗುಲಮಂ ಕಾಣದಱಿಸಿ ತಡವರಿಸಿ ಕೆಲಬರಬಲೆಯರ್ ಕೆಲದ ಕೆಳದಿಯರ ನೆರವಿಯಂ ನಗಿಸೆಯುಂ, ನೆಗೆದ ಕೋಟ್ಟಿಗಳಂ ಕಾಣದೆ ಕೆಲದ ಯೂಥಪತಿಗಳಂ ಪಿಡಿಗಳೆಂದಿರದೆ ಪಿಡಿದಿಳಿಕೆಯ್ಯೆಯುಂ, ಎರಳೆಗಳಧಃಕಾಯಭಾಗಮಂ ಕಾಣದಣಮೆ ಬಡವಾದುವೆಂದು ಹರಿಣಿಗಳ್ ಕರಮೆ ಕೊರಗೆಯುಂ, ಅಲಕ್ಷಿತಬಲಕ್ಷಭಾಗಮುಪ್ಪ ಲಲನೆಯರ ಕಣ್ಬೊಣರ್ತುಱುಂಬಿಗಳ ಪೋಲ್ವೆಯಂ ನೆಱೆಯೆ ಮೆಱೆಯೆಯುಂ, ವಿಘಟಿತಮನೋರಥಂ ರಥಾಂಗಮಂಗಜನ ಬೀಸಿದ ಬಲೆಯಿದೆಂದು ನಡುಗಿ ಕಾಲ್ಗಿಡೆಯುಂ, ಗವಾಕ್ಷವಿವರಾವತೀರ್ಣ ದೀಧಿತಿವಿತಾನದಿಂ ಭವನಾಂತರಂಗದೊಳ್ ಬೇರ್ವರಿದುಮತಿಶೀತ ಸುಧಾಸದನ ಸಂಭೃತ ಪ್ರಭಾಪುಂಜಂಗಳಿಂ ಕಂದಳಿತಮಾಗೆಯುಂ, ಆಕೀರ್ಣ ಪರ್ಣಸಂತಾನ ಕಾಂತಾರಾಂತವಕಾಶಾವಗೂಢರಶ್ಮಿರಾಜಿಯಿಂ ಬನಗಳೊಳ್ ಬೀಟಿಲ್ವರಿದುಮಿತಸ್ತತಃ ಪ್ರಚರದಭಿಸಾರಿಕಾವೃತದುಕೂಲಪಲ್ಲವಂಗಳಿಂ ಪಲ್ಲವಿತಮಾಗೆಯುಂ, ಉಲ್ಲಸಿತ ಪ್ರವಲ್ಲಿಕಾಪಾನಗಾನಾದಿ ವಿವಿಧ ವಿನೋದ ವಿಧಾಯಿ ಬಾಳಕಾಲೋಳಲೋಚನ ಮರೀಚಿಪುಂಜವಿಸರದಿಂ ಕುಸುಮಿತಮಾಗೆಯುಂ, ಆಂದೋಳಜಾಳನೋಚ್ಚಳಿತ ಚೇಳಕಾಂಚಳ ವಿಳಾಸಿನೀವುಳಯರುಹ ಧವಳ ಕುಚಮಂಡಳಂಗಳಿಂ ಫಳಿತಮಾಗಿಯುಂ, ಮಣಿಕಳಶಮಾತ್ರಾಯಮಾಣ ಪ್ರಾಸಾದಹರ್ಮ್ಯನಿವಹಮುಂ, ಕಳವಿರುತಿಮಾತ್ರಾಯಮಾಣ ಕಳಹಂಸಕುಳಮುಂ, ಆಮೋದಮಾತ್ರಾಯಮಾಣ ಕುಮುದ ಪ್ರಮುಖ ಸಮಸ್ತ ಸುಮನಸ್ತಬಕಮುಂ ಕಳಂಕಮಾತ್ರಾಯಮಾಣ ಸ್ವಕೀಯಮಂಡಳಮುಂ ಆಗಿ ವಿಮಳಚಂದ್ರಿಕಾ ಸಾಂದ್ರಪೂರಮಖಿಳ ಭುವನೋದರಮನಾವಗಂ ಬೆಳಗಿ ಬೆಡಂಗುವಡೆಯೆ—

ಕಂ॥ ಚಲದಿನಱಿಯಟ್ಟೆ ಚಳಮಂ।
ಡಲಾಗ್ರ ಕರದಿಂ ಸುಧಾಂಶು ನೇರ್ದಿಕ್ಕಿದ ಕ॥
ಟ್ಟಿಲೆಗಳ ತಲೆಗಳೆ ದಿಟಮೆನಿ।
ಸಲಾರ್ತುವಲ್ಲಲ್ಲಿ ನಿಂದ ಮರದ ನೆೞಲ್ಗಳ್ ॥ (೪೫)

ಜೊಕದೊಳಿರೆ ನೋಡಿ ನಲಿವಗ।
ಲೆ ಕೊರಗುವಿನಿತೆ ಸ್ವಬಂಧು ರುಚಿಯಿಂ ಶಶಿಗಾ॥
ದಕಳಂಕ ಲವಮುಮುಂ ಪ।
ಚ್ಚುಗೊಂಡುವೆನೆ ತಳೆದುವಳಿಗಳಂ ಕುಮುದಿನಿಗಳ್ ॥ (೪೬)

ಭೃತೆಸುರಭಿಗರ್ಭಗತಿಮೋ।
ಚಿತ ಪೃಥುಮಧ್ಯೆಯ ವಿಪಾಂಡುರಾಸನೆಯು ಕುಮು॥
ದ್ವತಿಯು ಪ್ರಸವೋತ್ಸವ ಭವ।
ವಿತತಾನಕ ರುತಿವೊಲೆಸೆದುದಳಿ ಬಹಳ ರವಂ॥ (೪೭)

ವ॥ ಆಸಮಯದೊಳ್—

ಚಂ॥ ಚಳನತಳದ್ಯುತಿಜ್ವಲದೆ ಕಂಬಿಸಿಲಂ ಕಿಡೆಸುಟ್ಟಿ ಕುಂತಳ ।
ಚ್ಛಳದೆ ತಮಂಗಳಂ ಮುಸುಕಿನೊಳ್ ಸೆಱಗೆಯ್ದು ಚಳದ್ವಿಲೋಚನಾಂ ।
ಚಳವಿಳಸನ್ನವೇಂದುಮುಕಳೆ ಸಾಂದ್ರತನುದ್ಯುತಿ ನೂತ್ನಚಂದ್ರಿಕೋ ।
ಜ್ವಳೆ ಪೊಱಮಟ್ಟಳೊರ್ವಳಭಿಸಾರಿಕೆ ಭೂಚರ ಚಂದ್ರಮೂರ್ತಿವೋಲ್ । (೪೮)

ವ॥ ಮತ್ತಂ—

ಉ॥ ಇಂಗದಿರಿಂದೆ ನೆಯ್ದುದೆನಲಪ್ಪ ದುಕೂಲದ ಕಮ್ಮನಪ್ಪ ಬೆ ।
ಳ್ದಿಂಗಳಿನಲ್ಕೆ ಬರ್ಪ ಸಿರಿಖಂಡದ ಜೊನ್ನದ ಚಿತ್ರವೆಂಬ ವಾ ।
ತಿಂಗೆಡೆಯುಪ್ಪ ಮಲ್ಲಿಗೆಯ ಕಾಂತಿ ಮುಸುಂಕೆ ತೊಬಲ್ವಕಂತು ಕೇ ।
ತ್ನ್ಯಂಗನೆಯಂದದಿಂದ ನಡೆತಂದೊಡಗೂಡಿದಳೊರ್ವಳೋಪನೊಳ್ ॥ (೪೯)

ಚಂ॥ ಬರೆ ತೆಗೆದಿಂಟಿ ಸುಣ್ಣದರೆ ಪೊಣ್ಮಿದ ಬಾಯ್ ಕದಪಂ ಕದಂಪಿನಿಂ ।
ದೊರಕೆ ಪಗಿಲ್ತ ಕತ್ತುರಿಯ ಪತ್ರಲತಾಂಕುರದಸ್ಕೆ ತೆಸ್ತ ನಿ ।
ರ್ಭರಪರಿರಂಭದೊಳ್ ಪೊರೆದ ಕುಂಕುಮನುಂದಿತರಾಂಗಸಂಗಮಂ ।
ನಿರವಿಸುತಿರ್ದೊಡಂ ಶಶಿಕರಾವೃತಲೋಚನ ಕೈತಳೋಪನಂ ॥ (೫೦)

ವ॥ ಅಂತುಮಲ್ಲದೆಯುಂ—

ಮ॥ ವಳಿತಭ್ರೂಲತಿಕಂ ದುರುಕ್ತಿಮುಖರಂ ಕಾಂತಪ್ರಸಾದಂ ಸ್ಮಿತೋ ।
ಜ್ವಳಮುದ್ವೃತ್ತಪುಳಕಂ ಯಥಾಭಿಮತ ನಾನಾಲಾಲನಂ ಸ್ವೇದಶೀ ।
ತಳಮುಚ್ಛ್ವಸನಂ ಶ್ರಮಸ್ತಿಮಿತಗಾತ್ರಂ ಕಾಮುಕಾನೀಕಮಂ ।
ದೊಳಪೊಕ್ಕೆಯಿದ್ದುದೊಯ್ಯನೊಯ್ಯನೆ ರತಿಕ್ರೀಡಾಪಗಾಪೂರಮಂ । (೫೧)

ತೆಱಪಿಂ ನೀಳ್ಕೆ ಗವಾಕ್ಷಮಂ ತೆಱೆವ ನೀರಂ ಮುಕ್ಕುಬಿಳ್ ತೀವಿ ಕೊಂ ।
ಡೆಱಪಿರ್ಗೆಯ್ದಳೆ ಗೂಡುವಾಯ್ವುದೆಯುನಂತಂ ತಣ್ಪತಾಂಬೂಲಮಂ ।
ನೆಱೆ ಮೆಲ್ಲಿವುಗುರ್ವೊಯ್ಲನೂದುವ ಸೆಱಂಗಿಂ ಬೀಸುತಿರ್ಪೋಪರ ।
ಬ್ಬಿಱಲಂಪಂಗನೆಯರ್ಗೆ ರಾಗಮನವೇಂ ಮಾಡಿತ್ತೊ ರತ್ಯಂತದೊಳ್ । (೫೨)

ವ॥ ಅಂತಪಿಳ ಕಾಮುಕನಿಕಾಯಮುಮಿರಳ ಸುಖಾವಗಾಹದೊಳ್ ನಾಡೆ ತೇಂಕಾಡಿ ತಣಿವಿನಮನಂಗಜಳನಿಧಿಯುಂ ನೆಲೆವೆರ್ಚಿಸಿ ನಿರತಿಶಯ ಕೌಮುದೀಪೂರಮುಸದಳಂ ಬಳೆದು ಬೆಳಗುತಿರ್ಪಿನಂ—

ಕಂ॥ ಓಪಳ ಬಟಿಯೊಳ್ ಕಳಿಪಲ್ ।
ಪೋಪಂದದೆ ಪೋಗೆ ಕಣ್ಗಳುಂ ಮನಮುಮವಂ ॥
ಭೂಪತಿ ಬರಪಾರ್ದಿರ್ಪವೊ ।
ಲಾಪೊಱಿಪ್ಪಿಸೆಗಮಿರ್ದ ತೆಜಿದಿಂದಿರ್ದಂ ॥ (೫೩)

ವ॥ ಅಂತಿರ್ದನಂತರಮೆಂಕಾನುಮಲ್ಲಿಂದೆಬ್ದು ಹರ್ಮ್ಯಭೂಮಿಕಾತಳದಿಂ ಭೂಮಿತಳಕ್ಕವತರಿಸಿ ಸೆಜ್ಜೆವನೆಗೆ ಬಿಜಯಂಗೆಯ್ದು ನಿಜಮನೋವಲ್ಲಭೆಯ ರೂಪಲಾವಣ್ಯಸೌಂದರ್ಯ ದೇಶೀಯ ವೇಷಮುಮನತಿಶಯಮನಾಶಯದಶಾತ್ರಿಭರಮುಮನಾತ್ಮಾಂತರಂಗ ಭಿತ್ತಿಯೊಳ್ ಚಿತ್ರಿಸಿದಿಂದುವ ವಚಿತ್ರ್ಯ ರಚನೆಯುಂ ನಿಜವಿಲೋಚನಪ್ರವಿಶತ್ಸಮಯ ಸಮುದಿತ ತದೀಯ ಸಾತ್ವಿಕ ಪ್ರಣಯಭಾವರಸ ಭಾವನೆಯನಭಿನವಮಾಗೆ ಭಾವಿಸುತ್ತುಂ, ಅವಿದಿತನಿದ್ರಾವೇಶನುಂ ಉತ್ಕಟೋತ್ಕಲಿಕಾಸಮುನ್ಮೇಷನುಮಾಗ ವನಜಾಕ್ಷನಿರ್ಗಮನಾಗಳ್ ಪರಸ್ಪರ ಸಮಾಗಮೋತ್ಕಂಠೆಯಿಂ ತನ್ನ ಪ್ರೇಪ್ರದನೆಪಾದುರ್ಗ ಮನದೊಳಡಪಡಿಸುತಿರ್ಪ್ಪವೇಂದ್ರನ ಖಗೇಂದ್ರಸುತೆಯ ರತಿಲಾಲಸೆಗೆ ಲಜ್ಜಿಸಿ ತೊಲಗುವಂತೆ ಮುಕುಳಾಯಮಾನ ಕುಮುದನಯನೆಯುಂ, ಅಪಾವೃತ್ತ ವಿಧುವದನೆಯುಮಾಗಿ ರಜನಿಮೆಲ್ಲನೆ ಮೆಯ್ದೆಗೆಯೆ—

ಕಂ॥ ಜ್ವಳನಜಟಿ ಪ್ರೋದನಾಧಿಪ ॥
ನಿಳಯಂಗಳೊಳೊಸಗೆ ವಸದನಂಗೊಳ್ವಬಳಾ ।
ವಳಿಯ ಮಣಿಮಯ ವಿಭೂಷಣ ॥
ವಿಳೋಕಮೊಡನೊಡನೆ ಬೆಳಗೆ ಬೆಳಗಾಯ್ತಾಗಳ್ ॥ (೫೪)

ಆಪದದೊಳ್ ಗಣಕಗಣ ।
ಸ್ಥಾಪಿತ ಜಳಭಾಂಡನಿಹಿತ ಘಟಿಕಾಪಾತ್ರಂ ॥
ಸಾಪತ್ನಂ ಬೆತ್ತಿರೆ ಗಗ ।
ನೋಪಾಂತದೊಳೊಗೆದು ಸೊಗಯಿಸಿತ್ತಿನ ಬಿಂಬಂ ॥ (೫೫)

ವ॥ ತದನಂತರಂ—

ಚಂ॥ ಹರಿಗಭಿಷೇಕಮಂಗಳ ವಿಭೂಷಣ ಮಂಗಳ ಮುಖ್ಯ ಮಂಗಳಾ ।
ಚರಣಮನೆಯ್ದೆ ಮಾಡಿ ಜನನೀ ಜನಕರ್ ತದಶೇಷ ಕೃತ್ಯದೊಳ್ ।
ಪರಿಜನದೋಳಿಯಿಂ ಪರಿವ ತಮ್ಮಯ ಲೀಲೆಯನಿಂದ್ರ ಲೀಲೆಯಿಂ ।
ಪಿರಿದುಮಿಸರ್ಗಮೆಂದೆ ಬಗೆದಂಗಡಿದೇಂ ಪ್ರಣಯ ಪ್ರಮತ್ತರೋ । (೫೬)

ವ॥ ಅನ್ನೆಗಂ ಜ್ವಳನಜಟಿ ಮಹಾರಾಜನಟ್ಟಿದ ಮಹತ್ತರರ್ ವಂದು "ದೇವ ಕನ್ಯಾವಿವಾಹಮಾತ್ರಗೃಹವಿಧೇಯಮಾಗಿರ್ಪುದಱಿಂ ದೇವರ ಬಿಯ್ಯಗಂ 'ಪ್ರಭುರ್ಯದೇವೇಚ್ಛತಿ ತತ್ಕರೋತಿ' ಎಂಬ ನೀತಿಯುಂ ಸನ್ನಿಮಾಡಿ ತನ್ನ ಬಿಟ್ಟಿರ್ದ ಲೀಲಾವನಮೆ ಭವನಾಂಗ ಕಲ್ಪಭೂಜಮಾದುದೆನೆ ವಿವಾಹವೇದಿಕಾ ಮಂಡಪಪ್ರಧಾನ ಪ್ರಾಸಾದ ಸೌಧಶಾಳಾದಿಸುಭಗ ಶೋಭನ ಮಣಿಭವನಮುಂ ವಿದ್ಯೆಯೊಳ್ ನಿರ್ಮಿಸಿ ವಿವಾಹಕಲ್ಯಾಣಮನಸ್ಲಿಯೆ ಮಾಡ್ಪ ಸಮಕಟ್ಟಂಪಟ್ಟುದಂ, ನಿವರ್ತಿಪ ಮುಹೂರ್ತಮೆ ವಿವಾಹಮಂಗಳಮುಹೂರ್ತಮಪ್ಪುದಱಿಂ ತಡೆಯದೆ ಬಿಜಯಂಗೆಯ್ವ್ಯ" ಮೆಂದು ಬಿನ್ನವಿಪುದುಂ—

ಚಂ॥ ಗಗನಚರಾಧಿರಾಜನನುಚಿತಜ್ಞತೆಗಂ ಪರಮಾನುರಾಗ ವೃ।
ತ್ತಿಗಮತಿಶಾಯನಂ ಬಡೆದ ಸಂಪದಕಂ ಸ್ಮೃತಿಮಾತ್ರ ಕಾರ್ಯಸಿ॥
ದ್ಧಿಗಮುವದಾತ ಬುದ್ಧಿಗಮುದಾರತೆಗಂ ಧರಣೀಚರೇಶ್ವರಂ।
ಮಿಗೆ ಪರಿತೋಷಮಂ ಹೃದಯದೊಳ್ ತಳೆದಂ ವಸುಧೈಕಬಾಂಧವಂ॥ (೫೭)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾನಂದ
ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ
ಶ್ರೀವರ್ಧಮಾನ ಪುರಾಣದೊಳ್ ಸ್ವಯಂಪ್ರಭಾ
ಸರೋಜನಾಭ ಪರಸ್ಪರ ನಿರೀಕ್ಷಣ ವರ್ಣನಂ
ಷಷ್ಠಾಶ್ವಾಸಂ

ಸಪ್ತಮಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಶ್ರೀದನುಜಾರಿಯ ಪರಿಣಯ ।
ನೋದಯಮುಮಂ ನೋಡಿಯಲೆಂದು ಖಗಪತಿ ಸದನ ॥
ಕ್ಕಾದರದೆ ಪೋಗಲುದ್ಯತ ।
ನಾದಂ ವಿಭು ಪಂಚಪರಮಗುರು ಪದವಿನತಂ ॥ (೧)

ವ॥ ಅಂತಾ ಪೋದನಪುರವರಾಧೀಶ್ವರಂ ಸಂಭ್ರಮಕೃತಪ್ರಸಾಧನಂ ಪೂರ್ವನಿರ್ವರ್ತಿತ ಜಿನರಾಜಪೂಜಾವ್ಯಾಪಾರಾಪಾರಸೌಖ್ಯಕರಮುಖ್ಯಮಂಗಳನಖಿಳರಾಜ್ಞೀಜನ ಪ್ರಧಾನಜನ ಕುಮಾರಜನ ಪರಿಜನ ಬಂಧುಜನ ಸಹಸ್ರಂಬೆರಸು ಬಂದು ವರನಂ ಪರಸಿ ಸೇಸಿಕ್ಕಿ ಮುಂದಿಟ್ಟು ನಡೆಯೆ—

ಕಂ॥ ವಿವಿಧಾತೋದ್ಯರುತಿಪ್ರತಿ ।
ರವಮಿಷದಿಂ ಕುಳಕುಭೃತ್ಕುಳಂ ಗೋತ್ರಕುಭೃ ॥
ನ್ನಿವಹಕ್ಕಿದುಚಿತಮೆನೆ ಪರಸೆ ।
ವಿವಾಹಗೃಹಕ್ಕೆ ನಡೆದನಾಗಳುಪೇಂದ್ರಂ ॥ (೨)

ವ॥ ಅಲ್ಲಿ ಸುರಚಾಪಶಕಲಂಗಳೊಳ್ ತಡಂಗಲಿಸಿ ಮಿಳ್ಪಿಪ ತಟಿಲ್ಲತೆಗಳೆನಿಸಿ ಮಣಿಕನಕ ಭಾಜನಂಗಳೊಳ್ ಪಟ್ಟಸೂತ್ರದ ನೇತ್ರದ ಬನದ ಮಹಾಚೀನದ ದೇವಾಂಗದ ಮಂಗಳ ಜವಳಿಗಳನಾಂತು ಬರ್ಪ ಕಾಂತೆಯರೆ ಚಿತ್ರಪಟ ಚಿಹ್ನಾವಳಂಬಿತ ವಿಜಯ ಕೇತನಂಗಳಾಗೆಯುಂ, ಕರ್ಬಿನ ಕೋಲ್ಗಳುಮಲರಬಾಸಿಗಮುಮನಾಂತು ಬರ್ಪ ಕುಲಯುವತಿ ಲೋಕಮೆ ನಿಜಧನುರ್ಧರ ಲೋಕಮಾಗೆಯುಂ, ಮಣಿಪಟಳಿಕಾಕಳಿತ ಮಾತುಳುಂಗ ನಾರಂಗರಂಭಾದಿ ಮಂಗಳಫಲಪ್ರಸೂನ ಭಾರದಿಂ ಭುಜಲತೆಯನಳಂಕರಿಸಿ ಬರ್ಪ ಗಣಿಕಾಜಯಮೆ ಸುರಭಿಸಮಯಮಾಗೆಯುಂ, ಧವಳಾವಹಿತ ಮಂಗಳಗಾಯಿನೀಕುಳಮೆ ಕಳಕಂಠಕುಳಮಾಗೆಯುಂ, ಎತ್ತಿದ ಮುತ್ತಿನ ಸತ್ತಿಗೆಯೆ ನೆಱದಿಂಗಳಾಗೆಯುಂ, ಬಳಸಿ ಪೊಳೆವ ದುಗುಲದ ಕಾಂಡಪಟಮೆ ಚಂದ್ರಿಕಾಪಟಳಮಾಗೆಯುಂ, ಮನೋಜರಾಜನೆ ಜಗದ್ವಿಜಯ ಕೇಳೀಕುತೂಹಲದಿನೆತ್ತಿನಡೆದಪನೆನಿಸಿ ನಡೆತಂದು ತದ್ವಿವಾಹ ಮಂಡಪಮುಂ ಪುಗುವನ್ನೆಗಂ—

ಉ॥ ಪೂವಲಿಗೆಯ್ವ ರಂಗವಲಿಯಿಕ್ಕುವ ಕಾಲ್ಪಳಿಗೊಳ್ವ ಬಾಯಿನಂ ।
ದೀವುವ ಲಾಜೆಯುಂ ಸಮೆವ ಬಣ್ಣವುರಂಗಳನೊಪ್ಪೆ ಮಾಳ್ಪ ನಾ ॥
ನಾವಿಧ ಮಂಗಳಾಚರಣ ದಕ್ಷೆಯರಿಂ ಪತಿಪತ್ನಿಯರ್ಕಳಿಂ ।
ತೀವಿ ಜನಾವಳೋಕ ಹೃದಯಾಸ್ಪದಮಾಯ್ತು ವಿವಾಹಮಂಡಪಂ ॥ (೩)

ವ॥ ಮತ್ತಮದು "ವಿವಿಧ ಮಣಿವಿತಾನ ವಿರಚಿತ ಚಿತ್ರಪತ್ರಪುತ್ರಿಕಾ ಪ್ರತಿಬಿಂಬಚರ್ಚೆಗಳ್ ರಂಗವಲ್ಲಿಯು ಚೆಲ್ವನಿತ್ತಪುವು. ಮತ್ತೇಕೆ ಕೆಮ್ಮನೆ ನಿಮ್ಮ ಕೈವೆಸದ ಗಸಣೆ" ಎಂದು ತಡೆಯಿಕ್ಕಲೊಡರಿಸುವ ಬಾಳೆಯರ್ಗೆ ಪೇೞ್ವಂತೆ ನೀರ್ದಳಿದ ಕತ್ತುರಿಯ ಕಂಪಿಂಗೆ ಮುಸುಱಿ ಮೊರೆವಳಿಗಳಿಂ ಕಟ್ಟಿಲೆಯ ತಾಯ್ವನೆಯೆನಿಪ್ಪ ಹರಿನೀಳ ಘಟಿತ ಕುಟ್ಟಿಮದೊಳಂ ವಯೋವರ್ಣ ಸ್ವಭಾವ ಚೇಷ್ಟೆಗಳಿನನುರೂಪಮಾಗೆ ಬರೆದ ಜಾತಿವಿದ್ಧಂಗಳೆ ನಿಜಪ್ರದೇಶಶುದ್ಧಿಯೊಳಂ ತನ್ಮಯಮಾದ ಚಿತ್ರಕನ ಭಾವಶುದ್ಧಿಯೊಳಂ ಜೀವಂಬಡೆದು ಸುೞಿದಪ್ಪುವೆನಿಸಿ ಮಾರ್ಪೊಳೆವ ಪರಿಜನಪ್ರತಿಕೃತಿಗಳಿಂ ಕಣ್ಗೊಳಿಪ ನಿರ್ಮಳ ಸ್ಫಟಿಕಭಿತ್ತಿಗಳೊಳಂ ಆತ್ಮೀಯ ಮಣಿವಿತಾನ ರಚನೆಯಂ ನಭೋಮಣಿಯ ಮಣಿವಿತಾನ ರಚನೆಯೊಳ್ ಪಡಿಯಿಟ್ಟು ನೋಡಲ್ಕೆ ನೀಳ್ಕಿ ನೆಗೆದಂತಿರತ್ಯುನ್ನತಂಗಳಾಗಿ ಪಂಚರತ್ನ ರುಚಿರಂಗಳುಂ ಪಂಚಾವಯುವ ಚಂಚುರಂಗಳುಮಪ್ಪ ಕಾಂಚನಸ್ತಂಭ ಮಾಳೆಗಳೊಳಂ, ಪಂಚಾಂಡಕ ಚತುರ್ವೃತ್ತಿ ಚತುರಶೀತಿ ಸ್ಥಾನಕದೊಳುಚಿತ ನಿರ್ಗಮಕ್ಷಪಣೆಗಳನಳವಡಿಸಿ ಸುತ್ತುಗತ್ತರಿಗೆ ವರೆಗೊಯ್ದು ಕರುವೆಸನಿದೆನಿಸಿ ಸುವ್ಯಕ್ತಮಾದ ನಿಮ್ನೋನ್ನತ ಪ್ರಸಾರಿತ ನಿಕುಂಜಿತಪ್ರದೇಶ ಶುದ್ಧಿಯುಂ, ತೊಡೆವ ಬೆರಸುವ ತೆರಳ್ಚು ವಿಡುವರ್ಣದ. ತೆಳ್ವರ್ಣದದರ್ಧೋರ್ದಕದ ಬಹುವಿಧದ ವರ್ಣಕ್ರಮಮುಂ, ಛವಿಯಿಡುವ ಕೊರ್ವಂ ಕಟ್ಟುವ ಹೊಗರೆತ್ತುವ ಪಲವುಂ ತೆಱದಣ್ಮೆಯುಂ, ವಿವಿಧ ಕಂಪನಸ್ವೇದ ರೋಮೋದ್ಗಮಾವೇಗ ಜೃಂಭಣ ಭ್ರೂಕಟಾಕ್ಷವಿಕ್ಷೇಪಣಾದಿ ಸಕಳ ಭಾವಾನುಕರಣಕ್ಕುದಾಹರಣಮಾದ ರಸಭಾವಪೋಷಮುಂ, ನಿರವಧಿ ಚಮತ್ಕಾರಮಂ ಪಡೆಯೆ ನೋಡೆ ನೋಡುವ ನುಡಿಯೆ ನುಡಿಯಿಸುವ ಬಗೆಯನೊದವಿಪ ಸಜೀವಭಾವಮುಮಂ, ಪೆಸರ್ಗೊಳ್ವ ಕರೆವ ಸಂಭ್ರಮಿಪ ಕೆಯ್ತಮುಂ ಪುಟ್ಟಿಸುವ ಜಾತಿವಿದ್ಧಮುಮಂ, ಅತಿಶಯಿಸಿ ಬರೆದ ಸಚಿತ್ರರಚನೆಯುಮುದರ್ಕ್ಕೆ ದೊರೆಯಲ್ಲಿದೆನೆ ವಿನಿರ್ಮಿಸಿದ ಸುಯ್ಯಾಣವೆಸಪ, ಕತ್ತರಿವೆಸದ, ಮಣಿವೆಸದ ಮೇಲ್ಗಟ್ಟನೊಳಂ ಮಂಡಪಶ್ರೀಯ ಕಂಠಿಕಾಮಾಳೆಗಳೆನಿಪ್ಪ ವಿವಿಧಮಣಿತೋರಣಂಗಳೊಳಂ, ಅಂಬರಸರೋವರದ ಕೆರೆತುಱುಗಲಿಂ ತೀವಿ ನಿಮಿರ್ದು ಮಿಳ್ಳಿಸುವ ಪಲತೆಱದ ಪೞಿಯಿಗೆಗಳೊಳಂ ಶಾರದ ತರಂಗಿಣಿಯ ಪೂರದೊಳ್ ಪೊಳೆವ ಪುಳಿನದ ವಿಳಾಸಮಂ ತಾಳ್ದಿ ನೀಳಾಶ್ಮಕುಟ್ಟಿಮದ ಮಧ್ಯರಂಗದೊಳ್ ರಾಜಹಂಸಯುಗ್ಮ ಸಂಗಮನ ರಮಣೀಯಮಾಗಿ ಮನಸಿಜನ ಸಾಮ್ರಾಜ್ಯಪೀಠಿಕೆಯಿದೆನಿಸಿ ಕಣ್ಗೊಳಿಪ ಪೞಿಕಿನ ವಿಶಾಳ ವೇದಿಕೆಯೊಳಂ ಬಳಸಿಯುಂ, ಬೆಳಪ ನೀರಾಜನ ಪ್ರದೀಪಿಕಾ ಪ್ರತಿಬಿಂಬರಾಜಿಯಿಂ ಮನೋಜಪೂಜಾಮಹೋತ್ಸವದೊಳ್ ಉಜ್ಜ್ವಳಿಪ ದೀಪಮಾಳೆಗಳೆವೆನೆ ಮನಂಗೊಳಿಪ ಭೃಂಗಾರಮಣಿಕಳಶ ಭಾರಂಗಳೊಳಂ ಕುಸುಮಸರನ ಪಸುರ್ಗಣೆಯ ಪೊದೆಗೆ ಪುರುಡಿಸುವ ಜಾಗದ ನೆಲೆಯ ಹೆಡಲಗೆಗಳೊಳಂ, ಉಚಿತ ಪ್ರದೇಶದೊಳ್ ನಿರ್ಮಳ ದುಕೂಳ ಪ್ರಚ್ಛದಾಚ್ಛನ್ನ ಮನಸಿಶಯ ಪರ್ಯಂಕಮಂಡಳಮಿದೆನಿಸಿ ಪಾಸಿದ ದಳಿಂಬದೊಳಂ, ಸಜ್ಜಿತಮನೋಜ ವಿಜಯರಥಮೆಂಬಂತಿರರ್ಚಿಸಿರ್ದ್ದೈರಣೆಯೊಳಂ ಜಗದಾರಾಧ್ಯನಪ್ಪ ಚಕ್ರಧರನ ಪರಿಣಯನ ಪರಮೋತ್ಸವಕ್ಕೆ ನೆರೆದುಬರ್ಪ ನಾಗಕುಲದ ಪೆಡೆವಣಿಯ ರಾಜಿಯೆನೆ ರಾಜಿಸುವ ನೀರಾಜನ ಪ್ರದೀಪ ಪಟದೊಳಂ ಅವನೀ

ವಿಳಾಸಿನಿಯ ರನ್ನದ ಕನ್ನವುರಮಿಂತಿವೆನಿಪ ಬಂಣವುರದ ಪರಿಯಳಂಗಳೊಳಂ ಮತ್ತಂ ಪಲವು ತೆಱದ ಬಾಯಿನಂಗಳ ಫಳಾವಳಿಗಳಿಕ್ಷುದಂಡಂಗಳ ಮಂಗಳದ್ರವ್ಯಂಗಳ ತಿಳ ಯವ ಪ್ರಭೃತಿ ಧಾನ್ಯಪಾತ್ರಂಗಳ ಸಿರಿಗನ್ನಡಿಯ ಕಳಿರ್ಗಳಶದ ವಿಳಾಸದೊಳಮುಸ ದಳಮಾಗಿ—

ಕಂ॥ ಒಸಗೆಯ ಮುಂಗುಡಿ ಚೆಲ್ವಿನ ।
ಪಸರಂ ಮಂಗಳದ ಬೆಳಸು ರಾಗದ ಮಡು ಸಂ ॥
ತಸದ ಸಿರಿ ಸಿರಿಯ ಮೆಯ್ಸಿರಿ ।
ಪಸುರ್ವಂದರ್ ನೃಪನ ಕಣ್ಗದೇಂ ರಂಜಿಸಿತೋ ॥ (೪)

ವ॥ ಅಂತು ಸೊಗಯಿಸುವ ಪರಿಣಯನ ಮಣಿಮಂಡಪಮನಾತ್ಮಪ್ರತಿಬಿಂಬದಿಂ ಹೃದಯಂಬೊಕ್ಕನೆನಿಸಿ ಪುಗುತರ್ಪ ಮುನುಕುಲಮನೋಜನಂ ಜ್ವಳನಜಟಿಮಹಾ ರಾಜಂ ಮಹಾವಿಭೂತಿವಿಹಿತ ನಿಜಕುಲೋಚಿತಾಚಾರ ಜಿನರಾಜಪೂಜಾವಿಧಾನಮಂಗಳ ನತಿ ಸಂಭ್ರಮದಿನಿದಿರ್ಗೊಂಡು ತಾನೆ ಕಯ್ಗೊಟ್ಟು ತಂದು ಶರದಾಕಾಶಮಂಡಳದ ಶಶಿಮಂಡಳಕ್ಕೆ ಮಾಱಂಡಳಮಾಗಿ ಹರಿನೀಳಕುಟ್ಟಮದೊಳಿಟ್ಟಣಮಾದ ಪಟಿಕಿನ ಪಟ್ಟ ವಣೆಯ ಪಸೆಯೊಳಿರಿಸಿ ಪರಮೋತ್ಸವದಿನರ್ಘ್ಯಪಾದ್ಯಾದಿ ಸಮುಚಿತ ಸಪರ್ಯೋಪ ಚಾರಮಂ ಪ್ರವರ್ತಿಸುತ್ತುಮಿರ್ದನತ್ತಲನ್ನೆಗಂ ಮುನ್ನಮಾತ್ಮೀಯ ನಿವಾಸದಲ್ಲಿ—

ಕಂ॥ ಸುಮನಃ ಶರಮಿವು ಕನ್ಯಾ ।
ಭಿಮಾನದಾಜ್ಞೆಗೆ ಪಳಂಚಲಣ್ಮದೆ ಸುತ್ತುಂ ॥
ಭ್ರಮಿಯಿಸಿದವುವೆನೆ ಸತಿಯರ್ ।
ಕುಮಾರಿಗರ್ಚಿಸಿದ ಶರದೆ ಸೆಯ್ಯೆಱಿಸಿದರ್ ॥ (೫)

ವ॥ ತದನಂತರಂ—

ಚಂ॥ ಇರೆ ಪರಿವೇಷ ಮಧ್ಯದ ಸುಧಾಕರಲೇಖೆವೊಲಾಗಳೊಪ್ಪಿ ಭಂ ।
ಗುರತನು ತನ್ನಿ ಸುತ್ತಿ ಕಡೆಯಿಕ್ಕಿದ ರತ್ನಚತುಷ್ಕದಿಂ ವಿಯ ॥
ಚ್ಚರಸುತೆ ಮಜ್ಜನಂಬುಗಿಸಿದರ್ ಕುಲಕಾಂತೆಯರಾನ ಕಸ್ವನಾಂ ।
ತರಿತವಚೋವಕರ್ಣ [ನ ಪರ] ಸ್ವರ ಹಾಸವಿಘೂರ್ಣಿತಾಸ್ಯೆಯರ್ ॥ (೬)

ಕಂ॥ ಕಾಳಿಂದಿಯ ಪೊನಲೊಳ್ ಝಷ ।
ಮಾಳೆ ತೆಱಿಂಬೊಳೆವ ತೆಱದೆ ಪೊಳೆಯೆನಖಂ ಕೇ ॥
ಶಾಳಿಯೊಳಗುಲಿಯೆ ಕಂಕಣ ।
ಮಾಳಿಕೆ ತಲೆವಿಕ್ಕಿದಳ್ ಪೆಱಳ್ ಬಾಳಕಿಯಾ ॥ (೭)

ಕಂ॥ ಪುದಿದಲರ್ಗಣೆಯಿಂ ತೀ।
ವಿದ ಮದನನ ತವದೊಣೆಯಿದೆನಿಸಿ ಕೇತಕಿ ಪ॥
ತ್ರದ ಕುತ್ತುಂಗಜಿಯಿಂ ಮುಡಿ।
ಸುದತಿಗೆ ಬಂದೊರ್ವಳಬಲೆ ಪೂಮುಡಿಯಿಸಿದಳ್ ॥ (೮)

ಕರತಳಮರೀಚಿ ವದನಾಂ।
ಬುರುಹಕ್ಕೆಳವಿಸಿಲ ಸಿರಿಯನೋಲಗಿಸೆ ವಿಯು॥
ತ್ತರಿ ತಿರ್ದಿ ಕಟ್ಟಿದಳ್ ತೊಡೆ।
ದುರುಳಿಗುರುಳ್ಗಳನದೊರ್ವಳಳಕುಂತಳೆಯಾ ॥ (೯)

ವ॥ ಮತ್ತಂ [ನನೆಗಣೆಗಳ ಬೆ]ಡಂಗನಂಗುಳಗಳಿನೆಳೆದುಕೊಂಡವೆಂನಂ ನಖಮಯೂಖದಿಂ ನಕ್ಕಪುವೆಂದು ನಡೆನೋಡಿ ಕಡುಪಿಂ ಕಿಸುಗಣ್ತಿದಿಕ್ಷುಚಾಪನ ಕೋಪರಸನಿಷಿಕ್ತಾರಕ್ತ ಲೋಕನಾಂಚಳದ ಸೋಂಕಿಂ ಕೆಂಕವಾದುದೆಂಬ ಸಂಕೆಗೆಡೆಯಾಗಿ ರಾಗರಸದಾಗರಮಪ್ಪ ವಲ್ಲಭನ ಮನಮನಾಗಳಾಗಳೆ ತೊಬ್ತುಬಿದುಬಿದು ಬಂದಳೆನಿಸಿ ಪದನಿಕ್ಕಿದ ಲಾಕ್ಷಾರಸದಿನಂಘ್ರಿತಳಮನಡಿಯೂಡಿಯುಂ, ಪದನಖಮಯೂಖಲೇಖಾಚ್ಛಲದಿನಂಗುಳಿಪ್ರಣಾಳಿಕೆಗಳೊಳ್ ತಿಳಿವಾಲ ಪೊನಲಂಬಿಟ್ಟು ಬಿನದದಂಚೆಗಳನಿಂಚರದ ಪದಿರೊಳ್ ಕರೆವ ಪದಪಯೋಜಲಕ್ಷ್ಮಿಯ ವ್ಯಾದು ನಿನದಮೆನಿಸಿಮಂಜ [ಮಂಜೀರಕದ] ಮಂಜುಸಿಂಜಿತದಿನಂಗಜಮತಂಗಜಕ್ಕೆ ಮದಡಿಂಡಿಮದ ನೂಪುರಮನಂಘ್ರಿಸಂಗತಿಯಿನತಿಶಯಿಸಿಯುಂ ಮೇಲೆ ಮಿಸುಗುವುಡೆನೂಲ ಪಸುರ್ವರಲ ರಶ್ಮಿಗಳಿನೆಳೆವಸುರನೊಳಕೆಯ್ದು ದುಗುಲದುಡೆಯಿನೊಳ್ದೊಡೆಯೆಂಬ ಹೊಂಬಾಳಿಯ ಕಂಭಕ್ಕೆ ಕೋಮಳದಳವಿಳಾ[ಸಮನಿಂಬುಗೊಳಿಸಿಯುಂ] ಘನಕುಚಮೆಂಬ ಮನಸಿಜನ ಕೃತಕಾಚಳದಿನಿಬಿದು ನಾಭಿಕೂಪಮಂ ತೆಕ್ಕನೆ ತೀವಿ ಕಾಬ್ಬುರಂಬರಿವ ಲಾವಣ್ಯರಸದ ಬರಿವೊನಲಂ ಕಟ್ಟಿಗಟ್ಟಿ ಕಡೆಗೋಡಿವಿಟ್ಟಂತಿರೆಬಿಲೆವಿಟ್ಟು ಮುತ್ತಿನ ಲಂಬಳಗೆಯಿಂ ಬೆಡಂಗುವಡೆಯೆ ಕಟ್ಟಿದ ಕಾಂಚಿಯುಂ ಕಾಂಚೀಪದದೊಳಂಗಜಂಗೆ ಸಾಮ್ರಾಜ್ಯಪಟ್ಟಮಂ ಕಟ್ಟಿಯುಂ, ಬಳಸಿ ಪೊಳೆವ ಮಣಿವಳಯಮಾಳೆಯಿಂ ಸುತ್ತುವತ್ತು ಹಸ್ತನ್ಯಸ್ತ ಮಂಗಳಮಾತುಳುಂಗದೊಳಮರ್ಕವಡೆದು ನಿಜರಮಣನ ಮನೋಮಘನಕ್ಕೆ ಮನ್ಮಥನೆ ನಿಯುಂತ್ರಿಸಿದ ಮಂಥದಂಡಮೆನಿಸಿ ವಿಭ್ರಮಂ ಪಡೆಯೆ ಭುಜದಂಡಮನಳಂಕರಿಸಿಯುಂ, ಕಡಲ ನಡುವೆ ನವತುಷಾರ ಶೀಕರ ಶಿಶಿರಶುಕ್ತಿಕಾಗರ್ಭವಾಸದೊಳಿನ್ನಗಂ ಕೂಡಿ ಬಂದವಿಂತೀಪುರಂಧ್ರಿಯ ನವೀನ ಯೌವನೋಷ್ಮಾಯಮಾಣ ಪೀನಕುಚಕದುಷ್ಣ ಸಂಸ್ಪರ್ಶನಕ್ಕೆ ನಿಜಕರಂಗಳಂ ಪಸರಿಸಿದವುವೆನಿಸಿ ಕಾಂತಿಯಿಂ ಕವಲ್ವರಿವ ಮುಕ್ತಾಮಣಿಗಳ ಮಯೂಖದಿಂ ಮಂಜರಿತಮಾಗೆ ಹಾರಲತೆಗೆ ಕಂಠಕಂದಳಿಯೊಳನುಬಂಧಮಂ ಪಡೆದುಂ, ಕೊಗ್ಗಿಯೊಳಿಡಿದ ಕತ್ತುರಿಯ ಪರಿಮಳಕ್ಕೆಳಸಿ ಕರ್ಣಪೂರದೊಳ ಬಳಸುವಳಿಗಳೊಳ್ ತಡಂಗಲಸಿ ಮಂಡಳಿಸುವ ಕಟಾಕ್ಷ ಕಿರಣ ಮಂಜರಿಗೆ ಮಜುವಕ್ಕಮಾಗೆ ನೀಲಮುತ್ತಿನೋಲೆಯುಂ ತುಡಿಸಿಯುಂ, ಚೆನ್ನನಪ್ಪ ಚಿನ್ನಪೂವಿಂ ಚೆಲ್ವುವೆತ್ತು ಸುತ್ತಿ ಕಟ್ಟಿಲಿಸುವಳಕ

ಲತೆಗಳ ಘನಚ್ಛಾಯೆಯಿಂ ಕಮನೀಯಮಾದ ಲಾವಣ್ಯಲಹರೀಮಯ ಲಲಾಟತಟನಿಗಳ ಶಾಬ ಚುಂಬಿತ ಸಿತಾಂಬುಜ ಶ್ರೀಯನೀಯೆಯುಂ, ಪೊಡರ್ವ ಸಂಕೆಯಿಂ ಮೃಗಾಂ ಕಮಂಡಳಕ್ಕೆ ಮಾಱಡಕಮಾದ ಮಳಯಜ ' ತಿಳಕದಿನಶೇಷಮಂಡನಶ್ರೀಗೆ ಕಣ್ದೆಱವಿವ ಡೆದುಂ, ಖಚರ ಸಹಚರೀ ಪರಿವಾರಮೆಲ್ಲಂ ತಮ್ಮ ಪರಿಕರ್ಮ ಕೌಶಲಮಂ ಮೆಱೆದು ನೆಱೆಯೆ ಪಸದನಂಗೆಯ್ಯೆ—

ಮ॥ ಸ್ರ॥ ಅತನುಕ್ರೀಡಾರಥಂ ಪೂಡಿದುದು ಕಳಶಮಿಟ್ಟತ್ತು ಕಂದರ್ಪಲೀಲಾ ।
ಯತನಂ ಪುಷ್ಪಾಸ್ತ್ರಕೇಳೀವನಲತೆ ಮುಗುಳ್ವೇಱಿತ್ತು ನಿರ್ವಾಣರೇಖಾಂ ॥
ಕಿತನಾಯ್ತುರ್ವೀ ಮನೋಮೋಹನ ಮದನ ಪಟೀಚಿತ್ರಮೆಂಬಂತಿರಾವಿ ।
ಷ್ಕೃತ ನಾನಾಮಂಗಳಾಳಂಕರಣ ವಿಭವದಿಂ ಕಾಂತೆ ಕಣ್ಗೆಡ್ಡಮಾದಳ್ ॥ ()

ಕಂ॥ ಜನದೃಙ್ಮೀನಂಗಳ್ ಬೆಂ ।
ಡುನೆಗೆದುವೆಳಸೊರ್ಕು ಸೊರ್ಕಿ ಭೂಷಣ ಕಿರಣಾ ॥
ಭಿನವ ಪ್ಲವದಿಂ ತೆರೆಮಸ ।
ಗಿ ನೆಗೆದ ಲಾವಣ್ಯ ಪೂರದೊಳ್ ಖಗಸುತೆಯಾ ॥ (೧೧)

ಪಿಡಿದೀಕ್ಷಿಸುವುತ್ಸಂಗದೊ ।
ಳಿಡುವಬ್ಬಿಯಿನೆತ್ತುವೊರ್ವರೊರ್ವರ ಕೆಯ್ಯೊಳ್ ॥
ಕುಡುವ ನಿಜ ಬಂಧುವರ್ಗದ ।
ನಡುವೆಸೆದಳ್ ಕನ್ನೆ ತೊಳಗಿ ಕೆಯ್ಗನ್ನಡಿಯೋಲ್ ॥ (೧೨)

ವ॥ ಆಗಳತ್ತಲ್ ಪುರೋಹಿತಂ ಬಂದು “ದೇವ ಲಗ್ನಮತ್ಯಾಸನ್ನಂ” ಎಂದು ಬಿನ್ನವಿಪುದುಂ ಜ್ವಲನಜಟಿಮಹಾರಾಜನುತ್ಸವೋದ್ಗತ ರೊಮೋದ್ಗಮ ಮುದ್ರಿತ ಭುಜಂ ಭೋಂಕನೆೞ್ದು ಪಂಕಜಾಕ್ಷನನಶೇಷ ಗೋತ್ರಗುರುಜನಸಮೇತಮೊಡಗೊಂಡು ಬಂದು ತತ್ಕ್ಷಣದೊಳ್ ಕುಳಾಚಾರ ಚತುರೆಯರಪ್ಪ ಖಚರಿಯರ್ ಮೆಟ್ಟಕ್ಕಿವೊಯ್ಯೆ ಮದನ ಮದಗಜಕ್ಕೆ ಪಿಡಿದ ಮೊಗವಡಮೆನಿಸಿ ಕನ್ನೆಗೆ ಪಿಡಿದ ಕಾಂಡಪಟದ ಮಱೆಯೊಳಭಿ ಮುಖನಾಗಿರಿಸಿ ಬದ್ದವಣ ಪುಣ್ಯಾಪಾಠಕರ ಕಳಕಳಮಂ ನಿಲಿಸಿ ಗಣಕಗಣದ ಪುಣ್ಯಾಹ ಧ್ವನಿಯನಿನಿಸಾನುಮಾಲಿಸುತ್ತುಮಿರೆ—

ಕಂ॥ ಮೌಹೂರ್ತಿಕದತ್ತಂ ಪು ।
ಣ್ಯಾಹಂ ಮಂತ್ರಾಕ್ಷರಂಗಳಿಂ ತನ್ಮಿಥುನ ॥
ಸ್ನೇಹಾಳೋಕಾಂತಃ ಪ್ರ ।
ತ್ಯೂಹಂ ತೊಲಗಿದುದು ಕಾಂಡಪಟಕಾಚ್ಛಲದಿಂ ॥ (೧೩)

ವ॥ ತದನಂತರಂ—

ಕಂ॥ ಭೂರಮಣನ ಕರದೊಳ್ ಕೆ।
ಯ್ನೀರಕ್ರಿಯು ನೆವವೆ ತಮ್ಮ ಚಿತ್ತದೊಳಾದ ಪ॥
ರೀರಂಭದಗೆಗೆ ಖಗಪತಿ।
ನೀರೆಜಱದಪನೆನಿಸಿ ಪರಸಿ ಕೆಯ್ನೀರೆಱಿದಂ॥ (೧೪)

ಉಳನೆಯರಬಲೆಯ ಲಜ್ಜಾ।
ವಿಳಸದ್ಭೃಗ್ನಿಮ್ನಗೆಯನಾ ಕುಭೃದ್ವರಚೂಡಾ॥
ಸ್ಥಳಿಗೆ ಪರಿಯಿಸಿದರೊತ್ತಂ।
ಬಳದಿಂದದು ಕಂತು ಯಂತ್ರ ಸೂತ್ರಿತಮಕ್ಕುಂ॥ (೧೫)

ಓರೊರ್ವರೊಳನುಬಂಧಮ।
ದೋರೊರ್ವರ ಗುಣದಿನಪ್ಪುದಂ ಸೂಚಿಸೆ ಕೆ॥
ಯ್ಯಾರೆ ವಧೂವರರಿರ್ವರು।
ಮೋರೊರ್ವರ್ಗಮರೆ ಕಟ್ಟಿದರ್ ಕಂಕಣಮಂ॥ (೧೬)

ವ॥ ತದನಂತರಂ—

ಕಂ॥ ಭಂಗಿಸೆ ನಿಜಭುಜಲತೆ ತ।
ನ್ವಂಗಿಯು ಕೆಯ್ವಿಡಿದು ಬಾಳಬಿಸದೊಳ್ತಿರುವಿ॥
ಟ್ಟಂಗಜನ ಚಾಪಲತೆಯಂ।
ಮಂಗಳವೇದಿಕೆಯು ಪಸೆಗೆ ಹರಿ ನಡೆತಂದಂ॥ (೧೭)

ವ॥ ಅಂತು ಬಂದು ತದ್ವಿವಾಹವೇದಿಕಾ ಪ್ರಾಗ್ಭಾಗದೊಳಧಿವಾಸಿಸಿರ್ದ ಮಣಿ ಖಚಿತ ಮಂದರಕೂಟಮಂ ಬಲಗೊಂಡು ಪರಮಜಿನೇಂದ್ರ ವಂದನಾಪುರಸ್ಸರಂ ಶ್ರೀ ರೋಹಿತ ಪ್ರಯೋಜಿತ ವಿಧಿವಿಹಿತ ವಂಶೋಚಿತಾಶೇಷ ವೈವಾಹಿಕ ವಿಧಾನಂ ವಧೂ ಸಹಿತಮುತ್ತುಂಗ ರತ್ನಾಸನದ ಪಸೆಯನಳಂಕರಿಸಿ—

ಕಂ॥ ಪಿಕನಿಸ್ವನೆ ವಧು ತಳ್ತಿಡ
ದ ಕೆಲದೊಳಿರೆ ವಾಮಬಾಹುಶಾಖಾ ನವಕೋ॥
ರಕ ಮಂಜರಿಯೆನೆ ನೃಪನೊಂ।
ದೆ ಕೊಂಬು ಕೆಯ್ವಂದ ಚೂತಶಾಖಿವೊಲಿರ್ದಂ॥ (೧೮)

ವ॥ ಆ ಸಮಯದೊಳ್—

ಕಂ॥ ನವಮದನ ವಿಕಾರ ಸ್ವೇ।
ದವಾರಿಬಿಂದು ಪ್ರವರ್ಷಮಂ ಮಱಿಯಿಸಲಾ।
ಯ್ತುವರ್ಗಂದು ಪರಸುತುಂ ಮೇ।
ಲೆ ವನಿತೆಯರ್ ಸುರಿವ ಮೌಕ್ತಿಕಾಕ್ಷತ ವರ್ಷಂ॥ (೧೯)

ವ॥ ತದನಂತರಂ ಖಚರರಾಜನುಂ ಪ್ರಜಾಪತಿ ಮಹಾರಾಜನುಂ, ಮಹೋತ್ಸವದಿನಪಿಳ ವಿದ್ವತ್ಸಭಾಜನಸಮಾಜಮನಗ್ರಪೂಜಾಪುರಸ್ಸರಂ ಮಣಿಕನಕವಸ್ತ್ರಾದಿ ವಸ್ತುಗಳಿಂ ಪೂಜಿಸಿ ಷೋಡಶಯಾಚಕರಂ ಕರೆದು ನೆರಪಿ—

ಕಂ॥ ದಿವಿಜಕುಜಂಗಳ ಪುಟ್ಟಿದು ।
ವಿವು ಜೇೞಿ ದಶಾಧಿಕಂಗಳೆನಿಸಿ ಮಹಾಚೊರ್ಕ್ಷ ॥
ತ್ಸವದಿಂ ಸಂಕಲ್ಪಾತೀ ।
ತ ವಸ್ತುಗಳನಿತ್ತರಾ ಖಗೇಂದ್ರನರೇಂದ್ರರ್ ॥ (೨೮)

ವ॥ ಅಂತು ವಿವಿಧ ವಿಶ್ರಾಣನ ವಿನೋದರ್ ವಿಳಾಸಗಮಿತ ಮಂಗಳದಿನ ಚತುಷ್ಟಯರ್ ಜಿನಾಭಿಷವಪೂಜಾ ಪುರಸ್ಸರಂ ಪ್ರಥಿತಸಮುಚಿತ ಮಹೋತ್ಸವರನಂತರ ದಿವಸದೊಳ್ ನಿಜನಿಜ ಮಹಾವಿಭವ ವಿಳಾಸಪ್ರಕಟನ ಕುತೂಹಳರಶೇಷಪರಿಜನ ಸುಹೃಜ್ಜನ ಸಮೇತರ್ ಖಚರರಾಜನುಂ ಪ್ರಜಾಪತಿಮಹಾರಾಜನುಮೊಡ್ಡೋಲಗದೊಳಿರೆ—

ಕಂ॥ ತಪನೀಯ ವೇತ್ರಲಲಿತಾ ।
ಪ್ರಪದೀನ ದುಕೂಲಕಂಚುಕಂ ಪ್ರತಿಹಾರಾ ॥
ಧಿಪನೆೞಗಿದಂ ಕುಭೃತ್ಪತಿ ।
ಗುಪಾತ್ತಚಪಳಂ ಸಿತಾಭ್ರಮೆನೆ ಬಂದಿದಿರೊಳ್ ॥ (೨೧)

ವ॥ ಅಂತು ಪೊಡೆವಟ್ಟು "ದೇವ ವಿದ್ಯಾಧರ ಚಕ್ರಧರನ ಬೆಸದಿಂ ಬಂದೆನೆಂದೊರ್ವ ಚರಮಹತ್ತರಂ ಬಾಗಿಲೊಳಿರ್ದಪಂ" ಎಂದು ಬಿನ್ನವಿಸೆ ಲಬ್ಧಾನುಜ್ಞನೊಡಗೊಂಡು ತಂದು ಕಾಣಿಸೆ ಪೊಡೆವಡುತ್ತುಮುಚಿತ ಪ್ರದೇಶ ನಿಹಿತಾಸನದೊಳ್ ಕುಳ್ಳಿರ್ದು—

ಕಂ॥ ದೇವ ಅಳಕಾಪುರೀಶನ ।
ಳಾವಿಶ್ರುತ ಖಚರ ಚಕ್ರವರ್ತಿ ಮಯೂರ ॥
ಗ್ರೀವಾಗ್ರ ತನಯನಶ್ವ ।
ಗ್ರೀವಂ ಲೋಕೈಕಮಲ್ಲನಪ್ರತಿಮಲ್ಲಂ ॥ (೨೨)

ಮ॥ ಕರೆದೆನ್ನಂ ಸ್ವಗತಾಗ್ರಹಂ ಬೆಸಸಿದಂ ಪ್ರೋದ್ಯದ್ಧವದ್ಭಾಗಧೇ ।
ಯರಯಪ್ರೇರಿತನಾದವೊಲ್ ನಿಮಗಮಿನ್ನುಂ ರಾಜ್ಯಲಕ್ಷ್ಮೀಪರಂ ॥
ಪರೆಯುಂ ತತ್ಸುಖ ಸಿದ್ಧಿಯುಂ ತನಗಮಾಗಿರ್ಪಂತೆ ಯಿಂದಂ ವಿಯ ।
ಚ್ಚರ ಚಕ್ರೇಶ್ವರನಾಜ್ಞೆಯಂ ತಲೆಯೊಳಾಂತೇಗೊಳ್ವುದೇನೆಂಬುದಂ ॥ (೨೩)

ಚಂ॥ ಪಗೆವರನಾರೆ ಸೈರಮೆರೆಗೊಂಡು ತದೀಯ ಕೃಪಾಣ ಕೃಷ್ಣ ಪ ।
ನ್ನಗವೆಳಸಿತ್ತು ಕೋಶಕುಹರಕ್ಕೆ ಕರಾಂಬುಜವೀಪ್ಸಿತಾರ್ಥ ವೃ ॥
ಷ್ಟಿಗಳನಿಳಾತಳಂ ತಣಿವಿನಂ ಕಱೆದುತ್ಕವಧೂಕುಚಾಗ್ರ ಶ ।
ಯ್ಯೆಗೆ ಮೊಗಸಿತ್ತನಾಕುಳ ಸುಖಂ ಕೃತಕೃತ್ಯ[ರೊಳಲ್ಲದಕ್ಕುಮೇ] ॥ (೨೪)

ಕಂ॥ ಬಾಪ್ಪುರೆ ಖಚರೇಶ್ವರ ಮಱಿ।
ದಪ್ಪೊಡಮಿದಿರಪ್ಪರಿಲ್ಲ ಬೇಡಿದುದಂ ತಂ॥
ದೊಪ್ಪಿಸದವರಿಲ್ಲಾಜ್ಞೆಗೆ।
ತಪ್ಪುವರಿಲ್ಲೆಲ್ಲಿಯುಂ ನೃಪಾಳರ್ ಜಗದೊಳ್॥ (೨೫)

ತೆರೆ ಮುಸಗಿದ ಜಗುನೆಯ ಮಡು।
ದೊರೆ ತನಗೆನಿಸುವುದು ನೀಲಮಯ ತದ್ರಾಜಾ॥
ಜಿರವುರಿನ್ನಪರಟ್ಟಿ ತರಂ।
ತರದೆ ಬರುತ್ತಿರ್ಪ ವಾಜಿರಾಜಿಗಳಿಂದಂ॥ (೨೬)

ವರವಸ್ತುಚಯಂ ಬೆರಸಧಿ।
ವರನಂ ಕಾಣಲ್ಕೆ ಕುಲಕುಭೃತ್ಪತಿ ಬಂದಂ॥
ತಿರೆ ತೋರ್ಪುದುಪಾಯನ ರ।
ತ್ನರಾಶಿವೆರಸಹಿತರಟ್ಟದಿಭ ನಿಕುರುಂಬಂ॥ (೨೭)

ವ॥ ಮತ್ತಂ—

ಮ॥ ಕುಲಭೂಭೃತ್ಪತಿ ಗೋತ್ರಮುಗ್ರಕಿರಣಂ ಮಿತ್ರಂ ಕಡಲ್ವೇಳೆಗೊಂ।
ಡುಲಿಯುತ್ತಿರ್ಪುದು ತಾರಕಾರಮಣ[ನಾದಂಕೋಡಿ ಕೊಂಕಿ]ರ್ಪನೆಂ॥
ದೊಲವಿಂ ಮತ್ಪತಿಯಿಂತಿವರ್ಗೆ ಸಲಿಪಂ ಭೂಭೃತ್ವಮಂ ತೇಜಮಂ।
ಸಲೆ ರತ್ನಾಢ್ಯತೆಯಂ ಕಳಾಧರತೆಯಂ ಮಿಕ್ಕರ್ಗೆ ಸೈರಿಪ್ಪನೇ॥ (೨೮)

ಕಂ॥ ರಾಜಪೆಸರ್ಗೆಡಱಿಕಿಡೆ ನಿ।
ಸ್ತೇಜಿಸುಗುಂ ತನ್ನನೆಂದು ಧವಳಚ್ಛತ್ರ॥
ವ್ಯಾಜದಿನೋಲಗಿಸುವನಧಿ।
ರಾಜನನಮೃತಾಂಶು ನೀಲಮಣಿಕಳಶಾಂಕಂ॥ (೨೯)

ಉರವಣಿಸಿ ತಮ್ಮನೆಱಿಗುಂ।
ಧುರದೊಳಿದೆಂದಂಜಿ ಹೊಗರ ನೆವದಿಂ ರಿಪು ಭೂ॥
ಪರ ನೊಸಲಕ್ಕರಮಿರ್ಪುವು।
ನೆರೆದು ಶರಣ್ಬೊಕ್ಕಿಳಾಧಿಪನ ಕೂರಸಿಯೊಳ್॥ (೩೦)

ವ॥ ಆದೊಡಂ—

ಕಂ॥ ಘನಸಹಜತೇಜನಾದೊಡ।
ಮಿನನಾಪ್ತನಿದಾಘನಧಿಕ ತೇಜೋಮಯನ॥
ಪ್ಪಿನಿತನವಧರಿಪನಕ್ಕುಮೆ।
ಮನದೊಳ್ [ಸನ್ಮೈತ್ರಿಗೆಳಸು]ವಂ ಚಕ್ರಧರಂ॥ (೩೧)

ಕಂ॥ ಇಂದುವುವಿರುಳುಂ ದಿನಮಣಿ ।
ಯುಂ ದಿನಮುಂ ಮಣಿಯುಮೆಸೆವ ಕೇವಣಮುಂ ತಾ ॥
ನೊಂದಿದವೊಲಕ್ಕುಮನುಬಂ ।
ಧಂ ದೃಢಮಾದಂದು ಖಚರಪತಿಗಂ ನಿಮಗಂ ॥ (೩೨)

ವ॥ ಎಂದು ನಿಜರಾಜಕೀಯ ಪ್ರಧಾನ ಸಂಮತಮುಮಾತ್ಮೀಯ ನಿಸೃಷ್ಟಾರ್ಥ ದೂತ್ಯೋಚಿತಮುಮಾಗೆ ಸಾಮ್ಯೋಪ ವಚನಂಗಳಂ ನೆಱೆಕಿದು ಕಿಱಿದು ಪೊೞ್ತುಱೂ ೞುತ್ತರಂಬಡೆಯದ ತಚ್ಚರನವಜ್ಞಾತಾಯಮಾನನಾಗಿ ನಿಜಪತಿಯಥಾಜ್ಞಾಪಿತ ಪ್ರತಾಪ ಮುಖರನಿಂತೆಂದಂ—

ಕಂ॥ ತನಗೀವೆನೆಂದು ನಿಜನಂ ।
ದನೆಯಂ ಜ್ವಲನಜಟಿ ನಿಮಗೆ ವಂಚಿಸಿ ತಂದಿ ॥
ತ್ತನೆನಿಪ್ಪ ವಾರ್ತೆಯುಂ ಕೇ ।
ಳ್ದು ನಿಸರ್ಗಪಟು ಪ್ರತಾಪ ಮಹಿಮೋದ್ಭಾವಂ ॥ (೩೩)

ಮ॥ ಪದೆಪಿಂ ದೂತನ ಮಾತುಗೇಳ್ದು ವಧುವಂ ತಂದೀಯೆ ಮುನ್ನೆನ್ನಚಿ ।
ತ್ತದೊಳಿರ್ದಂದದೆ ನಂಟುಮಾಡಿ ಸಿರಿಯಿಂದೆನ್ನೊಳ್ ಸಮಂ ಮಾೞ್ಪನೀ ॥
ಯದೆ ನಿಂದಂದು ಸುರಮ್ಯರಾಜ್ಯಮನೆ ಬೇರಿಂ ಕೀೞ್ವೆನೆಂದೆತ್ತಿ ಬಂ ।
ದಿದೆ ಬಿಟ್ಟಿರ್ದನವಂಧ್ಯಕೋಪನಳಕಾಧೀಶಂ ರಥಾವರ್ತದೊಳ್ ॥ (೩೪)

ಕಂ॥ ಸಲಿಸೆ ನಿಜಾಜ್ಞೆಯನೀಕೋ ।
ಮಳೆಯನೆ ವಿನಯಕ್ಕೆ ಮೆಚ್ಚಿ ಕಳಿಪುಗು "ಮಾಜ್ಞಾ ॥
ಫಳಮೈಶ್ವರ್ಯಂ" ಶ್ಲಾಘ್ಯಮೆ ।
ವಿಳಾಸಿನೀ ಸ್ವರ್ಣವಸ್ತುವಾಹನನಿವಹಂ ॥ (೩೫)

ಮ॥ ಸಿರಿನಿಂದಳ್ ಮನೆಗಟ್ಟಿ ಪೇರುರದೊಳುರ್ವೀಕಾಂತೆ ತೋಳಿಂದಗ ।
ಲ್ದಿರಳೋತಿಚ್ಚೆಗೆ ವರ್ತಿಪರ್ ವಿವಿಧವಿದ್ಯಾದೇವಿಯರ್ ಬೇೞ್ಪ ಖೇ ॥
ಚರ ಶುದ್ಧಾಂತಮನಂತಮುಂ ಸರಕೆ ಸೆಂಡಿರ್ ಸೇಬದೆಮ್ಮೆಾವಿಯ ।
ಚ್ಚರಪಾಶಂ ನಿಮಗಿತ್ತನೆಂಬ ಚಲದಿಂದೀಕನ್ನೆಯಂ ಬೇಡಿದಂ ॥ (೩೬

ವ॥ ಎನುತುಮಧಿರಾಜವಿಷ್ಟರ ನಿಘೃಷ್ಟ ಪೀಠೋಪವಿಷ್ಟರಂ ಜ್ವಳನಜಟಿಯುಂ ಕಟಾಕ್ಷಿಸಿ ಬಹುಪರಿಚಯೋಪಾಲಂಭ ಚಾಪಳದಿನಿಂತೆಂದಂ—

ಕಂ॥ ಜಗದೊಳಗೆ ಜಸಂಬಡೆವರ್ ।
ಮಗಂದಿರಿವರಿವರನಕಟ ವಿಷವಲ್ಲಿಯನೇ ॥
ಕೆಗಡಂ ತೊಡರ್ಚಿ ಕಿಡಿಸಲ್ ।
ಬಗೆದೈ ಸುಡುಗಾಡ ನಿನಗಮೇನಿದು ಹಿತಮೇ ॥ (೩೭)

ಕಂ॥ ಮೇಲಱಿಯದೀ ಮಗುಳೀ।
ಬಾಲೆಯನೀವುದೆ ಖಗೇಂದ್ರ ನೆಱದುದನಱಿದುಂ॥
ಕಾಲೋರಗನೆಂಜಲಿಸಿದ।
ಪಾಲಂ ಕುಡಿಯಿಪ್ಪುದೆ ನುಡಿದುಮಱಿಯದ ಶಿಶುವಂ॥ (೪೮)

ವ॥ ಎಂದಿಂತು ಹಿತವಚನಕ್ಕಲದಿಂ ತನ್ನುಮಂ ತಮ್ಮನುಮನಬಳೆಯಿನಿಸಿ ನಿಜರಾಜತೇಜದಿಂ ಜ್ವಲನಜಟಿಯನುರವಣಿಸಿ ನುಡಿವ ಪೀತರಾಜನನಾಕ್ರಮಿಸಿ—

ಕಂ॥ ಎಂಬೊ ಕಡಿದಪರೆ ದೂತನು।
ಮಂ ಬೂತುಮನೆಂದು ಬಾಯ್ಗೆ ವಂದಂದದೆನು॥
ದ್ವಂ ಬಗುಱ್ವಯೆನಿತು ಮಱುಗಿದೊ।
ಡಂ ಬರ್ಕುನೆ ಪುಣ್ಯಫಲಮಪುಣ್ಯಂಗೆಂತುಂ॥ (೪೯)

ವ॥ ಎಂದು ನಿರ್ಭರಾವಿರ್ಭೂತ ಕ್ರೋಧಭರದಿನುರವಣಿಸಿ ಬವರಕ್ಕೊಡರ್ಚಲನುಗೆಯ್ವ ಹಳಧರಂಗುತ್ತರಂಗುಡದೆ ತನಗಭಿಮುಖದೊಳಿರ್ದ ಜನಾರ್ದನಂಗಿಂತೆಂದಂ—

ಕಂ॥ ಅತಿಕುಟಿಳ ಪ್ರಕೃತಿಯ ಪರಿ।
ಣತ ಮುಖಾಕರದ ಯುವತಿಜನದಾನಿಪದೊಳ್॥
ರತನಾಗಿ ಬಡಿಶಸಲಕಬ।
ಳ ತೃಷ್ಣೆಯಿಂ ಸಲಿವ ಶಫರವಾಂ ನೆನೆಯಿಪ್ಪುದೇ॥ (೫೦)

ವ॥ ಎನುತ್ತುಮನಿತಱೊಳಿ ನಾಣದೆ ಸಗರ್ವಧಾರ್ಷ್ಟ್ಯೋಪಚಾರಚಾಪಳಂ ಪ್ರಜಾಪತಿಮಹೀಪತಿಗಮಿಂತೆಂದಂ—

ಕಂ॥ ಎಳೆಗಱು ಭಯಮಱಿವುದೆ ಮು।
ಕ್ಕೆಳಿವರ್ ಮುಂದಱಿವರೆ ಭವದ್ವಿಧರಿರ್ದುಂ॥
ಗಳ ಪುರುಳಿಲ್ಲದ ಪೆಣ್ಣಂ।
ಕುಳಕ್ಕೆ ಕೇಡಪ್ಪುದರಪ ಕವೆಗಣಿಸುವುದೇ॥ (೫೧)

ವ॥ ಎಂದಿಂತು ಬಗೆಗೆವಂದಂತೆ ಸಭೆಯೊಳಭಯಂ ನಿರರ್ಗಳಂ ಗಳಪ್ಪುವನಾಕಕ್ಕೆ ಕೇಳ್ದು ಭೋಂಕೆನಿರ್ದೆತ್ತೆಯುಂ ಕರಿಯ ಶಿರಕ್ಕೆ ಲಂಘಿಸುವ ಸಿಂಗದ ಮುಸಕಮಂ ನಡೆವ ಕಡುಪಿನೊಳ್ ಪೂರ್ಣೈವ ಸಮುದ್ಭೂತಾವೇಶವಶದಿನಾತ್ಮಪ್ರದೇಶದೊಳ್ ತೊಡರ್ದು ನಿವಿರ್ದನವೆನೆ ವೈರಿನೃತ್ತಾಂತಾಯುಸ್ಸಾಂತ ಪಾತದಿಂ ಕಾಳಕಾಳಾಯಸದೊಳೊಗೆದ ರೋಮಜಾಳಮುಂ, ಪಗೆಯಸುಱದೆ ಬಱಗೆಯ್ಯ ಕಾಜಿಗೆ ಕಡಂಗಿ ಪೊಣ್ಮುಡುವ ಕಡುಗಲಿತನಮುಮಱಿದು ವಲ್ಲಭ ಪ್ರಣಯದಿಂ ಬೀರಸಿರಿ ವಿಗುರ್ವಿಸಿದ ಸಂಸ್ವೇದ ವಜ್ರದ ಹಿಪ್ಪಗಳೆನಿಸಿ ಮೊಯ್ಯವಿರ್ಗಳೆಡುಕದೊಳು ತುಱುಗಿ ತೋಱುವ ಬೆಮರ ಬಿಂದುಗಳುಂ, ಅಂತಃಪ್ರದೀಪ್ತ ಕೋಪಾಗ್ನಿ ತಾಪದಿಂ ಸಮುಪ್ಪೊಂಗಿ ಕಾಯ್ಪುಪ್ಪೆಂಬಂತೆ ಕೆಂಕ

ವಮಾದ ಘರ್ಮೋದ ಬಿಂದು ಸಂಕುಲ ಕಲ್ಲೋಳಭ್ರುಕಂಗಳುಂ, ಸಮರಾಮನೋತ್ಸ ಪ್ರೋತ್ಥಿತ ಪತಾಕೆಯುಂ ತ್ರಿಪತಾಕೆಯುಮಮರೆ ನಿರಮಿಸಿದ ವೇಣ್ಣಳಿಕ ಬಿಗಿದು ಗಂಟಿಕ್ಕಿದ ಪುರ್ವುಗಳುಂ, ಪೊಸಪೂರದೊತ್ತಿಗೊಳ್ ಸುಟ್ಟುವ ಕಿಚ್ಚುಮಗುಳ್ದಿನಿಸಿ ತುಱುಗೆಮೆಯ ತೆಕ್ಕೆಯೊಳ್ ಕೊಳಂಗೊಳ್ವ ಕಣ್ಣೀರೊಡನೆ ಘೂರ್ಣಿಸುವ ತರಳತಾರಕಂಗಳುಂ, ಪೂರ್ಣೋದ ಭಾಜನದೊಳುರಿವ ಗಂಧಕದ ಸೊಡರ ಕುಡಿಯೆನಿಸಿ ಬಹಳ ಬಾಷ್ಪಾಯಮಾನ ನಯನಪುಟಕೋಟಿಯೊಳ್ ಮಿಱುಗುವರುಣಿತಾಪಾಂಗ ಕಳಿಕೆಯುಂ, ಚರಪುರುಷ ವಚನಪರುಷದಿಂ ಕವಿದ ಕೋಪರಸತರಂಗಿಣಿಯ ತೆರೆಗಳೆಱಪದಿಂದಲುಗುವಂತೆ ನಡುಗುವೊಡಲುಂ, ಬಿಡದೆ ಕಡುಗಾಯ್ದು ವೀರರಸದೊಳಬ್ಬರಿಪ ಪರುಷ ವಚನಾವಲೋಹನುಂ, ದರಪಿಘಟಿತೋಷ್ಠಪುಟವದನಮುಖಪೆಯುಂ ನೆಱೆಯೆ ಪೊಱಮಡಿಸಲಿಕ್ಕಿದ ವಕ್ತ್ರನಾಳದ ತಿದಿಯ ಗಾಳಿಯೆನೆ ಕಂಪನೋತ್ಫುಲ್ಲ ನಾಸಾಪುಟಂ ಕದಡುವ ಕವುಷ್ಣ ನಿಶ್ವಾಸವಿಸರಮುಮಗುರ್ವುವಡೆಯೆ ಪರಿಪಚ್ಯಮಾನ ಸಂಗರಸಮುತ್ಸಾಹ ಫಲಮನಾಸ್ವಾದಿಸಂತಿರ್ದಾಡೊತ್ತುವ ನಾಳೆ ಕಾಳೆಗದೊಳೆಮ್ಮ ಕಲಿತನಕ್ಕೆ ನೀನೆ ಸಕ್ಕಿಯೆಂದು ತೊಡೆವೊಯ್ದು ನುಡಿವಂತೆ ಧಾತ್ರಿಯುಂ ತೊಟ್ಟನೆ ಸ್ವೇದಸಂತರಂಗಸಂಗತಾವೇಗಭಾವಮುರಣಪ್ರಯಾಣಲಾಲಸೆಯನನಿವಿಸೆ ಶರೀರಮಾ ನೆಗಳ್ದಂತಿರಸವಸದೆ ಬೞಿದೆ ಸಿಡಿದೇಳ್ವರಭಸಮೊಗವಿನಂ ಜಗದೀಶ ಪರಿಷತ್ತರಂಗಿಣಿಯನುನ್ಮುದ್ರ ರೌದ್ರರಸ ವೀರರಸ ಪೂರಂಗಳೊಮರ್ವೊದಲೆ ಮೇರೆಯುಂ ಮೀಱುವಿನಮೊತ್ತರಿಸೆ—

ಕಂ॥ ಜಡಿವ ಪಡಿಯುಜಿರ ಕಳಕಳ ।
ಮೊಡನೊಗೆತರೆ ಬೆಸನನಿಟ್ಟು ಬೇಡುವ ಚರನಂ ।
ಕಿಡೆ ನುಡಿವ ಹರಿಬವೆತ್ತುವ ।
ಕಡಂಗಿ ಮೂದಲಿಪ ರಭಸಮೇನುಗ್ರಮುದೋ ॥ (೪೩)

ವ॥ ಅಂತು ನಿರ್ಘಾತಕ್ಷುಭಿತ ಸಾಗರತರಂಗಪಟಳಮನ ನಿರ್ದಿಯ ಘುಳುಘುಳುಕಘೂರ್ಣನ ನೃಪಾಳಸಂಕುಳದೊಳಪ್ರತಿಹತಪ್ರತಿನೃಪತತತಾಯುಧಂ ಶತಾಯುಧನೆದ್ದುಚರನ ಚಾಪಳಾಟೋಪ ಸಂಭೃತಸ್ಮಿತ ಮುಖಾರವಿಂದನಂ ಮುಕುಂದನನಿಂತೆಂದಂ—

ಕಂ॥ ಇವನಂ ಗಳಹಿಸಿ ನಗುತಿ ।
ರ್ದ ವಿನೋದಂ ಸಾಲ್ವುದೆರಸ ಭವದೀಯ ಭಟಾ ।
ಹವ ನವನಾಟಕಮುಂ ನೋ ।
ಡುವ ಬಿಸದಕ್ಕೆನಿತಸೀಪ್ಪುದಿನ್ನವಸರಮುಂ ॥ (೪೪)

ಭಗಣಮುಗೆ ಬಾಣಹತಿಯಿಂ ।
ಗಗನಮೆ ಬಿಜ್ದಪ್ಪುದು ಪಡಿದು ಪಡಿದೆನೆ ಬಿದುಪಿಂ ।
ದುಗುವ ಬಿಡುಮುತ್ತುಗಳ್ವೆರ ।
ಸು ಗಜಂಗಳ್ ಕೆಡೆಯೆ ಖಚರಸ್ಯಸ್ಯಮನಿಸುವೆಂ ॥ (೪೫)

ವ॥ ಎಂಬುದುಮುದಿತಾನುರಾಗನಾಗಿ ನಿಜಾತಾರಾತಿಸೇನಾನ್ವ ಜಯಸೇನನಿಂ ತಿಂದಂ—

ಕಂ॥ ಸುರಪಥದೊಳೊಡ್ಡಿ ದರಿಂತನ।
ಶಿರಮುಂ ಪರಿದಯ್ದೆ ಕೊಳ್ವ ನಿನಗಾನಿದಿರೊಳ್।
ತರತರದೆ ಕಡೆವ ಖಚರರ।
ವರೂಥದಿಂ ಪಡೆವೆನಿನಿತರೆ ನಿಶ್ರೇಣಿಕೆಯುಂ॥ (೪೫)

ವ॥ ಎಂಬುದುಮಾನುಡಿಯ ಬೞಿವಿಡಿದು ವೀರಾಭಿರಾಮಂ ಭೀಮನಿಂತೆಂದಂ—

ಕಂ॥ ಬರಿವಿಡಿದು ಪಕ್ಕಮೆನೆ ತುಱು।
ಗಿರೆ ಕಣೆಗಳ್ ತುಂಡದಂತೆ ಕಕ್ಕಸ ಪುಂಖವೊ॥
ಣ್ಮಿರೆ ನೆತ್ತಿಯೊಳೆಱವ ಖಗೋ।
ತ್ಕರದೊಳ್ ತಡವಾಗ ಕೆಡಪುವೆಂ ಖಗಭಟರಂ॥ (೪೬)

ವ॥ ಎನೆ ವಿರೋಧಿಸಮುದಯಪುರಂಜಯಂ ಶತ್ರುಂಜಯನೆೞ್ದು ನಿಂದಿ ದುರ್—

ಕಂ॥ ಅರಿಮಾರಣಕ್ಕೆ ದಹನೋ।
ದರದೊಳ್ ಕೇಲಿಸಿದ ಪಾಪಯೆನೆ ಹಯರುಧಿರಾಂ॥
ತರದೊಳ್ ಪೂೞ್ದುಂ ಸಾವಿಗ।
ರೂಪನುಱೆ ಮುಱಿವ ಸಂಧಿಸಂಧಿಯೊಳಂಬಂ॥ (೪೭)

ವ॥ ಎಂದು ನುಡಿವ ವೀರಪ್ರಧಾನ ನಾಯಕರ ನುಡಿಯ ಬೞಿವಿಡಿದು ನಿರ್ನಿಗಡ ವೀರಗ್ರಾಮಣೀ ವಿನತಮುಖಿಳಭಟಪ್ರಕಾಂಡಮುಂತಳಂ ನಿರತಿಶಯ ನಿಜನಿಜ ಭುಜಬಳ ಪ್ರಥನ ಪ್ರತಿಜ್ಞಾಮುಖರನಾಗಿ—

ಚಂ॥ ತ್ರಿದಿವಕ್ಕೆಱೆವೊಡಂಟೆಯುಂ ಬೆಸಸು ಜೋದರ್ ಪಾಱಿ ಪೊಕ್ಕೆೞ್ದು ಕೊ
ಲ್ಲದೆ ಕಾಲಾಳಿನ ನಾಯಕರ್ ಕರದೆ ಗೇಣೊಳ್ ನೇಲ್ವಿನಂ ಕುತ್ತಿ ಕೊ।
ಲ್ವದೆ ನಾೞಾಂತಿಭಮುಱಿ ಸಾವಸೆಯುಪ್ರೋಲ್ ಬೀೞ್ವನ್ನೆಗಂ ಪೊಯ್ದು ಕೊ।
ಲ್ಲದೆ ಬಿಲ್ಲಾಳ್ಗೆ ಗೇಣ ಬಿನ್ನಣಕೆ ತೋಳ್ವಲ್ಪಿಂಗೆ ಮುಯ್ಯಾಂಪುದೇ॥ (೪೮)

ನೆೞಿಲೞಿವೊಳಗಿ ಮೇಗೋಗಿನ ತೋಱ್ಬಳ ನೆತ್ತಗಳಸಾಬಿಂಬಮುಂ।
ಮುಱುಯಿಸಿ ಮುತ್ತುಗಳ್ವರಸು ಸೂಸುವ ಕೋಳ್ವುಮಿಂ ವಿಶಾನುಬಂ॥
ಕಿೞಸನೆಸೆದಿರ್ದ ಕೆಯ್ಗುಡಿಯ ಸಂಪಗೆಯಿಂದಿನ್ನನತೇಯನಾದಂ।
ತೀವದಪಿಲೋಕದಂತಿರೆ ಪಡಲ್ವಡಿಸೆಂ ರಿಪುದಂತಿಯೂಥಮುಂ॥ (೪೯)

ಕಂ॥ ಉಡಿಯದ ಪಾಬ್ಬಸೆಯಿಲ್ಲಂ ।
ಒಡೆದುಬೀಗದ ಕೆಡದಿನೊಳ್ ವಿಪ್ರಗಜರದನಮುಂ ।
ಒಡಲಡಸಿ ಪೊಡೆದ ಜಂತ್ರದ ।
ಪುಡುಕಪ್ರೋಳಿ ಪೊಡೆವೆನಮಿತ ರಥಸಂಕುಳಮುಂ ॥ (೫೦)

ತೆಗೆದೆಚ್ಚು ಮೇಗಣಿಂಮೇ ।
ಗೆಗಗನಚರತುರಗಚಯಮುಮನಿನಬಿಂಬದೊಳೀ ।
ಇಗೆವರೆ ಕೀಲಿಸಿ ಮಾಣ್ಬ್ರಂ ।
ಜಗದೊಳಗಂಗೊಳಪ್ಪ ತುರಗಮೊಂಬಿದನೆ ದಿಟಂ ॥ (೫೧)

ದ್ವ್ಯಕ್ಷರಿ॥ ಕಲಿ ಕೋಂಕಲ್ಕೇಕಕ್ಕಂ ।
ಕಲಕ್ಕೆ ಕೋಲಿಕ್ಕೆ ಲಕ್ಕೆ ಲೆಕ್ಕಕ್ಕಲ್ಲಂ ॥
ಕಲಿ ಕೋಲಲಿ ಕಲಲ್ಕಕ್ಕಂ ।
ಕಾಲಕಕ್ಕಂ ಕಲಿ ಕಲಂಕಿ ಕೋಂಕಿ ಕಲಂಕಂ ॥ (೫೨)

ಗತಪ್ರತ್ಯಾಗತ ಶ್ಲೋಕಃ ಕುಂದಿನಿಂದೆಚ್ಚನದು ಬಂ ।
ಟಂದಮಲ್ಲದೆ ನಿಂದುದೆಂ ॥
ದೆಂದು ನಿಂದೆಲ್ಲಮದಟಂ ।
ಬಂದು ನಚ್ಚದೆ ನಿಂದಿಕುಂ ॥ (೫೩)

ವ॥ ಎಂದು ತಂತಮ್ಮ ಕಲಿತನದ ಬಲ್ಪಿನಗ್ಗಳಿಕೆಯುಂ ಪೊಣ್ಮೆ ಕಳಕಳಿಸಿ ಘೂರ್ಣಿಸುವ ಸಕಳರಾಜಲೋಕಮುಂ ಸಸ್ಮಯಮಂತಸ್ಮಿತ ಪ್ರಫುಲ್ಲಗಲ್ಲಮುಮುತ್ಪುಳಕಿತ ಭ್ರೂಲತರಂಗಮುಮಾಗಿ ತಚ್ಚರನಿಂತೆಂದಂ—

ಮ॥ ಪಲರುಂ ಚಕ್ರಿಯೊಳಿಂತೆ ನಿಮ್ಮ ಕೋಪದಿಂ ಮುಂ ಕಾದುವುದ್ಯೋಗಮ ।
ಬ್ಬುಲಿಗಳ್ ಮೆಚ್ಚಿಸಿ ಕಾವಲಿಂದು ಕಳದೊಳ್ ಮಾಣಿಂಕಮಂ ಬೇಡಿ ಬಂ ।
ದುಳಿವರ ಪ್ರೇಕ್ಷ್ಯಮಧೂಜನೀಕೃತನಿಜಸ್ತ್ರೀ ನೂಪುರಾಳಾಪಮಾಂ ।
ಸಲಿತಾತ್ಮ ಕ್ರಮಶೃಂಖಳಾ ಕಳಕಳರ್ ಭೂಪಾಳರಾಸ್ಥಾನದೊಳ್ ॥ (೫೪)

ವ॥ ಎಂದ ದೂತನಂ ನಿಜಾಶಯ ಪ್ರಾಜ್ಯ ಪರಿಧಿ ಸಮುತ್ಸನ್ನಮತ್ಸ್ಯರಾಪ ತಪನೋದಯೋದಿತಾಂತಸ್ಮಿತ ವದನಾರವಿಂದಂ ಮುಕುಂದನಿಂತೆಂದಂ—

ಕಂ॥ ಬಯಸಿ ರಣಮುರಣಮುಂ ನಿ ।
ನ್ನಯ ಪತಿ ಮುಜಾಗುವೊಡೆ ಕಾದುವೆನಾವಂತುಟಿನಾ ॥
ಜಿಯನಕಟ ಖಗೇಶಂ ದು ।
ರ್ನಯ ವೃತ್ತಿಯನಜಿದನೆನಿಪ್ಪುದದು ಕಲಿತನಮೋ ॥ (೫೫)

ವ॥ ಎಂದು ನುಡಿದ ಗಾಂಭೀರ್ಯಗರ್ಭಿತಾತ್ಮಕರಂಗವಿಸ್ತೀರ್ಣ ಪ್ರತೀಯ ಸಾಹಸ ಸ್ವಸಾತ್ಮ್ಯಕೃತ ಸಮರಜಾಂಗನಾರ್ಕಕೀರ್ತಿ ಕುಮಾರನಿಂತೆಂದಂ—

ಶಾ॥ ನೀಮುಂ ತಾಮುಮಿದಿರ್ಚಿ ಕಯ್ದುವಿಡಿವನ್ನಂ ನಿಲ್ವ ಸಂಗ್ರಾಮದೊಳ್ ।
ಅತ್ಯಾಮಾತ್ಯರ್ ಕಡಂಗುವೀಳಧಟವಡಿನ್ನ ಪ್ರಸ್ತರಂ ಪ್ರಾಪ್ತಸಂ ॥
ಗ್ರಾಮೋಗ್ರಾಂಗಣ ರಂಗದೊಳ್ ರಿಪುಕಬಂಧಾರಬ್ಧ ನೃತ್ಯೋತ್ಸವಾ ।
ರಾಮರ್ ವಿಸ್ತೃತಸಂಗರ ವ್ಯತಿಕರರ್ ನಿಲ್ವಂತುಟಂ ಮಾಡುವೆಂ ॥ (೫೬)

ವ॥ ಎನುತ್ತುಂ ಪರಿವರ್ತಿತ ವಿಲೋಕನಾಕ್ರಾಂತ ದೂತವದನನಾಗಿ—

ಕಂ॥ ಜಾಱಂ ಗಳ ನಮ್ರರಸಂ ।
ಪಾಱುವ ಬಹುರೂಪ ವಿಕೃತಮಂ ಪಲತೆಱದಿಂ ॥
ತೋಱುವ ಪುಗರಣಮಿವರೊಳ್ ।
ಮಾಱಾಂತೊಡನೊಡನಾಡೆ ನಗೆಗೆಡೆಯಕ್ಕುಂ ॥ (೫೭)

ವ॥ ಎಂದು ನಿಜನಂದನನ ನುಡಿಗಳನುತ್ತರಾವಷ್ಟಂಭದಿಂ ಪಿಂದುಗೆಯ್ದು ತನಗೆ ಮುಗುಳ್ದು ಮಾತ್ಮಪರಿನೃಪ ಪ್ರತಾಪಮನತಿಶಯಿಸಿ ಜೂಟು ಮಾಡ್ಪ ಚರನಂ ಜ್ವಲನಜಟಿ ಕಟಾಕ್ಷಿಸಿ—

ಕಂ॥ ಅವಱಿಯದನ್ನನರ್ತ್ವ ।
ಗ್ರೀವಂ ಪೇೞ್ದುದರ್ ನಾಗಳಾದನೆ ಗಳ ಗ
ರ್ಜಾವಷ್ಟಂಭದಿನೆನಿತಂ ।
ಜಾವಳಿಸುನೆಯೆಲವೊ ದೂತನೋ ನೀಂ ಬೂತೋ ॥ (೫೮)

ಮ॥ ಅನಯಂ ಪುಟ್ಟಿದೆಯುಂ ಪವಣ್ಗಿಡದೆಯುಂ ತಂತಮ್ಮ ತೇಜಃ ಪ್ರಭಾ ।
ಪನೆ ಮೆಯ್ವೋಱದೆಯುಂ ರಣಪ್ರಣಯಮೃಶಂ ಸ್ವೈರದಿಂದಿಂತೆ ಪೋ ॥
ಯ್ತನಿತುಂ ಕಾಲಮದಲ್ಲದೇಂ ಗಳ ದಿಟಕ್ಕೆಂತೊರ್ವರೊರ್ವರ್ಗೆಯೋ ।
ಘನದೊಳ್ ಕೆಯ್ದುಗೆವನ್ನರಿರ್ದಪರೆ ಪೇೞ್ ವಿದ್ಯಾಧರ ಶ್ರೇಣಿಯೊಳ್ ॥ (೫೯)

ವ॥ ಎಂದು ಕೇಸರ್ದುರಪಾಂಪ ಬೀಯಗಾಣಂ ಬೀಯಗಂ ಸಮಯೋಚಿತೋಕ್ತಿಯಿಂ ನಿಲಿಸಿ ಪೌದನಾಧಿಪತಿ ನಿಸರ್ಗೋದಾತ್ತ ಗಂಭೀರಧಣತೆಯಿನಿಂತೆಂದಂ—

ಕಂ॥ ಕಿಱುಗುಳಿಸಿ ಜಲಕ್ಕೆ ಪೂಣಿಗ ।
ರುಜಿರೊಡುವನಾಂತೆ ತೋಳ್ವಲಕ್ಕೆರಂಗಳ್ ॥
ಮುಱಿದು ನೆಗಱ್ದುಡಮಿವಂ ಬಿಡ ।
ರಜಾವಿದಸುಟಿತಮನೆ ನೆಗಱ್ದು ಪೆಱ ತೆಗೆವನವೇ ॥ (೬೦)

ಕಂ॥ ಅದಱಿಂದಿದನುಚಿತಮೆನಿಸಿದ ।
ತ್ರಿದಿವರಮೆಯುಮ್ಮದೆಯೊಳ್ಕರದುಜ್ಜುಗಮನೆ ಪ್ರಾ ।
ಜ್ಜಿದುದು ವಿಫಳಮೆನಿಸದೇ ನೀ ।
ಡಿದಪ್ಪುದಿಂ ನೆಗಱ್ಗೆ ಬಲ್ಲವೊಲ್ ನಿನ್ನರಸಂ ।   (೬೧)

ವ॥ ಎಂದು ತನ್ನುಮಂ ತ್ರಿಪೃಷ್ಠನುಮಂ ಕೆಯ್ಯೆಜ್ಜಿ ನುಡಿದು ಚರನಂ ಕರೆದು ಬೀಳ್ಕೊಟ್ಟು ಕಳಿಪ್ಪುವೆಡೆಯೊಳ್ ಎಡೆಯುರ್ಚಿ ನಿಜಭುಜಾದಂಡಕಂಡೂಪರಣ ನಿಘರ್ಷಣ ಕುತೂಹಳಂ ಹಳಧರನೆಱ್ದು ನಿಂದಿರ್ದು—

ಕಂ॥ ಅಮುಱಿಯಿಮುಱಿದ ವಕ್ರದ ।
ಚೋರಮಾರ್ಗಮನಟ್ಟಿಗೆಲ್ಲರ್ತಲೆ ಬಿಚ್ಚಿತ್ತೆಂ ।
ಬೀ ಮುಱಿಕದಿಂದಮೆಂತಳಿ ।
ನೇಮಂ ನಡೆತಂದನಂತೆ ನೆಲೆ ರಣಮುಖದೊಳ್ ।   (೬೨)

ಮ॥ ಪಿರಿದುಂ ನಿನ್ನಧಿನಾಥನಟ್ಟಿಗೆ ಶಿರೋಭಾರಂ ಸರೋಜಾಕ್ಷ ದೋಃ ।
ಪ್ರರಿಘಕ್ರುತ್ಕಟ ಯುದ್ಧಕೇಳಿ ರಸಕಂಡೂಭಾರಮಾಕ್ರಾಂತ ಭೂ ।
ವರವೃಂದಕ್ಕೆ ಕಪೋಲನುಜೀವನ ನಿಬದ್ಧೋದ್ವೇಗಭಾರಂ ಮಹಂ ।
ಧರೆಯನ್ನಾಯ ಪಥಪ್ರವರ್ತಿ ನಿಜಕಾಂತಾಭಾರಮುಂ ಪಿಂಗುಗುಂ ।   (೬೩)

ವ॥ ಎನುತ್ತುಮಧಿಪತಿ ಪ್ರಸ್ಥಾನ ಪ್ರತಿಷ್ಠಮಾನನಂ ಮತ್ತಮಾವನಿಂತೆಂದಂ—

ಕಂ॥ ಎಲವೆಲವೊ ನೀನೆ ಬೞಿಕೀ ।
ಕಲಹದೊಳೇಗೊಳಿಸ ಬುದ್ಧಿವೇಱ್ದರ ಮಾತಂ ।
ಸಲಿಸದವೊಲ್ ನಿನ್ನವನಂ ।
ಚಲಕ್ಕೆ ನುಡಿದಂತೆ ಗಂಡನಾಗಿಸು ರಣದೊಳ್ ।   (೬೪)

ವ॥ ಎಂದ ತದ್ಬಳನ ವಚನಕ್ಕೆ ಸಪ್ರಪಂಚ ಪ್ರಚಂಡ ಸಮುಚಿತೋತ್ತರಮನೀಯುತ್ತುಮಂಬರ ಚರೇಶ್ವರಚರಂ ತದಾಸ್ಥಾನಮುಂಟಪಮಂ ಪೊಱಮಟ್ಟು ಭೋಂಕನೆ ಗಗನಕ್ಕೊಗೆದು ಪೋದನನ್ನೆಗಮಿತ್ತಲತ್ಯಂತ ಸ್ನೇಹಭಾವ ಪ್ರೇರಿತಾಂತರಂಗನತುಳ ಬಳನಿಳಯರಪ್ಪೆಳಯುಂಬಿಗೆ ವಿದ್ಯಾಧರ ವಿದ್ಯಾಬಳಮುಮಾಳವಡುವ ಬಗೆಯುಂ ಬಗೆದು.

ಚಂ॥ ಜ್ವಳನಜಟಿಕ್ಷಿತೀಶನವಳೋಕಿನಿತಾಂ ಮೊದಲಾದ ವಿದ್ಯೆಯಂ ।
ಪಲವನುದಾತ್ತನಿತ್ತೊಡೆ ಯಥಾಕ್ರಮದಿಂದವನಾ ಸ್ವಯಂಪ್ರಭಾ ।
ಲಲನೆಯ ವಲ್ಲಭಂ ನಯದೆ ಸಾಧಿಸಿದಂ ಬಲಭದ್ರಸಂಯುತಂ ।
ಸುಲಲಿತ ಮೂರ್ತಿ ಕೀರ್ತಿ ರಮಣೀ ರಮಣಂ ಮನಸ್ಯೈಕಬಾಂಧವಂ ।   (೬೫)

ಗದ್ಯಂ

ಇದು ನಿಖಿಳ ಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳನೀ ಕಳಹಂಸಾಯ ಮಾನಮಾನಿತ
ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾ
ನಂದನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕ
ಬಾಂಧವ ಶ್ರೀ ವರ್ಧಮಾನ ಪುರಾಣದೊಳ್
ವಿವಾಹಮಂಗಳದೂತಾಳಾಪವರ್ಣನಂ
ಸ ಪ್ತ ಮಾ ಶ್ವಾ ಸ ಂ.

ಅಷ್ಟಮಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಶ್ರೀ ಸೌಭಾಗ್ಯದ ಭಾಗ್ಯದ ।
ಭಾಸುರ ತೇಜದ ವಿರಾಜದೌದಾರ್ಯದ ಲೀ ॥
ಲಾಸದನಂ ರಂಜಿಸಿದಂ ।
ಕೇಸರಿರಿಪು ಪಂಚಪರಮಗುರುಪದವಿನತಂ ॥ (೧)

ವ॥ ಅನಂತರಂ ಸಮಗ್ರಸಮರಕೇಳೀಲೋಳತೆಯಿಂ ಜಳಜಾಕ್ಷಂ ಬಳಾಧ್ಯಕ್ಷನಂ ಕರೆದು ಕದನಪ್ರಯಾಣ ಭೇರಿಯಂ ಪೊಯಿಸವೇಳ್ವುದಾಗಳ್—

ಉ॥ ಆಗಸದಂತರಾಳಮನಳುಂಬಮಿದೆಂಬಿನಮುಯ್ದು ತೀವಿ ದಿ ।
ಗ್ಭಾಗಮನಾವಗಂ ಬಿಡದವುಂಕಿ ನಿರಂಕುಶ ವೃತ್ತಿಯಿಂ ಮಹಾ ॥
ಭೋಗತೆವೆತ್ತು ನಾದಮಯಮಾದುದು ಲೋಕಮಿದೆಂಬ ಸಂಕೆಯಂ ।
ಬೇಗದಿನಾಗಿಸಿತ್ತು ರಣಭೇರಿಯ ಭೂರಿ ಗಭೀರನಿಸ್ವನಂ ॥ (೨

ಕಂ॥ ಎತ್ತಿದ ಪಟಿಯಿಗೆ ಜಕ್ಕುಲಿ ।
ಸುತ್ತಿರೆ ನಕ್ಕಪುದು ಗಗನನಾಶಾಮುಖದಿಂ ॥
ಸುತ್ತಲುಮೆನೆ ಸೂಚಿಸಿದು ।
ವೆತ್ತಂ ಪೊಜಮಡುವ ನೃಪರ ಜಯದುಂದುಭಿಗಳ್ ॥ (೩)

ವ॥ ತದನಂತರಮಂತರಾಯಾಪಾಯ ದುರ್ನಯನಿಕಾಯ ನಿವಾರಣಸಮರ್ಥ ತೀರ್ಥಕರ ಪೂಜಾವಿಧಾನ ಸಿದ್ಧಾಶೇಷಾಕ್ಷತಪೂರ್ವಕಂ ಶುಭಮುಹೂರ್ತದೊಳ್ ಗಗನಗಾಮಿನೀ ಪ್ರಮುಖ ವಿವಿಧವಿದ್ಯಾಯತ್ತ ಚೈತ್ರರಾಜಪುತ್ರರ್ವೆರಸು ಪುಣ್ಯ ಸುವಾಸಿನೀ ಪ್ರಮುಖ ಮೌಹೂರ್ತಿಕ ಪುರೋಹಿತ ವಿಕೀರ್ಣ ಶೇಷಾಕ್ಷತಾಶೀರ್ವಚನ ಪುರಸ್ಸರಮನುಕೂಲಿತ ಸಮಸ್ತ ಶಕುನಬಲ ದೈವಬಲ ಮನೋಬಲಂ ಪ್ರಜಾಪತಿ ನೃಪತಿ ನಿಜರಾಜಭವನದಿಂ ತಳರ್ದು ಪೊಱಮಡುವಲ್ಲಿ—

ಮ॥ ಸ್ರ॥ ದ್ರುಮರಾಜೀರಾಜಿತಂ ಜಂಗಮಮಿದುದಯಶೈಳ ತದಗ್ರಾಧಿರೂಢಂ ।
ಹಿಮರೋಚಿರ್ಮಂಡಳಾಳಂಕೃತಮಿದಭಿನವಂ ಲಕ್ಷ್ಮಮೆಂಬನ್ನಮಾರೂ ॥
ಢಮದೇಭಂ ಕೇತುಮಾಳಾವಿಳಮೆಸೆಯೆ ತದುತ್ತಾನಪೂರ್ವಾಸನೋದ್ಭಾ ।
ಸಿ ಮನಂಗೊಂಡೊಪ್ಪಿದಂ ಮುತ್ತಿನ ಕೊಡೆಯ ನೆಬಿಲ್ದಾಣದೊಳ್ ಕೃಷ್ಣ
[ನಾಗಳ್ ॥ (೪)

ಮ॥ ಖರೆ ಲೀಲೋನ್ನಮಿತಾಂಕುಶೋಜ್ಜ್ವಳಭುಜಾಗ್ರಂ ಲೋಕಪಾಳೆಂದು ಭಾ।
ಸುರ ಹರ್ಮ್ಯಾಗ್ರಜಳ ಕೂಟದಂತೆ ನಿಜದೇಹಚ್ಛಾಯ ಸಂವೀತನಂ॥
ಬರಸಿಂಧುಪ್ಲವ ಧೌತನೀಳನಗದಂತಾರೂಢಗಂಧೇಭನೊ।
ಪ್ಪಿರೆ ಬಂದಂ ಬಳಸಪ್ರತರ್ಕ್ಯಬಳಸಪ್ರಾರಾತಿ ಭೂಭೃದ್ಬಳಂ॥ (೫)

ಕಂ॥ ಗಾಲಿಗಳೋಲಿಗಳಾಗೆ ಹ।
ಯಾಳಿ ವಿಲೋಳಾಳಕಾಳಿಯಾಗೆ ತವಾಜಿ।
ಶ್ರೀಲಪನಮಾದ ತೇರ್ಗೆ ಯ।
ಶೋಲೋಲಂ ಜ್ವಳನಜಟಿ ಶಿರೋಮಣಿಯಾದಂ॥ (೬)

ಚಂ॥ ಬಗೆಗೊಳಲೋಜೆಗೆಯ್ವುವ ಕೆಲಕ್ಕೆ ನಿವರ್ತಿಪವೊಂಕಿ ದಾಂಟಿಪೋ।
ಜೆಗೆ ತುರಗಂ ತ್ರಿಸಂಧಿ ವಿನತತ್ವದಮನ್ವಿತಲೋಹ ಮುಕ್ತ್ರನಾ।
ಗೆಗೆ ಬಸವಾಗಿ ಪೆತ್ತು ಲಯದೊಳ್ ಬರೆ ಬಂದನಿಸ್ಪ್ರಭಾನ್ವಿತಾ।
ಶುಗ ಪಥನರ್ಕಕೀರ್ತಿ ಜಯವಾಜಿಯನೊತ್ತಿನ ಮುಂದೆ ತೋಱುತುಂ॥ (೭)

ಕಂ॥ ಬರೆ ಹರಿಬಳ ಕರಿಯುಗಳಂ।
ತರಣಿ ಮೃಗಾಂಕಾಧಿರೂಢ ಶಾವಂಗಳವೋಲ್॥
ಸುರನಗಮೆ ತಳರ್ದು ನಡೆವಂ।
ತಿರೆ ನಡೆದುದು ಪೌದನಾಧಿರಾಜ ಗಜೇಂದ್ರಂ॥ (೮)

ವ॥ ಅಂತುಭಯಪಾರ್ಶ್ವ ಸನ್ನದ್ಧ ಸಿಂಧುವರವರೂಢ ತುರಗಾಧಿರೂಢ ನಿಜ ತನೂಭವ ಬಾಂಧವ ಪ್ರಧಾನ ಪರಿವೃತಂ ಮಹಾರಾಜಂ ರಾಜನಿಳಯದಿಂ ತಳರ್ದು ನಡೆಯೆ—

ಮ॥ಸ್ರ॥ ಅದೆ ಘೋಷ್ಯದೋಚ್ಚಳಚ್ಛೀಕರ ತಿಮಿತ ಚಮೂರೇಣು ದಿಗ್ಭಿತ್ತಿಯಂ ಮೆ।
ತ್ತಿದುದೆತ್ತಂ ಮುಂಬುಗೊಂಡಂಬರಮನಿತುಮನುದ್ವೃತ್ತತಾಕಾಂಬರಂ ನುಂ।
ಗಿದುದಾಭ್ರಕ್ಷೇಪದಿಂದಂ ಕುಸಿದು ಕುರುಳಗೊಂಡುದಿರ್ ವಾಸನಾಂಬುವಿಂ ತೀ।
ವಿದುದೆಂಬನ್ನಂ ಜಗನ್ಮಂಡಳವೆಡೆಗಿಡೆ ಬಂದತ್ತು ಮತ್ತೇಭವೃಂದಂ॥ (೯)

ಚಂ॥ ಖುರಹತಿಯಿಂ ಕಜಲ್ಪದಿರ್ದ ಧೂಳಿಜದಿಂ ಪೃಥಿವಿಯೋಳಿಂತು ನಾಗಮಂ।
ದಿರಮೊಗೆತರ್ಪ ಧೂಳಿಗೆ ವಿಯಚ್ಚರವೃತ್ತಿಯನೊಪ್ಪುಗೊಟ್ಟು ಪೇ।
ಚರದೊಳಸೋರೆ ದಿಕ್ಪ್ರತೀಗಳೆಂದುದಸೇಗೊಳೆ ಹೇಱಿತ ಪ್ರತಿ।
ಸ್ವರಮಿಷದಿಂ ಕಡಂಗಿ ನಡೆತಂದುವು ವಾಜಿಗಳೇಱಿತಾಜಿಗಳ್॥ (೧೦)

ಉ॥ ಸ್ಫುರಯುತ ಚಕ್ರಚೀತ್ಕೃತಿಯುರಾತಿಯ ಕರ್ಮ್ಯ ಕರಾಳಚಕ್ರಮುಂ ।
ಕರೆವವೊಲಾಗೆ ಮಿಳ್ಳಿಪ ಪತಾಕೆ ವಿರೋಧಿಯ ದುರ್ಮಾಕೀರ್ತಿರಜಂ ॥
ಜೊರೆದ ವಿಯದ್ದ್ಯುಹಕ್ಕೆ ಮಿಗೆ ಶುದ್ಧಿಯನೀವವೊಲಾಗೆ ವಾಜಿಸಿ ।
ಸ್ಫುರಖುರಚೂರ್ಣಿತಾವನಿತಳಂ ತಳದೀತ್ತು ವರೂಥಸಂಕುಳಂ ॥ (೧೧)

ಚಂ॥ ಮಿಸುಪಟಿಧ್ವನಿ ಮಿಹನಿವಹಂ ಪೊಳೆವಷ್ಟಬದೊಷ್ಟಬಂ ವಿರಾ ।
ಜಿಸುವುರು ಕೂರ್ಮಕೋಟಿಯೆನೆವಾಯತ ಕುಂತಕುಳಂ ಜಳಾಹಿ ಮಿ ।
ಳ್ಳಿಸುವ ತನುತ್ರ ದೀಧಿತಿ ಮಹೋದಕವಾಗೆ ಪದಾತಿಜಾತಮುಂ ।
ಬಿಸದ್ಭೃಶ ವಾರಿರಾಶಿ ಕವಿತಂದುದು ಚಾಪತರಂಗಸಂಕುಳಂ ॥ (೧೨)

ವ॥ ಅಂತು ನೆರೆದು ಬರ್ಪನಂತ ಚತುರಂಗಸೇನೆವೆರಸು ಪುರಮುಂ ಪುರಂಧ್ರೀಜನ ಚಳವಿಳೋಚನ ಚಂಚರೀಕ ಸಂಚಯದ್ವಿಗುಣಿತ ಪಿಂಛಾತಪತ್ರ ಸಮುದಯಂ ಪೊಣ್ಮುಮುಟ್ಟ ನಡೆಯೆ—

ಕಂ॥ ಎಳೆಯೆ ಕಳದಾರ್ತತ್ರಚರಬಳ ।
ದೊಳಾಂಪ ಪಿಗ ಬಳಮನೂಸಿ ಸುಂಗಲ್ ಮುಂಗೋ ।
ಳೊಳೆ ನಿಜದಳ ಭರಮುಂ ಪೇ ।
ಚ್ಛಳಿಸಿ ನೆಗೆದುದು ಚಮೂರಜಂ ಘನಪಥದೊಳ್ ॥ (೧೩)

ಉ॥ ದೂರದ ಬೆಟ್ಟುಗಳ್ ದಿಟದೆ ಸುಣ್ಣದುಪಾದುವು ಪೂಜ್ಯವೆಯ್ದೆ ಮು ।
ನ್ನೀರನಹುತರ್ಣ ತೀರ್ದುಗುಟ್ವ ಪೆಗ್ಗುಣಿಗಳ್ ದಿನಪದ್ವಿಮಾನಮಾ ॥
ಕಾರಮಡಂಗೆ ಪುತ್ತುಕದುರ್ಣ ಮುಚ್ಚಿದುದೆಂಬಿನೆಗಂ ವಿಕೀರ್ಣ ಸೇ ।
ನಾರಜಮುರ್ವಿ ಪರ್ವಿದುದು ನಿರ್ವಿವರಂ ಭುವನಾಂತರಾಳಮುಂ ॥ (೧೪)

ಕಂ॥ ಪಡೆಯ ಪದಹತಿಯೊಳುರ್ವಿದ ।
ಪುಡಿ ನೆಗೆದೊಗೆದಿಭ ಕರಾಗ್ರ ಶೀಕರದಿಂ ನಾಂ ।
ದೆಡೆಯೊಳ್ ಕಲಂಕಗೊಂಡಿರ್ದಿದಿರೆ ।
ಪಡೆದುದು ಶಶಿಬಿಂಬ ಶಂಕೆಯುಂ ರವಿಬಿಂಬಂ ॥ (೧೫)

ವ॥ ತದನಂತರಂ—

ಕಂ॥ ಅದಿದಾರ್ನಕರವದಿಂದೊಡೆ ।
ದ ದಿಶಾಭಿತ್ತಿಗಳನಮರೆ ಮೆತ್ತಲ್ಕುಯ್ವಂ ।
ದದಿನನುಕೂಳಾನಿಳಮು ।
ಯ್ವುದು ಮದಜಳದೊಡನೆ ಬೆರಸಿ ತದ್ಧೂಳರಜಮುಂ ॥ (೧೬)

ಕಂ॥ ನೆಲನ ದಿಶಾವಳಿಯ ನಭೋ।
ವಲಯಮುಮಿಲ್ಲೆನಿಸಲಾದ ರಜನೊದವಲೋತ್।
ಬಲಮ ಧುಳಾವಳಿಯ ದಿಶಾ।
ವಲಯ ನಭೋವಳಿಯುಮಿಲ್ಲೆನಲ್ಕಾಯ್ತಾಗಳ್। (೧೭)

ಅಂತೆಳೆಯುಂ ದಿಶೆಯುಂ ನಭ।
ಮುಂ ತನ್ಮಯಮಾಗೆ ನಡೆವ ಪಡೆವೆರಸೆಯ್ತಂ॥
ದಂತಾನೃಪತಿ ರಥಾವ।
ರ್ತಾಂತಿಕದೊಳ್ ಬೀಡುವಿಟ್ಟನನ್ನಗಮಿತ್ತಲ್। (೧೮)

ಚರನ ನುಡಿಗೇಳ್ದು ಕೋಪದಿ।
ನುರಿದೆದ್ದಂ ಭ್ರುಕುಟಿಧೂಮ್ರನರುಣಾಪಾಂಗ।
ಸ್ಫುರಿತ ಸ್ಫುಳಿಂಗನಂಬರ।
ಚರರಾಜನಕಾಲ ಕಲ್ಪಶಿಖಿಯೆಂಬಿನೆಗಂ॥ (೧೯)

ವ॥ ಅಂತಗ್ರಳಂ ಕೆಳರ್ದು ಚರವದನದತ್ತಲೋಚನನರಾತಿವಿಕ್ರಮ ವಿಹಾಸಿ ಸಸ್ಮಯ ಪುನಃ ಪುನಃ ಪ್ರಶ್ನಮುಖರನಾಹವ ಮಹೋತ್ಸವೌತ್ಸುಕ್ಯದಿಂದಂ—

ಕಂ॥ ಎಂತೆಂತೋ ದಿಟಮೆಯ್ತಂ।
ದಂತಾಂಪರೆ ತಾಮೆ ನಮ್ಮ ಪೌದನವವರಿಂ॥
ನಿಂತೀ ಬಿನದಮುಮಂ ನೋ।
ಡ್ಪಂ ತಡವೇಕೆಂದು ಕರೆದು ಸೇನಾಪತಿಯಂ। (೨೦)

ತಲೆ ಬಟಿವಟಿಯಾಗಿರೆ ಕೊಡು।
ವ ಲಲನೆಯಂ ಬಱಿದೆ ಕಳಿಪದವನತ್ತ್ರಿಯನಿಂ।
ಸಲಿಸುವೆನೀಗಳ್ ನಡೆಯಿಸು।
ಬಲಮಂ ನೀನೆಂದು ಖಚರಪತಿ ಬೆಸಸುವುದುಂ॥ (೨೧)

ಭುಗಿಲೆನೆ ನೆಗೆದಳ್ವಿದ ತ।
ತ್ಖಗಾಧಿರಾಜ ಪ್ರಚಂಡ ಕೋಪಾಗ್ನಿ ಜ್ವಾ।
ಳೆಗಳಿಂ ರವಿಮಂಡಳಮೇ।
ಱಿಗಾಯ್ದುದೆನಿಪಿದುದು ಸಾರ್ದು ಚರಮಾಚಳಮಂ॥ (೨೨)

ಗರುಂಡಾಂಕನ ಬಾರಿಗೆ ಸಂ।
ಗರಮಧ್ಯ ಸ್ಥಳಿಗೆ ನಡೆವ ಖಗಪತಿಗಮರ್ವಂ॥
ತಿರೆ ಕಾಲಧಾರಿಕಂ ತೊ।
ಟ್ಟಿರಕ್ತಪಟಮೆನಿಸಲಾರ್ತುದಂಬರಮಾಗಳ್। (೨೩)

ಕಂ॥ ಹಯಕಂಠನುರಃ ಕಮಳಾ ।
ಲಯದಿಂ ಸಿರಿ ಸಂಜೆವೊಱ್ತು ಬರೆ ಮುಕುಳಿತಸುಖೋ ।
ದಯೆಯಾಗಿ ಪುಗಿಸಿ ತದ್ಗೇ ।
ಹಿಯೊಂದೆ ಮುಚ್ಚುವವೊಲಾಯ್ತು ನಳಿನನಿಕೋಚಂ ॥ (೨೪)

ರವಿ ಬಯ್ಗುವೊತ್ತಿಲಂಪಿ ।
ಕ್ಕುವ ಕುಂಕುಮರಜದ ಪೊಟ್ಟಳಕ್ಕೊತ್ತಿದನೆಂ ॥
ಬವೊಲರಗಿನ ಮುದ್ರೆಯನೆಸೆ ।
ದುವು ಮಧುಯುತ ಮುಕುಳಿತಾಂಬುಜಂಗಳೊಳಳಿಗಳ್ ॥ (೨೫)

ಅಱಿಪದುಪಶಾನ್ತನೆನಿಪ್ಪನ ।
ನುಱಿದಂ ಪದ್ಮಿನಿಯುಮಗಮಿದೆ ನಯಮೆಂಬಂ ॥
ತಱಿಸದೆ ರಥಾಂಗಮಿಥುನಮುಳ ।
ನುಱಿದುದು ಸನ್ಮಾರ್ಗವರ್ತಿಗಿಂತಿದುವೆ ಫಳಂ ॥ (೨೬)

ವ॥ ಅಂತು ಸಮನಿಸಿದ ಸಾಯಂತನ ಸಮಯದೊಳ್ ಸಚಿವಸಮುಚಿತ ವಚೋನಿಷೇಧಿತ ತದಾಸಿಂತನ ವಿನಿಷ್ಕ್ರಮೋತ್ಕಂಠನಶ್ವಕಂಠಂ ಕಾಲೋಚಿತಾಚರಣಪರ ನಿರ್ಗನಂ—

ಕಂ॥ ರವಿಬಿಂಬ ಶಿರೋಮಣಿ ಪಾ ।
ಱಿ ವಾರ್ಧಿಯೊಳ್ ಬೀೞೆ ಖಚರವಿಳಯಕ್ಕೆಯ್ದ ॥
ಡುವ ಕಾಳರಾತ್ರಿಯೊಳ್ಗುರು ।
ಳಿವೆ ಕದಱಿದವೆನಿಸಿ ನೆಗೆದುವಳಿಶಬಳತಮಂ ॥ (೨೭)

ವ॥ ಅದಲ್ಲದೆಯುಂ—

ಕಂ॥ ಇದು ರಜನೀವದನಾಳಕ ।
ಮಿದು ಗಗನ ಶ್ರೀಲಲಾಮ ಮೃಗಮದಮಿದು ದಿ ॥
ಕ್ಸುದತೀ ಶ್ಲಥಕಚಭರಮೆಂ ।
ಬುದನೆನಿಸಿದುದಖಿಳ ದಸ್ಯುಕಾಂತಂ ಧ್ವಾಂತಂ ॥ (೨೮)

ವ॥ ಮತ್ತಂ—

ಕಂ॥ ಇದು ಕೃತಕ ಕಜ್ಜಳ ವ್ರಜ ।
ಮಿದಪಾವಕ ಧೂಮನಿವಹಮಿದಕಾಲಘನಾ ॥
ಬುದ ಪಟಳಮುರ್ವಿಯಂ ಪ ।
ರ್ವಿದತ್ತಿದುತ್ಪಾತಮೆನಿಸಿದುದು ಸಂತಮಸಂ ॥ (೨೯)

ಕಂ॥ ಅವಿರಳ ತಿಮಿರಾರ್ದ್ರ ಮೃಗೋ।
ದ್ಭವ ಸಿಕ್ತನಭೋಂಗಣಕ್ಕೆ ರಾಜಾಗಮನೋ॥
ತ್ಸವದೊಳ್ ಬಿತ್ತರಿಸಿದ ರಂ।
ಗವಲಿಯ ಮುತ್ತುಗಳೆವೆನಿಸಿದುವು ತಾರಗೆಗಳ್॥ (೩೦)

ವ॥ ಮತ್ತಮಾಗಳ್—

ಕಂ॥ ಕವಿದು ನಿಜಾಂಶು ಬಳಂ ನೂಂ।
ಕುವ ತಿಮಿರಬಳಂ ತೆರಳ್ದು ಪೆಱತೆಗೆವ ರಣೋ॥
ತ್ಸವಮಂ ನೋಡಲ್ಕೆಟ್ಟಿಂ।
ದವೊಲೇಱಿದನುದಯ ಶಿಖರಮಂ ಮೃಗಲಕ್ಷ್ಮಂ॥ (೩೧)

ವ॥ ತದನಂತರಂ—

ಕಂ॥ ಖಗಬಳರುಧಿರದೆ ಕೆಂಪಡ।
ರ್ದ ಗಗನಮುಚ್ಯುತನ ಕೀರ್ತಿಯಿಂ ಧವಳಿಪುದಂ॥
ಜಗಮನುಮಾನಿಪಿನಂ ಸಂ।
ಜೆಗೆಂಪು ಮೆಯ್ಗರೆಯೆ ಬೆಳಗಿದುದು ಬೆಳ್ದಿಂಗಳ್॥ (೩೨)

ವ॥ ಅಂತು ಬೆಳ್ಳಂಗೆಡೆದ ಬೆಳ್ದಿಂಗಳೊಳ್ ಶಾರ್ಙ್ಗಧರನುಮಶ್ವಕಂಧರನುಂ ತಂತಮ್ಮ ರಾಜಮಂದಿರದೊಳುಪಚಿತ ಪ್ರಸ್ತುತ ಸುಭಟಗೋಷ್ಠೀ ನಿರ್ವ್ಯಂದದಿಂದರ್ಧ ರಾತ್ರಂಬರಮೋಲಗದೊಳಿರ್ದು ಅನಂತರಂ ಸಂಗರಾಜಿತ ವೀರಶಯ್ಯೆಯೊಳುಷಃ ಸಮಾಗಮೋತ್ಕಂಠರಿರ್ಪಿನಂ—

ಚಂ॥ ಎಸಳ್ವಡಿಗೆತ್ತ ತಾವರೆಗಳೋವರಿಯೊಳ್ ಸುಖನಿದ್ರೆಯಿಂದೆ ಜೋಂ।
ಪಿಸುವಳಿಯಂ ಪ್ರಭಾತಶುಭಗೀತಿಯನಾಣತಿಗೆಯ್ಯುತುಂ ಯಥಾ।
ವಸರ ನಿಬದ್ಧಮುಂಗಳಮನೋದಿಸುತುಂ ಗೃಹಕೀರಮಂ ಪ್ರಜಾ।
ರಿಸಿದುದು ಕಾಲಭೂಪನ ನಿಯೋಗದ ಸೂಳಿವಱಂಬೊಲೊಂದೆಲರ್॥ (೩೩)

ಮ॥ಸ್ರ॥ ಸ್ವವಿಧೇಯಾಸಕ್ತಚಿತ್ತರ್ ತಮತಮಗತಿ ಸಂಭ್ರಾಂತರೆಟ್ದರ್ ನರರ್ ಮೂ।
ರಿವಿಡುತ್ತುಂ ನಿಂದುಮೆಯ್ಯಂ ಬಿದಿರ್ದೆಳಸಿದುದಶ್ವಾಳಿ ಮೇಪಿಂಗೆ ತೂಗಾ।
ಡುವ ಯಾನಾನೇಕಮುಂ ಮಿಳ್ಮಿಳಿಸಿ ಸೊವಡನಾರಯ್ದುದಶ್ರಾಂತ ವಿಶ್ರಾ।
ಣವಿನೋದಶ್ರಾಂತ ವೀರಪ್ರಣಯಿ ಸುಟಿಱಿಯೆ ಸುಪ್ರಾತಚಾರಂ ಸಮೀರಂ॥

ಕಂ॥ ಇದು ಹರಿಯ ಸಮರ ಲಕ್ಷ್ಮಿಯ।
ಮದುವೆಯೊಳೆಡೆವಿಡಿದ ಕಾಂಡಪಟಮೆನಿಸಿದ ಕಾ॥
ಱುದಿ ತೆಗೆವಿನಂ ಮುಗುಟ್ದುದೆನಿ।
ಸಿದತ್ತು ಮುನ್ನೀರೊಳಿಂದು ಘಟಿಕಾ ಪಾತ್ರಂ॥ (೩೪)

ಕಂ॥ ಧುರಮಿಗಳ್ ಖೇಚರಭೂ ।
ಚರರ್ಗಾದಪುದಲ್ಲಿ ಪಾಯ್ವ ಕೂರಂಬುಗಳಿ ॥
ಲ್ಲಿರೆ ತಾಗುಗುಮೆಂದುಳ್ಳ ।
ಬ್ಕಿ ರೂಪುಗರೆವಂತಡಂಗಿದುವು ತಾರಗೆಗಳ್ ॥ (೩೬)

ವ॥ ತದನಂತರಂ—

ಕಂ॥ ಎಲೆ ಚಕ್ರರತ್ನಮಾಯುಧ ।
ನಿಲಯಮನುೞಿದತ್ತಲೇಕೆ ಪೋಯ್ತೆನುತೆ ಖಗಾ ॥
ವಲಿ ಸಂಭ್ರಮಿಪಿನಮುದಯಾ ।
ಚಲ ಶಿಖರಮನೇಱಿದುದು ದಿವಾಕರಬಿಂಬಂ ॥ (೩೭)

ವ॥ ಅಂತು ನೇಸಱ್ ಮೂಡಲೊಡಮಭ್ಯರ್ಚಿತ ಭಗವದರ್ಹದಭಿಷವಸುಗಂಧಿ ಗಂಧೋದಕನಿಚಯಕವಚಿತ ಶರೀರನುಮಖಿಳವಂದಾರುಸಮುದಯ ಸಮರ್ಪಿತ ಸಕಳ ಭಾಂಡಾಗಾರನುಂ, ವರ್ಮಿತ ವಿಜಯಸಿಂಧುರ ಬಂಧುರಸ್ಕಂಧಕೂಟಾಳಂಕಾರನುಮಾಗಿ—

ಕಂ॥ ಬರೆ ಬಳನುಮರ್ಕಕೀರ್ತಿಯು ।
ಮೆರಟ್ಕಿಲಂಬಿಡಿದು ಜನಕನುಂ ಮಾವನುಮೆ ॥
ಟ್ತಿರೆ ಪಿಂದೆ ಶತಾಯುಧನು ।
ಖ್ಯರಿಳೇಶರ್ ಮುಂದೆ ನಡೆಯ ನಡೆದನುಪೇಂದ್ರಂ ॥ (೩೮)

ವ॥ ಆಗಳ್—

ಕಂ॥ ದಾನವ ವೈರಿಯ ಸಂಗರ ।
ಯಾನವಿಡಂಬನಮನೀಕ್ಷಿಸಲ್ ಕರೆವವೊಲಾ ॥
ಶಾನಾಫರನೆನಲೆಸೆದುದು ॥
ನಾನಾನಕನಿಕರ ನಿಚಿತ ಪೀನಧ್ವಾನಂ ॥ (೩೯)

ವ॥ ಅಂತು ನಡೆದು ಕಂಟಕೋಪಳಾವಟವಿಟಪಿ ವಿರಹಿತ ಸಮಪ್ರದೇಶದೊಳ್ ಬಹುವಿಧ ವ್ಯೂಹರಚನೆಯಿನೊಡ್ಡಂ ಒಲಿದು ನಿಲ್ವಿನಮತ್ತಲ್—

ಕಂ॥ ಅರದಚಯಂ ದ್ವಿರದಚಯಂ ।
ತುರಗಚಯಂ ಪತ್ತಿಚಯಮುಮೆತ್ತಂ ಗಗನೋ ॥
ದರಮುಂ ತೀವಿದುದಳಕಾ ।
ಪುರದಿಂ ತೂಂಬುರ್ಚಿದಂತೆ ಕವಿದವಿರಳಿತಂ ॥ (೪೦)

ವ॥ ಅದಲ್ಲದೆಯುಂ ಪೂಡಿಪರಿವ ಪದದೊಳ್ ಪೊಚ್ಚಪೊಸತೆನಿಪಚ್ಚುಗಳ್ ನಿರ್ನಿಮಿತ್ತಂ ನೆರ್ಕ್ಕನುಡಿಯೆ ಕಲಕ್ಕೆ ಕೆಡೆದುರುಳ್ವ ತೇರನೇರಿದುವಪ್ಪ ರಥಾಂಗಂಗಳ್ ನಿಜೇಶ್ವರ ಕರಪಲ್ಲವೋಲ್ಲಸಿತ ರಥಾಂಗವಿಘಟನಮಂ ಸೂಚಿಸೆಯುಂ, ನಿಲ್ಲದಲ್ಲುಗುವ ವಾಜಿ

ರಾಜಿಗಳ ವಿಲೋಚನಜಲಕಣ್ಣಂಗಳ್ ಅತ್ಯುಚ್ಚವಿಪ್ಪಳ ಪ್ರಬಲವಿದ್ಯಾಗರ್ವಗಾನಮುಂ ನಿರೂಪಿಸೆಯುಂ, ಚಿತ್ರಕೇಳಾಂಚಾಂಗಳಪ್ಪ ಬಿರುದಿನ ಚಮರಂಗಳ್ಗಡು ತೊಟ್ಟನುತ್ತದು ಕಡವ ವಿಜಯಗಾನ್ಯಜಯಂತಿಕೆಗಳ ಕಿಬಂರಗಸಂಗಳ್ ಪಿಡೇದ್ದು ಶಿರೋಧರಪತನ ಪ್ರವಣತ್ವಮುಂ ಪ್ರಟ್ಟಿಸೆಯುಂ, ಮಹಾಭಟರ ಪಟ್ಟತಟಂಗಳೊಳ್ ಕಟ್ಟಿ ಸಿಟ್ಟನೆ ಮಿಱುಗುವ್ರಱಗಳಿಂ ಪೂಱಗಳ್ಗೆ ತಾವೆ ಬಿಗಿದು ಪಾಱ ಜಣಜಣತ್ಕೃತಿಗೆಯ್ದು ಖಡ್ಗಧೇನುಗಳಾತ್ಮೀಯ ಪರಿವೃಢ ಪ್ರಾಣನಿರ್ಯಾಣಮುಂ ಮಾಣದೆಂಬೆಯುಂ ಮತ್ತಂ ರುಧಿರಬಿಂದುಸ್ಯಂದಿಗಳ ತೆಯೆತೆಯೊಳೋಯೆ ಮದಕರಿಂದ್ರ ಸಂಯೋಜಮತಿಗಳನುಚಳಿಸಿ ಕಟಲ್ವ ಪಕ್ಷಣಂಗಳುಂ, ನಿಖಿಳ ತುರಗಬಳದ ಪಱುಪ ಪಾರ್ಜಾಳದ ಕೊನೆಗಳಿಂ ಬಿಡದೆ ಪಿಡಿಪಕ್ಕಿಗಳ ಗಡಣಮುಂ ಪಡೆಮ ಪಗಲೊಳ ಪಗಿಲ್ತು ತೋರ್ಪ ತಾರಕಂಗಳುಂ ಪ್ರಥಿತರಥಿನೀನಾಥರ ಬಲದ ಮುಯ್ಯುಗಳೊಳ್ ಜಲಕ್ಕನೊಗೆದು ನಾಂದ ಕವಚದ ಕಡೆ ವಿಡಿದು ಪಟ್ಟನೆ ಪನಿವ ಬೆಮರಬಿಂದುಗಳುಂ, ನೋಡೆನೋಡೆ ಕರಮೆ ಕಱಂಗಿದ ಸೇನಾಜನದ ದೀನಾನನದ ಕರ್ಪನೊಡನೆ ಕವಲ್ತು ಕಬ್ಬಲಿಪ ದಿಶಾವಳಿಯ ಧೂಮಧ್ವಾನಮು ಮಲ್ಲಲ್ಲಿ ತಲೆದೋಱದ ಪಱಯುಗೆಗಳ ದಂಡದೊಳಱು ತಂಡದಿಂ ಘೂತ್ಕರಿಸ ನಿಬ್ಬೀಳ ಘೂಕಾನೀಕಂಗಳ ಘೋಷಂಗಳುಂ, ಸಂಘಸ್ಥ ಲಾಂಛನ ಧ್ವಜಪ್ರಜದ ಪ್ರತ್ತಳಗಳತ್ತಂ ಸಚಿತ್ರಂಗಳಾಮನೆನಿಸಿ ರೋದಿಸುವ ನಾದಂಗಳುಂ ದೆಸೆದೆಸೆಯೊಳಸದಳಂ ಮಸಗಿ ಮಾಣದೊಳ್ಪ ಬಳ್ಳುಗಳ ಬಳಗದಳವಿಗಱದ ಕರ್ಕಶ ರವಂಗಳೊಡನೆ ಸಿಱಿಸಿಱಿ ಪ್ರೋಱ ಮಡುವ ದನಿಯ ಪಲತೆಱದ ಪಱಗಳುಂ, ಬಿಡದಡಿಗಡಿಗೊಡರಿಸುತ್ತೆ ಮಿರ್ಪ ಪ್ರೊಡವಿಯ ನಡುಕಮುಮೆಂಬ ವಿವಿಧವಿಳಯೋತ್ಪಾತ ವಿಕೃತಿಗಳ ಬಹುಳ ಚತುರಂಗ ಮೂರ್ತಿಗಳಾಮವೆಂಬಂತಿರತಿ ಭಯಂಕರಮಾಗಿರ್ಪ ನಿಜಬಳದ ನಡುವೆ—

ಮ॥ ಇಂಗೆ ತೂರ್ಯಧ್ವನಿಯುಂ ನಿಮಿರ್ಚಿ ಬಹುಳೀಭವಿರ್ಗರ್ಜಿತಂ ಸೈನ್ಯಕೇ।
ತುಗಳಿಂ ಪೆರ್ಚಿಸೆ ಧೂಮಕೇತುಗಳನೇಕಂ ಕಾಳ್ಗಂಜಗಳ್ ಶಿಸ್ತದಿ।
ಪ್ತಿಗಳಿಂ ಕೊರ್ವಿಸೆ ಬಂದನಾಜಿಗೆ ಖಗೇಶಂ ತತ್ಕ್ಷಣಾಪಾಯ ಹೇ।
ತುಗಳುಂತಯ್ತ್ರ ಸಾನುಕೂಲಮೆನಿಸಂತೇನೆಂಬ ಸಾಮರ್ಥ್ಯಗನೋ। (೪೧)

ವ॥ ಅಂತು ಸಕಳಲೋಕಭೀಕರನಾಗಿರೆತ್ತು ಬಂದ ಖಚರೂಚಿಗೇ ಪ್ರಮುಖವಿದ್ಯಾವಿನಿರ್ಮಿತ ವಿಚಿತ್ರ ಚತುರಂಗ ರಥಿನೀನಿಜ್ಜರ್ಭಿಣಮುನ್ಯಜ್ಞದ್ವಾಧರಬಲಂ ನೆಲಕಮಂಬರಕಂ ತೋಱಿಟ್ಟಂತೊಡ್ಡಿ ನಿಲ್ವುದುಂ ಉಚ್ಚೇಂದ್ರನವಳೋಕಿನಿನಿವೇದ ನಮಿಪರಬಳದ ರಥಿನೀರಮಣರನಱದಿರ್ಪವರಜೇಯರುಂ ವಿಜಯಿಗಳಾಮೆಂಬುದಂ ತನ್ನೊಳೆ ನಿಶ್ಚಯಿಸಿ ನಿಜಚಮೂರಮಣರಂ ಸಮನೆ ಸಮಕಟ್ಟಿ—

ಕಂ॥ ಹರಿಹಯವರೂಥ ನರಬಳ।
ಪರಿವೃಢರಪ್ಪನಿಘೋಷ ಮುಖ್ಯರನಾನೆಲೆ।
ನಿರವಿಸಿದಂ ಶತ್ರುಂಜಯ।
ಪುರಸ್ಸರಂ ನೋಡಿ ಸಮುಚಮೂನಾಯಕರಂ॥ (೪೨)

ವ॥ ಮತ್ತಂ—

ಕಂ॥ ಜನಕ ಪ್ರಮುಖ ಕುಳಕ್ಷ್ಮಾ ।
ಜನಾಥರಂ ಕಾಮದೇವ ಮುಖ್ಯ ವಿಪಕ್ಷಾ ॥
ವನಿಪರ್ಗೆ ಪೇೞ್ದು ಹಯುಕಂ ।
ತನ ಪೆಱನೆಗನುವಾಗಿ ನಿಂದನಂದು ಮುಕುಂದಂ ॥ (೩೯)

ವ॥ ಅನಂತರಂ ತನ್ನ ಮುಂದರಾತಿ ಗಜಮಸ್ತಕಕ್ಕೆ ಲಂಘಿಸುವ ಮಸಕದಿಂ ಸಿಂಗದ ಜಂಗುಳಿಯಂತೆ ಮುಂಗೊಳೆೞ್ಪ ಕಡಂಗುವಣಿಯ ನಾಯಕರ್ಗೆ—

ಕಂ॥ ಮಿಳಿರ್ದಪುವನುಕೂಳಾನಿಳ ।
ಚಳತ್ಪ್ರತಾಪಾಗ್ನಿ ಧೂಮಶಿಖೆಗಳವೆನೆ ಚಂ ॥
ಚಳ ಕರಶಾಖಾಕರತಳ ।
ವಿಳೋಕಮಂತೊಡನೆ ನಿಮಿರೆ ಕೈವೀಸುವುದುಂ ॥ (೪೦)

ಮ॥ಸ್ರ॥ ನೆಗೆದೆತ್ತಂ ಗೋತ್ರಶೈಳಂ ತಳರ್ದು ಮಸಕದಿಂ ತಾಗಲುರ್ವೆೞ್ದುವೋ ವಾ ।
ರ್ಧಿಗಳುಂ ದ್ವೀಪಂಗಳುಂ ಮೇರೆಯನುರವಣೆಯಿಂ ಮೀಱಲಾರ್ದೆೞ್ದುವೋ ಧಾ ॥
ತ್ರಿಗಳೇೞುಂ ತಾಗಿ ತಾಳಂಗುಡಲೊಡರಿಸಿ ಜೋಡೆೞ್ದುವೋ ಪೇೞಿಮೆಂಬ ।
ನ್ನೆಗಮಾಯಸ್ತಾಭೀಳ ಕೋಳಾಹಳಮುಭಯಬಲಂ ಕಾಯ್ಪಿನಿಂ ತಾಗುವಾಗಳ್ ॥

ಕಂ॥ ಭರದಿಂದಿಭದೊಳಿಭಂ ಹರಿ ।
ಹರಿಯೊಳ್ ತೇರ್ ತೇರೊಳಾಳೊಳಾಳ್ ಪೊಣರ್ದುದು ಚ ।
ಪ್ಪರಿಸುವ ಮೂದಲಿಸುವ ಹೂಂ ।
ಕರಿಸುವ ಬಗ್ಗಿಸುವ ಕಳಕಳಂ ಬಳೆವಿನೆಗಂ ॥ (೪೨)

ವ॥ ಅಂತುಭಯಬಳ ಚತುರಂಗವಾಹಿನಿಗಳೊಳೊಪೊರ್ದಲೆ ದೊಮ್ಮೆಯಿಸಿ ಬೆರಸಿದಾಗಳ್—

ಚಂ॥ ಶರಮಯಮಂಬರಂ ಶರಮಯಂ ದಶದಿಗ್ವಳಯಂ ಧರಾತಳಂ ।
ಶರಮಯಮರ್ಣವಂ ಶರಮಯಂ ಸಚರಾಚರ ವಸ್ತುಸಂಚಯಂ ॥
ಶರಮಯಮಾಗೆ ದೂರದೃಢಲಕ್ಷಮಯುದ್ರುತ ವೇಧದಿಂದಮುಂ ।
ಬರಚರಧಾರಿಣೀಚರ ನೃಪಾಳಧನುರ್ಧರರೆಚ್ಚರಾರುತುಂ ॥ (೪೩)

ಮ॥ ಚರಣಾಘಾತ ಘಟತ್ತ್ರುಟಿ ಪ್ರತಿವಿರಾವಂ ತೂಳ್ದೆ ಪಾತಾಳಮುಂ ।
ದಿರಮುಂ ಪೇಟಿಕ ಘಟ್ಟನಾ ಘುಳಘುಳು ಪ್ರಧ್ವಾನಮೊಬ್ಬಟ್ಟಿದಿ ॥
ಗ್ವರದಂ ಬಾಳ್ಗುಡಿಯಿಂ ಸಿಡಿಲ್ವಕಿಡಿಯುಂ ಪಿನ್ನಟ್ಟೆ ಪೋಲ್ತಿಂಬರೇ ।
ಚರರಂ ತಾಗಿಸಿದುಗ್ರ ಭಾರ್ಗವಚಯಂ ವಿತ್ರಸ್ತಲೋಕತ್ರಯಂ ॥ (೪೪)

ಕಂ॥ ಪಱಿದುಲಿವ ಕಹಳೆ ಮಿೞ್ಪ ।
ಪಱೆಯಿಗೆ ಸೂಳೈಪ ತಮ್ಮಟಂ ರಣರಸಮಂ ।
ಕಱಿಯೆವರಿಯಿಪಿನಮುದಿರ್ದಿಳೆ ।
ಕಱಲ್ವಿನೆಗಂ ಮಸಗಿ ತಾಗಿದುದು ತುರಗದಳಂ ॥ (೪೫)

ಮ॥ ಖುರಸಂಘಟ್ಟ ಭವಸ್ಫುಲಿಂಗಶಬಳಂ ಕೆಂದೂಳಿ ಖದ್ಯೋತವಂ ।
ತುರಸಂಧ್ಯಾಭ್ರಮನಿಟ್ಟನಂ ಪ್ರತಿಮುಖಾಘಾತಂ ಸ್ಫುಟಸ್ಫಾಳ ಧೀ ।
ಕರಮಾಸ್ಫಾಳವಶೇತರೇತರ ಕರಪ್ರೋತ್ಕ್ಷಿಪ್ತಾರೋಹಕೋ ।
ತ್ಕರಮುರ್ವೀಶ ಖಗೇಶ ವಾಹನಿವಹಂ ತಾಗಿತ್ತು ಗುರ್ವಪ್ಪಿನಂ ॥ (೪೬)

ವ॥ ಅಂತುಮಲ್ಲದೆಯುಂ—

ಚಂ॥ ಬಯಲೊಳವುಂಕಿ ನೂಂಕಿದುದು ದೋರ್ಯುಗದೊಳ್ ಬಳಿಗೋದ ಚಕ್ರಸಂ ।
ಚಯುವೆಡಗಯ್ಯವಾಗೆ ಸಬಳಂ ಬಲಗಯ್ಯ ನಿಶಾತ ಶಂಕುರಾ ।
ಗೆಯುಮುರಗೊಂಬಿನೊತ್ತಿನೊಳವುಂಕಿದ ಸೆಲ್ಲದ ಮುಷ್ಟಿ ವಜ್ರಮು ।
ಷ್ಟಿಯೊಳೊಡಗೂಡಿವರ್ತಿಸಿದ ಕೂರಸಿ ನೇರ್ಪಡೆ ಸಾದಿ ಸಂಕುಳಂ ॥ (೪೭)

ತಲೆಗಿಡೆ ಪಾಱೆ ಬೀಱಿ ಸುಭಟರ್ ಗುಱಿವಂಗಳ ಗಾಳಿಯಿಂ ವಿಯ ।
ದ್ವಲಯಮುನೆಯ್ದೆ ಮುಕ್ಕುಳಿಸೆ . . . ॥
. . . . ।
. . . . ॥ (೪೮)

* * * *

ವ॥ . . . .
ಖಡ್ಗಾಖಡ್ಗಿಯುಂ, ಮುಷ್ಟಾಮುಷ್ಟಿಯುಂ, ಕೇಶಾಕೇಶಿಯುಂ, ರಥಾರಥಿಯುಮಾಗಿ ತಳ್ತಿಱಿವ ತುಮುಳ ಸಮರಸಂರಂಭದೊಳ್—

ಕಂ॥ ಅಗಿದೋಸರಿಸದೆ ತನು ಮೂ ।
ಡಿಗೆಯಾಗಿರೆ ತಳೆದನಸಿತರೆಕ್ಕೆಂಬುಗಳಂ ॥
ಬಿಗಿದ ದೊಣೆಯಂಬುಗಳ್ ತನೆ ।
ತೆಗೆವಾನ್ತರನಿವಱಿನಿಸುವೆನೆಂದೊರ್ವ ಭಟಂ ॥ (೪೯)

ಇಱಿವರ್ ದಲಟ್ಟಿಯಿಂ ತಲೆ ।
ಪಱಿಪಡವನ್ನೆವರಮೆಲ್ಲರುಂ ಪೊಱಿದ ಶಿರಂ ॥
ಪೆಱಗಿರ್ದು ನೋಡುತುಂ ಬೊ ।
ಬ್ಬಿಱಿವಿನಮಾಂತಿಱಿವನೊರ್ವಭಟನರಿಭಟರಂ ॥ (೫೦)

ಕಂ॥ ಕೆತ್ತಿಸಿದಂಬಿನ ಗಱಿ ಮಿಱು ।
ಗುತ್ತಿರೆ ಬಾಯ್ವಿಟ್ಟ ಪುಣ್ಗಳಿಂ ಜೋಲ್ದ ಭಟಂ ॥
ಬಿತ್ತರಿಸಿದನಳಿಗಳ್ ಬರೆ ।
ಪೊತ್ತುವ ಮುಗುಳ್ದೋಱಿಯುಮೊಂಗುವೆಸುಕೆಯ ಸಿರಿಯಂ ॥ (೫೧)

ಮ॥ ಖಗಭೃತ್ಸೈನ್ಯಮನೋವದಿಕ್ಕಿದುದುದಂಚಚ್ಚಕ್ರ ಸಂಕ್ಷುಣ್ಣ ಪ ।
ತ್ತಿಗಳಂ ತೀಕ್ಷ್ಣ ಕೃಪಾಣ ಪಾತಯುಗಪಚ್ಛಿನ್ನಾನಮತ್ತಾದಿ ದೀ ॥
ಪ್ತಿಗಣಂ ಮುದ್ಗರಘಾತ ಚೂರ್ಣಿತ ರಥಾನೀಕಂ ಚಳದ್ಭಿಂಡಿಪಾ ।
ಳಗವಾಕ್ಷೀಕೃತ ದಂತಿಸಂತತಿ ಹಯಾರೋಹೋತ್ಕರಂ ಕೃಪಣ್ಣಾ ॥ (೫೨)

ಚಂ॥ ಪರಿಪರಿಯುಂಕದಂತೆ ಪೊಱಮೆಟ್ಟದೆ ಸೂಳಱಿಪ್ಪೊಳ್ದುದುಳ್ ಸಿತಾ ।
ಲ್ಪರೆ ಪೊಱಸಾರ್ದ ಸನ್ನದಗರಂದದೆ ತಾಗುವ ರಭುಟ್ಟವಲ್ಲರಂ ।
ತಿರೆ ಬಡೆ ತೋರಪತ್ರದಿನದಿರ್ದ ಪೂಪರ್ದನೆಯಿಂ ಬತ್ತಿ ಕಱಂಡ ಪೋ ।
ಪುರವಕೆಂಗುರ್ವಿ ಕೆಂಪಲಿತಿಱುವರಿಯಾಗಿರೆ ಪೊಱದರ್ಪಾನೆಗಳ್ ॥ (೫೩)

ವ॥ ಮತ್ತಂ—

ಚಂ॥ ಅಸಿಯಿಱಿವಂತೆ ನಟ್ಟುಗಿವ ಕೋಡೂಡಬುಱುಬ್ಬ ವಸ್ತುಗ್ನಪೇಕವಾ ।
ಬಿಸೆ ಸಮಸಂಗರ ಕ್ರಮಮನಾದುಪಕಾರದ ಮೆಚ್ಚಿಸಿಂದಮು ॥
ಚಿಸಿದಪ್ಪುವೊಂದನೊಂದಿವೆನೆ ಪಾಯದಿಬರ್ದಗಿಸಾದ ನೆತ್ತಿಯಿಂ ।
ಪಸರಿಸೆ ಮುತ್ತುಗಳ್ ಮಸಗಿ ಪೋರ್ದುವೆರಲ್ದಲದಂಕದಾನೆಗಳ್ ॥ (೫೪)

ವ॥ ಆಗಳ್ ನಿಖಿಳಾಯುಧ ವಿದ್ಯಾವಿಶಾರದ ಸುತನಪ್ಪ ಶತಾಯುಧನ ನಿಶಿತ ವಿಶಿಖಾಘಾತದಿಂ ಧೂಮಕೇತನ ಪ್ರಭೃತಿ ಪತ್ತಿಸೇನಾಪತಿ ಪ್ರತಾನಂ ಸಮಸ್ತಸಾದಿ ಸೈನ್ಯ ಪ್ರಧಾನನಪ್ಪ ಜಯಸೇನನ ನಿಶಾತ ನಿಸ್ತ್ರಿಂಶ ಪಾತದಿನಕಂಪನಪ್ರಮುಖ ನಿಖಿಳಾಶ್ವ ಚಕ್ರನಾಯಕ ನಿಕಾಯಮುಮಿರಳಿತ ಸಮರಸಮುದ್ರ ಮಹಾರಥಾಭಿರಾಮನಪ್ಪ ಭೀಮಸೇನ ಭೀತಿಕರಕರಯಂತ್ರಮುಕ್ತಾದಿ ವಿವಿಧಾಯುಧ ವಿಘಾತದಿಂ ಹರಿಶ್ಮಶ್ರುಮುಖ್ಯ ರಥವರೂಥಿನೀ ಪರಿವೃಢಪ್ರಕರಮನವರತರಣವಿಹರಣ ಕ್ರಮಸಹ ಮಹಾಮಾತ್ರ ಸಂಸ್ತುತ್ಯನಪ್ಪ ಶತ್ರುಂಜಯನ ಕರಾಭೀಳ ಭಿಂಡಿವಾಳ ತೋಮರಪುರಸ್ಸರ ಪ್ರಹರಣವಿದಾರಣದಿನಶನಿಘೋಷಾದಿ ಸಕಳ ಸಿಂಧುರ ಬಳಾಧಿಪತಿ ಪಟಳಮುಮಿತ್ತಂ ಕೃತಾಂತವದನಾನ್ತರಾಳಮಗ್ನಮಪ್ಪುದುಂ, ಮಸಗಿ ತಮತಮಗೆ ವಿದ್ಯಾಧರಾಧಿಪನ ಸನಾಭಿಭೂಭೃತ್ಪ್ರಧಾನರಿದಿರಾಗಿ ತಾಗೆ—

ಕಂ॥ ಇಳೆ ಪೊಗೞೆ ಸಿಂಹಗಳನಂ ।
ಮುಳಿದಿಕ್ಕಿದನರ್ಕಕೀರ್ತಿ ಶಶಶೇಖರನಂ ॥
ಜ್ವಳನಜಟಿ ಮಹಾರಥನಂ ।
ಬಳಂ ಸುರಮ್ಯಪತಿ ಕಾಮದೇವನನಾಗಳ್ ॥ (೫೫)

ಕಂ॥ ಬಗೆಯೆ ನಿಜದೇಹದನ್ನರ ।
ಖಗನಾಯಕರಱಿದೊಡುರ್ಕುಗೆಟ್ಟನೆ ಮುನ್ನಿಂ ॥
ಮಿಗೆ ಕಡುಗೂರ್ಪಂ ತಳೆದಂ ।
ಪೊಗರಲಗಂ ಪಱಿಯೆ ಮುಸೆದವೋಲ್ ಹಯಕಂಠಂ ॥ (೫೬)

ವ॥ ಅಂತು ಪೊರೆಗಳೆದ ಕುಳಿಕಾಹಿಯಂತಂತಃಶೃಂಖಳಂ ಖಳಂ ಕೆಳರ್ದು ತನ್ನ ಮೊನೆಗೆ ಮುನಿದು ನೂಂಕಲವ್ವಳಿಪಚ್ಯುತನ ವಿಜಯಕುಂಜರಕ್ಕೆ ನಿಜಗಜಮನಣೆದು ಬಿಟ್ಟಕ್ಕಿ ಮುಂದೆವಂದು—

ಮ॥ ಅದಟಂ ಕೋೞ್ಮಿಗನೊಂದನಿಕ್ಕಿದ ಪೊಡರ್ಪಿಂ ಪೂಣ್ದು ಪೆರ್ಗಲ್ಲನೆ ।
ತ್ತಿದ ಬಲ್ಪಿಂಗೆ ಕಡಂಗಿ ಪೊಂಗಿ ಮನೆಯೊಳ್ ಮಿಕ್ಕೂಳ್ವ ನಿನ್ನುರ್ಕಿಗಿಂ ॥
ತಿದು ತೋಱಲ್ ಪದನೆಂದು ಮೂದಲಿಸುತುಂ ಗೋವಿಂದನೊಳ್ ಬಂದು ತಾ ।
ಗಿದನುಗ್ರಾಯುಧ ಕೋಟಿಯಂ ಕಱಿಯುತುಂ ವಿದ್ಯಾಧರಾಧೀಶ್ವರಂ ॥ (೫೭)

ವ॥ ಅಂತು ತಾಗಿ—

ಚಂ॥ ವಿಯದವನೀ ದಿಶಾವಳಯಮಿಟ್ಟೆಡೆಯಪ್ಪಿನಮಶ್ವಕಂಠನೊ ।
ರ್ಮೆಯೆ ಕರಯುಗ್ಮದಿಂ ಕಱಿದ ಭಲ್ಲದ ಸೆಲ್ಲದ ಪಿಂಡಿವಾಳದಿ ।
ಟ್ಟಿಯ ಬಡಿಕೋಲ ತೋಮರದ ಚಕ್ರದ ಕೊಂತದ ಸೆಂಡುಕೋಲ ಶ ।
ಕ್ತಿಯ ಸರಿಯಂ ಶರಾನಿಳವಿಘಾತದೆ ತೂಳ್ದಿದನಾಗಳಚ್ಯುತಂ ॥ (೫೮)

ವ॥ ಮತ್ತಂ—

ಮ॥ ಕುಳಿಶಾಸ್ತ್ರಂ ಕುಧರಾಸ್ತ್ರಮುಂ ಶಿಖಿಶಿಖಾಸ್ತ್ರಂ ವಾರಿವಾಹಾಸ್ತ್ರಮುಂ ।
ಸಳಿಳಾಸ್ತ್ರಂ ದಹನಾಸ್ತ್ರಮುಂ ಖಗವರಾಸ್ತ್ರಂ ದಂದಶೂಕಾಸ್ತ್ರಮುಂ ॥
ಜ್ವಳನಾಸ್ತ್ರಂ ಗಗನಾಸ್ತ್ರಮುಂ ತಗುಱೆ ಕಂಜಾಕ್ಷಾಜ್ಞೆಯಂ ಕಂಡು ಕಾ ।
ಯ್ದಳಕೇಶಂ ನಡೆ ನೋಡಿದಂ ಚಕಿತ ಧಾತ್ರೀಚಕ್ರಮಂ ಚಕ್ರಮುಂ ॥ (೫೯)

ವ॥ ಆಗಳ್—

ಚಂ॥ ಇದು ಮಣಿಕುಂಡಳಂ ಜಯರಮಾ ಶ್ರವಣಚ್ಯುತಮಲ್ತು ಪೋಪ ಭಾ ।
ಗ್ಯದ ಬಱಿಯೊಳ್ ಭುಜೋಚ್ಚಳತೆಯುರ್ವರೆ ಮೆಯ್ಗರೆದೋಡಿದಪ್ಪಳೆಂ ॥
ಬುದನೆನೆ ಚಕ್ರಮೆಯ್ದೆ ಹರಿಯಂ ಬಲವಂದೆಸೆದತ್ತು ತೋಳೊಳಂ ।
ಗದಮೆನೆ ಪುಣ್ಯಲಕ್ಷ್ಮಿಯ ಪರಿಗ್ರಹಮಲ್ತೆ ಪರಾರ್ಘ್ಯವಸ್ತುಗಳ್ ॥ (೬೦)

ವ॥ ಅಂತು ತತ್ಕ್ಷಣದೊಳ್ ನಿಜಭುಜಕ್ಕೆವರ್ಪ ವಸುಮತೀಚಕ್ರದ ಸಾರ್ಕೆಗೆ ಸಂಚಕರಮೆನಿಸಿ ಕೆಯ್ಸಾರ್ದು ಬೆಸನಂ ಪಾರ್ಪ ಚಕ್ರರತ್ನಮುಂ ಚಕ್ರಧರನಪಾಂಗ ಲೋಚನಮುಂ ಬಗೆಗಳನುಜ್ವಳಿಸಿ ಬೆಸಸಲೊಡಂ—

ಮ॥ಸ್ರ॥ ಭ್ರಮನಿರ್ಯನ್ಮಾರುತಂ ಚಾರಿಸೆ ಕೆದಱುವಿನಂ ತಾರಕಂಗಳ್ ಕನದ್ರ।
ತ್ನಮಯೂಖಂ ಮತ್ತೆ ನೇಸಱ್ ಮಸುಳ್ವನಮಿದು ಬೇಱರ್ವಿಗೆಯ್ತಪ್ಪುರ್ದೇಕ॥
ಕ್ಕುಮೊ ಭಾಸ್ವದ್ಬಿಂಬಮೇನಾದಪುದೊ ಜಗಮಿದೆಂದಲ್ಕುವನ್ನಂ ಜನ[ಂ]ಶ್ರೀ।
ರಮಣಾ ಜ್ಞಾನೋದಿತಂ ನೇರ್ದುದು ಖಗಪ ಶಿರಃಕಂಠಮಂ ಚಕ್ರರತ್ನಂ॥ (೬೧)

ಕಂ॥ ಇದು ಹರಿಯ ಪೂರ್ವಭವ ಕೃತ।
ನಿದಾನ ವಿಷತರುವ ಪಕ್ವಫಳಮೆನೆ ಬೀೞ್ತಂ॥
ದುದು ಖಚರನ ತಲೆ ತೋರ್ಪಂ।
ದದಿಂದಧೋಗತಿಯ ತೆಱನನುನ್ಮಾರ್ಗಿಗಳಾ॥ (೬೨)

ನೆಱೆ ಧಾತ್ರಿಯನೆಱಗಿಸಲುಂ।
ನೆಱೆದುದು ಚಕ್ರಮ ನಿಜಾಧಿನಾಥನ ತಲೆಯಂ॥
ನೆಱೆಗೊಳಲುಂ ಚಕ್ರಮೆ ಗಡ।
ನೆಱೆದಿರ್ದಂತುಟೆ ವಲಂ ಶುಭಾಶುಭದೆಸಕಂ॥ (೬೩)

ವ॥ ಅನಂತರಂ ಚಕ್ರಧರನಾಜಿರಂಗಮಂ ಪೂಜಿಸಲ್ ಪುರೋಹಿತನಂ ಪೇೞ್ದು ಸಮಯ ಸಮುಚಿತ ಸಮರವಿಜಯ ವಿಸ್ತರಸ್ತುತಿಮುಖರರಪ್ಪ ಪರಿಜನ ಗುರುಜನ ಜ್ಞಾತಿಜನಂಗಳ್ವೆರಸು ಮಗುೞ್ದು ಬಂದು—

ಮ॥ ಪುರಮಂ ಪುಣ್ಯವಧೂ:ಕರೋಚ್ಚಳಿತ ಶೇಷಾಶೀಕರಶ್ರೇಣಿ ದಂ।
ತುರಮಂ ಚಂಚುರ ರತ್ನತೋರಣಗಣ ವ್ಯಾಳೋಳ ಕಲ್ಲೋಳ ಬಂ॥
ಧುರಮಂ ಪೌರಜನಾವಕೀರ್ಣ ಪಟವಾಸಕ್ಷೋದ ಕಿಂಜಲ್ಕಪಾಂ।
ಶುರಮಂ ಚಕ್ರವಿಭಾಸಿ ಪೊಕ್ಕನರಸಂ ಪದ್ಮಾಲಯೋದ್ಭಾಸಿಯಂ॥ (೬೪)

ವ॥ ಅನಂತರಂ ಜಯಜೀಯ ನಂದವರ್ಧಸ್ವವಚನವಾಚಾಳ ಮಾಗಧಜನದ ಘನನಿನದದಿಂ ತನಿವೆರ್ಚಿದ ಪಟಹರಟನದಿಂ ಪ್ರತಿಧ್ವನಿಯನೊದವಿಪ ದಿಗ್ಭಿತ್ತಿಭಾಗಮುಂ, ವಿವಿಧಮಂಗಳಂಗಳಂ ವಿಧಿಯಿಪ ಸಂಭ್ರಮದಿನತ್ತಿತ್ತ ಸುೞಿವ ವಿಳಾಸಿನೀಜನದ ಕಟಾಕ್ಷ ಕಿರಣಮಂಜರಿಗಳಿಂ ಪಿಂಜರಿತಮಾದ ರತ್ನಮಂಡಪ ವಿತಾನಮುಂ ಆಕೀರ್ಣಪೂರ್ಣ ಕಳಶವರ್ಣಪೂರ ಭೃಂಗಾರ ನೀರಾಜನಾದರ್ಶ ದೂರ್ವಾದಧಿಫಳಾವಳಿ ಪ್ರಮುಖ ಮಂಗಳವಸ್ತುವೃಂದದಿಂ ಕಂದಳಿತಮಾದ ಕುಟ್ಟಿಮತಳಮುಂ ಅಳವಡೆ ಸಕಳಲೋಕ ಲೋಚನಾನಂದಕರಮಾದ ರಾಜಮಂದಿರದೊಳ್ ಮೌಹೂರ್ತಿಕ ಪುರೋಹಿತ ಪುರಸ್ಸರಂ ಪ್ರಭೂತಭಗವದರ್ಹತ್ಪರಮೇಶ್ವರಾಭಿಷವ ಪೂಜಾಪುರಸ್ಸರಂ ಚಕ್ರರತ್ನಮಂ ಪೂಜಿಸಿ—

ಕಂ॥ ನವರತ್ನ ಚತುಷ್ಕಮಯಾ।
ಳವಾಳ ವೃತಕೃಷ್ಣ ಕಲ್ಪವಿಟಪಿಗೆ ವಿಜಯಾ॥
ದ್ಯವನೀಶರ್ ಮಾಡಿದರಭಿ।
ಷವಮಂ ಬಹುವಿಧ ಫಳಾರ್ಥಿಗಳುಚಿತಮೆನಲ್॥ (೬೫)

ವ॥ ಅನಂತರಂ ಜೈತ್ರಕುಂಜರಸ್ಕಂಧಾರೂಢನುತ್ತರಳ ತರುಣತರಣಿ ಪ್ರಚಂಡ ಚಕ್ರರತ್ನಪೂರ್ವಕಂ ಪೂರ್ವಾಭಿಮುಖನಪೂರ್ವಪೂರ್ವಾಚಳಮೆ ಪೂರ್ವಾಚಳಕ್ಕೆ ಮುನಿದು ತಳರ್ದಪ್ಪುದೆನಿಸಿ—

ಕಂ॥ ಧರೆ ನಡೆವ ಪಡೆಗೆ ಸಾಲ್ವಂ।
ತಿರೆ ದಿಗ್ಭಿತ್ತಿಗಳನೊಡೆದು ತೆಱಪಂ ಮಾಡಲ್॥
ಪರಿವಂತೆ ದುಂದುಭಿ ಧ್ವನಿ।
ಪರಿವಿನೆಗಂ ದಿಗ್ಜಯಕ್ಕೆ ಹರಿ ಪೋಱಮಟ್ಟಂ॥ (೬೬)

ಮ॥ ಸ॥ ಪದಧೂಳೀ ಪೀತಪಾತಃಪ್ರತತಿ ನದಿಗಳಂ ತೀವುತುಂ ದಂತದಾನಾ।
ಘದೆ ಕೇತುವ್ರಾತ ರುಂದ್ರದ್ಯುಮಣಿ ಬೆಳಗುತುಂ ವ್ಯೋಮಮಂ ಶಸ್ತ್ರರುಗ್ಜಾ॥
ಳದೆ ರಥ್ಯಾಕೀರ್ಣ್ಣವನ್ಯಂ ದೆಸೆಯನವಿರಳಂ ಮಾಡುತುಂ ಛತ್ರಸಂತಾ।
ನದೆ ನೀಳ್ದತ್ತುರ್ವಿಗೆಲ್ಲಂ ಹರಣಭರಣಮಂ ತೋಱುತುಂ ಚಕ್ರಿಯಾನಂ॥ ()

ವ॥ ಅಂತು ನಡೆದು—

ಮ॥ ಸಮದರ್ ಮತ್ಸ್ಯಮಹೀಶಮುಖ್ಯಮನುಜೇಶರ್ ದುರ್ದಮರ್ ಮಾಗಧ।
ಪ್ರಮುಖರ್ ವ್ಯಂತರರತ್ಯಜೇಯರಿತರರ್ ಮ್ಲೇಂಛಾವನೀಶರ್ ಭಯಂ॥
ನಮಿತರ್ ಕಾಣ್ಬೆನೆಗಂ ತ್ರಿಖಂಡಧರೆಯಂ ನಿಷ್ಕಂಟಕಂ ಮಾಡಿ ಭೂ॥
ರಮಣೇಶಂ ಮಗುಳ್ದಿತ್ತ ಬಂದು ಪುರಮಂ ಪೊಕ್ಕಂ ಮಹೋತ್ಸಾಹದಿಂ॥ (೬೮)

ವ॥ ಅಂತು ಪೊಕ್ಕು ಚಕ್ರಧರಂ ದಂಡಪ್ರಯಾಣಖೇದಮಡಂಗುವನ್ನಮತ್ಯಾದರದಿಂ ಕತಿಪಯದಿನಂಗಳೊಳಿರಿಸಿ ಬೞಿಯಂ ನಿಜವಿಯೋಗಮಂ ಸೈರಿಸಲಾಱದೆ ಗಳದ್ಬಾಷ್ಪ ವಾರ್ವಿಹಿತ ನೇತ್ರನುಂ ಅಂತರ್ಮನ್ಯು ಗದ್ಗದಗ್ರೀವನುಮಾದ ಮಾವನಂ ಸಮುಚಿತ ಸವಿನಯ ಸ್ನಿಗ್ಧಸೂನೃತಂಗಳಿಂ ಸಂತಸಂಬಡಿಸಿ—

ಕಂ॥ ಧುರದೊಳ್ ಬಾಳ್ದಿಲಿದಂದಂ।
ಬರಚರರಂ ಕರೆದು ಪೇೞ್ದ ಪೇೞ್ದುದುಗೆಯ್ವಂ।
ತಿರೆ ಕೊಟ್ಟು ದಕ್ಷಿಣ ಶ್ರೇ।
ಣಿ ರಾಜ್ಯಮಂ ಕಳಿಪಿದಂ ತದಾತ್ಮಜ ಸಹಿತಂ॥ (೬೯)

ವ॥ ಆ ಪ್ರಸ್ತಾವದೊಳ್—

ಉ॥ ಆವಗಮಂತರಂಗದೊಳೆ ಖೇದಮನೆಯ್ದಿದ ತತ್ಸ್ವಯಂಪ್ರಭಾ।
ದೇವಿಯನೊಲ್ದು ನೋಡಿ ಜನನೀಜನಕಾಗ್ರಜರೀಕ್ಷಣಂಗಳೊಳ್॥
ತೀವಿದ ವಾರಿಯಂ ತೊಡೆದು ಮಾವನುಮತ್ತೆಯುಮಾದಮೊಳ್ಳಿದರ್।
ಭಾವಿಸೆ ಚಕ್ರಿ ನಿನ್ನ ವಶವರ್ತಿ ದಲುಮ್ಮಳಿಪಕ್ಕೆ ತಕ್ಕುದೇ॥ (೭೦)

ವ॥ ಎಂದತಿ ಪ್ರಣಯರಸ ರಂಜಿತಂಗಳಪ್ಪ ಸಮುಚಿತ ವಚೋವಿಶೇಷಂಗಳಿಂ ದೇವಿಯಂ ಸಂತೈಸಿ ಮೆಲ್ಲನೆಲ್ಲಿಂ ತಳರ್ದು ಗಗನಮಾರ್ಗದಿಂ ಪೋಗಿ ಮಹಾವಿಭವದಿಂ ನಿಜನಗರಿಯನಲಂಕರಿಸಿದರ್. ಮತ್ತಮಿತ್ತಲ್ ಮುನ್ನಂ ತನ್ನೊಡನೆ ಸೇವಾಸಕ್ತರಾಗಿ ಬಂದ ವಿವಿಧಾಟವಿಕ ದೇಶ್ಯಗ್ರಾಮನಾಯಕರನುಚಿತ ದಾನಸನ್ಮಾನ ಪುರಸ್ಸರಂ ನಿಜನಿಜ ನಿವಾಸಯಾನಕ್ಕೆ ನಿಯಮಿಸಿ ಮುಕುಂದಂ ಖಗೇಂದ್ರನಂದನೆ ಸಮೇತಂ ವಿವಿಧವಿಷಯಾನುಭೂತಿ ಪ್ರೀತಮಾನಸನಾಗಿ—

ಕಂ॥ ತಳೆವಂತೆ ಮಣಿತ್ರಯಮುಮಂ।
ವಿಳಸತ್ ಕೇಯೂರ ವಳಯಮುಮಂ ತದ್ರೂಪಂ॥
ತಳೆದಂ ತ್ರಿಖಂಡಮಯ ಭೂ।
ವಳಯಮನಾತ್ಮೀಯ ಭೂರಿ ಭುಜಮಂಡಳದೊಳ್॥ (೭೧)

ದೆಸೆವರಮಿತರರ ತೇಜಃ।
ಪ್ರಸರಂ ಮೆಯ್ದೋಱದಂತು ಸಕಳಾವನಿಯಂ॥
ಮುಸುಕಿ ಕುಳಿಕೊರ್ಗೊಳಿಸಿದುದು।
ಬಿಸರುಹ ನಯನನ ಸಿತಾತಪತ್ರಚ್ಛಾಯಂ॥ (೭೨)

ಬೆಳೆದುದು ಬಿತ್ತದೆಯುಂ ಭೂ।
ವಳಯಂ ರವಿ ಬಿಸುಪನುೞಿದು ಸೊಗಯಿಸೆ ಜಗಮಂ॥
ಬೆಳಗಿದನೇನೆಂಬುದೊ ಚ।
ಕ್ರಳಾಞ್ಛನನ ಪುಣ್ಯದೊದವುಮಂ ತೇಜಮುಮಂ॥ (೭೩)

ಇಳೆ ಮುೞಿಯಂ ಪಾರದೆಯುಂ।
ಬೆಳೆದೊಱಗಿರೆ ಕೆಲಸಮಿಲ್ಲದಿರಲಂಜಿದವೋಲ್॥
ತಳಿದುವತಿಸುರಭಿ ಜಳಮಂ।
ಜುಳ ಜಳದಂಗಳ್ ಪುಡಿಯಡಂಗುವಿನಮುರ್ವರೆಯಾ॥ (೭೪)

ಮಲರ್ದಲರ್ದ ಪೂಗಳೋಗರ।
ದಲರ್ವಂಡಂ ತಳೆದು ಕುಳಿರ್ವ ಪನಿಪುಲ್ಗಳ ಬಂ॥
ಬಲೊಳಮಳ ಸುರಭಿಯೆನೆ ತ।
ಣ್ಮಲೆವಿನಮೋಲಗಿಸಿ ನೃಪನನೊಸಯಿಸುವುದೆಲರ್॥ (೭೫)

ಕಂ॥ ತದುಪೇಂದ್ರನ ವನಕೇಳಿಯ ।
ಪದನಂ ಸಾರ್ದೂಲಗಕ್ಕೆ ರಿತುಗಳ್ ಬಂದಿ ॥
ರ್ಪುದನಱಿಪುಗುಮುಪವನವಿಕ ।
ಸದಖಿಳ ಋತುಪರಿಗೃಹೀತ ಸುಮನೋಲತೆಗಳ್ ॥ (೭೬)

ವ॥ ಮತ್ತಮಾಮಹಾರಾಜ ಕುಂಜರನ ರಾಜ್ಯದೊಳ್—

ಕಂ॥ ವಿತರಣದೊಳ್ ವಸುಧಾಮರ ।
ಹಿತವೃತ್ತಿ ಬಲಂಗಳೊಳ್ ಮಹಾಪತ್ತಿ ನದೀ ॥
ವಿತತಿಯೊಳಯುಶಸ್ತಾಪಂ ।
ನಿತಾಂತಮುಂಟಪ್ಪೆಡಕ್ಕುಮಿಲ್ಲು ಬಿಡೆಡೆಯೊಳ್ ॥ (೭೭)

ಪಿರಿದುಮಕಲ್ಯಾತ್ಮತೆ ಸುಜ ।
ನರ ಮನದೊಳ್ ಸಂಭೃತ ದ್ವಿಪಕ್ಷತಿ ವಿಹಗೋ ॥
ತ್ಕರದೊಳ್ ದುರ್ಗದ ಬಳವ ।
ತ್ತೆ ರಾಜ್ಯವೈಭವದೊಳಲ್ಲದಿಲ್ಲು ಬಿಡೆಡೆಯೊಳ್ ॥ (೭೮)

ಅರಿವಿಳಸಿತನಾಯುಧನುಂ ।
ದಿರದೊಳ್ ಬಹುನೀರಸತ್ವ ರೌದ್ರತೆ ಮಕರಾ ॥
ಕರದೊಳ್ ಪೃಥುಕೋಪಸ್ಥಿತಿ ।
ಪರಿಕಿಸೆ ಧಾತ್ರೇಯಿಯರೊಳಲ್ಲದಿಲ್ಲು ಬಿಡೆಡೆಯೊಳ್ ॥ (೭೯)

ವ॥ ಎನಿಸಿ ಸಕಳಲೋಕೋತ್ಸವ ನಿಧಾನನುಂ, ಮೃದುಮಧುರಗಭೀರ ಭಣಿತಿ ಸೂತ್ರಸಯಂತ್ರಿತ ಸಕಳಸುಮನಃಕದಂಬನುಂ ಅನವರತವಿತರಣ ವಶೀಕೃತಾರ್ಥಿ ಸಾರ್ಥನುಂ ಅನುದಿನ ವಿನಯವಿನತಿ ಪ್ರಮೋದಿತಾಖಿಳ ಗುರುಕುಳನುಂ ಉತ್ತಮಸಮ್ಯಕ್ತ್ವ ಚಶೀಲಾದಿ ಸ್ವಾಮಿಗುಣಭೂಷಣನುಂ, ಅನ್ವಯಾಗತಾಖಿಳ ಗುಣಸಮಗ್ರ ಪ್ರಧಾನಜನ ಪೂಜ್ಯನುಂ ಅನಾರತ ಸಮುಸ್ತವಸ್ತು ವಿಸ್ತೀರ್ಣ ವಿವಿಧಜನಪದ ಪ್ರವೃದ್ಧಸಂಪದನುಂ, ಉದಗ್ರಾನೇಕ ದುರ್ಗವೈಭವಾಳಂಕೃತನುಂ, ಅಪರಿಮಿತ ಧನಸಮೃದ್ಧಕೋಶ ಪ್ರಪೂರ್ಣ ಪುಣ್ಯಪ್ರಭಾವನುಂ, ಅಶ್ರಾನ್ತವಿಶ್ರುತ ಪ್ರಬಳಬಳ ವಿಳಸಿತನುಂ, ಅತೀವಧೀರೋದಾತ್ತ ಮಿತ್ರಪ್ರಮೋದ ಮೇದುರ ಚರಿತ್ರನುಂ ಆಗಿ ಚರಣಪಲ್ಲವಚ್ಛಾಯಾನಿಗೂಢ ಷೋಡಶಸಹಸ್ರ ಮಕುಟಬದ್ಧ ಮಂಡಳೀಕಮಂಡಳಿಯೊಳಂ, ತತ್ಪ್ರಮಿತ ಮೂರ್ತೀಭೂತ ಮನಸಿಶಯ ಪುಣ್ಯದೇವತಾಯಮಾನ ಮಾನಿನೀನಿವಹದೊಳಂ, ಅಷ್ಟ ಸಹಸ್ರ ಸಮ್ಮಿತ ವ್ಯಂತರಾಮರ ನಿಕಾಯದೊಳಂ, ಚಕ್ರಚಾಪಖಡ್ಗ ಶಂಖಾದಿ ಸಪ್ತರತ್ನದೊಳಂ ಒದವಿದ ಸಂಪದದಿನುಪೇಂದ್ರನಿಂದ್ರಲೀಲೆಯಿನರಸುಗೆಯ್ಯುತ್ತುಮಿರ್ದು—

ಮ॥ ಧೃತಿಯಿಂ ಲಕ್ಷ್ಮಿಯನೇಕವಾಕ್ಯತೆಯಿನುರ್ವೀಕಾನ್ತೆಯಂ ಸಾಹಸೋ।
ನ್ನತಿಯಿಂ ಶಾಸ್ತ್ರಮಲಕ್ಷ್ಮಿಯಂ ವಿನಯದಿಂ ವಾಕ್ಶ್ರೀಯನಿಚ್ಛಾನುವ ॥
ರ್ತತೆಯಿಂ ವಲ್ಲಭೆಯಂ ಸ್ವಯಂಪ್ರಭೆಯನತ್ಯಾಸಕ್ತೆಯಂ ಮಾಡಿ ನಿ।
ರ್ವೃತ ಚಿತ್ತಂ ನಲಿದಂ ಸ್ವವಶ್ಯವಿಷಯಂ ಸಂಸಾರ ಸೌಖ್ಯಾರ್ಣವಂ ॥ (೬೦)

ಚಂ॥ ಸುರನಗದಂತೆ ಸುಸ್ಥಿರತೆಯಂ ಗಗನಾಂಗಣದಂತೆ ಕಾವ್ಯಗೋ।
ಚರತೆಯನಿಂದ್ರನಂತೆ ಸುಮನೋರಮಣತ್ವಮನಬ್ಧಿಯಂತೆ ನಿ॥
ರ್ಭರ ನಿಜಜೀವನತ್ವಮನಹರ್ಪತಿಯಂತೆ ತತಪ್ರತಾಪ ಭಾ।
ಸುರತೆಯನಾಂತನಾ ನೆಗಬ್ದಿ ಚಕ್ರಧರಂ ವಸುಧೈಕಬಾಂಧವಂ ॥ (೬೧)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ ಖ್ಯಾತಜಿನಸಮುಯ ಕಮಳನೀ ಕಳಹಂಸಾಯಮಾನ ಮಾನಿತ ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾನಂದ ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ ಶ್ರೀವರ್ಧಮಾನ ಪುರಾಣದೊಳ್ ಗೋವರ್ಧನ ಸಮರವಿಜಯ ಸಾಮ್ರಾಜ್ಯವರ್ಧನ ವರ್ಣನಂ

ಅಷ್ಟಮಾಶ್ವಾಸಂ.

ನವಮಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀಯ ಜಯಶ್ರೀಯ ವಚಃ।
ಶ್ರೀಯ ಯಶಃ ಶ್ರೀಯ ನಲ್ಮೆ ಸತತಂ ತನಗೇ॥
ಕಾಯತ್ತಮಾಗೆ ನೆಗಱ್ದಂ।
ನ್ಯಾಯಧನಂ ಪಂಚಪರಮಗುರು ಪದವಿನತಂ॥ (೧)

ವ॥ ಒಂದು ದೆವಸಂ ಜ್ವಲನಜಟಿ ಮಹಾರಾಜಂ ಚಾರುಚಾರಣಮುನಿ ಸನ್ನಿಧಾನದೊಳ್ ಸಂಸಾರಾಸಾರತೆಯಂ ಸವಿಸ್ತರಮಱಿದು ಪರಮವೈರಾಗ್ಯದೊಳ್ ನೆಱೆದು ಸತ್ಸಾಮ್ರಾಜ್ಯರಾಜ್ಯಮನತರ್ಕ್ಯಕೀರ್ತಿಯಪ್ಪರ್ಕಕೀರ್ತಿ ಕುಮಾರನೊಳ್ ನಿಱಿಸಿ ನಿರ್ವೇಧಗೀರ್ವಾಣಲಕ್ಷ್ಮೀಸಮಾಗಮಾಪೇಕ್ಷೆಯಿಂ ದೀಕ್ಷಾವಯಸ್ಯಾಯತ್ತ ವೃತ್ತನಾದನೆಂಬುದಂ ಪ್ರಜಾನುತಂ ಪ್ರಜಾಪತಿ ಮಹಾರಾಜಂ ಚರರ ಬಿನ್ನಪದಿನವಧರಿಸಿ—

ಕಂ॥ ಪಡೆದು ನಿವೃತ್ತಿಗೆ ತೞಿಸಂ।
ದುದಕ್ಕೆ ಜೆಱಗಾದನುಚಿತವೃತ್ತಕ್ಕೆ ಸಸ॥
ಮ್ಮದನಾದಂ ತನ್ನಿಂ ಮುಂ।
ಚಿದುದಕ್ಕೆ ವಿಷಣ್ಣನಾದನೇಂ ಗುಣರತನೋ॥ (೨)

ವ॥ ಆಗಳ್—

ಕಂ॥ ಈಪಟಿಱಿಯ ಶ್ರೀಗೆ ಮಹಾ।
ಕಾ ಪದ್ಮಾಳಿಗೆ ಸದಾಶ್ವಚರಿತೆಗೆ ಮಾತಂ॥
ಗೋಪಾತ್ರೆಗೆ ರಥ್ಯಾಶ್ರಿತೆ।
ಗೋಪರೆ ವಿಷಯಾಂಧರಂತೆ ಧೀರೋದಾತ್ತರ್॥ (೩)

ಪಡೆದು ನಿಜಜನಕನನುಭವಿ।
ಸಿದ ರಾಜ್ಯಶ್ರೀವಧೂಟಿಯೊಳ್ ನೆರಯಿಸಿ ಮಾ॥
ಣ್ದದೆ ಮಸಗಿ ತಮ್ಮೊಳಿಱಿಯಿಸಿ।
ದುದು ತೃಷ್ಣಾಮದಿರೆ ಮದದಿನವನೀಶ್ವರರಂ॥ (೪)

ನರೆವೆಸರೊಳ್ನೊರೆ ಮೇಗೊಗೆ।
ತರೆ ಮಸಗಿ ಜರಾನದೀರಯಂ ಕವಿದೆಡೆಯೊಳ್॥
ಧರಿಯಿಪ ಮಹಾವ್ರತ ಪ್ಲವ।
ಮಿರೆ ಬಱುದೊಱಿವೋಗಿ ಮಱಿದು ಸಾವುದೆ ಜದುರಂ॥ (೫)

ವ॥ ಎಂದು ತಮ್ಮೊಳೆ ಬಗೆದನಂತರಮಭಿನವಾಸಕ್ತವಿರತಿ ತರುಣೀಪ್ರಣಯ ಭರದಿಂ ಪುರಾನುಬದ್ಧ ಪ್ರವೃದ್ಧ ರಾಜ್ಯಲಕ್ಷ್ಮೀ ಪುರಸ್ಸರಾಂತಃಪುರಮನುೞಿವ ಬವ ಸೆಯಿಂ ನಿಜತನೂಜರಂ ಕರೆದು ಸಮುಚಿತೋದಾರ ಗಂಭೀರಭಣಿತೆಯಿನಿಂತೆಂದಂ—

ಚಂ॥ ಮನುಕುಲಮಿಂದು ಪುಣ್ಯಮಯಮಾದುದಕಂಟಕಮಾದುದಿಂದು ಮೇ।
ದಿನಿ ನಿಜರಾಜ್ಯಮಿಂದು ಸಕಳಾಂಗಸುಸಂಭೃತಮಾಯ್ತು ಧರ್ಮಮಿಂ॥
ದನವರತ ಪ್ರಭಾವನೆಯೊಳೊಂದಿದುದಿಷ್ಟವಿಶಿಷ್ಟರಿಂದು ತ।
ಣ್ಣನೆ ತಣಿದರ್ ಭವದ್ವಿಧತನೂಜರಿನಾರ್ ಕೃತಕೃತ್ಯರೆನ್ನವೋಲ್॥ (೬)

ಮ॥ ಕ್ರಮಸಂಲಬ್ಧ ಸಮೃದ್ಧರಾಜ್ಯಸುಖಮಂ ವಿದ್ವತ್ಸುಹೃತ್ಸಜ್ಜನ।
ಪ್ರಮುಖಂ ಭೋಗಿಸಿದೆಂ ಸಮಂತು ಪಡೆದೆಂ ನಿಮ್ಮನ್ನರಂ ನಂದನರೋ॥
ತ್ತಮರಂ ನೋಡಿದೆನನ್ಯದುರ್ಲಭ ಭವತ್ಸಾಮರ್ಥ್ಯಮಂ ಬೇೞ್ಪುದೆ।
ಲ್ಲಮುಮಾಯ್ತಿಂ ಕರಣೀಯಮೇನೆನಗದಂ ಪೇೞಿಂ ಯಥಾಪ್ರಾಪ್ತಮಂ॥ (೭)

ವ॥ ಎಂದು ಮತ್ತಂ—

ಕಂ॥ ಎಮಗನುವಶ್ಯಂ ಕೃತ್ಯಂ।
ನಿಮಗಂ ಪರಮಾರ್ಥಕಾರಿತವ್ಯಂ ಸುಜನರೋ॥
ತ್ತಮರ್ಗಮನುಮೋದಮೆನಲಿಂ।
ಸಮಯೋಚಿತಮಾಗೆ ನೆಗೞ್ವುದಾವುದೊ ಪೇೞಿಂ॥ (೮)

ವ॥ ಎಂದ ಜನಕನ ಋಜುಪ್ರಾಯಮುಮಂ ನಿಭೃತಾಭಿಪ್ರಾಯಮುಮಪ್ಪ ನುಡಿ ಗಳ ವಿದಿತಮೆನಿಸೆ ವಿನಯಾಭಿರಾಮಂ ರಾಮಂ ದಾಮೋದರಪುರಸ್ಸರಂಕೆಯ್ಮುಗಿದು—

ಕಂ॥ ಆಮೞಿವೆಮೆ ಭವದೀಯನಿ।
ಯಾಮ ಪಥಾನುಗ ವಿಧೇಯ ಕಾರ್ಯಮನಿನಿತಂ॥
ನಾಮಱಿಪಲೆ ಬಲ್ಲೆವು ನಿಮ।
ಗಾಮೆಂತುಂ ವಿನಯನೀಯರೆಂಬುದನೆಂದುಂ॥ (೯)

ವ॥ ಎಂದು ಸಮಯ ಸಾಂಪ್ರತ ಪ್ರಶ್ರಯ ಪ್ರಕಾಶ ಭಾಷಿತನಯರಾದ ತನ ಯರಂ ಯಥೋಚಿತಾಚರಿತ ಚತುರಶೇಖರಂ ಪ್ರಜಾಪತಿ ನೃಪತಿ ನಯದಿನನುನಯಿ ಸುತ್ತುಂ—

ಕಂ॥ ಸತಿಯರೊಳೆ ಯೌವನಕ್ಕಾ।
ಶ್ರಿತ ಬುಧರೊಳೆ ನೆರಪಿಪೊಡಮೆಗೆಂತಾಯ್ತು ಯಥೋ॥
ಚಿತಮಂತೀತನುಗನಣು।
ವ್ರತದೊಳೆ ಸಲವಾಗೆ ಸಫಳಮಾದಪುದೆಸಕಂ॥ (೧೦)

ಕಂ॥ ಬಿಡಿಸಿದಿರೆನ್ನಿಂ ರಾಜ್ಯದ ।
ತೊಡರಂ ಕೆಯ್ಕೊಂಡು ನೀಮೆ ಬಱಿದಿಂ ಮನದೊಳ್ ॥
ತೊಡರ್ದಿರ್ದಾ ಸಂಕಲೆ ಪಱಿ ।
ಪಡೆಯುಂ ಸೆಱಿವನೆಯೊಳರ್ಪನಂ ನೆನೆಯಿಪೆನೇ ॥ (೧೧)

ಜೀವಿಗೆ ಬಾಲ್ಯಯುವತ್ವ ।
ಸ್ಥಾವಿರ ಮರಣಂಗಳನ್ವನುಪ್ರಾಪ್ಯಂಗಳ್ ॥
ಭಾವಿಪೊಡಾಂ ಸಂಪ್ರಾಪ್ತ ।
ಸ್ಥಾವಿರನಿಂ ಪ್ರಾಪ್ಯಮಪ್ಪುದಾವುದೊ ಪೇೞಿಂ ॥ (೧೨)

ಲೋಕದವರ್ ಪುತ್ರರ್ ಪರ ।
ಲೋಕಪ್ರಾಪ್ತಿಗೆ ಸಹಾಯರೆಂಬುದು ಸಾರ್ಥ ॥
ಸ್ವೀಕೃತಮಕ್ಕುಂ ನೀವೆಮ ।
ಗೀಕಾರ್ಯದೊಳೊಪ್ಪೆ ಮಾಡಿದಂದನುಮತಿಯಂ ॥ (೧೩)

ವ॥ ಎಂದು ಮತ್ತಂ ಪಲತೆಱದುಚಿತ ನಯನೀ (ತಿ) ನಿದರ್ಶನಂಗಳಿಂ ತನೂಭವ ಪ್ರಭೃತಿ ಬಾಂಧವರನೆಂತಾನುಮೊಡಂಬಡಿಸಿ—

ಕಂ॥ ಬಿಸುಟಭಿಮಾನಮನಾನೃಪ ।
ತಿ ಸತಿಯರಂ ಸುತರನಾಪ್ತರಂ ತೊಱೆದಂ ಮೆ ॥
ಚ್ಚಿಸಿ ಮುಕ್ತಿಯೊಡನಿರಲ್ವರಿ ।
ಸಿಸವಿರಿಂತ ಚಿತ್ತನೊಲ್ದೊಡಿದು ಕೌತುಕಮೇ ॥ (೧೪)

ವ॥ ಅಂತು ಸಂವೇಗಾದಿ ಗುಣಸಮಗ್ರ ಸಮ್ಯಕ್ತ್ವರತ್ನತ್ರಯಕ್ಕೆ ನಿಜಮನಃ ಪೂರ್ವಕಂ ಪಿಂಗಿಸಿದ ಬಾಹ್ಯಾಭ್ಯಂತರ ಪರಿಗ್ರಹ ನಿವೃತ್ತಿಯಂ ಸಸಾಕ್ಷಿಕಂ ಮಾಡುವಂತೆ—

ಮಂ॥ ಪೊರೆದಾಳ್ದಂಗರಿಭಂಜನೋದ್ಯಮದೊಳೆಂದುಂ ನಾಮೆ ಮುಂದಿರ್ದು ಪಿಂ ।
ಗಿರೆ ಕರ್ಮಾರಿವಿಭೇದದೊಳ್ ಹರಿಬವೆಂದೆಟ್ಟಿಂದ ಸದ್ಧರ್ಮತ ॥
ತ್ಪರರೇೞ್ನೂರ್ವರಿಳೇಶ್ವರರ್ವೆರಸು ತದ್ಭೂಪಾಳಕಶ್ರೇಣಿ ಕೇ ।
ಖರನಾಂತಂ ವಿಹಿತಾಶ್ರಮ ಬ್ರತಿಪದಾಬ್ಜೋಪಾಂತದೊಳ್ ದೀಕ್ಷೆಯಂ ॥ (೧೫)

ವ॥ ಅಂತು ತದ್ಭವ ಭವಿಷ್ಯತ್ಸಕಳ ಕರ್ಮ ನಿರ್ಮೂಳನಂ ಪ್ರಜಾಪತಿ ಬ್ರತಿಪತಿ ಸುದುಸ್ಸಹ ಮಹಾತಪೋ ವಿಶೇಷನಿಯಮಂಗಳೊಳ್ ನೆಗಟಿಲ್ ತಗುಳ್ದನನ್ನೆಗಂ—

ಕಂ॥ ತಂದೆಯ ಪದವಿಯೊಳನುನಯ ।
ದಿಂದಣ್ಣನನಿರಿಸಿ "ಪಿತೃಸಮೋ ಜ್ಯೇಷ್ಠ" ಯೆನಿ ॥
ಪ್ಪೊಂದಂದಂ ಪಾಳಿಸುತೆ ಮು ।
ಕುಂದಂ ಪಾಳಿಸಿದನಖಿಳ ಭೂಮಂಡಳಮಂ ॥ (೧೬)

ವ॥ ಅಂತು ನಿಜಕುಲಕ್ರಮಾಗತ ಸುರಮ್ಯರಮ್ಯರಾಜ್ಯಾಧಿಪತ್ಯದೊಳತುಳಗುಣ ಭದ್ರಬಳಭದ್ರನುಮಾತ್ಮಪ್ರತಾಪಸಂಪದಾಸಾದಿತ ತ್ರಿಖಂಡಭೂಚಕ್ರ ಚಕ್ರಧರ ಪದವಿ ಯೊಳ್ ತಾನುಂ ಸುಖದಿನರಸುಗೆಯುತ್ತುಮಿರೆಯಿರೆ—

ಕಂ॥ ನೀತಿಯೊಳೊಗೆದುವು ಲಾಭ ।
ಖ್ಯಾತಿಗಳೆಂತಂತೆ ಪುಟ್ಟಿದರ್ ಶ್ರೀವಿಜಯ ॥
ಜ್ಯೋತಿಃಪ್ರಭೆಗಳ್ ಖಗಪತಿ ।
ಜಾತೆಯೊಳಬ್ಜೇಕ್ಷಣಂಗೆ ಮುದವೊದವುವಿನಂ ॥ (೧೭)

ಶ್ರೀವಿಜಯಶ್ರೀವಿದ್ಯಾ ।
ಶ್ರೀವಿನಯಶ್ರೀಗಳೊಡನೆ ಬಳೆಯೆ ಕುಮಾರಂ ॥
ಶ್ರೀವಿಜಯಂ ಬಳೆದನರಿ ।
ಶ್ರೀವಿಜಯಂ ಬಳವಿಗೆಯ್ದುವಿನಗುಣನಿಳಯಂ ॥ (೧೮)

ಜ್ಞಾತಿಗಳ ಕರತಳಾಂಭೋ ।
ಜಾತಂಗಳೊಳೆಯ್ದೆ ತೊಳಗಿ ಕೆಯ್ಗನ್ನಡಿವೋಲ್ ॥
ಜ್ಯೋತಿಃಪ್ರಭೆ ಬಳೆದಳತಿ ।
ಪ್ರೀತಿಯಿನೀಕ್ಷಿಸುವ ಜನದ ಕಣ್ಗಳ ನೆಬಿಲೊಳ್ ॥ (೧೯)

ಇದು ನವಯೌವನರಸಚಿ ।
ತ್ರದ ತಿಟ್ಟಮಿದಂಗಭವನ ರಾಜ್ಯದ ಕರುಮಾ ॥
ಡದ ವಾಸ್ತುಸೂತ್ರಮೆಂಬಂ ।
ದದಿನೆಸೆದುದು ಸಿಸದಮುವಳ ಕೊಡಗೂಸುತನಂ ॥ (೨೦)

ದುಗುಲದ ಪಲ್ಲವದುಡೆನೂ ।
ಲ ಗಂಟೆಗಳ ಪುದಿವನಾಂತು ಬಾಲ್ಯಶ್ರೀಕೇ ॥
ಳಿಗೃಹಾಗ್ರ ತೋರಣದ ಶಾ ।
ಖೆಗಳೆನಿಸಿದುವಮಳ ಕೋಮಳೋರುಗಳವಳಾ ॥ (೨೧)

ಸ್ತನಜಘನಮೊದವದನ್ನೆಗ ।
ಮನುಭವಿಸುವೆವಿದಱ ಚೆಲ್ವನೆಂದೆಳಸಿದವೋಲ್ ॥
ಜನನಯನಮಳಿಗಣಾವೃತ ।
ಮನಿಬಿಸಿದುದು ಕುಮುದಲತೆಯನೊಳ್ನಡುವವಳಾ ॥ (೨೨)

ಇದು ಚೆಲ್ವಿನ ನಿಧಿಯೆನೆ ತಳೆ ।
ವುದವಳುರಸ್ಥಳಮಶೇಷ ನಿಜಶೋಭಾಸಂ ॥
ಪದಮುನೆಡೆಗೊಂಡು ಕುಚವೊದ ।
ವಿದಂದು ಮೆಱೆದವೆನೆ ಬಱಿಕಮೆಂಬೀ ತೆಱದಿಂ ॥ (೨೩)

ಕಂ॥ ಬಳೆದುವುರೋಂತಃಕುಚಕಂ।
ದಳದಿಂದೆಡೆಗುಡುಗಳಾದ ಕೊರಲಂತಯ್ತು॥
ನ್ನೆಳಗೌಂಗನಡರ್ದ ಲತೆಯಂ।
ಯಿಱಿಸುಗುಮೆನೆ ನೊೞ್ಪಿರಸೆದುವಾಕೆಯ ತೋಳ್ಗಳ್॥ (೨೪)

ಕವಿದು ಮಧುಪಾಳಿ ಕುಡಿವಾ।
ಸವಪಾತ್ರಂ ತಾನುವೆಣೆಗಡೆನಗೆನುತಾ ರೂ॥
ಪವತಿಯಃ ಮೊಸಲ್ವಾಯ್ನಗು।
ವಪೊಲೆಸೆವುದು ರಾಗದೊದವಿನಿಂ ಬಂಧುಗೆಯಂ॥ (೨೫)

ಇವು ಲಕ್ಷ್ಯವಿಸರಮೆಂದಾ।
ಸವಿಕೃತಿವಿರಹಿತ ಮನೋಜಸರದನುಗಳೆನಿ॥
ಪ್ಪುವ ಕೃತ್ರಿಮ ಶೋಭಾವ್ಯೆ।
ಭವಂಗಳಕ್ಷಿಭ್ರುವಂಗಳಾ ಕೋಮಳೆಯಾ॥ (೨೬)

ಬಳೆದುದು ನಿಜನಖರೋಚಿ।
ರ್ಜಳಮಂ ಪದವದಱಿಕೊಳಾಕೆ ತಿರ್ದದೆಯುಂ ಕುಂ॥
ತಳ ನವತಮಾಳ ವನಮೇಂ।
ಬಳಯಿಸಿತೊ ಜನಾವಳೋಕರುಚಿ ಜಳವರ್ಷಂ॥ (೨೭)

ವ॥ ಅಂತು ಸಂತೋಷಿತಾಶೇಷ ಜನಾಶಯಮಾದ ಶೈಶವಮೋಸರಿಸೆ—

ಕಂ॥ ಮಱುಕದ ಮುಂಗುಡಿ ಸೊಬಗಿನ।
ನೆಱವು ಮನೋಭವನ ಬೀರಸಿರಿ ಚೆಲ್ವಿನ ಕ॥
ಣ್ದೆಱವಿ ತಲೆದೋಱಿದುದು ಜಗ।
ಮೆಱಗುವಿನಮವಳ್ಗೆ ಮದನನಾಳ್ಕೆಯ ಹರೆಯಂ॥ (೨೮)

ಮ॥ ದರಹಾಸಾಮೃತ ಕೈತವಂ ನುಡಿಗಳೊಳ್ ಭೂಷಾವಳಿಕ್ಷೇಪ ತ।
ತ್ಪರಲೀಲಾಂಗ ನಿವೇದನಂ ಕರದೊಳೀಷದ್ಭ್ರೂಲತಾ ನೃತ್ಯ ಸಂ॥
ಚರಣಂ ಲೋಚನದೊಳ್ ಮದೋಪಚಿತ ದಾರ್ಷ್ಟ್ಯಂ ಚಿತ್ತದೊಳ್ ಪೆರ್ಚಿ ಮೆ।
ಯ್ವೊರೆದತ್ತಾಕೆಗಮಾ ಜಯೋದ್ಯತ ಮನೋಜಾಗ್ರೇಸರಂ ಯೌವನಂ॥ (೨೯)

ಚಂ॥ ನೆಲೆಮೊಲೆ ಹಾರಮಂ ಕೆಲಕೆ ನೂಂಕಿದುದೆಯ್ದೆ ವಿಳೋಳಲೋಚನಾಂ।
ಚಲಮವತಂಸಮಂ ಮುಸುಳಿಸಿತ್ತು ಗತಿಸ್ಫುರಿತಂ ನಿತಂಬಮುಂ॥
ಡಲಕಟಸೂತ್ರಮಂ ಪಱಿದು ಸೂಸಿದುದಾಕೆಗೆ ತನ್ನ ಚೆಲ್ವನ।
ಗ್ಗಲಿಸುವ ಯೌವನಾಭಿನವಲಕ್ಷ್ಮಿಗವೇಂ ಮಱಿಯಾದುವೆಂಬಿನಂ॥ (೩೦)

ಉ॥ ಲೋಲ ವಿಲೋಚನೇಷುಗಳಿನುಚ್ಚಪಯೋಧರಚಕ್ರದಿಂ ಲಸ ।
ದ್ಭ್ರೂಲತಿಕಾಧನುರ್ಲತಿಕೆಯಿಂ ವಿಳಸದ್ವಿಜ ವಜ್ರದಿಂ ವಿನೀ ॥
ಳಾಲಕಪಾಶದಿಂ ಮಸೃಣದೋಃಪರಿಘಂಗಳಿನಾರ ಕಣ್ಗಮಾ ।
ಬಾಲೆ ವಿಡಂಬಿಪಳ್ ಜಯನಶಾಲೆಯ ಲೀಲೆಯನಂಗಜನ್ಮನಾ ॥ (೩೧)

ಚಂ॥ ಮಿಗೆ ನೆಱುಸುಯ್ಯನೋಸರಿಸುಗುಂ ಮಲಯಾನಿಳನಿಂಪುವೆತ್ತಮಾ ।
ತುಗಳೊಡನೋದುಗುಂ ಸ್ಮರಧನುರ್ಗುಣಟಂಕೃತಿಗಳ್ ಕಟಾಕ್ಷಮಾ ॥
ಳಿಗಳೊಡನಾಡುಗುಂ ತೊಳಪ ತಣ್ಗದಿರೆಂಬಿನಮೆಯ್ದೆ ಲೋಕಮಂ ।
ಬಗೆಗೊಳಿಸಿತ್ತು ಮೆಯ್ಸಿರಿಯ ಸೊಂಪು ಧರಾರಮಣೇಶಪುತ್ರಿಯಾ ॥ (೩೨)

ವ॥ ಇಂತು ಮನ್ಮಥಮದಪ್ರಮದಕೇಳೀವನಮಾದ ಯೌವನದೊಳ್ ಮನೋಭವಂಗೆ ಭುವನಮಂ ಬಸದಾಗೆ ಬೆಸಕೆಯ್ಯಲ್ ನೆಱೆಯೆ ನೆಱೆದ ನಾನಾವಿಧ ವಿನೋದ ಕೇಳೀಕೌತುಕಂಗಳಿಂ ದಿನಂಗಳೊಳ್ ಸೊಬಗುವಡೆವಿನಮಾಬಾಲೆ ಲೀಲೆಯಿಂ ಕ್ರೀಡಿಸುತ್ತುಮೊಂದು ದೆವಸಂ—

ಚಂ॥ ಗವಸಣಿಪಂದದಿಂ ಪದತಳಾಂಶುವಿನುರ್ವಿಯನೀಕ್ಷಣಾಂಶುವಿಂ ।
ಧವಳಿಸುವಂದದಿಂ ದೆಸೆಗಳಂ ಚಿಕುರಾಂಶುವಿನೀಂಟುವಂದದಿಂ ॥
ದಿವಸಮನಂಗಜಾನತ ಜಗತ್ರಯವೆತ್ತಿರೆ ಸುತ್ತಲುಂ ಕಳಾ ।
ಪ್ರವಣ ಸಖೀಜನಂ ಜನಪನೋಲಗದಲ್ಲಿಗೆ ಬಂದಳೊರ್ಮೊದಲ್ ॥ (೩೩)

ವ॥ ಅಂತು ಬಂದು—

ಉ॥ ಈ ವದನಾಬ್ಜಮೀಭುಜಲತಾದ್ವಯಮೀಕುಚಚಕ್ರಯುಗ್ಮಮಿ ।
ನ್ನಾವನ ವಕ್ತ್ರಪಂಕಜಕಿದಾವನ ಕೋಮಳ ಬಾಹುಶಾಖೆಗ ॥
ಳ್ಗಾವನುರಸ್ಥಳೀಪುಳಿನ ಭೂಮಿಗೆ ಸಾರ್ಗುಮೆನುತ್ತೆ ವಿಸ್ಮಿತೋ ।
ರ್ವೀವರರಾವಗಂ ಬಯಸಿ ನೋಡೆ ನೃಪಾಳಸಭಾಂತರಾಳದೊಳ್ ॥ (೩೪)

ಮಾಳೆಯನುರ್ವಿಗೋಲಗಿಸೆ ಸೋರ್ಮುಡಿ ಪಾಣಿತಳಂ ಸ್ಥಳಾಬ್ಜಮಂ ।
ಮೇಳನ ಲಕ್ಷ್ಮಿಯಂ ತಳೆಯೆ ಪೆರ್ಮೊಲೆ ಮೇಲುದನಿಕ್ಕಿಮುಟ್ಟಿಮು ॥
ಕ್ತಾಲತೆ ಮುಂದೆ ಕಂದಳಿಸೆ ಕಣ್ಮಲರಂ ಶ್ರವಣಾನತೋತ್ಪಳಂ ।
ಲಾಲಿಸೆ ಬಾಲೆ ಬಂದೆಱಗಿದಳ್ ನಿಜತಾತನ ಪಾದಪೀಠದೊಳ್ ॥ (೩೫)

ಚಂ॥ ಬರೆ ತೆಗೆದಪ್ಪಿಕೊಂಡು ತೊಡೆಯಂ ಪದೆದೇಱಿಸಿ ಭಾಳದೇಶದೊಳ್ ।
ಪರೆದ ಕುರುಳ್ಗಳಂ ಕರದಿನೋಸರಿಸುತ್ತುಮಕೃತ್ರಿಮ ತ್ರಪಾ ॥
ಭರನಮಿತಾಸ್ಯಮಂ ನೆಗಪುತುಂ ಚಟುಲಾಲನೆಯಿಂದೆ ತಾಯ್ವಿರಂ ।
ಬರಿಸಿದುದಾವಕಾರ್ಯಮೊ ನಿಜಾತ್ಮಜರೋಲಗಕೆಂದು ಕೇಶವಂ ॥ (೩೬)

ಕಂ॥ ಬೆಸಗೊಳೆ ಲಜ್ಜಾನಮ್ರೆಗೆ ।
ನಸುನಗೆಯಿಂ ನುಡಿಗೆ ತೆಱಪುಗುಡದಿರೆ ಲಜ್ಜಾ ॥
ವಸರಿ ಸಮಯಾವಗತಿಯೆಂ ।
ಬಸಱಿ ಯಥೋಚಿತ ವಿದಗ್ಧ ವಿಜ್ಞಾಪಿಸಿದಳ್ ॥ (೩೭)

ದೇವ ಪೊಸಮಲ್ಲಿಗೆಗಮೊ ।
ಳ್ಮಾವಿಂಗಂ ಮದುವೆಮಾಡಿದಳ್ ಬನದೊಳ್ಸ ॥
ದ್ಭಾವದೆ ಮಿಥುನದ ಕೆಲದೊಳ್ ।
ನೀವಾರೋಗಿಸಲ್ಕೆವೇೞ್ಕುಮೆಂದೆರೆದಪ್ಪಳ್ ॥ (೩೮)

ವ॥ ಎಂದು ಸಮಯಾವಗತಿ ನುಡಿದ ಮಲ್ಲಿಗೆಯ ಮಾವಿನ ವಿವಾಹ ವೃತ್ತಾಂತ ಪ್ರಸ್ತಾವಸ್ಯೆ ಬೀಜಮಾಗೆ ಬಗೆಯೊಳ್ ಪೆರ್ಚಿದಾತ್ಮೀಯ ಪುತ್ರೀಪರಿಣಯನ ಕರಣೀಯ ಚಿಂತಾಪರಂಪರಾಲತೆಯಿನಾಕ್ರಾಂತನಾಗಿ ಲಕ್ಷ್ಮೀಕಾಂತನುಚಿತಲಾಲನಾ ವಿಕೃತವಿನಯ ಚಟುಳಚತುರವಚನನಾತ್ಮಜೆಯುನಟ್ಟಿಱಿಂ ಕಳಿಪಿ ತತ್ಕ್ಷಣವಿಸರ್ಜಿತ ಸಕಳರಾಜಲೋಕ ನುಂ ಪ್ರಗಲ್ಭಕುಲವೃದ್ಧಯೋಷಿತ್ಪ್ರಧಾನ ಪರಿಷತ್ಪರೀತನುಮಾಗಿ ತತ್ಸುತಾಪರಿಣಯನ ಕಾರ್ಯಪರ್ಯಾಲೋಚನದೊಳ್—

ಕಂ॥ ಲತೆಯುಂ ಫಳಮಾಳೆಯ ಬಳ ।
ವಿ ತರುಗೆ ಮಾೞ್ಪಂತೆ ಮಾಡಿದುದು ಚಿಂತಾಕ್ರಾಂ ॥
ತತೆಯುನೆಮಗೀ ಮಗಳ ಬಳ ।
ವಿ ತುದಿಯೊಳೀ ತೆಱನೆ ಪೆತ್ತವರ್ಗೆ ಪೆಣ್ಣಾಸಂ ॥ (೩೯)

ವ॥ ಎಂದು ಮತ್ತಂ—

ಕಂ॥ ನೀವಱಿವೆಡೆಯೊಳ್ ರೂಪವ ।
ಯೋವಿದ್ಯಾವಿಭವ ವಂಶಸಂಪತ್ತಿಯೊಳಿಂ ॥
ದೀ ವರನೀಕೆಗೆ ತೊಣೆಯೆನೆ ।
ಭೂವರರೊಳ್ ನೋಡಿ ಮಾಡುವುದು ಶೋಭನಮಂ ॥ (೪೦)

ವ ॥ ಎಂದುಪೇಂದ್ರನುಚಿತವಚನಕ್ಕೆ ಸಕಳಕುಳವೃದ್ಧ ಪಾರ್ಥಿವ ಪುರಸ್ಸರಂ—

ಕಂ॥ ರೂಪಿನೊಳಂ ಗುಣದೊಳಮನು ।
ರೂಪರ್ ಕನ್ಯಕೆಗೆ ಕುಲದೊಳಂ ವಿಭವದೊಳಂ ॥
ಭೂಪಾಳಾನ್ವಯರಿಂದನು ।
ರೂಪರ್ ನಿನಗಿಲ್ಲ ಪಿರಿದುಮಾವಱಿವೆಡೆಯೊಳ್ ॥ (೪೧)

ಕಂ॥ ನಮುಗಱಿಸಿ ಮಱುಗುವನಿತೇ ।
ಕೆ ಮನಂ ಮೆಚ್ಚಿದರನಾಕೆ ವರಿಯಿಸುವಂತು ॥
ದ್ಯಮಿಪಂ ಸ್ವಯಂವರಮನೆಂ ।
ದು ಮುಕುಂದನನಂದೊಡಂಬಡಿಸಿ ಬಳಭದ್ರಂ ॥ (೪೧)

ಬೆಸಸಿ ಚರನಿಕರಮಂ ಸಾ ।
ಱಿಸಿ ಪಾಂಚಾಳಾಂಧ್ರ ಚೋಳ ಮಾಳವ ಮಗಧಾ ॥
ದಿ ಸಮಸ್ತ ದೇಶ ಭೂಮಿೂ ।
ಶಸಮಿತಿಗೆಲ್ಲಂ ಸ್ವಯಂವರ ಪ್ರಕ್ರಮಮಂ ॥ (೪೨)

ವ॥ ಆಗಳದಂ ಕೇಳ್ದಶೇಷ ದೇಶಸಾಮಂತ ಮಂಡಳೀಕ ಮಕುಟಬದ್ಧ ಭೂಪಾಳ ಜಾಳಮೆಲ್ಲಂ ನೆರೆದು ಬರಲೊಡಂ ವಿಶುದ್ಧವಾಸರದೊಳಖಿಳಕುಳವೃದ್ಧ ಪ್ರಧಾನಪುಣ್ಯ ಪುರಂಧ್ರೀಪುರೋಹಿತ ಪುರಸ್ಸರಂ ಪುರಂದರನಿಭಂ ಪುರುಷೋತ್ತಮಂ ಪುರುತರ ಪ್ರಮೋದದಿಂ ಪರಸಿ ಸೇಸಿಕ್ಕಿ ಶೇಷಾವಿಶೇಷಿತೋತ್ತಂಸಮೌಕ್ತಿಕನಿಕರೆಯಂ ಪತಿಂವರೆಯನಂದು ಮುಂದಿಟ್ಟು ನಡೆಯೆ—

ಕಂ॥ ಬಾರದ ದಿಕ್ಪಾಳಕರಂ ।
ಭೋರೆನೆ ಕರೆಯಲ್ಕೆ ಪರಿವವೋಲ್ ದೆಸೆಯಿಂ ತೂ ।
ರ್ಯಾರಾವಮೆಯ್ದೆ ನಡೆದಳ್ ॥
ನಾರಿ ಸ್ವಯಂವರಕೆ ಗುರುಸುಹೃಜ್ಜನ ಸಹಿತಂ ॥ (೪೩)

ವ॥ ಅಂತು ನಡೆತಂದು ಮುಖಮಂಡನ ಮಾಳೆಗಳ್ ಮಿಳ್ಳಿಪ ಪಱಿಯಿಗೆಯ, ತಳಿರ ತೋರಣದ, ಮಿಳಿರ್ವ ಲಂಬಳದ, ಗುಡಿಯ ಗಂಟೆಯ, ವಿಚಿತ್ರ ವಿತಾನದ ವಿವಿಧ ರಚನೆಗಳ ಚೆಲ್ವಿನೊಳಂ, ಕಡೆಗಡೆಯೊಳಡಕಿಲ್ಗೊಂಡು ನೋಡುವ ಜನಂಗಳಧರ ಬಂಧೂಕದ ನಾಸಿಕಾಚಂಪಕದ ನಯನಕುವಳಯದ ಬಣ್ಣಸರದ ಮಾಳೆಗಳ ಕೇರ್ಗಳೊಳಂ, ಒಳಗೆ ಮಧ್ಯವೀಥಿಯಿಕೆಲದ ರತ್ನವೇದಿಕೆಗಳೊಳೋಳಿಗೊಂಡು ಕುಳ್ಳಿರ್ದ ನಾನಾದೇಶ ಭೂಮಿೂಶರೊಳರೆಬರ ವಿಕೃತ ವಿಷಯೋಚಿತಾಕಾರ ಭಾಷಾವೇಷ ವಿಸರತೆಯುಮನೆಲ್ಲ ತೆಱದಿಂ ತಮ್ಮೆಗ್ಗನಗ್ಗಂಮಾಡಿ ಬಂದ ಬರವುಮಂ ನೋಡಿ ಅಱೋಡಿಸಿ ನಗುವ ಧೂರ್ತ ದೇಶೀಯ ಚಪಳ ನೃಪಕುಮಾರ ಸಮುದಯದೊಳಂ ಕೆಲಕೆಲಂಬರನನುರೂಪ ಭಾಷಾವೇಷ ವಿಕೃತಿಯುಮಂ ಬರ್ಪ ಕನ್ಯಕೆಯ ವಿಳೋಕಪಥಕ್ಕೆ ಸಲ್ವ ಕುತೂಹಳದಿನಿರ್ದೆಡೆಯಿಂ ಮುಂದಣ್ಗೆ ನಿಮಿರ್ವ ಕೆಯ್ತುಮುಮಂ ನೋಡಿ ನೆಗೆವ ನಸುನಗೆಗೆ ವಿಕೃತವೈತಾಳಿಕ ವಚನಮಂ ನಿಮಿತ್ತಂ ಮಾಱ್ಪುದಾತ್ತ ಧಾತ್ರೀಪಾಳಜಾಳದೊಳಂ, ದುರ್ಲಭ ನಿತಂಬಿನೀ ಲಾಭಲೋಭದಿಂ ಬಂದ ತಮ್ಮ ಬರವಂ ಸ್ವಯಂವರ ಮಹೋತ್ಸವ ವಿಳೋಚನಕ್ಕೀಱಿಸಿ ನುಡಿವ ಕೃತಕಾಭಿಮಾನ ಭೂಸಾಹಸಿಪಹದೊಳಂ, ನೆರೆದರಸುಗಳ ನಡುವೆ ತಮ್ಮ ಪೆರ್ಮೆಯಂ ಪೆಱಗುಗೆಯ್ದು ಪೆಱರ್ಗೆ ಪೂಮಾಲೆಸೂಡುವುದಂ ಮಿಳ್ಮಿಳನೆ ನೋಡಿ ಪೋಪೀಸ್ವಯಂವರ ಸಮಯಕ್ಕೆ ಬರ್ಪುದೇ ಕಷ್ಟಮೆಂದು ಬಂದ ಬರವಿಂಗೆ ಮನದೊಳನುಶಯಂ

ಬಡುವ ಮಾನಧನಧರಾಧಿಪತಿ ಪಟಳದೊಳಂ, ಈ ತೆಱದೆ ಮೆಱೆವ ವಿಱುಪಿಗರ ಮುಱುಕ ಮಾದೊರೆಯ ಭರದ ಜವ್ವನಿಗೆಯನೆಮ್ಮ ಕೆಯ್ಸಾರಲಿತ್ತಪ್ಪುದೆ ಪಿರಿದುಮೆಂದು ಮಱುಗಿ ಮನದೊಳ್ ಮುನಿದು ಕೆಲದ ಕಡುನೀಱರನಡರೆ ನೋೞ್ಪ ಬಡಮನದ ಮಂಡಳಿ ಕಮಂಡಳಿಯೊಳಂ, ರಮಣೀರತ್ನಲಾಭ ಸಂಭವವಿಕಳ್ಪನಾಹೃದಯರಾಗಿ ಕೆಲದ ಮಾನ ಸರನೇನಾನುಮಂ ಬಱಿದೆ ಬೆಸಗೊಳ್ವ ಮಱೆದು ಮಱುಮಾತುಗುಡವಱಿದು ನಾಣ್ಚುವುತ್ಕಳಿಕಾ ತರಳಮಾಕ್ರಾಂತ ಸಾಮಂತಸಂತತಿಯೊಳಂ, ಪಿಡಿದು ವಿಡಿವಾಳ ವೀಣೆಯ ಕೆಳೆಯ ಕೆಳೆಯೊಳ್ ದಳವೇಱಿ ಉಳಿಯಿಸಿ ಪಿರಿಯ ದನಿಯೊಳ್ ತಿಸರಿಯ ಸುಸರತನಮುಂ ಮುಹರಿಯ ಮಧುರತೆಯುಂ ಬೀಣೆಯ ಬಹುಲಿಕೆಯುಂ ಎಸೆಯೆ ವಿಸದ ಕುಸುರಿಯ ಕಳೆಗೆ ಕೆಳೆಗೊಳಿಸಿ ಠವಣೆಗಿಡದೆ ಪವಣೊಯಾರನಾದದಾವುಗಳ ಬಳವಿಯುಂ ಬೈಸಿಕೆಗೆ ಬಸದೆಮಾಡಿ ಪಾಡುವೆಕ್ಕಲಗಾಣರ ಸಂಮಾವಣೆಯ ಗೀತಲತಿಕೆಗೆ ಸಮುಚಿತೋತ್ತರಂಗಳನಡರ್ಪುಮಾಡಿ ಬಳಯಿಸುತ್ತುಮಬಳಾಗಮನ ಷಮಯಂಬರಂ ಪೊೞ್ತುಗಳೆವತಿವಿನೋದ ರಸಿಕರಂಜಕವಿಳಾಸಿರಾಜಕದಂಬದೊಳಂ ತಂತಮ್ಮ ತೋಳ್ವಲದ ಚಲದ ಕಲಿತನದ ಬಲ್ಪಿನಂಕಮಾಲೆಯುಂ ಕೇಳಿಸಿ ಭುಜಲತಿಕೆಗೆ ರೋಮಾಂಕುರೋದ್ಗಮಮನಾಗಿಸುವ ಮಾಗಧರ್ಗೆ ಮೆಚ್ಚುಗೊಟ್ಟು ಪೊಗೞಿಸುವ ವೀರೋದಾರ ಧಾರಿಣೀರಮಣಸಮಿತಿಯೊಳಂ, ಪುರಾತನ ಕೃತಸ್ವಯಂವರ ವಿಭವಶೋಭೆಯುಂ ಪೊರೆಯ ನರಪತಿ ಕುಮಾರರ್ಗೆ ಪೇೞ್ದು ವಿಸ್ಮಯಮನೊದವಿಪ ವಯೋಧಿಕ ಪ್ರಗಲ್ಭ ಪೃಥ್ವೀವರ ಪ್ರಕರದೊಳಂ ಅರ್ಗಲಿಸಿದ ವಿವಿಧ ರಸಭಾವ ವಿಭ್ರಮ ವಿಭವಶೋಭೆಯಿಂ ನಖಿಳಜನ ಮನಶ್ಚಮತ್ಕೃತಿಯನೊದವಿಪಮೇಯ ರಮಣೀಯಾಶ್ರಯಮಂ ಸ್ವಯಂವರ ಜನಾಶ್ರಯಮನತಿಬಹಳಮಂಗಳ ಪಟಹಮಾಳೆಗಳ್ ಮೊೞಗೆ ಪೊಕ್ಕು—

ಚಂ॥ ತರಳ ಕಿರೀಟಕಾಂತಿ ಸಭೆಗಂಗಜನಿಕ್ಕಿದ ಜಾಲದಂತಿರಾ ।
ವರಿಸೆ ಕಪೋಳಕಂಟಕಮೆ ನೂಕಿದವೋಲ್ ಪೊಱಮುಯ್ವನೋಲೆ ಸಾ ॥
ರ್ತರೆ ಮಣಿಮಾಲೆ ಬಾಲೆಗಿದಿರೇೞ್ವವೊಲಾದೆರ್ದೆಗಡ್ಡಮಾಗದೋ ।
ಸರಿಪವೊಲಾಗೆ ಪಾರ್ಥಿವಕುಳಂ ಮುರಿದೀಕ್ಷಿಸೆ ಸಂಭ್ರಮಾಕುಳಂ ॥ (೪೪)

ಕಂ॥ ಮಡದಿ ನಡೆದಳ್ ಮನಃಪ್ರಿಯ ।
ನೆಡೆವರಮವರವರ ನಯನರುಚಿ ತನುರುಚಿಯೊಳ್ ॥
ತೊಡರ್ದುಬರೆ ಪೊಸವೊನಲ್ಗಳ ।
ಗಡಣದಿನಪ್ಪತಿಯನೆಯ್ದುವಮರಾಪಗೆ ವೋಲ್ ॥ (೪೫)

ವ॥ ಅಂತು ನಡೆತಂದು—

ಕಂ॥ ಮಾಲೆಗೆ ಬೞಿವೞಿ ತನ್ನೃಪ ।
ಮಾಲೆಯ ಕಣ್ಮಲರ ಮಾಲೆಯೆನೆ ಮಾಲೆಯನಾ ॥
ಬಾಲೆ ಭವ ಬದ್ಧ ನಿಜರುಚಿ ।
ಮಾಲಾನ್ವಿತಮಮಿತತೇಜನೊಳ್ ಗಡಣಿಸಿದಳ್ ॥ (೪೬)

ವ॥ ಅಂತು ನಿಜನಿಜ ಭವಪ್ರರೂಢ ಬ್ರತಲತಿಕೆಗೆ ಸಾಫಲ್ಯಮುಂ ಸ್ವಯಂಪ್ರಭಾಭೀಷ್ಟ ರತ್ನಾಕರಕ್ಕೆ ರಾಕಾನಿಶಾಕರ ಸಂಗಮಮುಂ, ಪುರಸ್ಕೃತ ಸುತಾಗತಾರ್ಕಕೀರ್ತಿಭೂಪತಿ ಮಹೋತ್ಸವ ಪ್ರಾಸಾದ ಶಿಖರಕ್ಕೆ ಕಳಶಾರೋಪಣಮುಂ, ಅನುರೂಪಘಟನಾವಿಶಾರದ ವಿಧಿವಿನಿರ್ಮಾಣರಸ ಚಿತ್ರರಚನೆಗೆ ವಿಳೋಚನೋನ್ಮೀಳನಮುಂ, ಎನಿಸಿ ನಿಜಮಾತುಳಾತ್ಮಜಂಗೆ ಮಾಲೆಸೂಡಲೊಡಮನಂತರಂ ನೆರೆದ ರಾಜನುಂಡಳಂ ಪೂರ್ವಸಂಧ್ಯಾವಿಯುಕ್ತ ರಾಜಮಂಡಳದಂತೆ ಕಾಂತಿಗೆಟ್ಟಧೋಮುಖರಾಗಿ ಪೋಪುದುಂ ಪದ್ಮನಾಭಂ ಜಿನಾಭಿಷವಪೂಜಾ ಪುರಸ್ಸರಂ—

ಕಂ॥ ಎಸೆಯೆ ಕುಲೋಚಿತ ಪರಿಣಯ ।
ನಸಮ್ಮದಂ ಸುತೆಯನಿತ್ತು ಜಾಮಾತೃಗೆ ಸಂ ॥
ತಸದನ್ತನೆಯ್ದಿದಂ ಭಾ ।
ವಿಸೆ ಕೃತಕೃತ್ಯತೆ ಗೃಹಾಶ್ರಮಕ್ಕಿದುವೆ ವಲಂ ॥ (೪೭)

ನಿಜಸುತೆ ಸುತಾರೆಯಂ ಶ್ರೀ ।
ವಿಜಯಂಗೆ ಪರಸ್ಪರಾನುರಾಗಂ ಮಿಗೆ ಕೊ ॥
ಟ್ಟು ಜನಾರ್ದನನೊಲವಂ ಜ್ವಳ ।
ನಜಟ ಮಹಾರಾಜತನಯನುಂ ದ್ವಿಗುಣಿಸಿದಂ ॥ (೪೮)

ವ॥ ಅಂತು ಚಕ್ರವರ್ತಿಯುಮರ್ಕಕೀರ್ತಿಯುಮೋರೊರ್ವರ ತನೂಜೆಯರನೋರೊರ್ವರ ತನೂಭವರೊಳವರವರ ಮೆಚ್ಚಿದಿಚ್ಚೆಯೊಳೆ ಮದುವೆಮಾಡಿ ಪೂರ್ವಸಂಬಂಧಾನುಬಂಧಪ್ರೇಮವಿರ್ಮಡಿಸೆ ಮಂಗಳೋಚಿತ ಚತುರ್ಥೀಮಹೋತ್ಸವಾನಂತರಮಪತ್ಯದ್ವಯ ಪರಿತೋಷ ಪೂರ್ತಿಯಾದರ್ಕಕೀರ್ತಿಸಮುಚಿತಸದೈನ್ಯ ಪುನರುಕ್ತವಚನಶತದಿಂ ಸೌಂದರ್ಯ ಸೌಭಾಗ್ಯಾವತಾರೆಯಂ ಸುತಾರೆಯಂ ಸಮರ್ಪಿಸಿ ನಿರುಪಮಿತ ತೇಜನಪ್ಪಮಿತತೇಜನುಮಂ ತಾರಾಹಾರ ಪ್ರಭಾಪ್ರಸರಾಪಹಸಿತ ಜ್ಯೋತಿಃಪ್ರಭೆಯಪ್ಪ ಜ್ಯೋತಿಃಪ್ರಭೆಯುಮನೊಡಗೊಂಡು ಬೀಯಗನಂ ಬೀೞ್ಕೊಂಡು ವಿಭವವಿಭ್ರಾಜಿತ ರಜತಶಿಖರೀ ಶಿಖರಕ್ಕೆ ಪೋಗೆ—

ಕಂ॥ ಸುತೆಯನಗಲ್ದಳಲಂ ಸೊಸೆ ।
ಸುತಾರೆ ನಿಜಶೀಲ ಗುಣದೆ ಮಱೆಯಿಸುತಿರೆ ಹ ॥
ರ್ಷಿತೆಯಾದ ವಲ್ಲಭೆಯೊಳ ।
ಚ್ಯುತನತನುವಿನೋದ ಕೇಳಿಯಂ ಸಲಿಸುತ್ತುಂ ॥ (೪೯)

ಸುಖದೆ ಪಲಕಾಲಮವಿರತ ।
ನಿಖಿಳೇಂದ್ರಿಯ ವಿಷಯಸಾರ ಸೌಖ್ಯಾನುಭವೋ ॥
ನ್ಮುಖನರಸುಗೆಯ್ಯುತುಂ ದ್ಯುಚ ।
ರ ಖೇಚರೋರ್ವೀಚರಾದಿವರನೆಸೆದಿರ್ದಂ ॥ (೫೦)

ವ॥ ಅಂತು ಚತುರಶೀತಿ ಶತಸಹಸ್ರ ಸಂವತ್ಸರಂಗಳಂ ಲೀಲೆಯಿಂ ಕಳಿಪುವಿನ ಮೊರ್ಮೆ—

ಕಂ॥ ಪರಿದು ಪೊಡಗೆಡೆಯೆ ದಿವಸಾಂ।
ತರಘಂ ಕೆಳಗಿರ್ದುದೊಂದು ಮೇಗೊಗೆದುದಿದೊಂ॥
ದುರಥಾಂಗಮೆನಿಸಿದುವು ಮೆ।
ಯ್ಗರೆವಿನಮಂಡಳಮುಮೊಗೆವ ಶಶಿಮಂಡಳಮುಂ॥ (೫೧)

ವ॥ ತದನಂತರಂ—

ಕಂ॥ ಇದು ಹಿಮಕರ ವಿಕಸಿತ ಕುಮು।
ದದ ತಾರಕ ವಿಕಚ ಕುಂದಕುಸುಮೌಘದ ಬಂ॥
ಡುದಿರ್ದೊದವಿ ಭುವನಂ ತೀ।
ವಿದುವಾವಗಮೆನಿಸಿ ಬೆಳಗಿದುದು ಬೆಳ್ದಿಂಗಳ್॥ (೫೨)

ವ॥ ಅಂತು ಕಣ್ಗೊಳಿಸಿ ಬೆಳಪ ಬೆಳ್ದಿಂಗಳೊಳ್ ತಣ್ಗದಿರ ತಾಯ್ವನೆಯೆನೆ ಮನಂಗೊಳಿಸಿದ ಧವಳಿಸಿದ ಸೆಜ್ಜೆವನೆಯೊಳುಜ್ವಳಿಪ ದೀಪಿಕಾಕಳಾಪದೊಡನುದ್ದೀಪ್ತಮಾದ ಮದನಾನುರಾಗಮುದದಿನಾತ್ಮೀಯ ಪ್ರಾಣೇಶ್ವರಿಯ ಕೂಡೆ ನಿರವಧಿರತಿಸುಧಾಸ್ರವಂತಿಕಾಪೂರದೊಳ್ ನೀಡುಮೋಲಾಡಿ—

ಚಂ॥ ಮಿಸುಗುವುರೋಜಚಕ್ರ ಭುಜಪಾಶನಖಾಸಿಗಳಳ್ಕವಿಳ್ಕೆಯಾ।
ಗಿಸೆ ತನುವಂ ಕಚಾಕಚಿಮಯ ಸ್ಮರಸಂಗರದೊಳ್ ಬಟಿಲ್ದು ಮೂ॥
ರ್ಛಿಸಿದವೊಲಿರ್ದನಂದು ವನಜೇಕ್ಷಣನಾಕ್ಷಣಮೆಯ್ದೆ ನಿದ್ರೆಮು।
ದ್ರಿಸೆ ಮನಮಂ ಸ್ವಯಂಪ್ರಭೆಯ ಪೀನಪಯೋಧರಕುಂಭಕೂಟದೊಳ್॥ (೫೩)

ವ॥ ಅಂತು ನಿಜವಲ್ಲಭೆಯ ತೋಳ ತೊಡರೊಳ್ ತೊಡಂಕಿರ್ದ ಜನಾರ್ದನನಂ ದೀರ್ಘನಿದ್ರಾಂಗನಾದೂತಿಯಪ್ಪ ನಿದ್ರೆ ಪೊರ್ದಿ ನಿಜೋಚಿತ ದೂತೀಭಾವಚಾತುರ್ಯದಿನಾತ್ಮಾನುವರ್ತಿಯಂ ಮಾಳ್ಪುದುಂ ವಿಜಯ (ನುಂ ವಿವಿಧವಿನೋದ) ನೋದಿತ ನಿಶೀಥನಾತ್ಮೀಯ ಶಯ್ಯಾನಿಕೇತನದೊಳಿನಿಸು ಕಣ್ಗೆಯ್ದಿರ್ಪಿನಂ ತ್ರಿಯಾಮಾವಿರಾಮ ಸಮಯದೊಳ್—

ಚಂ॥ ಪಲತೆಱದಿಂ ಪ್ರಳಾಪಿಸುವರೋಧ ವಧೂಜನದುಚ್ಚರೋದನೋ।
ಚ್ಚಲರವಮುಂ ಪಲುಂಬಿ ಪರಿಚಾರಕನಾರಿಯರೋವದಾವಗಂ॥
ಮೊಲೆಗಳ ಮೇಲನಪ್ಪಳಿಪ ಸೊಪ್ಪಳುಮುರ್ವಿದ ವೀರ ಕಿಂಕರಾ।
ವಲಿಯ ಮೃತಪ್ರತಿಜ್ಞೆಯುಲಿಪುಂ ನೃಪಧಾಮದೊಳಾದುವೊರ್ಮೊದಲ್॥ (೫೪)

ವ॥ ಆಗಳ್—

ಕಂ॥ ಆದಿರೆ ತನು ಕದಡೆ ಮತಿ ಬಗೆ
ಬೆದಱಿ ರಮಾರಮಣನಗ್ರಜನ್ಮನ ಕಿವಿಗೆ ॥
ಯ್ದಿದುದು ಸಸಂಭ್ರಮ ಸಕರುಣ ।
ಸದೈನ್ಯ ಸೋದ್ವೇಗ ಸಭಯ ಹಾಹಾವಿರವಂ ॥ (೫೫)

ಭವನ ಮರಾಳಂ ನೂಪುರ ।
ರವಂಗಳಿರೆ ಮೊೞಗುಗೇಳ್ದವೊಲ್ ಸುಪ್ರಾತೋ ॥
ತ್ಸವ ಗೀತಿಗಳಿರೆ ಹಾಹಾ ।
ರವಮಂ ಬಳನಿನಿಸುಗೇಳ್ದು ತಳವೆಳಗಾದಂ ॥ (೫೬)

ವ ॥ ಆಗಳಿದೇನಿದೇನೆನುತ್ತುಮತಿಸಂಭ್ರಮದಿನೆೞ್ದಿದಿರೊಳಿರ್ದಪಡಿಯಱನಂ ತದ್ವೃತ್ತಕಮನಾರಯ್ದು ಬರಲಟ್ಟಿ ತಾನುಮತಿತ್ವರಿತಗತಿಯಿನರಮನೆಯಂ ಪೊಱಮಟ್ಟು ನಡೆಯುತ್ತುಮಲ್ಲಲ್ಲಿ ನೆರೆದು ಗುಜಿಗುಜಿಗೊಂಡು ಕೊರ್ಗುದಿಗೊಳ್ವ ಪುರಜನಮುಮಂ, ನೆರೆಪೊರೆಯ ಸಿರಿವಂತರ ಮನೆಗೆ ಪರಿಯಿಡಲ್ಕಡಹಡಿಸಿ ಮಿಡುಕುತಿರ್ಪ ಮಿಂಡರ ತಂಡಂಗಳುಮಂ, ಬೀದಿವೀದಿಗಳೊಳಾರುಮಂ ಸುೞಿಯಲೀಯದೆ ಬಗ್ಗಿಸುತ್ತೆ ಬಲಿದು ಕಾಪುಗೊಂಡು ಬಳಸಿದ ತಳಾಱನಾಯಕರುಮಂ, ತಂತಮ್ಮ ಮುಂದೆ ಸಂದಣಿಸಿ ಪಲ್ಲಣಿಸಲಪ್ಪಳಿಪ ರಾವುತರ್ವೆರಸು ಸನ್ನದ್ಧರಾದ ಸಾಹಣಿಗಳುಮಂ, ಸೂೞಿಂ ಸಾಲೆಗೆ ನಡೆಯದಿರ್ದೆಡೆಯೊಳೆ ಬಲಿದು ಕಾಲ್ಗಾಪಿನಣಿವೆರಸು ನಿಂದ ಜಾವದ ಮದಗಜಂಗಳುಮಂ, ಪಸಾಯಿತರಿದಿರ್ಗೆವಂದು ಬಿನ್ನವಿಸಿ ಬಿನ್ನವಿನ್ನನೋಸರಿಸಿ ಕಡೆಗಡೆಯೊಳೋಡಿವರ್ಪ ವಾರ್ತಾಪ್ರೇಷಿ ಪ್ರತೀಹಾರರುಮಂ, ಓಳಿಗೊಂಡು ಮುಂದಯ್ಸಿನಿಂದ ಬಲವಕ್ಕದೆಡವಕ್ಕದಂಗರಕ್ಕರ ನೆರವಿಯುಮನೀಕ್ಷಿಸುತ್ತುಮಂತರಂಗದೊಳ್ ಬಳೆವ ಬಹುವಿಧಾಮಂಗಳ ವಿಕಲ್ಪವಿಷಲತಾ ಫಳಂಗಳೆನಿಸಿ ರಾಜಾಂಗಣದೊಳತಿ ವಿಕಳಮಾಗೆ—

ಮ॥ ಬಸಿಱಂ ಮಾಣದೆ ಮೋದಿಕೊಳ್ವ ದೆಸೆಗಳ್ ಗೋಳೆಂಬಿನಂ ವಿಪ್ರಳಾ ।
ಪಿಸುವತ್ಯಾಕುಳದಿಂ ಪೊರಳ್ವ ಪುಡಿಯಂ ಬಾಯ್ವೂೞ್ವಿನಂ ಪೊಯ್ದುಕೊ ॥
ಳ್ವುಸಿರ್ದೋರಂತೆ ಪಲುಂಬಿ ಪಂಬಲಿಪ ದಾಸೀವೃಂದದಾಕ್ರಂದದೊಳ್ ।
ನಸುಗೇಳುತ್ತೆ ನಿಜಾನುಜನ್ಮನ ಗುಣ ಪ್ರಖ್ಯಾತನಾಮಂಗಳಂ ॥ (೫೭)

ಚಂ॥ ತೊದಳಿಸಿ ತಮ್ಮನೇಯೆನುತೆ ಬಾಯ್ನುಡಿ ಮಾಣ್ದರೆ ಮುಚ್ಚಿ ಕಿತ್ತುಸಿರ್ ।
ಕೆದಱುತುಮಾಱಿ ಮೆಯ್ಗರೆಯೆ ಕಣ್ಮಲರ್ಗಳ್ ಪೊಸನೀರ ಮಿಂಗಳಂ ॥
ದದನಿದಿರೇಱಿ ಕಂಪಿಸುತೆ ಮೆಯ್ಮರವಟ್ಟು ಕೞಲ್ದು ನೇಣಜಂ ।
ತ್ರದವೊಲಮರ್ಕೆಗೆಟ್ಟೞಲೆ ಲಾಂಗಲಿ ಮೂರ್ಛೆಗೆ ಸಂದು ನೀಡಱಿಂ ॥ (೫೮)

ಕಂ॥ ಪರಿಜನ ಸಂಭ್ರಮ ಕೃತಹಿಮ ।
ಕರಣದಿನೆಚ್ಚಱುತುಮಕಟದೇನಂ ನೆಗೞ್ದೆ ॥
ಪುರುಷೋತ್ತಮ ಮಱಯಿಸಿ ಪಿಡಿ ।
ದರನಿಱಿವುದೆ ಪೇೞನುತ್ತುಮೆಯ್ತರ್ಪನೆಗಂ ॥ (೫೯)

ಮ॥ ವಿಕಳಾಕ್ರೋಶ ವಿಶೀರ್ಣಕಂಠಕುಹರಾನ್ತಘೂರ್ಣಿತ ಮುಕ್ತಾಸ್ಯಮು ।
ಚ್ಚಕುಚಾಲಂಬನವೋದಹಾರ ಚರಣವ್ಯಾಸಕ್ತನೇತ್ರಂ ವಿಶೀ ।
ರ್ಣಕರಾಸ್ಫಾಳ ಪದೋಜ್ಝಿತ ತ್ರಿವಳಿ ಸೌಭಾಗ್ಯೋದರಂ ವ್ಯಗ್ರಕಂ ।
ಚುಕಿ ಸಂಧಾರಿತ ಗಾತ್ರಮಿರ್ದುದಿದಿರೊಳ್ ವಿಭ್ರಾಂತಮಂತಃಪುರಂ ॥ (೬೦)

ವ॥ ಅದಲ್ಲದೆಯುಮುಡಿಗೞಗೆ ಪೊಡವಿಯೊಳ್ ಪೊಡೆಮುಕೊಳ್ವ ರಭಸದೊಳ್ ಪೊರೆದ ಪುಡಿಯುಮೊಡನೊಡನೆ ಬೆಮರಬಿಂದುಗಳ್ ನಾಂದೆ ಮುಂದಯ್ಸುವಬಿಗ್ಗಸೆಱಗೞಱಿದು ಜೆತೆಗೊಂಡು ನಗೆಮೊಗಮನಾಗಳಾಗಳೆ ಕೞಂಗಿಸಿದ ಮಸಿಯ ಕುಂಚಿಗೆಳನಿಸಿ ನೊಸಲಂ ಮುಸುಂಕಿದಳಕವಲ್ಲರಿಗಳೊಳಂ ದೂವೆಯೊಳ್ ಬಿಬ್ಬಿ ಪಾವಿನಂದದಿಂ ಮಿಡುಮಿಡುಮಿಡುಂಕಿ ಪುಡಿಯೊಳ್ ಪೊರಳ್ವ ರಭಸದೊಳ್ ಪೊರೆದು ಪಕ್ಕಮೊಳ್ಕೆಗೊಂಡು ತರುಣಫಣಿರಮಣಿಯುಂ ಬಿಡದೆ ಪಿಡಿಮರುಳಿ ಬರೆಸೆೞೆವ ಸೋಗೆಯಂತೆ ಗೋಣ್ ತೆಗೆಯೆ ಬಿಟ್ಟು ಲಂಬಿಸುವ ಸೋರ್ಮುಡಿಯೊಳಂ, ಆಗಳಾಗಳುದಯಿಸುವ ವೈಧವ್ಯ ಸಂಧ್ಯಾಮುಖದೊಳವಱಿದುರೋರುಹ ರಥಾಂಗದಂಪತಿಯು ವದನದಿಂ ತಪ್ಪಿಬಿಬ್ಬಿ ಬಿಸಕಬಳಮಾಳೆಯೆನೆ ದೂಳಿಯೊಳ್ಬಿಲ್ವ ಮೇಲುದಿನ ದುಗುಲದ ಸೆಱಂಗಿನೊಳಂ, ಆತ್ಮಾಂತರಂಗದೊಳ್ ಪದುಳಮಿರ್ಪ ವಲ್ಲಭನಿಧಾನಮಂ ಬಂಚಿಸಿ ಕೃತಾಂತಸಾಧಕಂ ನೆಗಪಿ ಕೊಂಡುಯ್ಯೆ ಕಲ್ಲನೆ ಕನಲ್ದು ನೆಲದೊಳಪ್ಪಳಿಸಿಕೊಳ್ವ ಭುಜಭುಜಂಗಮಾಗಳಾನನದಿನುಚ್ಚಳಿಪ ಗರಳಶೀಕರಪ್ರಕರಮೆನೆ ಕರದಿನಲ್ಲುಗುವ ಭಗ್ನಕರವಳಯ ಸಂಕುಳಂಗಳೊಳಮೆಂತಾನುಮೀ ಮುಗ್ಧ ಬಾಳಕಿಯರಳವಿಗೊಳಗಾದವಿನ್ನಿವರನೆನ್ನಬಿನದಕ್ಕೆ ತಕ್ಕ ದೀನಮುಂ ಮಾಱ್ಪನೆಂಬ ಚಲದಿಂದ ಲಕ್ಷ್ಮಿಯೆಂಬ ಶಬರಿ ಬರೆ ತೆಗೆದು ಬಿಗಿದ ಬಲೆಯ ನೇಣ್ಗಳೆಂಬಂತಂತನ್ನಿರ್ಘೂರ್ಣಿತಾಪೂರ್ಣಮನ್ಯುವೇಗದೊಳ್ ಬೀಗಿಬಿರಿವಂತೆ ಗಗ್ಗರಿಪ ಕೊರಲೊಳುಬ್ಬರಿಪಿ ಪೊರೆದ ಸೆರೆಗಳೊಳಂ, ನಿಜಚಪಳಮುಗ್ಧಭಾವಮನೆ ಕೊಂಡಾಡಿ ಮುದ್ದುಮಾಡುಪೋಪವಂ ಕಳಿದೊಡೊಡನೞೆದ ವಿಳೋಚನ ವಿಳಾಸಲಕ್ಷ್ಮಿಗಾಸನ್ನ ಬಾಂಧವ ಪ್ರೀತಿಯುಂ ನೇತ್ರಪುತ್ರಿಕೆಗಳಿತ್ತ ಸದ್ಯಪ್ಪಿಳೋದಕ ಪ್ರಸರಮೆನೆ ಕುಚಕೂಟದೊಳ್ ಕೞೆವ ಕಜ್ಜಳ ಮಳೀಮಸಾನಸ್ಪ ಬಾಷ್ಪಜಳದೊಳಂ, ಮುನಿದಂತಿರೊರ್ವೋದಲೆ ಲೋಕಾಂತರಕ್ಕೆ ಪೋದ ನಿಜಜೀವಿತೇಶ್ವರನ ಬೞಿಸಲ್ವ ಬವಸೆಯಿಂ ಪೋಬೞಿಯನಱಿಪಿ ಪಲಿವಂತೆ ನಿಮಿರ್ವ ಬಿಸುಸುಯ್ಗಳೊಳಂ, ಅಳವಿಗೞಿದ ಕರುಣರಸ ತರಂಗಿಣಿಯ ಪೂರದೊಳ್ಮೂೞಿ ಮುೞುಗಾಡುವ ತತ್ತ್ವಯಂಪ್ರಭಾಪ್ರಭೃತಿ ಶುದ್ಧಾಂತ ಕಾಂತೆಯರ ನಡುವೆ ಚಂಪಕ ಪ್ರತತಿಗಳ ಮಧ್ಯದೊಳಿರ್ಪ ಷಟ್ಚರಣಸಂಚಯದಂತೆ ಕೆಡೆದಿರ್ದ ನಿಜಾನುಜನ್ಮನ ಕಳೇವರದ ಕಾಲಮೊದಲೊಳ್ ಮೊಱಿಗ್ಗ —

ಕಂ॥ ಹಾಹಾ ಮನುಕುಲ ಮಂಡನ ।
ಹಾಹಾ ಸುರಖಚರ ಮನುಜ ಚೂಡಾರತ್ನಾ ।
ಹಾಹಾ ಗುರುಜನ ವತ್ಸಳ ।
ಹಾಹಾ ಬುಧಬಂಧು ವಂದಿಕಲ್ಪಮಹೀಜಾ ॥ (೬೧)

ಕಂ॥ ಮನದೊಳ್ ನೀಂ ಮುಳಿದರನಱಿ।
ವನೊಸೆದರಂ ಕಾವನೆಂಬ ನಚ್ಚಿನ ಜವನುಂ॥
ನಿನಗಮುಸಿಯೇಱಿನವನಾ।
ದನೆ ತಮ್ಮನೆ ಪಿಡಿವ ಕೆಯ್ಯುದ್ವಂ ಪಾವಾಯ್ತೇ॥ (೬೨)

ಬಳನಂ ರಾಜ್ಯೋಚಿತ ಸುಖ।
ದೊಳಿಲ್ಲಿಯುಂ ಪಿಂದುಗೆಯ್ಯಲಱಿಯದನೆಯದೇಂ॥
ಗಳ ಪರಲೋಕದ ಸುಖಮು।
ಗ್ಗಳವೇಂ ಬಱಿಪಿಂದೆ ಪಿಂದುಗೆಯ್ವುದು ಗುಣಮೇ॥ (೬೩)

ವ॥ ಎಂದು ಮೊಣದೆ—

ಚಂ॥ ಗರುಡಿಯೊಳಾರೊಳಿನ್ನಳವಿ ಮಾಡುವೆನಾರೊಡನೇಱಿ ತೋಱುವೆಂ।
ಕರಿತುರಗಂಗಳಂ ನಗುವೆನಾರೊಡ[ನಾರೊಡ] ನಣ್ಣ ಮೆಚ್ಚಿದಂ॥
ತಿರೆ ಮನದಿಚ್ಚೆಯುಂ ನುಡಿವೆನಾರೊಡನಾಡುವೆನಕ್ಕಟಾ ಸಹೋ।
ದರನನಾಥನಂ ಬಿಸುಟು ಕೆಮ್ಮನೆ ತಮ್ಮನೆ ಪೋಗಲಕ್ಕುಮೇ॥ (೬೪)

ಮ॥ ಇದೆ ಗಂಧದ್ವಿರದೋತ್ಕರಂ ಕಳಿಪಿದಂ ಗಾಡಂ ಜವೋದ್ರಿಕ್ತಮಿಂ।
ತಿದೆ ವಾಜಿವ್ರಜಮಟ್ಟಿದಂ ನಿನಗೆ ಭೀತಂ ಮಾಗಧಂ ದೇವನೋ॥
ಬ್ಬುದು ಕೆಯ್ಕೊಳ್ವುದು ಭೀರುಗಳ್ಗಭಯಮಂ ನೀನೀಯದಿಂತಿರ್ಪುದೊ।
ಪ್ಪದೆಲೋ ಕೇಶವ ಪೇಱಿನುತ್ತೊದಱಿದಂ ಬಾಯ್ವಿಟ್ಟು ಸೀರಧ್ವಜಃ॥ (೬೫)

ಉ॥ ವಾರಿಯ ನಿನ್ನ ಲೆಂಕರದೆ ಸತ್ತ ಪರಕ್ಕಟ ಮಾಣಿಸೆಂ ಗಳಾ।
ಬಾರಿಸು ನಿನ್ನ ನಂಟರದೆ ಪೊಲ್ಲದುಗೆಯ್ದಪರಯ್ಯ ನಿನ್ನಕೆ॥
ಯ್ವಾರದ ಪೆಂಡಿರಂ ನಿಲಿಸು ಬಿಟ್ಟಪರಿಂತಿದೆ ನೋಡ ಜೀವನುಂ।
ಕಾರಣಮಿಲ್ಲದಂತುಸಿರದಿರ್ಪುದು ತಕ್ಕುದಿದಲ್ತು ತಮ್ಮನೇ॥ (೬೬)

ವ॥ ಎಂದು ಮತ್ತಂ ತನ್ನ ತಮ್ಮನ ಸ್ಥೈರಣೆಯ ಸಚ್ಛಿಯುಂ ಜವಲಿಯೊಲವಿನ ಗುಣಂಗಳಂ ನೆನೆನೆನೆದು ಬಗೆಬಗಿದೊಡಲೊಡೆವಂತಾಗೆ ನಿಲಲಾಱದೆ ನೆಱನನೆಱಿಯದಂತು ನೋಯಿಸುವ ತನ್ನ ನುಡಿಗೊಡನೊಡನೆ ಬಿರಿವ ಪರಿಜನಂಗಳಂ ಕಡಲ್ವರಿವ ಕಣ್ಣೀರ ಪೂರದೊಳ್ ಮುಳುಗಿದೆಮೆವೊಱೆಯುನಾನಲಾಱದಳವಱಿದ ಕಣ್ಗಳಿಂ ಕರುಣರಸಮನೆ ರೂಪುಗೊಳಿಸಿ ತೋಱುವಂತಿರತಿಕೃಪಣ ಭಾವದಿಂ ನೋಡಿ—

ಚಂ॥ ಕೆಳೆಯ ಪಸಾಯಿತರ್ಕಳಿರ ನಚ್ಚಿನ ಲೆಂಕರಿರಾ ನೆಗಳ್ತೆಯಾ।
ಳ್ಗಳಿರ ಮಹಾಧಿಪತ್ಯದ ಚಮೂಪರಿರಾ ಪೆಸರ್ವೆತ್ತ ನಿಮ್ಮನಿ॥
ಮ್ಮಳವಕಟೆತ್ತವೋಯ್ತು ಮನುವಂಶ ಮಹಾನಿಧಿ ಸೂಱೆವೋಗೆದು।
ರ್ವಳ ಮನರಾಗಿ ಮಿಳ್ಮಿಳನೆ ನೋಡುತುಮಿರ್ಪುದೆ ಲೋಗರಂದದಿಂ॥ (೬೭)

ಚಂ॥ ಪೊಗಳ್ದೊಡಮೀವ ಬೇಡಿದೊಡಮೀವ ಕನಲ್ದೊಡಮೀವ ಮೇಳದಿಂ ।
ತೆಗಲ್ದೊಡಮೀವ ನಿಮ್ಮರಸನೇಕೆ ಗಳಾ ಮುನಿದೆನ್ನುಮಂ ಬಿಡಲ್ ॥
ಬಗೆದನಿದಲ್ತೆ ನಿಮ್ಮ ಸಮಯಂ ತಿಳಿಪಿಂ ಮೊಗಮಿತ್ತು ನೋಡಿಪಿಂ ।
ನಗಿಪಮೆನುತ್ತೆ ಗೋಳಿಡಿಪಿದಂ ಮಿಗೆ ಮೇಳದ ವಂದಿವೃಂದಮಂ ॥ (೬೮)

ಮುಸಕದಿನೆಯ್ದಿ ಕೇಸರಿಯನಿಕ್ಕಿದ ತಕ್ಕನದಾರ್ಗೆ ಮೆಚ್ಚಿ ಬ ।
ಣ್ಣಿಪಿದಪಿರೆತ್ತಿ ಪರ್ವತಮನಾಂತಳವಂ ಪೊಗಟ್ದಿನ್ನದಾರನು ॥
ಬಿರ್ಪಿದಪಿರಶ್ವಕಂಠಮಥನಾಂಕಿತ ಸೂಕ್ತಿಯನಾರಮುಂತೆ ಕೇ ।
ಳಿಪಿದಪಿರಿನ್ನೆನುತ್ತಬಿಪಿದಂ ಪರಿಪಾಠಕ ಕೀರಜಾಳಮಂ ॥ (೬೯)

ವ॥ ಮತ್ತಮತಿ ವಿಕಳನಾಗಿ—

ಚಂ॥ ಸರಸತಿ ನಿನ್ನ ಭಾಗ್ಯವರೆಯಾದುದೆ ಹಾ! ನಿನತೋಲೆವಾಗ್ಯವೋ ।
ಸರಿಪಿದುದೇ ಧರಿತ್ರಿ! ಸಿರಿ ನಿನ್ನಯ ಮೆಯ್ಸಿರಿ ಸೂಱೆವೋಯ್ತೆ ಮೆ ॥
ಯ್ಗರೆದುದೆ ವೀರಲಕ್ಷ್ಮಿ ನಿನತೆಯ್ದೆತನಂ ಬಿದಿ ಮೀರೆದಪ್ಪಿ ನಿ ।
ಷ್ಕರುಣದೆ ನಿಮ್ಮ ಬಾಱಿಱ್ಮದಲನಕ್ಕಟ! ವಂಚಿಪಿ ಕೊಂಡುವೋದನೇ॥ (೭೦)

ಸೊಗಯಿಪ ನಿನ್ನ ನುಣ್ಚರದ ಗೀತಕೆ ಮೆಚ್ಚುವರಾರೊ ಭೃಂಗ ಕಂ ।
ತುಗೆ ಬರವೀವನಿನ್ನ ಬರವಿಂಗಿದಿರ್ವರ್ಪವರಾರೊ ಚೂತ ದೇ ॥
ಸೆಗೆ ನೆಲೆಯಾದ ನಿನ್ನಯ ಮುಗುಳ್ನಗೆಯಂ ಬಗೆಗೊಳ್ವರಾರೊ ಮ ।
ಲ್ಲಿಗೆ ಮಱಪಿಕ್ಕಿ ನಿಮ್ಮರಸನಂ ಜವನೊಯ್ದುದನಿತ್ತ ಕೇಳಿರೇ ॥ (೭೧)

ವ॥ ಎಂದು ಪಲತೆಱದೆ ಬಱಿದೆ ಬಾಯಱಿದು ಕಳವಳದಿನವರವರ್ಗೆ ಮಱುಗಿ ಪುಯ್ಯಲ್ಚಿಯುಂ, ಬಯಲ್ಗೆ ಬಾಯ್ವಿಟ್ಟು ಪಂಬಲಿಪಿಯುಂ, ತಣ್ಬೊಲದ ಕೇಳೀವನದ ತರುಲತಾವಿಹಂಗಮಂಗಳ್ಗೆ ಪೇೞ್ದು ಪಳವಿಪಿಯುಂ ಅೞ್ವ ಬಳಭದ್ರನಂ ಪ್ರಗಲ್ಭಪುರಜನ ಪುರೋಹಿತ ಪ್ರಧಾನರೆಯ್ದೆವಂದು ಪಲತೆಱದಿಂ ಸಂಸಾರದಸಾರತೆಯುಮನನಿತ್ಯತೆಯುಮಂ ಪ್ರತಿಬೋಧಿಸುವ ಬಗೆಯಿನಿಂತೆಂದರ್—

ಕಂ॥ ದಿಟದಿಂ ಮುಂ ನಿಮ್ಮನ್ನರ್ಗಿಂ ।
ತುಟಾಗಲಾಗದು ದಲಾದೊಡಂ ಹತವಿಧಿದು ॥
ರ್ಘಟಿತ ಘಟನಾ ಘಟಿತನತಿ ।
ಕುಟಿಳತರಂ ಕಡೆಯೊಳಾರ್ಗಮಿನ್ನನೆ ಜಗದೊಳ್ ॥ (೭೨)

ವ॥ ಮತ್ತಂ—

ಕಂ॥ ತಮಗಿಲ್ಲದೊಡಮೆಯಂ ಮು ।
ನ್ನಮೆ ಬಿಡುವ ವಿವೇಕಮಿಲ್ಲದೊಡಮದು ನೀಡುಂ ॥
ತಮಗಲ್ಲದೆ ಪೋದಿಂಬೞಿ ।
ಕಮಾದೊಡಂ ಬಿಟ್ಟು ಕಾಣವೇೞ್ಪುದು ಚದುರಂ ॥ (೭೩)

ಕಂ॥ ಭಾವಿಸೆ ಗತಿ ನಾಲ್ಕಱೊಳಂ ।
ಸಾವುದು ದಿಟಮೆಂದು ಸಾವು ಮುಟ್ಟಿದೊಡಾರುಂ ॥
ಕಾವವರಿಲ್ಲೆಂದೊರ್ವನೆ ।
ಜೀವಂ ಸಾವೆಡೆಗೆ ನಂಟರಿಲ್ಲೆಂದಱಿ ನೀಂ ॥ (೭೪)

ಪೇಱವಱೊಳಾದುಬ್ಬೆಗಮಂ ।
ಮಱಯಿಸುವುದು ನಿದ್ರೆ ದೇಹಿಂಗದು ನಿನ್ನನುಜಂ ॥
ಗಱಿಯೇಱಾಯ್ತೆನೆ ನಂಬುವ ।
ತೆಱನಾವುದೊ ಹಿತಮಿದೆಂದು ಸಂಸೃತಿ ಸುಖಮಂ ॥ (೭೫

ಕೀನಾಶಂ ಮುಳಿದ ಬೞಿ ।
ಕ್ಕೀನಾಶಂ ತಪ್ಪದಾರ್ಗಮೆಂದಱಿವುವವೋ ॥
ಲೀನಮ್ಮರಸನ ವಿಷಯ ವಿ ।
ಳೀನಂ ತಾನಾದನೇಕೆ ನಮಗೀಶೋಕಂ ॥ (೭೬)

ಆದಱಿಂದಧ್ರುವಮಶರಣ ।
ಮಿದು ದುಃಖಮಯಂ ವಿಚಾರಿಪೊಡೆ ಸಂಸೃತಿಯೆಂ ॥
ಬುದುಮಂ ಧರ್ಮಮೆ ಸುಖಕರ ।
ಮಿದೆ ಶರಣಂ ಜೀವಿಗೆಂಬುದುಮನೇನಱಿಯೈ ॥ (೭೭)

ವ॥ ಎಂದು ಮತ್ತಂ ಪೇಱವುಮುಚಿತ ನಯನಿದರ್ಶನಂಗಳಂ ತಿಳಿಪಿ ನಿರ್ಮಳಮಾ ಽಂತರಂಗದುಪಶಾಂತಿಯಿಂದಂ—

ಕಂ॥ ಘನಮೋಹಪಂಕಮಂ ತೊಳೆ ।
ದು ನಿರರ್ಗಳ ಶೋಕಶಿಖಿಯನಾಱಿಸಿ ಕಣ್ಣೀ ॥
ರನಿತುಂ ಬತ್ತಿದುವೆನೆ ಲೋ ।
ಚನಮೂಗಳೆ ಬಾಷ್ಪರಹಿತಮಾದುವು ಬಳನಾ ॥ (೭೮)

ವ॥ ಮತ್ತಮಂತರಂಗದಿನಡಂಗುವ ವಿಷಯರತಿಯೊಡನೆ ಮೆಯ್ಬಿಸುಪಡಂಗೆಯುಂ, ಪೊಡರದುಡುಗುವ ಲೋಚನದೊಡನೆ ನಿಡುಸುಯ್ನುಡುಗೆಯುಂ, ಕ್ರಮಕ್ರಮದಿನುಪಯಿಪ ವಿರಕ್ತಿಯೊಡನಾಕಾರಸೌಷ್ಠವಮುದಯಿಸೆಯುಂ ಬಳನುದಂಚಿತ ವಿಶೋಧಿ ಬಳನಾಗೆ—

ಕಂ॥ ಹಿತ ಬೋಧಾಕರಮುಮಳೀ ।
ಕೃತ ಹೃತ್ಸರದೊಳ್ ದಯಾದಿ ಗುಣಮಾಳಾಧಿ ॥
ಷ್ಠಿತಮೊಗೆದುದು ವಿರತಿ ಶ್ರೀ ।
ಗೆ ತಾನೆ ನೆಲೆಯಾಗ್ಗಿ ವಿಶದ ಸಮ್ಯಕ್ತ್ವಬ್ಜಂ ॥ (೭೯)

ವ॥ ಅಂತು ಸಮನಿಸಿದ ಸಮ್ಯಕ್ತ್ವರತ್ನಪ್ರದೀಪದಿಂ ಬಹುಳ ಮೋಹತಿಮಿರಂ ಪಱೆಯೆ ಪಿರಿದುಂ ವಿಶದಮಾದ ನಿಜದೃಷ್ಟಿಯಿನವಗತಸ್ವಪರವಸ್ತುವಾಸ್ತವನಾಗಿ—

ಕಂ॥ ತಾನೆ ವಿಕಳಾರ್ತ್ಥ ಬಂಧುವಿ ।
ತಾನಮನುಚಿತೋಕ್ತಿಯಿಂದೆ ಸಂತಯ್ಸುತುಮಾ ।
ತ್ಮಾನುಜ ತನುಸಂಸ್ಕಾರ ವಿ ।
ಧಾನಮುಮಂ ತೀರ್ಚಿ ಮುಕ್ತಿವನಿತೋತ್ಕಂಠಂ ॥ (೮೦)

ವ॥ ಸಮಸ್ತ ಪರಿಜನ ಪುರಜನ ಬಂಧುಜನಂಗಳ ಸನ್ನಿಧಾನದೊಳ್ ವಿಗತಶೋಕನಂ ಮಾಡಿ ಕೋಕನಂ ಮೆಲ್ಲನೊಡಂಬಡಿಸಿ—

ಉ॥ ಶ್ರೀವಿಜಯಂಗೆ ಸಂಗತ ಪರಾಕ್ರಮಶಾಳಿಗೆ ತತ್ಸ್ವಯಂಪ್ರಭಾ ।
ದೇವಿಯ ನಂದನಂಗೆ ವಿನಯಾದಿ ಲಸದ್ಗುಣ ಭೂಷಣಂಗೆ ಸಂ ॥
ದಾವಿಜಯಂ ಸ್ವಕೀಯ ರಮಣೀಯತರಾಖಿಳ ರಾಜ್ಯಭಾರಮಂ ।
ಪಾವನಚಿತ್ತನಿತ್ತು ತಳೆದಂ ಜಸಮಂ ವಸುಧೈಕಬಾಂಧವಂ ॥ (೮೧)

ಗದ್ಯಂ

ಇದು ನಿಖಿಳ ಭುವನಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನಸಮಾನಿತ
ಶ್ರೀ ನಂದಿಯೋಗೀಂದ್ರ ಪ್ರಸಾದವಾಚಾಮಹಿತ ಕೇಶವರಾಜಾನಂದ
ನಂದನ ವಾಣೀವಲ್ಲಭ ವಿಸ್ತಾರಿತಮಸ್ಸ ವಸುಧೈಕಬಾಂಧವ
ಶ್ರೀ ವರ್ಧಮಾನ ಪುರಾಣದೊಳ್ ಸ್ವಯಂವರ
ಬಳಾಚ್ಯುತ ವಿಯೋಗವರ್ಣನಂ
ನ ವ ಮಾ ಶ್ವಾ ಸ ೦.

ದಶಮಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಶ್ರೀಕಾಂತಂ ಕಟಿಯಲೊಡಂ ।
ಭೂಕಾಂತೆಯುನಾತನಾತ್ಮಜಂಗೊಪ್ಪಿಸಿ ನಿ ॥
ರ್ವ್ಯಾಕುಳನೇಂ ನಲಿದನೊ ಬುಧ ।
ಲೋಕನುತಂ ಪಂಚಪರಮಗುರುಪದವಿನತಂ ॥ (೧)

ವ॥ ಅನಂತರಂ ಸೀರಪಾಣಿ ಭೂರಿವೈರಾಗ್ಯಧಾರಿ ಧಾರಿಣೀಪತಿಸಹಸ್ರಂಬೆರಸು ಪೋಗಿ ಪಿಹಿತಾಶ್ರವ ಯತೀಶ್ವರನಂ ತ್ರಿಪ್ರದಕ್ಷಿಣಂಗೆಯ್ದು ಭಕ್ತಿಭಾರಾವನತಮಸ್ತಕನತಿಪ್ರಶಸ್ತ ಜಿನದೀಕ್ಷೆಯಂ ತಳೆದು—

ಕಂ॥ ಬಿಡೆ ಬಹಿರಂತರ್ಗ್ರಂಥದ ।
ತೊಡರ್ವು ರತ್ನತ್ರಯ ಪ್ರಗುಣ ಸೋಪಾನಂ ॥
ಬಿಡಿದಷ್ಟಮ ಭೂಮಿತಳ ।
ಕ್ಕಡರ್ದಂ ಲಘುಕರ್ಮಿಗೂರ್ಧ್ವಗತಿ ದುರ್ಲಭಮೇ ॥ (೨)

ಘನಮಿಥ್ಯಾತ್ವೋದಯ ಯೋ ।
ಧನೋದಿತಂ ಧರ್ಮಗುಣ ಪರಿಚ್ಯುತಮಖಿಳಾ ॥
ವನಿಪಟಳಮನುರ್ಚಿ ಜನಾ ।
ರ್ದನ ಜಿಹ್ಮಗಮೆಯ್ದಿದತ್ತು ಸಪ್ತಮಧರೆಯಂ ॥ (೩)

ವ॥ ಅಂತಾತ್ರಿಪೃಷ್ಠನುಂ ತೀವ್ರತರಮೋಹನೀಯ ನಿರ್ಭರಪ್ರೇರಣೆಯಿನೇೞನೆಯ ನರಕಬಿಲದೊಳ್ ಬಿದ್ದು ನಾನಾವಿಧ ಸುದುಸ್ಸಹ ಮಹಾದುಃಖಮಂ ಮೂವತ್ತುಮೂಱು ಸಾಗರೋಪಮಂಬರಮನುಭವಿಸಿ ಜೀವಿತಾವಸಾನದೊಳೀ ಭರತಭೂತಳದ ಸಿಂಹಗಿರಿಕಂದರದೊಳ್—

ಕಂ॥ ಮೊದಲನುಭಾಗಮನಾಶ್ರಯಿ ।
ಸಿದ ಮೊದಲ ಕಷಾಯದಧಿಕ ರಂಜನೆಯೊಳ್ ಪ ॥
ತ್ತಿದ ಕೃಷ್ಣಲೇಶ್ಯೆಯಿಂ ಬಂ ।
ದುದಯಿಸಿದಂ ತಾಂ ಮಹೋಗ್ರ ಸಿಂಹಾಕೃತಿಯಿಂ ॥ (೪)

ಅದು ಹಿಂಸಾನಂದಮೆ ಪೆ।
ತ್ತುದು ಮೂರ್ತಿಯನೆನಿಸಿ ರೌದ್ರತರಮಾಯ್ತೇಪೇ ॥
ೞ್ವುದೊ ನೆನೆದ ಮನಕ್ಕಂ ನೋ।
ಡಿದ ದಿಟ್ಟಿಗಮತಿಭಯಂಕರಂ ಮೃಗರಾಜಂ ॥ (೫)

ವ॥ ಮತ್ತಮದು ಮನದ ಜಿನದಕ್ಕೆ ವನಮೃಗಮನುಗಿಬಗಿಮಾಡಿ ಬಿಡುವೆಡೆಯೊಳೊಡನೊಡನೆ ಪೊರೆದು ಮುಸುಕಿದ ಪೊಸನೆತ್ತರ ಮುಸುಱಿಯಿಂ ಪೊಳೆವ ಪೋೞಿಯದೊಱಿಯೊಳ್ ಕಿಱಿಪಿದ ಕೃತಾಂತನಂಕುಶಮಿದೆನಿಸಿಯುಂ, ಕೆಮ್ಮುಗಿಲ ತೆಳ್ವೊರೆಯ ಮಱಿಯೊಳ್ ಮಿಱುಪ ಸಂಜೆವೆಱಿಯ ಮುಱುಕಮಂ ಮೆಱಿದುಮತಿಕುಟಿಳ ಕಿಂಶುಕ ಮುಕುಳಮಂಜರಿಯನೆ ಜನಿಯಿಸಿ ರಂಜಿಸುವ ನಿಶಿತಖರನ ಖರಮಂಜರಿಗಳೊಳಂ, ಮದ ಕಳಭ ಕಪೋಳವಿದಳನದೊಳ್ ಪುದಿದ ಮದಪಂಕ ಪರಿಮಳಮನೆಳಸಿ ಬಿರುದಿನ ಕರಿಯ ದಂಡೆಯೆನೆ ಮಂಡಳಿಸಿದಳಿಗಳಿಂ ನೀಲಮಯ ಕಿಂಕಿಣಿಯ ಸಂಕುಳಮನಾಂತುವೆನಿಸಿ ಸಕಳಮೃಗರಾಜ ರಾಜ್ಯಲಕ್ಷ್ಮೀವಿಳಾಸಭವನಮೂಲಸ್ತಂಭಮೆಂಬಿನೆಗಃಂಬಾಗಿ ಬೀರ ಸಿರಿಯ ಸೆಳೆಮಂಚದ ಪದಂಗಳೆನಿಸಿ ಬೆಡಂಗನಂಗೀಕರಿಸಿ ಸುರುಚಿರಮಾದ ಪದಂಗಳೊಳಂ, ಸೆಱಿಗೊಂಡು ಕಾವ ಪೆರ್ವಾವೆನಿಸಿ ಮೇಲೆ ಲಾಂಗೂಲಮಾವರಿಸೆ ವೀರಲಕ್ಷ್ಮಿಯ ಕಡಾರದೊಳೋರನ್ನಮಾಗಿ ಸಕಳ ಸತ್ವಸಂಹಾರ ಭೈರವನ ವೀರಪಾನದಾಸವಘಟಂಗಳೆನಿಸಿ ಬಹುವಿಧ ವ್ಯಾಧನೊಡ್ಡಣದ ಸಂಕದಡ್ಡಣಮಿವೆಂಬಿನೆಗಮೊಡ್ಡಿ ಕಡೆದಂತಿರೆಡ್ಡಮಾದ ಪೃಥುಳ ನಿಸ್ತಲ ಕಟೀಮಂಡಳಂಗಳೊಳಂ, ಅಖಿಳ ಮೃಗಪಟಳಮಂ ಪಿಡಿಯಲೊಡರಿಸಿ ಸಮೆದ ಶಮನ ಶಬರನ ಬೀಸುಂಬಲೆಯ ಪಾಸಮೆನಿಸಿ ಬಳ್ವಳಿಪ ಬಹುಳ ಹಿಂಸಾವಿಷಮ ವಿಷವಲ್ಲಿಯ ಬಳೆದ ಬಾೞ್ಗುಡಿಯೆನೆ ಬೆಡಂಗುವಡೆದ ಲೋಳ ಲಾಂಗೂಲಲತೆಯೊಳಂ ರೌದ್ರರಸ ಸರಸಿಯೊಳ್ ಪೊಳೆವ ಗುರುಕಟೀಕಂಜಕಂದಳದಿನುದಯಿಸಿದಸಿಯ ಬಿಸದಂಡಮೆನಿಸಿ ಬೀರಸಿರಿಯ ಸಿರಿಗನ್ನಡಿಯ ಪಿಡಿಗೆ ಪಡಿಯಾದ ಪಿಡಿಯ ನಡುವಿನೊಳಂ ಜಂಗಮನಗಂಗಳೆನಿಸುವ ಮತಂಗಜಂಗಳ್ಗೆ ಬಱಸಿಡಿಲ ತೆಱದಿನೆಱಗಿ ಪೊಡೆವ ಕಡುಪಿನೊಳೊಡೆದ ಬಿದುಗಳಿಂದೊಗೆದ ಮುತ್ತುಗಳ್ವೆರಸು ಪತ್ತಿದ ನೆತ್ತರಿಂ ಪನಿಪುಲ್ವೊರೆದಶೋಕ ಕಿಸಲಯಂಗಳೆನಿಸಿ ಕೆಂಪಡರ್ದ ಕೇಸರಂಗಳೊಳಂ, ಸುರತರಂಗಿಣಿಯ ತೆರೆಗಳೆಡೆಗಿಱಿದು ತೊಡರ್ದ ಮೃಡನ ಕೆಂಜೆಡೆಯ ಜೂಟಮಿದಱೊಡನೆ ಪಡಿಯಕ್ಕುಮೆನೆ ಮನಂಗೊಳಿಸುವುತ್ತುಂಗ ಕಂಠಕಂದಳಿಯೊಳಂ, ಅಖಿಳ ಮೃಗಸಮುದಯಾಮಿಷಾಹುತಿಯಸನವರತಂ ಬೇಳ್ಪ ಕಾಳಯಜನ ಜ್ವಳನಕುಂಡಮೆನೆ ತೆಱೆದ ಬಾಯೊಳಂ,ಅಂತರ್ಜ್ವಲತ್ಕ್ರೋಧ ಹುತವಹನ ನಾಲಗೆಯೆನಿಸಿ ನಿಮಿರ್ದು ಮಿಳ್ಳಿಸುವ ನಾಲಗೆಯೊಳಂ ಪೇರಾನೆವೆಟ್ಟುಗಳ ನೆತ್ತಿಯ ಮುತ್ತುಗಣೆಯನಗುೞ್ವ ವಜ್ರದ ಗುದ್ದಲಿಗಳೆನಿಸಿ ವನಮೃಗಂಗಳೊಡಲನೊಡೆಯೆ ಭೇದಿಸುವ ವಿಷಕಂಠಕಂಗಳೆಂಬಿನಮುಳುಂಬಮಾದ ದಂಷ್ಟ್ರಾಂಕುರಂಗಳೊಳಂ, ಅಳವಿಗೞಿವಿನಮೋರಂತೆ ಪೀರ್ದ ವನಚರಪ್ರಾಣಿಗಳ ಶೋಣಿತದ ಪೊನಲೆ ತನುವನಾವಗಂ ತೀವಿ ಪೊಱಪೊಣ್ಮಿದಪುದೆನಿಪ ಕಡುಗೆಂಪನಪ್ಪುಗೆಯ್ದು ವಿಪುಳ ನಾಸಿಕಾನಾಳಮೆಂಬ ತಿದಿಯಗಾಳಿ ಕಿಟ್ಟ ಕಿಡಿಸಿಡಿಯೆ ಕಡುಗಾಯ್ದು ಕೋಪಕಾಳಾಯಸದ ಬಟ್ಟುಗಳಿ

ವೆನಿಸಿ ಕೆಂಗದಿರನುಗುಬ್ಬ ಕಣ್ಗಳೊಳಮಗ್ಗಳಿಸಿದವಿರತ ಕ್ರೂರವೃತ್ತಿಯಿಂ ಮೂರ್ತಿವೆತ್ತ ಮಿಬ್ಬ್ತವೆನೆ ಭಯಂಕರಮಾದುದುಂತುಮಲ್ಲದೆಯುಂ—

ಕಂ॥ ಜವನೆ ಮೃಗವೈರಿಯಾದಂ।
ತೆವೊಲೆಱಗುವ ಸಿಡಿಲೆ ಸಿಂಗಮಾದಂತೆವೊಲೆ॥
ತ್ತುವ ಮಿಬ್ಬು ವೆ ಹರಿಯಾದಂ।
ತೆವೊಲಾಂತುದು ವಿವಿಧವಧವಿನೋದಾದ್ಭುತಮಂ॥ (೬)

ಚಂ॥ ಮೃಗವುಗುರೇಱಿನಿಂ ಕೆದಱಿ ಕೆಂಪಿನೊಳೊಂದಿದ ಬೆನ್ನಬಾರ ಮಾ।
ಲೆಗಳೊಳೆ ಕಾನನಂ ಜವನೆ ಬಾಣಸದಂತಿರೆ ಕುಂಭಕೂಟದಿಂ॥
ದೊಗೆದುಗುತರ್ಪ ಮುತ್ತುಗಳ ಕಾಳ ಘನೋಪಳ ವರ್ಷಮಂ ಧರಿ।
ತ್ರಿಗೆ ಕುಡೆ ಕೊಲ್ವುದಿಂತು ಬಿನದಕ್ಕೆ ಮದಾಂಧ ಕರೀಂದ್ರಯೂಥಮಂ॥ (೭)

ಉ॥ ಅಂತು ನಿಸರ್ಗ ನಿರ್ದಯ ಭಯಂಕರವೃತ್ತಿಯಿನಾಮೃಗೇಂದ್ರನ।
ಶ್ರಾಂತವಧೋನ್ಮುಖಂ ಕಬಿಳಿಪಿ ತನ್ನ ಚಿರಾಯುವನುಗ್ರದುಷ್ಕೃತಾ।
ಕ್ರಾಂತನನಂತರಂ ಪ್ರಥಮನಾರಕ ಭೂಮಿಯನೆಯ್ದಿ ದುಃಖಪಂ॥
ಕಾಂತರದೊಳ್ ಪೊದಬಿಳ್ದು ಳಱುತುಂ ತವೆ ತನ್ನಿಯತಾಯುತಾರ್ಣವಂ॥ (೮)

ಕಂ॥ ನೆಗಟ್ದೀ ಭರತಾವನಿಯೊಳ್।
ಸೊಗಯಿಪ ಸಿಂಧುಸ್ರವಂತಿಕಾತಟದ ವರಾ॥
ಹಗಿರೀಂದ್ರದ ಕಂದರದೊಳ್।
ಮಗುಟ್ದಂ ಮೃಗರಾಜರೂಪದಿಂದುದಯಿಸಿದಂ॥ (೯)

ದೊರೆವೆತ್ತಾ ಮೃಗರಾಜನೆ।
ವರ ರಾಜ್ಯಶ್ರೀಗೆ ಸಿಬಿರಮಾದತ್ತಂತಾ॥
ಗಿರಿ ಸತ್ಕುಂಜರ ಸದ್ವಾ।
ಜಿರಾಜಿತಂ ರುಚಿರ ರಾಜವಾಸೋಪಚಿತಂ॥ (೧೦)

ಸ್ರ॥ ಮಾರಾಮಾರಾಮ ರಂಗತ್ಕಮಳ ಕಮಳವನ್ಮಾನ ಸನ್ಮಾನಸಂಪ।
ತ್ಸಾರಂ ಸಾರಂಗಯೋಷಿತ್ಸುರತಸುರತರೋನ್ಮಾನಭೋಗಂ ನಭೋಗಂ॥
ದಾರೂದಾರೂಢಮಸ್ತೋಕದಳಕದಳ ಗುಂಜಾಕರಂ ಜಾಕರಂ ಮಂ।
ದಾರೋದಾರೋರುಕುಂಜಂ ವಿಷಮವಿಷಮಹಾಪನ್ನಗೇಂದ್ರಂ ನಗೇಂದ್ರಂ॥ ()

ವ॥ ಮತ್ತಮದು ಭೋಗಭೂಮಿತಳದಂತೆ ಸುಖನಿಧಾನಮುಂ, ಕೃಷ್ಣಪಕ್ಷದಂತೆ ಹಿಮಗುಹಾನಿವಾಸಮುಂ, ಸುಭಗಗಣಿಕಾಜನದಂತೆ ಬಹು ವಿಟಪಾಳಿತರೂಪಚಿತಮುಂ, ಸಂಧ್ಯಾಪ್ರದೀಪದಂತೆ ಕಪಿಶತಾರೂಢಮುಂ, ಕ್ರೀಡಾಕ್ರಾಂತ ಕಾಂತಾಜನದಂತೆ ಚಳದಳಕಾನನ ಕಮನೀಯಮುಂ, ಅಮರ್ತ್ಯಭವನದಂತೆ ಸುಪರ್ವವಂಶ ಪ್ರಭವ

ಮುಂ, ವನಾಶ್ರಿತ ಪರಿವ್ರಾಜಕನಂತೆ ಬಹುಕಂದರ ಸಾನುಭೂತಿಯುಂ, ಕುಪಿತ ಕಾಮಿನೀ ಪ್ರಸಾದಪಟು ಶಠನಾಯಕನಂತೆ ವಿವಿಧಕುಶಪಥಾಕೀರ್ಣಮುಂ, ಮತ್ತಂ ವನಾಂತರುದಿತ ಬ್ರಾಹ್ಮೀ ಪ್ರತೆತಿಯಾಗಿಯುಂ ಮಹೋತ್ಸವಾಶ್ರಿತಮುಂ, ಸಿಂಧುರಹಿತಮಾಗಿಯುಂ ಗಿರಿನದೀಸಹಸ್ರ ಶೋಭಿತಮುಂ, ಸನಾಗಕಾಂತಮಾಗಿಯುಮಸನಾಗಕಾಂತಮುಂ, ವನ್ಯಾಧಾರಮಾಗಿಯುಮವನ್ಯಾಧಾರಮುಂ, ವಟಾಕೀರ್ಣಮಾಗಿಯುಮವಟಾಕೀರ್ಣಮುಂ, ಎನಿಸಿ ಬಹುವಿಧಾಶ್ಚರ್ಯ ಶೋಭೆಯಂ ತಳೆದು ರಂಜಿಸುತಿರ್ಪಲ್ಲಿ—

ಕಂ॥ ಘನವಿಟಪ ಕೋಟಿಯೊಳ್ ಸಿ ।
ಲ್ಕಿ ನಿಂದ ತಾರಗೆಗಳೆಲರಿನುದಿರ್ದಪುವಿಳಿಗೆಂ ॥
ಬಿನೆಗಂ ಪರಸ್ಪರಾಸ್ಫಾ ।
ಳನ ಭರದಿಂ ಬಿರಿದ ಬಿದಿರ ಮುತ್ತುಗಳುಗುಗುಂ ॥ (೧೨)

ಸಲೆ ತಲೆಗೊಟ್ಟೋಡುವ ಕೋ ।
ಟಲೆಗಾಱದೆ ತದ್ಗಿರೀಂದ್ರಮಂ ಸಾರ್ದು ತಮಂ ॥
ಮುಲೆವುದು ಹರಿನೀಳಮಣಿ ।
ಚ್ಛಲದಿಂ ರವಿಗಿಂತುಟಧಿಕನಾಶ್ರಯದ ಬಲಂ ॥ (೧೩)

ನವಮಣಿ ಮರೀಚಿಮಂಜರಿ ।
ಕವಿದು ಪೊನಲ್ವರಿದುದೆಂಬಿನಂ ಸಂಭೃತ ರ ॥
ತ್ನವಿಚಿತ್ರ ಸಾನುತಳದೊಳ್ ।
ಕವಲ್ತು ಜಲಜಲಿಸಿ ಪರಿವ ಬರಿವೊನಲೆಸೆಗುಂ ॥ (೧೪)

ಮ॥ಸ್ರ॥ ರವಿರೋಚೀರುದ್ಧರೋದೋಜ್ಜ್ವಳಮವಿರಳತಾರ್ಕ್ಯೋಪಳಾರ್ಚಿಃಕಣೋಷ್ಣೀ ।
ಭವದಂಭಃಕ್ರೀಡೆಯಿಂ ಮೆಯ್ವೆರೆದ ಮದದತೀನೋಡೆ ನೀಡುಂ ಮನಂಮೆ॥
ಚ್ಚುವಿನಂ ಪೊಕ್ಕಾಡಿ ಕಾಡಾನೆಗಳಿರೆ ಸತತಂ ರಂಜಿಸುತ್ತಿರ್ಪುದಶ್ರಾಂ ।
ತ ವಿನಿರ್ಯದ್ದಾನ ಗಂಧೋದ್ಗಿರಣರಿಣದೀ ಜಾಳಮುತ್ತಾಳಕೂಳಂ ॥ (೧೫)

ಕಂ॥ ಬಿಡದುದಯಾಸ್ತಮಯಂಗಳೊ ।
ಳಡರ್ವಿಟಿಿವಿನಕಿರಣಮದಱ ಗಿಡುಮರದೆಡೆಯೊಳ್ ॥
ತೊಡರ್ದು ಪಱಿದಿಟಿದುವೆಂಬಿನ ।
ಮೊಡರಿಸುವುವು ಬಗೆಗೆ ಮಾಣಿಕದ ಕೆಂಗದಿರ್ಗಳ್ ॥ (೧೬)

ಇಸೆ ಹರಿಣಶಶಮವುಂಟೆಂ ।
ಬ ಸಂದೆಗಕ್ಕಾಕುಭೃತ್ತಟದ ಶಬರರ್ ತೆ ॥
ತ್ತಿಸಿದಂಬಿನ ಗಱಿಯಿಂ ಕಱಿ ।
ಸಸಿಗಾಯ್ತಲ್ಲದೆ ಕಳಂಕಿಯೇ ವಿಧು ನಿಜದಿಂ ॥ (೧೭)

ನಗನಿಕಟದೊಳಱಿಯದೆ ಮುಗಿ ।
ಲ ಗಡಣದಿಂ ಪೊಕ್ಕು ಸಿಲ್ಕಿ ಪೊಲೆಗೆಟ್ಟಳಿವಿಂ ॥
ಚುಗಳೆನಿಪುವು ಬಾಳತಮಾ ।
ಳ ಗಹನದೊಳ್ ಸುೞಿವ ಶಬರಿಯರ ಕಡೆಗಣ್ಗಳ್ ॥ (೧೮)

ಕುಂದದ ಮುಗುಳ್ಗಳುಮಸುಗೆಯ ।
ಕೆಂದಳಿರ್ಗಳುಮಬ್ಜದಲರ್ಗಳುಂ ಬೆರಸು ತೊೞ ॥
ಲ್ತಂದಪುವು ತಮಾಳಲತೆಗ ।
ಳೆಂದಮರರ್ ನೋಡೆ ಚರಿಯಿಪರ್ ವನಚರಿಯರ್ ॥ (೧೯)

ವ॥ ಅಂತು ಬಹುವಿಧ ವಿಚಿತ್ರ ವಿಭವಭಾವಮನಪ್ಪುಕೆಯ್ದು ತನಗೆ ರಾಜಧಾನಿಯಾದ ತದ್ಗಿರೀಂದ್ರ ಕಂದರದ ರತ್ನಗಹ್ವರ ಮಹಾರಾಜಮಂದಿರದೊಳ್ ಸಕಳ ಮೃಗರಾಜ ರಾಜ್ಯಾಧಿಪತ್ಯಮಂ ತಳೆದು ತನ್ನ ಮುನ್ನಿನ ಜನ್ಮಂಗಳ ವಾರಣಾರಿ ನಾರಕಪರ್ಯಾಯ ಪರಿಕಳಿತ ಭೂರಿಕ್ರೂರಭಾವಮಾವಗಮೀ ಪರ್ಯಾಯದೊಳ್ ನೆರೆದು ನೆಲೆವೆತ್ತುದೆನಿಪ ಘನತರ ಹಿಂಸಾನಂದದೊಳೊಂದಿ ಮೆಚ್ಚಿದಿಚ್ಚೆಯಿಂ ಪಲಕಾಲಂ ವರ್ತಿಸುತ್ತುಮಿರ್ದು ಕಾಲಲಬ್ಧಿಯಿಂದಿನಮುಖಾಭಿಮುಖ ತಿಮಿರದಂದದಿನನಾದಿ ಮೋಹನೀಯಮುಪಶಮೋನ್ಮುಖಮಾಗೆಯುಂ, ಶರತ್ಸಮಯ ಸರಃಪಂಕದಂತೆ ಕಷಾಯನಿಕಾಯಮಪಾಯಾಭಿಮುಖಮಾಗೆಯುಂ, ಯೋಗ್ಯಮಾದ ನಿಜಮನೋಮಾರ್ಗದಿಂ ನಿಸರ್ಗಸಾಧುಜನಾಭಿಗಮ್ಯನಾಗಿ ತದ್ಗುಹಾಮಂದಿರಾಜಿರತಳ್ಪತಳಮನಲಂಕರಿಸಲೆಂದು—

ಕಂ॥ ಒಂದು ದಿನಂ ಮೃಗಪತಿ ಗುಹೆ ।
ಯಿಂದಂ ಪೊಱಮಟ್ಟು ತನಗೆ ದಕ್ಷಿಣನಯನ ॥
ಸ್ಪಂದಂ ಬಿಡದಮರ್ದೊಡಿದೇ ।
ನೆಂದೊಯ್ಯನೆ ನಿಂದು ದೆಸೆಗಳಂ ನೋೞ್ಪಾಗಳ್ ॥ (೨೦)

ಬಿಸಿಲ ಕಡುಗಾಯ್ಪು ಭೋಂಕೆನೆ ।
ಮಸುೞ್ದಿರೆ ವಿಪುಳೋಪಶಾಂತಿಯುಂ ಕ್ರೂರಮೃಗ ॥
ಪ್ರಸರಂ ಪಡೆದಿರೆ ವಿಸ್ಮಯ ।
ಮೆಸೆವಿನೆಗಂ ನಲಿಯೆ ಬಿಚ್ಚತಂ ವನ್ಯಮೃಗಂ ॥ (೨೧)

ನಡುಪಗಲಿದೊಂದು ದೆಸೆಯೊಳ್ ।
ಕಡುವೆಳಗೇಕಾದುದೆಂದು ಕೌತುಕದಿಂದಂ ॥
ನಡೆನೋಡುತಿರೆ ಮೃಗೇಂದ್ರಂ ।
ಬಡಗಣಿನೊಗೆದತ್ತದೊಂದು ದೀಪ್ತಿಪ್ರಸರಂ ॥ (೨೨)

ಘನತೇಜಂ ಮಧ್ಯಂದಿನ ।
ದಿನಂ ಪಗಲ್ಬಯಲೊಳಿರ್ದ ಸೊಡರ್ವೊಲ್ ಮಸುಳ್ದಂ ॥
ರ್ಪಿನೆಗಂ ನಿಜಾಂಗರುಚಿ ತೆ ।
ಕ್ಕನೆ ತೀವಿರೆ ಸಕಲ ಗಗನ ದಿಙ್ಮಂಡಳಮಂ ॥ (೨೩)

ವ॥ ಅದಲ್ಲದೆಯುಂ—

ಮ॥ ವರಸರ್ವೌಷಧಿ ಶಕ್ತಿಯುಕ್ತ ನಿಜದೇಹಾನೂನ ಸೌಗಂಧ್ಯ ಬಂ ।
ಧುರ ಮಂದಾನಿಳ ಸಂಗದಿಂ ತರುಲತಾಗುಲ್ಮಂಗಳೆಲ್ಲಂ ತಳಿ ॥
ರ್ತಿರೆ ತತ್ಸಿಂಹದ ತೀವ್ರತೀವ್ರತರ ಮಿಥ್ಯಾತ್ವಾಮಯಂ ಕುಂದುತುಂ ।
ಬರೆ ಬಂದರ್ ನಿರವದ್ಯಬೋಧನಿಧಿಗಳ್ ಸನ್ಮಾರ್ಗದಿಂ ಚಾರಣರ್ ॥ (೨೪)

ವ ॥ ಅಂತು ಬಂದರಿಂಜಯರುರುಮಮಿತಗುಣರುಮೆಂಬ ಚಾರಣಮುನೀಂದ್ರರ್ ತತ್ಕಂಠೀರವಾಭಿಮುಖದೊಳ್ ಅನತಿದೂರಮಾಗಿರ್ದ ನಿರ್ಜಂತುಕ ಚಂದ್ರಕಾಂತ ಶಿಳಾತಳಕ್ಕವತರಿಸಿ ಕೆಲದೊಳಿರ್ದ ಪಳಿಕಿನ ಸೆಲೆಗಳೆಲ್ಲಮಂ ಮಾಣಿಕದ ಸೆಲೆಗಳೆನಿಸುತ್ತುಮಿರ್ಕಲಂಬಿಡಿದು ನಿಮಿರ್ವ ನಿಜಾರುಣ ಚರಣತಳಕಿರಣದ ನಡುವೆ ಕಡೆವಿಡಿದು ಸಂದಣಿಸಿದ ಕೆಂದಾವರೆಯ ನಡುವಣ ಧವಳ ಕಮಳವನಶ್ರೀಯುಮಂ, ತಡಿವಿಡಿದು ಪವಳದ ಬಳ್ಳಿ ತಳ್ತ ಪಾಲ್ಗಡಲ ಚೆಲ್ವುಮಂ ನಿಜಾಂಗಪ್ರಭೆ ನಿರಾಕರಿಸುತ್ತುಮಿರೆ ಪಲ್ಯಂಕಾಸನದೊಳ್ ಕುಳ್ಳಿರ್ದಾಗಳರಿಂಜಯ ಮುನೀಂದ್ರರ್—

ಕಂ॥ ಭಯಮುಂ ಮುನಿಸುಂ ವನೆಮೃಗ ।
ಚಯದೊಳ್ ತಲೆದೋಱದಂತು ಬೆಳಗುವ ತೇಜೋ ॥
ಮಯಮಂ ನಿಜಾಸ್ಯಮಂ ವಿ ।
ಸ್ಮಯದಿಂ ನೋಡುವ ಮೃಗೇಶ್ವರಂಗಿಂತೆಂದರ್ ॥ (೨೫)

ಚಂ॥ ಎಲೆ ಮೃಗರಾಜ ದರ್ಶನವಿಮೋಹ ಮಹಾಸವ ಮತ್ತನಾಗಿ ನಿ ।
ರ್ಮಳ ಜಿನಮಾರ್ಗಮಂ ಪೞಿದು ಮಾಯ್ದು ಕುಚರ್ಚೆಗಳಿಂ ಕುಮಾರ್ಗಮಂ ॥
ಪಲತೆಱದಿಂ ವಿನಿರ್ಮಿಸಿದ ಪಾತಕದಿಂದತಿ ಕಷ್ಟಯೋನಿಯೊಳ್ ।
ನೆಲಸುತುಮಕ್ಕಟಾ ವಿರಹದುಃಖಶತಂಗಳನುಂಡು ಬೞಿದ್ದೈ ॥ (೨೬)

ವ॥ ಅದಂ ಪೇೞ್ವೊಡವಿರಳಿತ ಮಿಥ್ಯಾತ್ವತೀಬ್ರತರತಿಮಿರ ತಿರೋಹಿತ ದೃಷ್ಟಿಯಾಗಿ ನಿನಗಾದ ಭವಗಹನದೊಳ್ ಪೊಲಗೆಟ್ಟು ತೊೞಲುತ್ತುಂ ಬರ್ಪಲ್ಲಿ—

ಕಂ॥ ಒದವಿರ್ದೀ ಜಂಬೂದ್ವೀ ।
ಪದ ಮಂದರಧಾರಿಣೀಧರದ ಪೂರ್ವವಿದೇ ॥
ಹದ ಸೀತಾತಟನಿಯ ಬಡ ।
ಗದೆಸೆಯ ವರಪುಷ್ಕರಾವತೀ ಜನಪದದೊಳ್ ॥ (೨೭)

ಕಂ॥ ಸೊಗಯಿಸುವುದು ಮಧುಕರಮೆಂ।
ಬ ಗಹನಮುಲ್ಲಿಯ ವನೇಚರಾನ್ವಯದೊಳ್ ನೀ॥
ನೊಗೆದು ಪುರೂರವವೆಸರಿಂ।
ಮೃಗೇಂದ್ರ ನೆಗೞುತ್ತುಮಿರ್ದೆಯತಿ ದುರ್ಮತಿಯಂ॥ (೨೮)

ವ॥ ಅಂತು ವನೇಚರೋಚಿತ ಸಹಜ ನಿರ್ದಯ ನಿಸ್ತ್ರಿಂಶವೃತ್ತಿಯಿಂ ವರ್ತಿಸುತ್ತು ಮಿರ್ಪಿನೆಗಂ ಒರ್ಮೆ ಧರ್ಮಸ್ವಾಮಿಯೆಂಬ ಸದರ್ಥಸಾರ್ಥವಾಹಕಂ ವಿತತ ವಿಭವ ಮಂಡಿತ ಪುಂಡರೀಕಿಣೀಪುರದಿಂ ಬರುತ್ತುಂ ಆ ವನಘನತರುಚ್ಛಾಯೆಯೊಳ್ ಬೀಡು ವಿಟ್ಟಿರ್ಪಿನಂ—

ಕಂ॥ ನೆರೆದಿಱಿದಾ ಬೀಡಂ ವನ।
ಚರರೋವದೆ ಕಿಡಿಸೆ ತೀರ್ಥಯಾತ್ರೆಯಿನದಱೊಳ್॥
ಬರುತಿರ್ದ ಮುನೀಂದ್ರರ್ ಸಾ।
ಗರಸೇನಾಭಿಖ್ಯರಪಪಥರ್ ತೊೞಲುತ್ತುಂ॥ (೨೯)

ಒಂದು ನೊಗನಿಕ್ಕುವನಿತಂ।
ಮುಂದೀಕ್ಷಿಸಿ ಮೆಲ್ಲನಡಿಯನಿಡುತುಂ ಮುನಿಮಾ॥
ರ್ಗಂದಪ್ಪದಡವಿಯೊಳ್ ಮಾ।
ರ್ಗಂದಪ್ಪಿ ಬರುತ್ತುಮಿರ್ದೊಡಾ ಮುನಿವರರಂ॥ (೩೦)

ದೂರದೊಳೆ ನೋಡಿ ಕಂಡು ಪು।
ರೂರವನಿದಪೂರ್ವ ಮೃಗಮೆನುತ್ತಿಸಲಂಬಿಂ॥
ನಾರಿಯೊಳಿಟ್ಟಂ ಚಿಃಸಂ
ಸಾರದೊಳಾರಯ್ಯೆ ಕಷ್ಟಮವಿವೇಕಮೆ ದಲ್॥ (೩೧)

ಅಂತು ತಿರುವಾಯೊಳಿಡೆ ಸರ।
ಲಂ ತತ್ಸತಿ ಕಾಳಿಯೆಂಬಳಿಸದಿರು ಮೃಗಮೇ॥
ನಿಂತಿದಿರಂ ಬರ್ಪುವೆ ಮಾ।
ಣಿಂತಿದನೀಕ್ಷಿಸುವಮೆಂದು ಬಾರಿಸುವಿನೆಗಂ॥ (೩೨)

ಬರೆ ತನ್ಮುನಿ ಪೊರೆಗೆ ವನೇ।
ಚರನಸವಸದೆಱಗಿದಂ ನಿಜೋತ್ಸಾಹ ತೀವ್ರಾ॥
ಚರಿತಮನುೞಿದತಿ ಜಡಮತಿ।
ಧರೆಗೆಱಗದೆ ದೀಪವರ್ತಿ ನಿಧಿ ಸನ್ನಿಧಿಯೊಳ್॥ (೩೩)

ವ॥ ಅಂತು ಮುನಿರೂಪ ಮಾತ್ರಾಭಿಜ್ಞಾನನಾದೊಡಂ ಚಂದ್ರಪಾದ ಪ್ರಾಪ್ತಿಯಿಂ ದ್ರವಿಯಿಪಿಂದುಕಾಂತದಂತೆ ತದೀಯ ಶ್ರೀಪಾದಪ್ರಾಪ್ತಿಯಿನಾರ್ದ್ರಿತಸ್ವಾಂತನಾಗಿ ಯಥೋಚಿತ ಕಾಲಲಬ್ಧಿಯೆ ಗುರುವಾಗೆ ವಿನಯವಶದಿನೆಱಗಿದ ಪುರೂರವನಂ ಧರ್ಮವೃದ್ಧಿ ಪುರಸ್ಸರಂ .ಮುನೀಶ್ವರನನುಗ್ರಹಿಸಿ ಬಱಿಯಂ ಬ್ರತಾಬ್ರತ ಫಳಸ್ವರೂಪಮಂ ತಕ್ಕನಿತನವನಱಿವಂತು ವಿಶದ ವಾಕ್ಯಂಗಳಿಂ ಬೆಸಸೆ—

ಕಂ॥ ಎರೆದಾಮುನಿವರರಂ ವನ।
ಚರನಾಂತಂ ಮದ್ಯಮಾಂಸಮಧುವಿರತಿಯನಾ॥
ದರದಿನನಂತರಮೆ ವನಾಂ।
ತರದೆಯ್ದಿಪಿದಂ ದಲೊಂದು ಪುರಪದ್ಧತಿಯಂ॥ (೩೪)

ವ॥ ಅಂತವರೆಂದ ತೆಱದಿನೊಂದೂರ ಬಟ್ಟೆಯಂ ತೋಱಿಕೊಟ್ಟು ತದನುಜ್ಞೆಯಿಂ ಮಗುಟ್ದು ಬಂದು ನಿರತೀಚಾರವೃತ್ತಿಯಿಂ ಪರಿಗೃಹೀತ ಬ್ರತಮನಾಚರಿಸಿ ನಿವೃತ್ತಿ ಮಾತ್ರಫಲದಿಂ ನಿಜಾಯುರವಸಾನದೊಳ್—

ಕಂ॥ ಸುರನಾದಂ ಸೌಧರ್ಮಾ।
ಮರಕಲ್ಪದೊಳಲ್ಲಿ ಸಾಗರೋಪಮಕಾಲಂ॥
ಬರಮನುಭವಿಸಿದನನವಧಿ।
ತರಸೌಖ್ಯಮನಾ ಪುರೂರವಂ ತ್ರಿದಶವರಂ॥ (೩೫)

ಅಂತು ನಿವೃತ್ತಿಲತಾಫಲ।
ಮಂ ತಣಿಯೆ ತದಮರಸುಖಮನುಂಡು ತದಾಯು॥
ಷ್ಯಾಂತದೊಳೀ ಭರತಾವನಿ।
ಗಂ ತತ್ಸುರನಪ್ಪ ನೀಸೆ ಮಗುಟ್ದಿಯ್ತೆಂದೈ॥ (೩೬)

ವ॥ ಅಂತು ಬಂದು—

ಉ॥ ಆವನಿನುಗ್ರಕರ್ಮವಿಪಿನಂ ನೆಱೆ ನುರ್ಗಿದುದಾವನಿಂ ಸಮ।
ಸ್ತಾವನಿ ಧರ್ಮಮಾರ್ಗಮುಮನಾಕುಳಮೆಯ್ದಿದುದಾವನಿಂ ತ್ರಿಳೋ॥
ಕೀವದನಂ ಶಿಖಾಮಣಿ ವಿಶೇಷವಿಳಾಸಮನಾಂತುದಾಮಹಾ।
ದೇವದೇವದೇವನ ಜಿನೇಂದ್ರನ ತೀರ್ಥಕರಾಗ್ರಗಣ್ಯನಾ॥ (೩೭)

ಶ್ರೀವೃಷಭೇಂದ್ರನಗ್ರತನಯಂ ಮನುವಂಶನಿಧಾನನಾನತೋ।
ಗ್ರಾವನಿಪಾಳಕಂ ಪ್ರಥಮಚಕ್ರಿವಿನಿರ್ಮಿತ ವಿಪ್ರವಂಶನಾ॥
ಜ್ಞಾವನತಾಂಬರೇಚರ ಸುರಪ್ರಕರಂ ಭರತಾವನೀಶನಂ।
ತಾವಿಭುಗಂತದಗ್ರಮಹಿಷೀಪ್ರತಿಪತ್ತಿಯನಂತಸೇನೆಗಂ। (೩೮)

ಕಂ॥ ಉದಯಿಸಿದೆಯಖಿಳ ಧರೆಗತಿ।
ಮುದವೊದವೆ ಮರೀಚಿಯೆಂಬ ಪೆಸರಿಂದಂ ಶ॥
ಸ್ತ್ರದೊಳಂ ಶಾಸ್ತ್ರದೊಳಂ ಸುತ।
ಕದಂಬದೊಳ್ ತಳೆದೆಯನತಿಶಯ ಕೌಶಲಮಂ॥ (೩೯)

ವ॥ ಅಂತು ಸಹಜ ಕ್ಷಾತ್ರತೇಜಃಪಟುಮರೀಚಿ ವಿದಿತ ಸಕಳಶಾಸ್ತ್ರಶಸ್ತ್ರಜನ ವಿನುತನಾಗಿ ವರ್ತಿಸುತ್ತುಮಿರೆ—

ಕಂ॥ ಪುರುಷೋತ್ತಮಂ ತ್ರಿಬೋಧಾ।
ಭರಣಂ ವೈರಾಗ್ಯಬಳದಿನಘರಿಪುವಂ ಸಂ॥
ಹರಿಸಲ್ ವೃಷಭೇಶ್ವರನತಿ।
ಭರದಿಂ ದೀಕ್ಷಾಸಿಧೇನುವಂ ಧರಿಯಿಸಿದಂ॥ (೪೦)

ವ॥ ಆಗಳ್ ಕಚ್ಛಮಹಾಕಚ್ಛಪ್ರಭೃತಿ ನೃಪಕುಮಾರಕರ್ ತಮತಮಗೆ ಬಿಡೆ ಕಡಂಗಿ ನೆರೆದೆಯ್ತಂದು ದುರಿತಪರಿಪಂಥಿ ಸಮರವಿಜಯದೊಳ್ ನಿಜಸ್ವಾಮಿಯಂ ಮೆಚ್ಚಿಪಚ್ಚುಕತನದಿನಳವಿಯಲ್ಲದ ದುಸ್ಸಹಮಹಾಬ್ರತಾಯುಧಮಂ ತಳೆದು ನಿಲ್ವುದುಮವರೊಡನೆ ಮರೀಚಿಯುಂ ಅನನುರೂಪ ಜಿನರೂಪಮನಾಂತು ನಿಲೆ ನಿಸರ್ಗವೀರವಲ್ಲಭಂ ವೃಷಭಸ್ವಾಮಿ ಮೆಯ್ವೆತ್ತಿದನಂತ ಕರ್ಮಭಟರಂ ಷಣ್ಮಾಸಂಬರಮಿಕ್ಕುವ ತಕ್ಕಿನಿಂ ಕೈಯಿಕ್ಕಿ ನಿಲ್ವುದುಂ ತತ್ಕುಮಾರತಾಪಸರ್ ತಾವುಮೊಳಗಱಿಯದೆ ತಱಿಸಂದು ನಿಂದು ನಿರವಧಿ ಧೈರ್ಯನಿಧಿಯಪ್ಪ ನಾಭಿನಂದನನ ನಿಯಮದವಸಾನಮಂ ಬಲ್ಕಣಿತನದಿಂ ಕೆಲವು ದೆವಸಂಬರಂ ಪಾರ್ದು ತೀರ್ವುದುಂ ಕಾಣದಣಮೆ ಬೇಸತ್ತು—

ಮ॥ ಬಸಿಱಿಂ ಪೆತ್ತ ತೃಷಾಕ್ಷುಧೇಷು ಕವಿದೆತ್ತಂ ನೆತ್ತಿಯೊಳ್ ಕೂಡೆ ಕೀ।
ಲಿಸಿ ಭಾಸ್ವತ್ಕರ ತೋಮರಾಳಿ ತನುವಂ ತೀವ್ರಾನಿಳೋಗ್ರಾಸಿ ಭೇ॥
ದಿಸೆ ಬೆಳ್ಕುತ್ತೆ ವಿಶೀರ್ಣ ಧೈರ್ಯಕವಚರ್ ತತ್ತಾಪಮಂ ನೋಡಿ ಸೈ।
ರಿಸದಂತಂತೊಳಸೋರ್ದರೇಂ ಪಸರಮೋ ಕರ್ಮಾಸುಹೃದ್ಭಂಜನಂ॥ (೪೧)

ಕಂ॥ ತಗುಳೆ ತೃಷೆ ನೀರ್ಗೆ ಮಡುವಂ।
ಪುಗುವರ್ಪಸೆ ಪಸಿವು ಪಣ್ಗೆ ಮರನೇಱುವ ಚೇ॥
ಷ್ಟೆಗಳಿಂ ಪ್ರಕಟಿಸಿದರವರ್।
ಮಿಗೆ ಮುಂ ಬೆಂಕೊಂಡ ಕರ್ಮವೈರಿಯ ಭಯಮಂ॥ (೪೨)

ಇಂತದಯುಕ್ತಂ ಯತಿಗ।
ಳ್ಗಿಂತುಮೆನಿಪ್ಪಳಿಪತನಕೆ ಕೋರಯಿಸದೆ ಮೆ॥
ಯ್ಯಂತುಟಕೆ ನಾಣ್ಚಿ ಬಹುವೇ।
ಷಾಂತರಮಂ ತಳೆದು ಪರೆಯೆ ತನ್ಮುನಿ ನಿವಹಂ॥ (೪೩)

ಕಂ॥ ತದನಸ್ಥೆಯಿಂ ಮರೀಚಿಯು ।
ಮದೃಢಮಸಂ ವಿಗಳತಾರ್ಹತ ಬ್ರತಮಾರ್ಗಂ ॥
ಸದುಳಿಕೆಯನುಟಿದು ಕೌಪೀ ।
ನದಂಡಮೌಂಜೀಶಿಖಾದಿ ವೇಷಮನಾಂತಂ ॥ (೪೪)

ವ॥ ಅಂತಾತಂ ಪಲವುಂ ದೇಶಾಂತರಮಂ ತಿರಿದು ಮಗುಟ್ದುಮಪವರ್ಗಶ್ರೀಕಾಂತನ ತದ್ವೃಷಭೇಶನನಂತಜ್ಞಾನೋದಯ ಪ್ರಭಾವೋತ್ಸವದೊಳ್ ಸಮವಸರಣಕ್ಕೆ ಬಂದುಚಿತ ಮನುಷ್ಯ ಕ್ಷೇತ್ರದಲ್ಲಿ ಕುಳ್ಳಿರ್ದಿನೆಗಂ ಸಮಯೋಚಿತಮಾಗಿರೆ ಭರತಮಹೀಶ್ವರನೆಂದು ಗಣಧರ ಸ್ವಾಮಿಗಳಂ—

ಕಂ॥ ಇಂತೀ ನೆರೆದ ಸಮಸ್ತ ಸ ।
ಭಾಂತರದೊಳ್ ಭವ್ಯರೀ ಪುರುಸ್ವಾಮಿಯವೋ ॥
ಲೇಂ ತೀರ್ಥವಿಧಾಯಕರ ।
ಪ್ಪಂತಪ್ಪವರೊಳರೆ ಪೇಟಿಮೆನೆ ತನ್ಮುನಿಪಂ ॥ (೪೫)

ಪರಿಕಿಪೊಡೆ ನಿನ್ನಮಗನೀ ।
ಮರೀಚಿ ಬಹುವಿಧಭವಾಬ್ಧಿಯಂ ಕ್ರಮದಿಂದಂ ॥
ತರಿಯಿಸಿ ಗಳಿತಾಖಿಳಕ ।
ರ್ಮರಜಸನಿಂ ಕಡೆಯ ತೀರ್ಥಕರನಾದಪ್ಪಂ ॥ (೪೬)

ಎಂಬುದುಮಾನುಡಿ ಕಿವಿಯಂ ।
ತುಂಬೆ ಸಹರ್ಷಂ ಮರೀಚಿ ದುಸ್ತರಸಂಸಾ ॥
ರಾಂಬುಧಿಯನಂದೆ ದಾಂಟಿದೆ ।
ನೆಂಬ ಮನೋಬಲಮನಾದಮಾಗಳೆ ತಳೆದಂ ॥ (೪೭)

ವ॥ ಅಂತು ಸರ್ವಾವಧಿಬೋಧನಿಧಿಗಳಪ್ಪ ಗಣಧರಸ್ವಾಮಿಗಳ ಸತ್ಯಸುಧೆಯಂ ಶ್ರವಣಯುಗಳಾಂಜಲೀಪುಟದಿನೀಂಟಿ ಸೂಟ್ಸೂಟಿಗೊಳುದಯಿಪ ದುರಿತಕ್ರಮ ಸಂಕ್ಲೇಶ ವಿಶೋಧಿಮಯ ಪರಿಣಾಮಮಂ ನದಿಪುವಂತಂತರಿತ ಪರಮಾಪವರ್ಗಮಾರ್ಗಾಚರಿತನಪ್ಪ ಮರೀಚಿ ಸಮವಸರಣ ವಿವಿಧ ವೈಚಿತ್ರ್ಯಮುಮಂ ತತ್ಪ್ರಭಾವಮುಮಂ ಪರಮಾನಂದಸ್ತಬ್ಧಗಾತ್ರನಾಗಿ ನೀಡುಂ ನೋಡುತ್ತುಮಿರ್ದು ಸಮನಂತರಂ ಸಮವಸೃತಿಸಮಾಶ್ರಯದಿಂ ತಳರ್ದು ಸಮುಪಾಶ್ರಯದಿನುಟಿದ ಪಳಿಕಿನಂತೆ ಜೆಳುಕನಾಗಿ ಸಹಜೋಚಿತ ರುಚಿಯಂ ನಿಲಿ ಪೂರ್ವವಾಸನಾಯತ್ತವೃತ್ತಿಯಿಂ ವಿಪರೀತ ಪರಿಣತೆಯನಾಂತು—

ಕಂ॥ ಎಂತಖಿಳಾಗಮಮಂ ಪೇ ।
ಟ್ದಿಂತೆಮ್ಮ ಪಿತಾಮಹಂ ಜಗಕ್ಕೀಶ್ವರನಾ ॥
ದಂ ತತ್ಪ್ರಭುತೆಯನಾಂ ಶಾ ।
ಸ್ತ್ರಾಂತರಮಂ ಪೇಟ್ದು ಪಡೆವೆನೆಂಬಿದನೋಣರ್ದಂ ॥ (೪೮)

ಕಂ॥ ಬಗೆವಂದಾ ಕಾಲದೊಳಾ ।
ಭಗವಜ್ಜಿನಪತಿಯು ಕೆಲದೊಳಾಗಱಭೃತ್ಯಾನ್ವ ॥
ಮಿಗಳುಕ್ತಿಯಿನಾದಱಿವುಂ ।
ಜಗುಱ್ಚಿದು ಗಡದೇನತರ್ಕ್ಯಮೋ ಕರ್ಮಬಳಂ ॥ (೪೯)

ವ॥ ಅಂತು ತತ್ಕಾಲಸರ್ವಥೈಕಾಂತರೂಪ ಕುನಯಶತಪ್ರಪಂಚ ಮಿಥ್ಯಾದರ್ಶನ ಪ್ರವರ್ತನ ಪ್ರಥಮನಾಯಕನಪ್ಪ ಮರೀಚಿ ನಂದುವ ಸೊಡರ ಕುಡಿವೆಳಗಿನಂತನಂತರ ತಮೋರೂಪ ಪರಿಣಾಮಿಯಪ್ಪ ನಿಜಪಟುಪ್ರಜ್ಞಾ ಪ್ರಕಾಶಬಳದಿಂ ಕುಶಾಸ್ತ್ರವಿಶೇಷವಿಧಾನತತ್ಪರನಾಗಿ ಸ್ವಸಂವೇದನ ಸುವ್ಯಕ್ತನುಂ ಕರ್ಮಕೃತಗತಿ ವಶಾರಬ್ಧಕಾಯ ಪರಿಮಾಣನುಂ ಜ್ಞಾನದರ್ಶನಸ್ವಭಾವನುಮಪ್ಪ ಜೀವನಮೂರ್ತತ್ವೈಕಹೇತುವಿನೇಕಾಂತ ಸರ್ವಗತನುಮಜ್ಞಾನದರ್ಶನ ಸ್ವಭಾವನುಮೆಂದುಂ ನಿಜಗುಣಾಭಿನ್ನ ಭಿನ್ನಲಕ್ಷಣ ಕ್ಷಣಕ್ಷಣೋತ್ಪತ್ತಿವ್ಯಯದ್ರವ್ಯಪರ್ಯಾಯ ಪರಿಕಳಿತ ಸಮಸ್ತದ್ರವ್ಯ ನಿತ್ಯಪ್ರವಾಹ ಪರಿಮಿತಾಕಾರಮಪ್ಪ ಲೋಕಮಂ ಸತ್ವರಜಸ್ತಮೋಮಯಗುಣಂಗಳ ಸಾಮ್ಯಾವಸ್ಥೆಯಪ್ಪ ಮೂಲಪ್ರಕೃತಿಯೆಂದುಂ, ಕ್ಷೆತ್ರವಿಶೇಷಗತ ಜೀವಾಯುರುತ್ಸೇಧಹಾನಿವೃದ್ಧಿ ಪ್ರವರ್ತನ ಕಾರಣಕಾಲವ್ಯವಹಾರನಯಮನೆ ಪಿಡಿದು ಪತ್ಯದ್ರವ್ಯರೂಪಮಪ್ಪ ಭುವನಕ್ಕಾತ್ಯಂತಿಕೋತ್ಪತ್ತಿ ಪ್ರಳಯಂಗಳೊಳವೆಂದುಂ ತದುತ್ಪತ್ತಿಪ್ರಳಯಂಗಳಂ ಮತ್ತೆ ಮೂಲಪ್ರಕೃತಿಸ್ವರೂಪದಾವಿರ್ಭಾವತಿರೋಭಾವಗಳೆಂದುಂ ತದಾವಿರ್ಭಾವಭೇದದೊಳವಿಕಾರಮುಂ ಅಮೂರ್ತಮುಮಪ್ಪಾತ್ಮ ದ್ರವ್ಯದಿನನಂತಮುಮಖಂಡಮುಮಪ್ಪ ಪವನಪಥದುತ್ಪತ್ತಿಯುಂ ತದಂಶದ್ರವ್ಯಮಾದಿಯಾಗಿ ಮೂರ್ತದ್ರವ್ಯಪರ್ಯಾಯಂಗಳಪ್ಪ ವನಪಾವಕ ಪಾಥಃ ಪೃಥಿವಿಗಳಂ ಕ್ರಮದಿನೊಂದಱಿಂದೊಂದು ಪುಟ್ಟಿದುವೆಂದುಂ, ತತ್ತಿರೋಭಾವ ಭೇದದೊಳ್ ಪೃಥ್ವಿಯಪ್ಪುತೇಜೋವಾಯುಗಳಪ್ಪ ಮೂರ್ತವಿಶೇಷಂಗಳಂ ತತ್ತದ್ಗುಣಂ ಗಂಧರಸಸ್ವರೂಪಸ್ಪರ್ಶತನ್ಮಾತ್ರೆಗಳೊಳಡಗಿರ್ಪುವೆಂದುಂ ಅಮೂರ್ತಮುಮಿತರದ್ರವ್ಯಾವಕಾಶಮುಮಪ್ಪಾಕಾಶಮುಂ ಮೂರ್ತದ್ರವ್ಯಶಬ್ದದೊಳಡಂಗುವುದೆಂದುಂ, ಭಿನ್ನರಸಮಪ್ಪನಂತಾನಂತ ಜೀವದೊಳವಿನಿತುಂ ಮುಱುಗಿ ಸಕಳವ್ಯವಹಾರಾಭಾವಮಪ್ಪುದೆಂದುಂ ಮತ್ತಮೇಕದೇಶದೊಳ್ ತತ್ವಾಭಾಸಮಾಗೆ ಕಿಱಿದು ಪೋಲ್ವೆವೆರಸು ಶಬ್ದಸ್ಪರ್ಶರೂಪ ರಸಗಂಧಗಗನಪವನಾನಳಜಳಾವನಿ ಶ್ರವಣತ್ವಚವಿಳೋಚನರಸನಾಘ್ರಾಣ ವಾಕ್ಪಾಣಿ ಪಾದಪಾಯೂಪಸ್ಥಾಮನೋಮಹದಹಂಕಾರ ಬುದ್ಧಿಪರಿಮಿತ ಚತುರ್ವಿಂಶತಿ ಸ್ವರೂಪಮಪ್ಪ ತತ್ಪ್ರಕೃತಿಯಗಲ್ಕೆಯಿನಿಪ್ಪತ್ತಯ್ದನೆಯ ತತ್ವಮಪ್ಪ ಜೀವಸ್ವರೂಪದೊಳ್ ನಿಲ್ವುದೆ ಮೋಕ್ಷಮೆಂದುಂ ಪಂಗ್ವಂಧನ್ಯಾಯದಿಂ ಪ್ರಕೃತಿ ಪುರುಷ ಸಂಯೋಗದೊಳ್ ಸಂಸೃತಿವ್ಯವಹಾರಮೆಂದುಂ, ಇವರ್ಕೆ ತಕ್ಕ ಕುದೃಷ್ಟಾಂತಂಗಳಂ ಘಟಯಿಸಿ ಸಂಖ್ಯಾಪ್ರಧಾನಮಾಗೆ ಸಾಂಖ್ಯಮೆಂಬ ತರ್ಕಸೂತ್ರಮಂ ಬರೆದು ಕಪಿಳಾದಿ ಶಿಷ್ಯರ್ಗುಪದೇಶಿಸಿ ಪರಿವ್ರಾಜಕವೇಷದಿನಶೇಷದೇಶದೊಳೆಲ್ಲಂ ಪ್ರವರ್ತಿಸುತ್ತುಂ—

ಕಂ॥ ಕ್ಷಿತಿಯೊಳ್ ನಿಜವಾಣೀ ವಿಷ ।
ಲತೆಯಂ ಬಳೆಯಿಸಿ ನಿಜಾಯುರವಸಾನದೊಳಾ ॥
ಹತಮತಿ ಬಾಹ್ಯನಿವೃತ್ತಿಸು ।
ಕೃತಫಳದಿಂ ಬ್ರಹ್ಮಕಲ್ಪದೊಳ್ ಜನಿಯಿಸಿದಂ ॥ (೫೦)

ವ॥ ಅಂತು ಜನಿಯಿಸಿ ಸುರಲೋಕಸುಖಮನನುಭವಿಸಿ ದಶಸಾಗರೋಪಮಾಯುರವಸಾನದೊಳ್ ಮತ್ತಮೀಭರತಭೂತಳಕ್ಕೆ ವಂದಯೋಧ್ಯಾನಾಮನಗರಿಯೊಳ್ ಕಪಿಳವಿಪುಳಾಮರಂಗಂ ತತ್ಕಾಂತೆ ಕಾಪಿಲ್ಯೆಗಮಾಕುಟಿಳಮತಿ ಜಟಿಳನೆಂಬ ಮಗನಾಗಿ ಪೂರ್ವಭವವಾಸನೆಯಿಂ ಶೈಶವದೊಳಂ ಪರಿವ್ರಾಜಕನಾಗಿ ಜೀವಿತಾವಸಾನದೊಳ್ ಕಾಯಕ್ಲೇಶ ಪ್ರಧಾನಂ ಪ್ರಥಮಕಲ್ಪದೊಳ್ ಪುಟ್ಟಿ—

ಕಂ॥ ಏಕಾರ್ಣವೋಪಮಾಯುವ ।
ನಾಕಲ್ಪದನಲ್ಪಸುಖಮನನುಭವಿಸುತುಮಾ ॥
ನಾಕಭವಂ ಕಳಪಿ ಕರಂ ।
ವ್ಯಾಕುಳಮತಿ ಬಂದು ಮತ್ತಮೀಭೂತಳದೊಳ್ ॥ (೫೧)

ವ॥ ಸ್ಥೂಣಾಗಾರಮೆಂಬ ಪುರವರದೊಳ್ ಭಾರದ್ವಾಜದ್ವಿಜಂಗಮಾತನ ಮನಃಕಾಂತೆ ಪುಷ್ಪದಂತೆಗಂ ಪುಷ್ಪಮಿತ್ರನೆಂಬ ಮಗನಾಗಿ ಜನ್ಮಾಂತರವಾಸನೆಯಿನುಪನಯನಾನಂತರಂ ಪರಿವ್ರಾಜಕ ದೀಕ್ಷಿತನಾಗಿ ನೆಗಬ್ದು ಪಂಚತ್ವಪ್ರಾಪ್ತಿಯಿಂ ಮತ್ತಮಾಮೊದಲ ಕಲ್ಪದೊಳುತ್ಪತ್ತಿವೆತ್ತು ತನ್ಮಿತಾಯುರವಸಾನದೊಳೀ ಭರತಭೂತಳದ ಶ್ವೇತಕಾಭಿಧಾನಪುರದೊಳ್ ಅಗ್ನಿಭೂತಿಗಂ ಗೌತಮಿಗಂ ಅಗ್ನಿಸಖನೆಂಬ ಪೆರ್ಮಗನಾಗಿ—

ಕಂ॥ ಉಪವೀತಂ ಪರಿಚಿತವೇ ।
ದಪುರಾಣ ನ್ಯಾಯ ನೀತಿಶಾಸ್ತ್ರಂ ವೈರಾ ॥
ಗ್ಯ ಪುರೋಗಮನಂ ಮಸ್ಕರಿ ।
ತಪದೊಳ್ ವರ್ತಿಸಿ ಕೃತಾಂತ ಕಬಳಿತ ಕಾಯಂ ॥ (೫೨)

ಜನಿಯಿಸಿ ಸನತ್ಕುಮಾರದೊ ।
ಳನುಭವಿಸಿ ಯಥೇಷ್ಟ ಸೌಖ್ಯಮಂ ಸಪ್ತಪಯೋ ॥
ಧಿನಿಬದ್ಧಮಾಯು ತವೆ ಭೋಂ ।
ಕೆನೆ ಬಂದೀ ಭರತಧರೆಯ ಮಂದಿರಪುರದೊಳ್ ॥ (೫೩)

ಸುತನಾಗಿ ಗೌತಮಂಗಂ ।
ಪತಿಹಿತೆ ಕೌಶಿಕೆಗಮಗ್ನಿಮಿತ್ರಾಹ್ವಯದಿಂ ॥
ಕ್ಷಿತಿಯೊಳ್ ವರ್ತಿಸಿ ಪೂರ್ವ ।
ಸ್ಥಿತಿಯ ಪರಿವ್ರಾಜಕತ್ವಮಂ ಕೆಯ್ಕೊಂಡಂ ॥ (೫೪)

ವ॥ ಅಂತು ತಳೆದ ತನ್ನಿಯಮದೊಳೆ ನಿಜಾಯುವಂ ಕಳಿಪಿ ಮಾಹೇಂದ್ರಕಲ್ಪದೊಳನಲ್ಪ ಸೌಖ್ಯನಪ್ಪ ಸುರಮುಖ್ಯನಾಗಿ ತನ್ನಿಯತ ಸಪ್ತಸಾಗರೋಪಮಾಯುರವಸಾನದೊಳ್ ಮಗುೞ್ದು ಮಾಮಂದಿರಪುರದೊಳ್ ಶಾಲಂಕಾಯನನಾಮಧೇಯ ಪಾರ್ವಂಗಮಾತನ ಸುದತಿ ಮಂದಿರೆಗಂ ಭಾರದ್ವಾಜನೆಂಬ ತನೂಜನಾಗಿ ಸಮಧೀತ ಸಕಳಶ್ರುತಿಸ್ಮೃತಿಪುರಾಣ ಪ್ರಪಂಚಂ, ಪ್ರಾಕ್ತನವಾಸನಾವಶದಿಂ ಪರಿಗೃಹೀತ ಪರಿವ್ರಾಜನಾಗಿ ತನ್ನಿಯಮಗಮಿತಾಯುಷಂ ಮಗುೞ್ದುಂ ಮಾಹೇಂದ್ರತ್ರಿದಿವದೊಳ್ ದಿವಿಜನಾಗಿ—

ಕಂ॥ ದಿವಿಜನಿವಾಸಂಗಳ ದಿವಿ ।
ಜವಿಟಪಿಗಳ ದಿವಿಜವನಿತೆಯರ ದಿವಿಜವಿಭಾ ॥
ಗ ವಿಶೇಷಸುಖಮನೊಸೆದನು ।
ಭವಿಸುತುಮಿರೆ ಪಲವುಕಾಲಮಂತಾದಿವಿಜಂ ॥ (೫೫)

ಮ॥ಸ್ರ॥ ತ್ರಿದಶೋರ್ವೀಜಂವಯೋವಾರ್ಧಿಯ ತಡಿದೆರೆಗಳ್ವೊಯ್ದವೋಲ್ ನೀಡುಮಳ್ಳಾ।
ಡಿದುವುತ್ತಂಸೋದ್ಗಮಂಗಳ್ ಕೊರಗಿದುವು ಕೃತಾಂತಾನಳಜ್ವಾಳೆಗಳ್ ತಾ ।
ಗಿದವೋಲ್ ವಕ್ತ್ರೇಂದುಧಾಮಂ ಮುಸುಱಿದಭಿಸರತ್ಕಾಲಕಾಳಾಂಬುದಂ ಮು ।
ತ್ತಿದವೋಲ್ ತದ್ದೇವಧಾಮಾಧಿಪ ಸುರಭವನಭ್ರಂಶ ಸಂಸೂಚಕಂಗಳ್ ॥ (೫೬)

ವ॥ ಅಂತು ಸಮನಿಸಿದ ನಿಜದಿವಿಜಭವನ ಸ್ಥಿತಿಚ್ಯುತಿ ದುರ್ನಯಂಗಳಂ ಕಂಡು ಭೋಂಕನೆ ಬೆಗಡುಗೊಂಡು—

ಚಂ॥ ಪರಿದು ವಿಮಾನದೋವರಿಗಳೊಳ್ ಪಡಿಗೆತ್ತುಱಿಗಿರ್ಪೆನೋ ಗೃಹಾಂ ।
ತರದಮಳ್ವಾಪಿಸೊಳ್ ಮುಸುಕಿ ಮೆಯ್ಗರೆದಿರ್ಪೆನೊ ತಳ್ತಕಲ್ಪಭೂ ।
ಮಿರುಹ ನಿಕುಂಜಮಂಜರಿಗಳೊಳ್ ತೊಡಕಿರ್ಪೆನೊ ತೊಟ್ಟನೆಯ್ದಿ ನೀ ।
ಕರುಣದೆ ಕಾಯ್ದು ನುಂಗಿದಪನಂತಕನೇತೆಱದಿಂದೆ ವಂಚಿಪೆಂ ॥ (೫೭)

ಉ॥ ಏಗಳ ಗೆಯ್ವೆನಾರ ಮಱಿವೊಕ್ಕು ಬರ್ದುಂಕುವೆನೆತ್ತವೋಪೆನಾರ್ ।
ಕಾಗುಮಿನಿತ್ತು ಸರ್ಗದೊಳಮೆನ್ನನೆ ಕಂಡುದೆ ದೈವವಕ್ಕಟಂ ॥
ಬಾಗದಿದೆಂಬರಿಲ್ಲ ಪೆಱರೊರ್ವರುಮೊರ್ಮೆಗೆ ನೀನೆ ರಕ್ಷಿಸ ।
ಲ್ಕಾಗದೆ ದೇವ ಧಾತ್ರ ಕರುಣಾಕರ ದೀನನನೆನ್ನನಕ್ಕಟಾ ॥ (೫೮)

ಕಂ॥ ಈವನಿತಾಕುಳಮಿಾದಿವಿ ।
ಜಾವನಿಜಾತಾಂಗಮಿಾಕಸನ್ಮಣಿಗೃಹಮಿ ॥
ನ್ನಾವನ ಕೆಯ್ಸಾರ್ಗುಮೊ ನಿ ।
ರ್ದೈವಂಗೆನಗಿಂತಿವೇಕೆ ಗಡ ಸಮನಿಸುಗುಂ ॥ (೫೯)

ಉ॥ ಈಸುರಗಾಯಿಕಾಮಧುರಗೀತಿಗಳೀಸುರಲಾಸಿಕಾರಸೋ।
ಲ್ಲಾಸಿತ ಲಾಸ್ಯಮೀಸುರಸಭಾಜನ ಭಾವರಸಪ್ರಸನ್ನಗೋ॥
ಷ್ಠೀಸುಖಮಿನ್ನದೆಲ್ಲಿ ದೊರೆಕೊಂಡಪುದಕ್ಕಟ ಕೆಟ್ಟೆನೆಂದುಸಂ।
ತ್ರಾಸದಿನಾರ್ದು ಬಾಯಬಿಡದನಿನ್ನರೆ ತತ್ವವಿಮೂಢರೆನ್ನರುಂ॥ (೬೦)

ವ॥ ಅಂತು ನಾಕಜಂ ನಾಕಲೋಕಚ್ಯುತಿಗೆ ಸೈರಿಸಲಾಱದೆ ಮಮ್ಮಲಮಱುಗಿ ಬಹು ಪ್ರಕಾರದಿಂ ಬಾಯಬಿಡದೊಳಱಿ ದುರ್ನಿವಾರ ಕೃತಾಂತಕಬಳಿತನಾಗಿ—

ಕಂ॥ ಭೂವಳಯದೊಳ್ ಕುಮಾರ್ಗಮ।
ನಾವಿರ್ಭಾವಿಸಿದ ಪಾಪದಿಂ ಚಿರಕಾಲಂ॥
ಸ್ಥಾವರ ಯೋನಿಗಳೊಳ್ ತ।
ದ್ದೇವಂ ಭ್ರಮಿಯಿಸಿದನಾತನುಂ ನೀನೆ ವಲಂ॥ (೬೧)

ಸ್ವಹಿತಮನಱಿಯದೆ ಕರ್ಮ।
ಪ್ರಹತಂ ತಾನಾಗಿ ಘೋರ ಸಂಸಾರ ಮಹಾ॥
ಗಹನದೊಳಹರ್ನಿಶಂ ದು।
ಸ್ಸಹ ದುಃಖಮನಕಟ ದೇಹಿ ಬಿಡದನುಭವಿಕುಂ॥ (೬೨)

ಜಿನಮತಕೆ ಬಾಹ್ಯಮೆನಿಸಿದ।
ಕುನಯಾಶ್ರಯ ಕುಶ್ರುತಂಗಳಂ ವಿರಚಿಸಿ ಭೂ॥
ಜನಮಂ ಕುತತ್ವಕುಳಭಾ।
ಜನಮಂ ನೀಂ ಮಾಡಿ ದುಃಖಭಾಜನನಾದೈ॥ (೬೩)

ವ॥ ಅಂತಸಂಖ್ಯಾತಕಾಲಂ ತ್ರಸಸ್ಥಾವರ ಪರ್ಯಾಯ ನಿಕಾಯಮಂ ಪೊತ್ತು ನಮೆದು—

ಕಂ॥ ವರರಾಜಗೃಹ ಸಮಾಹ್ವಯ।
ಪುರದೊಳ್ ಶಾಂಡಿಲ್ಯಬಾಡವಂಗಂ ತತ್ಸುಂ॥
ದರಿ ಪಾರಾಶರಿಗಂ ಸ್ಥಾ।
ವರನೆಂಬೀ ಪೆಸರಿನೆಸೆವ ನಂದನನಾದಂ॥ (೬೪)

ಆತಂ ಪ್ರತಿಜ್ಞಾತಿಶಯೋ।
ಪೇತಂ ಭಿಕ್ಷುಪ್ರಧಾನ ವೃತ್ತಿಯನಾಂತಂ॥
ಭೂತಳದೊಳ್ ಸಲೆ ನೆಗಳ್ದು ಪ।
ರೇತ ವಿಭೂದ್ಭಟ ನಿಶಾಟಖಾದಿತನಾದಂ॥ (೬೫)

ವ॥ ಅಂತು ಸಂಪ್ರಾಪ್ತಮರಣಂ ಮುಂ ಪೇಳ್ದ ಮಾಹೇಂದ್ರಕಲ್ಪದೊಳ್ ನಿಳಿಂಪನಾಗಿ ಜನಿಯಿಸಿ ನಿಯತಾಯುರವಸಾನಂಬರಂ ದಿವ್ಯಸುಖಮನನುಭವಿಸಿ ಪರಿತ್ಯಕ್ತಸುರಶರೀರನಾಗಿ—

ಕಂ॥ ಮಗಧಾಹ್ವಯ ವಿಷಯದ ರಾ।
ಜಗೃಹದ ವಿಭು ವಿಶ್ವಭೂತಿಗಂ ಜೈನಿಗಮಾ॥
ಸೊಗಯಿಪ ಮಾಹೇಂದ್ರನೆ ನೀಂ।
ಮಗನಾದೈ ವಿಶ್ವನಂದಿವೆಸರೆಸೆವಿನೆಗಂ॥ (೬೬)

ಆ ವಿಶ್ವನಂದಿಯುಂ ಜಿನ।
ಪಾವನ ದೀಕ್ಷೆಯನೆ ತಳೆದು ನಡೆದೊಡಲಂ ಬಿ॥
ಟ್ಟಾವಗಮೆಸೆವ ಶತಾರಾ।
ಖ್ಯಾವಹ ದಿವದೊಳ್ ತೊಳಪ್ಪ ಸುರವರನಾದೈ॥ (೬೭)

ವ॥ ಅಂತು ಕಂತುಕಾಂತ ಕಾಯನಪ್ಪ ಸಾಮಾನಿಕಾಮರನಾಗಿ ರಾಗದಿಂ ದಿವ್ಯಕಾಂತಾಕದಂಬದೊಡನೆ ತತ್ಕಲ್ಪಾನಲ್ಪ ಸುಖಸುಧಾರಸಮನಾಯುರವಸಾನಂಬರಂ ಪೀರ್ದು ಬಂದು—

ಕಂ॥ ಭಾಸುರಸುರಮ್ಯ ವಿಷಯ ವಿ।
ಳಾಸಿನಿಗೆ ಮೊಗಂಬೊಲಿರ್ಪ ಪೌದನಪುರದೊಳ್॥
ವಾಸವ ವಿಳಾಸಿ ರಿಪುಸಂ॥
ತ್ರಾಸಿ ದಲೆಸೆದಂ ಪ್ರಜಾಪತಿ ಕ್ಷಿತಿಪಾಳಂ॥ (೬೮)

ವ॥ ಆ ಮಹಾಮಂಡಲೇಶ್ವರಂಗಂ ತನ್ಮಾನಸಮರಾಳಿಕೆ ಮೃಗಾವತೀದೇವಿಗಂ ತ್ರಿಪಿಷ್ಟನೆಂಬ ನಾಮಧೇಯಮನಾಂತು ಮೊದಲ ವಾಸುದೇವನಾಗಿ ಪುಟ್ಟಿ ನೆಟ್ಟನೆ ರೂಢಿವಡೆದು ವರ್ತಿಸುತ್ತುಮಿರ್ದು ನಿನ್ನ ವಲ್ಲಭೆಗಳಿಪಿ ಮೇಲೆತ್ತಿಬಂದ ವಿಶಾಖನಂದಿಚರನುಂ, ವಿದ್ಯಾಧರ ಚಕ್ರಧರನುಮಪ್ಪಶ್ವಗ್ರೀವನಂ ಪ್ರತಿವಾಸುದೇವನಂ ಕೊಂದು—

ಕಂ॥ ಅಳವಟ್ಟ ಪಿರಿಯ ಸಿರಿ ನ।
ಲ್ಲಳ ನಡೆವಳಿಯೊಳ್ಪು ದೇಹದ ರುಜತೆ ಮುದಮಂ॥
ಬಳಯಿಪ ಸದ್ಗೋಷ್ಠಿ ಮನಂ।
ಗೊಳುತಿರೆ ಪಲಕಾಲಮರಸುಗೆಯ್ಯುತ್ತಿರ್ದೈ॥ (೬೯)

ಒದವಿದ ಭಾಗ್ಯದ ಸೌಭಾ।
ಗ್ಯದೋಪಳುಂ ನೀನುಮೊರ್ಮೆ ನಿಜಪುಣ್ಯ ಫಳ॥
ಕ್ಕಿದೆ ಸೀಮೆಯೆನಿಪ ಸಂಭೋ।
ಗದ ರಾಗದ ಪರಮಕೋಟಿಗೆಯ್ದಿದ ದೆವಸಂ॥ (೭೦)

ಮ॥ ಸ್ಮರರಾಗಾಸವಧಾರೆವೋಲ್ ನಿಜರವಾಪಾಂಗಾಂಶುಗಳ್ ಸೋರ್ಕಿಸು ।
ತ್ತಿರೆ ನಿನ್ನಂ ಕಡುಸೋಲ್ತು ತದ್ರುಮಣಿಯಂ ನೋಡುತ್ತುಮಿಂತೀಮನೋ ॥
ಹರಿಯಂ ತಾನುಪಭೋಗಿಸಲ್ ಬಯಸಿದಂ ಕಾಮಾಂಧನೆಂದಶ್ವಕಂ ।
ಧರನಂ ಕರ್ಮವಿಪಾಕದಿಂ ನೆನೆದು ಮತ್ತಂ ಕ್ರೋಧಮಂ ತಾಳ್ದಿದೈ ॥ (೭೧)

ವ॥ ಅಂತು ತಾಳ್ದಿ—

ಕಂ॥ ನೆರೆದಾಸ್ಥಾನದ ನಡುವಣ ।
ಹರಿಪೀಠದೊಳೇಕವೆರಸು ಕುಳ್ಳಿರ್ದಿದಿರೊಳ್ ॥
ಪರಿಭವಿಸಿ ನೋಡಿ ದಂಡಿಸು ।
ತಿರದತಿವೇಗದೊಳೆ ಕೆಮ್ಮನವನಂ ಕೊಂದೆಂ ॥ (೭೨)

ವ॥ ಎಂದು ಬಗೆಯುತ್ತುಂ ಶಯ್ಯಾತಳದೊಳಿರ್ದಲ್ಲಿ—

ಕಂ॥ ಪರನೃಪಕುಳಾಂತಕಂ ವೀ ।
ರರಸಾರ್ಣವನೆಂದು ಕೇಳ್ದಧೋಗತಿ ನಿನಗೊ ॥
ಲ್ದಿರೆದಟ್ಟಿದ ದೂದವಿವೋಲ್ ।
ಬರೆಮೆಲ್ಲನೆ ನಿದ್ರೆ ಸಪ್ತಮಾವನಿಗಿೞಿದೈ ॥ (೭೩)
ಆನರಕ ವಿಷಧಿಯಿಂದೆಂ ।
ತಾನುಂ ಪೊಱಮಟ್ಟು ಸಿಂಹನಾದೈ ಮತ್ತಂ ॥
ನಾನಾಮೃಗಂಗಳಂ ಹಿಂ ।
ಸಾನಂದದಿನೞಿದು ಮೊದಲ ನರಕಕ್ಕಿೞಿದೈ ॥ (೭೪)

ಅಲ್ಲಿಯ ಜನ್ಮಕ್ಲೇಶಮ ।
ನಲ್ಲಿಯ ನಾರಕರ ರೌದ್ರ ಪರಿಣಾಮಮನಂ ॥
ತಲ್ಲಿಯ ದುರಂತ ದುಃಖಮ ।
ನಿಲ್ಲಿರ್ದವಧರಿಪೊಡಂ ಭಯಂಕರಮಲ್ತೇ ॥ (೭೫)

ನರಕದ ತಿರ್ಯಗ್ಲೋಕದ ।
ಸುರನಿಳಯದ ತೆಱನನಾವಗಂ ಪೇೞ್ವತಿವಿ ॥
ಸ್ತರ ಪರಮ ಜಿನಾಗಮದೊಳ್ ।
ಪರಿಚಯಮುಳ್ಳುದಱಿನೆಮಗದನಿತುಂ ವಿದಿತಂ ॥ (೭೬)

ವ॥ ಅದಲ್ಲದೆಯುಮಿಂದು ಧರ್ಮಾನುರಾಗದಿಂ ಪೋಗಿ—

ಕಂ॥ ಪರಮೇಶ್ವರನಂ ಪ್ರಣುತಾ ।
ಮರೇಂದ್ರ ದನುಜೇಂದ್ರ ದಿವ್ಯಯೋಗೀಂದ್ರ ಸಭಾ ॥
ಪರಿವೇಷ್ಟಿತ ಮಣಿಮಯವಿ ।
ಷ್ಟರದೊಳ್ ನೆಲಸಿರ್ದ ಭವ್ಯಚಿಂತಾಮಣಿಯಂ ॥ (೭೭)

ಕಮಳಾಧರ ಜಿನಪತಿಯಂ ।
ಸಮಸ್ತ ಘಾತಿಪ್ರಪಂಚ ವಿಧ್ವಂಸಕನಂ ॥
ವಿಮಳಾನಂತ ಚತುಷ್ಟಯ ।
ಸಮೃದ್ಧನಂ ಶಾಂತರಸಸುಧಾಂಭೋನಿಧಿಯಂ ॥ (೭೮)

ವ॥ ಕಂಡು ಬಲಗೊಂಡು ಪಲವುಸೂೞ್ ಪೊಡವಟ್ಟು—

ಕಂ॥ ತನ್ನಿದಿರೊಳ್ ಮಿಥ್ಯಾತನು ।
ಮಂ ನಿಲಲೀಯದ ತದೀಯ ಮುಖಚಂದ್ರ ಶ್ರೀ ॥
ಯಂ ನೋಡಿ ರಾಗದಿಂ ಮು ।
ತ್ತಂ ನಲಿದಡಿಗಡಿಗೆ ಭಕ್ತಿಯಿಂ ಪೊಡವಡುತುಂ ॥ (೭೯)

ಜಿನತನುರುಚಿ ಚಂದ್ರಿಕೆಯೊಳ್ ।
ಜಿನೇಂದ್ರ ವಾಕ್ಯಾಮೃತಾಂಬುನಿಧಿಯೊಳ್ ಕಣ್ಣುಂ ॥
ಮನಮುಮುವಗಾಹಮಿರೆ ತ ।
ಣ್ಣನೆ ತಣಿಯುತ್ತಿರ್ದಮಿರ್ಪುದುಂ ತತ್ಸಭೆಯೊಳ್ ॥ (೮೦)

ವ॥ ಆಸರ್ವಜ್ಞಂಗೆ ಕೆಲರ್ ಕೆಯ್ಗಳಂ ಮುಗಿದು—

ಕಂ॥ ನಿರವದ್ಯಬೋಧ ಮಹಿಮಾ ।
ಕರ ಭರತದ ಭಾವಿ ಚರಮ ತೀರ್ಥಕರತ್ವಂ ॥
ದೊರೆಕೊಳ್ಗುಮೆಂಬ ರೂಢಿಯ ।
ಮರೀಚಿ ಬಹಿರಾತ್ಮನೀಗಳೆಂತಾಗಿರ್ದಂ ॥ (೮೧)

ಉ॥ ಎಂದನುರಾಗದಿಂದೆ ಬೆಸಕೊಳ್ವುದುಮಾವಿಳಸಜ್ಜನೇಂದು ನೀ ।
ನಿಂದೆಸೆವೀನಗೇಂದ್ರದೊಳಿಭೇಂದ್ರ ಕುಳಾಂತಕನಾಗಿ ವರ್ತಿಪೊಂ ॥
ದಂದಮುಮಂ ಮಹಾನರಕ ದುಸ್ಸಹ ದುಃಖಮನುಂಡು ನಾಡೆಯುಂ ।
ಬಂದುದುಮಂ ಬಲಂ ಬೆಸಸಿದಂ ನಿಸದಂ ವಸುಧೈಕಬಾಂಧವಂ ॥ (೮೨)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ ಖ್ಯಾತಜಿನಸಮಯ ಕಮಳನೀ ಕಳಹಂಸಾಯಮಾನ ಮಾನಿತ ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾನಂದ ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ ಶ್ರೀವರ್ಧಮಾನ ಪುರಾಣದೊಳ್ ಚಾರಣಮುನಿ ರಾಜಗಮನ ಮೃಗರಾಜ ಭವಾವಳಿ ವರ್ಣನಂ ದಶಮಾಶ್ವಾಸಂ.

ಏಕಾದಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಶ್ರೀ ಕಮಳಾಧರ ದಿವ್ಯರ ।
ವಾಕರ್ಣನಮಂತರಂಗ ಕಮಳಾಕರಮಂ ॥
ವ್ಯಾಕೋಚಿಸೆ ನಲಿದುದು ಸಭೆ ।
ಸಾಕಲ್ಯದೆ ಪಂಚಪರಮಗುರುಪದವಿನತಂ ॥ (೧)

ವ॥ ಮತ್ತಂ ನೀನೆಯ್ದೆವಂದ ನರಕಲೋಕಪ್ರಪಂಚಮಂ ದುಷ್ಪರಿಣಾಮ ಫಳಪ್ರಬೋಧನಾರ್ಥಂ ಭವ್ಯಸಭೆಗೆ ಬೆಸಸುವುದುಂ ಕೇಳ್ದು ಬಂದೆವದೆಂತೆಂದೊಡೀ ಮಹೀತಳದ ಕೆಳಗಣ ಭವನವ್ಯಂತರನಿವಾಸಾಧಃಸ್ಥಿತ ಪ್ರಥಮನರಕದಿಂ ಮೊದಲ್ಗೊಂಡು—

ಕಂ॥ ಒಂದೊಂದು ರಜ್ಜುವಿಂ ಕೆಳ ।
ಗೊಂದೊಂದಿರ್ದಪುವು ನಾರಕರ ಪಾಪರಜಂ ॥
ಮುಂದಯ್ತು ಬಲಿದು ನೆಲನಾ ।
ದಂದದೆ ದುಸ್ಪರ್ಶವಿಷಮ ನರಕಾವನಿಗಳ್ ॥ (೨)

ವ॥ ಆಭೂಮಿಗಳಿಂದ್ರಗೋಪಾದಿ ನಾಮದಂತನಾದಿ ಸಿದ್ಧಂಗಳಪ್ಪ ರತ್ನಪ್ರಭಾದಿ ನಾಮಂಗಳಂ ತಾಳ್ದುವವಱೊಳ್—

ಕಂ॥ ಅಗೆ ಮೂಡುವಂದದಿಂ ತೆ ।
ರ್ಕೆಗೊಂಡು ಕಿಱುವೊನೆಯ ಸೆಲೆಗಳಿಡಿಕಿಱಿದಿರೆ ನೆ ॥
ಟ್ಟಗೆ ಪಾಱದಗೆಯು ನೆಲೆವಡ ।
ಲಗೆಗಳವೆನಿಸುವುವು ನರಕ ಬಿಲಪಟಲಂಗಳ್ ॥ (೩)

ವ॥ ಅವೆಲ್ಲಂ ನಾಲ್ವತ್ತೊಂಬತ್ತು ಪಟಲಮಕ್ಕುಂ. ಅಲ್ಲಿ ರತ್ನಪ್ರಭೆಯ ಪದಿಮೂಱು ಪಟಲದೊಳಂ ಮೂವತ್ತು ಲಕ್ಕೆ, ಶರ್ಕರಾಪ್ರಭೆಯ ಪನ್ನೊಂದು ಪಟಲದೊಳಮಿಪ್ಪತ್ತಯ್ದು ಲಕ್ಕೆ, ವಾಳುಕಾಪ್ರಭೆಯ ನವಪಟಲದೊಳಂ ಪದಿನೈದು ಲಕ್ಕೆ ಪಂಕಪ್ರಭೆಯ ಪಟಲ ಸಪ್ತಕದೊಳಂ ಪತ್ತುಲಕ್ಕೆ, ಧೂಮಪ್ರಭೆಯಯ್ದು ಪಟಲದೊಳಂ ಮೂಱು ಲಕ್ಕೆ, ತಮಃಪ್ರಭೆಯ ಮೂಱು ಪಟಲದೊಳಮಯ್ದುಗುಂದಿದೊಂದು ಲಕ್ಕೆ, ಮಹಾತಮಃಪ್ರಭೆಯೊಂದು ಪಟಲದೊಳಮಯ್ದು ಬಿಲಂಗಳಕ್ಕುಂ. ಅವೆಲ್ಲಂ ಇಂದ್ರಕ ಶ್ರೇಣೀಬದ್ಧ ಪ್ರಕೀರ್ಣಕವಿಕಳ್ಪದಿಂ ತ್ರಿವಿಧಮಾಗಿರ್ಪುವು. ಅವಱಗಲಂಗಳಸಂಖ್ಯಾತ

ಯೋಜನಂಗಳ್. ಕೆಲವು ಸಂಖ್ಯಾತಯೋಜನಂಗಳ್. ಪಟಳಮಧ್ಯದೊಳಿಂದ್ರಕಂಗಳಿರ್ಪುವು, ಅವಱೆಣ್ದೆಸೆಯೊಳಂ ತರತರದಿಂ ಶ್ರೇಣೀಬದ್ಧಂಗಳಿರ್ಪುವು. ಅವಱೆಡೆಯೆಡೆಯೊಳ್ ಪೂವಲಿಗೆದಱಿದಂದದಿಂ ಪ್ರಕೀರ್ಣಕಂಗಳಿರ್ಪುವು. ರತ್ನಪ್ರಭೆಯಿಂದಂ ಧೂಮಪ್ರಭಾತ್ರಿಚರಣ ಭಾಗಂಬರಮಿರ್ದ ಬಿಲಂಗಳೊಳಗೆ ಮಂದರಮಹೀಧರಪ್ರಮಾಣದಾಲಿಗೋಡುವ ಲೋಹಪಿಂಡಮಂ ಕೊಂಡೊಯ್ದಿತ್ತಾನುಮಿೞಿಪಿದೊಡವಾಕ್ಷಣದೊಳೆ ಕರಗಿಸಲಾರ್ಪ ಘರ್ಮಮೊರ್ಮೆ ಮಾಣದೆ ಧಗದ್ಧಗಿಸುತ್ತುಮಿರ್ಪುದಲ್ಲಿಂದತ್ತ ಮಹಾತಮಃಪ್ರಭೆವರಮಿರ್ದ ಬಿಲಂಗಳೊಳಗೆ ತದ್ಗಿರೀಂದ್ರ ಸದೃಶಮಪ್ಪ ಕಡುಗಾಯ್ದು ಕೆಂಗಲಿಸಿದ ಲೋಹದಬಟ್ಟನುಯ್ದಿೞಿಪಲೊಡಂ ನೆಲನನೆಯ್ದೆ ಮುಟ್ಟದ ಮುನ್ನಂ ಮುಱಿಂಟಿಸಲಾರ್ಪ ಹಿಮಮೆಂದುಂ ಕುಂದದತ್ಯದ್ಭುತಮಾಗಿರ್ಕುಮಂತನಿತು ಬಿಲಂಗಳೊಳವಱಮೇಗಣಟ್ಟುಗಳೊಳ್—

ಕಂ॥ ತಲೆಕೆಳಗಾಗಿರ್ಪುವು ಬಾ ।
ವಲಂತೆ ಬೀಭತ್ಸ ಕುತ್ಸಿತಾಕಾರಂಗಳ್ ॥
ಮಲಿನಂಗಳ್ ನಿಜಮುಖ ನಿ ।
ರ್ಗಲಿತ ಮಹಾಪೂತಿಗಂಧಭರಿತಾವನಿಗಳ್ ॥ (೪)

ಖರಜಂಬುಕೋಷ್ಟ್ರ ವೃಕಸೂ ।
ಕರ ಶುನಕ ಚಮೂರ ವಾನರಾದ್ಯಾನನದೊಳ್ ॥
ದೊರೆಯೆನಿಪಾಕೃತಿಗಳ ದು ।
ಸ್ತರ ಯೋನಿಮುಖಂಗಳೆಯ್ದೆ ಸಂಛನ್ನಂಗಳ್ ॥ (೫)

ಅವು ವಿಷದುರುಳಿಗಳಂ ಕಾ ।
ಱುವಂದದಿಂ ಧರೆಗೆ ತಮುಮನುಗುೞ್ವಂದದಿನಿ ॥
ರ್ಪುವು ನವನಾರಕತತಿಮುಖ ।
ವಿವರಂಗಳನಿೞಿದು ಬೀೞುತಿರ್ಪವಸರದೊಳ್ ॥ (೬)

ದಾರುಣಲೇಶ್ಯೆಗಳಿಂ ಬ ।
ಹ್ವಾರಂಭ ಪರಿಗ್ರಹತ್ವದಿಂದೊದವಿದ ದು ॥
ರ್ವಾರ ದುರಿತಪ್ರಭಾವಂ ।
ಘೋರ ಮಹಾನರಕಯೋನಿಯೊಳ್ ಪುಟ್ಟಿಸುಗುಂ ॥ (೭)

ಅತಿರೌದ್ರರಾಜಿಲೋಲರ್ ।
ಗತಧರ್ಮ ದಯಾಗುಣರ್ ಸದಾವೈರಸಮ ॥
ನ್ವಿತರಾರ್ಗಮೆಱಗದತ್ಯು ।
ದ್ಧತರೆನಿಪ ದುರಾತ್ಮರುಗ್ರನರಕದೊಳಾೞ್ಗುಂ ॥ (೮)

ಎನಿತು ಧನಲಾಭಮಾದೊಡ ।
ಮನವರತಂ ಮನದ ಬಡತನಂ ಪೋಗದೆ ಕೆ ॥
ಮ್ಮನೆ ಕುದಿವ ತೀವ್ರತೃಷ್ಣೆಯ ।
ಮನುಜರ್ ವೈತರಣಿಯೊಳಗೆ ಪುಗುವರವಶ್ಯಂ ॥ (೯)

ಕನಸಿನೊಳಮಳಿಪಲಾಗದು ।
ಮುನಿದಂಗಂ ಮುನಿಯಲಾಗದೆಂಬಾರ್ಹತಮಂ ॥
ಜನಹಿತಮಂ ದುರ್ವ್ಯಸನಿಗ ।
ಳೆನಸುಂ ಸೈರಿಸದೆ ಪೞಿದಧೋಗತಿಗಿೞಿಗುಂ ॥ (೧೦)

ಬ್ರತಗುಣ ಚಾರಿತ್ರಯಶೋ ।
ಲತೆಗಳನೊರ್ಮೊದಲೆ ಸುಡುವ ದಾವಾಗ್ನಿಯೆನಿ ॥
ಪ್ಪತಿಪಾತಕಮನ್ಯಸ್ತ್ರೀ ।
ರತಿಲೋಲತೆ ನರಕಗತಿಯ ಪೆರ್ವಟ್ಟೆ ವಲಂ ॥ (೧೧)

ಪೆಱರಂ ಪೞಿದುತ್ಸಾಹಿಪ ।
ಪೆಱರಂ ಪರಿಭವಿಸಿ ಸುಖಮನೆಯ್ದುವ ಮನದೊಳ್ ॥
ಪೆಱರುನ್ನತಿಯಂ ಸೈರಿಸ ।
ದಱುಗುಲಿಗಳ್ ನರಕದುಃಖಭಾಜನರಪ್ಪರ್ ॥ (೧೨)

ಮ॥ ಸಮಸಂದಿಂದ್ರಿಯ ದರ್ಪದಿಂ ಪ್ರಬಳಮೋಹಾವೇಶದಿಂ ಕ್ರೂರಭಾ ।
ವಮನೆಯ್ದಿತ್ತುಮಸಂಜ್ಞಿಗಳ್ ಸರಿಸೃಪಂಗಳ್ ಪಕ್ಷಿಜಾಳಂ ಭುಜಂ ॥
ಗಮಯೂರಂ ಗಜವೈರಿಗಳ್ ವನಿತೆಯರ್ಕಳ್ ಮರ್ತ್ಯ ಮತ್ಸ್ಯೋತ್ಕರಂ ।
ಕ್ರಮದಿಂ ಪುಟ್ಟುಗುಮಾದ್ಯ ಭೂಮಿಯಿನಧೋಧೋಭೂಮಿಸೀಮಂಬರಂ ॥ (೧೩)

ಕಂ॥ ಮದದಿಂ ಮೆಯ್ಯಱಿಯದೆ ಮಾ ।
ಣದಿಲ್ಲಿ ದುರ್ವಿಷಯ ಸುಖಮನನುಭವಿಸಿದವರ್ ॥
ಮದಮುಡಿಗಿ ನಡುಗುತುಂ ನರ ॥
ಕದೊಳೆಯ್ದುವ ದುಃಖಕೋಟಿಗಳ್ ವಿಷಮಂಗಳ್ ॥ (೧೪)

ವ॥ ಅದೆಂತೆನೆ

ಕಂ॥ ಮೊದಲಚ್ವಿಗಮನದೇವೇ ।
ಚ್ವಿದೊ ಗರ್ದುಗಿನ ಕಾಯಸೊಳಗು ಪೊಱಗಾಗಿ ಮಗು ॥
ಟ್ಬಿದ ತೆಱದಿನಿರ್ದ ದುಸ್ಸ ।
ರ್ಶದ ಯೋನಿಗಳೊಳಗೆ ನೆಲಸುವ್ರವು ಜೀವಂಗಳ್ ॥ (೧೫)

ವ॥ ಅಂತು ನೆಲಸಿದಂತರ್ಮುಹೂರ್ತದೊಳ್ ಆಹಾರಶರೀರೇಂದ್ರಿಯೋಚ್ಛ್ವಾಸ ಭಾಷಾಮನಃ ಪರ್ಯಾಪ್ತಿಗಳ್ ನೆಱಕಿವುದುಂ, ರೋಮರೋಮಂದಪ್ಪದೆ ಸರ್ವಾಂಗ

ಮಂ ವೃಶ್ಚಿಕಸಹಸ್ರಂಗಳೊಡನೆ ಮಿಡಿದಂತಪ್ಪ ಬೇನೆಗಮನಂತಗುಣಮೆನಿಪ ದೇಹವ್ಯಥೆಯನೊದಪಿಸುತ್ತುಂ ಉದಯಿಸುವ ಹಾಳಾಹಳಸಮಾನ ತೀವ್ರಾಸುಭಾಗದ ದುರಿತಭಾರದಿಂ ಬೀೞ್ವಂತೆ ದೊಕ್ಕನೆ ಬಿೞ್ದು ಗಗನಾಗ್ರದಿಂ ಶಿಲಾತಳದೊಳ್ ಬಿೞ್ದಲೋಹದ ಗುಂಡಿನಂತೆ ಪುಟನೆಗೆದು, ಪಲಸಿನಪಣ್ಣನನುಕರಿಪ ಮೊನೆದುಱುಗಲ ವಜ್ರದಶಿಲೆಯೊಳಪ್ಪಳಿಸಿ ಮಗುೞ್ಚಿ ಬಿರ್ದು ಜರ್ಜರಿತ ಗಾತ್ರರಾಗಿ ಬಾಯಬಿಟ್ಟೊಳಱಿ ಪೊರಳುತ್ತುಮೆೞ್ದು ನಿಂದಿರ್ದು ದೆಸೆಗಳಂ ನೋೞ್ಪಾಗಳ್—

ಕಂ॥ ಪೊಡೆವ ಬಱಸಿಡಿಲ ತೆಱದಿಂ ।
ಕಡಂಗಿ ಗರ್ಜಿಪ ಪುರಾಣ ನಾರಕನಿವಹಂ ॥
ತಡೆಯದೆ ನುಂಗುವವೊಲ್ ಕ ।
ಣ್ಗೆಡಿಯಂ ಕಂಡಮುಮನುಗುೞ್ಚಿ ಮುಳಿದೀಕ್ಷಿಸುತುಂ ॥ (೧೬)

ಪರಿತಂದು ಗಂಟಲಂ ಮುರಿ ।
ಮುರಿ ಸೀೞ್ ಸೀೞಿಂಬ ನುಡಿಗೆ ಭಯದಿಂ ನಡುಗು ॥
ತ್ತಿರೆಯಿರೆ ಮನದೊಳ್ ದಿಗಿಲೆಂ ।
ದುರಿ ನೆಗೆವವೊಲುದಯಿಕುಂ ವಿಭಂಗಜ್ಞಾನಂ ॥ (೧೭)

ವ॥ ಅಂತು ತಮಗಂ ಪೆಱರ್ಗಂ ದುರಂತ ಸಂತಾಪನಿಮಿತ್ತಮಾಗೆ ಪುಟ್ಟಿದ ವಿಭಂಗಜ್ಞಾನದಿಂ ನರಕಲೋಕ ವೃತ್ತಾಂತಮನಱಿದು—

ಮ॥ ಜಿನಧರ್ಮಕ್ಕೆ ದಯಾರಸಾಬ್ಧಿಗೆ ವೃಥಾ ವಿದ್ವೇಷಮಂ ಮಾೞ್ಪ ಮು ।
ನ್ನಿನ ದುರ್ಭಾವದಿನಾದ ಪಾಪದ ಫಲಂ ನಿಷ್ಕಾರಣಂ ದ್ವೇಷದು ॥
ರ್ದಿನಮಂ ನಾರಕಕೋಟಿಯೊಳ್ ಪಡೆವುದುಂ ನಾಯ್ ನಾಯ್ಗಳೊಳ್ ಪೋರ್ವ
ವೋಲ್ ।
ಮುನಿಪಾರ್ಪೂರ್ವರನೊರ್ವರೆಯ್ದೆ ಕಡಿಖಂಡಂ ಮಾಡುತುಂ ದಂಡಿಪರ್ ॥ ೧೮ ॥

ವ॥ ಅದಲ್ಲದೆಯುಂ—

ಕಂ॥ ಉರಿವನಳಂಗಾಜ್ಯಾಹುತಿ ।
ದೊರೆಕೊಂಡವೊಲುಂತೆ ತಮ್ಮೊಳೞಿವವರ್ಗಸುರಾ ॥
ಮರಸಮಿತಿ ಪೂರ್ವವೈರ ।
ಸ್ಮರಣಮನೆೞ್ಚಱಿಸೆ ಕೋಪಶಿಖಿ ಪಳ್ಳಸುಗುಂ ॥ (೧೯)

ವ॥ ಮತ್ತಂ ಕೞ್ತಲಿಸುವ ರಾತ್ರಿಯೊಳ್ ಕಾಣ್ಬ ಗೂಗೆಗಳಂತೆ ವಿಭಂಗಜ್ಞಾನದಿನವರವರ ಪೂರ್ವಭವದೋಷಾವಿದ್ಧಮಪ್ಪ ಚೇಷ್ಟೆಗಳನಱಿವುತ್ತುಂ ತಮ್ಮ ದೋಷಮಂ ತಾವೆಣಿಸದೆ ಕಳ್ಳರ್ ಕಳ್ಳರಂ ಪಾಂಬರ್ ಪಾಂಬರಂ ಮುನಿದು ಮೂದಲಿಸುವಂತೆ ಮೂದಲಿಸುತ್ತುಂ—

ಕಂ॥ ಇವಱಿಂದಿವು ಸವಿಯೆನುತುಂ ।
ಸವಿನೋೞ್ಪ ಪಲವು ತೇಱದ ಮೃಗದಡಗನಿವಾ ॥
ವುವು ಸವಿ ಪೇೞನುತವ ।
ನವಯುವಂಗಳಂ ಕೊಯ್ದು ಗಿಡಿವರವನಾನನದೊಳ್ ॥ (೨೦)

ಮೊಱೆಯುೞಿವ ಮದ್ಯಪಾನಮು ।
ನೆಱನೆಂದುಂ ಮಧುವನಂಟು ತಲೆಯೊಳ್ ತಳಿಯಿ ॥
ಪ್ಪಱಗುಲಿಗಳ ತಲೆಯಿಂದಿೞಿ ।
ಯೆಱೆವರ್ ತಳ್ತಳಿಸಿ ಕುದಿವ ಲೋಹದ್ರವಮಂ ॥ (೨೧)

ಎಲವೆಲವೋ ನೀನಗಲ್ದೊಡೆ ।
ನಿಲಲಾಱದ ಪಾಂಬೆ ಬಂದಳೀಯಿರ್ದಳೆ ಬಾ ॥
ನಲಿದು ನೆರೆಯೆಂದು ಕಡುಗಾ ।
ಯ್ದ ಲೋಹಪುತ್ರಿಕೆಯನಾಗ್ರಹದಿನಪ್ಪಿಸುವರ್ ॥ (೨೨)

ವ॥ ಅಂತಪ್ಪಿಸುವುದುಂ ಮೆಯ್ ಬೇಯೆ ಕುದಿದು ನೊರೆಗೊಂಡು ರಸರುಧಿರ ಬಿಂಮುಗಳುಚ್ಚಳಿಸೆ ಮುನ್ನಂ ಪರಕಾಂತಾರತರೇಕಾಂತದೊಳ್ ಘರ್ಮಬಿಂದುಗಳೊಗೆಯೇ ಹರ್ಮ್ಯದಂಬೋಗಿರ್ಪುದನನುಕರಿಸುವಂತೆ ಮುಚ್ಚಿವೋಗಿ ಕಿಱಿದುಬೇಗದಿ ನೆಟ್ಟಿತ್ತು ಸಂತಾಪದಿಂ ನೀರಡಸಿ ನಿಲಲಾಱದೆ ದೆಸೆದೆಸೆಗಳನಾರಯ್ದು ನೋೞ್ಪಾಗಳ್—

ಕಂ॥ ಪೆಱರಂ ಮಱುಗಿಪ ತಾಮುಂ ।
ಮಱುಗುವ ಕಷ್ಟರ ಕಷಾಯ ಕಾಲುಷ್ಯಮದೀ ॥
ತೆಱನೆಂದು ಪೇೞ್ವವೋಲ್ ಸು ।
ತ್ತಿಱಿದುಲಿಗುಂ ಕುದಿದು ಪರಿಯುತುಂ ವಿಷನದಿಗಳ್ ॥ (೨೩)

ವ॥ ಅದಲ್ಲದೆಯುಂ, ಕುತ್ಸಿತ ವಿಷಯಸೇವೆಯಿಂ ಮಧ್ಯಲೋಕವರ್ತಿಗಳ ಚೈತನ್ಯದೊಳಾದ ನಾನಾವರ್ಣ ಕುಷ್ಟರೋಗಂಗಳೆನಿಸುವತ್ಯಶುಭಂಗಳಪ್ಪ ವೀರಭೀಭತ್ಸಹಾಸ್ಯ ರೌದ್ರಭಯಾನಕಾದ್ಭುತ ರಸಂಗಳುಂ, ಜಾರಾಂಗನಾ ಸಂಭೋಗ ವಿಪ್ರಲಂಭ ಶೃಂಗಾರ ರಸಂಗಳುಂ, ಅತ್ಯುತ್ಕಟಂಗಳಾಗೆ ಪೊಱಪಾಯ್ದು ಪೊನಲ್ವರಿದು ನೀಚಗತಿ ಪರಿಣತಂಗಳಾಗಿ ನರಕಭೂಮಿಗವತರಿಸಿ ಕಾೞ್ಪುರಂ ಮಸಗಿದಂತಿರ್ದ ಜಳಚರವಿದಾರಿತ ನಾರಕಶರೀರ ಧಾತು ಸಮ್ಮಿಶ್ರಿತ ನಾನಾವರ್ಣ ವಿಷಜಳಪ್ರವಾಹದ ವೈತರಣಿಯಂ ಕಂಡು ನೀರ್ಗುಡಿಯಲೆಂದು ಪೋಗಿ—

ಕಂ॥ ಪುಗಲೊಡಮಲ್ಲಿಯ ಮಕರಾ ।
ಳಿಗಳುಗಿಬಗಿಮಾೞ್ಕುಮಾಸೆಯಿಂ ವಿಷಜಳಮಂ ॥
ಮೊಗೆದು ಕುಡಿಯಲೊಡಮೆರ್ದೆ ಕರ ।
ಗುಗುಮುರಿದಾಯ್ತೆಂದು ನಾರಕರ್ ಪೇೞುವಿನಂ ॥ (೨೪)

ವ॥ ಮತ್ತಮಾನದಿಯ ತಡಿವಿಡಿದಿರ್ದ ಬನದ ನೆೞಲನಾಸೆವಟ್ಟು ಪೋಪಾಗಳ್—

ಕಂ॥ ಕುಲಟಾ ಯೌವನವನದೊಳ್ ।
ವಿಳಾಸಮಂ ಮೆಱೆದು ಭೋಗಿಪವರ್ಗಳ ಪಾಪಂ ॥
ಫಲಿಯಿಸಿದುದೆನಿಸುಗುಂ ಪೊ ।
ರ್ದಲೊಡಂ ಸೀೞ್ವಱಿವ ಖಂಡಿಪಸಿಪತ್ರವನಂ ॥ (೨೫)

ನನೆಗಣೆ ನಡುಗುಂ ಕಾಮಿಗ ।
ಳೆನೆಂಬ ಮಾತಿಲ್ಲಿ ಪುಸಿ ಪರಸ್ತ್ರೀರತರಂ ॥
ನನೆಯ ಮೊನೆಯಂಬು ಮಲರಲ ।
ಗಿನಂಬುಮಾ ಬನದೊಳುರ್ಚೆ ನೋಯಿಪುದು ದಿಟಂ ॥ (೨೬)

ವ॥ ಅದಲ್ಲದೆಯುಂ—

ಕಂ॥ ಒಳಗೊಳಗೆ ಕಳ್ದರಂ ಪುಸಿ ।
ಗೆಳೆಯಿಂದೊಳಗೊಳಗೆ ಸುೞಿದು ಪರವನಿತಾಸಂ ॥
ಕುಳದೊಳ್ ನೆರೆದರನವರಘ ।
ಮೊಳಗೊಳಗಿಱಿಗುಂ ವಿಚಿತ್ರರೋಗಚ್ಛಲದಿಂ ॥ (೨೭)

ಮ॥ಸ॥ ಜ್ವರದಾಹ ಶ್ವಾಸಕಾಸ ಬ್ರಣಪಿಟಿಕ ಶಿರೋರೋಗ ಸರ್ವಾಂಗಶೂಲಾ ।
ದಿ ರುಜಾಸಂದೋಹಪೀಡಾಭರದಿನೊಳಱುತುಂ ಸುತ್ತಲುಂ ಬೇಸೆಯಿಂದಂ ॥
ಬಿರಿಯುತ್ತುಂ ನಾರಕರ್ಕಳ್ ಬಿರಿಕಿನೆಡೆಗಳಂ ಶಸ್ತ್ರದಿಂ ಸೀೞ್ವುದುಂ ಗೋ ।
ಳ್ಗರೆಯುತ್ತುಂ ಕೂಗಿಡುತ್ತುಂ ಮೊಱೆಯಿಡುತುಮತಿಕ್ಲೇಶದಿಂ ಬರ್ದು
ಕಿರ್ಪರ್ ॥ (೨೮)

ವ॥ ಮತ್ತಮಾ ನಾರಕನಿಕಾಯಕ್ಕೆ—

ಕಂ॥ ಧಾರಿಣಿಯನೆಯ್ದೆ ನುಂಗುವ ।
ವಾರಾಶಿಯನೆಯ್ದೆ ಪೀರ್ವ ತವಕದ ಪಸಿವುಂ ॥
ನೀರೞ್ಕೆಯುಮೆಂದುಂ ಕಿಡ ।
ವೋರೊರ್ಮೆಯುಮನ್ನಪಾನಲವಮುಂ ಪಡೆಯರ್ ॥ (೨೯)

ಪಸಿದು ಅವಲವಿಸೆ ಬಸಿಱಿಂ ।
ಪೊಸೆಯುತ್ತುಂ ಬಿೞ್ದು ನೆಲದ ಮಣ್ಣುಂ ಕಾರ್ವರ್ ॥
ಬಸಮೞಿಯುತಿರ್ಪರವರಾ ।
ರ್ಜಿಸಿದುತ್ಕಟಮಪ್ಪ ಪಾಪಮೇನಿನಿವಿರಿದೋ ॥ (೩೦)

ಆ ವಿಷನ್ಮೃತ್ತಿಕೆಯುಂ ತಂ ।
ದೀವಸುಧೆಯೊಳೆತ್ತಲಾನುಮಿಕ್ಕಿದೊಡೞಿಗುಂ ॥
ಗಾವುವಱಿೞೊಳಗಿರ್ದನಿತುಂ ।
ಸ್ಥಾವರಜಂಗಮುಮೆನಿಪ್ಪ ಜೀವನಿಕಾಯಂ ॥ (೩೧)

ವ॥ ಮತ್ತಮಾದುಃಖಜೀವಿಗಳ್—

ಕಂ॥ ಉದಧಿಗೆಣೆಯೆನಿಸಿದಾಯು ।
ಷ್ಯದ ಕಡೆವರಮೆಯ್ದೆ ಘಟ್ಟಿಗಾಳೆಗದವರಂ ॥
ದದಿನಶುಭಕರ್ಮದಾವೇ ।
ಶದಿನೊರ್ವರನೊರ್ವರಿಱಿದು ನವೆಯುತ್ತಿರ್ಪರ್ ॥ (೩೨)

ನರಕದ ವಿಚಿತ್ರ ದುಃಖೋ ।
ತ್ಕರಮಂ ತಾವುಣುತುಮಿದಿರುಮಂ ಬಾಧಿಸುವರ್ ॥
ಪೊರೆದ ದವಾಗ್ನಿಯಿನಡವಿಯ ।
ಮರಂಗಳುರಿಯುತ್ತುಮೊಂದನೊಂದುರಿಪುವವೋಲ್ ॥ (೩೩)

ಪರಿವಿಡಿಯಿನೊಂದು ಮೂಱು ।
ಯುರಬ್ಧಿ ಬೞಿಕೇೞು ಪತ್ತು ಪದಿನೇೞಿಪ್ಪ ॥
ತ್ತೆರಡಕ್ಕುಮಾಱನೆಯ ಧರೆ ।
ವರೆಗಂ ಮೂವತ್ತುಮೂಱು ಚರಮಾವನಿಯೊಳ್ ॥ (೩೪)

ಮೊದಲವರ ಶರೀರೋದಯ ।
ಮದೇೞು ಬಿಲ್ ನೂಱು ಹಸ್ತಮಾಱಂಗುಲಮುಂ ।
ತದಱಿಂ ದ್ವಿಗುಣ ಕ್ರಮಮು ।
ಪ್ಪುದು ಕಡೆವರಮಲ್ಲಿ ಪಂಚಶತ ಧನುವಕ್ಕುಂ ॥ (೩೫)

ಸೆರೆಗಳ್ ಪರ್ವಿರೆ ತುಱಿಯುಂ ।
ಕೆರಕುಂ ದುಷ್ಟ ಬ್ರಣಂಗಳುಂ ಕುಂದದವಂ ॥
ದಿರ ತನುಗಳ್ ಪಾಪದಫಲ ।
ದ ರಾಶಿಗಳ್ ಲಚ್ಚಿಸಿರ್ದ ತೆಱದಿಂದಿರ್ಕುಂ ॥ (೩೬)

ಮಿದಿಯುದ ಕೊಳೆ ಮಣ್ಣಿಂದಱಿ ।
ಯವವರ್ ಚೆಚ್ಚಮರಮುವಜ್ಞೆಯಿಂ ನೋಡವೆ ಮಾ ॥
ಡಿದ ರೂಪಿನಂತೆ ನೇರ್ಪಿ ।
ಲ್ಲದ ವಿಕಟಾಕೃತಿಯ ಹೂಡಸಂಸ್ಥಾನಂಗಳ್ ॥ (೩೭)

ಒಳಗಣ ದುರ್ಗಂಧಮುದ ।
ಗ್ಗಳಿಸಿರೆ ಮೆಯ್ ತಾನೆ ಪೇಸಿ ಬಹುಮುಖದಿಂದಾ ।
ಗಳುಮುಗುಳ್ವ ಮಾೞ್ಕೆಯಿಂ ಪು ।
ೞ್ಗಳ್ ಬಾಯಿಂ ಪಡಿಕೆನಾರ್ಪರಸಿಗೆಗಳೊಸರ್ಗುಂ ॥ (೩೮)

ಗಱಿ ಕಿತ್ತ ಕೀತಬಾವಲ ।
ತೆಱದಿಂ ಬೀಭತ್ಸಮಪ್ಪುದಲ್ಗಿ ಕೆಲರ್ ಜೀ ।
ಸಱುತುಂ ನೆನೆವರ್ ಮುನ್ನಿನ ।
ಪೆಱರಂಗನೆಯರ್ಗೆ ಮೆಱೆವ ಚೆನ್ನಿಗತನಮಂ ॥ (೩೯)

ಸೀರುಡುವಿನ ಕರಡಿಯ ಮಾ ।
ರ್ಜಾರದ ವಾಯಸದ ದನಿಗಮುತಿ ಕಷ್ಟಂಗಳ್ ॥
ನಾರಕರ ದುಃಸ್ವರಂಗಳ ।
ಘೋರಂಗಳ್ ಕರ್ಣಶೂಲಮಂ ಪುಟ್ಟಿಸುಗುಂ ॥ (೪೦)

ನೆನೆದು ಕೆಲರ್ ಮಱುಗುವರೊಡೆ ।
ದನಿಜಧ್ವನಿ ಭಿನ್ನಕಂಠ ಗರ್ದಭ ಕರಭ ॥
ಧ್ವನಿಗಂ ಕರ್ಕಶಮಾಗಿರೆ ।
ಪನಮೃಗಮಂ ಗೋರಿಗೊಳಿಪ ಮುನ್ನಿನ ದನಿಯುಂ ॥ (೪೧)

ವ॥ ಅದಲ್ಲದೆಯುಂ—

ಕಂ॥ ದಾವಾಗ್ನಿಯನೆಟ್ಟಱಿಪಮ ।
ಹಾವಾಯುವಿನಂತೆ ತಮ್ಮ ಮನದಳಿಪಂ ನಾ ॥
ನಾವಿಧ ದುರಾಗಮೋಕ್ತಿಗ ।
ಳಾವಗಮೆಟ್ಟಱಿಸೆ ಪೂರ್ವ ಜನ್ಮಾಂತರದೊಳ್ ॥ (೪೨)

ವ॥ ಮೞ್ಚದಂತಾಡಿ ದುರಾಚಾರಂ ಪೆಸರ್ಗೊಂಡು ಮೂದಲಿಸುತ್ತುಮಿರೆ ಮುನ್ನ ಮೋರೊರ್ಮೆ ವಿನೋದದಿಂ ಕೇಳ್ದ ಜೈನಾಗಮೋಕ್ತಿಗಳಂ ನೆನೆದು—

ಕಂ॥ ಅಮಮ ಜಿನಮತಮೆ ಸಕಳಾ ॥
ಗಮ ತಿಳಕಮೆ ಜೀವಹಿಂಸೆಯಿಂ ದುರ್ಗತಿಯ ॥
ಕ್ಕುಮಮೋಘಮೆಂಬ ಜಿನವಾ ।
ಕ್ಯಮೆ ದಿಟಮೆಂದೀಗಳಱಿದೆಪೆಂಬರ್ ಕೆಲಬರ್ ॥ (೪೩)

ವ॥ ಮತ್ತಮೋರೊರ್ವರ್—

ಕಂ॥ ಮಱುಭವಮುಳ್ಳುದು ದಿಟಮೆಂ ।
ದಱಿವೊಡಮೀತೆಱದವಸ್ಥೆ ನರಕದೊಳುಂಟೆಂ ॥
ದಱಿವೊಡಮಾಮೃಗಗಣಮುಂ ॥
ತಱಿವೆವೆ ಜೈನಾಗಮೋಕ್ತಿಯಂ ಮೀಱುವೆವೇ ॥ (೪೪)

ಕೊಲೆಯುಂ ಪುಸಿಯುಂ ಕಳವುಂ ।
ಕುಲಟಾರತಿಯುಂ ವಿಮೋಹಮುಂ ಪಾತಕಮೆಂ ॥
ದಲಸದೆ ತ್ರಿಳಿಪುವ ಮುನಿಸಂ ।
ಕುಳಕ್ಕೆ ಕಡುಮುಳಿವ ಪಾಪಿಗೆನಗಿದು ಪಿರಿದೇ ॥ (೪೫)

ಅಂದು ಜಿನಮತದೊಳೆಸಗಿದೊ ।
ಡಿಂದೆನಗೀ ದುಃಖಮಾಗಲಱಿಯದು ಹಿಂಸಾ ॥
ನಂದದ ಕಳ್ಗುಡಿವ ಮೃಷಾ ।
ನಂದದ ದುರ್ಮತದೊಳೆಱಗಿ ನರಕಕ್ಕೈೞಿದೆಂ ॥ (೪೬)

ಎಂದೊರ್ವರೊರ್ವರೀತೆಱ ।
ದಿಂದಂ ನೆನೆದುಂ ಗತಿ ಸ್ವಭಾವದೆ ಮತ್ತಂ ॥
ಕುಂದದೊಗೆವ ಶುಭಲೇಶ್ಯೆಗ ।
ಳಿಂದಂ ಕಡುಮುಳಿದು ತಮ್ಮೊಳಿಱಿಯುತ್ತಿರ್ಪರ್ ॥ (೪೭)

ವ॥ ಅಂತೊರ್ವರನೊರ್ವರ್ ಕರಗಸದಿಂ ಸೀೞ್ವ, ದೂವೆಗಿಚ್ಚಿನೊಳ್ ಪೂೞ್ವ, ಕತ್ತರಿಯಿಂದರಿವ, ಕಾವಲಿಯೊಳಿಕ್ಕಿ ಕರಿವ, ತಿದಿಯುಗಿವ, ಬಸಿಱಂ ಬಗಿವ, ಕರುಳನುರ್ಚುವ, ಕೊಳ್ಳಿಯಂ ಚುರ್ಚುವ, ಬೆರಲೊಳ್ ಸೂಜಿಯಂ ಬೆಟ್ಟುವ, ಪಲ್ಗಳಂ ಕೞಿಲಿ ಕುಟ್ಟುವ, ಗಾಣದೊಳಿಕ್ಕಿ ಪಿೞಿವ, ಕೀಸಿ ಸಾಸಿವೆಯಂ ಬೞಿವ, ತತ್ತೞಿದಱಿವ ಪಲತೆಱದ ದಂಡನೆಗಳುಂ; ನರಕಭೂತಳದತ್ಯದ್ಭುತಂಗಳಪ್ಪ ಮಹಾಶೀತೋಷ್ಣಂಗಳುಂ; ಸ್ಪರ್ಶನೇಂದ್ರಿಯಮಹರ್ನಿಶಂ ಮಿಡಮಿಡಂ ಮಿಡುಕಿಸುತ್ತಿರೆಯುಂ; ಕೋಪದಿಂ ಕಿಡಿಗಿಡಿವೋಗುತ್ತುಮೋರೊರ್ವರನೊರ್ವರ್ ಪಿಡಿದು ಪಿಡಿಖಂಡಂಗೊಯ್ದು ಬಾಯೊಳ್ ಗಿಡಿದು ನಿಗ್ರಹಿಪ ನಾರಕರಾಗ್ರಹಂ ಸಮನಿಸುವ ವಿಷಸದೃಶ ನಿಜನಿಜಶರೀರ ಮಾಂಸ ಭಕ್ಷಣಮುಂ ಲೋಹದ್ರವಕ್ಷಾರವಾರಿಪಾನಮುಂ ರಸನೇಂದ್ರಿಯಮನಾಗಳುಂ ಮಮ್ಮಲಂ ಮಱುಗಿಸುತ್ತಿರೆಯುಂ; ದೆಸೆಗಳೆಲ್ಲಮಂ ಪಡುಕೆಯಿನಿಡಿದಿಡಿದು ತೀವಿದಂತಿರ್ದ ನಾರಕರ ಮೆಯ್ಯ ಪೂತಿಗಂಧಂಗಳುಂ, ಕ್ಷೇತ್ರದುರ್ಗಂಧಂಗಳುಂ ಉಸಿರ ಬೞಿವಿಡಿದೊಳಪೊಗುತ್ತುಂ ಘ್ರಾಣೇಂದ್ರಿಯಮನಡಿಗಡಿಗೆ ಬಿಕ್ಕನೆ ಬಿರಿಯಿಸುತ್ತಿರೆಯುಂ, ಮುಳಿದಿಱಿಯಲೆಂದು ಬರ್ಪ ನಾರಕರ ಭೀಕರಾಕಾರಂಗಳುಂ, ಮೇಲೆಬೀೞ್ವ ಸಿಡಿಲಂತೆ ಬಂದೆಱಗುವ ದುರ್ನಿರೀಕ್ಷ ತೀಕ್ಷ್ಣಾಯುಧಂಗಳ ಪೊಳೆಪುಗಳುಂ ಚಕ್ಷುರಿಂದ್ರಿಯಮನನವರತಮುಗಿಬಗಿ ಮಾಡುತ್ತಿರೆಯುಂ, ಮೇಗೆನೆಗೆವಂತೊಡನೆ ಸಂದಣಿಸಿ ಪೊಣ್ಮುವ ತೀವ್ರ ರುಜಾಕೋಟಿಗಳುಂ, ಪೇೞಲುಂ ಕೇಳಲುಮರಿಯವಪ್ಪತಿಪ್ರಬಳ ಕ್ಷುತ್ಪಿಪಾಸೆಗಳುಂ, ಘೋರಗಣ ಪರಸ್ಪ

ರೋದೀರಿತಕ್ಕೆ ನೆರಮಾಗಿ ಸರ್ವಾಂಗಮನೊಳಗೊಳಗೆ ಬಿಡದಳ್ಳಿಱಿದು ಧಳ್ಳಿಸುತ್ತಿರೆಯುಂ, ಮತ್ತಮೊರ್ವರನೊರ್ವರಿಱಿಯುತ್ತುಂ ಮುನಿದು ತಗುಳುತ್ತುಂ ಭಯದಿನೋಡುತ್ತುಂ ದೇಹವ್ಯಥೆಗಳಿಂದವೊಳಱುತ್ತುಂ ಪುಯ್ಯಲಿಡುತ್ತುಂ ದೆಸೆದೆಸೆಗೆ ಬಾಯ್ವಿಡುತ್ತುಂ, ಬಸವಳಿದು ಬೀೞುತ್ತುಂ ಬಿಡದೆ ನರಳುತ್ತುಂ ಪುಡಿಯೊಳ್ ಪೊರಳುತ್ತುಮಿರ್ಪರಿಂತು—

ಮ॥ ಉರಿಯಂ ಕಾಱುತುಮೈಕಿಲಂ ಕೆದಱುತುಂ ತದ್ಭೂಮಿಗಳ್ ಪೀಡಿಸು ।
ತ್ತಿರೆಯುಂ ಕ್ರೋಧದಿನಾಗಳುಂ ಮಱುಗುತುಂ ಪ್ರಾಣಂಗಳಾವರ್ತಿಸು ॥
ತ್ತಿರೆಯುಂ ನಾರಕಶಸ್ತ್ರಮುರ್ಚುತಿರೆಯುಂ ಕ್ಷುತ್ತೃಣ್ಮಹಾಬಾಧೆ ತ ।
ಳ್ತಿರೆಯುಂ ಕುತ್ತದ ಮೊತ್ತಮೊತ್ತುತಿರೆಯುಂ ಮತ್ತಂ ಚಿರಂಜೀವಿಪರ್ ॥ (೪೮)

ಕಂ॥ ಚಲದಿಂದನೇಕ ಜೀವಾ ।
ವಳಿಯಂ ಮುಂ ಬಾೞಿವಾೞಿ ಘಾತಿಸುತುಂ ಮ ॥
ಮ್ಮಲ ಮಱುಗಿಸದಘಬೀಜದ ।
ಫಲದಿಂ ಚಿರಕಾಲಮೇಕ ನವೆಯದೆ ಮಾಣ್ಬರ್ ॥ (೪೯)

ನರತಿರ್ಯಗ್ಯೋನಿಯ ಜೀ ।
ವರಾಶಿಗಳ ತೀವ್ರದುಃಖಮೆನಿತೊಳವನಿತುಂ ॥
ನೆರೆದೊಡಮೇಂ ನರಕದೊಳಿೊ ।
ರ್ವರ ನಿಮಿಷದ ದುಃಖಲವಮುಮಂ ಪೋಲ್ತಪುವೇ ॥ (೫೦)

ಚಂ॥ ನಲಿನಲಿದಾಡಿ ಪಾಪಮನುಪಾರ್ಜಿಸಿ ತತ್ಪರಿಪಾಕದಿಂದೆ ಕೋ ।
ಟಲೆಗೊಳಗಾಗಿ ಬಾಯ್ವಿಡುವ ಮೂಢ ಜನಂಗಳ ಕೆಯ್ತಮರ್ತ್ಥಿಯಿಂ ॥
ಜಲಜಲಿಪಗ್ನಿಯಂ ಪಿಡಿದು ಬೆಂದ ಬೞಿಕ್ಕೆ ಕನಲ್ದೊನಲ್ದು ಮ ।
ಮ್ಮಲ ಮಱುಗುತ್ತೆ ಬಾಯಳಿವ ಬಾಳಕಜಾಳಕದಂದಮಲ್ಲದೇ ॥ (೫೧)

ಕಂ॥ ಇದು ನರಕದುಃಖದೊಂದೇ ।
ಕದೇಶ ಕಥನಂ ಮೃಗೇಂದ್ರ ನಿಸ್ಸೀಮಮುದೆಂ ॥
ಬುದನೆಱಿಯ್ಯೆ ಪೇೞತೇಂ ನೀ ।
ನದೆಲ್ಲಮಂ ಕಂಡುಮುಂಡುಮಱಿವುತ್ತಿರ್ದ್ದೆ ॥ (೫೨)

ವ॥ ಎಂಬುದುಮಾಸಕಳರ್ದಿ ಸಂಪನ್ನರಪ್ಪ ಬೋಧನಿಧಿಗಳ ಸನ್ನಿಧಿಯ ಸಾಮರ್ಥ್ಯದಿಂ ಮೊದಲೊಳೆ ಜಾತಿಸ್ಮರನಾಗಿ ಕೇಳುತ್ತುಮಿರ್ದುದಱಿನನಿತುಮನವಧಾರಿಸಿ—

ಕಂ॥ ಮುನಿಪೇೞ್ದ ನರಕಗತಿಯೆನ ।
ಗನುಭೂತಂ ದೃಷ್ಟಮಿವರ್ಗಿದಂ ಪೇೞ್ದ ಮಹಾ ॥
ತ್ಮನೆ ಸರ್ವಜ್ಞಂ ಪೆಱನಱಿ ।
ವನೆ ಸೂಕ್ಷ್ಮಾಂತರಿತ ದೂರವಸ್ತುಸ್ಥಿತಿಯಂ ॥ (೫೩)

ಆ ನರಕ ಬಿಲದ ಯೋನಿ ॥
ಸ್ಥಾನದ ನಾರಕರ ವಿವಿಧದುಃಖದ ತೆಱನಂ ॥
ನಾನಾಪರಿಣಾಮುಮುನಿಂ।
ತೇನುಂ ಪೊಱಗಾಗದಂತು ಪೇೞ್ವರುವೊಳರೇ ॥ (೫೪)

ವ॥ ಎಂದು ಪರಿಭಾವಿಸಿ ಮತ್ತಂ ತನ್ನ ಮುನ್ನಿನ ಮರೀಚಿಯಾದಿಯಾದ ಭವದೊಳ್ ತನಗೆ ಸಮನಿಸಿದ ಸನ್ಮಾರ್ಗಮಂ ದೊರೆಕೊಂಡ ನಿಧಿಯನೊಡೆದು ಕಳೆವ ಮರುಳಿನಂತೆ ಗರ್ವದಿನವಜ್ಞೆಗೆಯ್ದು ಕೆಟ್ಟ ಕೇಡುಮಂ, ವಿಶ್ವನಂದಿಯಾದಂದು ಕಾರುಣ್ಯ ರಸದಿಂ ಕನಲ್ತು ಪಲ್ಲವಿಸಿದೊಳ್ಗುಣಂಗಳಂ, ತಳಿರ್ತ ಬನಮಂ ಕಾೞ್ಗಿಚ್ಚು ಪರ್ವಿದಂತೆ ಕಿಡಿಸಿದ ಕೋಪದಿನೆಯ್ದಿದಾಪತ್ತುಮಂ, ಪ್ರಥಮವಾಸುದೇವನಾಗಿ ತನ್ನ ನೆರಪಿದ ಶುಭಕರ್ಮದಾರುಣ ಸಮೀರಣಂ ತೇಜೋಮಯ ನಿಜಾಯುಃ ಪ್ರಾಣದೀಪಾಂಕುರಮಂ ಭೋಂಕನೆ ಬೀಸುವುದುಂ, ಸ್ವಯಂಪ್ರಭೆಯನಗಲ್ದು ಮಹಾತಮಃಪ್ರಭೆಯೊಳೆಯ್ದಿದ ತೀವ್ರದುಃಖಮುಮಂ, ವರ್ತಮಾನಭವದೊಳ್ ತನ್ನ ನಖಮುಖಹತಿಯಿಂ ಮಿಡುಮಿಡಂ ಮಿಡುಕೆ ಬಾಯುೞಿದೊಳಱಿ ಮರಣಮನೆಯ್ದಿದ ಹರಿಣಾದಿ ವನಮೃಗಂಗಳ ಗೋಳುಂಡೆಯುಮಂ ನೆನೆನೆನೆದು ಕರಮುಱಲ್ದು ಕಣ್ಣನೀರ ಪೊನಲೊಳ್ ತೇಂಕುತ್ತುಮಿರೆ ಮುನೀಂದ್ರರಿಂತೆಂದರ್—

ಕಂ॥ ಪೋದುದನಿಂತೆಣಿಸಿ ಕರಂ।
ಖೇದಿಸುತಿರವೇಡ ಮುಂದೆ ನಿನಗೆಂದುಂ ದುಃ ॥
ಖೋದಯಮಂ [ಮಾಣಿಪ ಸೌ।
ಖ್ಯೋದಯಮಂ] ಮಾೞ್ಪ ಧರ್ಮಮಂ ನೆನೆ ಮನದೊಳ್ ॥ (೫೫)

ವ॥ ಎಂಬುದುಮಾನುಡಿಗೆ ಸಂತಸಂಬಟ್ಟು—

ಕಂ॥ ಎನಗೀ ಮಹಾತ್ಮರಂದದಿ।
ರನುಗ್ರಹಂಗೆಯ್ವ ಪರಮಗುರುಗಳ್ ಪೆಱರಾರ್ ॥
ಎನುತುಂ ನಲಿದೀಕ್ಷಿಸಿದುದು।
ಮುನಿರಾಜನ ವದನವನಜಮಂ ಮೃಗರಾಜಂ ॥ (೫೬)

ವ॥ ಅಂತಧಿಕ ಭಕ್ತಿಯುಕ್ತ ಪ್ರಮೋದದಿಂ ನೋಡಿ—

ಕಂ॥ ಮನಮೊಸೆದು ಪೊಗೞ್ವ ದಿವ್ಯಾ।
ರ್ಚನೆಗಳಿನರ್ಚಿಸುವ ಬಗೆಯುದಂ ಬೆಸಗೊಳುತಿ ॥
ರ್ಪನಿತರ್ಕೆ ಯೋಗ್ಯಮಲ್ಲದ।
ತನುವಾಯ್ತೆನಗೆಂದು ಪಿರಿದುಮುಮ್ಮಳಿಸುತ್ತುಂ ॥ (೫೭)

ಇರಲೊಡನಿಂಗಿತಮಂ ಮುನಿ ।
ವರರೀಕ್ಷಿಸಿ ತಿಳಿದು ಕೆಲವು ಜನ್ಮದೊಳೆ ಜಗ ॥
ದ್ಗುರುವಾಗಲಿರ್ದ ಜೀವಂ ।
ದುರಘದೆ ನುಡಿಯಲ್ಕೆ ಮಱೆಯದಿರ್ದುದೆನುತ್ತುಂ ॥ (೫೮)

ಕಾರುಣ್ಯ ದೃಷ್ಟಿಯಿಂ ಕಂ ।
ಠೀರವಮಂ ನೋಡಿ ಕಡೆಯದಾಗಾಮಿ ಭವಾ ॥
ಕಾರಮುಮನವಧಿ ದೃಷ್ಟಿಯಿ ।
ನಾರಯ್ದತಿ ವಿಶದವಾಗೆ ನೋಡಿದರಾಗಳ್ ॥ (೫೯)

ವ॥ ಅಂತು ನೋೞ್ಪುದುಂ ವರ್ತಮಾನಸಿಂಹಪರ್ಯಾಯವಿಶೇಷಮುಂ, ಪುರೂರವ ಪರ್ಯಂತಮಾದತೀತಜನ್ಮಪರ್ಯಾಯಕೋಟಿಗಳುಂ, ಮಿಥ್ಯಾತ್ವ ವಿಷಜಳಧಿಯ ತೆರೆದುಱುಗಲೆನಿಸಿ ಪೊಱಪೊಣ್ಮಿದಸಂಖ್ಯಾತ ಲೋಕಮಾತ್ರ ದುಃಪರಿಣಾಮಂಗಳುಂ, ಕರ್ಮುಗಿಲೊಡ್ಡಿನಿಂ ಕಱಂಗಿದ ಕಾರಿರುಳ ಘೋರಾಂಧಕಾರದೊಳ್ ಓರೊರ್ಮೆ ವಸ್ತು ವೈಚಿತ್ರ್ಯದಿಂ ಪೊಳೆವ ಮಿಂಚಿನಂತೆ ಮೋಹೋದಯದಿಂ ಕಳ್ತಲಿಸುವಂತರಂಗದಾರ್ತರೌದ್ರ ಪರಿಣಾಮಮಾಳಾಸಹಸ್ರದೆಡೆ ಎಡೆಯೊಳೇನಾನುಂ ಕಾರಣದಿನೊಗೆದ ಕೆಲಕೆಲವು ಶುಭ ಪರಿಣಾಮಂಗಳುಂ, ತೀರ್ಥಕರ ಪುಣ್ಯನಾಮಾವಧಿಯಪ್ಪನಾಗತ ಜನ್ಮಪರ್ಯಾಯಂಗಳುಂ, ಲಬ್ಧಿವಶದಿನುದಯಿಸುವ ಜಿನಭಕ್ತಿದಯಾರಮಣಿಯೇಱುಂಜವ್ವನದ ಚೆಲ್ವುಗಳೆನಿಸುವುತ್ತರೋತ್ತರ ಪ್ರಶಸ್ತಪರಿಣಾಮಂಗಳುಂ, ಘಾತಿಕ್ಷಯದಿನಪ್ಪ ಪರಮಾರ್ಹಂತ್ಯ ಲಕ್ಷ್ಮಿಯುಂ, ನಿಜಾವಧಿಬೋಧಮಣಿದರ್ಪಣದೊಳೊರ್ಮೊದಲೆ ಪೊಳೆಯೆ ಪರಿಭಾವಿಸಿ—

ಕಂ॥ ಆವಾವ ನೀಚಯೋನಿಯು ।
ನಾವಾವ ದುರಂತ ದುಃಖಮುಂ ಮಿಥ್ಯಾತ್ವಂ ॥
ಜೀವಕ್ಕೆ ಮಾಡದಿರ್ದಪು ।
ದಾವಾವೊಳ್ಸುಗಳನಾಗಿಸದು ಸಮ್ಯಕ್ತ್ವಂ ॥ (೬೦)

ಎಂದು ಬಗೆಯುತ್ತುಮವರಿಂ ।
ತೆಂದರ್ ಭುವನೈಕಪಾವನಂ ಭವ್ಯಜನಾ ॥
ನಂದಕರಮೆನಿಪ ಸಮ್ಯ ।
ಕ್ತ್ವಂ ದೊರೆಕೊಂಡವರೆ ಧನ್ಯರಲ್ತೆ ಮೃಗೇಂದ್ರಾ ॥ (೬೧)

ವ॥ ಆ ಸಮ್ಯಕ್ತ್ವಮಂ ಸಪ್ತಪ್ರಕೃತಿಗಳಾಗಲೀಯವವಱೊಳ್ ಮಿಥ್ಯಾತ್ವ ಸಮ್ಯಗ್ಮಿಥ್ಯಾತ್ವ ಸಮ್ಯಕ್ತ್ವ ಪ್ರತಿಕೃತಿಗಳೆಂಬ ದರ್ಶನಮೋಹನೀಯತ್ರಯದ ಮೊದಲ ಮಿಥ್ಯಾತ್ವ ಕರ್ಮಶಕ್ತಿಯಂ ಪೇೞ್ವೊಡೆ ಪಂಚೇಂದ್ರಿಯ ವಿಷಯಸೇವಾಚತುರನಪ್ಪ

ನಿಶಿತಮತಿಗಂ ಮರಿಚಮುಂ ಮಧುರಮೆಂಬ ಕಳಮತಂಡುಳಮುಂ ಕೈಪೆಯೆಂಬ ದುಃಖಪ್ರತೀತಿಯುಂ ರಸನೇಂದ್ರಿಯದೊಳ್ ಪುಟ್ಟಿಸುವ ವಿಷಮವಿಷಧರ ವಿಷದಂತೆ ಸಕಳಕಳಾ ಪ್ರವೀಣರಪ್ಪ ಪಟುಮತಿಗಳುನ್ಮಾರ್ಗಮನುಪಾದೇಯಮೆಂಬ ಸನ್ಮಾರ್ಗಮಂ ಹೇಯ ಮೆಂಬ ವಿಪರೀತ ಪ್ರತೀತಿಯಂ ತತ್ತ್ವವಿಚಾರದೊಳ್ ಪುಟ್ಟಿಸುವುದು ಮತ್ತಮನಳ ಜ್ವಾಳೆಯುಮಂ ಜಳಪ್ರವಾಹಮುಮಂ ಕಂಡಂದೆ ಕೆಳರ್ವಪಸ್ಮಾರದಂತೆ ಮಹಾ ತಪೋಧನರ ತಪಸ್ಸಮೃದ್ಧಿಯುಮಂ, ನಿರ್ಮಳ ಧರ್ಮತೀರ್ಥ ಪ್ರವರ್ತನಮುಮಂ ಕಂಡೊಡುದ್ರೇಕಿಸುವುದಂತುಮಲ್ಲದೆಯುಂ—

ಕಂ॥ ಸಾರತರ ಮೋಕ್ಷಮಾರ್ಗ ವಿ।
ಚಾರಮನಣಮಾಗಲೀಯದತಿಕಷ್ಟತರಂ ॥
ದಾರುಣ ದೋಷವಿಷಾವನಿ।
ಜಾರಾಮ ಕ್ಷೇತ್ರಸನ್ನಿಭಂ ಮಿಥ್ಯಾತ್ವಂ ॥ (೬೨)

ವ॥ ಅಂತನಂತ ಸಂಸಾರ ದುಃಖಮೂಳಮುಂ, ಮೋಕ್ಷಮಾರ್ಗದಿಂ ಪ್ರತಿಕೂಲ ಮುಂ ಎನಿಸಿ ಭವಭವದೊಳ್ ಹಿತಾಹಿತ ವಿವೇಕಮನಾಗಲೀಯದ ಮಿಥ್ಯಾತ್ವ ಮಹಾ ಮದಿರಾ ಮದಮಂ ನೆರಂಬಡೆದು—

ಕಂ॥ ಆವರಣದ ತೀವ್ರೋದಯ।
ಮಾವಗಮಾವರಿಸೆ ನಿದ್ರೆತಿಳಿಯದ ಮರುಳಂ ॥
ತಾವುದುಮನಱಿಯದಿರ್ಕುಂ।
ಸ್ಥಾವರಯೋನಿಯೊಳನಂತ ಜೀವನಿಕಾಯಂ ॥ (೬೩)

ಕಂ॥ ಮಱಿದೊಱಗಿದ ಮರುಳಿನಿಸೆ।
ಟ್ಟಿಱುವಂತೇನಾನುಮೊಂದು ನೆವದಿಂದಲ್ಲಿಂ ॥
ಪೊಱಮಟ್ಟು ಜೀವನುಂ ಪಲ।
ತೆಱದಿಂ ತ್ರಸಮಾಗಿ ಪುಟ್ಟ ನಮೆಯುತ್ತಿರ್ಕುಂ ॥ (೬೪)

ವ॥ ಮತ್ತಂ ಬಹಿರಂತರಂಗ ನಿಮಿತ್ತಾಂತರದಿನೊರ್ಮೊರ್ಮೆ ಮನುಷ್ಯಗತಿವಡೆ ದೊಡಂ, ಮೂಕಾಂಧಬಧಿರ ಪಿಶಾಚ ಚೇಷ್ಟೆಗಳೊಂದಾದಂತೆ—

ಕಂ॥ ಬೆಸಗೊಳಲಱಿಯವು ಸುಪಥದ।
ದೆಸೆಗಾಣವು ಪೇೞಿ ಕೇಳಲಱಿಯವು ತಮ್ಮು ॥
ದ್ದೆಸಕೆ ವಿಪರೀತಮಂ ಚ।
ರ್ಚಿಸುವುವು ಮಿಥ್ಯಾತ್ವದುದಯದಿಂ ಜೀವಂಗಳ್ ॥ (೬೫)

ವ॥ ಅದಲ್ಲದೆಯುಮಾಮಳಕರಸದಿಂ ಕಷಾಯಿತಾಸ್ಯನಾದಂಗೆ ನೀರುಂ ಕ್ಷೀರ ರುಚಿಯಾಗಿ ತೋರ್ಪಂತೆ ಸಮ್ಯಗ್ಮಿಥ್ಯಾತ್ವಾಧೀನಮಾನಸಂಗೆ ಯುಕ್ತಿಯಲ್ಲದುದುಂ ಯುಕ್ತಿಯಾಗಿ ತೋರ್ಪುದದು ಕಾರಣದಿಂ—

ಕಂ॥ ಭ್ರಮೆಗೊಂಡು ಪಲಬರುಂ ಮೋ ।
ಕ್ಷಮನೆಯ್ದಿಪ ಪರಮ ತತ್ವಮಂ ತತ್ವಾಭಾ ॥
ಸಮುಮಂ ಸಮನೆನುತಿರ್ಪರ್ ।
ಸಮಾನಮೆಂಬಂತೆ ರತ್ನಮಂ ಕಾಚಮುಮಂ ॥ (೬೬)

ತೆರೆಮಸಗಿ ಕದಡುಗುಂ ನಿ ।
ಸ್ತರಂಗ ನಿರ್ಮಳ ತಡಾಗಮನಿಲನಿನೆಂತಂ ॥
ತಿರೆ ಸಮ್ಯಕ್ತ್ವಪ್ರಕೃತಿ ।
ಸ್ಫುರಿತದೆ ಚಳಮಳಿನಮೆನಿಸುಗುಂ ಸಮ್ಯಕ್ತ್ವಂ ॥ (೬೭)

ವ ॥ ಮತ್ತಮತಿದಾರುಣಂಗಳಪ್ಪನಂತಾನುಬಂಧಿ ಕ್ರೋಧಮಾನಮಾಯಾಲೋಭಂಗಳ್ ಸಮ್ಯಗ್ದರ್ಶನ ವಿರೋಧಿಗಳಪ್ಪುವದೆಂತೆನೆ—

ಕಂ॥ ಮುನಿದೊಡೆ ಕೊಂಡುಂ ತಣಿಯದೆ ।
ಕನಲ್ವ ಭವಬದ್ಧ ವೈರಮಂ ತಾಳ್ದಿದವರ್ ॥
ಜಿನಮತಮಂ ಕ್ಷಮೆಯ ತವ ।
ರ್ಮನೆಯಂ ಕಾರುಣ್ಯ ಜಲಧಿಯಂ ಮೆಚ್ಚುವರೇ ॥ (೬೮)

ಅವಿನಯದ ಮೊತ್ತಮೊದಲೆನಿ ।
ಸುವ ಮಿಥ್ಯಾಜ್ಞಾನ ಗರ್ವದಿಂ ಕರ್ಕಶರ ॥
ಪ್ಪವರ್ಗೆಂತುಮಸಹ್ಯಂ ಮಾ ।
ರ್ದವಬೀಜಂ ವಿನಯಮೂಲಮರ್ಹನ್ಮಾರ್ಗಂ ॥ (೬೯)

ವ॥ ಅದಲ್ಲದೆಯುಂ ನೀಂ ಮರೀಚಿಯಾದಂದು—

ಕಂ॥ ನಿನಗೆಸೆವ ಕುಮತಿ ಕುಶ್ರುತ ।
ಜನಿತ ಮದಂ ಮರುಳ ಕಯ್ಯ ಮಸೆದಲಗಿನವೋಲ್ ॥
ನಿನಗಂ ಪೆಱರ್ಗಂ ಬಾಧೆಯ ।
ನನೇಕ ವಿಧದಿಂದಮಿಾಯೆ ನಮೆಯುತ್ತಿರ್ದೈ ॥ (೭೦)

ಮೃದುಶಠವಚನದ ಬಕವೇ ।
ಷದ ಮಱಿಯೊಳ್ ಸವಿಯ ಮಱಿಯ ವಿಷದುಗ್ರತೆಯಂ ॥
ದದಿನಿರ್ಪವಗುಣದವಗರ್ಾ ।
ಗದು ಸತ್ಯಾಧಿಷ್ಠಿತಂ ಜಿನೇಶ್ವರಮಾರ್ಗಂ ॥ (೭೧)

ಇದು ಯೋಗ್ಯಮಯೋಗ್ಯಮಿದೆ ।
ನ್ನದೆ ವಿಷಯದಲಂಪು ನಿಮಿರೆ ಗತಿಹಾನಿಗಮ ॥
ಟ್ಟದೆ ನಡೆವ ಕಾತರಂಗಾ ।
ಗದು ಸಕಳ ತ್ಯಾಗಸಾಧಕಂ ಜೈನಮತಂ ॥ (೭೨)

ವ॥ ಇಂತು ಮೋಕ್ಷಮಾರ್ಗ ಪ್ರತಿಕೂಲಂಗಳಪ್ಪ—

ಕಂ॥ ಇವು ಸಪ್ತಪ್ರಕೃತಿಗಳಿಂ।
ತಿವಿಱುಪಶಮದಿಂ ಕ್ಷಯೋಪಶಮದಿಂ ಕ್ಷಯದಿಂ॥
ಪವಣಿಲ್ಲದ ಭವಸಮಿತಿಗೆ।
ಪವಣಂ ಮಾಡುತ್ತುಮುದಯಿಪುದು ಸಮ್ಯಕ್ತ್ವಂ॥ (೭೩)

ಎಂದು ಬೆಸಸುವುದುಮುತ್ತಾ।
ನಂದದಿನಾಲಿಸಿ ವಿಚಾರಿಸುತ್ತಿರೆಯಿರೆ ಮು॥
ನ್ನೆಂದುಂ ಭವಭವದೊಳ್ ಬೞಿ।
ಸಂದ ಕುಮಾರ್ಗಾನುಬಂಧಮಂ ತೊಱೆಯುತ್ತುಂ॥ (೭೪)

ಚಂ॥ ಇರದಡರುತ್ತುಮಾರ್ಹತಸುರದ್ರುಮಮಂ ಖಳಮೋಹವಾಯುವಿಂ।
ಮುರಿವ ಮರಳ್ವ ಜೋಲ್ವಿೞಿವ ಸಿಂಹ ಮನೋಲತಿಕಾಗ್ರಮಂ ನಿರಂ॥
ತರ ಶುಭಧಾಮಮಪ್ಪವಧಿಲೋಚನದಿಂ ನಡೆನೋಡಿ ತನ್ಮುನೀ।
ಶ್ವರರನುಕಂಪೆಯಿಂ ನೆಗಪಿ ತಮ್ಮ ವಚಸ್ಸುಕುಮಾರ ಹಸ್ತದಿಂ॥ (೭೫)

ಕಂ॥ ನಯಸೂತ್ರದಿನಲ್ಲಲ್ಲಿಗೆ।
ನಿಯಮಿಸುತುಂ ನವಪದಾರ್ಥ ಕೋಮಳ ಶಾಖಾ॥
ಚಯದೊಳ್ ಪರ್ವಿಸುತುಂ ಮು।
ಕ್ತಿಯ ಪಥಮರಿದಾರ್ಗಮಱಿಯಲೆಂದಿಂತೆಂದರ್॥ (೭೬)

ಚಂ॥ ಬಯಸಿ ನಿಧಾನಮಂ ಸುಕೃತಮಿಲ್ಲದವರ್ ಭವದಿಂ ತದಗ್ರಭೂ।
ಮಿಯನಗುೞುತ್ತುಮಿರ್ದು ನಿಧಿಗಾಣ್ಬೆಡೆಯೊಳ್ ಮರುಳಾಗಿ ಪೋಪ ಮಾ।
ೞ್ಕೆಯಿನಪವರ್ಗ ಮಾರ್ಗದೊಲವಿಂ ಪಲರುಂ ಪಿರಿದೋದಿ ತತ್ವನಿ।
ರ್ಣಯಜನಕೋಕ್ತಿಯಲ್ಲಿ ಜಡರಪ್ಪರಿದೇನಘಶಕ್ತಿ ಚಿತ್ರಮೋ॥ (೭೭)

ವ॥ ಅದಲ್ಲದೆಯುಂ—

ಕಂ॥ ಜಿನದೀಕ್ಷೆಗೊಳ್ಗುಮಹಮಿಂ।
ದ್ರನಾಗಿ ಪುಟ್ಟುಗುಮನಂತಭವದೊಳ್ ಜೀವಂ॥
ಮನದೊಳ್ ಸಮ್ಯಗ್ದರ್ಶನ।
ಮನೊರ್ಮೆಯುಂ ಪೊರ್ದದಿನ್ನವಘಟಿತಮೊಳವೇ॥ (೭೮)

ಅದು ದೂರಭವ್ಯನೊಳ್ ಕೂ।
ಡದದೆಂತುಮಭವ್ಯ ಜೀವನೊಳ್ ಘಟಿಯಿಸದಂ॥
ತದು ದುರ್ಲಭಮದು ಭವಭಯ।
ಭಿದುರಮದಾಸನ್ನ ಭವ್ಯನೊಳ್ ಸಮನಿಸುಗುಂ॥ (೭೯)

ವ॥ ಅದೆಂತೆಂದೊಡೆನಿತು ಬೆಳಗಾದೊಡಂ ಕಾಣದ ಜಾತ್ಯಂಧಕನಂತೆ ಪರಮಾಗಮುಶ್ರವಣಮೆನಿತಾದೊಡಮಭವ್ಯಜೀವಂ ಸನ್ಮಾರ್ಗಮಂ ತಿಳಿಯಲಱಿಯಂ. ಕಣ್ಬೇನೆ ಮಾಣ್ದಂದು ಕಾಣ್ಬಕ್ಷಿರೋಗಿಯಂತೆ ದೂರಭವ್ಯಂ ಕರ್ಮೋಪಶಮಮಾದಾಗಳಱಿಗುಂ. ಬೆಳಗುವಡೆಯಲೊಡಂ ಕಾಣ್ಬ ನಿರ್ಮಳದೃಷ್ಟಿಯಂತೆ ಧರ್ಮೋಪದೇಶಮಾಗಲೊಡಮಾಸನ್ನಭವ್ಯಂ ತಿಳಿಗುಂ. ಆಪ್ತಾಗಮ ತಪೋಲಕ್ಷಣಮಂ ತಿಳಿದು ನಂಬುವ ಪರಿಣಾಮಂ ಸಮ್ಯಕ್ತ್ವಮಕ್ಕುಮದೆಂತೆನೆ—

ಕಂ॥ ಸಕಳಾರ್ಥವೇದಿ ಕಾಮಾಂ ।
ತಕನಕ್ಷಯಸೌಖ್ಯರಾಶಿ ಮೋಕ್ಷಪಥದ್ಯೋ ॥
ತಕ ದಿವ್ಯವಾಕ್ಯನಿಂದ್ರ ।
ಪ್ರಕರಾರ್ಚಿತ ಪಾದಪೀಠನಾಪ್ತನೆನಿಕ್ಕುಂ ॥ (೮೦)

ಪರಿಕಿಸುವೊಡೆ ಪೂರ್ವಾಪರ ।
ವಿರೋಧರಹಿತಂ ದಯಾಕರಂ ಜಾತಿಜರಾ ॥
ಮರಣ ವಿನಾಶಕರಂ ವೀ ।
ತರಾಗ ಸರ್ವಜ್ಞವಚನಮಾಗಮಮೆನಿಕುಂ ॥ (೮೧)

ಪರಪೀಡೆಯ ನುಡಿಗಂ ಕೊ ।
ಕ್ಕರಿಪ ಕಷಾಯಾಸ್ತ್ರಮುರ್ಚದಂತಿರೆ ಮನಮಂ ॥
ಪರಿರಕ್ಷಿಸುತಿರ್ಪ ದಯಾ ।
ಪರತೆಯೆ ತಪಮದೆ ಚರಿತ್ರಮದೆ ಸದ್ಧರ್ಮಂ ॥ (೮೨)

ಆರಾಧ್ಯನುಮಾಗಮಮುಂ ।
ಚಾರಿತ್ರಮುಮೆಂತು ನೋೞ್ಪೊಡಂ ಪರಮದಯಾ ॥
ಧಾರಂ ಗಡ ಮಾಧ್ಯಸ್ಥ್ಯದಿ ।
ನಾರಯ್ವೊಡೆ ಮೋಕ್ಷಮಾರ್ಗದಿಂ ಪೆಱತುಂಟೇ ॥ (೮೩)

ಜಳರೇಖಾಸದೃಶಂ ಸಂ ।
ಜ್ವಳನ ಕ್ರೋಧಾಂಶಮೊರ್ಮೆ ತೋಱಿದೊಡಂ ನಿ ॥
ರ್ಮಳದಯಗೆ ಭಂಗಮೆನುತುಂ ।
ತಿಳಿಪುವ ಜಿನಮತಮೆ ಲೋಕಪಾವನಮಲ್ತೆ ॥ (೮೪)

ಪರಮಗುರುವಚನ ದೀಪ್ತಿ ।
ಸ್ಫುರಿತದ ಬಲದಿಂ ಸುಯುಕ್ತಿ ಲೋಚನದಿಂ ನೋ ॥
ಟ್ಪಿರ ಮನದೊಳಾದ ವಸ್ತು ।
ಸ್ವರೂಪ ಯಾಥಾತ್ಮ್ಯನಿಶ್ಚಯಂ ಸಮ್ಯಕ್ತ್ವಂ ॥ (೮೫)

ಸ್ಥಿರತೆಯೊಳಮಱಿವಿನೊಳಮೊ ।
ರ್ವರನೊರ್ವರ್ ಮಿಗುವ ಪುರುಷರುಳ್ಳುದಱಿಂದೆ ॥
ಲ್ಲರುಮಂ ಮಿಗುವನುಮೊಳನಾ ।
ಪರಮಾತ್ಮನೆ ದೈವಮೆಂಬ ಬಗೆ ಸಮ್ಯಕ್ತ್ವಂ ॥ (೮೬)

ಸಕಳ ವಿಮೋಹ ಕ್ಷಯದಿಂ ।
ಸಕಳ ಜಗದ್ವಂದ್ಯ ವೀತರಾಗತೆ ಜಿನರೊಳ್ ॥
ಸಕಳಾವರಣ ಕ್ಷಯದಿಂ ।
ಸಕಳಜ್ಞತೆಯೆಸೆಗುಮೆಂಬ ಬಗೆ ಸಮ್ಯಕ್ತ್ವಂ ॥ (೮೭)

ಮನದೊಳ್ ವಿಚಾರಮುಳ್ಳವ ।
ರ್ಗನಂತ ಸುಖಮುಮನಂತಬೋಧಮುಮಂ ನೆ ॥
ಟ್ಟನೆ ದೋಷರಹಿತನೆನಿಸಿದ ।
ಜಿನೇಶ್ವರನೆ ದೈವಮೆಂಬ ಬಗೆ ಸಮ್ಯಕ್ತ್ವಂ ॥ (೮೮)

ಎನಿತುಂಟು ಮೋಹಪಾಶಮ ।
ದನಿತುಂ ಬಿಡೆ ಮೋಕ್ಷಮದಱಿನಳಿಪೆಂಬುದನೆ ॥
ಳ್ಳನಿತುಮನೊಲ್ಲದು ಮುಕ್ತಿಗೆ ।
ಜಿನಮಾರ್ಗಮೆ ಮಾರ್ಗಮೆಂಬ ಬಗೆ ಸಮ್ಯಕ್ತ್ವಂ ॥ (೮೯)

ಇದು ಪಾಪಾಶ್ರವಕಾರಣ ।
ಮಿದು ಪುಣ್ಯಾಶ್ರವನಿಮಿತ್ತಮಿಂತಿದು ಮೋಕ್ಷ ॥
ಪ್ರದಮೆಂದು ಜೀವಪರಿಣಾ ।
ಮದ ತೆಱನಂ ದಿಟದಿನಱಿವ ಬಗೆ ಸಮ್ಯಕ್ತ್ವಂ ॥ (೯೦)

ಇದು ಮೋಕ್ಷಮಾರ್ಗಮಿದು ಮೋ ।
ಕ್ಷದ ಲಕ್ಷಣಮಿದುವೆ ಮೋಕ್ಷಫಲಮೆಂಬುದನು ॥
ಳ್ಳುದನುಳ್ಳ ಮಾೞ್ಕೆಯಿಂ ತೆ ।
ಪ್ಪದೆ ಮನದೊಳ್ ತಿಳಿದು ನಂಬುವುದು ಸಮ್ಯಕ್ತ್ವಂ (೯೧)

ವರಬೋಧ ಚರಿತ್ರಂಗಳ ।
ನೆರವಂ ಪಾರದೆಯುಮೇಕ ಚತ್ವಾರಿಂಶ ॥
ದ್ದುರಿತಂಗಳ ಬಂಧಮನಪ ।
ಹರಿಪುದಚಿಂತ್ಯ ಪ್ರಭಾವನಿಧಿ ಸಮ್ಯಕ್ತ್ವಂ ॥ (೯೨)

ಕಂ॥ ಪರಮಜಿನೇಶ್ವರರಂ ಸಿ।
ದ್ಧರನಾಚಾರ್ಯಾದಿ ದಿವ್ಯಮುನಿಗಳನಱಿದಾ॥
ದರದಿನಡಿಗಡಿಗೆ ತತ್ವ।
ಸ್ವರೂಪಮಂ ನೆನೆದು ನಲಿವ ಬಗೆ ಸಮ್ಯಕ್ತ್ವಂ॥ (೯೩)
ಜಿನಬಿಂಬಾಕೃತಿಯಂ ಲೋ।
ಚನದಿಂ ಕಾಣ್ಬಂತೆ ತಿಳಿದು ಸಿದ್ಧಾಕೃತಿಯಂ॥
ನೆನೆಯಲೊಡಂ ಪ್ರವ್ಯಕ್ತಮ।
ದೆನೆ ಮನದಿಂ ಕಾಣ್ಬಕಾಣ್ಕೆಯದು ಸಮ್ಯಕ್ತ್ವಂ॥ (೯೪)
ಅನಿಮಿಷವಲ್ಲಭ ಸಿಂಹಾ।
ಸನ ಕಂಪನಿಮಿತ್ತ ತೀರ್ಥಕರ ಪುಣ್ಯ ನಿಬಂ॥
ಧನಮೆನಿಸುವ ಷೋಡಶ ಭಾ।
ವನೆಯೊಳ್ ತಾನಗ್ರಗಣ್ಯಮಿದು ಸಮ್ಯಕ್ತ್ವಂ॥ (೯೫)
ಜಿತಮೂಢತ್ರಯಮುಪಸಾ।
ರಿತ ಷಡನಾಯತನಮುಪಗತಾಷ್ಟಮದಂ ವ।
ರ್ಜಿತ ಶಂಕಾದ್ಯಷ್ಟಮಳಂ।
ಪ್ರತೀತ ನವಸಪ್ತತತ್ವಮಿದು ಸಮ್ಯಕ್ತ್ವಂ॥ (೯೬)
ಇನಿತುಂ ಮೃಗೇಂದ್ರ ಕೇಳ್ ಪಾ।
ವನ ಸಮ್ಯಕ್ತ್ವದೊಳೆ ವರ್ತಿಕುಂ ಶ್ರದ್ಧಾನಂ॥
ಜಿನಭಕ್ತಿತತ್ವರುಚಿ ದ।
ರ್ಶನಮಾತ್ಮಜ್ಞಾನಮೆಂಬ ಪರ್ಯಾಯಂಗಳ್॥ (೯೭)

ವ॥ ಅದೆಂತೆನೆ —

ಚಂ॥ ಜಿನಪತಿ ಕಾಳಿಕಾರಹಿತ ಕಾಂಚನದಂತೆ ನಿರಸ್ತಕರ್ಮಬಂ।
ಧನನೆಸೆದಿರ್ದನಾಂ ದುರಿತಬಂಧದೆ ಕಾಳಿಕೆ ಪರ್ವಿದುದೊಂದು ಕಾಂ॥
ಚನದವೊಲಿರ್ದೆನೀ ದುರಿತಮಾ ತೆಱದಿಂದಮಗಲ್ವುದುಂ ಜಿನೇಂ।
ದ್ರನ ದೊರೆಯಪ್ಪೆನೆಂದು ತಿಳಿದಾತನೆ ದರ್ಶನಶುದ್ಧನುತ್ತಮಂ॥ (೯೮)

ಕಂ॥ ನೀನುಮಿದಂ ತಿಳಿ ನಾನಾ।
ಯೋನಿಯ ದುಃಖಾಗ್ನಿತಾಪಮಂ ನೀಗುವೊಡಂ॥
ಜ್ಞಾನಮಯ ಶಾಶ್ವತ ಸ್ವಾ।
ಧೀನ ಸುಖಾಮೃತದ ಕಡಲೊಳೋಲಾಡುವೊಡಂ॥ (೯೯)

ವ॥ ಎಂದು ಮತ್ತಂ ರತ್ನತ್ರಯಾತ್ಮಕಮಪ್ಪ ಮೋಕ್ಷಮಾರ್ಗಮುಮಂ, ಸಕಳ ಕರ್ಮಬಂಧಚ್ಛೇದರೂಪಮಪ್ಪ ಮೋಕ್ಷಮುಮನತೀಂದ್ರಿಯ ಜ್ಞಾನಾನಂದಮಯ ಮಪ್ಪ ಮೋಕ್ಷಫಲಮುಮನನೇಕನಯಪ್ರಮಾಣಂಗಳಿಂ ತಿಳಿಪುವಾಗಳಾಮುನಿಪತಿಯ ಪರಮಾನಂದಾಮೃತಸ್ಯಂದಿಯಪ್ಪ ವಾಗ್ವಿಳಾಸಕಾಮಧೇನು ತನ್ನ ಬಟಿಸಲ್ವ

ಮೃಗಪತಿಯ ಮನನೋರೊರ್ಮೆ ವಿಶೋಧಿವಶದಿಂ ನಲಿನಲಿದು ಧಿಂಕಿಟ್ಟು ತಾಯ ಮುಂದೆ ಪರಿವೆಳಗಱುವಿನಂತೆ ಕಿಱಿದೆಡೆಯಂ ತತ್ವವಿಚಾರಮಾರ್ಗದೊಳ್ ಮುಂದೆ ಮುಂದೆ ಪರಿದು ನಿಂದಾರಯ್ವುತ್ತುಮಿರೆ ತಾನುಮುದನೆಯ್ದಿ ಪೆಱಗಿಕ್ಕಿ ಮೃದುಪದ ನ್ಯಾಸದಿಂ ಮುಂದೆ ಮುಂದೆ ನಡೆವಾಗಳ್—

ಕಂ॥ ಮುನಿವಚನಾಮೃತ ಸೇವೆಯ ।
ಮುನಿತನು ಸೌರಭ ಪವಿತ್ರ ಪವಮಾನಸ್ಪ ॥
ರ್ಶನದ ಮುನೀಂದ್ರ ಮುಖಾಳೋ ।
ಕನದೊಳ್ಪಿಂದಾಯ್ತು ಪೂರ್ವ ಹರ್ಷೋತ್ಕರ್ಷಂ ॥ (೧೦೦)

ವ॥ ಅಂತಳವಿಗೞಿದ ಹರ್ಷರಸವರ್ಷದಿಂ ಪ್ರತಿಕ್ಷಣಮುದೀರಣಾರೂಪದಿನ ಶುಭಕರ್ಮಶಕ್ತಿಗಳನಂತಗುಣಹೀನಂಗಳಾಗೆ ಸಮನಿಸಿದ ನಿರ್ಮಳಕ್ಷಯೋಪಶಮ ಲಬ್ಧಿಯೊಳಮಗಣ್ಯಪುಣ್ಯಾನುಬಂಧಿಯುಂ, ಗುಣಾನುರಾಗದಾಗರಮಾದ ವಿಶೋಧಿ ಲಬ್ಧಿಯೊಳಂ ಮನಸ್ತಮಮನಲೆವ ಸೊಡರ್ಗುಡಿಯಿದೆನಿಸಿದುಪದೇಶಲಬ್ಧಿಯೊಳಂ ಪ್ರಬಳ ಕರ್ಮಸ್ಥಿತಿಯನಂತಃಕೋಟೀಕೋಟಿಸಾಗರೋಪಮಪ್ರಮಿತಮುಂ, ತೀವ್ರಾನು ಭಾಗಮಂತಲತೆಯುಂ, ದಾರುವಿನನಂತೈಕಭಾಗಮುಮಾಗೆ ನಿಯಮಿಸುವಪ್ರತಿಮ ಪ್ರಾಯೋಗ್ಯತಾಲಬ್ಧಿಯೊಳಂ, ನೆಱಿದು ಮತ್ತಮತಿ ಸೂಕ್ಷ್ಮತರಮಪ್ಪ—

ಚಂ॥ ಚರಮ ಪದಾರ್ಥಮಂ ಬೆಸಗೊಳುತ್ತಿರೆ ನೋಡುವ ಚೇಷ್ಟೆಯಂ ಮುನೀ ।
ಶ್ವರರದನಂತೆ ತಾಮಱಿಯುತುಂ ದಯೆಯಿಂ ಬೆಸಸುತ್ತುಮಿರ್ದರಾ ॥
ಪರಮ ಮುನೀಂದ್ರರಿರ್ಪ ಪದದೊಳ್ ತೀದೋಱಿದುದೊಲ್ದು ಕೇಳ್ವ ಕೇ ॥
ಸರಿಯುಪಭೋಗದೊಳ್ ಕರಣಲಬ್ಧಿ ಮನಸ್ತಮಮಂ ತೆರಳ್ಚುತ್ತುಂ ॥ (೧೦೧)

ಕಂ॥ ಅದು ದರ್ಶನರತ್ನಪ್ರದ ।
ಮದು ಸುಚರಿತ ಜನ್ಮಭವನಮಂತದು ಭವ್ಯ ॥
ತ್ವದ ಕಣ್ದೆಱವಿ ವಿವೇಕ ।
ಕ್ಕದು ಫಲಮದು ಬುಧಜನಪ್ರಣೂತಂ ಖ್ಯಾತಂ ॥ (೧೦೨)

ವ॥ ಅಂತಾಲಬ್ಧಿ ಸಮನಿಸುವ ಸಮಯದೊಳ್—

ಚಂ॥ ತನಗಪವರ್ಗಮಾರ್ಗದ ಮುಮುಕ್ಷುನಿಕಾಯದ ಮುಕ್ತರಂದಮಂ।
ಮುನಿಪತಿ ಪೇೞೆ ವಾಸ್ತವಮಿದಾಗದೆ ಮಾಣದೆನುತ್ತುಮೊಯ್ಯನೊ ॥
ಯ್ಯನೆ ತಿಳಿವಲ್ಲಿ ಲಬ್ಧಿವಶದಿಂದಿದಿರ್ವಂದಿರೆ ಯುಕ್ತಿಗಳ್ ಜಲ ।
ಕ್ಕನೆ ತಿಳಿಯುತ್ತುಮಿರ್ದುದನೂನ ವಿಶೋಧಿಯನಾಮೃಗಾಧಿಪಂ ॥ (೧೦೩)

ಕಂ॥ ಒದವಿದ ವಿಶೋಧಿಯಿಂದಾ ।
ದುದು ಮೊದಲೊಳಧಃಪ್ರವೃತ್ತ ಕರಣಂ ಬೞಿಕಾ ॥
ದುದಪೂರ್ವ ಕರಣಮಮರ್ದೆಸೆ ।
ದುದು ನೆಗಳ್ದ ನಿವೃತ್ತಿಕರಣಮಲ್ಲಿಂ ಬೞಿಕಂ ॥ (೧೦೪)

ವ॥ ಅಂತುತ್ತರೋತ್ತರ ವಿಶುಧ್ಯತಿಶಯಾಭಿರಾಮಂಗಳಾದ ಕರಣತ್ರಯಂಗಳೊಳ್ ಅಧಃಪ್ರವೃತ್ತಕರಣದಿಂ ಸ್ಥಿತಿಬಂಧಾಪಸರಣಸಹಸ್ರಮುಂ, ಅಪೂರ್ವಕರಣದಿಂ ಅನೇಕ ಸಹಸ್ರಸ್ಥಿತಿಬಂಧಾಪಸರಣಸ್ಥಿತ್ಯನುಭಾಗಕಾಂಡಕಘಾತಸಂಘಾತಮುಂ, ಗುಣಸಂಕ್ರಮಣ ಗುಣಶ್ರೇಣಿಗಳುಮಾಗಿ ತದನಂತರಂ ಮಹಾಮೋಹದರ್ಪನಿವಾರಣಮುಂ ಗುಣಶ್ರೇಣ್ಯಾದಿಕಾರಣಮುಮಪ್ಪ ನಿವೃತ್ತಿಕರಣ ಸಾಮರ್ಥ್ಯಮುಮೆಂಬ ವಜ್ರದಂಡಘಾತದಿಂ ಖಂಡಿಪ್ರೋದ ಸಂಸಾರದುರ್ಗವಿವರಮೆನಿಸಿ ಮಿಥ್ಯಾತ್ವೋದಯಮಂತರ್ಮುಹೂರ್ತಂ ವ್ಯವಹಿತಮಾಗೆ, ಸಮ್ಯಗ್ಜ್ಞಾನಲಕ್ಷ್ಮೀಸಂಗಮೋಚಿತ ಶುಭಮುಹೂರ್ತಮೆನಿಸಿದಂತರಕಾಲದಂತರ್ಮುಹೂರ್ತದ ಮೊದಲ ಸಮಯದೊಳ್—

ಕಂ॥ ಉದಯಿಸಿದುದು ಮೃಗರಾಜನ ।
ಹೃದಯದೊಳಘ ತಿಮಿರ ತರಣಿ ಸಕಳಾಭಿನುತ ॥
ಪ್ರದ ಚಿಂತಾಮಣಿ ತವಿಲಿ ।
ಲ್ಲದ ಸಂವೇದಾದಿ ಗುಣದಕಣಿ ಸಮ್ಯಕ್ತ್ವಂ ॥ (೧೦೫)

ವ॥ ಆ ಸಮಯದೊಳ್ —

ಚಂ॥ ಮುನಿವದನಾಬ್ಜಮಂ ಪಡೆದು ನೋಬ್ಬಿ ತದುಕ್ತಿಯನೊಲ್ದು ಕೇಳ್ವಲಂ ।
ಪಿನ ಜವಮಾವಗಂ ಮುಸುಳ್ವಿನಂ ಪರಮಾತ್ಮಪದಂ ಸುಯುಕ್ತಿ ಲೋ ॥
ಚನಪಥದೊಳ್ ಕರಂ ವಿದಿತಮಾಗಿರೆ ಸಂತಸಮೊರ್ಮೆಗೊರ್ಮೆ ತ ।
ಣ್ಣನೆ ತಣಿವನ್ನಮುಚ್ಚರಿಸುತಿರ್ದುದು ಚಿತ್ತದೊಳಾ ಮೃಗೇಂದ್ರನಾ ॥ (೧೦೬)

ಪರಮದಯಾಕರಂ ನೆಗಟ್ದ ರಿಂಜಯಯೋಗಿ ಜನಾಗ್ರಗಣ್ಯನಾ ।
ದರದಿನನುಗ್ರಹಂಗೆಯೆ ಸಮಸ್ತಯಥಾಸ್ಥಿತ ವಸ್ತು ತತ್ವಮಂ ॥
ಸುರುಚಿರ ದೃಷ್ಟಿಪುಷ್ಟಿವಡೆದಷ್ಟಗುಣಂಗಳನಂದೆ ಪೆತ್ತವೋಲ್ ।
ಹರಿ ಕರಮೊಪ್ಪಿದತ್ತು ತಳೆದುತ್ಸವಮಂ ವಸುಧೈಕಬಾಂಧವಂ ॥ (೧೦೭)

ಗದ್ಯಂ

ಇದು ನಿಖಿಳಭುವನ ಜನವಿನೂತ ಖ್ಯಾತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರ ಪ್ರಸಾದ ವಾಚಾಮಹಿತ ಕೇಶವರಾಜಾನಂದ
ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ
ಶ್ರೀವರ್ಧಮಾನ ಪುರಾಣದೊಳ್ ಸಿಂಹಸಮ್ಯಕ್ತ್ವ
ಮಾಹಾತ್ಮ್ಯ ವರ್ಣನಂ ಏಕಾದಶಾಶ್ವಾಸಂ.

ದ್ವಾದಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀಮಚ್ಚಾರಣ ಚಾರು ವ।
ಚೋಮೃತದಿಂ ಮುಱಿಗ ಬಳೆದ ಮಿಥ್ಯಾತ್ವದವಂ॥
ಕ್ಷೇಮಂಬಡೆದೆಸೆದುದು ನೆಗ।
ೞ್ದಾ ಮೃಗಪತಿ ಪಂಚಪರಮಗುರು ಪದವಿನತಂ॥ (೧)

ವ॥ ಅಂತು ಪರಮಾತ್ಮಪದಮನನಂತಜ್ಞಾನಾದಿ ಗುಣಗಣಭ್ರಾಜಿತಮಂ ಭ್ರಾಂತಿಸದೆ ಲಬ್ಧಿವಶದಿಂ ತಿಳಿದಡಿಗಡಿಗೆ ರಾಗಿಸುತ್ತಿರ್ಪಾಗಳ್—

ಚಂ॥ ಬಿಗಿಪು ಸಡಿಲ್ವ ಭೋಂಕೆನೆ ಕಟಿಲ್ವ ಪುರಾತನ ಪಾಪಬಂಧದೊ।
ಡ್ಡುಗಳುಮನೆಯ್ದೆ ತಳ್ತಿಡಿದು ಪತ್ತುವ ನೂತನಪುಣ್ಯರೇಣುರಾ॥
ಶಿಗಳುಮನಾಮೃಗಾಧಿಪನ ದರ್ಶನಶುದ್ಧಿಯುಮಂ ಮುನೀಂದ್ರರಾ।
ವಗಮನುರಾಗದಿಂದವಧಿದೃಷ್ಟಿಯಿನೀಕ್ಷಿಸುತಿರ್ದರಿರ್ಪಿನಂ॥ (೨)

ಕಂ॥ ಚಿರಕಾಲಂ ಬಂಧನದೊಳ್।
ಮರುಳಾಗಿರ್ದನ ಮರುಳ್ತನಂ ತಿಳಿದವೊಲೋ॥
ಸರಿಸಿರೆ ಮಿಥ್ಯಾತ್ವಂ ಕೇ।
ಸರಿ ಬಂಧನ ಬಿಡುವುಪಾಯಮಂ ಚಿಂತಿಸುತುಂ। (೩)

ವ॥ ಮುನೀಂದ್ರವದನಾರವಿಂದಮಂ ನೋಡಿ—

ಚಂ॥ ಕನಸಿನೊಳಂ ಮದೇಭಚಯಮಂ ಪಿಡಿಲಂತಿರೆ ಪೊಯ್ದು ಕೊಲ್ವ ಕಾ।
ಯ್ಪಿನ ಗಜಕುಂಭರಕ್ತ ಪಿಶಿತೋತ್ಕರದಿಂ ತಣಿದುಂ ಮೃಗಂಗಳಂ॥
ಬಿನದದೆ ಕೊಲ್ವರೌದ್ರತೆಯ ಕಾರಣದಿಂದೆನಗಾದ ಪಾಪಬಂ।
ಧನದ ತೊಡರ್ಪಿದೆಂತು ಪಱಿಗುಂ ದಯೆಯಿಂ ಬೆಸಸಿಂ ಮುನೀಶ್ವರಾ॥ (೪)

ಕಂ॥ ಎಂದಿಂತು ವಿಳೋಚನಮುಖ।
ದಿಂದಂ ಬಿನ್ನವಿಸಿ ತತ್ವದೋಜ್ವಳ ನಖರು॥
ಕ್ಸಂದೋಹ ವಜ್ರಪಂಜರ।
ಮಂ ದುರಿತಕ್ಕಂಜಿ ಪುಗುವ ತೆಱದಿಂದಾಗಳ್॥ (೫)

ವ॥ ಸರ್ವಾಂಗ ಪ್ರಣತಮಾಗಿರ್ಪಿನಂ—

ಚಂ॥ ವನಚರನೆತ್ತ ಮದ್ಯಮಧುಮಾಂಸನಿವೃತ್ತಿಯದೆತ್ತ ತೀರ್ಥನಾ ।
ಥನ ಸುತನಪ್ಪ ಚಕ್ರಿಯ ತನೂಭವನೆತ್ತ ಕುಮಾರ್ಗಮೆತ್ತ ಸ ॥
ನ್ಮುನಿಪತಿಯೆತ್ತ ಕೋಪದೊದವೆತ್ತ ತಿರೌದ್ರಮನಂ ಮೃಗಾರಿಯೆ ।
ತ್ತಿನಿತುಪಶಾಂತಿಯೆತ್ತ ತನುಭೃತ್ಸರಿಣಾಮಮಿದೇಂ ವಿಚಿತ್ರಮೋ (೬)

ಕಂ॥ ಮುನಿವೃಷಭರಱಿದು ಪಂಚಾ ।
ಸ್ಯನಳವುಮಂ ಕೆಲವು ದೆವಸದಾಯುಷ್ಯಮುಮಂ ॥
ಮನದ ವಿರಕ್ತಿಯುಮಂ ಸಕ ।
ಳನಿವೃತ್ತಿಗೆ ಪದನಿದಪ್ಪುದೆಂದಿಂತೆಂದರ್ (೭)

ಎಲೆ ಭವ್ಯಸಿಂಹ ನಿನಗಿಭ ।
ಕುಲಂಗಳತಿಭಯದಿನೋಡುತಿರ್ಪುವವಂ ನೋ ॥
ಡಲೆವೇಡ ನಿನ್ನನಾಗಳ್ ।
ಮಳಿವಿಂದ್ರಿಯ ಗಜದ ದರ್ಪಮಂ ಕಿಡಿಸೀಗಳ್ (೮)

ಮನಮಂ ಜಿನೇಂದ್ರಪದದೊಳ್ ।
ತನುವಂ ಪ್ರಾಯೋಪಗಮನದೊಳ್ ನಿಯಮಿಸಿ ಮು ॥
ನ್ನಿನ ನಿನ್ನ ರೌದ್ರಭಾವಮ ।
ನನಾಕುಳಂ ತೊಱೆಯೆ ಪಾಪಬಂಧಂ ಕಿಡುಗುಂ (೯)

ಪರಮ ಜಿನಸ್ಮರಣಮೆ ಭವ ।
ಹರಣಮದೀ ಘೋರತಪದೊಳೊಡಗೂಡಲೊಡಂ ॥
ದುರಿತೇಂಧನಮಂ ಚೆಚ್ಚರ ।
ಮುರಿಪುಗುಮುಗ್ರಾಗ್ನಿ ಗಾಳಿಯೊಡಗೂಡಿದವೋಲ್ (೧೦)

ವ॥ ಅದಱಿನೀಗಳ್ ಜಿನಸ್ಮರಣಪೂರ್ವಕಂ ಪ್ರಾಯೋಪಗಮನಮೆಂಬ ನೋಂಪಿಯೆನಗೆ ಕರಣೀಯಮದಂ ನೋಂಪೊಡೆ ದುಸ್ಸಹಪರೀಷಹಂಗಳ್ ಬಿಡದಡಸಿ ಪೀಡಿಸುತ್ತಿರೆಯುಂ, ನಿಜಾಯುರವಸಾನಂಬರಂ ಸ್ವಂಪರವೈಯ್ಯಾಪೃತ್ಯ ನಿರಪೇಕ್ಷೆಯಿಂ ನಿಷ್ಕಂಪಿತ ಶರೀರನಾಗಿ ಧೈರ್ಯಂಗಿಡದಿರಲ್ವೇೞ್ಕುಮೆಂಬುದುಂ—

ಕಂ॥ ಇಲ್ಲಿಂದರಿದುಳ್ಳೊಡಮಾ ।
ನೊಲ್ಲೆನೆ ಲೀಲೆಯೊಳೆ ನೋಂಪೆನೀ ಪಾಪಮದಿಂ ॥
ತಲ್ಲದೆ ಪೋಕುಮೆ ದರವುರ ।
ಮಲ್ಲದ ರುಜೆ ತುಚ್ಛವೈದ್ಯರಿಂ ತೀರ್ದಪುದೇ (೧೧)

ವ॥ ಮಹಾಪ್ರಸಾದಮೆಂದು ಕೆಯ್ಕೊಳ್ವುದುಂ ಅಪ್ರತ್ಯಾಖ್ಯಾನ ವಾಸನಾವಶದಿನ ಪ್ರಶಸ್ತ ವಿಷಯಕ್ಕೆ ಪರಿವ ಮನಮಂ ನಿಯಮಿಸುವುಪಾಯಮನಿಂತೆಂದು ಬೆಸಸಿದರ್—

ಕಂ॥ ಜಿನಸಭೆಯ ಜಿನವಿಭೂತಿಯ ।
ಜಿನದೇಹಪ್ರಭೆಯ ಜಿನಗುಣಾವಳಿಯೊಳ್ಸಂ ॥
ನೆನೆ ಮನದೊಳ್ ನೆನೆಯದೆ ಮು ।
ನ್ನಿನ ದುರ್ವಿಷಯೋಪಭೋಗರಾಗಾದಿಗಳಂ (೧೨)

ವ॥ ಅದೆಂತೆನೆ—

ಕಂ॥ ಧರೆಯಿಂ ಗಗನಕ್ಕಯ್ದು ।
ಸಿರ ಬಿಲ್ಲಂತರದಿನೊಗೆದು ಘಾತಿಕ್ಷಯದಿಂ ।
ಪರಮೇಶ್ವರನೆಸೆದಿರ್ದಂ ।
ಸುರವಿರಚಿತ ಸಮವಸರಣ ಭೂಮಂಡಳದೊಳ್ (೧೩)

ಮ॥ಸ್ರ॥ ವಿನುತಪ್ರಾಸಾದ ಚೈತ್ಯಕ್ಷಿತಿಜಳವಿಳಸದ್ಖಾತಿಕಾಲೀಖವಲ್ಲೀ ।
ವನಮುದ್ಯಾನಂ ಧ್ವಜೋರ್ವೀತಳಮಮರಕುಜ ಕ್ಷೋಣಿ ಸಂಗೀತಹರ್ಮ್ಯಾ ॥
ವನಿ ಲಕ್ಷ್ಮೀಮಂಡಪಂ ಶೋಭಿಸೆ ಗಣವೃತ ಪೀಠತ್ರಯಾಗ್ರಸ್ಥ ಸಿಂಹಾ ।
ಸನದೊಳ್ ಚಂದ್ರಾರ್ಕಕೋಟಿಪ್ರಭನೆಸಗುಮಶೇಷೇಂದ್ರವಂದ್ಯಂ ಜಿನೇಂದ್ರಂ॥ (೧೪)

ಕಂ॥ ಉರಗವಿಷಮಮೃತಜೀವಾ ।
ಕ್ಷರಮಂತ್ರಧ್ಯಾನದಿಂದಮುಪಶಮಿಸುವವೋಲ್ ॥
ದುರಘಮುಪಶಮಿಸುಗುಂ ಶಾಂ ।
ತರಸಾಮೃತಮಯನನರ್ಹನಂ ನೆನೆಯಲೊಡಂ (೧೫)

ಕುಗತಿಯನೆಯ್ದೆ ನಿವಾರಿಪ ।
ಸುಗತಿಯನವಯವದಿನೀವ ಶಾಶ್ವತಪದಮಂ ॥
ಬಗೆದಂತೆ ಮಾಳ್ಪ ಮೈಮೆಗೆ ।
ಜಗದೊಳ್ ಜಿನಭಕ್ತಿ ತಾನೆ ತಾಯ್ವನೆಯಲ್ತೇ (೧೬)

ಎತ್ತಾನುಮೊರ್ಮೆ ನಸುದೋ ।
ಱುತ್ತಂ ಜಿನಭಕ್ತಿ ಮಾಣ್ದುದಾದೊಡಮಾ ಭ ।
ವ್ಯೋತ್ತಮನಘಮುರಿತಾಗಿದ ।
ಬಿತ್ತಂಗೆಣೆಯಕ್ಕುಮೆಂದೊಡೇನಣ್ಣಿಪುದೋ (೧೭)

ವ॥ ಅದುಕಾರಣದಿಂ—

ಕಂ॥ ಪರಮಜ್ಞಾನಾನಂದ ।
ಸ್ವರೂಪನಂ ವೀತರಾಗನಂ ಸಕಳಜಗ ॥
ದ್ಗುರುವಂ ಜಿನೇಂದ್ರನಂ ಭಾ ।
ಸ್ಕರಕೋಟಿಪ್ರಭನನಾಗಳುಂ ನೆನೆ ಮನದೊಳ್ (೧೮)

ಕಂ॥ ತ್ರಿದಶದಿನಂ ತೀವಲೊಡಂ ।
ತ್ರಿದಶತ್ವಮನೆಯ್ದಿ ನೀನೆ ಬಂದು ಸಮಸ್ತ ॥
ತ್ರಿದಶೇಂದ್ರ ವಂದಿತ ಶ್ರೀ ।
ಪದನಂ ಪ್ರತ್ಯಕ್ಷಮಾಗೆ ನಲಿದೀಕ್ಷಿಸುವೈ (೧೯)

ಆ ದೊರೆಯ ಜಿನವಿಭೂತಿಯು ।
ನಾದರದಿಂ ನೋೞ್ಪ ನಿನಗೆ ಪತ್ತನೆಯ ಭವ ॥
ಕ್ಕಾದಪುದು ತೀರ್ಥಕರಪು ।
ಣ್ಯೋದಯಮತಿಸೇವ್ಯಮತಿವಿಚಿತ್ರಾಭ್ಯುದಯಂ (೨೦)

ವ॥ ಎನಲೊಡಮಾ ಬೋಧನಿಧಿಗಳ ವಚನಮಮೋಘಮೆಂದು ನಿಶ್ಚಯಿಸಿ—

ಕಂ॥ ಆಗಳೆ ತನಗಿದಿರ್ವಂದಪ್ಪೊ ।
ಲಾಗಿರೆ ಸರ್ವಜ್ಞಲಕ್ಷ್ಮಿ ಜನಿಯಿಸಿದ ಮನೋ ।
ರಾಗದ ಪೆರ್ಚಂ ನೆಱೆ ಪೊಗ ।
ೞ್ವಾಗಳವಾಗ್ಮನಸಗೋಚರಂ ಮೃಗಪತಿಯಾ ॥ (೨೧)

ಮೃಗರಾಜಂಗಾನಂದಾ ।
ಶ್ರುಗಳೊಗೆದುವು ತೊಳೆದು ಕಳೆವ ತೆಱದಿಂ ಕೊಲ್ವ ॥
ಜ್ಜುಗದೆ ಕಡು ಮುನಿದು ಮುನ್ನಂ ।
ಮೃಗಂಗಳಂ ನೋಡೆ ನೆರೆದ ದುರಿತಾಂಜನಮಂ ॥ (೨೨)

ವ॥ ಅಂತು ರಾಜಪ್ರಸಾದದಿಂ ಮೇಲೆ ಸಾಮ್ರಾಜ್ಯಪಟ್ಟಮಪ್ಪಂತೆ ಸುವರ್ಣಲಾಭದಿಂ ಮೇಲೆ ಚಿಂತಾಮಣಿಯ ಕಣಿ ದೊರೆಕೊಳ್ವಂತೆ ಸರ್ವಜ್ಞದರ್ಶನೋತ್ಸವದಿಂ ಮೇಲೆ ತನಗೆ ಪರಮಾರ್ಹಂತ್ಯಮಪ್ಪುದನಱಿದು ರಾಗರಸದೊಳೋಲಾಡುತ್ತುಂ ಆಕಾರಣಬಂಧುಗಳಪ್ಪಚಾರಣರಂ ನೋಡಿ ಪರಮೋಪಕಾರಸ್ಮರಣದಿನಡಿಗಡಿಗೆ ಪೊಡೆವಡುವುದುಂ—

ಕಂ॥ ದಯೆಯುಂ ಕ್ಷಮೆಯುಂ ಬ್ರತಶು ।
ದ್ಧಿಯುಮಗಲದೆ ನಿನ್ನ ಹೃದಯದೊಳ್ ನೆಲಸಿ ಸಮ್ಯ ॥
ದ್ಧಿಯನೆಯ್ದುತಿರ್ಕೆ ದುಷ್ಕೃತ ।
ಚಯಮದು ಹೀನಬಳಮಾಗುತಿರ್ಕನವರತಂ (೨೩)

ನಿನಗೀಗಳಾದ ಸದ್ದ ।
ರ್ಶನರತ್ನಂ ಮುನ್ನಿನಂತೆ ಮಸುಳದೆ ನಯದಿಂ ।
ದನುದಿನಮುಜ್ವಳಿಸುಗೆ ಪಾ ।
ವನತರ ಪರಮಾವಗಾಢರುಚಿಯಪ್ಪಿನೆಗಂ । (೨೪)

ವ॥ ಎಂದವರ್ ಪರಸಿ ಗಮನೋದ್ಯುಕ್ತಚಿತ್ತರಾಗಿ ನಿಂದಿರ್ದು ತಮ್ಮಗಲ್ಕೆಗೆ ಸೈರಿಸಲಾಱದೆ ಖೇದಿಸುವ ಮೃಗಪತಿಯ ಚೇಷ್ಟೆಯುಂ ಕಂಡು ತತ್ಸಮೀಪಕ್ಕೆ ಬಂದು ಪಂಚೇಂದ್ರಿಯ ಗ್ರಹಪೀಡಾವಿನಾಶನಾರ್ಥಮಿಕ್ಕಿದ ರಕ್ಷೆವಣಿಗಳಂತೆಯುಂ ಪಂಚಮಹಾ ಕಲ್ಯಾಣಫಳಮಂ ದಯೆಗೆಯ್ಯಲೆಂದು ತಳಿದ ಪುಣ್ಯಂಗಳ ಬೀಜಂಗಳಂತೆಯುಂ ನಖ ಮಣಿಗಳತಿರಮಣೀಯಂಗಳಾಗೆ ಕಾರುಣ್ಯದಿಂ ತದೀಯ ಮಸ್ತಕಮಂ ನಿಜಶ್ರೀಹಸ್ತದಿಂ ಮುಟ್ಟಿ—

ಕಂ॥ ನಿನಗಮೆಮಗಂ ಪುನರ್ದ ।
ರ್ಶನಮಾದಪುದೊಂದೆ ತಿಂಗಳಿಂಗೆಲೆ ಪಂಚಾ ॥
ನನ ನೀಂ ಸುರನಾಗಿ ಜಿನೇಂ ।
ದ್ರನನರ್ಚಿಸಲೆಂದು ಬರ್ಪುದುಂ ತತ್ಸಭೆಯೊಳ್ (೨೫)

ವ॥ ಎಂದು ಸಂತಸಂಬಡಿಸಿ ಗಗನಕ್ಕೊಗೆದು ಬಿಜಯಂಗೆಯ್ದಾಗಳ್—

ಕಂ॥ ಅವರ ಪದನಖರ ವಜ್ರ ।
ಚ್ಛವಿಗಳ್ ಚರಣಾರುಣಾಬ್ಜರುಚಿಗಳ್ ಕಂಠೀ ॥
ರವನ ಮನದೊಳಗೆ ನೆಲಸಿ ।
ರ್ದುವು ತೇಜಃಪದ್ಮಲೇಶ್ಯೆಗಳ್ ನೆಲಸುವವೋಲ್ (೨೬)

ವ॥ ಮತ್ತಮವರ ಧರ್ಮೋಪದೇಶಕೌಶಲಮುಂ ಪರಾನುಗ್ರಹಾಗ್ರಹಮುಂ ಮನದೊಳ್ ತಣ್ಮಲಿಯೆ—

ಕಂ॥ ಕಿವಿಗಿಂಪನೀವ ಬಗೆಗು ।
ತ್ಸವಮಂ ಪುಟ್ಟಿಸುವ ಸಂಶಯಮನೆಂತುಂ ತೂ ॥
ಳ್ದುವ ಹಿತಮನಾವಗಂ ಮಾ ।
ಡುವ ಮಾತಿನ ಬಲ್ಮೆ ಕೌತುಕಂ ಮುನಿಪತಿಯಾ (೨೭)

ಕರುಣದಿನಿಂತೀ ಗಹನಾಂ ।
ತರದೊಳಗೆನ್ನನಱಸಿ ಬಂದೆನಗಱಿ[ವಂ ॥
ತಿರೆ ಧರ್ಮಮನಱಿ]ಪಿ ಸಮು ।
ದ್ಧರಿಸಿದರಲ್ಲದೊಡೆ ಪುಗುಬಿ ನರಕಂಬುಗೆನೇ (೨೮)

ವ॥ ಎಂದು ಕಿಱಿದು ಬೇಗಂ ನೆನೆಯುತ್ತುಮಿರ್ದು—

ಕಂ॥ ಅವರ ಪದಸ್ಪರ್ಶನದಿಂ ।
ಪವಿತ್ರಮಾಗಿರ್ದ ತಚ್ಛಿಲಾಪಟ್ಟದೊಳು ।
ತ್ಸವದಿಂ ಪಟ್ಟಿರ್ದುದು ತಳೆ ।
ದುಚಳಮುಪ್ಪೇಕ್ಷಾಸ್ತ್ರನಿಯಮುಚ್ಛ್ರಿತಿಯುಂ ॥ (೨೯)

ವ॥ ಅಂತು ಪಟ್ಟಿರ್ದು—

ಕಂ॥ ಅನವರತಂ ಮೃಗಮಾಂಸಾ।
ಶನದಿಂದಮೆ ಕೊರ್ಬಿದಶುಭಮಶುಚಿತ್ವದ ಭಾ॥
ಜನಮೆನಿಪವಲಕ್ಷಣಮಿಾ।
ತನುವೆಂದಡಿಗಡಿಗೆ ಪೇಸುತ್ತಿರ್ದುದು ಮನದೊಳ್॥ (೩೦)

ತನಗೆ ವಿಷಯಾಮಿಷದ ವಾ।
ಸನೆ ಕಿಱಿದೊರ್ಮೆ ಕನಸಿನೊಳ್ ತೋಱಿದೊಡಂ॥
ಮನಮಂ ತೊಳೆಯುತ್ತಿರ್ದುದು।
ಜಿನಚರಣ ಸ್ಮರಣಮೆಂಬ ತೀರ್ಥೋದಕದಿಂ (೩೧)

ಇರುಳುಂ ಪಗಲುಂ ಬಹುವಿಧ।
ಪರೀಷಹಂ ಬಿಡದೆ ಪೀಡಿಸುತ್ತಿರೆ ತಿಂಗ॥
ಳ್ವರಮೊಂದೆ ಮಗ್ಗುಲೊಳ್ ಕೇ।
ಸರಿ ಕರುವಿಟ್ಟಂತಿರಿರ್ದುದಚಳಿತ ಧೈರ್ಯಂ (೩೨)

ವ॥ ಅಂತಿರ್ಪಾಗಳ್—

ಕಂ॥ ದನಿಗೆಯ್ಯದು ಮಿಸುಕದಿದೇ।
ಕೆನುತುಂ ಮೃಗಧೂರ್ತಸಮಿತಿ ಸಾರ್ತರೆ ಪಂಚಾ॥
ನನನಿರ್ದುದು ಪಂಚತ್ವಮು।
ನನಾಕುಳಂ ಪೊರ್ದಿದಂತೆ ನಿಷ್ಕಂಪತೆಯಿಂ (೩೩)

ವ॥ ಅದಂ ಕಂಡು ಕೌತುಕದಿಂ ನೋಡಲೆಂದು—

ಕಂ॥ ಕುಂಜರ ಘಟೆ ಸಾರ್ತಂದೊಡಿ।
ವಂಜುಗುಮೆಂದಂಜಿ ಕಣ್ಗಳಂ ತೆಱೆಯದೆ ಸಿಂ॥
ಹಂ ಜಾನಿಸುತಿರೆ ಜಿನಪತಿ।
ಯಂ ಜಗುಳ್ದೋಡಿದುವು ದುರಿತಕುಂಜರಘಟೆಗಳ್ (೩೪)

ಚಂ॥ ಉಗಿಬಗಿಮಾಳ್ಪ ದಂಶಮಶಕಂಗಳ ಕೋಳ್ಗೆ ಮಹಾಕ್ಷುಧಾಗ್ನಿಯೇ।
ಱಿಗೆ ಬಿಸಿಲಟ್ಟಿ ಪೆರ್ಚುವ ಪಿಪಾಸೆಗೆ ಚುರ್ಚ್ಚಿನುತಿರ್ಪ ಕಲ್ಲ ಬೆಂ॥
ಕೆಗೆ ಬಿಡದೊಂದುಮಗ್ಗುಲಿರವಿಂಗಿನಿತಳ್ಕದೆ ತತ್ವಚಿಂತೆ ಕೆ।..
ಯ್ಮಿಗೆ ಹೃದಯಂ ಕುಳಿರ್ಕೊಳುತುಮಿರ್ದುದಿದೇಂ ಧೃತಿಯೋ ಮೃಗೇಂದ್ರನಾ(೩೫)

ವ॥ ಮತ್ತಮಾ ಭವ್ಯೋತ್ತಮನಪ್ಪ ಸಿಂಹಂ ತನ್ನ ಸಮ್ಯಕ್ತ್ವಗ್ರಹಣಕಾಲದೊಳ ರಿಂಜಯ ಮುನೀಂದ್ರೋಪದಿಷ್ಟ ಪರಮಾಗಮಯುಕ್ತಿ ವ್ಯಕ್ತಿಗಳಪೂರ್ವ ಸೂರ್ಯಾಂ

ಶುಜಾಳದಂತೆ ಕರ್ಣಗವಾಕ್ಷಜಾಳದಿಂ ಪೊಕ್ಕು ಮನದೋವರಿಯೊಳಿರ್ದ ಮಿಥ್ಯಾತ್ವತಿಮಿರಮಂತೂಳ್ದಿದಂದು ಮೊದಲ್ಗೊಂಡಹರ್ನಿಶಂ ತೊಲಗದೆ ಸಂಶಯಲವಮೆಂಬ ನಸುಗಱ್ತಲೆಯುಮಂ ತಲೆದೋಱಲೀಯದೆ ತೊಳಗಿ ಬೆಳಗುತ್ತುಂ ಪರಮ ರಸಾಯನದಂತೆ ಸಮ್ಯಗ್ದರ್ಶನಂ ಸರ್ವಾಂಗ ಶಕ್ತಿಯಂ ಕೊರ್ವಿಸುತ್ತಿರೆ ಸನ್ಮಾರ್ಗ ಲಾಭಜನಿತ ಸಂತೋಷಾಮೃತಮಂ ಸೇವಿಸುತ್ತುಂ ನಿರಾಯಾಸ ಪ್ರಾಯೋಪಗಮನಮಂ ನೋಂತು ನಿಜಾಯುರವಸಾನ ಸಮಯದೊಳ್ ಆತ್ಮಪ್ರದೇಶಂಗಳೆಲ್ಲಮುಡಿಗಿ ಬರುತ್ತಿರ್ಪುದಂ ಕಂಡು—

ಕಂ॥ ಪಂಚಾಣುವ್ರತಮಂ ಶ್ರೀ ।
ಪಂಚಪದಂಗಳನರಿಂಜಯ ವೃತಿಪದಮಂ ॥
ಸಂಚಳಿಸದೆ ಭಾವಿಸಿದುದು ।
ಪಂಚತ್ವಮನೆಯ್ದುವೆಡೆಯೊಳಂ ಪಂಚಾಸ್ಯಂ ॥ (೩೬

ವ॥ ಅದಲ್ಲದೆಯುಂ—

ಉ॥ ಇಂದಮರೇಂದ್ರವಂದ್ಯನ ಸಭಾಂತರಮಂ ಪುಗುವೆಂ ನಿರಂಜನಾ ।
ನಂದನನಾ ಜಿನೇಂದ್ರನನಲಂಪಿನೊಳರ್ಚಿಸುವೆಂ ವಿಶೋಧಿಯಿಂ ॥
ಬಂದಿಪೆನೆನ್ನ ಕಣ್ತಣಿಯೆ ನೋಡುವೆನೀದಿನವೆನ್ನಭೀಷ್ಟಮಾ ।
ಯ್ತೆಂದನುರಾಗಮಂ ತಳೆದುದೇಂ ಮತಿ ನಿಶ್ಚಳಮೋ ಮೃಗೇಂದ್ರನಾ ॥ (೩೭)

ಕಂ॥ ಇದು ನೀಚಗತಿಯ ಸಂಕ್ಲೇ ।
ಶದೊಳೆಂದುಂ ಪುಗದುಪಾಯಮೆನಗೆಂದರ್ಹ ॥
ತ್ಪದಯುಗಮಂ ನೆನೆಯುತ್ತುಮೆ ।
ಮುದದಿಂ ಬಿಟ್ಟುದು ಶರೀರಮಂ ಮೃಗರಾಜಂ ॥ (೩೮)

ವ॥ ಅಂತು ದರ್ಶನಾವರಣೀಯದೊಳ್ ಸ್ತ್ಯಾನಗೃದ್ಧಿತ್ರಯಮುಂ, ಮೋಹನೀಯದೊಳ್ ಮಿಥ್ಯಾತ್ವತ್ರಯಮುಮನಂತಾನುಬಂಧಿ ಚತುಷ್ಟಯಮುಂ ನಪುಂಸಕ ವೇದಮುಂ, ಸ್ತ್ರೀವೇದಮುಂ, ಆಯುಷ್ಯದೊಳ್ ನರಕತಿರ್ಯಗಾಯುಷ್ಯಮುಂ, ನಾಮಕರ್ಮದೊಳ್ ನರಕದ್ವಿಕಮುಂ, ತಿರ್ಯಗ್ದ್ವಿಕಮುಂ, ಮೊದಲಿಂದ್ರಿಯ ಚತುಷ್ಕಮುಂ, ಕಡೆಯಯ್ದುಂ ಸಂಸ್ಥಾನಮುಂ. ಕಡೆಯಯ್ದುಂ ಸಂಹನನಮುಂ, ಉದ್ಯೋತಮುಂ, ಅಪ್ರಶಸ್ತ ವಿಹಾಯೋಗತಿಯುಂ, ಸ್ಥಾವರಮುಂ, ಸೂಕ್ಷ್ಮತ್ರಯಮುಂ ದುರ್ಭಗತ್ರಯಮುಂ, ಗೋತ್ರಕರ್ಮದೊಳ್ ನೀಚೈರ್ಗೋತ್ರಮುಮೆಂಬ ನಾಲ್ವತ್ತೊಂದು ಪ್ರಕೃತಿಗಳ ಬಂಧಾನುಬಂಧಮನೆಂದಿಂಗಮೊಲ್ಲೆನೆಂದು ತೊಱೆದು ಕಳೆದು ಮುಳ್ಳನೆಱೆದೀಡಾಡುವಂದದಿಂ ಕ್ರೂರಾಕಾರಮಪ್ಪ ಸಿಂಹಪರ್ಯಾಯಮನೀಡಾಡಿ ಕಳೆದು ಪರಮೈಶ್ವರ್ಯ ಭಕ್ತಿಯ ಮೆಯ್ಮೆಯಿಂ, ಪ್ರಥಮಕಲ್ಪಪ್ರಾಪ್ತಮಾದುದಾ ದೇವಗತಿಗೆಯ್ದಿದಂದಮೆಂತಿರ್ದುದೆಂದೊಡೆ—

ಕಂ॥ ಸೆಱೆಯಿಕ್ಕಿ ನೀಚಯೋನಿಯೊ।
ಳಱೆ ದಂಡಿಸುವಶುಭ ಕರ್ಮರಿಪುಗಳ ಕೋಪಂ॥
ಪಱಿಪಡಿಸಿ ಶುಭಾಸ್ರವಮಂ।
ಬಱಿಕೆಯ ಶೇಷಾಕ್ಷತಂಗಳಂ ತಳಿಯುತ್ತುಂ॥ (೩೯)

ಭವಭಯಹರನಂ ಕಾಣಿಸ।
ಲವಯವದೊಡಗೊಂಡು ಪೋಪ ಜಿನಭಕ್ತಿಮಹೋ॥
ತ್ಸವದಿನಳಂಕಾರಂ ಗೆ।
ಯ್ಯುವೆಡೆಗೆ ಮುನ್ನುಯ್ದುದೆಂಬ ತೆಱನಂ ಪೋಲ್ಕುಂ॥ (೪೦)

ಮ॥ ಪಲವುಂ ರತ್ನಗೃಹಂಗಳಿಂ ಸುರಕುಜಾರಾಮಂಗಳಿಂ ನಿತ್ಯನಿ।
ರ್ಮಳ ರತ್ನಾತ್ಮಕ ಜೈನಸದ್ಮಚಯದಿಂದಾಸನ್ನಭವ್ಯಾವರಾ॥
ವಳಿಯಿಂ ಧರ್ಮಕಥಾಪ್ರಸಂಗಧರನಾಗಿರ್ಪಿಂದ್ರನಾಸ್ಥಾನದಿಂ।
ಲಲಿತೈಶ್ವರ್ಯದ ದೇವಕೋಟಿಗಳಿನಾಕಲ್ಪಂ ಕರಂ ರಂಜಿಕುಂ॥ (೪೧)

ಕಂ॥ ದಿವಿಜಪತಿ ಮಾಳ್ಪ ಧರ್ಮ।
ಶ್ರವಣಂ ಧರ್ಮಾನುರಾಗಮರ್ಹತ್ಪೂಜೋ॥
ತ್ಸವಮಾಗಳುಮಘವುಂ ತೂ।
ಱ್ದುವುದಱಿನಾ ಕಲ್ಪಮಲ್ತೆ ಭವ್ಯಮನೋಜ್ಞಂ॥ (೪೨)

ವ॥ ಅಂತು ಪೊಗೞ್ತೆವೆತ್ತ ಸೌಧರ್ಮಕಲ್ಪದ ಸಿಂಹಧ್ವಜಮೆಂಬ ವಿಮಾನದುಪಪಾದ ಭವನದೊಳಗೆ ಪುಣ್ಯಪ್ರಭಾವದಿಂ ಕಲ್ಪವೃಕ್ಷ ಕುಸುಮಂಗಳ ಸುಗಂಧಸ್ನಿಗ್ಧಸುಚ್ಛಾಯ ಮಕರಂದ ಸಂದೋಹಮೊಂದೆಡೆಯೊಳ್ ರಾಶಿಗೊಂಡು ಪಾಸಾದಂತೆ ಮನೋಹರಮಾಗಿರ್ದ ಮೃದುತಳ್ಪಸಂಪುಟದೊಳಾ ಪುಣ್ಯಜೀವಂ ಬಂದು ನೆಲಸಿ ಷಟ್ಪರ್ಯಾಪ್ತಿಗಳ್ ನೆಱೆವುದುಂ, ವಿಕಸಿತಮಾದ ಶಯ್ಯಾಸಂಪುಟಮೆಂಬ ಶುಕ್ತಿಕಾಸಂಪುಟದೊಳಗೆ ಕಾಂಚನಚ್ಛವಿಯನೊಳಕೊಂಡು ತೊಳಗಿ ಬೆಳಗುತ್ತುಮಿರ್ದಪೂರ್ವ ಮುಕ್ತಾಫಳಮಿದೆಂಬಂತೆ ದಿವ್ಯಾಕಾರಮಂ ತಾಳ್ದಿ ದಿವ್ಯವಸ್ತ್ರಾಭರಣಮಾಲ್ಯಾಳಂಕೃತನಾಗಿ ಕುಳ್ಳಿರ್ಪುದುಂ—

ಕಂ॥ ತೆಱೆದುದುಪಪಾದ ಭವನದ।
ಮಿಱುಗುವ ಮಾಣಿಕದ ಪಡಿಗಳೊಡನೊಡನಾಗಳ್॥
ಪೊಱಪೊಣ್ಮಿದುದಾದೇವನ।
ಮೆಱೆವಂಗಪ್ರಭೆಯುಮುತನು ತನ:ಸೌರಭಮುಂ॥ (೪೩)

ಕನಕಾಬ್ಜಾಕರಮಲರ್ದ।
ತ್ತೆನೆ ಚಂಪಕ ಮಲ್ಲಿಕಾ ಕುಸುಮವೃಷ್ಟಿ ಸುರಿದ॥
ತ್ತೆನೆ ಕಂಪಿನ ಪೊಂಪುೞಿವೋ।
ಪ ನಿಳಿಂಪನ ಮೆಯ್ವೆಳಗೇಂ ಕರಂ ಮನಂಗೊಳಿಸಿದುದೋ॥ (೪೪)

ವ॥ ಆ ಶುಭ ಮುಹೂರ್ತದೊಳ್—

ಕಂ॥ ಧವಳಾಕ್ಷತಂಗಳಂ ತಳಿ ।
ವವೊಲೆಸೆದುದು ಪುಣ್ಯಪುದ್ಗಳಾತ್ಮಕಮುಂ ತ ॥
ದ್ದಿವಿಜ ಶ್ರೀಮುಖಮುಂ ನೋ ।
ಡುವ ದೇವೀಜನದ ಪೊಳೆವಪಾಂಗಪ್ರಭೆಗಳ್ ॥ (೪೫)

ವ॥ ಮತ್ತಮಾ ಸಮಯದೊಳ್—

ಕಂ॥ ಪರಿವಾರಾಮರರೆಲ್ಲಂ ।
ಪರಸುತ್ತುಂ ಪೊಡೆವಡುತ್ತುಮಿರೆ ನಭದೊಳ್ ಭೋ ॥
ರ್ಗರೆಯುತ್ತಿರೆ ಸುರದುಂದುಭಿ ।
ಪರಿಮಳಮಯಮಾಗಿ ತೀಡುತಿರೆ ಗಂಧವಹಂ ॥ (೪೬)

ಮುಗಮುಗಿಪ ನವೇರುವ ಬಾ ।
ಸಿಗದಿಂ ಪಜ್ಜಳಿಪ ರತ್ನಭೂಷಣದಿಂ ಚೆ ॥
ಲ್ವಗಲದ ದಿವ್ಯಾಂಬರದಿಂ ।
ಸೊಗಯಿಸುತಿರೆ ತನ್ನ ಕೋಮಳಾಂಗ ವಿಳಾಸಂ ॥ (೪೭)

ವ॥ ಅನಿತುಮಂ ಕಂಡು ವಿಸ್ಮಯಂಬಟ್ಟು—

ಮ॥ ಸ್ರ॥ ಪದುಳಂ ಕುಳ್ಳಿರ್ದ ನಾನಾರ್ ಪೊಡವಡುವಿವರಾರ್ ಆವುದೀ ಲೋಕಮಿಾಸ್ಥಾ ।
ನದ ನಾಮೋದ್ದೇಶಮೇನೆಂತೆನಗಿನಿತು ವಿಳಾಸಂ ಮಹೈಶ್ವರ್ಯಮಾಯ್ತೆಂ ।
ಬುದನಾರಯ್ವನ್ನೆಗಂ ಪುಟ್ಟಿದುದಮಳ ಭವಪ್ರತ್ಯಯ ಜ್ಞಾನಮಾಜ್ಞಾ ।
ನದಿನಾದೇವಂಗೆ ಚೇತೋಗತಮನಿತುಮತಿವ್ಯಕ್ತಮಾಗಿರ್ದುದಾಗಳ್ ॥ (೪೮)

ಮ॥ ಎಲೆ ಮುನ್ನಾನಿಭವೈರಿ ಚಾರಣಮುನೀಂದ್ರರ್ ಪೇಱೆ ಕೆಯ್ಕೊಂಡೆನೆ ।
ನ್ನೊಲವಿಂ ಧರ್ಮಮನಾಯ್ತು ತತ್ಫಲದಿನೀದೇವತ್ವಮೆನ್ನೊಳ್ ಸುನಿ ॥
ಶ್ಚಳಮಿಾಲೋಕಮಮರ್ತ್ಯಲೋಕಮಿದು ದೇವಸ್ತೋಮಮಿಾಸರ್ವಕೋ ।
ಮಳೆಯರ್ ದೇವಿಯರಿಂತಿದೆನ್ನಯ ವಿಮಾನಂ ರಮ್ಯ ಸಿಂಹಧ್ವಜಂ ॥ (೪೯)

ಕಂ॥ ದೂರದೊಳೆ ಕೇಳ್ದು ನಲಿವೆನ ।
ಗೀ ರಮ್ಯಮಹರ್ದಿಕತ್ವಮಾಯ್ತೆಂದೊಡೆ ಕ ॥
ಣ್ಣಾರೆ ಜಿನೇಶ್ವರನಂ ಕಂ ।
ಡಾರಾಧಿಸುತಿರ್ಪ ಪುಣ್ಯನಿಧಿಗರಿದುಂಟೇ ॥ (೫೦)

ವ॥ ಎಂದು ಪರಿಭಾವಿಸಿ ದೆಸೆಗಳಂ ನೋೞ್ಪಾಗಳ್—

ಕಂ॥ ಜಿನಮತದೊಳ್ಪನೆ ತಾಂ ಮು ।
ನ್ನಿನ ಭವದೊಳ್ ಮೆಚ್ಚುತಿರ್ದ ಫಲದಿಂ ದಿವಿಜಾಂ ॥
ಗನೆಯರುಮನಿಮಿಷರುಂ ತ ।
ನ್ನನೆ ಮೆಚ್ಚಿ ಕರಂ ಮರಳ್ದು ನೋಡುತ್ತಿರ್ದರ್ ॥ (೫೧)

ವ॥ ಇರ್ಪಿನಂ—

ಕಂ॥ ಎನಗಿನಿತೈಶ್ವರ್ಯಂ [ವರ] ।
ಜಿನೇಶ್ವರ ಸ್ಮೃತಿಯಿನಾಮುನೀಶ್ವರರುಪದೇ ॥
ಶನದಿಂದೆ ಸಮನಿಸಿತ್ತದ ।
ಱಿನಿಂದೆ ತತ್ಪದಪಯೋಜಮಂ ಪೂಜಿಸುವೆಂ ॥ (೫೨)

ವ॥ ಎಂದು ಪರಿಭಾವಿಸಿ ಭವ್ಯಜನಕಮಳಮಾರ್ತಂಡನಾ ಸಿಂಹಧ್ವಜವೈಮಾನಿಕ ಪ್ರಕಾಂಡಂ ಸ್ವಕೀಯ ಸಕಳ ಪುರಜನಪುರಸ್ಸರಂ ಸಮಸ್ತ ಪ್ರಶಸ್ತಾರ್ಚನಾವಸ್ತುಸಮಿತಿ ಸಮೇತನಾಗಿ ರಾಗದಿನಲ್ಲಿಂ ತಳರ್ದು ನಡೆವಾಗಳ್—

ಕಂ॥ ದಿವಿಜಾಂಗನೆಯರ ವಿಳಸಿತ ।
ಧವಳಾಪಾಂಗ ಪ್ರಭಾಲಸಚ್ಚಂದ್ರಿಕೆ ಪ ॥
ರ್ವೆ ವಿಯತ್ತಳದೊಳ್ ತಳೆದಂ ।
ಸುವಿಮಳವಪು ಚಂದ್ರಲೀಲೆಯಂ ರುಂದ್ರಯಶಂ ॥ (೫೩)

ಮಣಿಮಯ ನಾನಾವಿಧ ಭೂ ।
ಷಣ ದೀಧಿತಿ ಗಗನವಳಯಮಂ ಬಳಸಿದುದಾ ॥
ಗುಣನಿಧಿಯ ಹೃದಯದಿಂ ತಿಂ ।
ತಿಣಿಯೆನೆ ಪೊಱಮಟ್ಟ ರಾಗರಸಮೆಂಬಿನೆಗಂ ॥ (೫೪)

ವ॥ ಅಂತು ಮಹಾವಿಭವದಿಂ ನಡೆದು ಪರಮಾರ್ಹಂತ್ಯ ಕಮಳಾಧರರೆನಿಸಿದ ಕಮಳಾಧರಜಿನೇಂದ್ರನ ದಿವ್ಯಮಂದಿರಮನವ್ಯಗ್ರದಿಂ ಭವ್ಯಾಗ್ರಣಿಪ್ರಣುತಮಂ ಪೊಕ್ಕು - ಕೃತತ್ರಿಪ್ರದಕ್ಷಿಣಂ ಕೇವಲಜ್ಞಾನವೀಕ್ಷಣನ ಪಾದಪೀಠೋಪಾಂತಮಂ ಕಾಂತಾರ್ಚನೆಗಳಿನರ್ಚಿಸಿ ಸರ್ವಾಂಗಾಲಿಂಗಿತೋರ್ವೀತಳಪುಳಕಿತಾಂಗಂ ತದಭಿಮುಖಂ ನಿಂದಿರ್ದು ನಿಟಿಲತಟಘಟಿತ ಕುಟ್ಮಳಿತ ಕರಸರೋಜನಾಗಿ—

ಕಂ॥ ಜಯಜಯ ನಿರಾಮಯ ಶ್ರೀ ।
ಪ್ರಿಯ ಜಯಜಯ ಸಕಳ ಭುವನವಂದಿತ ಪಾದ ॥
ದ್ವಯ ಜಯಜಯ ವರ ಬೋಧೋ ।
ದಯ ಜಯಜಯ ನಿಖಿಳ ದುರಿತಹರ ಪರಮಜಿನಾ ॥ (೫೫)

ಚಂ॥ ಜಯಜಯ ಭವ್ಯಸೇವ್ಯ ಭುವನತ್ರಯವಲ್ಲಭ ದೇವದೇವ ನಿ।
ರ್ಭಯ ನಿರವದ್ಯ ನಿರ್ಮಳ ನಿರಾಮಯ ನಿರ್ಮದ ನಿರ್ವಿಕಾರ ನಿ॥
ರ್ವ್ಯಯಪದ ನಿಶ್ಚಿತಾಖಿಳಪದಾರ್ಥ ನಿರಂಜನ ನಿರ್ಜಿತಾಶ ನಿ।
ನ್ನಯ ಪದಪಂಕಜಕ್ಕೆಱಗುವಂಗರಿದುಂಟೆ ಜಗಂಗಳೊಳ್ ಜಿನಾ॥ (೫೬)

ಕಂ॥ ಜಿನ ನಿನತು ಮತದೊಳೆಸಗಿದ।
ಜನತೆಗೆ ಜನಿಯಿಸುಗುಮಖಿಳಮಭ್ಯುದಯಂ ನೆ॥
ಟ್ಟನೆ ನಿಶ್ಶ್ರೇಯಸಸಮುದಱಿಂ।
ಜನಹಿತಮಿತವಚನ ನಿನ್ನಚರಣಂ ಶರಣಂ॥ (೫೭)

ವ॥ ಎಂದನೇಕ ಸ್ತೋತ್ರಪವಿತ್ರಂಗಳಿಂ ಸ್ತುತಿಯಿಸಿ—

ಕಂ॥ ತದನಂತರಮಲ್ಲಿಂ ತಳ।
ರ್ದುದಾತ್ತಗುಣರೆನಿಪರಿಂಜಯಾಮಿತಗುಣನಾ॥
ಮುದಿನೊಪ್ಪಿರ್ಪ ಮುನೀಂದ್ರರ।
ಪದಪದ್ಮಮನನಮಳಭಕ್ತಿಯಿಂದಾ ದಿವಿಜಂ॥ (೫೮)

ವಿವಿಧಾರ್ಚನೆಗಳಿನರ್ಚಿಸಿ।
ಸುವಿಶುದ್ಧ ತಪೋನಿಧಾನರಂ ಬಂದಿಸಿ ನಿ॥
ಮ್ಮ ವಚಶ್ರುತಿಯಿಂದೆನಗಿನಿ।
ತು ವಿಭವಮಾಯ್ತಾಪ್ತವಚನದಿಂದಾಗದುದೇಂ॥ (೫೯)

ವ॥ ಎಂದು ಮತ್ತಮಿಂತೆಂದಂ—

ಕಂ॥ ಭವವಾರಿರಾಶಿಯೊಳ್ ಕ।
ರ್ಮವಶದಿನಬ್ದಿರ್ದ ಜಂತುಸಂತಾನಮನು॥
ತ್ಸವದೆತ್ತುವ ದಕ್ಷತೆ ನಿಮ।
ಗೆ ವಲಂ ನಿಜಮೇನದನ್ಯಸಾಧಾರಣಮೇ॥ (೬೦)

ಕೇಸರಿ ರೌದ್ರಾತ್ಮಕದಾ।
ವಾಸಂ ಚೀ ಪೇಸುಪಥದ ನೆಲೆ ಕಾನನಮೆಂ॥
ದೋಸರಿಸದೆ ತಿಳಿಪಿ ಭವ।
ದ್ವಾಸನನೆನ್ನಂ ಮಹೋನ್ನತಿಯನೆಯ್ದಿಸಿದಿರ್॥ (೬೧)

ಎಂದಾ ಮುನೀಂದ್ರರಂತಾ।
ನಂದಾನಂದದೊಳೆ ಪೊಗಟ್ಟು ತತ್ಪದಯುಗಮಂ॥
ಬಂದಿಸಿ ನಿಜಾಸ್ಪದಕ್ಕೆ।
ಯ್ತಂದು ಸುಖಾಮೃತದೆ ತಣಿಯುತಿರ್ದಂ ದಿವಿಜಂ॥ (೬೨)

ವ॥ ಅಂತಾಸಿಂಹಚರಸುಪರ್ವಂ ಸ್ವರ್ಬಹುಳಸುಖಮನನುಭವಿಸಿ ಜಿನಮಹಾ ಮಹಿಮೆಗಳಿಂ ನಿಜಾಯುವಂ ತವಿಸಿ, ನಿಖಿಳಶೋಭಾಕರಂಡದ ಧಾತಕೀಷಂಡದ ವಿಚಿತ್ರ ರತ್ನಕಂದರದ ಮೂಡಣಮಂದರದ ಸಕಳಸಂಪತ್ತಿಗೇಹದ ಪೂರ್ವವಿದೇಹದ ಜಳವಿಹಗ ಕಳಧ್ವನಿಯ ಸೀತಾತರಂಗಿಣಿಯ ಸುಕವಿಸಂಸ್ತವಾಧಾರದ ಬಡಗಣ ತೀರದ ಸಮಸ್ತ ವಸ್ತುವಿಷಯದ ಕಚ್ಛಮಹಾವಿಷಯದ ಜಿನಭವನಭೂಷಿತಮೂರ್ಧದ, ಪರಾರ್ಧ್ಯವಿಜ ಯಾರ್ಧದ ವಿದ್ಯಾಧರವಿಳಾಸಕ್ಷೋಣಿಯ ತದೀಯದಕ್ಷಿಣಶ್ರೇಣಿಯ ಕನತ್ಕನಕಗೋಪು ರದ ಕನಕಪುರದೇಶ್ವರನುಂ, ವಿಯಚ್ಚರನುಮಪ್ಪ—

ಕಂ॥ ಕನಕಪ್ರಭಂಗಮೆಸೆವಾ।
ತನ ವಲ್ಲಭೆ ಕನಕಮಾಲೆಗಂ ತತ್ಪಂಚಾ॥
ನನಚರ ಸುರವರನೊಲವಿಂ।
ಕನಕಧ್ವಜನೆಂಬ ಪೆಸರ ನಂದನನಾದಂ॥ (೬೩)

ಆ ನಂದನಂಗೆ ಸಕಳಜ।
ನಾನಂದಕರಂಗೆ ವಿನುತ ರೂಪವಿಳಾಸ॥
ಶ್ರೀನಂದನಂಗೆ ಮಾನಿನಿ।
ಭೂನುತೆ ಕನಕಪ್ರಭಾಖ್ಯೆ ವಲ್ಲಭೆಯಾದಳ್॥ (೬೪)

ಉ॥ ಆಕನಕಧ್ವಜಂಗಮೆಸೆವಾ ಕನಕಪ್ರಭೆಗಂ ಜಗಜ್ಜನಾ।
ನೀಕನುತಂ ಸುತಂ ಕನಕಪೂರ್ವರಥಂ ಪೃಥುಪುಣ್ಯನಾದನಂ॥
ತಾಕಮನೀಯ ಪುತ್ರವರ ಪೌತ್ರಯುಗಂಬೆರಸಾ ಖಗೇಶ್ವರಂ।
ಶ್ರೀಕನಕಪ್ರಭಂ ಸುಖದೆ ವರ್ತಿಸಿದಂ ಚಿರಮುದ್ಧರಾಜ್ಯದೊಳ್॥ (೬೫)

ಒಂದು ದಿನಂ ಮನೋಜನ ವಿರಾಜಿಪ ಕೆಯ್ಯುವಿದೆಂಬಿನಂ ಮಹಾ।
ನಂದದಿನಾಂತು ಮಂಡನಮನೀಕ್ಷಿಸುತುಂ ಮುಕುರುಂದದೊಳ್ ನಿಜಾ॥
ಸ್ಯೇಂದುವನಾವಗಂ ವರವಿರಕ್ತಿ ನಿಯೋಜಿಸೆ ಬಂದ ಧೂತಿಯೆಂ।
ಬಂದದ ಶುಕ್ಲ ಕೇಶಲತೆಯಂ ಕನಕಪ್ರಭನೊಲ್ದು ನೋಡಿದಂ॥ (೬೬)

ವ॥ ಅಂತು ನೀಡುಂ ನೋಡಿ—

ಕಂ॥ ವಿರಸಾವಸಾನಮಾಯಾ।
ಸರಚಿತಮಚಿರ ಪ್ರವೃತ್ತಮುಪಚಿತ ಬಾಧಾ॥
ಪರಿಕರಮಸಾರಭೂತಂ।
ಪರಿಕಿಪೊಡಿಂದ್ರಿಯಸುಖಂ ವಿಷಾದಾಭಿಮುಖಂ॥ (೬೭)

ಉ॥ ಎಂದು ವಿರಾಗಭಾವಮನೆ ಭಾವಿಸಿ ಭಾವಕಲೋಕಬಾಂಧವಂ।
ಸಂದ ಖಗೇಶ್ವರಂ ಕನಕಕೇತುಗೆ ರಾಜ್ಯಮನಿತ್ತು ಮೇದಿನೀ॥
ವಂದಿತ ಪಾದಪದ್ಮ ಸುಮತಿಬ್ರತಿ ಸನ್ನಿಧಿಯೊಳ್ ಜಗತ್ರಯಾ।
ನಿಂದಿತಲಕ್ಷ್ಮಿಯುಂ ಜಿನರ ದೀಕ್ಷೆಯನುತ್ಸವದಿಂದೆ ತಾಳ್ದಿದಂ॥ (೭೮)

ವ॥ ಇತ್ತಲಾ ಕನಕಧ್ವಜಂ ನಿತಂಬಿನೀನಿಕರಮಕರಧ್ವಜನುಂ, ರಿಪುವಿಪಿನ ಧೂಮಧ್ವಜನುಮೆನಿಸಿ ಖಗೇಶ್ವರವಿಭೂತಿಯಂ ತಳೆದು ವಿವಿಧವಿನೋದಪರಂಪರೆಗಳಿಂ ಸಫಳೀಕೃತರಾತ್ರಿಂದಿವನಿವಹನಾಗಿ ವರ್ತಿಸುತ್ತುಮಿರ್ದು—

ಚಂ॥ ಮಿಸುಪ ವಸಂತದೊಳ್ ಕಿಸಲಯ ಪ್ರಸವೋದ್ಧ ಫಳಂಗಳಿಂ ವಿರಾ।
ಜಿಸುವ ವನಾಂತರಾಳದೊಳಗೊರ್ವು ಸನರ್ಮು ಸುಹೃಜ್ಜನಂ ವಿಹಾ॥
ರಿಸುತುಮದೊಂದು ಚಾರುಪುಳಿನಸ್ಥಳದಗ್ರದೊಳಿರ್ದನಂ ದಯಾ।
ವಸಥನನೊಲ್ದು ಸುಬ್ರತಮುಮುಕ್ಷುವನೀಕ್ಷಿಸಿ ತತ್ಖಗೇಶ್ವರಂ॥ (೭೯)

ವ॥ ಕರಂ ಸಂಭ್ರಮದಿಂ ಸಮುತ್ಸವಾಂತಃಕರಣಂ ಯಮಿಕುಳಾಭರಣನಲ್ಲಿಗೆ ಪೋಗಿ ಕೃತಪ್ರದಕ್ಷಿಣಂ ತದೀಯ ಪದಪದ್ಮಂಗಳಂ ದಿವ್ಯಾರ್ಚನೆಗಳನರ್ಚಿಸಿ ವಿದಿತ ವಂದನಂ ತದಾಶೀರ್ವಚಃಪೀಯೂಷಪೂರ್ಣಕರ್ಣಕುಹರನಾಗಿ ಪುರೋಧರಿತ್ರಿಯೊಳ್ ಕುಳ್ಳಿರ್ದು—

ಕಂ॥ ಜ್ಞಾತವ್ಯಂ ತನಗೆನಿಸಿದ।
ಭೂತಳಸಾರಮನುಪಾಸಕಾಚಾರಮನಾ॥
ಖ್ಯಾತ ಯತಿಗಳೊಳೆ ತಿಳಿದು ಗೃ।
ಹೀತ ಬ್ರತನಾದನಿದು ವಿಚಾರಕ್ಕೆ ಫಲಂ॥ (೮೦)

ವ॥ ಅಂತನಣುಫಲಾಣುಬ್ರತಧಾರಿಯಾಗಿ ಧಾರಿಣೀಶ್ವರಂ ಮುನೀಶ್ವರನಂ ಬೀಳ್ಕೊಂಡು ನಿಜನಿವಾಸಕ್ಕೆ ಪೋಗಿ—

ಕಂ॥ ಲೀಲೆಯೊಳೆ ದಾನ ಪೂಜಾ।
ಶೀಲಾನಶನಂಗಳೆಂಬ ಧರ್ಮಂಗಳನಾ॥
ಭೂಲಲನಾಪತಿ ಸತತಂ।
ಪಾಲಿಸಿದಂ ಭವ್ಯಭಾನು ವಾಣೀಕಾಂತಂ॥ (೮೧)

ವ॥ ಒರ್ಮೆ ಪೆರ್ಮೆವೆತ್ತ ನಿಜ ಭರ್ಮನಿರ್ಮಿತ ಹರ್ಮ್ಯೋಪರಿಮ ಭೂಮಿಕೆಯೊಳಾ ಮಹಾವಿಯಚ್ಚರೇಶ್ವರಂ ವಿನೋದಾನುಕೂಲ ಮೂಲ ಕತಿಪಯ ಪರಿಜನ ಪರಿವೃತನಾಗಿ, ದಿಗವಲೋಕನಾಕಳಿತ ಕೌತುಕೇಕ್ಷಣನಿರ್ಪುದುಮಾಕ್ಷಣದೊಳ್—

ಕಂ॥ ಗಗನಾಂತರದೊಳ್ ಸಲೆ ಪೆ ।
ರ್ಮುಗಿಲೊಂದು ವಿಚಿತ್ರಕೂಟ ಕೋಟಿಕ್ರಮದಿಂ ॥
ನೆಗೆದುದು ಬಳೆದುದು ಬೇಗದೆ ।
ಮುಗಿದುದು ಕರಗಿದುದು ನರರ ಸಿರಿಗನುರೂಪಂ ॥ (೭೨)

ಅದನೆಮೆಯಿಕ್ಕದೆ ಈಕ್ಷಿಸಿ ।
ವಿದಗ್ಧತಾವೃತ್ತಿ ವಿದಿತ ವಸ್ತುಸ್ಥಿತಿಕಂ ॥
ಹೃದಯದೊಳೊದವಿದ ವೈರಾ।
ಗ್ಯದ ಸಂಪತ್ತಿಗೆ ಖಗೇಶ್ವರಂ ನೆಲೆಯಾದಂ ॥ (೭೩)

ದಂಡಧರನೆಂಬ ಸೊರ್ಕಿದ ।
ಶುಂಡಾಳದ ದಂತದಂತರಾಳದೊಳಿರ್ಪೀ ॥
ಭಂಡಮೆನಿಪ್ಪೊಡಲಂ ಕೆ ।
ಯ್ಕೊಂಡುಂ ಗಡ ಜೀವನಾವಗಂ ಮುಯ್ವಾಂಪಂ ॥ (೭೪)

ವ॥ ಎಂದು ಸಂಸಾರಶರೀರಾಸಾರತೆಗೆ ಧಾರಾಧರಂ ಕಾರಣಮಾಗೆ ಧಾರಿಣೀಶ್ವರನವಧಾರಿಸಿ—

ಚಂ॥ ಕನಕರಥಂಗೆ ರಾಜ್ಯಭರಮಂ ಭರದಿಂದಮೆ ಕೊಟ್ಟು ಸುವ್ರತಾ ।
ವನಿನುತ ಯೋಗಿನಾಯಕನ ಪಾದಪಯೋರುಹ ಸನ್ನಿಧಾನದೊಳ್ ॥
ಜಿನಪತಿದೀಕ್ಷೆಯಂ ಪರಮ ಪಾವನಮಂ ಭುವನೈಕ ವಂದ್ಯಮಂ ।
ಮನದನುರಾಗದಿಂ ತಳೆದು ಸಂಯಮವಾರಿಧಿಯಾದನಾನೃಪಂ ॥ (೭೫)

ವ॥ ಅಂತು ದುರ್ಧರ ತಪೋನುಷ್ಠಾನನಿಷ್ಠೆಯಿಂ ನಿಜಾಯುಃಪಾರಮನೆಯ್ದಿದ ಕನಕಧ್ವಜಮುನಿವರಂ ಕನತ್ಕಾಪಿಷ್ಠಕಲ್ಪದೊಳ್ ದೇವಾನಂದನೆಂಬ ವೃಂದಾರಕನಾಗಿ ಪುಟ್ಟಿ—

ಕಂ॥ ಪದಿನಾಲ್ಕುಸಾಗರೋಪಮ ।
ಮುದುಪರಮಾಯುಃ ಪ್ರಮಾಣಮನಿತೆಸಹಸ್ರಾ ॥
ಬ್ದದೊಳೊರ್ಮೆ ನೆನೆವನುಣಿಸಂ ।
ಮುದವೊದವಿರೆ ಸುಯ್ವನೇೞು ತಿಂಗಳ್ಗಮರಂ ॥ (೭೬)

ಆಕಾಪಿಷ್ಠದ ಸುಖಮನ ।
ನಾಕುಳಮನನೇಕ ಸಾಗರೋಪಮಯುತಮಂ ॥
ನಾಕಜನನುಭವಿಸಿದನ ।
ಸ್ತೋಕಮನಾಸ್ಥಿತಿಯಗತಿಯುಪಾರಂಬರೆಗಂ ॥ (೭೭)

ವ॥ ತದನಂತರಂ—

ಉ॥ ಭೂಲಲನಾಲಸಲ್ಲಪನ ಮಂಡಳಮೆಂಬಿನೆಗಂ ವಿರಾಜಿಪಾ।
ಮಾಲವ ದೇಶದೊಳ್ ಸೊಗಯಿಪುಜ್ಜಯಿನೀ ಪುರದೊಳ್ ವಿಪಕ್ಷ ನಿ॥
ರ್ಮೂಲನ ದಕ್ಷನುಜ್ವಳಯಶೋರಮಣೀಪತಿ ವಜ್ರಸೇನ ಭೂ।
ಪಾಲವರಂಗಮಾತನ ಪುರಂಧ್ರಿ ಸುಶೀಲೆಗವಾಮರುದ್ವರಂ॥ (೭೮)

ಕಂ॥ ಹರಿಷೇಣನೆಂಬ ಪೆಸರಿಂ।
ಕರಮೆಸೆವ ತನೂಜನಾಗಿ ತತ್ತದಭಿಜ್ಞೋ॥
ತ್ಕರಮಂ ಮೆಚ್ಚಿಸಿದಂ ಸ।
ಚ್ಚರಿತಂ ಭಾಸುರ ಕಳಾಕಳಾಪಜ್ಞತೆಯಿಂ॥ (೭೯)

ಧರೆಯುಂ ಪಾಲಿಸಿ ರಿಪುಭೂ।
ಪರನಲೆದು ಶುದ್ಧಕೀರ್ತಿಯಂ ವಿಶ್ವದಿಗಂ॥
ತರದೊಳ್ ಪಸರಿಸಿದಂ ಸುರ।
ತರುದಾನಂ ವಜ್ರಸೇನನಪ್ರತಿಮಾನಂ॥ (೮೦)

ವ॥ ಅಂತು ಪಲಕಾಲಂ ಪ್ರಾಜ್ಯರಾಜ್ಯಸುಖದೊಳ್ ನಲಿದೊರ್ಮೆ ಪೆರ್ಮೆವೆತ್ತ ಮುಮುಕ್ಷುಮುಖ್ಯನಂ ಶ್ರುತಸಾಗರಾಖ್ಯನಂ ಕಂಡು—

ಕಂ॥ ಮನದೊಲವಿಂ ಬಂದಿಸಿ ತ।
ನ್ಮುನಿಪತಿಯುಂ ಸುಪ್ರಪಂಚ ಪಂಚಪರಾವ॥
ರ್ತನ ವರ್ತನಮಂ ಕೇಳ್ದಾ।
ಜನಪತಿ ವೈರಾಗ್ಯರಸಮನವಲಂಬಿಸಿದಂ॥ (೮೧)

ವ॥ ಅಂತು ವಿರಕ್ತಿಯುಕ್ತನಾಗಿ ಹರಿಷೇಣಯುವರಾಜಂಗೆ ರಾಜಿಸುವ ನಿಜಾಧಿರಾಜ ಪದಮನಿತ್ತು ತತ್ತಪೋನಿಧಿಯ ಸಮಕ್ಷದೊಳ್ ದೀಕ್ಷೆಯಂ ತಳೆದು ಪರಮಾಗಮ ಪ್ರವೀಣನುಂ ಸಂಪ್ರಾಪ್ತ ಸಂಯಮತ್ರಾಣನುಮಾದನಿತ್ತಲಾ ಹರಿಷೇಣಕ್ಷೋಣೀಪಾಳನುಂ—

ಕಂ॥ ಅನತರನೆಱಗಿಸಿ ನಿಜಪದ।
ವಿನತರನನುರಾಗದಿಂದೆ ರಕ್ಷಿಸಿ ಜಗದೊಳ್॥
ಘನತರ ಕೀರ್ತಿಯನಾಂತಂ।
ಜಿನತರಣಿಮತೈಕಮಾನಸಂ ಮಾನಿ ನೃಪಂ॥ (೮೨)

ವ॥ ಒಂದು ದಿವಸಮಾನರೇಂದ್ರಚಂದ್ರಮನನಮಂದ ಸೌಂದರ್ಯ ಮಂದಿರಮಾದ ಬಹಿರುದ್ಯಾನದ ನಿರ್ಜಂತುಕ ಸ್ಥಾನದೊಳ್ ಬಿಜಯಂಗೆಯ್ದಿರ್ದ ಸುಪ್ರತಿಷ್ಠ ಯತಿ ಶ್ರೇಷ್ಠನಂ ಪರಮ ತಪೋವರಿಷ್ಠನಂ ಸಂಯಮಿಸಮುದಾಯಸಮೇತನಂ ಸಮಸ್ತ ಭೂತಳಖ್ಯಾತನಂ ವನಪಾಳ ವಿಜ್ಞಾಪನದಿನಱಿನು ಪರಮ ಪ್ರಮೋದದಿಂ ಪೋಗಿ—

ಕಂ॥ ಮೂಮೆ ಬಲಗೊಂಡು ತನ್ಮುನಿ ।
ಕೋಮಳ ಪದಕಮಳಯುಗಳಮಂ ಪೂಜಿಸಿ ಸು ॥
ತ್ರಾಮನಿಭಂ ಬಂದಿಸಿಯು ।
ದ್ದಾಮಾಶೀರ್ಜ್ಜುಷ್ಟನಾದನಂದುಪವಿಷ್ಟಂ ॥ (೮೩)

ವ॥ ಅನಂತರಂ ಕೃತಪರ್ಯನುಯೋಗನಾಭೂಗಧೀಶ್ವರಂ ಯೋಗೀಶ್ವರೋಪದೇಶದಿಂ ಜೀವಾದಿ ತತ್ವಸ್ಥಿತಿಯುಮಂ, ಚತುರ್ಗತಿಲತಾಕೃತಿಯುಮಂ, ಸವಿಸ್ತರಮಱಿದು ವಿರಾಗವೃತ್ತಿಯೊಳ್ ನೆಱೆದು ವಿಷಯಾಮಿಷಾಭಿಲಾಷೆಯಂ ತೊಱೆದು ಪರಿಗ್ರಹಪಾಶಮಂ ಪಱಿದು ವಿನೂತಜಾತರೂಪತೆಯನಾಂತು ಮೆಱೆದು—

ಪೃಥ್ವಿ॥ ಮಹಾಬ್ರತವಿಭೂಷಿತಂ ಸಮಿತಿ ಸಂಗತಂ ಗುಪ್ತಿ ಸ ।
ದ್ಗೃಹಂ ಸದವನಪ್ರಿಯಂ ದೃಢಮನಷ್ಟಡಾವಶ್ಯಕಂ ॥
ಸಹಿಷ್ಣು ಸಮಯಪ್ರಕಾಶನ ಸಮುಗ್ರನಂ ಹಸ್ತಮೋ ॥
ಪಹಂ ಮಹಿಮೆವೆತ್ತನಿಂತು ಹರಿಷೇಣಯೋಗೀಶ್ವರಂ ॥ (೮೪)

ವ॥ ಆಮಹಾನುಭಾವಂ ಭಾವಿತಾತ್ಮನಾಗಿ ನೆಗಬ್ದು ಸಲ್ಲೇಖನೆಯಿಂ ಸಮಾಧಿವಡೆದು ಮಹಾಶುಕ್ಲಕಲ್ಪದ ಪರಮಪ್ರೀತಿವರ್ಧನಮಪ್ಪ ಪ್ರೀತಿವರ್ಧನ ವಿಮಾನದೊಳ್—

ಕಂ॥ ಪ್ರೀತಿಂಕರನೆಂಬ ಸಮಾ ।
ಖ್ಯಾತಿಯ ದಿವಿಜೋತ್ತಮಂ ಮಹರ್ದ್ಧಿಕನಾದಂ ॥
ಭೂತಳನುತ ಜಿನಪತಿ ಮತ ।
ಕೌತುಕಕರ ಪರಮತಪಕಿದಾವುದೊ ಗಹನಂ ॥ (೮೫)

ಮ॥ ಸುರನಾರೀ ನಯನಾತಿಕೌತುಕಕರ ಶ್ರೀರೂಪಸೌಂದರ್ಯಮಂ ।
ದಿರನುದ್ಯತ್ಸಹಜಾಂಬರಾಭರಣ ಮಾಲ್ಯಂ ಲಬ್ಧಿನಾನಾ ವಿನೋ ॥
ದರಸಂ ದಿಬ್ಯ ಸಮಸ್ತಭೋಗ ನಿಯುತಂ ತಾನಾಗಿ ಸಂಸಾರ ನಿ ।
ರ್ಭರ ಸೌಖ್ಯಂಬಡೆದಂ ದಶಾರ್ಣವಮಿತಾಯುಷ್ಯಾವಸಾನಂ ಬರಂ ॥ (೮೬)

ವ॥ ಅಂತಾದೇವಂ ದೇವಲೋಕದನೇಕ ಭೋಗಂಗಳಂ ಭೋಗಿಸಿ ಕುಪಿತ ಕೃತಾಂತಾಕ್ರಾಂತನಪ್ಪುದುಂ ನಿಜಾಯುವಿನೊಡನೆ ಕನಕಚ್ಛಾಯಕಾಯಂ ಭೋಂಕೆನೆ ಕರಗಿ ದಿವದಿನವತರಿಸಿ ಕೌತುಕಾಕಾರಿಯಾದ ಧಾತಕೀಷಂಡದ ರೂಢಿಗೆ ಸಂದ ಮೂಡಣ ಮಂದರದ ಸರ್ವ ಸಂಪದ್ಗೇಹಮಾದ ಪೂರ್ವ ವಿದೇಹದ ನಿಷ್ಕಳಂಕಜನ ವಿಷಯಮಾದ ಪುಷ್ಕಲಾವತೀ ವಿಷಯದ ಪುಂಡ್ರೇಕ್ಷುವಣದಿನೆಸೆವ ಪುಂಡರೀಕಿಣೀಪುರದ ಸುಮಿತ್ರ ಧಾತ್ರೀಪಾಳಂಗಂ ಆತನ ಚಿತ್ತನೇತ್ರಪ್ರಿಯೆ ಸುಮಿತ್ರೆಗಂ, ಪ್ರಿಯಮಿತ್ರನೆಂಬ ಪೆಸರಿನೆಸೆವ ಸುಪುತ್ರನಾಗಿ—

ಕಂ॥ ಕರಿತುರಗಾರೋಹಣದೊಳ್ ।
ಶರಾಸನಾದ್ಯಾಯುಧ ಪ್ರವೀಣತೆಯೊಳ್ ಭಾ ॥
ಸುರ ಶಾಸ್ತ್ರಾಭ್ಯಾಸದೊಳೆ ।
ನ್ನರುಮಂ ಮೆಚ್ಚಿಸುವನಾಕುಮಾರನುದಾರಂ ॥ (೮೭)

ವ॥ ಒಂದು ದೇವಸಂ—

ಕಂ॥ ಕ್ಷೇಮಂಕರ ಜಿನಪನ ಸು ।
ತ್ರಾಮಾರ್ಚಿತ ಸಮವಸರಣಮೆಯ್ತರೆ ಪರಮ ॥
ಪ್ರೇಮದೆ ಬಂದಿಪ ಬಗೆಯಿಂ ।
ಭೂಮೀಶಂ ಸವಿಭವಂ ಸುಮಿತ್ರಂ ನಡೆದಂ ॥ (೮೮)

ವ॥ ಅಂತು ನಡೆದು ವಿನಯಜನ ಶರಣಮುಂ ಭವಭಯಹರಣಮುಂ ಸಮವಸರಣಮಂ ಪೊಕ್ಕು ಭುವನತ್ರಯ ಸ್ವಾಮಿಯಂ ತ್ರಿಃಪ್ರದಕ್ಷಿಣಂಗೆಯ್ದು ನವ್ಯದಿವ್ಯಾರ್ಚನೆಗಳಿನರ್ಚಿಸಿ ಕೃತಸ್ತುತಿಶತಂ ವಿತತಗುಣಗಣಧರಂ ಬಂದಿಸಿ ನಿಜೋಚಿತ ಕೋಷ್ಠದೊಳ್ ಕುಳ್ಳಿರ್ದು ನಿರ್ದುಷ್ಟ ಶ್ರವ್ಯ ದಿವ್ಯ ಭಾಷಾಕರ್ಣನದಿಂ ತನಗೆ ಹೇಯೋಪಾದೇಯ ತತ್ವಮತ್ಯಂತಂ ವಿದಿತಮಾಗೆ ನಿಸ್ಸಾರ ಸಂಸಾರ ಶರೀರ ವೈರಾಗ್ಯಪರಾಯಣನಾಗಿ—

ಕಂ॥ ಪ್ರಿಯಮಿತ್ರಂಗೆ ಸಮುಸ್ತೋ ।
ರ್ವಿಯ ರಾಜ್ಯಮನಿತ್ತು ಪರಮಪಾವನ ಜಿನದೀ ॥
ಕ್ಷೆಯನಾಂತಂ ವೈರಾಗ್ಯೋ ।
ದಯಕ್ಕೆ ಭಾವಿಸುವವಂಗಮಿದೆ ಫಲಮಲ್ತೇ ॥ (೮೯)

ವ॥ ಇತ್ತಲ್—

ಕಂ॥ ಗುರುವಿತ್ತ ರಾಜ್ಯಭರಮಂ ।
ಧರಿಯಿಸಿ ನಯ ವಿಕ್ರಮಂಗಳಿಂ ರಂಜಿಸಿದಂ ॥
ಶರದಮಳ ಶಶಾಂಕಚ್ಛವಿ ।
ಗುರು ಕೀರ್ತಿವ್ಯಾಪ್ತ ದಿಕ್ಕನಾಪ್ರಿಯಮಿತ್ರಂ ॥ (೯೦)

ಚಂ॥ ಜನಿಯಿಸೆ ತನ್ನ ಪುಣ್ಯ ಪರಿಪಾಕದೆ ಭಾನುವ ಬಿಂಬಮಿಂತಿದೆಂ ।
ಬಿನಮೆಸೆವಾಯುಧಾಲಯದೊಳುತ್ಕಿರಣಂ ವರಚಕ್ರರತ್ನಮಾ ॥
ಜನಪತಿ ದಿಗ್ಜಯಕ್ಕೆ ನಡೆದಾದಮೆ ಸಾಧಿಸಿದಂ ಷಡಂಶಭಾ ।
ಸುರಮನನುಕ್ರಮಂ ಧರಣಿಚಕ್ರಮನಪ್ರತಿಮಾನ ವಿಕ್ರಮಂ ॥ (೯೧)

ವ॥ ಅಂತಾ ಪ್ರಿಯಮಿತ್ರ ಚಕ್ರೇಶ್ವರಂ ತನಗೆ ಚತುರ್ದಶ ರತ್ನಂಗಳುಂ, ನವನಿಧಿಗಳುಂ, ಚತುರ ಶೀತಿಲಕ್ಷ ಭದ್ರಗಜಂಗಳುಂ, ತಾವತ್ಪ್ರಮಿತ ರಥಂಗಳುಂ, ಅಷ್ಟಾದಶ ಕೋಟಿ ಘೋಟಕಂಗಳುಂ, ಚತುರಶೀತಿಕೋಟಿ ಪದಾತಿಗಳುಂ, ಷಣ್ಣವತಿ ಸಹಸ್ರಾಂತಃ

ಪುರಕಾಂತೆಯರುಂ, ದ್ವಾತ್ರಿಂಶತ್ಸಹಸ್ರಗಣಬದ್ಧದೇವರುಂ, ತತ್ಸಂಖ್ಯಾಪ್ರಮಿತ ಮೂರ್ಧಾಭಿಷಿಕ್ತಮಕುಟಬದ್ಧರುಂ ಮತ್ತಮನೇಕಪರಿಕರಂಗಳುಂ, ಆಳವಟ್ಟೆಸೆಯೆ ದಶಾಂಗಭೋಗಾವಭಾಸಿತನುಂ, ಪಂಚಶತಶರಾಸನೋತ್ಸೇಧದೇಹನುಂ, ಪುಬ್ಬ ಕೋಟಿ ಸಂವತ್ಸರಪ್ರಮಿತಪರಮಾಯುಷ್ಯನುಮೆನಿಸಿ, ನಿರಂತರಮೆಣ್ಬತ್ತುಮೂಱುಲಕ್ಕೆ ಪೂರ್ವ ಮತ್ಯಂತಲೀಲೆಯಿನರಸುಗೆಯ್ಯುತ್ತುಮಿರ್ದು—

ಕಂ॥ ಒಂದು ದಿನಂ ಮಣಿಮಯ ಮುಕು।
ರುಂದದೊಳಾತ್ಮೀಯಕಾಯ ಶೃಂಗಾರಮನಾ॥
ನಂದದೆ ನೋಡುತ್ತಿರೆ ನರೆ।
ಯೊಂದರಸಂಗಾಯ್ತು ಕಣ್ಬೊಲಂ ಮಸ್ತಕದೊಳ್। (೯೨)

ವ॥ ಅಂತು ಜರೋದಯಾಕಳಿತಮುಂ ಕರ್ಣಮೂಳೋಚ್ಚಳಿತಮುಂ ಅಪರವಯೋವಳಿತಮುಂ ಬುದ್ಧಿವಿಶುದ್ಧಿಗಳಿತಮುಂ ಕರಣಪಾಟವಚಳಿತಮುಂ ದೌರ್ವಲ್ಯ ಫಳಿತಮುಂ ಮೃಣಾಳೋಜ್ಜ್ವಳಿತಮುಮೆನಿಪ ಪಳಿತಂ ಪಱಿ ತನ್ನಂ ಪೊರ್ದದೆನಿಪ ಜನಪಶಿಖಾಮಣಿಯ ಲೋಚನಗೋಚರಮಾಗೆ—

ಚಂ॥ ವಿಷಯಸುಖಂಗಳೊಳ್ ಮನಮನಿಟ್ಟು ನಿರಂತರಮಿನ್ನೆಗಂ ಮಹಾ।
ವಿಷಮತರಂಗಳಪ್ಪ ಕರಣಂಗಳಧೀನತೆಯಿಂದೆ ಬಂದು ಕಿ॥
ಲ್ಬಿಷತತಿಗಾದೆನಾವಸಥವಿಾವಸುಧೇಶತೆ ಕಷ್ಟಮೆಂದು ಸ।
ದ್ವಿಷಯವಿದಂ ವಿರಾಗತೆಗೆ ಸಂದನನಿಂದಿತನಂದಿಳೇಶ್ವರಂ॥ (೯೩)

ವ॥ ಮತ್ತಂ—

ಮಲ್ಲಿಕಾಮಾಲೆ॥ ಸಾವ ಪುಟ್ಟುವ ಕುತ್ತಮೊತ್ತುವ ಮುಪ್ಪು ಚಪ್ಪರಿಪೀಯವ।
ಸ್ಥಾವಿಶೇಷಮೆ ತನ್ನ ಮೆಯ್ಸಿರಿಯಾದ ಸಂಸೃತಿವಾರ್ಧಿಯೊಳ್॥
ಜೀವಿಪಾಸೆ ಧನಾಸೆಯೆಂಬಪಗಂಟು ಪಣ್ಣಿದ ಕಣ್ಣಿಯಿಂ।
ಜೀವನಂ ಗಡ ಕಟ್ಟೆ ನೆಟ್ಟನೆ ಕರ್ಮಮುಬ್ಬುಗುಮೊರ್ಮೆಯುಂ॥ (೯೪)

ವ॥ ಎಂದು ಪರಮವೈರಾಗ್ಯರಸವಶವರ್ತಿಯಾದ ಚಕ್ರವರ್ತಿ ಸರ್ವಮಿತ್ರನೆಂಬ ನಿಜಾಗ್ರಪುತ್ರಂಗೆ ಧಾತ್ರೀಶತೆಯನಿತ್ತು ನಿರ್ವೇಗಪರಾಯಣರಾದ ಸಾಸಿರ್ವರರಸುಗಳ್ವೆರಸು—

ಕಂ॥ ಕ್ಷೇಮಂಕರ ತೀರ್ಥಕರನ,
ಕೋಮಳ ಪದಕಮಳ ಸನ್ನಿಧಾನದೊಳಾಂತಂ॥
ಶ್ರೀಮಜ್ಜಿನದೀಕ್ಷೆಯನು।
ದ್ದಾಮಗುಣಕ್ಷೇತ್ರನೆನಿಸಿದಾ ಪ್ರಿಯಮಿತ್ರಂ॥ (೯೫)

ವ॥ ಅಂತಾಜಾತರೂಪಾಚಳಸ್ಥೈರ್ಯಂ ಜಾತರೂಪಾದಿಗಳೆಲ್ಲಮನುಳಿದು ಜಾತ ರೂಪಧರನಾಗಿ ಜಾತವಿವೇಕದಿಂ ಲಬ್ಧಪ್ರಶಂಸನಾಗಿ ಪರಮಸಂಯಮಧರನುಂ ವಿಶ್ರುತ ಶ್ರುತಧರನುಮೆನಿಸಿ ನೆಗಟ್ದು ನಿರತೀಚಾರಾಚರಣದಿಂ ನಿಜಾಯುರಂತಮನೆಯ್ದೆ—

ಕಂ॥ ಸುಕೃತಿನಿಳಯಂ ಸಹಸ್ರಾ ।
ರ ಕಲ್ಪದೊಳ್ ರುಚಿರಮಾದ ರುಚಕಾಖ್ಯವಿಮಾ ॥
ನಕದೊಳ್ ಸೂರ್ಯಪ್ರಭ ಸಂ ।
ಜ್ಞಕನನಿಮಿಷಮುಖ್ಯನಾದನಾ ಮುನಿಮುಖ್ಯಂ ॥ (೯೬)
ಆಸುಮನಂ ಸುಜನೋಜ್ವಳ ।
ವಾಸೋಮಣಿಭೂಷಣೋಲ್ಲಸನ್ಮಾಲ್ಯಂ ಶೋ ॥
ಭಾಸಂಪನ್ನಂ ಯೌವನ ।
ಭಾಸಿತನತಿ ಬಹಳ ಸುರಭಿಗಂಧಸಮೇತಂ ॥ (೯೭)

ವ॥ ಮತ್ತಮಾನಿಳಿಂಪಂ ವ್ಯಪಗತಧಾತುದೋಷನುಂ ಸಿತಸಿಂಧುವಾರ ಕುಸು ಮಾಕಾರವರ್ಣವಿಶೇಷನುಂ ಚತುರರತ್ನಿಸಮುತ್ಸೇಧಶರೀರನುಂ ಶುಭಕರಲೇಶ್ಯಾ ಧಾರನುಂ ಅಷ್ಟಾದಶ ಸಾಗರೋಪಮಾಯುಷ್ಯಾಧೀನನುಂ ಅವಧಿಬೋಧನಿಧಾನನುಂ ಅಮರಾಂಗನಾಸರಸಮಧುರಶ್ರವ್ಯಶಬ್ದಪ್ರವೀಚಾರಸುಖಸಾಗರನುಂ ಅಷ್ಟಾದಶ ಸಂವತ್ಸ ರಾಂತಸ್ಮೃತಾಮೃತಾಹಾರಾಭ್ಯವಹಾರನುಂ, ನವಮಾಸಾಂತರಿತ ನಿರ್ಯತ್ಸುರಭಿನಿಶ್ವಾ ಸನುಂ, ಅಣಿಮಾದಿಗುಣನಿವಾಸನುಮಾಗಿ—

ಮ॥ ತ್ರಿದಶಸ್ತ್ರೀನಯನೋತ್ಪಳೇಂದು ಸುರನಾರೀವಕ್ತ್ರನೀರೇಜ ಷ ।
ಟ್ಪದನಸ್ವಪ್ನವಧೂ ಘನಸ್ತನತಟ ಪ್ರೋತ್ತಾರಹಾರಂ ಮರು ॥
ತ್ಸುದತೀ ಪೀನನಿತಂಬಬಿಂಬ ಕಳಕಾಂಚೀದಾಮನುದ್ದಾಮ ಸಂ ।
ಪದನಾಕಲ್ಪಜನಿಂತನಲ್ಪಸುಖದೊಳ್ ತಾಂ ಮೂಡಿ ಮುಳ್ಕಾಡಿದಂ ॥ (೯೮)

ವ॥ ಅಂತಾದೇವಂಗೆ ಭಾವಭವಾಯತ್ತ ನಿರತಿಶಯ ಸುಖಸುಧಾಸೇವೆಯಿಂ ದೇವಾ ಯುಷ್ಯಾವಸಾನಮಾಗೆ—

ಕಂ॥ ವರಜಂಬೂದ್ವೀಪದ ಭಾ ।
ಸುರ ಭರತದ ಪೂರ್ವದೇಶಮೆಂಬೀ ಪೆಸರಿಂ ॥
ಕರಮೆಸೆವ ದೇಶದೊಳ್ ಸು ।
ಸ್ಥಿರದಿಂ ಸಿತಕಚ್ಛಮೆಂಬ ಪುರಿ ರಂಜಿಸುಗುಂ ॥ (೯೯)
ಆರಾಜಧಾನಿಯೊಳ್ ಸಲೆ ।
ರಾರಾಜಿಪನವನತಾವನೀಪತಿಶತಚೂ ॥
ಡಾರತ್ನೀಕೃತ ನಿಜಚರ ।
ಣಾರುಣಮಣಿ ಸಂದ ನಂದಿವರ್ಧನನೆಂಬಂ ॥ (೧೦೦)

ಕಂ॥ ವೀರವತಿಯೆಂಬಳಂತಾ ।
ವೀರಾರಿವಿದಾರಿ ಧಾರಿಣೀರಮಣನ ಕಾಂ ॥
ತಾರತ್ನಂ ಸ್ಮರಕರತರ ।
ವಾರಿ ಮನೋಹಾರಿಯಾಕೆಯೊಂದಾಕಾರಂ ॥ (೧೦೧)
ಆಜಂಪತಿಗಳ್ಗೆ ಕಳಾ ।
ರಾಜಿತಮತಿಗಳ್ಗೆ ತತ್ಸಹಸ್ರಾರದ ವಿ ।
ಭ್ರಾಜಿತ ಸುರವರನುರುತರ ॥
ತೇಜಂ ನಂದನಸಮಾಖ್ಯನಂದನನಾದಂ ॥ (೧೦೨)
ನಂದನನನೊಂದೆನಾಲಗೆ ।
ಯಿಂದಂ ಬಂದಪುದೆ ಪೊಗಟಿಲುಂ ನಾಲಗೆಗಳ್ ॥
ಸಂದಣಿಸಿದ ವದನದ ಫಣಿ ।
ಸಂದೋಹಾಧೀಶ್ವರಂಗಮರಿದೆಂಬಿನೆಗಂ ॥ (೧೦೩)
ತ್ರಿವಿಧಿ॥ ನಂದನ ನಾಮದ ನಂದನನಂತಪ್ಪ ।
ನಂದನಂ ಜನಿಕೆ ತಮಗೆಂದು ಧರೆಯೊಳಾ ॥
ನಂದದಿಂ ಬಯಸದವರಿಲ್ಲಾ ॥ (೧೦೪)
ಉ॥ ಆತಂ ನೂತನ ಯೌವನೋದಯವಿರಾಜನ್ಮೂರ್ತಿ ಸತ್ಕೀರ್ತಿ ಸಂ ।
ಜಾತ ಶ್ವೇತದಿಶಾತಟಂ ವಿದಿತನಾನಾಶಸ್ತ್ರಶಾಸ್ತ್ರೋತ್ಕರಂ ॥
ಚೇತೋಜಾತನಿಭಂ ಶುಭೈಕನಿಳಯಂ ಶೃಂಗಾರಸಾರಂ ದಯಾ ।
ನ್ವಿತಂ ಭೂತಳದಲ್ಲಿ ಪೆಂಪುವಡೆದಂ ಭವ್ಯಾದಿ ಭಾಳೇಕ್ಷಣಂ ॥ (೧೦೫)
ಚಂ॥ ವನನಿಧಿವೇಷ್ಟಿತಾವನಿಯೊಳಾವನಿವಂಗೆ ವಿಚಾರಿಪಂದು ಮಾಂ ।
ತನದಿಸುದಾರದಿಂ ವಿಭವದಿಂ ನಯದಿಂ ಜಯದಿಂ ವಿವೇಕದಿಂ ॥
ವಿನಯದಿನುತ್ತಮಾಚರಣದಿಂ ದೊರೆಯಪ್ಪವನೆಂದು ಕೂರ್ತು ತ ।
ನ್ನನೆ ಸಲೆ ಧಾತ್ರಿ ಕೀರ್ತಿಸೆ ವಿರಾಜಿಸಿದಂ ವಸುಧೈಕಬಾಂಧವಂ ॥ (೧೦೬)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ ಕೇಶವರಾಜಾನಂದ ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ ಶ್ರೀವರ್ಧಮಾನ ಪುರಾಣದೊಳ್ ನಂದನ ಕುಮಾರಕೋದಯವರ್ಣನಂ ದ್ವಾದಶಾಶ್ವಾಸಂ.

ತ್ರಯೋದಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಶ್ರೀರಮಣಂ ನಿಜನಿಖಿಳಕ ।
ಳಾರಸಿಕತೆಯಿಂದೆ ಭಾವಕರ್ಕಳ ಹೃದಯಾಂ ॥
ಭೋರುಹಮನಲರ್ಚಿದನವ ।
ದಾರಿತರಿಪು ಪಂಚಪರಮಗುರುಪದವಿನತಂ ॥ (೧)

ಆ ನಂದನಂಗೆ ಪಿರಿದ ।
ಪ್ಪಾನಂದಮನೀಯಲಾರ್ಪ ವಲ್ಲಭೆಯಾದಳ್ ॥
ಮಾನಿನಿ ಮದನಪತಾಕೆ ಕ ।
ಳಾನಿಧಿ ತಾನೆನಿಸಿದಾ ಪ್ರಿಯಂಕರಿಯೆಂಬಳ್ ॥ (೨)

ವ॥ ಮತ್ತಮಾನಂದಿವರ್ಧನಮಹಾರಾಜಂ ನೀತಿವಿದನುಂ, ವೀತಮದನುಂ ಕವಚಹರನುಂ, ಸುವಚೋವರನುಂ ಆದ ಸುಕವಿನಿಕರಶುಕನಂದನನೊಳ್ ನಿಜನಂದನ ನೊಳ್ ನಂದನನೊಳ್ ಸಕಳರಾಜ್ಯಧುರಂಧರತೆಯಂ ನಿಯೋಜಿಸಿ—

ಕಂ॥ ಮನಸಿಜಕೇಳೀಸೌಖ್ಯಮ ।
ನನುಭವಿಸಿದನನುಪಮಾನ ಶೃಂಗಾರರಸಾ ॥
ವನಿಯೆನಿಸಿದ ವೀರವತೀ ।
ವನಿತೆಯೊಳನುದಿನಮನೂನ ವಿಭವವಿಳಾಸಂ ॥ (೩)

ಆಪೃಥಿವೀಶಂ ಪ್ರಾಸಾ ।
ದೋಪರಿಮ ಸ್ಥಳದೊಳೊರ್ಮೆ ಕುಳ್ಳಿರ್ದು ಜಗ ॥
ದ್ವ್ಯಾಪಿ ಯಶೋನಿಧಿ ನಿಖಿಳ ದಿ ।
ಶಾಪಟಳ ವಿಳೋಕನೈಕರತನಿರ್ಪಿನೆಗಂ ॥ (೪)

ಗಗನಪಯೋನಿಧಿಯೊಳು ಮಿಗೆ ।
ಸೊಗಯಿಪ ನೊರೆವಿಂಡಿದೆನಿಪ ಪಾಂಡುರವರ್ಣಂ ॥
ಮುಗಿಲೊಗೆದು ವಿಚಿತ್ರತರಂ ।
ಜಗದೀಶನ ಬಗೆಗೆ ಪಡೆದುದತಿ ಕೌತುಕಮಂ ॥ (೫)

ಮಲ್ಲಿಕಾಮಾಲೆ॥ ನೋಡೆ ನೋಡೆ ತದಂಬುದಂ ಕ್ಷಣಮಾತ್ರದೊಳ್ ಕರಗಿತ್ತದಂ ।
ನೋಡುತಿರ್ದ ವಸುಂಧರಾರಮಣಂಗೆ ಭಾವದೊಳಾವಗಂ ॥
ಮೂಡಿದತ್ತು ಸಪುರ್ವಿಳಾಸವಯೋವಿಭೂತಿಗಳಿನ್ನವೆಂ ।
ಬೀಡಿತಂ ಸಫಳಂ ವಿರಕ್ತಿ ವಿಮುಕ್ತಿಸಂಗಮ ಕಾರಣಂ ॥ (೬)

ಕಂ॥ ಆಸನ್ನ ಭವ್ಯತಾಗುಣ ।
ಭಾಸಿತನೆನಿಸಿದ ಬುಧಂಗೆ ಸಂಸಾರಂ ಸಂ ॥
ತ್ರಾಸಕರಮೆನಿಸದದು ಸುಖ ।
ವಾಸಂ ತನಗೆಂಬ ಬಗೆಯನೇಂ ಮಾಡುಗುಮೇ ॥ (೭)

ವ॥ ಅಂತು ವೈರಾಗ್ಯವರ್ಧನನಾದ ನಂದಿವರ್ಧನಂ ವಿನಯವಚನಾಮೃತಸ್ಯಂದನಂಗೆ ನಂದನಂಗೆ ವಿಭವಸಾಮ್ರಾಜ್ಯಮಂ ನಿಜರಾಜ್ಯಮನಿತ್ತು ವಿಗತತಂದ್ರನಂ ಪಿಹಿತಾಸ್ರವ ಮುನೀಂದ್ರನಂ ಪೊರ್ದಿ ಜಗದ್ವರ್ಯಮಂ ದೈಗಂಬರ್ಯಮಂ ತಳೆದು—

ಕಂ॥ ಅಪಗತ ಬಾಹ್ಯಾಭ್ಯಂತರ ।
ವಿಪುಳ ಪರಿಗ್ರಹ ದುರಾಗ್ರಹ ಗ್ರಹನುದ್ಯ ॥
ತ್ತಪದೊಳ್ ನೆಗಟ್ಟಿತ್ತಿರ್ದಂ ।
ಸ್ವಪರಮತ ವಿಭಾವನಾಪಟು ಪ್ರತಿಭಾನಂ ॥ (೮)

ವ॥ ಮತ್ತಮಿತ್ತಮಾನಂದಸಜನೇಶ್ವರಂ ವಿಶ್ವಜನತಾನಂದನಂದನನುಂ ಭೋಗೈಶ್ವರ್ಯ ಸಂಕ್ರಂದನನುಮಾಗಿ ನಂದನೆಂಬ ಪ್ರಿಯನಂದನನಂ ಪಡೆದು ಪ್ರಿಯಂಕರೀ ಮಹಾದೇವಿಯುಂ ತಾನುಂ ಅನ್ಯೂನ ಭೋಗೋಪಭೋಗಾನುಭೂತಿಯಿಂ ಪ್ರೀತಿವೆತ್ತು ನಿಜಾಜ್ಞಾನಿಯಮಿತಾನೇಕ ಮಂಡಳಿಕ ನಿಕಾಯನಾಗಿ ರಾಗದಿಂ ವರ್ತಿಸುತ್ತುಮಿರೆ—

ಮಾಳಿನೀ॥ ಅಳಿಶುಕಪಿಕರಾಗಾರಾವರಾಜದ್ದಿಗಂತಂ ।
ಮಳಯ ಪವನ ಪಾತೋದ್ಧೂತ ನಾನಾಲತಾಂತಂ ॥
ಬಳವದತನುಚಕ್ರಾಧೀಶ ವಿಕ್ರಾಂತಕಾಂತಂ ।
ಬಳೆದುದಿಳೆಗೆ ಲೀಲಾಕಾರಿ ಸಂತಂ ವಸಂತಂ ॥ (೯)

ಚಂ॥ ಅಸುಕೆ ಮುಸುಂಕೆ ಕೆಂದಳಿರ್ಗಳಿಂ ವಕುಳಂ ಮುಕುಳಂಗಳಿಂ ವಿರಾ ।
ಜಿಸೆ ಫಳನಮ್ರಮಾಮ್ರತತಿ ಕಮ್ರತೆವೆತ್ತಿರೆ ಸುತ್ತಲುಂ ಪ್ರಕಾ ॥
ಶಿಸೆ ಪೊಸಜೊನ್ನದುನ್ನತಿಗೆ ಕಂತುಗೆ ಸಂತಸಮಾಗೆ ಬೇಗೆ ದ ।
ಳ್ಳಿಸೆ ಪಥಿಕಾಳಿಗಿಂತಿಳೆಗೆ ಪೆತ್ತುದು ಚೈತ್ರಮತೀವ ಚಿತ್ರಮಂ ॥ (೧೦)

ವ॥ ಅಂತು ಜಗತ್ಕಾಂತಮುಂ ವಿದಗ್ಧವಿಶ್ರಾಂತಮುಮಾದ ವಸಂತಸಮಯದೊಳ್ ಬಹಳ ಶೋಭಾನಿಧಾನಮಾದ ಬಹಿರುದ್ಯಾನದಲ್ಲಿ—

ಕಂ॥ ಸವಿರಾಗಂ ಸುಮನೋವ್ಯೆ ।
ಭವಂ ಸನಿರ್ಮಳದಿಗಂಬರಂ ಸಫಳ ಭವಂ ॥
ಭುವನೋತ್ತಮಂ ವಸಂತೋ ।
ತ್ಸವ ಸದೃಶಂ ಪ್ರೋಷ್ಠಿಲಂ ಮುನೀಂದ್ರಶ್ರೇಷ್ಠಂ ॥ (೧೧)

ಕಂ॥ ಸಕಳ ಸುರಾಸುರ ನರಮಾ ।
ನಕಂಜಸಂತಾನ ತುಹಿನಕರನಂ ಸ್ಮರನಂ ॥
ತ್ರಿಕರಣಶುದ್ಧಿ ಸಮೃದ್ಧಿ ।
ಪ್ರಕಾಶ ಪೇಶಲ ತಪೋಗ್ನಿಯಿಂದಳುರ್ದದಱಿಂ ॥ (೧೨)

ಬಿಜಯಂಗೆಯ್ದಿರೆ ವನಪಾ ।
ಳಜನದ ಬಿನ್ನಪದಿನಱಿದು ಬಂದಿಸಲೆಂದಾ ॥
ಸುಜನಾಗ್ರಣಿ ನಂದನ ಭೂ ।
ಭುಜಂ ಮಹಾವಿಭವದಿಂದಮಂದೆಯ್ತಂದಂ ॥ (೧೩)

ವ॥ ಆಗಳ್—

ಚಂ॥ ಯತಿಪತಿಸನ್ನಿಧಾನದೊಳೆ ದೀಕ್ಷೆಯನಾಂತಪನಿಂದು ನೆಮ್ಮ ಸ ।
ತ್ಪ್ರತಿ ಸೊಬಗಂ ಸುರೂಪನಿರವೆಂತುಗೆ ಪೇೞ್ ನಮಗೆಂದು ತತ್ಸುರೀ ॥
ಸತಿಯೊಡನಾ ಮನೋಹರ ವನಾಂಗನೆ ವಿಹ್ವಳೆ ಸಂಭ್ರಮೋಕ್ತಿಯಿಂ ।
ಕತಿಯಿಸುವಂತೆ ಪೊಣ್ಮಿದುದು ಕೋಕಿಳ ಕೀರ ಮದಾಳಿ ನಿಸ್ವನಂ ॥ (೧೪)

ವ॥ ಅಂತು ವಿವಿಧ ವಿಹಗ ವಿರುತಿ ವಾಚಾಳಿತಮುಂ, ಮಂದಮಂದ ವಿಹರತ್ಸು ರಭಿಗಂಧಿಗಂಧವಹಾಂದೋಳಿತಮುಮೆನಿಸಿ ಸೊಗಯಿಪವುಪವನಾವನಿಯನನುನಯದಿಂ ಪೊಕ್ಕು—

ಕಂ॥ ತಾರಗೆಗಳ ನಡುವಿರ್ದಾ ।
ತಾರಾಪತಿಯಂತೆ ಯತಿಜನಂಗಳ ನಡುವಿ ॥
ರ್ದಾರಂಜಿತ ಯತಿಪತಿಯಂ ।
ಭೂರಿಯಶಂ ನೋಡಿ ನಾಡೆಯುಂ ಮುಯ್ವಾಂತಂ ॥ (೧೫)

ವ॥ ಅನಂತರಂ ತನ್ಮಹೀಶನುನ್ಮೂಳಿತ ಮನ್ಮಥ ಮಹಾಮದೇಭದಂತನಂ ವಿನಯವಿಚಕ್ಷಣಂ ತ್ರಿಪ್ರದಕ್ಷಿಣಂಗೆಯ್ದು—

ಕಂ॥ ಜಳಗಂಧಾಕ್ಷತ ಕುಸುಮಾ ।
ವಳಿ ವರಚರು ಧೂಪ ದೀಪಫಳಕುಳದಿಂದಂ ॥
ಮಳಕುಳ ವಿಳಯನ ಯತಿಪನ ।
ಚಳನಮನವಿಚಳಿತ ಭಕ್ತಿಯಿಂ ಪೂಜಿಸಿದಂ ॥ (೧೬)

ಬಱಿಕಮುಳಕಂಗಳಳಿಕುಳ ।
ವಿಳಾಸಮಂ ಯಮಿಯ ಚಳನ ನಳಿನ ಯುಗಳದೊಳ್ ॥
ತಳೆದಿರೆ ಬಂದಿಸಿ ತದ್ಭೂ ।
ತಳಪತಿ ತತ್ಸನ್ನಿಧಾನದೊಳ್ ಕುಳ್ಳಿರ್ದಂ ॥ (೧೭)

ವ॥ ಅಂತು ತದೀಯ ಪಾವನಮೃದುಪದಸ್ಪರ್ಶನದಿಂ ಪವಿತ್ರಮಾದ ಧಾತ್ರೀತಳಮನಳಂಕರಿಸಿ ಕರಕಮಳಯುಗಳಮಂ ಮುಗಿದು ಕೃತಪ್ರಶ್ನಂ ಗುರುನಿರೂಪಿತ ಚತುರ್ಗತಿ ಸ್ವರೂಪಮುಮಂ, ಪುರೂರವ ಮರೀಚಿ ಮೊದಲಾದ ತನ್ನ ಮುನ್ನಿನ ಜನ್ಮಕಳಾಪಮುಮಂ ಸವಿಸ್ತರಮಱಿದು—

ಕಂ॥ ಜನನೆ ಜರಾಮರಣಂಗಳ ।
ನನುಭವಿಸುತ್ತುಂ ಚತುರ್ಗತಿಗಳೊಳ್ ದುಃಖಾ ॥
ವನಿಯೆನಿಪ ಜೀವನಕಟಾ ।
ಕನಸಿನೊಳಂ ಸ್ವಾತ್ಮಸೌಖ್ಯಮಂ ಪಡೆದಪನೇ ॥ (೧೮)

ಅವಿವೇಕಮೆಂಬ ಘೋರಾ ।
ರ್ಣವದ ಮಹಾವರ್ತಗರ್ತದೊಳ್ ಬಿದ್ದ ಸುಭ್ಯ ॥
ನ್ನಿವಹಕ್ಕೆ ತಾನದೆತ್ತಣ ।
ದೊ ವಿಚಾರಿಸೆ ನಿರುಪಮಾನ ಪರಮಸ್ವಾಸ್ಥ್ಯಂ ॥ (೧೯)

ಭೂದೇವ ಪ್ರತಿಪಾದಿತ ।
ವೇದೋದಯದಂತೆ ತನ್ನ ಬಸದಾಗಲೊಡಂ ॥
ವೇದೋದಯಮುಘಕೃತಮಂ ।
ದೇದೊರೆಯನುಮಂ ತೊಳಲ್ದುಗುಂ ಸಂಸೃತಿಯೊಳ್ ॥ (೨೦)

ಭಾವಿಸೆ ಸಂಸೃತಿಯೊಳ್ ಸಲೆ ।
ಜೀವಂ ದುಷ್ಕರ್ಮನಿಕರ ನಿರ್ಮಿತಮಂ ನಾ ॥
ನಾವಿಧ ದುಸ್ಸಹದುಃಖಮ ।
ನಾವಗಮನುಭವಿಕುಮನಘ ಜಿನಮತಬಾಹ್ಯಂ ॥ (೨೧)

ವ॥ ಎಂದಾ ಮಹಾನುಭಾವಂ ತನ್ನೊಳೆ ಪರಿಭಾವಿಸುತ್ತುಮತ್ತಮಾ ಯೋಗ್ಯ ವೈರಾಗ್ಯಮಾರ್ತಂಡಮಂಡಳಮಂಡಿತಾಂತರಂಗ ರೋದೋರಂಗನಾಗಿ—

ಉತ್ಸವ॥ ನಂದನೆಂಬ ನಾಮದಿಂದಮೊಪ್ಪುತಿರ್ಪ ತನ್ನ ಸ ।
ನ್ನಂದನಂಗೆ ಸಂದ ಭೂತಳಾಧಿಪತ್ಯಮಂ ಮಹಾ ॥
ನಂದದಿಂದಮಿತ್ತು ತತ್ತಪಸ್ವಿಸನ್ನಿಧಾನದೊಳ್ ।
ನಂದನಾವನೀಶನಾಂತನಂದು ಜೈನದೀಕ್ಷೆಯಂ ॥ (೨೨)

ಮ॥ ಬ್ರತಮಯ್ದುಂ ತನಗೊಚ್ಚತಂ ಸಮಿತಿಯಯ್ದುಂ ತನ್ನೊಳತ್ಯುನ್ನತಂ ।
ಹಿತಸಂಪಾದನ ಗುಪ್ತಿ ಮೂಱುಮನಿಸಂ ತನ್ನಲ್ಲಿ ಸಂಪನ್ನಮು ॥
ಸ್ಥಿತಮಾಱುಂ ತೆಱದಿಂದೆ ರೂಢಿವಡೆದಿರ್ದಾವಶ್ಯಕಂ ತನ್ನೊಳಾ ।
ರ್ಹತ ಯೋಗೀಶ್ವರನಾಂತನಿಂತು ಜಸಮಂ ಚಾರಿತ್ರ ಚಕ್ರೇಶ್ವರಂ ॥ (೨೩)

ಕಂ॥ ಗತಗೌರವತ್ರಿತಯನು ।
ಜ್ಝಿತದಂಡತ್ರಿತಯನಸ್ತ ಶಲ್ಯತ್ರಿತಯಂ ॥
ಚ್ಯುತಮಿಥ್ಯಾತ್ರಿತಯಂ ಸಂ ।
ಶ್ರಿತ ರತ್ನತ್ರಿತಯನೆಸೆದನಾ ಮುನಿಮುಖ್ಯಂ ॥ (೨೪)

ವ॥ ಅಂತು ವಿಪಶ್ಚಿನ್ನುತ ದುಶ್ಚರಣಪರಿಣತಂ ಪ್ರಾಜ್ಞ ಮನೋಜ್ಞ ಗುರುಜನಾನುಜ್ಞೆಯಿನೇಕವಿಹಾರಿಯುಂ, ಉಭಯ ನಯಾಯತ್ತಚಿತ್ತನುಂ, ತ್ರಿಕರಣಶುದ್ಧನುಂ, ಚತುರ್ವಿಧ ಮಂಗಳೋತ್ತಮ ಚರಣಸ್ಮರಣ ಪರಿಣತಾಂತಃಕರಣನುಂ, ಪಂಚಶರ ಭಯಂಕರನುಂ, ಷಡ್ಜೀವನಿಕಾಯ ದಯಾನಿಯತನುಂ, ಸಪ್ತಭಯವಿಮುಕ್ತನುಂ, ಅಷ್ಟಮದ ರಹಿತನುಂ, ನವವಿಧ ದೇವವ್ರತ ಪ್ರತಿಪಾಳಕನುಂ, ದಶಕುಶಲಧರ್ಮಹರ್ಮ್ಯನುಂ, ಏಕಾದಶಾಂಗಶ್ರುತ ಸಂಗತನುಂ, ದ್ವಾದಶತಪೋರಮಾರಮಣನುಂ, ತ್ರಯೋದಶಾಚಾರಚಾರುಭೂಷಣನುಂ, ಚತುರ್ದಶ ಮಳವಿಹೀನನುಂ, ಪಂಚದಶ ಪ್ರಮಾದ ವರ್ಜಿತನುಮಾಗಿ, ಸಮುಪಲಬ್ಧಿ ಕೇವಳಿದರ್ಶನಂ ದರ್ಶನವಿಶುದ್ಧಿಪ್ರಭೃತಿ ಸಮುದಿತ ಷೋಡಶಭಾವನೆಗಳಂ ಭುವನತ್ರಯಾತಿಕೌತುಕ ಸಮರ್ಥತೀರ್ಥಕರಾಗಣ್ಯ ಪುಣ್ಯಹೇತುಭೂತಂಗಳಂ ಭಾವಿತಾತ್ಮನಾವಗಂ ಭಾವಿಸುತ್ತುಂ ವಾಸುಪೂಜ್ಯ ತೀರ್ಥ ಸಂತಾನಮಂ ವಿನಯಜನಫಳಿತ ಸಂತಾನಮಂ ತಾನೆ ಬೆಳಗಿ ಪಲಕಾಲಮನತಿಶಯ ಚಾರಿತ್ರದೊಳ್ ವರ್ತಿಸಿ—

ಕಂ॥ ತನ್ನಾಯುಃವಿನವಸಾನದೊ ।
ಳುನ್ನತ ವಿಂಧ್ಯಾಚಳಾಗ್ರಗತನತಿಮುದದಿಂ ॥
ಸನ್ನುತಮಂ ಮುಕ್ತಿಪದಾ ।
ಸನ್ನಂ ಪ್ರಾಯೋಪಗಮನವಿಧಿಯಂ ತಳೆದಂ ॥ (೨೫)

ಉದಿತಕ್ಷುತ್ತೃಷ್ ಶೀತೋ ।
ಷ್ಣದಂಶಮಶಕಾದಿ ಬಹುಪರೀಷಹಮಂ ಧೈ ॥
ರ್ಯದಮೇರು ಸೈರಿಸಿದನೊದ ।
ವಿದ ಭಾವನೆಯಿಂದಮೊಂದು ತಿಂಗಳ್ವರೆಗಂ ॥ (೨೬)

ವ॥ ಅಂತಾ ಶಾಂತಾತ್ಮನಂತರಾಯಮಿಲ್ಲದೆ ನೋಂತು ಪರಿತ್ಯಕ್ತ ಶರೀರಭಾರನಾಗಿ—

ಕಂ॥ ಷೋಡಶಕಲ್ಪದೊಳಾದಂ ।
ರೂಢಿಯ ತಾನೀಶನೆಸೆವ ಪುಷ್ಪೋತ್ತರಮಂ ॥
ಬೀಡಿತ ವಿಮಾನದೊಳ್ ವಿಭ ।
ವಾಡಂಬರನಿಂದ್ರನಾದನಾಯೋಗೀಂದ್ರಂ ॥ (೨೭)

ಚಂ॥ ಹಿಮಕರಬಿಂಬಮುಂ ವಿಗತಲಾಂಛನಮುಂ ಕಡೆದಬ್ಜಸಂಭವಂ।
ಪ್ರಮುದದೆ ಮಾಡಿದಂ ಸುರನ ಸುಂದರರೂಪಮನೆಂಬಿನಂ ಸುಕಾಂ॥
ತಿಮಯ ನಿಕಾಮ ಕೋಮಳತರಂ ಸಹಜಾಂಬರ ರತ್ನಭೂಷಣೋ।
ದ್ಗಮಮಮರಾಗ್ರಗಣ್ಯನತನೂದಯಮಾದುದು ಕೌತುಕಪ್ರದಂ॥ (೨೮)

ವ॥ ಅಂತಾ ನಿರ್ಮಳಸ್ವಾಂತನಚ್ಯುತಕಲ್ಪದೊಳನಲ್ಪಲೀಲಾರುಂದ್ರಮೆನಿಪಿಂದ್ರ ಪದವಿಯಂ ಪಡೆದು ತ್ರಾಯಸ್ತ್ರಿಂಶಸಾಮಾನಿಕಾದಿ ವಿವಿಧಭೇದಸುರಪರಿಷತ್ಪರಿವೃತನುಂ, ತ್ರಿಹಸ್ತೋತ್ಸೇಧ ಕಮನೀಯಕಾಯನುಂ, ದ್ವಾವಿಂಶತಿಸಹಸ್ರಸಂವತ್ಸರಾವಧಿಸ್ಮೃತಾಮೃತಾಹಾರನುಂ, ಏಕಾದಶಮಾಸಾವಸಾನ ನಿರ್ಯತ್ಸುರಭಿನಿಶ್ವಾಸನುಂ, ದಿವ್ಯಕಾಂತಾಸಂತತಿ ಸಂತತ ಕಂತುಕ್ರೀಡಾಕ್ರಾಂತಸ್ವಾಂತನುಮಾಗಿ—

ಕಂ॥ ಆವಿಕಸದ್ದಿವಿಜೇಶನ।
ನಾವಿಳಮೆನಿಸಿದ ಮನಃಪ್ರವೀಚಾತಸುಖ॥
ಕ್ಕಾವಗಮಾಸ್ಪದಮಾದಂ।
ದ್ವಾವಿಂಶತಿ ಸಾಗರೋಪಮಾಯುಷ್ಯಯುತಂ॥ (೨೯)

ಪೃಥ್ವಿ॥ ಸುರೂಪಸುರಸುಂದರೀಜನಮನಸ್ಸರೋಜಾಕರೈ।
ಕರಮ್ಯನನಿಶಂ ಜಿನೇಂದ್ರಪದಪದ್ಮ ಸೇವಾರತಂ॥
ನಿರಾಮಯಭಯಂ ಪ್ರಭಾಸ್ವದವಧಿ ಪ್ರಬೋಧೋದಯಂ।
ವಿರಾಜಿಸುತುಮಿಂದ್ರನಿಂತು ಪದೆದಿರ್ದನಿರ್ಜನ್ನಗಂ॥ (೩೦)

ವ॥ ಇತ್ತಲ್—

ಶಾ॥ ಜಂಬೂದ್ವೀಪ ವಿರಾಜಮಾನ ಭರತಾರ್ಯಾಖಂಡದೊಳ್ ಸಂತತಂ।
ಜಂಬೂ ಚಂಪಕ ಚೂತ ಮುಖ್ಯ ತರುಜಾತೋದ್ಯಾನ ಸಂತಾನದಿಂ॥
ಬಿಂಬೋಷ್ಠೀ ನಿಕುರುಂಬದಿಂ ಪುರುಷರತ್ನಾನೀಕದಿಂ ಗೋಮಿನೀ।
ಸಂಬಂಧಂಬಡೆದಿರ್ಪುದುಂಟು ವಿಳಸದ್ದೇಶಂ ವಿದೇಹಾಹ್ವಯಂ॥ (೩೧)

ವ॥ ಅಂತು ಸಕಳ ಸಂಪತ್ತಿಪದಮೆನಿಪ ಜನಪದಂ, ಖಳವೃತ್ತಿ ಕೇದಾರಂಗಳೊಳ್, ಕುಟಿಲಭಾವಂ ಭಾಮಿನೀಕುಂತಳಂಗಳೊಳ್, ಮಧುಪ್ರಳಾಪಂ ಜಳಜಾಕರದೊಳ್, ಪಂಕಸ್ಥಿತಿ ಕಳಮಶಾಳಿವನಂಗಳೊಳ್, ಕರಾಭಿಘಾತಂ ಮುರಜಂಗಳೊಳ್, ವಿದ್ರುಮಲಕ್ಷ್ಮಿ ವಧೂಮಧುರಾಧರಂಗಳೊಳಲ್ಲದೆ ತನ್ನೊಳ್ ಮತ್ತೆಲ್ಲಿಯುಮಿಲ್ಲೆನಿಪ ಮಯ್ಮೆಯಂ ತಳೆದುದಂತುಮಲ್ಲದೆಯುಂ—

ಕಂ॥ ಅನಪೇತ ಪದ್ಮಮಾಶ್ರಿತ।
ಘನತೃಷ್ಣಾಚ್ಛೇದಿ ವಿಮಳಿನದ್ವಿಜಸೇವ್ಯಂ॥
ಜನಿತ ಪ್ರಸಕ್ತಿ ಸಲೆ ಸ।
ಜ್ಜನಮುಂ ನೆನೆಯಿಸುವುದದಱ ಸರಸೀನಿಕರಂ॥ (೩೨)

ವ॥ ಅಂತು ನಿತಾಂತಮೆಂತು ನೋೞ್ಪೊಡಂ ಕಾಂತಮೆನಿಪ ತಜ್ಜನಪದದೊಳ್—

ಕಂ॥ ಅಸದೃಶ ವಿಶದ ಮಹತ್ವದಿ ।
ನೆಸೆವುದು ಭಾಸ್ವತ್ಕಳಾಧರಂ ಬುಧಯುತಮಿೞ ॥
ಕ್ಷಿಸೆ ನಿಖಿಳವಸ್ತುಧೃತಮಾ ।
ಗಸಕ್ಕೆ ದೊರೆಯೆನಿಸಿ ಕುಂಡಪುರಮೆಂಬಪುರಂ ॥ (೩೩)

ಪರಿಧಿಯ ಶಿಖರಂಗಳ ಪ ।
ದ್ಮರಾಗರುಚಿ ಪುದಿದ ತತ್ಪುರೀವರದ ಪಯಃ ॥
ಪರಿಖಾವಳಯಂ ಮಿಗೆ ಬಿ ।
ತ್ತರಿಪುದು ಪಗಲೊಳಮುದಭ್ರ ಸಂಧ್ಯಾಭ್ರಮುಮಂ ॥ (೩೪)

ಚಂ॥ ಅವಿಕಳ ಮೌಕ್ತಿಕಾಭರಣ ಭೂಷಣಕಾಂತಿಗಳಿಂ ದಿಗಂತಮಂ ।
ಧವಳಿಸುತಂತುಮಿಂತುಮತಿಸಮ್ಮದದಿಂ ಮುದದಿಂ ಸಮಂಥರೋ ॥
ದ್ಧುವಗತಿಯಿಂ ಸಮಂತು ಸುಚಿವುಜ್ವಳ ಪೂರ್ಣಶಶಾಂಕವಕ್ತ್ರೆಯರ್ ।
ಸುವಿಮುಳ ಚಂದ್ರಿಕಾಪ್ರಸರಮಂ ದಿನದಲ್ಲಿಯುಮಲ್ಲಿ ಬೀಱುವರ್ ॥ (೩೫)

ಮ॥ ಇರುಳೊಳ್ ಕೞ್ತಲೆಯಂ ನಿವಾಸಗತಮಂ ಕಾಂತಾಜನಾನೂನ ಭಾ ।
ಸುರರತ್ನಾಭರಣಾಂಶುಗಳ್ ಬಿಡದೆ ತೂಳ್ದುತ್ತಿರ್ಪುದಂ ಕಂಡು ತ ॥
ತ್ಪುರದೊಳ್ ದೀಪ್ತಿಗಳಂಧಕಾರಹರಣ ವ್ಯಾಪಾರಮಂ ಬಿಟ್ಟು ಬಿ ।
ತ್ತರಿಸುತ್ತಿರ್ಪುವು ನೇತ್ರಪಥ್ಯಮೆನಿಸಿರ್ದೊಂದಂಜನೋತ್ಪತ್ತಿಯಂ ॥ (೩೬)

ವಿನತಾನೇಕನೃಪಾಳಮೌಳಿ ವಿಳಸನ್ಮಾಣಿಕ್ಯಭಾಭಾರ ಪಾ ।
ವನ ಬಾಳಾತಪ ಚುಂಬಿತಾಂಘ್ರಿಕಮಳಂ ಧೀವಿಕ್ರಮಾಕ್ರಾಂತ ಶ ॥
ತ್ರುನಿಕಾಯಂ ನಿರವದ್ಯ ಚಾರುಚರಿತಂ ಸಿದ್ಧಾರ್ಥನೆಂಬಂ ಮಹಾ ।
ಜನಪಂ ತನ್ನಗರೀವರಕ್ಕಧಿಪನಾದಂ ಪುಣ್ಯಸಂಪಾದಕಂ ॥ (೩೭)

ಕಂ॥ ಆತನ ಮತಿಪ್ರಕಾಶಂ ।
ನೀತಿಯನಾ ನೀತಿ ಧರೆಯನಾ ಧರೆ ಕನಕ ॥
ಬ್ರಾತಮನಾ ಕನಕೌಘಂ ।
ಖ್ಯಾತ ಸುತೀರ್ಥಂಗಳಂ ಪ್ರವರ್ಧಿಸುತಿರ್ಕುಂ ॥ (೩೮)

ಪಾರ್ಥಿವ ಚೂಡಾರತ್ನಂ ।
ತೀರ್ಥಕರೇಂದೂದಯಾಚಳಂ ಪ್ರಾಪ್ತಾನೇ ॥
ಕಾರ್ಥಂ ಪರಿಪಾಳಿತ ಬುಧ ।
ಸಾರ್ಥಂ ಸಿದ್ಧಾರ್ಥನೆಳೆಯೊಳಲ್ತೆ ಕೃತಾರ್ಥಂ ॥ (೩೯)

ಕಂ॥ ಅರಿವಂಶವಂಶದಾವಂ ।
ಸುರುಚಿರ ನಿಜಕುಲ ಕುಲಾದ್ರಿಮಣಿಶಿಖರಂ ಭೀ ॥
ಕರತರ ತರವಾರಿ ಮನೋ ।
ಹರ ಹರಹಾಸ ಪ್ರಕೀರ್ತಿಯೆನಿಪಂ ಜನಪಂ ॥ (೪೮)

ಪ್ರಿಯಕಾರಿಣಿಯೆಂಬಳ್ ಸ್ಮರ ।
ಜಯಕಾರಿಣಿ ಪುಣ್ಯಪುಂಜಚಾರಿಣಿ ವಿದ್ವ ॥
ಜ್ಜಯ ಚೇತೋಹಾರಿಣಿ ಶೋ ।
ಭೆಯಧಾರಿಣಿ ಚಾರುಚರಿತೆ ತತ್ಪ್ರಿಯೆಯಾದಳ್ ॥ (೪೯)

ಚಂ॥ ಮಿಸುಗುವ ಜೊನ್ನಮಿಂತು ವನಿತಾಕೃತಿವೆತ್ತುದೊ ಪೇೞ್ ಪಗಲ್ ವಿರಾ ।
ಜಿಸುಗುಮೆ ಸಗ್ಗದಗ್ಗದ ಸತೀನುತರೂಪಮುದಿಲ್ಲಿ ಬಂದು ವ ॥
ರ್ತಿಸುವೊಡೆ ಪಕ್ಷ್ಮಪಾತಮಿದು ತೋರ್ಕುಮೆ ಪೇೞಿಕೆನುತುಂ ಲತಾಂಗಿಯಂ ।
ಪೊಸತು ಜನಂ ನಿರೀಕ್ಷಿಸಿ ನಿರೀಕ್ಷಿಸಿ ವಿಸ್ಮಯದಂತಮೆಯ್ದುಗುಂ ॥ (೫೦)

ಕಂ॥ ಆಕೆಯನಂಗಜವಿಜಯಪ ।
ತಾಕೆಯನಭಿಮಾನ ದಾನಶೀಲ ಗುಣಾನೀ ॥
ಕಾಕೆಯನನವಧಿ ಪುಣ್ಯ ।
ಶ್ಲೋಕೆಯನುದ್ಯದ್ವಿವೇಕೆಯಂ ಪೊಗೞದರಾರ್ ॥ (೫೧)

ವರವಿಭವಂ ಧರ್ಮಾರ್ಥಾ ।
ವಿರೋಧಮಂ ಕಾಮಸುಖಮನಾ ಕಾಮಿನಿಯೊಳ್ ॥
ಧರಣೀಶಂ ಸಿದ್ಧಾರ್ಥಂ ।
ಪರಿಭೋಗಿಸುತಿರ್ದನಿರ್ಪುದುಂ ಮತ್ತತ್ತಲ್ ॥ (೫೨)

ವ॥ ಮುಂ ಪೇೞ್ದ ಪುಷ್ಪೋತ್ತರ ವಿಮಾನಪತಿಯಪ್ಪಚ್ಯುತೇಂದ್ರನಾಯುಷ್ಯಂ ಷಣ್ಮಾಸಾವಶೇಷಮಾದುದೆಂಬುದುಂ—

ಕಂ॥ ಕಂಪಿಸಿದುದು ಸೌಧರ್ಮನಿ ।
ಲಿಂಪಾಧೀಶ್ವರನ ರತ್ನರಮ್ಯಾಸನಮೋ ॥
ನಂ ಪೇೞ್ವುದೊ ತೀರ್ಥಕರ ಶು ।
ಭಂ ಪಜ್ಜಳಿಪಲ್ಲಿ ಪೊಣ್ಮುವತಿ ಕೌತುಕಮಂ ॥ (೫೩)

ವ॥ ಆಗಳಾಸ್ಥಾನವಾಸಿ ವಾಸವಂ ನಿಜಾಸನಕಂಪಮಂ ಸಂಪಾದಿಸುವ ಚರಮ ಪರಮಪುರುಷಂ ನೆರಪಿದ ಸಮರ್ಥ ತೀರ್ಥಕರನಾಮ ಕರ್ಮದ ಪೆರ್ಮೆಯಂ ನಿರ್ಮಳಾವಧಿಬೋಧ ವೀಕ್ಷಣದಿನೀಕ್ಷಿಸಿ—

ಕಂ॥ ಭಾವಿ ಜಿನೇಶಂಗಾಗಳೆ ।
ಭಾವೋದ್ಗತ ಭಕ್ತಿಭಾರದಿಂದೆಱಗೆ ಶಿರಂ ॥
ದೇವೇಂದ್ರಂ ನಿರ್ಭರ ಗ ।
ರ್ಭಾವತರಣ ಮಂಗಳೋದ್ಯತಾಶಯನಾದಂ ॥ (೪೬)

ವ॥ ಆಗಿ—

ಮ॥ ದಿವಿಜೇಂದ್ರಂ ಮನದಟ್ಕಱಿಂ ಬರಿಸೆ ಬಂದಾನಮ್ರನಾದಂಗೆ ವೈ ।
ಶ್ರವಣಂಗೀದಿನಮಾದಿಯಾಗಿ ಸತತಂ ಸಾರ್ಧತ್ರಿಕೋಟಿ ಸ್ಫುರ ॥
ದ್ರವಿಣಾನೀಕದ ವೃಷ್ಟಿಯಂ ನಿಯಮದಿಂ ನೀಂ ಪೋಗಿ ಸಿದ್ಧಾರ್ಥ ಪಾ ।
ರ್ಥಿವನಿವಾಸಪುರದೊಳ್ ತ್ರಿಸಂಧ್ಯಮೆಸಗೆಂದಾಜ್ಞಾಪನಂ ಮಾಡಿದಂ ॥ (೪೭)

ಕಂ॥ ಅಂತು ನಿಯೋಜಿಸೆ ಸುರಪತಿ ।
ಯುಂತುಂ ನಿಜಭಕ್ತನೆನಿಪ ಧನಪತಿ ಮುದದಿಂ ॥
ಸಂತತ ರೈವೃಷ್ಟಿಯನ ।
ಭ್ಯಂತರದೊಳ್ ಮಾಡುತಿರ್ದನಾಪುರವರದೊಳ್ ॥ (೪೮)

ಮ॥ ವಿವಿಧಾನೇಕ ಸುರತ್ನದೀಧಿತಿಚಯಂ ತಾರಾಧ್ವದೊಳ್ ತಳ್ತ ವಾ ।
ಸವ ಚಾಪಾಳಿಯಲೀಲೆಯಂ ತಳೆಯೆ ಹೇಮೋದ್ದಾಮದಾಮಂ ದಿಶಾ ॥
ನಿವಹಕ್ಕೀಯೆ ತಟಲ್ಲತಾತತಿಯ ನಿತ್ಯಾಲಿಂಗನಾಶಂಕೆಯಂ ।
ಸವಿಶಾಳಂ ವಸುವೃಷ್ಟಿ ಕುಂಡಪುರದೊಳ್ ಮಾಡಿತ್ತು ವೈಚಿತ್ರ್ಯಮಂ ॥ (೪೯)

ಕಂ॥ ವಸುವೃಷ್ಟಿ ನೆಗಱ್ಚಿ ಜಗತಿಗೆ ।
ವಸುಧೆ ವಸುಂಧರೆ ವಸುಮತಿಯೆಂದನ್ವರ್ಥಂ ॥
ಪೆಸರೆಸೆದುವು ಸುರುಚಿರ ವ ।
ರ್ಷಿಸಿದುದು ತತ್ಪುರದ ಪಿರಿಯ ಸಿರಿ ಮನೆಮನೆಯೊಳ್ ॥ (೫೦)

ವ॥ ಅಂತು ಸಂತತಮುತ್ತರಾಶಾಪತಿ ಶಚೀಪತಿಯ ಬೆಸನಂ ಕೆಯ್ಕೊಂಡು ಕುಂಡಪುರದೊಳ್ ನೂತ್ನ ರತ್ನವರ್ಷಮಂ ನಯನಹರ್ಷಾಕರ್ಷಮಂ ಕಱೆಯುತ್ತುಮಿರೆ ಮತ್ತಮಮರ್ತ್ಯರಾಜಂ ರಾಗರಸ ವಿಕಸಿತ ಮನಃಸರೋಜನಾಗಿ ಭೂವಳಯ ವಿಳಸಿತೆಯಪ್ಪ ಭಾವಿ ಜಿನಜನನಿಯ ಗರ್ಭಶೋಧನಾದಿ ಸಮಸ್ತ ಪರ್ಯುಪಾಸ್ತಿ ಪ್ರವೀಣೆಯರಪ್ಪ ಹಿಮವದಾದಿ ಮೇದಿನೀಧರ ಶಿಖರ ಶೇಖರಾಯಮಾಣ ಪದ್ಮಾದಿಸರಸ್ಸದ್ಮವಾಸಿನಿಯರಾಗಿರ್ಪ ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿಗಳೆಂಬ ಮೆಱೆವಱಿಕೆಯ ಅವರ್ ದೇವಕಾಂತೆಯರುಮಂ, ಮತ್ತಂ ವಿಚಿತ್ರಕೂಟ ಪೇಟಕಮಣಿಗಣಮಯೂಖಲೇಖಾರುಚಿರಮೆನಿಪ ರುಚಕಾಚಳದ ಪೂರ್ವಾದಿ ದಿಗ್ವಿಭಾಗಭಾಸಿತೋತ್ತುಂಗ ಶೃಂಗಸಂಗತೆಯರಪ್ಪ ವಿಜಯೆ, ವೈಜಯಂತಿ, ಜಯಂತಿ, ಅಪರಾಜಿತೆ, ನಂದೆ, ನಂದೋತ್ತರೆ, ಆನಂದೆ, ನಂದಿವರ್ಧನೆ, ಸುಪ್ರತಿಷ್ಠೆ, ಸುಪ್ರಣಿಧಿ, ಸುಪ್ರಬುದ್ಧೆ, ಯಶೋಧರೆ,

ಲಕ್ಷ್ಮೀಮತಿ, ಕೀರ್ತಿಮತಿ, ವಸುಂಧರೆ, ಚಿತ್ರೆ, ಇಳಾದೇವಿ, ಸುರಾದೇವಿ, ಪೃಥ್ವಿ, ಪದ್ಮಾವತಿ, ಕಾಂಚನೆ, ನವಮಿಕೆ, ಸಿತೆ, ಭದ್ರೆ, ಅಲಂಬೂಪೆ, ಚಿತ್ರರೇಖೆ, ಪುಂಡರೀಕಿಣಿ, ವಾರುಣಿ, ಆದರ್ಶೆ ಶ್ರೀ, ಹ್ರೀ, ಧೃತಿ, ಚಿತ್ರೆ, ಕನಕಚಿತ್ರೆ, ತ್ರಿಶಿರೆ, ಸೂತ್ರಾಮಣಿ, ವಿಜಯೆ, ವೈಜಯಂತಿ, ಜಯಂತೆ ಅಪರಾಜಿತೆಯರೆಂಬ ಚತ್ವಾರಿಂಶದಮರರಮಣಿಯರುಮಂ, ಮತ್ತಂ ವಕ್ಷಾರೋಷ್ಪಾಕಾರ ಕುಂಡಳಾದ್ಯನ್ಯನಗನಿವಾಸಿನಿಯರಪ್ಪ ಮಾಳಿಕೆ, ಮಾಳಿನಿ, ಕನಕದೇವಿ, ಕನಕವೃದ್ಧಿ, ಪುಷ್ಪಚೂಳೆ, ಚೂಳಾವತಿ, ಸುರಾದೇವಿ, ತ್ರಿಸರೆ ಮೊದಲಾದ ಪಲರುಮನಿಮಿಷವನಿತೆಯರುಮಂ ಬರಿಸಿ ತತ್ತದುಚಿತ ನಿಯೋಗಯೋಜಿತೆಯರಂ ಬೆಸಸಿ ಕಳಿಪಿದಾಗಳ್ —

ಕಂ॥ ಆನೈತ್ರನಣಂ ನಿರ್ಮಿಪ ।
ರೈನ್ವೃಷ್ಟಿಯೊಳಾದ ಪೆರ್ಮೆಯಂ ನೂರ್ಮಡಿಪಂ ॥
ತಾವರ ದಿವಿಜಸ್ತ್ರೀರ ।
ತ್ನಾವಳಿ ದಿವದಿಂದಮಿೞಿದುದಿಳೆಗುಜ್ವಳಿತಂ ॥ (೫೧)

ರಗಳೆ ॥ ಭಾವಿಜಿನ ಜನನಿಗನುನಯದೆ ಪರಿತುಷ್ಟಿಯಂ
ಭಾವಿಪೊಡೆ ಬಹುತರಂ ಸುಕೃತೈಕ ಸೃಷ್ಟಿಯಂ ॥

ಮಾಡಲಾಯ್ತೆಮಗೆಂಬ ಸಂತೋಷಭಾರದಿಂ
ಕೂಡಿ ಸುರಯುವತಿ ಸಂತತಿ ಮುಂದಚಾರದಿಂ ॥

ಕುಂಡಪುರವರಕೆ ಬಂದಮಳಿನ ಸ್ವಾಂತೆಯಂ
ಕಂಡು ಸಿದ್ಧಾರ್ಥನ ಮನೋನಯನಕಾಂತೆಯಂ ॥

ಬಲವಂದು ಪೊಡವಟ್ಟು ನಿಂದು ವೃತ್ತಾಂತಮಂ
ಸುಲಲಿತೆಗೆ ಬಿನ್ನಪಂಗೆಯ್ದಾನಿಶಾಂತಮಂ ॥

ಬೇಗದಿನಲಂಕರಿಸಿ ತಂತಮ್ಮ ಕೃತ್ಯದೊಳ್
ರಾಗದಿಂ ವರ್ತಿಸಿದರಿಂತತಿಸುತ್ತ್ಯದೊಳ್ ॥

ಜಿನಜನನಿಗೆಸೆವ ಬೆಳ್ಗೊಡೆವಿಡಿದು ಕೆಲಕೆಲರ್
ಜನನುತೆಗೆ ಚಾಮರಂಗಳನಿಕ್ಕಿ ಕೆಲಕೆಲರ್ ॥

ನೃಪವನಿತೆಗಂಗರಾಗಂಬೂಸಿ ಕೆಲಕೆಲರ್
ವಿಪುಳಗುಣೆಯಂ ಮಜ್ಜನಂಬುಗಿಸಿ ಕೆಲಕೆಲರ್ ॥

ಭುವನದೀಪಿಕೆಗಾರತಿಯನೆತ್ತಿ ಕೆಲಕೆಲರ್
ಕವಿನುತೆಗೆ ಬದ್ದವಣಮಂ ಮೊೞಗಿ ಕೆಲಕೆಲರ್ ॥

ಸತಿಗೆ ಮಣಿಪಾದುಕೆಗಳಂ ಸಾರ್ಚಿ ಕೆಲಕೆಲರ್
ಕೃತಪುಣ್ಯೆಗಾದರದಿ ಕೈಗೊಟ್ಟು ಕೆಲಕೆಲರ್ ॥

ನಿರುಪಮೆಯ ಮುಂದೆ ನೆಲನುಗ್ಘಡಿಸಿ ಕೆಲಕೆಲರ್
ವರಮತಿಗೆ ದಿವ್ಯಾಂಬರಮನುಡಿಸಿ ಕೆಲಕೆಲರ್ ॥

ತರುಣಿಗೆ ಸುರಾಭರಣಮಂ ತುಡಿಸಿ ಕೆಲಕೆಲರ್
ಸುರುಚಿರೆಗೆ ಪೂಮಾಲೆಯಂ ಮುಡಿಸಿ ಕೆಲಕೆಲರ್ ।

ವಿನಯವತಿಗನಘ ಪೂಜೆಯನೆಸಗಿ ಕೆಲಕೆಲರ್ :
ಮುನಿಸಂಸ್ತುತೆಗೆ ಬೋನಮಂ ಸಮೆದು ಕೆಲಕೆಲರ್ ॥

ಕೋಮಳೆಗೆ ಶಂಖಮಂ ಪೂರ್ಯೆಸಿ ಕೆಲಕೆಲರ್
ಭೂಮಹಿತೆಗಾರೋಗಿಸಲ್ಕಿಕ್ಕಿ ಕೆಲಕೆಲರ್ ॥

ಕಾಮಿನಿಗೆ ಕೈಘಟ್ಟಯಂ ಕೊಟ್ಟು ಕೆಲಕೆಲರ್
ಕಾಮಾಕ್ಷಿಗಿತ್ತು ತಾಂಬೂಲಮಂ ಕೆಲಕೆಲರ್ ॥

ವಿಧುವದನೆಗಾಂತು ಮಣಿಮುಕುರಮಂ ಕೆಲಕೆಲರ್
ಬುಧನುತೆಗೆ ತಾಳ್ದಿ ಪದೆದಡಪಮಂ ಕೆಲಕೆಲರ್ ॥

ಕಮಳವದನೆಗೆ ನೀಡಿ ಡವಕೆಯಂ ಕೆಲಕೆಲರ್
ಕುಮುದದಳನಯನಯುಗೆಗಡಿಗುಟ್ಟಿ ಕೆಲಕೆಲರ್ ॥

ಪಿಕರವೆಗೆ ಮೃದುತಳ್ಪಮಂ ಪಾಸಿ ಕೆಲಕೆಲರ್
ಸುಕುಮಾರೆಗಾಚರಿಸಿ ಬೇಱ್ಪುದಂ ಕೆಲಕೆಲರ್ ॥

ಲಲಿತಾಂಗಿಗೆಸೆವ ಗದ್ದುಗೆಯಿಕ್ಕಿ ಕೆಲಕೆಲರ್
ಕುಲವಧುಗೆ ಮೆಱೆದು ಗಾನಂಗಳಂ ಕೆಲಕೆಲರ್ ॥

ಶ್ರೀನಿಭೆಯ ಮುಂದೆ ವಾದ್ಯಮನೆಸಗಿ ಕೆಲಕೆಲರ್
ಮಾನಿನಿಯ ಮುಂದೆ ನೃತ್ಯಮನಾಡಿ ಕೆಲಕೆಲರ್ ॥

ದೇವಿಗೆ ವಿನೋದಂಗಳಂ ತೋಱಿ ಕೆಲಕೆಲರ್
ಪಾವನೆಗೆ ಬೆಸಗೆಯ್ದರಿಂತಮರಿಯರ್ ಕೆಲರ್ ॥ (೫೨)

ಕಂ॥ ಅನಿಮಿಷ ಭುವನದ ಕುಸುಮವ ।
ಸನ ಮಣಿಗಣ ಭೂಷಣಾನುಲೇಪನಗಳ ಮ ॥
ತ್ತನುಭವಿಪ ವಸ್ತು ತನಗೆನೆ ।
ಜಿನಜನನಿಗೆ ದೊರೆಯೆನಿಪ್ಪ ಜನನಿಯರೊಳರೇ ॥ (೫೩)

ನಿಯತಂ ಪಡಿಯಱ ಬೆಸನಾ ।
ದಿಯಾಗೆ ಬೆಸನೆನಿತನಿತುಮಂ ಸಲೆ ಸುರಕಾಂ ॥
ತೆಯರೆ ತನಗೆಸಪರೆನೆ ತ ।
ತ್ಪ್ರಿಯಕಾರಿಣಿಯಂತೆ ಕಾಂತೆಯನ್ರೋಂತವರಾರ್ ॥ (೫೪)

ಚಂ॥ ಸುದತಿಗೆ ಗರ್ಭಶೋಧನೆಯನುತ್ತಮವಸ್ತುಗಳಿಂದೆ ಮಾಡೆ ತ ।
ತ್ರಿದಶವಧೂಜನಂ ಮಿಗೆ ವಿರಾಜಿಸಿದತ್ತು ತದಂಗಯಷ್ಟಿ ಪು ॥
ಣ್ಯದ ಪೊಸಪುಂಜವೊಪ್ಪಿನ ತವರ್ಮನೆ ಚೆಲ್ವಿನ ಜನ್ಮಭೂಮಿಯ ।
ಭ್ಯುದಯದಗಾರಮುತ್ಸವದ ಸಾರಮನಂಗನ ಮಂಗಳಾಲಯಂ ॥ (೫೫)

ಕಂ॥ ಪಳಿಕಿಂದ ಸಮೆದ ಪೊಸಪು ।
ತ್ಥಳಿಯಂ ಪೀಯೂಷಜಳದೆ ತೊಳೆದಂತೆ ಮನಂ ॥
ಗೊಳಿಸಿರ್ದಮಳಿನ ಗರ್ಭೆಯ ।
ತೊಳತೊಳತೊಳಗುವ ಲತಾಂಗಮಂಗಜವಿಭವಂ ॥ (೫೬)

ವ॥ ಅಂತು ನಿಖಿಳ ಭುವನಾಶ್ಚರ್ಯಮಾದ ಸುರಯುವತಿಕೃತ ಪರಿಚರ್ಯೆಯಿಂದ ಮಿಂದೀವರಾಕ್ಷಿಗೊಂದು ದಿನದಂದದಿಂದಮಱುದಿಂಗಳ್ ನೆಱೆಯೆ—

ಕಂ॥ ನವಸರಸ ಫಳೋದಯಮಿ ।
ನ್ನವಿಳಂಬಿತಮೆನಿಸಿ ತೋರ್ಪ ಕಲ್ಪಲತಿಕೆ ಪು ॥
ಷ್ಪವತಿ ದಲಪ್ಪಂದದೆ ನೃಪ ।
ಯುವತಿ ಜಗಜ್ಜನನಿ ಪುಷ್ಪವತಿ ತಾನಾದಳ್ ॥ (೫೭)

ವ॥ ಅನಂತರಂ ಚತುರ್ಥದಿನದೊಳನಿಮಿಷವನಿತಾಜನಾನುರಾಗಾನೀತಸ್ಫೀತಶಾತಕುಂಭ ಕುಂಭಸಂಭೃತ ಸಮಸ್ತ ತೀರ್ಥಪಾನೀಯ ಸ್ನಾನ ಪವಿತ್ರಗಾತ್ರೆಯಾಗಿ—

ಮ॥ ಸುರಭೂಜಾತ ವಿಕೀರ್ಣಮಪ್ಪ ಧವಳಂ ದಿವ್ಯಾಂಬರಂ ಮುತ್ತಿನಾ ।
ಭರಣಂ ಚಂದನದಣ್ಪು ಕಂಪಲರ್ದ ಮಲ್ಲೀದಾಮಮೆಂಬೀ ಮನೋ ॥
ಹರ ವಸ್ತೂತ್ಕರದಿಂದೆ ಬೆಳ್ಪಸದನಂಗೊಂಡೊಪ್ಪಿದಳ್ ದೇವಿ ಬಿ ।
ತ್ತರದಿಂ ಮೂರ್ತಿಯನಾಂತ ಕಂತುವಿನ ಚಂಚತ್ಕೀರ್ತಿಯೆಂಬಂದದಿಂ ॥ (೫೮)

ವ॥ ಅಂತು ಕುಸುಮಕೋದಂಡನ ಮಿಸುಪ ಸಾಮ್ರಾಜ್ಯಲಕ್ಷ್ಮೀವಿಡಂಬನಮೆನಿಪ ಶೃಂಗಾರಸಾರಮನಪ್ಪುಕೆಯ್ದು ವಿಚಿತ್ರರತ್ನನಿಚಯರಚಿತಮುಂ, ವಿಶಾಳಕಾಳಾಗುರುಧೂಪಧೂಮಾಮೋದಿತಾಂತರ್ಭಾಗಮುಂ, ಶೋಣಮಾಣಿಕ್ಯದೀಪಕಳಿಕಾಕಳಾಪನಿವಾರಿತಾಂಧಕಾರಮುಂ, ಮಂಜುಗುಂಜನ್ಮಧುಕರಪಟಳಮಿಳಿತ ಸುರಭಿಕುಸುಮ ಮಾಳಯರುಹ ಕಸ್ತೂರಿಕಾಮಸೃಣಘುಸೃಣಾಭಿರಾಮಮುಂ, ಕ್ಷೀರನೀರಾಕರೋದಾರ ಡಿಂಡೀರಪಿಂಡಪಾಂಡುರಾನೂನ ಚೀನಚೇಳಾಕಳಿತ ವಿಳಸದ್ವಿತಾನಮುಂ, ಧವಳಾತಿಕೋಮಳಪ್ರಚ್ಛದಾಚ್ಛಾದಿತ ಸಪ್ರಶಂಸ ಹಂಸತಳ್ಪಾನಳ್ಪಶೋಭಾನಿಬದ್ಧ ಮಣಿಮಯ ಮಂಚಕಾಂಚಿತಮುಂ, ಕರ್ಪೂರಪೂರ ಪೂಗೀಭಾಗಧವಳತಾಂಬೂಳಿಕಾ ದಳಾವಳೀಕಳಿತಕನತ್ಕನಕಭಾಜನಭ್ರಾಜಿತಮುಮೆನಿಸಿ ರಮ್ಯಮಾದ ಶಯ್ಯಾಸದನಕ್ಕೆ ಸಕಳಲೋಕ ಪರಮಮಾಂಗಳ್ಯಸಾರಸರ್ವಸ್ವಂ ಬರ್ಪಂತೆ ಸುರಸುಂದರೀ ಕರಸರೋರುಹಾಳಂಬನೆಯಾಗಿ

ಭುವನಾಂಬಿಕೆ ಮಂದಮರಾಳಯಾನದಿಂ ಬಿಜಯಂಗೆಯ್ದು ಭೋಗೈಶ್ವರ್ಯಸಹಸ್ರೇಕ್ಷಣನುಂ, ನಿಖಿಳಕಳಾಭೀಕ್ಷ್ಣಣನುಮೆನಿಪ ನಿಜಜೀವಿತೇಶ್ವರನ ಕೂಡೆ ನಿರವಧಿ ಸುಖಾನುಭೂತಿ ಪ್ರೀತಚಿತ್ತೆಯಾಗಿ ಪವಡಿಸಿರ್ದು ಬೆಳಗಪ್ಪಜಾವದೊಳ್—

ಕಂ॥ ಮದಗಜಗತಿ ಮದಗಜಮುಂ।
ಸದಮಳವೃಷೆ ಸದಮುಳಿೋರು ವೃಷನಂ ಮೃಗನೇ॥
ತ್ರೆ ದಲದಿರದೆ ಮೃಗವೈರಿಯು।
ನುದಾತ್ತ ಸೌಭಾಗ್ಯಲಕ್ಷ್ಮಿ ಲಕ್ಷ್ಮೀವಧುವಂ॥ (೫೯)

ಸುಮನೋದಾಮ ಸುಕೋಮಳೆ।
ಸುಮನೋದಾಮದ್ವಯಂಗಳಂ ವಿಧುಮುಖಿಯು॥
ತ್ತಮ ವಿಧುವಂ ಕಮಳಾನನೆ।
ಕಮಳಪ್ರಿಯನಂ ಝಷಾಕ್ಷಿ ಝಷನೆರಯುಗಮಂ॥ (೬೦)

ವರಘಟಕುಚೆ ಘಟಯುಗಮಂ।
ಸರಸಿರುಹಾವೋದೆ ಸರಸಿಯಂ ಗುಣರತ್ನಾ॥
ಕರೆ ರತ್ನಾಕರಮಂ ಸು।
ಸ್ಥಿರಸಿಂಹಾಸನೆ ತೊಳಪ್ಪ ಸಿಂಹಾಸನಮಂ॥ (೬೧)

ಮಾನನಿಧಾನೆ ನಿಳಿಂಪ ವಿ।
ಮಾನಕಮನಹೀನಮತಿಯಹೀನಾಲಯಮಂ॥
ಜೈನಮತ ರತ್ನದೀಪಿಕೆ।
ನಾನಾವಿಧ ರತ್ನರಾಶಿಯಂ ಪೇಶಲಮಂ॥ (೬೨)

ಮಳಕಾನನ ಶಿಖಿಶಿಖೆ ಪ।
ಜ್ಜಳಿಸುವ ಶಿಖಿಶಿಖೆಯನಿಂತು ತರದಿಂ ಸ್ವಪ್ನಂ॥
ಗಳನೀರೆಂಟಂ ನೃಪಕುಳ।
ತಿಳಕನ ಸಿದ್ಧಾರ್ಥನರಸಿ ಕಂಡಳ್ ನಲವಿಂ॥ (೬೩)

ವ॥ ಅನಂತರಮಾ ಲಲಿತಾಂಗಿ ಲಲಿತ ಲಲಿತಾದಿ ರಾಗಾರಾವರಂಜಿತಗ್ರೀವರಪ್ಪ ಮಂಗಳಪಾಠಕರ್ ಬೆಡಂಗುವಡೆದ ರಾಜಾಂಗಣಾಲಯದೊಳ್ ನಲಿದು ಪಲತೆಱದೆ ಪಠಿಯಿಪ ಜಗನ್ಮಂಗಳ ಜಿನೇಂದ್ರನ ಗುಣಸ್ತವನ ಪ್ರಶಸ್ತಾನೇಕ ಹೃದ್ಯಗದ್ಯಪದ್ಯಂಗಳಿನ ಪಗತನಿದ್ರೆಯಾಗಿ ಪೊದೆದ ಪೊಸದುಗುಲಂ ಕೆಲಕ್ಕೆ ತೊಲಗೆ ಶಾರದನೀರದನಿಕರದಿನಗಲ್ದ ಪೂರ್ಣಚಂದ್ರಬಿಂಬದ ಭಂಗಿಯನಂಗೀಕರಿಸಿ ಭೋಂಕನೆ ಪಜ್ಜಳಿಪ ತನ್ನ ಸನ್ನುತ ವದನ ಸುಧಾಕರಬಿಂಬದಿನೊಸೆವ ಚಂದ್ರಿಕಾವಿಸ್ತಾರದಂತೆ ತೋರ್ಪಧಿಕ ಸಿತಧವಳ ಲೋಳ ಲೋಚನಂಗಳ ಬೆಳಗಿನ ಬಳಗದಿಂ ನಿಳಯಲಕ್ಷ್ಮಿಗೆ ಬೆಳ್ಪಸದನದ ಪೊದಳ್ಕೆಯನಿತ್ತು

ತತ್ತನೂದರಿಯಾದರದಿಂ ವೈಭಾತಿಕ ವಿಧಿಗಳಂ ವಿಧಿಯಿಸಿ ಸುರನಿತಂಬಿನೀ ನಿಕರಸಮುಚಿತ ಶೃಂಗಾರಸಂಗತೆಯಾಗಿ ಭರ್ಮನಿರ್ಮಿತ ಸಭಾಸದನಮಧ್ಯದ ಮಣಿಮಯಾಸನಮನಲಂಕರಿಸಿರ್ದ ಸಿದ್ಧಾರ್ಥಪಾರ್ಥಿವ ಚೂಡಾಮಣಿಯುಂ ಸೋಂಕಿ ಕುಳ್ಳಿರ್ದು ಜೀವಿತೇಶ್ವರಂಗೆ ತನ್ನ ಕಂಡ ಕನಸುಗಳನನುಕ್ರಮದಿಂ ನಿವೇದಿಸೆ ಕೇಳ್ದು ನೃಪಾಳತಿಳಕಂ ಪುಳಕಕಳಿಕಾವಳೀಲುಳಿತ ತನುಲತಾಲಲಿತನಾಗಿ—

ಮ॥ ಸ್ರ॥ ತೊದಳೇನೀಸ್ವಪ್ನಸಂದೋಹಮನತಿಮುದದಿಂ ದೇವಿನೀನಾವಗಂ ಕಂ ॥
ಡುದಱಿಂ ಶ್ರೀಮಜ್ಜಿನಾಧೀಶ್ವರನಖಿಳಜಗನ್ಮಂಗಳಂ ಕೇವಲಜ್ಞಾ ॥
ನದಯಾಂಭೋರಾಶಿ ವಿಶ್ವಾಮರಪತಿನುತ ಪಾದಾರವಿಂದದ್ವಯಂ ಪು ।
ಟ್ಟಿದಪಂ ನಿನ್ನೀಪ್ರಸನ್ನೋದರದೊಳನುಪಮಾನಂದ ದಾಮಾಭಿರಾಮಂ ॥(೬೪)

ವ॥ ಎಂದಾ ನರೇಂದ್ರಚಂದ್ರಮಂ ಜಗದೀಡಿತೆ ಕಂಡ ಷೋಡಶಪ್ರಶಸ್ತ ಸ್ವಪ್ನಸಮಿತಿಗೆ ಸಕಲ ಲೋಕೈಕನಾಥನುತ್ಪತ್ತಿಯನೆ ಫಲಮಾಗಿ ಪೇೞ್ದು ಭುವನತ್ರಯಗುರುಗೆ ಗುರುಗಳಾಗಲ್ವೇಡಿರ್ದ ತಮ್ಮುತಿರ್ಬರ ಜನ್ಮಮುಂ ಸಫಳಮಾಗೆ ಬಗೆದನನ್ನೆಗಂ—

ಕಂ॥ ಮುಂ ಪೇೞ್ದಚ್ಯುತ ದಿವಿಜೇಂ ।
ದ್ರಂ ಪುಷ್ಪೋತ್ತರ ವಿಮಾನವಾಸಿ ನಿಜಾಯು ।
ಷ್ಯಂ ಪಿಂಗೆ ಬಂದು ಪೊಕ್ಕನ ।
ಲಂಪಿಂ ಪ್ರಿಯಕಾರಿಣೀ ವಧೂದರವರದೊಳ್ ॥ (೬೫)

ವ॥ ಅಂತು ನಿತಾಂತಕಾನ್ತಮೆನಿಪ ಶುಕ್ತಿಕಾಪುಟದೊಳನರ್ಘ್ಯ ಮುಕ್ತಾಫಳಂ ನೆಲಸುವಂತೆ ತನ್ಮಹಾತಿಶಯ ವಿಶುದ್ಧ ಗರ್ಭಾವಾಸದೊಳಾ ಸಮಸ್ತಗುಣನಿವಾಸಂ ನೆಲಸಿ ಬಳೆಯೆವಳೆಯೆ—

ಚಂ॥ ಜಗದಬಳಾಜನಕ್ಕೆ ಮಿಗೆ ವರ್ತಿಪ ಗರ್ಭದ ಚಿಹ್ನಜಾಳದೊಳ್ ।
ಬಗೆವಡೆದೊಂದುಮಾಸತಿಯ ಭಾಸುರಮಪ್ಪಲತಾಂಗದಲ್ಲಿ ಪೊ ॥
ರ್ದುಗೆವಡೆದಿರ್ದುದಿಲ್ಲ ವಿಕೃತಿ ವ್ಯತಿರಿಕ್ತ ಮಹಾನುಭಾವನಿ ।
ರ್ಕೆಗೆ ನೆಲೆಯಾದ ಭಾಗ್ಯವತಿಗೆತ್ತಣದಯ್ಯ ವಿಕಾರಸಂಭವಂ ॥ (೬೬)

ಉ॥ ಮೋಹಲತಾಪವಿತ್ರನಿರೆ ಗರ್ಭದೊಳೀವಧುವಿಂಗೆ ತೋರ್ಕುಮೇ ।
ದೋಹಲತ್ರಾಪ್ರವೃತ್ತಿ ತೊದಳೇನಯಶೋಧರಭಾರ ದೂರನಂ ॥
ದೇಹದೊಳಾಂತ ಕಾಂತೆಗೆ ಕೃಶೋಧರಭಾರಮದೆಂತೆನುತ್ತುಮಂ ।
ದಾ ಹರಿಣಾಕ್ಷಿಯಂ ಪೊಗೞ್ದುದೀಕ್ಷಿಸಿ ತೆಮ್ಮೊಳಮರ್ತ್ಯಯೌವನಂ ॥ (೬೭)

ಕಂ॥ ಪಳಿಕಿನ ಕಳಶದೊಳಿರಿಸಿದ ।
ವಿಳಸನ್ಮಣಿದೀಪಕಳಿಕೆಯಂತೆ ಜಗನ್ಮಂ ॥
ಗಳನಿಳಯಂ ಗತವಿಳಯಂ ।
ಬೆಳಗಿದನಾ ಕಮಳಮುಖಿಯ ವಿಮಳೋದರದೊಳ್ ॥ (೬೮)

ಕಂ॥ ಇಂದ್ರಾಣೀ ಸಹಿತಂ ಬಂ।
ದಿಂದ್ರಂ ಸುರಸಮಿತಿಸಂಯುತಂ ತದ್ಭೂಪಾ॥
ಳೇಂದ್ರನುಮಂ ರಾಜ್ಞಿಯುಮಂ।
ರುಂದ್ರಯಶಂ ತ್ರಿಃಪ್ರದಕ್ಷಿಣಂಗೆಯ್ದೊಲವಿಂ॥ (೬೯)

ಮ॥ ಸುರಲೋಕಂಗಳೊಳುತ್ತಮಂಗಳಿವಱಿಂ ಜೇಱಿಲ್ಲೆನಿಪ್ಪಂಶುಕಾ।
ಭರಣಾದಿ ಪ್ರಿಯವಸ್ತುಸಂತತಿಗಳಿಂ ತತ್ಪೂಜೆಯಂ ಮಾಡಿ ನಿ॥
ರ್ಭರವಾಃಕೋಟಿಗಳಿಂ ಪ್ರಶಂಸಿಸಿ ವಿನಮ್ರಂ ಕಮ್ರ ಕಲ್ಯಾಣಮಂ।
ಭರದಿಂದಾದ್ಯಮನಿಂತು ಚಿತ್ತರಿಸಿದಂ ಶ್ಯಾದ್ವಾದ ವಿದ್ಯಾಪ್ರಿಯಂ॥ (೭೦)

ವ॥ ಅಂತಾಪುರುಹೂತಂ ಪ್ರೀತಿಯಿಂ ಪ್ರಥಮಕಲ್ಯಾಣವಿಭೂತಿಯಂ ಭೂತಳಕ್ಕೆ ಕೌತುಕಮಾಗೆ ವಿಧಿಯಿಸಿ ನಿಜನಿವಾಸಕ್ಕೆ ಪೋಪುದುಮಿತ್ತಲ್—

ಕಂ॥ ಆ ಜನನಿಗೆ ಜನಿಯಿಸಿದುದು।
ವೈಜನನಂ ಸಕಳಭುವನಭವನೋತ್ಸವಲ॥
ಕ್ಷ್ಮೀಜನನಂ ವಿಬುಧಶ್ರೀ।
ಯೋಜನನಂ ಜೈನಸಮಯ ಲೀಲಾಜನನಂ॥ (೭೧)

ವ॥ ಅಂತು ಪರಿಪೂರ್ಣಪ್ರಸವಸಮಯಂ ಸಮಯವಿಸ್ತಾರಿಕೆಗೆ ಸಮನಿಸುವುದುಂ—

ಉ॥ ಚೈತ್ರಸಿತ ತ್ರಯೋದಶಿಯೊಳುತ್ತರೆ ಸಾರ್ತರೆ ಸನ್ಮುಹೂರ್ತದೊಳ್।
ಪುತ್ರನನಟ್ಟಿಯಿಂ ಪಡೆದಳಾಪ್ರಿಯಕಾರಿಣಿ ಚಾರುಗಾತ್ರನಂ॥
ಗೋತ್ರಪವಿತ್ರನಂ ಭುವನಮಿತ್ರನನಾತತಕರ್ಮ ಕಂದಳೀ।
ದಾತ್ರನನುದ್ಧಭೋಧ ಸುಖಪಾತ್ರನನಂಬುಜಪತ್ರನೇತ್ರನಂ॥ (೭೨)

ವ॥ ಆಗಳುದಯಿಸಿದ ಬಾಳಕಂ ರಜೋರಹಿತನೆಂದು ಸೂಚಿಪಂದದಿಂ ಸಕಳವಸುಧಾತಳಂ ರಜೋರಹಿತಮಾದುದು. ಆ ಕುಮಾರಕಂ ಪ್ರಸನ್ನಕರಹೃದಯನೆಂಬುದಂ ಪೇೞ್ವಂತೆ ನಿಖಿಳ ದಿಶಾವಳಯಂ ಪ್ರಸನ್ನಕರಮಾದುದು. ಆ ಭಾಸ್ವದರ್ಭಕಂ ವ್ಯಪಗತಕಾಲುಷ್ಯನೆಂಬುದಂ ನಿವೇದಿಸುವಂತೆ ಸಮಸ್ತ ಜಲಾಶಯನಿಕಾಯಂ ವ್ಯಪಗತಕಾಲುಷ್ಯಮಾದುದು. ಆಸ್ತನಂಧಯಂ ವಿಶದಸ್ವಭಾವನೆಂಬುದಂ ಪ್ರಕಾಶಿಸುವಂತೆ ಗಗನವಳಯಂ ವಿಶದಸ್ವಭಾವಮಾದುದು. ಆ ನೂತನಜಾತಕಂ ಪರಮಾತಿಶಯ ಶೀತಳಗುಣೋಪೇತನೆಂಬುದಂ ಅಱಿಪುವಂತೆ ಸುರಭಿವಾತಂ ಶೀತಳಗುಣೋಪೇತಮಾದುದು. ಆ ಶಿಶುಶಶಾಂಕಂ ಭುವನತ್ರಯದೊಳ್ ಪಜ್ಜಳಿಪನೆಂಬುದಂ ಪ್ರಕಟಪಂದದಿಂ ವಿಶ್ವವೈಶ್ವಾನರಂ ದಕ್ಷಿಣಾರ್ಚಿಯಿಂ ಪಜ್ಜಳಿಸಿದುದು. ಅಂತುಮಲ್ಲದೆಯುಂ—

ಚಂ॥ ನಿಜನಿಜವೈರಮಂ ಸಕಳಸತ್ವಕದಂಬಕಮೆತ್ತನೋಲಿಸುಡಂ ।
ತ್ಯಜಿಯಿಸಿ ಲೀಲೆಯಿಂದೆ ನಲಿದಾಡಿದುವಾಪುರದಲ್ಲಿ ಸುತ್ತಲುಂ ॥
ಧ್ವಜನಿವಹಂಗಳುಂ ವಿವಿಧವಂದನಮಾಲೆಗಳಿಂ ಪೊದಲ್ದವಾ ।
ತ್ರಿಜಗದಧೀಶನುದ್ಭವಿಸೆ ಸಮ್ಮದವಾಯ್ತು ಜನಕ್ಕೆ ನಿಕ್ಕುವಂ ॥ (೭೩)

ಚಂ॥ ಘುಸೃಣರಸಂಗಳಿಂ ಮೃಗಮದದ್ರವದಿಂ ನವಚಂದನಾಂಬುವಿಂ ।
ದೆಸೆವ ಗೃಹಾಂಗಣಾವಳಿಗಳೊಳ್ ಚಳಯಂಗುಡುತಿರ್ಪ ಮೌಕ್ತಿಕ ॥
ಪ್ರಸರದೆ ಕೂಡೆ ರಂಗವಲಿಯಂ ನಲಿದಿಕ್ಕುತುಮಿರ್ಪ ಸುತ್ತಲುಂ ।
ಕುಸುಮಚಯಂಗಳಂ ಕೆದಱುತಿರ್ಪಬಳಾಳಿಯ ಲೀಲೆ ಕೌತುಕಂ ॥ (೭೪)

ಮ॥ ಜಿನನಾಥೋದಯದಲ್ಲಿ ಪಲ್ಲವಿಸಿದತ್ಯಾಶ್ಚರ್ಯಮಪ್ಪನ್ನೆಗಂ ।
ಜನನಾಥಾವಸಥಾಜಿರ ಕ್ಷಿತಿತಳಂ ಸದ್ರಾಗದಿಂದೆಂಬಿನಂ ॥
ಘನಕಾಶ್ಮೀರದ ನೀರಿನಿಂದ ಚಳಯಂಬೆತ್ತೆತ್ತಲುಂ ಲೋಕಲೋ ।
ಚನಕಂ ತನ್ಮನಕಂ ಪ್ರಸಕ್ತಿಜನಕಂ ಮಾಡಿತ್ತು ಸಂತೋಷಮಂ ॥ (೭೫)

ಚಂ॥ ಅರಮನೆಯಲ್ಲಿ ಪೊಣ್ಮಿದುದು ಮಂಗಳತೂರ್ಯ ಸಮುತ್ಥಿತಂ ದಿಶಾ ।
ಕರಿವರ ಕರ್ಣಕೋಟರ ಮಹಾಭರಿತಂ ಸ್ಫುರಿತಂ ಘನಸ್ವನಂ ॥
ಸರಭಸವಂದಿವೃಂದ ಜಯಜೀಯನಿನಾದ ವಿವರ್ಧಿತಂ ಮನೋ ।
ಹರಸುರಗಾಯಿನೀ ಮಧುರಗಾನ ರವಾನುಗತಂ ಜಗನ್ನುತಂ ॥ (೭೬)

ಕಂ॥ ಸಮಯೋಚಿತ ಪರಿಚರ್ಯೆಯು ।
ನಮಳಿನಜಿನಜನನಿಗೆಸಗುನುಮರಪ್ರಮದಾ ॥
ಸಮಿತಿಯ ಸಂಭ್ರಮಗಮನಂ ।
ಕಮನಂ ತಾನಾದುದಂದು ನೃಪಮಂದಿರದೊಳ್ ॥ (೭೭)

ತೆಡೆಯದೆ ಸಿದ್ಧಾರ್ಥನೃಪಂ ।
ನಡೆತಂದು ಸುತಾನನೇಂದುವಂ ನೋಡಿ ಸುಖಂ ॥
ಬಡೆದಂ ತನ್ನಯ ಮನದೊಳ್ ।
ಬಡವಂ ನಿಧಿಗಂಡಮಾಱ್ಕೆಯಿಂ ವಿಶದಯಶಂ ॥ (೭೮)

ಚಂ॥ ಪರಮ ಜಿನೇಂದ್ರಮಂದಿರಚಯಂಗಳೊಳೊಪ್ಪುವನೇಕ ಪೂಜೆಯಂ ।
ಪಿರಿದನುರಾಗದಿಂ ನೊದಲೊಳಾಗಿಸಿ ವಾಂಛಿತವಸ್ತುವೃಂದಮಂ ॥
ನೆರೆದ ಸಮಸ್ತ ಸದ್ವಿಬುಧವಂದಿಜನಾವಳಿಗಿತ್ತು ಬಂಧುಗ ।
ಳ್ವೆರಸು ಜಿನಾರ್ಭಕಂಗೆ ವಿಭುಮಾಡಿದನೀಡಿತ ಜಾತಕರ್ಮಮಂ ॥ (೭೯)

ವ॥ ಆ ಸಮಯದೊಳ್—

ಕಂ॥ ವಾದನಮಿಲ್ಲದೆಯುಂ ಮಿಗೆ ।
ನಾದಂಗೆಯ್ದುವು ಸುರಾನಕಾನೀಕಂಗಳ್ ॥
ಬಾದೇಂ ಸುರವಿಷ್ಟರತತಿ ।
ಗಾದುದು ಕಂಪನಮಕಾರಣಂ ಭೂರಿತರಂ ॥ (೮೦)

ಸಕಳನಿಳಿಂಪನಿಕಾಯದ ।
ಮಕುಟಂಗಳ್ ವಿನಮಿತಂಗಳಾದುವು ಸುರಭೂ ॥
ಜಕುಳಂಗಳ್ ಸುರಿದುವು ಸುರ ।
ಭಿಕುಸುಮದಾಸಾರಸಾರಮಂ ಧಾರಿಣಿಯೊಳ್ ॥ (೮೧)

ವ॥ ಇಂತಿವು ಮೊದಲಾದ ಪಲವುಮಾಶ್ಚರ್ಯಂಗಳ್ ನೆಗಟಿ, ಸೌಧರ್ಮೇಂದ್ರಂ ನಿಜಾವಧಿಬೋಧಪ್ರಯೋಗದಿಂ ಯೋಗಿವೃಂದಾರಕವೃಂದವಂದ್ಯ ಪಾದಾರವಿಂದದ್ವಂದ್ವ ಭಗವಜ್ಜಿನೇಂದ್ರಚಂದ್ರನುದಯಮನಱಿದು ಹರ್ಷೋತ್ಕರ್ಷಸುಧಾರಸಮುರುತ್ತರಂಗಿಣೀ ತರಂಗಿತಾಂತರಂಗಂ ಸಮುಲ್ಲಸಿತ ಕಲ್ಯಾಣಪರಂಪರಾಪರಿಪ್ರಾಪಣೇಚ್ಛೆಯಿಂ ನಿರತಿ ಶಯ ನಿಖಿಳ ಕಲ್ಯಾಣನಿಳಯಂಗೆ ನಿರ್ಭರಭಕ್ತಿಯಿಂ ದ್ವಿತೀಯ ಕಲ್ಯಾಣ ಮಹೋತ್ಸವ ವಿಧ್ಯುತ್ಸುರತೆಯಿನುತ್ಸುಕಾತಿಶಯನಾಗಿರ್ಪುದುಂ—

ಮ॥ ಭವನೇಂದ್ರರ್ಗೆ ಪೊದಟ್ದು ಶಂಖನಿನದಂ ತದ್ವ್ಯಂತರೇಂದ್ರರ್ಗೆ ಪೊ ।
ಣ್ಮುವ ಭೇರೀನಿನದಂ ಗಜಾರಿನಿನದಂ ಜ್ಯೋತಿಃಕುಲೇಂದ್ರರ್ಗೆ ತ ॥
ದ್ದಿವಿಜೇಂದ್ರರ್ಗೆ ನಿತಾಂತಮುಣ್ಮುವ ಮಹಾಘಂಟಾನಿನಾದಂ ತ್ರಿಳೋ ।
ಕ ವಿಭೂತ್ಪತ್ತಿ ವಿಭೂತಿನಾದಮಿದು ಚೇತಃಪ್ರೀತಿಯೆಂದೆಂಬಿನಂ ॥ (೮೨)

ಚಂ॥ ನೆರೆದು ಚತುರ್ನಿಕಾಯ ಸುರರಾತ್ಮವಧೂಜನ ವಾಹನಾಯುಧಾ ।
ಭರಣ ಪರಿಗ್ರಹಪ್ರಕರಸಂಯುತರಾಗಿ ಜಿನಾಭಿಷೇಕಸಂ ॥
ಸ್ಫುರಿತ ಮಹೋತ್ಸವಕ್ಕೆ ಪಿರಿದಪ್ಪ ವಿಭೂತಿಯಿನಂದು ನಿಂದರಂ ।
ಬರತಳದಲ್ಲಿ ಬಂದು ಬರವಾರುತುಮಾಶಚಿಜೀವಿತೇಶನಾ ॥ (೮೩)

ವ॥ ಮತ್ತಮಾಗಳ್—

ಕಂ॥ ಸ್ಮರಿಯಿಸಿದಂ ತನ್ನ ಮದೋ ।
ದ್ಧುರ ಬಂಧುರ ಗಂಧ ಸಿಂಧುರಾಮರವರನಂ ॥
ಸುರುಚಿರ ವೈಕುರ್ವಣ ಚಾ ।
ತುರೀಕನಂ ವರವಿಲೋಕನಂ ಸುರರಾಜಂ ॥ (೮೪)

ವ॥ ಅಂತು ನೆನೆದ ಪದದೊಳಪಗತಾಭ್ರವಿಭ್ರಮನಭಸ್ಥಳದಂತೆ ಸುವ್ಯಕ್ತಹಸ್ತ ಮೂಲಮುಂ, ಹರಿಕುರುಸಂತ ಕಥಾವತಾರದಂತೆ ಮಹಾಕರ್ಣಾರ್ಜುನವಿಗ್ರಹಮುಂ, ವಿವಾಹವೇದಿಕಾಗ್ರದಂತೆ ಸಾಳಂಕೃತ ಶುಂಭತ್ಕುಂಭಮುಂ, ಮಹೋದಾರಗುಣಪ್ರಣಯ

ಪುರುಷನಂತೆ ನಿರಂತರಭೂರಿದಾನ ಪ್ರವರ್ತನಮುಂ, ಮಹಾರಣ್ಯ ಪ್ರದೇಶದಂತೆ ಸಮುತ್ತುಂಗ ವಂಶವಿಭ್ರಾಜಿತಮುಂ, ಸರಸಕವಿನಿಬದ್ಧಕಾವ್ಯದಂತೆ ಸಮುವೃತ್ತಪದಾತಿರಮ್ಯಮುಂ, ವರ್ಷಾಕಾಲಪ್ರಾರಂಭದಂತೆ ಪೃಥುಳಪುಷ್ಕರಬಿಂದುಜಾಳಮುಂ, ಪರಮಪಾವನ ತಪೋವನದಂತೆ ಸದ್ವೃತ್ತಮಹಾಭಟಂತಮುಂ, ನಿದಾಘಸಮಯಮನಾಘಾಟದಂತೆ ಸದಾವಗ್ರಹಲಕ್ಷಿತಮುಮೆನಿಸಿದಭ್ರಶುಭವಿಭ್ರಮಾಭ್ರಮೂವಲ್ಲಭಂ ಬಂದು—

ಕಂ॥ ಒಂದೊಂದಱಿಕೂಳೆಂಟೆಂಟು ರ ।
ದಂ ದೃಷ್ಟಮೆನಿಪ್ಪ ರಮ್ಯವದನಂಗಳನಾ ॥
ನಂದದೆ ಮೂವತ್ತೆರಡನ ।
ನಿಂದಿತಮತಿತಾಳ್ದಿ ನಿಂದುದಿಂದ್ರಗಜೇಂದ್ರಂ ॥ (೮೫)

ಒಂದೊಂದೆ ಕೊಂಬಿನೊಳ್ ಮ ।
ತ್ತೊಂದೊಂದೆ ಕೊಳಂ ಕೊಳಂಗಳೊಂದೊಂದಱಿಕೂಳಂ ॥
ಸುಂದರತರ ಬಿಸಿನೀಲತೆ ।
ಯೊಂದೊಂದಾಸಂದ ಬಿಸಿನಿಯೊಂದೊಂದಱಿಕೂಳಂ ॥ (೮೬)

ಮೂವತ್ತೆರಡೆಸೆದಿರ್ದುವು ।
ಪೂವೊಂದೊಂದಲರ್ದ ಪೂಗೆ ಮಿಸುಪ ದಳಂಗಳ್ ॥
ಭಾವಿಸೆ ಮೂವತ್ತೆರಡಂ ।
ತಾವಿಳಸಿತಪದ್ಮದಳಗಳೊಂದೊಂದಱಿಕೂಳಂ ॥ (೮೭)

ಉತ್ತಮನರ್ತಕಿಯರ್ ಮೂ ।
ವತ್ತಿರ್ಬರ್ ಗೀತವಾದ್ಯದನುಗತಿಯಿಂದಂ ॥
ಚಿತ್ತಭವ ವಿಭವಲೀಲಾ ।
ಯತ್ತೆಯರತ್ಯಂತ ರಾಗದಿಂ ನರ್ತಿಸುವರ್ ॥ (೮೮)

ವ॥ ಇಂತಗುರ್ವುವಡೆದ ವಿಕ್ರಿಯಾವಿಡಂಬನದಿಂ ವಿಚಿತ್ರಗಾತ್ರಮನಪ್ಪುಕೆಯ್ದೊಪ್ಪಂಬೆತ್ತ ನಿಜಗಜೇಂದ್ರ ಬಂಧುರಸ್ಕಂಧಪ್ರದೇಶಮಂ ಪೌಳೋಮಿಸಮೇತಂ ಪುರುಹೂತನಳಂಕರಿಸಿ—

ಕಂ॥ ಪಟುಪಟಹರಟನಮಾಶಾ ।
ತಟಮುಂ ತರ್ಕೈಸೆ ಸಗ್ಗದಿಂ ಪೊಱಮಟ್ಟಾ ॥
ಚಟುಳಚತುರಮರಸಮಿತಿಯ ।
ಕಟಕಮನಾನಂದದಿಂದೆ ತಾಂ ಪುಗುತಂದಂ ॥ (೮೯)

ಚಂ॥ ಸುರವರಕಾಮಿನೀನಯನದೀಧಿತಿ ದೇವನಿಕಾಯನಾಯಕಾ ।
ಭರಣಮರೀಚಿ ತದ್ಬಹುವಿಧಾಯುಧರೋಚಿ ವಿಮಾನವಾಹನೋ ॥
ತ್ಕರ ಲಸದಂಶುವೆಂಬಿವನಿತುಂ ಹರಿದಂಬರಬಿಂಬಮಂ ಪ್ರಭಾ ।
ಸುರ ಸುರಚಾಪಮಾವರಿಸಿತೆಂಬಭಿಶಂಕೆಯನಿತ್ತುವೆತ್ತಲುಂ ॥ (೯೦)

ಕಂ॥ ನಾದಮಯಂ ನಿರತಿಶಯಾ ।
ಮೋದಮಯಂ ನಿರವಧಿಪ್ರಕಾಶಮಯಂ ತಾ ॥
ನಾದುದು ಭಾವಿಸಿ ನೋಡೆ ಪ ।
ಯೋದಪಥಂ ಪ್ರಥಿತಮಾದ ದೇವಾಗಮದೊಳ್ ॥ (೯೧)

ವ॥ ಅಂತು ಮಹಾವಿಭೂತಿಯಿನಾಖಂಡಳನಖಂಡಿತ ಶೋಭಾಕರಂಡಮಾದ ಕುಂಡಪುರಕ್ಕೆ ವಂದು ಪುಂಡರೀಕಷಂಡಮಂಡಿತಮಾದ ಬಹಿರುದ್ಯಾನದಗ್ರಭಾಗದೊಳಿರ್ದು—

ಕಂ॥ ಬಿಜಯಂಗೆಯ್ಸಿತರಲ್ಕಿಂ ।
ದು ಜಗದ್ಗುರುವಂ ಪ್ರಯತ್ನದಿಂದಂ ಶಕ್ರಂ ॥
ನಿಜಸತಿಯಂ ಕಳಿಪಿದನಂ ।
ಬುಜಮುಖಿಯಂ ದರ್ಶನೈಕರುಚಿಯಂ ಶಚಿಯಂ ॥ (೯೨)

ವ॥ ಅಂತು ಕಳಿಪುವುದುಮುಳವಿಗಳಿದ ಹರ್ಷರಸಮನೊಳಕೊಂಡು ಸುರಸರಣಿಯಿಂ ಧರಣಿಗವತರಿಸಿ ಭೂಲೋಕಲಕ್ಷ್ಮಿಗೆ ಮಂಡನಮಾದ ಕುಂಡಪುರದ ಪರಮಶೋಭೆಯಂ ನೀಡುಂ ನೋಡಿ! ನಾಡೆಯುಂ ಮನದೆಗೊಂಡು ಕೊಂಡುಕೊನೆಯುತುಂ ಬಂದು ಮಂದರಮಹೀಧರದಂದದಿಂ ಪಾಂಡುಕಭದ್ರಶಾಳಾಭಿರಾಮಮಪ್ಪ ಭೂಮಿಪಾಳಧಾಮಮಂ ಪೊಕ್ಕು ಸಮುಚಿತ ಪ್ರಶಸ್ತವಸ್ತುವಿಸ್ತಾರದಿಂ ವಿವಿಧಮಾಂಗಲ್ಯಸಂಪತ್ತಿವೆತ್ತ ವಿನೂತ ಸೂತಿಕಾಸದನಮಂ ತ್ರಿಪ್ರದಕ್ಷಿಣಂಗೆಯ್ದೊಳಗಂಪೊಕ್ಕು ಸಕಳಸಾರಸೌಂದರ್ಯಸನಾಥಂ ನಾಥವಂಶಜಾತಂ ತನಗೆ ಭೋಂಕನೆ ಪ್ರತ್ಯಕ್ಷಮಾಗೆ—

ಕಂ॥ ಇಂದ್ರಾಣಿಯ ನಯನೋತ್ಪಳ ।
ಕಂ ದ್ರುತಮಾನಂದವಾರ್ಧಿಗಂ ನೆಗೞ್ದರ್ಕ ॥
ಚ್ಚಂದ್ರನ ತನುರುಚಿ ಚಂಚ ।
ಚ್ಚಂದ್ರಿಕೆ ಪಡೆದತ್ತಲರ್ಕೆಯಂ ಪೆರ್ಚುಗೆಯುಂ ॥ (೯೩)
ಪ್ರಾಚಿಯ ಪಕ್ಕದ ಶೀತಮ ।
ರೀಚಿಯವೋಲ್ ತಾಯ ಪಕ್ಕದೊಳ್ ಪಟ್ಟಿರ್ದಾ ॥
ರೋಚಿರ್ಮಯನ ವಿನೂತ ।
ಶ್ರೀಚರಣಾಂಬುಜಕೆ ವಿನಯವಿನಮಿತೆಯಾದಳ್ ॥ (೯೪)

ವ॥ ಅಂತು ನಿಜವಿಲುಳಿತಾಳಕಮದಾಳಿಮಾಳೆಯಿಂ ಪರಮನ ಚರಣಸರಸಿರುಹಮನಳಂಕರಿಸಿ ತದನಂತರಂ—

ಕಂ॥ ಆ ಶಚಿ ಮಾಯಾನಿದ್ರೆಯ ।
ನಾಶಶಧರವದನೆಗಿತ್ತು ಬಲಗೆಲದೊಳ್ ಮಾ ॥
ಯಾಶಿಶುವನಿರಿಸಿ ಪಾಣಿಕು ।
ಶೇಶಯಯುಗದಿಂದೆ ನೆಗಪಿದಳ್ ಜಿನಶಿಶುವಂ ॥ (೯೫)

ವ॥ ಅಂತಾಕಾಂತೆ ಮಂದಾರಮಸೃಣ ಕಿಸಲಯನಿಕಾಮ ಕೋಮಳಕರ ಪ್ರವಾಳ ದಿಂದೆತ್ತಿಕೊಂಡು ದೇವಾಂಗನಾ ವದನವಿನಿರ್ಗತ ಜಯಜೀಯನಂದವರ್ಧಸ್ವಾದಿನಾ ದಂಗಳೊಡನೆ ಪೊಣ್ಮುವನೇಕಸುರಪಟಹಪೇಟಕಾರವಂಗಳಿಂ ದೆಸೆಗಳೆಲ್ಲಂ ಪೂರಿತಂಗಳಾಗೆ ಮೆಲ್ಲನಲ್ಲಿಂ ತಳರ್ದು—

ಕಂ॥ ವಿಳಸಿತ ಫಳಮಂಜರಿಯಂ।
ತಳೆದೊಪ್ಪುವ ಕಲ್ಪಲತೆಗೆ ಪಾಸಟಿಯಾದಳ್॥
ನಳನಳಿಸುವ ಜಿನಶಿಶುವಂ।
ತಳೆದು ತಳತ್ತಳಿಪ ಹರಿಯ ವರವಧುವಾಗಳ್॥ (೯೬)

ವ॥ ಅಂತು ಫಳಿತಜಂಗಮಲತೆಯನನುಕರಿಸಿ ಮಹಾವಿಭೂತಿಯಿಂ ಪೋಗಿ ರಾಗದಿಂ ನಿಜಜೀವಿತೇಶ್ವರಂಗೆ ನಾನಾಜನ್ಮಾಚರಿತ ನಿರತಿಶಯ ತಪೋಧನಾದಿ ಸಂಚಿತಾ ಗಣ್ಯಪುಣ್ಯಪುಂಜಮಂ ನೀಡುವಂತೆ ಜಗದಾರಾಧ್ಯನಂ ಮೆಲ್ಲನೆ ನೀಡೆ—

ಕಂ॥ ತಳೆದಂ ನಿಜಸುರುಚಿರಕರ।
ತಳಜಳಜದೊಳನಘನಂ ಕನತ್ತನುಲತೆಯೊಳ್॥
ತಳೆದಂ ಪುಳಕಾವಳಿಯಂ।
ತಳೆದಂ ಹೃದಯದೊಳುದಾರಪದಮಂ ಮುದಮಂ॥ (೯೭)

ಚಂ॥ ಎಸೆವ ಜಿನೇಂದ್ರಚಂದ್ರನ ಸದಚ್ಛತನುಚ್ಛವಿ ಸಾಂದ್ರಚಂದ್ರಿಕಾ।
ಪ್ರಸರಮುದೀಕ್ಷಣೋತ್ಸಳಕಮುತ್ಸವವಾರ್ಧಿಗಮಂದಮಂದಮಂ॥
ಪೊಸಯಿಸೆ ಹರ್ಷಸಂಪದಮನೇಂ ಪರಿತೋಷವಿಶೇಷದಿಂ ಪ್ರಪೋ।
ಷಿಸಿದನೊ ಚಿತ್ತಮಂ ವಿಬುಧವಿಶ್ರುತನಾವಸುಧೈಕಬಾಂಧವಂ॥ (೯೮)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರ ಪ್ರಸಾದ ವಾಚಾಮಹಿತ ಕೇಶವರಾಜಾನಂದ
ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ
ಶ್ರೀವರ್ಧಮಾನ ಪುರಾಣದೊಳ್ ಭಗವಜ್ಜನ್ಮಾಭಿ
ಷೇಕೋದ್ಯೋಗ ವರ್ಣನಂ
ತ್ರಯೋದಶಾಶ್ವಾಸಂ.

ಚತುರ್ದಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀಮದಮರಾಧಿಪತಿ ಸಕ।
ಳಾಮಳಬೋಧಾಧಿಪತಿಯ ತನುಸಂಗತಿಯಿಂ॥
ದೇಮಾತೊ ಪೂತೆನಾದಂ।
ಭೂಮಿನುತಂ ಪಂಚಪರಮಗುರುಪದವಿನತಂ॥ (೧)

ಆಕೃತಿಯ ಕೋಮಳಾವಯು।
ವಾಕೃತಿಯ ವಿಳಾಸದೇಳ್ಗೆಯುಂ ನೋಡಿದನಾ॥
ನಾಕೇಶಂ ಸುರುಚಿರನಾ।
ನಾಕೇಶಂ ಕೆದಱಿ ತೂಗುತುಂ ಮಸ್ತಕಮಂ॥ (೨)

ವ॥ ಅಂತಾ ಪುರಂದರಂ ಪರಮನ ನಿರತಿಶಯರೂಪಸೌಂದರ್ಯಸಂಪತ್ತಿಯಂ ಸಹಸ್ರಲೋಚನಂಗಳಿಂ ನೀಡುಂ ನೋಡಿ ನಿರವಧಿಪ್ರೀತಿಕೌತುಕಾವದಾತಚೇತೋನಿಕೇತನನಾಗಿ, ಹಳಕಳಶಕುಳಿಶಜಳಜಸ್ವಸ್ತಿಕಾದಿ ಪ್ರಶಸ್ತಲಕ್ಷಣಲಕ್ಷಿತಂಗಳಪ್ಪ ತದೀಯ ಪದಪದ್ಮಯುಗಳ ಪದ್ಮರಾಗಮಣಿಗಳಿಂದಮೋರೊರ್ಮೆ ನಿಜಮೌಳಿಮಂಡನಮಾಂಗಳ್ಯಮುಮನೋರೊರ್ಮೆ ವಿಶಾಳಭಾಳಭೂಷಣವಿಶೇಷಮುಮನೋರೊರ್ಮೆ ಹೃದಯ ಪದಕಪದವಿಯುಮನೊದವಿಸುತ್ತುಮಿಂತು ನಾಡೆಯುಂ ನಲಿದು—

ಕಂ॥ ದೇವಾಂಗಸ್ಪರ್ಶೋಚಿತ।
ದೇವಾಂಗಾಮೂಲ್ಯವಸನದಿಂ ಛಾದಿಸಿದೈ॥
ರಾವಣವಾರಣರಮಣ ಮ।
ಹಾವಿಪುಳ ಸ್ಕಂಧದೇಶದೊಳ್ ದಿವಿಜೇಶಂ॥ (೩)

ವ॥ ಜಗತ್ತ್ರಯ ಪವಿತ್ರನಂ ಪ್ರಿಯಕಾರಿಣೀಪುತ್ರನಂ ಕುಂಕುಮಪಂಕಿಳ ನಿಜಾಂಕ ಪಂಕಜಾಸನದೊಳಿರಿಸಿ ತನ್ನ ಬೆನ್ನಂ ಸನ್ನುತ ಸಮುನ್ನತ ಘನಸ್ತನಭರಂಗಳವುಂಕಿ ಸೋಂಕುವಿನಮಿಂದ್ರಾಣಿಯುಮಂ ಕುಳ್ಳಿರಿಸಿದಾಗಳ್—

ಕಂ॥ ಆನಂದದಿಂದೆ ನೆಗಬ್ದೀ।
ಶಾನೇಂದ್ರಂ ರತ್ನದಂಡಮಂಡಿತಮಂ ಮು॥
ಕ್ತಾನಿರ್ಮಿತಲಂಬೂಷಮ।
ನಾನಿಖಿಳಾಧಿಪತಿಗೆತ್ತಿದಂ ಸತ್ತಿಗೆಯಂ॥ (೪)

ಕಂ॥ ಚಮರರುಹಂಗಳನಧಿಕ ।
ಪ್ರಮೋದಭರದಿಂದಮಿಕ್ಕಿದರ್ ತೀರ್ಥಕರಂ ॥
ಗಮಳಂಗಳನೆಸೆವಸನ ।
ತ್ಕುಮಾರ ಮಾಹೇಂದ್ರಕಲ್ಪದಿಂದ್ರರತಂದ್ರರ್ ॥ (೫)

ಸಾಮಾನಿಕಾಮರರ್ ಸ ।
ತ್ಪ್ರೇಮದೆ ವಿವಿಧಾಯುಧಂಗಳಂ ತಳೆದು ಜಗ ॥
ತ್ಸ್ವಾಮಿಯನಳಂಕರಿಸಿದರು ।
ತ್ಸಾಮೋದ್ಭವಪತಿಯಸುತ್ತಲುಂ ಕರಮೆಸೆದರ್ ॥ (೬)

ಶ್ರೀಕರಮಂ ಭೃಂಗಾರಾ ।
ನೀಕಮನುತ್ಸವದೆ ವೈಜಯಂತೀಪ್ರಮುಖಾ ॥
ಶಾಕನ್ಯಕೆಯರ್ ಪೊತ್ತರ್ ।
ಲೋಕತ್ರಯಪತಿಯ ಮುಂದೆ ವಿಭ್ರಮವತಿಯರ್ ॥ (೭)

ರಥೋದ್ಧತೆ॥ ಪಾಳಿಕೇತನಕುಳಂಗಳಂ ಮರು ।
ತ್ಪಾಳಿಚಾರು ಕರಪಲ್ಲವಂಗಳಿಂ ॥
ಲೀಳೆಯಿಂ ತಳೆದು ರಂಜಿಸಿತ್ತು ತ ।
ದ್ವಾಳಕೋತ್ತಮನ ಮುಂದೆ ಸುತ್ತಲುಂ ॥ (೮)

ಕಂ॥ ಭಂಗಿವಡೆವಿನೆಗವೋದಿನ ।
ಪಾಂಗೆಸೆವಾರಭಟೆಯಲ್ಲಿ ತತ್ಸಕಳ ಜಗ ॥
ನ್ಮಂಗಳನ ಮುಂದೆ ಮುದದಿಂ ।
ಮಂಗಳಪಾಠಕತೆವೆತ್ತರಂಬರಮರ್ತ್ಯರ್ ॥ (೯)

ವ॥ ಅಂತುಕರಮೆ ಕೌತುಕವೊದವೆ ಪರಮಗುರು ಭುಜಿಷ್ಯಭಾವೆಚತುರಮರಸಮಿತಿ ಶತಮುಖಸಮನ್ವಿತಂ ಗಗನವಳಯಮಮಂ ವ್ಯಾಪಿಸಿನಡೆದು ಸುದರ್ಶನಂ ಸುದರ್ಶನನಗೇಂದ್ರಮನೆಯ್ದಿದಾಗಳ್ —

ಚಂ॥ ವನಸರಸೀವಿಹಾರಚತುರಂ ಸುರಭೀಕೃತಸರ್ವದಿಕ್ತಟಂ ।
ಘನಪಥವರ್ತಿ ಮಂದಗಮನಂ ಭ್ರಮರೋತ್ಸವಕಾರಿ ತಾಪಲೋ ॥
ಪನಗುಣಧಾರಿ ತದ್ಭವ ಸಮೀರಣಮಂದಿದಿರ್ವಂದು ತೀಡಿತಂ ।
ದನಿಮಿಷರಂ ಮನಂಗೊಳಿಸಿದತ್ತು ಸುರೇಂದ್ರ ಗಜೇಂದ್ರಸನ್ನಿಭಂ ॥ (೧೦)

ಮ॥ ಅನಿಶಂ ನಾಲ್ದೆಸೆಯಲ್ಲಿ ನಾಲ್ಕೆಸೆವುವರ್ಹನ್ಮಂದಿರಂ ಬೇೞಿಕೆವೇ ।
ೞಿನೆ ವಿಭ್ರಾಜಿಪ ಭದ್ರಶಾಳಸಮಭಿಖ್ಯಂ ನಂದನಂ ಸಂದ ಸೌ ॥
ಮನಸಂ ಪಾಂಡುಕಮೆಂಬ ರೂಢಿವಡೆದಾ ನಾಲ್ಕುಂ ಬನಂ ಸುತ್ತಿ ಚೆ ।
ಲ್ವನದೇಂ ತಾಳ್ದಿದುದೋ ನಿಳಿಂಪಗಜರಾಜತ್ಕಂದರಂ ಮಂದರಂ ॥ (೧೧)

ಕಂ॥ ಯೋಜನಲಕ್ಷೋನ್ನತಿ ತಾ।
ರಾಜಾಳಸದಾ ಪ್ರದಕ್ಷಿಣೀಕೃತಿ ದೇವೋ॥
ರ್ವೀಜಸ್ಥಿತಿ ತನ್ನೊಳ್ ವಿ।
ಭ್ರಾಜಿಸೆ ಸುರಸಮಿತಿಗಿತ್ತುದದು ಸಮ್ಮದಮಂ॥ (೧೨)

ವ॥ ಅಂತು ಕಣ್ಗೆವಂದ ಮಂದರಾಚಳೇಂದ್ರಮಂ ವೃಂದಾರಕವೃಂದಮುಮಂದಾನಂದದಿಂದಮೆಯ್ದಿ—

ಕಂ॥ ಪಾಂಡುಕವನಮಂ ಶಿಖಿಕೃತ।
ತಾಂಡವಮಂ ಕಂಡು ತೀರ್ಥಕರವರಸವನೋ॥
ನ್ಮಂಡಿತಮಂ ಬಲವಂದುದ।
ಖಂಡಿತ ಶೋಭಾನವದ್ಯಮಂ ತದ್ವನಮಂ॥ (೧೩)

ವ॥ ತದನಂತರಂ ಪಾವನಮನಾವನಮನೊಳಪೊಕ್ಕು ಪೂರ್ವೋತ್ತರದಿಗ್ಭಾಗದೊಳ್ ತೊಳಗಿತೋರ್ಪ ಪಾಂಡುಕ ಶಿಳಾತಳದ ಸನ್ನಿಧಿಗೆ ತನ್ನಿಳಿಂಪನಾಯಕಂ ನಡೆದು—

ಕಂ॥ ಅದಱಗ್ರ ಭಾಗದೊಳ್ ಚೆ।
ಲ್ವೊದವಿದ ಗಜವೈರಿ ಪೀಠಮಿರೆ ನೋಡಿ ತದ॥
ಗ್ರದೊಳಾಹರಿ ಬಿಜಯಂಗೆ।
ಯ್ದಿದನಿನನಂ ನೆಗಱ ಜಯಜಯ ಪ್ರಧ್ವಾನಂ॥ (೧೪)

ಪೂರ್ವಾಭಿಮುಖಂ ಜಿನಶಿಶು।
ಕರ್ವುರ ನಿಜದೇಹದೀಧಿತಿ ವ್ಯಾಪ್ತದಿಶಂ॥
ಸರ್ವಸ್ತುತನಾಗಳ್ ಕನ।
ಕೋರ್ವೀಧರ ಶಿಖರದಂತೆ ಮಿಗೆ ಸೊಗಯಿಸಿದಂ॥ (೧೫)

ಚಂ॥ ಸುರಪತಿರಾಗದಿಂ ಬೆಸಸೆ ವಾಯುಕುಮಾರಕನಲ್ಲಿ ಮೆಲ್ಲನೋ।
ಸರಿಸದೆ ಬಂದು ಬೀಸಿ ಕಸವಂ ಕಳೆದಂ ಮೊದಲೊಳ್ ಬೞಕ್ಕವಾ॥
ದರದೆ ಲಸದ್ಬಳಾಹಕಕುಮಾರಕ ಜಾಳಕಮೋಳಿಯಿಂದೆ ಭೋ।
ರ್ಗರೆದಮೃತಾಂಬುವಂ ಪರಿಮಳಾನ್ವಿತಮಂ ತಳಿದತ್ತು ಸುತ್ತಲುಂ॥ (೧೬)

ವ॥ ಮತ್ತಮತ್ಯಂತಭಕ್ತಿಭಾವದಿಂ ಸಂಪ್ರಾಪ್ತ ಸದ್ಧರ್ಮಕಥಾಶ್ರವಣಂ ವೈಶ್ರವಣಂ ಮುನ್ನಮೆ ತನ್ನಾಕಿನಾಯಕಂ ಬೆಸಸೆ ಮಿಸುಪ ತುಚ್ಛ ತಚ್ಛಿಳಾಪಟ್ಟಮೆ ಕುಟ್ಟಿಮಮಾಗೆ ಶೋಣಮಾಣಿಕ್ಯಸ್ಥೂಣಶ್ರೇಣಿಶೋಭಿತಮುಂ, ಹರಿನ್ಮಣಿ ಶಿಳಾಕಳಿತ ತುಲಾದಂಡಮಂಡಿತಮುಂ, ಅತಿವ್ಯಕ್ತಮುಕ್ತಾನೀಕ ಸೌಕುಮಾರ್ಯಚ್ಛಾದ್ಯಹೃದ್ಯಮುಂ, ನಾನಾನೂನ ನೂತ್ನರತ್ನರಾಜಿತಭ್ರಾಜಿತ ವಿಚಿತ್ರಭಿತ್ತಿಭಾಗಮುಂ, ನಿಜಶಿರಃ ಲಿಖಿತ್ನ ಲೇಖಲೋಕಾನೇಕವಿಧ ಧ್ವಜವ್ರಜವಿರಾಜಮಾನಮುಂ, ನಯನಾನಂದಸ್ಯಂದಿ

ವಂದನಮಾಳಾವಳೀವಿಳಸಿತಮುಂ, ಮಣಿಭರ್ಮನಿರ್ಮಿತೋತ್ತುಂಗ ಭೃಂಗಾರಾದ್ಯಷ್ಟ ಮಂಗಳ ಸಂಗತಮುಂ, ನವೀನ ದೇವಾಂಗದುಕೂಲಾದಿ ದಿವ್ಯವಸನ ಪ್ರಸರರಚಿತ ರುಚಿರ ವಿತತವಿತಾನಮುಂ, ಪರಮಗುರು ಸವನಸಮುಚಿತ ವಿವಿಧೋಪಕರಣ ಪ್ರಶಸ್ತವಸ್ತು ವಿಸ್ತೀರ್ಣಮುಮೆನಿಸಿ ನಿಸದಮೆಸೆಯೆ ವಿರಚಿಸಿದ ಭುವನತ್ರಯ ಮಂಡನಾಭಿಷೇಕ ಮಂಡಪದಲ್ಲಿ—

ಕಂ॥ ಹರಿ ಹರಿಪದ ಸದನಂ ಭಾ ।
ಸುರ ಸುರಸಭೆ ಮೆಚ್ಚೆ ಜಿನನ ಜನನಾಭಿಷವಾ ॥
ಚರಣೋಚಿತ ನಿಚಿತಾಳಂ ।
ಕರಣಮನಾಂತಂ ಸಮಸ್ತ ವಿಬುಧಾಭರಣಂ ॥ (೧೭)

ಹರಿಚಂದನ ಘನಚರ್ಚಾ ।
ಪರಿಷ್ಕೃತಾಂಗಂ ಶಶಾಂಕನಾಂಗತರಂಗೋ ॥
ತ್ಕರ ಧವಳ ಧೌತದಿವ್ಯಾಂ ।
ಬರಾಂತರೀಯಂ ಪ್ರಮೋದಪುಳಕಿತಕಾಯಂ ॥ (೧೮)

ತರಳತರಮೌಕ್ತಿಕೋತ್ಕರ ।
ವಿರಾಜಿತ ಬ್ರಹ್ಮಸೂತ್ರನುದ್ಗತ ಭಾಭಾ ॥
ಸುರರತ್ನರುಕ್ಮ ವಿರಚಿತ ।
ಸುರುಚಿರ ಕಟಕಾಂಗುಳೀಯಕರಕರಶಾಖಂ ॥ (೧೯)

ಅತಿಬಹಳಪರಿಮಳಾಮೋ ।
ದಿತ ಸಕಳದಿಗಂತರಾಳ ಕಲ್ಪಕುಜಾತ ॥
ಪ್ರತಿ ನವವಿಕಸಿತಸುಮನ ।
ಸ್ತತಿರಚನಾರುಚಿರಶೇಖರಂ ಕರಮೆಸೆದಂ ॥ (೨೦)

ವ॥ ಅನಂತರಮಾಘನವಾಹನಂ ಘನವಾಹನಾಯುಧ ವಧೂಸಮೇತರುಂ, ಸಮಯಸಮುಚಿತಾಳಂಕರಣೋಪೇತರುಂ, ಪರಮಪ್ರಮೋದರಸವಶೀಕೃತಚೇತರುಂ, ಅಪ್ಪ ಸುರೇಶ, ಹುತಾಶ, ಕೀನಾಶ, ನಿರುತಿ, ವರುಣ, ಸಮೀರಣ, ವೈಶ್ರವಣ, ಫಣಿ ಭೂಷಣ, ಫಣಿರಮಣ, ತಾರಾರಮಣರೆಂಬ ದಿಶಾರಮಣರಂ ಬೇಗದಿಂ ಬರಿಸಿ ದಶದಿಶೆ ಯೊಳಮಿರಿಸಿ ಬಱಿಯಮೊಳಗಣ ಚತುರ್ದಿಶೆಗಳೊಳ್ ವಾರಣಾಚ್ಯುತೇಂದ್ರಪ್ರಮುಖ ರಪ್ಪ ಕಲ್ಪಾಮರರುಮಂ, ಚಮರವೈರೋಚನಪ್ರಮುಖರಪ್ಪ ಭವನಾಮರರುಮಂ, ಚಂದ್ರಾದಿತ್ಯ ಪ್ರಮುಖರಪ್ಪ ಜ್ಯೋತಿಷ್ಕಾಮರರುಮಂ, ಸತ್ಪುರುಷಮಹಾಪುರುಷ ಪ್ರಮುಖರಪ್ಪ ವ್ಯಂತರಾಮರರುಮನಿರಿಸಿ ತಾನುಮಾಶಾನೇಂದ್ರನುಂ ದಕ್ಷಿಣೋತ್ತ ರಾಭಿಮುಖರಾಗಿ—

ಕಂ॥ ತುಂಗತರಂಗಳನುತ್ತ್ವೀ ।
ಕಂಗಳನಾನಂದದಿಂದಳಂಕರಿಸಿದ ರು ॥
ತ್ತುಂಗಗುಣಂಗಭಿಷವ ಸ ।
ನ್ಮಂಗಳಮಂ ಸಂಗಳಿಪ್ಪ ಸಂಭ್ರಮದಿಂದಂ ॥ (೨೧)

ಪ್ರಣವೋಚ್ಚಾರಣ ಪೂರ್ವ ।
ಪ್ರಣೀತ ನಾಂದೀಸ್ತವಂಗಳಂ ಪೃಥುಕೃತ ಸ ॥
ತ್ಪ್ರಣವನರತಿ ಗಂಭೀರ ।
ಪ್ರಣಾದದಿಂದೋದಿದರ್ ಮರುದ್ಗಣರಮಣರ್ ॥ (೨೨)

ಘನಪಟಳದ ನಿನದಮುಮಂ ।
ವನಧಿಯ ನಿನದಮುಮನೊಂದು ಮಾಡಿದತೆಱದಿಂ ॥
ದನವಧಿ ಸುರದುಂದುಭಿರವ ।
ಮನುಗತ ಜಯಜಯ ನಿನಾದವೊದವಿದುದಾಗಳ್ ॥ (೨೩)

ಚಂ॥ ಸುರತರು ಪಲ್ಲವಂ ಸುರಕುಜಪ್ರಸವಂ ಸುರಭೂಜಚರ್ಚೆ ಭಾ ।
ಸುರ ಬಿಸಸೂತ್ರಮೆಂಬಿವಱಿನೊಪ್ಪಿ ವಿನಿರ್ಮಳ ತೀರ್ಥವಾರಿ ಸ ॥
ದ್ಭರಿತಮೆನಿಪ್ಪ ಹೇಮಮಯಕುಂಭಚತುಷ್ಟಯಮಂ ಪ್ರಮೋದದಿಂ ।
ದಿರಿಸಿದನಂದು ಕಣ್ಗೆಸೆಯೆ ಕೋಣಚತುಷ್ಟಯದಲ್ಲಿ ವಾಸವಂ ॥ (೨೪)

ಕಂ॥ ಭೂರಿತರ ಕಾಂತಿಸಂತತಿ ।
ರಾರಾಜಿತ ವಿತತದೀಪಕಳಿಕಾಕುಳದಿಂ ॥
ನೀರಾಜಿಸಿದಂ ಹರಿ ಜಿನ ।
ದಾರಕನಂ ಭವ್ಯನಿಕರನಿಸ್ತಾರಕನಂ ॥ (೨೫)

ಮಿಗೆ ಭವ್ಯ ಸಸ್ಯಸಂಪ ।
ತ್ತಿಗೆ ಕಾರಣಮೆನಿಪ ಮುಗಿಲ ಬಳಗಮಿವೆಂಬಂ ॥
ತೊಗೆದುವು ಹರಿತಾಂ ನಿರಪಿಸೆ ।
ನೆಗಟ್ದುಗುರ ಮುಗಮುಗಿಸಿ ಸೊಗಯಿಪ ಕರ್ಪೂರಗೆಗಳ್ ॥ (೨೬)

ಸುಮನೋಽಕ್ಷತ ಚಂದನಯುತ ।
ಕಮನೀಯ ಜಳಂಗಳಿಂದಮಿಂದ್ರರ್ ಕೊಟ್ಟ ॥
ರ್ಘ್ಯಮನರ್ಘಗುಣನಮುಂದೊ ।
ಪ್ಪಮನಾಂತುದು ವಿನಯವಿನತ ತಾರಾವಳಿವೋಲ್ ॥ (೨೭)

ಮ॥ ಸ॥ ಸುಮನೋದಾಮಂಗಳಂ ಕೋಮಳಫಳಕುಳಮುಂ ದೂರ್ವೆಯುಂ ದರ್ಭಮುಂ ಗಂ।
ಧಮನಾದಂ ಶೋಭೆವೆತ್ತಕ್ಷತಮನೆಸೆವಸಾನ್ನಾಯ್ಯಮುಂ ಮತ್ತಮತ್ಯು ॥
ತ್ತಮ ಪೂಜಾಯೋಗ್ಯ ವಸ್ತೂತ್ಕರಮನಸುರಕಾಂತಾ ಸಮೇತಂ ಶಚೀದೇ ॥
ವಿ ಮರುನ್ನಾಥಂಗೆ ನೀಡುತ್ತಿರೆ ಸೊಗಯಿಸಿತಾಸಂಭ್ರಮಂ ಕಣ್ಗಳುಂಬಂ॥ (೨೮)

ಚಂ॥ ಸೆಱಉದಕಂಗಳೀ ತ್ರಿಜಗದೀಶನ ಮಜ್ಜನದುಜ್ಜುಗಕ್ಕದೇಂ।
ನೆಱಿವುವೆ ಪಂಚಮಾಂಬುನಿಧಿಸಂಚಿತ ನಿರ್ಮಳಭೂರಿವಾರಿಗಳ್ ॥
ನೆಱಿವವ್ರೊಲೆಂದು ವಜ್ರಿ ಬೆಸಸುತ್ತಿರೆಯಲ್ಲಿವರಂ ಸುರೋತ್ಕರಂ।
ಮೆಱಿದುದು ಪಂತಿಗಟ್ಟಿಯೆರಡುಂ ದೆಸೆಯೊಳ್ ಸಮುಪಾತ್ತಸಂಭ್ರಮಂ॥ (೨೯)

ಸುರುಚಿರ ಶಾತಕುಂಭಮಯ ಕುಂಭಚಯಂಗಳನೆತ್ತಿ ನೆತ್ತಿಯೊಳ್।
ಕರಶಿಖರಂಗಳೊಳ್ ಕರತಳಂಗಳೊಳಾಂತು ನಿತಾಂತರಾಗದಿಂ॥
ಸುರತತಿ ದುಗ್ಧವಾರಿಧಿಯ ವಾರಿಗಳಂ ತರೆ ದೇವರಾಜನಾ।
ದರದೊಳೆ ಮಾಡಿದಂ ಜಿನವರಂಗೆ ಲಸಜ್ಜನನಾಭಿಷೇಕಮಂ॥ (೩೦)

ಹರಿ ಪರಮಂಗೆ ಭೋರ್ಗರೆದು ಮಾಳ್ಪಭಿಷೇಕದ ಚೆಲ್ವು ಕಣ್ಗೆ ಬಂ।
ದುರುತರ ದೇವದುಂದುಭಿರವಂ ಕಿವಿಗುಣ್ಮುವ ದುಗ್ಧವಾರಿ ಶೀ॥
ಕರತತಿ ಮೆಯ್ಗೆ ಬಾಯ್ಗೆ ಜಯವಾಕ್ಸುಧೆ ನಾಸಿಕೆಗಾಸ್ಫುರತ್ಪಯಃ।
ಪರಿಮಳಮಾಯೆ ಸಮ್ಮದಮನೇಂ ನಲಿದತ್ತೊ ಸುರೋತ್ಕರಂ ಕರಂ॥ (೩೧)

ಸ್ರ॥ ಕ್ಷೀರಾಂಭೋರಾಶಿ ದೇವಾವಳಿ ಮೊಗೆಯೆ ಮಹಾಕುಂಭಸಂದೋಹದಿಂ ನಿ।
ರ್ನೀರಂ ತಾನಾಯ್ತು ತನ್ಮಂದರಧರಣಿಧರಂ ಚೂಳಿಕಾಮಾತ್ರ ದೃಶ್ಯಾ॥
ಕಾರಂ ತಾನಾಯ್ತು ನಾನಾಮರಸಮಿತಿ ವಿಮಾನಂಗಳಾಪೂರದೊಳ್ ಡಿಂ।
ಡೀರ ಶ್ರೀವೆತ್ತುವೇನದ್ಭುತವೊ ಹರಿಕೃತಂ ಜೈನಜನ್ಮಾಭಿಷೇಕಂ॥ (೩೨)

ಕಂ॥ ಇಂಗಡಲ ತಾಯ್ಮಣಲ್ ಬೆ।
ಳ್ದಿಂಗಳ ಬಯಲಂತೆ ವಿಶದಮಾಗೆ ಸುರೌಘಂ॥
ಪೊಂಗೊಡದಿಂದಡಕಿದುದು ಜಿ।
ನಂಗಭಿಷವಸಮಯ ಸಮುಚಿತಾಮೃತ ಜಳಮಂ॥ (೩೩)

ಚಂ॥ ತ್ರಿಭುವನವಲ್ಲಭಂಗೆ ಜನನೋತ್ಸವದೊಳ್ ಹರಿಮಾಡೆ ರೂಢಿವೆ।
ತ್ತಭಿಷವಣಪ್ರಪಂಚಮನದಾರ್ ಗಳ ಬಣ್ಣಿಪರೊಂದೆ ಜಿಹ್ವೆಯಿಂ॥
ಶುಭರಸನಾಸಹಸ್ರಯುಗಮುಳ್ಳ ಫಣೀಶ್ವರನುಂ ಪೊದಟ್ಟಿತ।
ದ್ವಿಭವವಿಶೇಷಮಂ ನೆಱಿಯೆ ವೀಕ್ಷಿಸಿ ಕೀರ್ತಿಸಲಾರನೆಂಬಿನಂ॥ (೩೪)

ಚಂ॥ ಎನಿತು ಭುಜಂಗಳಂ ತಳೆದನಿಂದ್ರನೆನಿತ್ತು ಘಟಂಗಳಂ ಸಮಂ।
ತನಿಮಿಷಕೋಟಿ ನೀಡಿದುದನಿತ್ತಮೃತಾಬ್ಧಿಯವಾರಿ ತೀರ್ದುವೆಂ॥
ದನುಮಿಸಲಾವನುಂ ನೆಱಿಯನೆಂಬಿನಮದ್ಭುತಮಾದ ಜನ್ಮಮ।
ಜ್ಜನದೊಳೆ ತಜ್ಜಿನಾರ್ಭಕನಕಂಪನನಿರ್ದನದೇಂ ಬಲಾಢ್ಯನೋ॥ (೩೫)

ಮ॥ ಅದನೇವಣ್ಣಿಪೆನಣ್ಣ ಕಣ್ಣಱಿದು ದೇವಾನೀಕಮಲ್ಲಲ್ಲಿ ತ।
ಪ್ಪದೆ ತಂತಮ್ಮ ನಿಯೋಗದೊಳ್ ನೆಗಱ್ದುದುರ್ವೀಪಮಂಡಳಂ ಮೇರೆದ॥
ಪ್ಪದ ದುಗ್ಧಪ್ಲವದಲ್ಲಿ ಮೆಯ್ಗರೆದುದಾಶಾಭಿತ್ತಿಗಳ್ ವಾದ್ಯನಾ।
ದದೆ ನಿರ್ಭಿನ್ನತೆವೆತ್ತುವಿಂತೆಸೆದುದಾ ಜನ್ಮಾಭಿಷೇಕೋತ್ಸವಂ॥ (೩೬)

ಶಾ॥ ಮೂಱುಂ ಲೋಕದ ಮಂಗಳೋತ್ಕರದ ಸರ್ವಾಸಾರವೊಂದಾಗಿ ಮೆ।
ಯ್ದೋಱಿತ್ತಾವಗಮಿಲ್ಲಿ ತಾನೆನಿಪ ಪೆಂಪಂ ತಾಳ್ದಿ ನೋೞ್ಪರ್ಗದೇಂ॥
ಬೀಱಿತ್ತೋ ಪರಮಪ್ರಮೋದರಸಮಂ ಸದ್ಭಕ್ತಿಯಂ ಸ್ವಾಂತದೊಳ್।
ಸೇಱಿರ್ದಾ ಮಘವಂ ವಿನಿರ್ಮಿಸಿದ ತಜ್ಜನ್ಮಾಭಿಷೇಕೋತ್ಸವಂ॥ (೩೭)

ವ॥ ಅನಂತರಂ—

ಕಂ॥ ಮಿಸುಗುವ ವರ್ಣಾನ್ನದೆ ದೀ।
ಪಸಮೂಹದೆ ತತ್ಫಳಪ್ರತಾನದೆ ರಾರಾ॥
ಜಿಸೆ ಜಿನಶಿಶುವಂ ನೀರಾ।
ಜಿಸಿ ಸಂತಸದಂತನೆಯ್ದಿದಂ ಸುರರಾಜಂ॥ (೩೮)

ಉ॥ ಮಂಗಳಗೀತವಾದ್ಯನಿನದಂಗಳಶೇಷ ದಿಶಾತಟಂಗಳೊಳ್।
ಪೊಂಗಿರೆ ಪೊಂಗೊಡಂಗಳನನೇಕ ಸುಗಂಧ ವಿಮಿಶ್ರಿತಾಂಬು ಪೂ॥
ರ್ಣಂಗಳನಾಂತು ಪೀವರ ಭುಜಾವಳಿಯಿಂದಭಿಷೇಕಮಂ ಜಿನೇಂ।
ದ್ರಂಗೆ ಸುರೇಂದ್ರನಂದು ನೆಲೆವೆರ್ಚಿದ ಸಮ್ಮದದಿಂ ನಿಮಿರ್ಚಿದಂ॥ (೩೯)

ಕಂ॥ ಪರಮಜಿನತನುವಿನಿರ್ಗತ।
ಪರಿಮಳದೊಳ್ ಬೆರಸಿ ಕಂಪು ನೂರ್ಮಡಿಸೆ ಮನೋ॥
ಹರಮಾದ ಗಂಧಜಳಮಂ।
ಧರಿಯಿಸಿದುದು ಶಿರದೊಳೆಸೆದು ಸುರನಿಕುರುಂಬಂ॥ (೪೦)

ಸಂಪನ್ನಭಕ್ತಿಯುಕ್ತನಿ।
ಳಿಂಪವಧೂವಿತತಿ ವಿಮಳಗಂಧೋದಕದಿಂ॥
ಸಿಂಪಿಣಿಯನೆಸಗಿ ನಿಜತನು।
ವಂ ಪುಳಕಕುಳಕ್ಕೆ ಮಾಡಿದತ್ತಾಶ್ರಯಮಂ॥ (೪೧)

ಚಂ॥ ವರಸುಖಕಾರಿಯಂ ಮಳವಿದಾರಿಯನಾಜಿನಗಂಧವಾರಿಯಂ ।
ಪಿರಿದನುರಾಗದಿಂ ಚತುರಮರ್ತ್ಯಚಯಂ ನಿಜದೇಹಯಷ್ಟಿಯೊಳ್ ॥
ಕರತಳದಿಂದೆ ಕೊಂಡು ತಳೆದಿಂದು ಕೃತಾರ್ಥರಿವಾದೆವೆಂದು ಸಂ ।
ಸರಣದ ತಾಪಮಂ ಕಳೆದೆವೆಂದೆ ವಲಂ ನಲಿದತ್ತು ಸುತ್ತಲುಂ ॥ (೪೨)

ಕಂ॥ ಶಚಿ ಪರಮನ ತನುಜಲಕಣ ।
ನಿಚಯಮನಾತ್ಮೀಯಪಾಣಿಪಲ್ಲವ ಧೃತದಿಂ ॥
ಶುಚಿತಮ ಮೃದುತಮ ದೇವಾಂ ॥
ಗಚೇಳದಿಂ ತೊಡೆದು ತುಡಿಸಿದಳ್ ತುಡುಗೆಗಳಂ ॥ (೪೩)

ಮ॥ ನಿರಳಂಕಾರವಿರಾಜಮಾನ ಜಿನನಂಗಶ್ರೀಯ ಸಂಸಂಗದಿಂ ।
ಪಿರಿದುಂ ಶೋಭೆಗೆ ಸಂದುವಂದು ಶಚಿ ತಂದಾನಂದದಿಂದಿಕ್ಕಿದಾ ॥
ಭರಣಂಗಳ್ ಚರಣಂಗಳೊಳ್ ಕಟಿಯೊಳಾಹಸ್ತಂಗಳೊಳ್ ಮಸ್ತದೊಳ್ ।
ಕೊರಲೊಳ್ ಕರ್ಣಯುಗಂಗಳೊಳ್ ಬೆರಲೊಳುದ್ಯದ್ರತ್ನವೈರಾಜಿಗಳ್ ॥ (೪೪)

ಕಂ॥ ಅಂಜನರಹಿತನ ಲೋಚನ ।
[ಕಂಜಮನಾ] ಕಂಜವದನೆ ಮುದದಿಂ ಸೊಗಯಿ ॥
ಪ್ಪಂಜನ ರೇಖೆಗಳಿಂದಂ ।
ರಂಜಿಸಿ ಭಂಜಿಸಿದಳಾತ್ಮದುರಿತಾಂಜನಮಂ ॥ (೪೫)

ಎಸೆವಾಶಿಶುವಿನ ನೊಸಲೊಳ್ ।
ಬಿಸಜಾನನೆ ನಿಸದಮೆಸೆದು ಪೊಸಕಜ್ಜಳದಿಂ ॥
ಪೊಸಯಿಸಿ ಮಿಸುಗುವ ತಿಳಕಮ ।
ನಸದಳವೊಳಕೊಂಡಳಿಂದ್ರಸತಿ ಸಂತಸಮಂ ॥ (೪೬)

ವ॥ ಆ ಪ್ರಸ್ತಾವದೊಳ್—

ಚಂ॥ ಅಮಳಜಳಂಗಳಿಂ ಸುರಭಿಗಂಧದಿನಕ್ಷತದಿಂ ಪ್ರಸೂನದಿಂ ।
ದಮೃತಮಯಾನ್ನದಿಂ ಜ್ವಲಿತದೀಪಕಳಾಪದಿನುದ್ಧಧೂಪದಿಂ ॥
ವಿಮಳ ಫಳಂಗಳಿಂ ಚಮರಜಾದಿ ಸಮಸ್ತ ಸುವಸ್ತುವಿಂ ಜಿನ ।
ಕ್ರಮಕಮಳಂಗಳಂ ಪದೆದು ಪೂಜಿಸಿ ರಾಜಿಸಿದಂ ಸುರೇಶ್ವರಂ ॥ (೪೭)

ವ॥ ಅನಂತರಮನಘಸ್ತವನೋನ್ಮುಖಂ ಶತಮುಖಂ ತದಭಿಮುಖಂ ನಿಖಿಳ ಸುರ ಸಮಾಜಪ್ರಮುಖಂ ಸುಮುಖನಾತ್ಮೀಯನಿಟಿಳತಟಘಟಿತಕರಕಮಲಕುಟ್ಮಳನಾಗಿ—

[ಸ್ತುತಿ]

ಪೂರ್ವವಿಳಂಬಿತಂ ॥ ಜಯಜಯಾಪಘನೌ (ಘ) ವಿಭಾವಸೋ ।
ಜಯಜಯೋದ್ಯತಖರ್ವ ವಪುರ್ವಸೋ ॥
ಜಯಜಯಾಶ್ರಿತವಾಂಛಿತ ಕೃದ್ವಸೋ ।
ಜಯಜಯಾಮಿತ ಸೌಖ್ಯ ಜನಾವ ಮಾಂ ॥ (೧)

ಜಯಜಯಾಖಿಳಲೋಕ ಶಿಖಾಮಣೇ ।
ಜಯಜಯಾಗಿತ ಚಿಂತಿತ ಕೃನ್ಮಣೇ ॥
ಜಯಜಯಾತ್ಮ ಕುಲಾಬ್ಜ ನಭೋಮಣೇ ।
ಜಯಜಯೇಶ ಮಮಾಂಶು ವಿಧೇಶಹಿಂ ॥ (೨)

ಜಯಜಯಾಂಗ ಭವಾವನಿಭೃತ್ಪವೇ ।
ಜಯಜಯೋದ್ಧತಮೋಹ ತಮೋರವೇ ॥
ಜಯಜಯಾನುಪಮಾನ ಮಹಾಕವೇ ।
ಜಯಜಯಾಭವ ಮೇ ಭವವಾಕ್ಷಿಪೇಃ ॥ (೩)

ಜಯಜಯಾಮಳಬೋಧ ಪಯೋನಿಧೇ ।
ಜಯಜಯೋತ್ಸವಕೃನ್ನಿಜಸನ್ನಿಧೇ ॥
ಜಯಜಯಾನತವಿಶ್ವ ತಪೋನಿಧೇ ।
ಜಯಜಯೇನಕುರುಷ್ವ ಮದೀಪ್ಸಿತಂ ॥ (೪)

ಜಯಜಯಾಮೃತಮಾಕೃತ ಸಂಗತೇ ।
ಜಯಜಯಾರ್ಜಿತ ಸದ್ಗುಣತೆಸಂಹತೇ ॥
ಜಯಜಯೋಜ್ಜ್ವಳಕೀರ್ತಿ ರಮಾಪತೇ ।
ಜಯಜಯೋದ್ಧರ ಮಾಂ ಜಿನ ಸಂಸೃತೇಃ ॥ (೫)

ವ॥ ಎಂದನೇಕ ಪವಿತ್ರಸ್ತೋತ್ರಂಗಳಿಂ ಸ್ತುತಿಯಿಸಿ ಮಘವನಘಹರನನುರದೊಳುರುಮುದದಿನಮರ್ಚಿ ಬಿಚ್ಚತಂ ನಲಿವ ನಿಳಿಂಪನಿಕರಮಂ ಮರಲ್ದಿ ಮೇರುವಿಂ ಮೇರೂಪಮಮಾದ್ಯೈರಾವಣ ವಾರಣಾಧಿಪತಿಯ ಚಾರುತರಸ್ಕಂಧದೇಶಕ್ಕೆ ಬಂದು ದಕ್ಷಿಣಾಭಿಮುಖನಾಗಿ ಮುನ್ನಿನಂತೆ ಸನ್ಮಾರ್ಗಪ್ರಭಾವಕಂ ಸನ್ಮಾರ್ಗಂಬಿಡಿದು ನಡೆವಾಗಳ್—

ಕಂ॥ ಬಹುಳತರ ಶಂಖಘಂಟಾ ।
ಕಹಳಾಢಕ್ಕಾಮೃದಂಗ ದುಂದುಭಿರವಮುಂ ॥
ಬಹುಜಯಜಯರವಮುಂ ದಿ ।
ಕ್ಕುಹರಮನಾವರಿಸಿದತ್ತು ಸವಿಯತ್ತಳಮುಂ ॥ (೪೮)

ವ॥ ಅಂತು ಸುರಸವೃತ್ತಿಯಿಂ ಸುರಸಮಿತಿವೆರಸು ಸುರರಾಜಂ ಸುರಸರಣಿಯೊಳ್ ನಡೆದು, ಧರಣಿತಳಕ್ಕವತರಿಸಿ, ಭುವನತ್ರಯಗುರುವಿನ ಬರವಿನೊಸಗೆಯೊಳ್ ನಿಸದ ಮೆನಿಪ ಪಸದನಂಗೊಂಡು ಸಕಳವಸುಮತೀವಳಯವಿಳಾಸಿನೀಕನತ್ಕನಕಕುಂಡಳಮೆನಿಸಿ ಮನಸಿಶಯನ ಜಯನ ಮಂದಿರ ಸೌಂದರ್ಯಮನೊಳಕೊಂಡ ಕುಂಡಪುರಮಂ ಪರಮ ಪುರುಷಪುರಸ್ಸರಂ ಪುರಂದರಂ ಪುರುತರಪ್ರಮೋದದಿಂ ಪೊಕ್ಕು ಸುರವರೂಥಿನೀ ಸನಾಥಂ ಮಾಡಿ ನಡೆವಾಗಳ್—

ಚಂ॥ ಸುರುಚಿರ ಪಾರಿಜಾತ ಕುಸುಮಸ್ತಬಕಂಗಳನುಜ್ವಳಾಕ್ಷತೋ ।
ತ್ಕರ ಹರಿಚಂದನದ್ರವಯುತಂಗಳನಂಜುಳಿಯಿಂದೆ ತಾಳ್ದಿ ಬಂ ॥
ದುರುತರ ಭಕ್ತಿಯಿಂ ತ್ರಿಭುವನಪ್ರಭುಗಿತ್ತು ಸದರ್ಘ್ಯಮಂ ನಮ ।
ಸ್ಕರಿಸುತುಮಿರ್ದುದುತ್ಪುಳಕ ಬಾಷ್ಪಚಯಂ ವರಪೌರಸಂಚಯಂ ॥ (೪೯)

ಕಂ॥ ಲಲನಾಜನಮನಿತುಂ ನಿಜ ।
ವಿಲೋಳ ಲೋಚನಮರೀಚಿನಿಚಯದೆ ರತ್ನಾ ॥
ವಲಿ ದೀಪಕಳಾಪದೆ ಮುಂ ।
ಗಲನಿಳಯನನಂದು ನಿವಳಿಸಿತ್ತತಿಮುದದಿಂ ॥ (೫೦)

ವ॥ ಅಂತು ಪೌರಾನುರಾಗಸಾಗರಂ ಕ್ಷೋಭಿಸುತ್ತುಮಿರೆ ಮಹಾವಿಭೂತಿಯಿಂ ಪೋಗಿ ಭೂತಳೇಶ್ವರನಿಕೇತನಮನುತ್ಕೇತನಮನೊಳಪೊಕ್ಕು ಕರಿವರಾಗ್ರದಿಂ ಧರಾ ತಳಕ್ಕವತರಿಸಿ ಮುನ್ನಮೆ ತನ್ನ ಬೆಸದಿಂ ಸುರಶಿಲ್ಪಿ ಕಲ್ಪಿಸೆ ಅನಲ್ಪಶೋಭಾಸ್ಥಾನ ಮಾದಾಸ್ಥಾನಮಹಾಮಂಡಪದ ಮಧ್ಯರಂಗೋತ್ತುಂಗ ನಾನಾನೂನ ನೂತ್ನರತ್ನ ರಚಿತ ರಂಜಿತ ಕುಂಜರಾರಿವಿಷ್ಟರದೊಳಾವಿಬುಧಜನಕಳ್ಪವಿಷ್ಟರಂ ತ್ರಿವಿಷ್ಟಪಸದ್ವಿಷ್ಟರಂ ತ್ರಿವಿಷ್ಟಪಸದೀಶ್ವರನನಗಣ್ಯಪುಣ್ಯನನಸದೃಶಲಾವಣ್ಯನನಸಮುಗುಣ ವರೇಣ್ಯನನಶೇಷ ಲೋಕಶರಣ್ಯನನಟ್ಟಿಂ ಬಿಜಯಂಗೆಯ್ಸುವುದುಂ, ಆ ಪ್ರಸ್ತಾವದೊಳ್—

ಕಂ॥ ಮಾಯಾನಿದ್ರಾಭರಮುಂ ।
ಮಾಯಾಶಿಶುವುಂ ಕುಮಾರ್ಗಿಗಳ ತತ್ವದವೋಲ್ ॥
ಮಾಯುಮುವಾಗೆ ಜಿನೇಶನ ।
ತಾಯುಂ ತಂದೆಯುಮತೀವ ಸಂಭ್ರಮದಿಂದಂ ॥ (೫೧)

ಪರಿತಂದು ಸಕಳ ಜಗದೀ ।
ಶ್ವರನಂ ನಿಜತನಯವರನನತ್ಯಾದರದಿಂ ॥
ಪರಿವೀಕ್ಷಿಸಿ ಪರಮಾನಂ ।
ದರಸಾರ್ಣವದೊಳಗೆ ನೀಡುಮೋಲಾಡಲೊಡಂ ॥ (೫೨)

ಆಜಿನಪನ ಜನನುತ ಜನ ।
ನೀಜನಕರನಿರಿಸಿ ರತ್ನಪೀಠದೊಳಿಂದ್ರಂ ॥
ಪೂಜಿಸಿದಂ ದಿವ್ಯಾಂಬರ ।
ರಾಜಿತ ಭೂಷಾನುಲೇಪ ಮಾಲ್ಯಾದಿಗಳಿಂ ॥ (೫೩)

ವ॥ ಅನಂತರಂ—

ಮ॥ ಗುರುವಾದಂ ಭುವನತ್ರಯಕ್ಕೆ ಮಿಗೆ ಪೆಂಪಂ ತಾಳ್ದಿದೀದೇವನೀ ।
ಗುರುವಿಂಗಂ ಗುರುವಾದಿರಿಂತು ಪರಮಾಗಣ್ಯಕ್ಕೆ ಪುಣ್ಯಕ್ಕೆ ನೋಂ ।
ತರದಾರೀ ಭುವನಾಂತರಾಳದೊಳೆ ನಿಮ್ಮಂತೆಂದು ದೇವೇಂದ್ರನಾ ।
ದರದಿಂದಂ ಪೊಗೞ್ದಂ ಜಿನೇಂದ್ರನ ಲಸನ್ಮಾತಾಪಿತೃದ್ವಂದ್ವಮಂ ॥ (೫೪)

ಉ॥ ವಂಚಿಸಿ ನಿಮ್ಮನಿಂದು ಭವದೀಯ ತನೂಜನನಸ್ಮದೀಶನಂ ।
ಕಾಂಚನಭೂದರಕ್ಕೆ ಪದೆದುಯ್ದು ಸಮಸ್ತಸುರಾನ್ವಿತಂ ಲಸ ॥
ತ್ಪಂಚಮ ವಾರಿರಾಶಿ ಜಳದಿಂದಭಿಷೇಚಿಸಿ ಬಂದೆನೆಂದು ಶ ।
ಕ್ರಂ ಚತುರೋಕ್ತಿಯಿಂದವರ್ಗೆ ಪೇೞ್ದು ಸಮುತ್ಸವಮಂ ನಿಮಿರ್ಚಿದಂ ॥ (೫೫)

ವ॥ ಆಗಳ್ —

ಕಂ॥ ದ್ಯುಚರಖಚರಾವನೀಚರ ।
ನಿಚಯಂ ನಿಚಿತಪ್ರಮೋದಭರದಿಂ ಪುರದೊಳ್ ॥
ಸುಚತುರ ಗೀತಾತೋದ್ಯ ।
ಪ್ರಚುರಂ ನರ್ತಿಸುತುಮಿರ್ದುದತಿಕೌತುಕದಿಂ ॥ (೫೬)

ಉ॥ ಗೊಂದಳದಿಂದೆ ನರ್ತಿಸುವಶೇಷಜನಂಗಳ ಭಂಗಿಲೀಲೆಯಿಂ ।
ಮುಂದಿಡೆ ಭಕ್ತಿಬೋಧಿತಮನಂ ಜಿನರಾಜನ ಮುಂದೆ ತಾನುಮಾ ॥
ನಂದದ ನರ್ತನಕ್ಕೆ ಬಗೆದಂದು ಪುರಂದರನಂದು ವಿಕ್ರಿಯಾ ।
ನಂದಿತ ಶಕ್ತಿಸಂಘಟಿತ ನಾಟಕಪೇಟಕಮಂ ನಿಮಿರ್ಚಿದಂ ॥ (೫೭)

ವ॥ ಅಂತಾ ಕಳಾಕಾಂತಂ ಸರಸನರ್ತನವೈಚಿತ್ರ್ಯವಿಶಾರದಂ ನೀರದರಥಂ ಪ್ರಥಿತ ರಸಭಾವಾಭಿನಯಾದ್ಯೇಕಾದಶ ನಾಟ್ಯಂಗಳೊಳ್ ನೆಱೆದು, ನಾಟಕಾದಿ ದಶರೂಪಕಂಗಳೊಳ್ ಬೆಡಂಗುವಡೆದ ಸಮವಕಾರರೂಪಕಮನುಜ್ಜುಗಿಸಿ ತತ್ಸಾಮಗ್ರೀಸಮಗ್ರನುಂ, ತತ್ಸಮಯಸಮುಚಿತ ನೇಪಥ್ಯನುಂ, ಸಮುಪಚರಿತಾಮಂದ ನಾಂದೀಪ್ರಸ್ತಾವ ಚಾರುಭಾರತೀಕಾಚಾರನುಂ, ಯವನಿಕಾಪಸರಣಸಂಗತರಂಗಪ್ರವೇಶನುಂ, ರಿಜ್ವಾಗತ ಸ್ಥಾನದತ್ತ ಪ್ರಸೂನಾಂಜಳಿನಿಕ್ಷೇಪನುಂ, ಮಂಗಳಪದಪಠನ ಪ್ರಾಪ್ತಪ್ರಸ್ತಾವನನುಂ, ವಿಹಿತಪೂರ್ವರಂಗಪ್ರಸಂಗನುಂ, ಸಮಾಸಾದಿತ ಭಾರತೀವೃತ್ತಕನುಂ, ಯುಕ್ತಗೀತಾತೋದ್ಯಲಲಿತನೃತ್ಯನಿಯತನುಂ, ಆಂಗಿಕವಾಚಿಕಾಹಾರ್ಯಕಸಾತ್ವಿಕಾಭಿಮುಖ್ಯಚತುರಭಿನಯಚತುರನುಂ, ವಿಭಾವಾನುಭಾವ ಸಾತ್ವಿಕಭಾವ ವ್ಯಭಿಚಾರಿ ಭಾವಾಭಿನಯಪರಿಪುಷ್ಟ ರಸವಿಶಿಷ್ಟ ಸ್ಥಾಯಿಭಾವನುಂ, ಮತ್ತಂ ಗೃಹೀತಾರಭಟೀವೃತ್ತಿವಿಸ್ತಾರಿತ ತಾಂಡವಾಡಂಬರನುಂ, ನಿಜಾನುಗತ ಸಮುತ್ಸವಾರಬ್ಧ ನಾನಾಮರೀಚಿವಿಚಿತ್ರನರ್ತನನುಮಾಗಿ—

ಕಂ॥ ಸಕಳಜನನಯನಹೃದಯ।
ಪ್ರಕರಮನೋರಂತೆ ತಣಿಪಿದಂ ಜಿನಸಭೆಯೊಳ್॥
ಸುಕೃತನಿದಾನಂ ಸಂಗೀ।
ತಕ ವಿಕಸನದಿಂದಮಿಂದ್ರನುದಿತಾನಂದಂ॥ (೫೮)

ನಿರುಪಮನಾಟ್ಯರಸಾಮೃತ।
ವರವರ್ಷಂ ಹರ್ಷರಸತರಂಗಿಣಿಯಂ ಭೋ॥
ರ್ಗರೆಯೆ ಪರಿಯಿಸಿದುದನಿಮಿಷ।
ಪರಿವೃಢ ದೃಢಭಕ್ತಿಭಾರವಾರಿದ ಜನಿತಂ॥ (೫೯)

ವ॥ ಅಂತು ಸಮಾಪ್ತ ಸಂಗೀತಕಸಪರ್ಯನಾ ಶಚೀಕಾಂತನನಂತರಂ ತ್ರಿಭುವನ ಸ್ವಾಮಿ ಸಮುದ್ಧಾಮ ನಾಮಕರಣೋತ್ಸವೋದ್ಯುಕ್ತಚಿತ್ತನಾಗಿ—

ಚಂ॥ ಪುರುಪರಮೇಶ್ವರಂ ಭರತಚಕ್ರಿಗೆ ಭಾವಿಜಿನೇಂದ್ರಸಂಖ್ಯೆಯಂ।
ಪರಿವಿಡಿಯಿಂದಮಂತವರ ನಾಮಮುಮಂ ಸಕಳಜ್ಞನೆಂದು ವಿ॥
ಸ್ತರದೊಳೆ ಪೇೞ್ದನಾಪೆಸರ್ಗಳುಂ ಗತತೀರ್ಥಕರ್ಗಾದುವೀದಯಾ।
ಶರಧಿಗೆ ವೀರನೆಂಬ ಚರಮಾಖ್ಯೆಯೆ ಮುಖ್ಯವಿಧೇಯಮಲ್ಲದೇ॥ (೬೦)

ವ॥ ಎಂದು ಮುನ್ನಂ ತನ್ನ ಮನದೊಳೆ ಬಗೆದು ಬೞಿಯುಮದನೆ ಸಿದ್ಧಾರ್ಥ ಪಾರ್ಥಿವಪ್ರಮುಖ ನಿಖಿಳಸಭೆಗಭಿವರ್ಣಿಸಿ ಚತುರಮರಾರ್ಚಿತ ಚತುರ್ವಿಂಶತಿತೀರ್ಥಕರ ವರ್ಯಂಗೆ ಪರ್ಯಾಯಪ್ರಾಪ್ತಮುಂ, ಭುವನತ್ರಯವ್ಯಾಪ್ತಮುಂ, ನಿಶ್ಶೇಷದೋಷ ನಿವಾರಣಮುಂ, ನಿಖಿಳಮಂಗಳಾಕರಣಮುಂ, ವಿದಗ್ಧಜನಶ್ರವ್ಯಮುಂ, ಭವ್ಯಜನ ಸೇವ್ಯಮುಂ ಅಪ್ಪ ವೀರನೆಂಬ ಚಾರುನಾಮಮಂ ಪ್ರಭಾವಿಸಿ ತಜ್ಜನಂಗೆ ಮಜ್ಜನಮುಂಡ ನಾದಿ ಬಾಳೋಚಿತೋಪಚಾರವ್ಯಾಪಾರಮನನಾರತಮತೀವಯತ್ನದಿಂ ವಿಧಿಯಿಸ ಲೆಂದು ವಿದಗ್ಧವಿಬುಧವನಿತಾಜನಮನನಿಮಿಷರಾಜಂ ನಿಯೋಜಿಸಿ ಸಕಳಾಮರೇಂದ್ರ ಸಮಿತಿಸಮನ್ವಿತಂ ಮುಹುರ್ಮುಹುಃ ಪ್ರಣಾಮಾಭಿರಾಮಂ ಶ್ರೀ ವೀರಚಾರುಚರಣಾರ ವಿಂದದ್ವಂದ್ವಮುಮನಱ್ಕಱಿಂ ಬೀೞ್ಕೊಂಡು ಮೆಲ್ಲನಲ್ಲಿಂ ತಳರ್ದು ನಿರ್ವರ್ತಿತ ದ್ವಿತೀಯ ಕಲ್ಯಾಣಮಹೋತ್ಸವಂ ನಿಜನಿವಾಸಕ್ಕೆ ಪೋದನನ್ನೆಗಮಿತ್ತಲ್—

ಚಂ॥ ನಮಗೆ ಜಿನೇಂದ್ರನಾನತಶತೇಂದ್ರನಗಾಧ ಸುಬೋಧಸಂಪದಂ।
ಸಮವಸೃತೀಶನಾದನೆಸೆವಾತ್ಮಜನೀವರವೀರನಂತಱಿಂ॥
ದಮೆ ಸಫಲಂ ವಲಂ ಬಗೆಯೆ ನಮ್ಮಯ ಜನ್ಮಮೆನುತ್ತುಮಾಯಶೋ।
ರಮಣನ ತಾತಮಾತೃಯುಗಳಂ ತಳೆದತ್ತುಮನಃಪ್ರಮೋದಮಂ॥ (೬೧)

ಕಂ॥ ಪರಿಜನ ಪುರಜನ ಗುರುಜನ ।
ಸುರಜನ ಬಂಧುಜನ ಬುಧಜನಂಗಳ ಹರ್ಷಂ ॥
ಬೆರಸು ಸಿರಿವೆರಸು ಧರ್ಮಂ ।
ಬೆರಸು ಜಸಂಬೆರಸು ಬಾಲಕಂ ವರ್ಧಿಸಿದಂ ॥ (೬೨)

ವ॥ ಅಂತು ವರ್ಧಿಸುವ ಜಗತ್ಪರಾರ್ಥ್ಯನಂ ಸಿದ್ಧಾರ್ಥಿ ಪಾರ್ಥಿವೋತ್ತಮಂ ಕಂಡು ಮನದೆಗೊಂಡು ನಿಖಿಳೋದ್ಧವವರ್ಧನಕಾರಕಂಗೆ ನಿಜದಾರಕಂಗೆ ನಿರತಿಶಯಪ್ರಭಾವ ಜನ್ಮಭೂಮಿಗೆ ವೀರಸ್ವಾಮಿಗೆ ವರ್ಧಮಾನನೆಂಬ ಸದರ್ಥಾಧೀನಮಂ ದ್ವಿತೀಯಾಭಿಧಾನಮಂ ಮಹಾವಿಭವದಿಂ ನಿಖಿಳಚೈತ್ಯಮಂದಿರ ಮಹಾಪೂಜಾಪುರಸ್ಸರಂ ನಿಜಭಾಂಧವ ಪ್ರಧಾನಜನ ಸನ್ನಿಧಾನದೊಳ್ ಸಂಕೀರ್ತನಂಗೆಯ್ಯೆ ನಿಖಿಳಮಂಗಳನಿಳಯಂ ಬಳೆಯುತ್ತುಮಿರ್ದು—

ತ್ರೋಟಕ॥ ಅವರೋಧವಧೂಜನಪಾಣಿಪಯೋ ।
ಜವನಾಂತವಿಹಾರಿ ಮರಾಳವತಂ ॥
ಸವಿಳಾಸವತೀನಯನದ್ವಯ ಕೈ ।
ರವಶೀತರು ರಂಜಿಸಿದಂ ಜಿನಪಂ ॥ (೬೩)

ವ॥ ಮತ್ತಮಾಮಹಾಮಹಿಮಂ ಸಹಜಸಮುತ್ಪನ್ನ ಸನ್ನುತಮತಿ ಶ್ರುತಾವಧಿಬೋಧದೀಧಿತಿ ದಿವಾಕರಂ ದಿವಾಕರಸಮಪ್ರಭಂ ಗುರುನಿರಪೇಕ್ಷನಕ್ಷರಾದಿ ಸಕಳ ವಿದ್ಯಾವಿಶಾರದಂ, ಶಾರದಶಶಾಂಕವಳಯದಂತೆ ಕುವಳಯಾನಂದಮನೊದವಿಸುತ್ತುಮಿರ್ದನಿರ್ಪುದುಮೊರ್ಮೆ—

ಕಂ॥ ನಿಯತಾಗಮಾರ್ಥದೊಳ್ ಸಂ ।
ಶಯಮೊಂದೆಡೆಯಲ್ಲಿ ತೋಱಿ ಸಂಜಯವಿಜಯಾ ॥
ಹ್ವಯ ಚಾರಣಯುಗಳಂ ನಿ ।
ರ್ಣಯಾರ್ಥಮೆಯ್ತಂದು ತೀರ್ಥಕರದಾರಕನಂ ॥ (೬೪)
ಬಲವರೆ ತತ್ಸನ್ನಿಧಿಯೊಳ್ ।
ತೊಲಗಿದುದು ಪದಾರ್ಥಸಂಶಯಂ ಪರ್ವಿದ ಕ ॥
ತ್ತಲೆ ದಿನಕರಸನ್ನಿಧಿಯೊಳ್ ।
ತೊಲಗುವವೊಲದೇಂ ಸದರ್ಥನೋ ತೀರ್ಥಕರಂ ॥ (೬೫)

ವ॥ ಅಂತು ಸಂಶಯಂ ನಿಜಾಶಯದಿನಾಗಳೆ ಪೋಗಿ ಯೋಗೀಶ್ವರಯುಗಳಂ ಅಗಣಿತ ಪ್ರಮೋದದಿಂ ಸನ್ಮತಿಸಮುತ್ಪತ್ತಿಗೆ ನಿಮಿತ್ತಮಾದ ವೀರವರ್ಧಮಾನಾಭಿಧಾನನಪ್ಪ ಚಿನ್ಮಯ ಸನ್ಮೂರ್ತಿಗೆ "ಸನ್ಮತಿ'' ಎಂಬ ತೃತೀಯ ನಾಮಧೇಯಮನಮೇಯೋತ್ಸವದಿನಿಟ್ಟು ವಿಶಿಷ್ಟಗುಣಸಂಪನ್ನನಂ ತನ್ನಾಮಲಾಂಛಿತ ಸ್ತುತಿಶತಂಗಳಿಂ ಸ್ತುತಿಯಿಸಿ ಬೀಱಿಕ್ಕೊಂಡು ಪೋಪುದುಮಲ್ಲದೆಯುಂ ಮತ್ತಮೊರ್ಮೆ—

ಕಂ॥ ಸುರರಾಜಂ ತನ್ನಯ ಭಾ।
ಸುರಸಭೆಯೊಳ್ ವೀರಜಿನಕುಮಾರಕನಂತಾರ್ ॥
ಧರೆಯೊಳ್ ನಿರ್ಭಯರವನೀ।
ಶ್ವರನಂದನನೆಂದು ಕೀರ್ತಿಸುತ್ತಿರೆ ಭರದಿಂ ॥ (೬೬)

ಸಂಗಮಕನೆಂಬ ದೇವಂ।
ತಾಂ ಗಡ ಕೇಳುತ್ತುಮಿರ್ದು ಭಯರಾಹಿತ್ಯಂ ॥
ಸಂಗಳಿಕುಮೆ ಬಾಳಕಗಿದ।
ಸಂಗತಮಾದೊಡಮಿದಂ ಪರೀಕ್ಷಿಸಲಕ್ಕುಂ ॥ (೬೭)

ವ॥ ಎಂದು ಬಗೆದು ಬೇಗದಿನಾದೇವಂ ದಿವದಿನವನಿಗವತರಿಸಿ ಕುಂಡಪುರದ ಬಹಿರುದ್ಯಾನಸ್ಥಾನಮಂ ಪೊಕ್ಕು ತದಂತರಾಳ ಮಹಾವಿಶಾಳ ವಿಟವಿಟಪಿಯ ಸಮುತ್ತುಂಗಾಯತ ಶಾಖಾನೀಕದೊಳ್ ಕಾಕಪಕ್ಷಧರ ಧರಾಧೀಶ್ವರಕುಮಾರಕ ಸಮೂಹಮುಂ ಸಮವಯಸ್ಕ ಸುರದಾರಕ ಸಂದೋಹಮುಂ ಬೆರಸೀಪ್ರಸ್ತಾವಂ ತಪ್ಪಿದೊಡೆ ಮುಂದಿನ್ನಂದುಮಿಾ ಪರಮಪುರುಷನಂ ಪೊರ್ದಲಾಱೆನೆಂದು ಬಾಳಕೇಳೀಲೋಳತೆಲಲನೆಯವಸರಂಬಡೆದು ತನ್ಮನಂಬಿಡಿದಿರ್ದಳೆಂಬಿನಮುಳುಂಬಮಾದ ವಿನೋದರಸದ ಬಸದಿಂ ಮರಗೊಂಬನಾಡುತ್ತಿರ್ದ ವೀರಜಿನಕುಮಾರನಂ ದೂರದೊಳೆ ಭೋಂಕೆನೆ ಕಂಡು—

ಮ॥ ಪೆಡೆಗಳ್ ಸಾಸಿರಮಕ್ಷಿಯುಂ ರಸನೆಯುಂ ಪ್ರತ್ಯೇಕಮಿರ್ಭಾಸಿರಂ।
ಪೆಡೆಗಳ್ಗಂ ಮಣಿ ಸಾಸಿರಂ ನೆಗೆವ ಧೂಮಜ್ವಾಲೆಗಳ್ ಬಿಟ್ಟಪೆ ॥
ಗಿಡಿಗಳ್ ಪೊಣ್ಮುವ ಫೂತ್ಕ್ರಿಯಾರಭಸಮಾದಂ ಭೀತಿಯಂ ಮಾಡೆ ನಿ।
ಟ್ಟೊಡಲಂ ನೆಟ್ಟನೆ ನಾಗರಾಜನಿಳೆಯಿಂದೆಟ್ಟಿಂದಮಂ ತಾಳ್ದಿದಂ ॥ (೬೮)

ವ॥ ಅಂತು ವಿಕ್ರಿಯಾವಿಡಂಬನವಿಧೀಯಮಾನ ಪೀನಭೋಗಮುಂ ನಭೋಗಮುಂ ಬೇಗದಿಂ ಪಡೆದು ತಡೆಯದೆ ವಿನಯ ಜನವತ್ಸಳನಿರ್ದ ತತ್ಸಮುನ್ನತ ನ್ಯಗ್ರೋಧಮಹೀರುಹಮಂ ಮಂಥದಂಡದಾಮದಂದದಿಂ ಸುತ್ತಿ ಸುತ್ತಲುಂ ಫಣಾಮಂಡಳಮಂ ಪಸರಿಸಿ ಮಸಗಿ ಮೊರೆದು ದೆಸೆಗಳಂ ಕಿವುಡುವಡಿಸುತ್ತುಂ ಶಾಖಾಶಿಖರಶೋಭಿತ ಶಿಶುಗಳಂ ನಟ್ಟದಿಟ್ಟಿಯಿನವ್ವಳಿಸಿ ನೋಡುತ್ತುಮಿಂತು ರೌದ್ರವೀರಾದ್ಭುತರಸಂಗಳೆ ಮೂರ್ತಿವೆತ್ತುವೆನಿಸಿ ಸುಸಂಗಮಂ ಮಹಾವಿಷಮವಿಷಧರತಾಸಂಗಮನಾಗಿ ಶಿಶುಕ್ರೀಡಾವಿಚ್ಛೇದಕಾರಿಯಾಗೆ—

ಕಂ॥ ಸಹಚರ ಬಾಳಕಜಾಳಕ।
ಮಹೀನನಾಗಿರ್ದಹೀನನಂ ಕಂಡು ಭಯಾ ॥
ವಹಹೃದಯಂ ದೀನಮುಖಂ।
ಬಹುರೋದನಮಾದುದಾತ್ತಕಂಪಸ್ವೇದಂ ॥ (೬೯)

ಉ॥ ಬಂದುದು ಮಿಟ್ಟು ಬಾರಿಸುವರಾರಿದನಕ್ಕಟ ಕೆಟ್ಟೆವೆಂದು ಕ।
ಣ್ಣಿಂದುಗುತರ್ಪ ಬಾಷ್ಪಜಲಪೂರದೆ ಮೆಯ್ವೆಡೆ ನಾಂದು ಕೊಂಬುಗೊಂ॥
ಬಿಂದವನೀತಳಕ್ಕೆ ಮಿಗೆ ತಲ್ಲಣದಿಂದಮೆ ಪಾಯ್ದು ಪೋದುದಾ।
ಮಂದರಧೈರ್ಯನೊರ್ವನೆ ಕುಜಾಗ್ರದೊಳಿರ್ದನಕಂಪನಂ ಜಿನಂ॥ (೭೦)

ವ॥ ಅಂತು ದರಸ್ಮೇರ ಮುಖಾರವಿಂದನಾವೀರಂ ಧೀರೋದಾತ್ತನುತ್ತುಂಗ ನಿಶ್ರೇಣಿಯಂ ಮೆಟ್ಟಿ ಮಹಾಹರ್ಮ್ಯಶಿಖರದಿನಿಳಾತಳಕ್ಕೆ ಬರ್ಪಂತೆ ದರ್ಪಿಷ್ಠ ಕಲ್ಪಜಕಲ್ಪಿತ ಸರ್ಪರಾಜರಾಜಫಣಾನೀಕಾನೇಕ ಶೋಣಮಾಣಿಕ್ಯ ಮಯೂಖ ಮಂಜರಿಗಳೊಳ್ ನಿಜ ವಿರಾಜಮಾನ ಮೃದುಪದ ಪದ್ಮರಾಗ ರಶ್ಮಿಗಳ್ಬೆರಸಿ ದೆಸೆಗಳೊಳೆಳೆವಿಸಿಲ ಬಳಗದಂತೆ ಪಸರಿಸುವಿನಮಾ ಭಯಂಕರನಸುರನ ಶಿರಂಗಳಂ ತರದೆ ಮೆಟ್ಟಿ ಮೆಲ್ಲನೆ ಮಹೀತಳಕ್ಕೆ ಮಹಾಮಹಿಮನವತರಿಸೆ ಸುಸಂಗಮಂ ಪರಮಾಶ್ಚರ್ಯಪ್ರಮೋದರಸಸಂಗಮಾಂತರಂಗನಾಗಿ—

ಕಂ॥ ತಳೆದು ನಿಜಮೂರ್ತಿಯಂ ತ।
ಚ್ಚಳನಂಗಳನಮಳ ವಸ್ತುಗಳಿಂ ಪೂಜಿಸಿ ನಿ॥
ಶ್ಚಳನಂ ಪೊಗಟ್ದಿಂ ವಸುಧಾ।
ವಳಯದೊಳಿಂತಪ್ಪ ವೀರರಾರೆಂದು ಸುರಂ॥ (೭೧)

ವ॥ ಅಂತು ಪೊಗಟ್ದು ನಿಜಾಗಮನವೃತ್ತಾಂತಮಂ ಮಹೀಕಾಂತಪ್ರಮುಖ ನಿಖಿಳ ಜನಕ್ಕೆ ಜಲಕ್ಕನಱಿಯೆ ಪೇೞ್ದು ತಮ್ಮಂ ಮಿಗುವ ವೀರರಾರುಮಿಲ್ಲೆನಿಪ ವೀರ ವಲ್ಲಭಂಗೆ ಮಹಾವೀರನೆಂದು ಚತುರ್ಥಾಭಿಧಾನಮನನ್ವರ್ಥಮನಿಟ್ಟು ಪೊಡೆವಟ್ಟು ಪೋದನಿಂತು—

ಮ॥ ಸ್ರ॥ ಸುರರಾಜಂ ವೀರನೆಂದಾ ಜನಪತಿ ಜನಕಂ ವರ್ಧಮಾನೇಶನೆಂದಾ।
ದರದಿಂದಂ ಚಾರಣರ್ ಸನ್ಮತಿ ಜನಪತಿಯೆಂದಾವಗಂ ವಿಕ್ರಿಯಾಡಂ॥
ಬರದಿಂದಂ ಸರ್ಪರಾಜಾಕೃತಿವಡೆದ ದಿವೌಕಂ ಮಹಾವೀರನೆಂದಾ॥
ಪರಮೇಶಂಗಿತ್ತ ನಾಲ್ಕಾಖ್ಯೆಗಳೆಸೆವುವಶೇಷಾರ್ಥಿತಾರ್ಥಪ್ರದಂಗಳ್॥ (೭೨)

ವ॥ ಮತ್ತಂ—

ಕಂ॥ ವಸುಧಾಜನಮನವರತಂ।
ಸ್ವಸಮೀಹಿತ ಸಕಲ ಹಿತಮನೆಸಗುವ ಜಿನನೊಳ್॥
ವಸುಧೈಕಬಾಂಧವಾಖ್ಯೆಯ।
ನಸವೋತ್ಸವದಿಂದೆ ಕೀರ್ತಿಸಿತ್ತಭಿನುತಮಂ॥ (೭೩)

ಕಳಹಂಸಗಮನಮುಂ ಕರಿ।
ಕಳಭಾಲಸಗಮನಮುಂ ತ್ರಿಲೋಕಶಿಖರ॥
ಸ್ಥಳಗಮನ ಸಮುದ್ಯುಕ್ತನ।
ವಿಳಸಿತ ಗಮನಕ್ಕೆ ಸಮನದೆಂತಾದಪುದೋ॥ (೭೪)

ಕಂ॥ ನಗೆ ತನಗೆ ಮುಂದೆ ಮೋಹಾ ।
ರಿಗರ್ವಮಂ ಮುಱಿದ ಕಾಲದೊಳ್ ಪರಮನ ಪೊ ॥
ರ್ದುಗೆ ಘಟಿಯಿಸದೀಗಳೆ ಲೀ ।
ಲೆಗೆ ಸಂದಪೆನೆಂಬ ತೆಱದೆ ಮೆಱೆದುದು ಜಿನನೊಳ್ ॥ (೭೫)

ಮೃದುಮಧುರ ಗಭೀರ ಧ್ವಾ ।
ನದ ನುಡಿಗಳ್ ಕೂಸುತನದೊಳಂ ಕೇಳ್ವಜನ ॥
ಕ್ಕೊದವಿಸಿದುವು ಪರಮಾನಂ ।
ದದ ಭಾರಮನೇನುದಾರನೋ ವೀರಜಿನಂ ॥ (೭೬)

ವಾಸವನೆ ತನಗೆ ನಚ್ಚಿನ ।
ದಾಸಂ ವಾಸವನ ವನಿತೆ ತನಗನವರತಂ ॥
ದಾಸಿ ದಲೆನೆ ಮನುಜರದೇಂ ।
ಪಾಸಟಿಯೆ ಜಿನಾರ್ಭಕಂಗೆ ಸಕಳಾವನಿಯೊಳ್ ॥ (೭೭)

ಉ॥ ಆಭರಣಾನುಲೇಪ ವಸನ ಪ್ರಸವಾದಿಗಳಂ ನಿಳಿಂಪ ಲೋ ।
ಕಾಭಿನವಂಗಳಂ ಹರಿ ನಿರಂತರಮುತ್ಸವದಿಂದಮಟ್ಟುವಂ ॥
ಶೋಭಿಪ ತತ್ಪುರಂದರ ಪುರಂಧ್ರಿಯುಮಾತೆಱದಿಂದಮಟ್ಟುವಳ್ ।
ತ್ರೈಭುವನಾಧಿಪಂಗೆ ಸುರಲೋಕ ಸುವಸ್ತುವ ಭೋಗಮಾಗಳುಂ ॥ (೭೮)

ವ॥ ಅಂತಾಜಗದೀಶನ ಶೈಶವಂ ಸದುಪದೇಶದಂತೆ ಪರಮಹಿತಪ್ರಕಾಶಮಾಗೆ ತದತಿಕ್ರಮ ಸಮಯದೊಳ್—

ಕಂ॥ ದರಹಾಸಕೌಸುಮಂ ಬಂ ।
ಧುರ ರೋಚಿಃಪಲ್ಲವಂ ಲಸದ್ಭ್ರೂಲತಿಕಂ ॥
ವರಕರಶಾಖಂ ಸಫಲಂ ।
ಕರಮೆಸೆದುದು ಯೌವನವನಮವನತಜಗನಾ ॥ (೭೯)

ಭುವನನುತ ನಿತ್ಯ ನಿಸ್ವೇ ।
ದ ವೃತ್ತಿ ತನು ಸಕಳಮಳವಿಹೀನತೆ ಸುಪಯೋ ॥
ಧವಳರುಧಿರತ್ವಮಾದ್ಯ ।
ಪ್ರವಿಮಳ ಸಂಸ್ಥಾನಮಾದ್ಯವರಸಂಹನನಂ ॥ (೮೦)

ಅನುಪಮ ಸೌಂದರ್ಯಂ ಮ ।
ತ್ತನವಧಿ ಸೌಗಂಧ್ಯಮಸಮ ಸೌಲಕ್ಷಣ್ಯಂ ॥
ವಿನುತಪ್ರಿಯ ಹಿತವಚನತೆ ।
ಯನಂತ ಬಳಮೆಂದು ಪತ್ತು ಸಹಜಾತಿಶಯಂ ॥ (೮೧)

ಕಂ॥ ನಿಸದಂ ತನಗೆಸೆಗುಮರ ।
ತ್ನಿಸಪ್ತಕೋತ್ಸೇಧಮಮಳ ಕಾಂಚನವರ್ಣ ॥
ಪ್ರಸರಂ ದ್ವಾಸಪ್ತತಿವ ।
ರ್ಷಸಂಖ್ಯ ಸಜ್ಜೀವಿತಂ ಜರಾರಾಹಿತ್ಯಂ ॥ (೮೨)

ಉತ್ಸವ॥ ವಿವಿಧ ವಿಷವಿಷಾಣ ಕಾಷ್ಠ ಕಂಟಕಾನಳಾನಿಳ ।
ಪ್ರವಿತತಾಯುಧಾತಪಾತ ಶೀತಜಾತ ಬಾಧೆಯುಂ ॥
ಪವನ ಪಿತ್ತ ಪೀನಸಾದಿ ಸಂಭವಾಮಯಂಗಳುಂ ।
ಭುವನವಲ್ಲಭಾಂಗ ಸಂಗತಂಗಳಾಗದೊರ್ಮೆಯುಂ ॥ (೮೩)

ಕಂ॥ ಮದಮದಿರ್ದುದು ಕೋಪಂ ಕೊ ।
ಗ್ಗಿದುದಳಿಪೊಳಸೋರ್ದುದನ್ನೆಯಂ ಬನ್ನಂಬ ॥
ಟ್ಟುದು ಮಾಯೆ ಮಾಯುಮಾಯ್ತೀ ।
ನುದಾರಗುಣಗಣಗರಿಷ್ಠನೋ ವೀರಜಿನಂ ॥ (೮೪)

ಮ॥ ಸ್ರ॥ ಸುರಲೋಕಾನೇಕ ಭೋಗೋಚಿತ ಪರಿಚಿತ ವಸ್ತೂತ್ಕರಂ ದೇವದೇವೀ ।
ವರಗೀತಾತೋದ್ಯನೃತ್ಯಾಚರಣಮಮರ ನಾನಾಸಪರ್ಯಾವಿಧಾನಂ ॥
ಪರಿಭಾವಿಪ್ಪಂದಿವೆಲ್ಲಂ ಪರಮಗುರುಗೆ ಚೇತೋವಿಕಾರಂಗಳಂ ಬಿ ।
ತ್ತರಿಸಲ್ ತಾಮಾರ್ತುವಿಲ್ಲಂಬರಕೆ ಪರಿಕಿಪಂದುಂಟೆ ಪಂಕಪ್ರಲೇಪಂ ॥ (೮೫)

ವ॥ ಅಂತು ನಿರಂತರನಿಖಿಳಭುವನಪ್ರಶಂಸೆವೆತ್ತನಾಥವಂಶಲಲಾಮಂ ತ್ರಿಂಶದ್ವರ್ಷಮಿತ ಕುಮಾರಕಾಲಂ ತನಗೆ ಲೀಲೆಯಿಂ ಸಲ್ವುದುಂ ಒರ್ಮೆ ತನ್ಮಹಾವೀರಂ ಧರ್ಮನಿರ್ಮಿತ ಹರ್ಮ್ಯೋಪರಿಮಾಭಿರಾಮ ಭೂಮಿಕಾನಿಷಣ್ಣಂ ತನ್ನ ಮುಂದೆ ತಣ್ಣನೆ ತಣಿದು ಕುಳ್ಳಿರ್ದು ತಣ್ಣೆಲರಲಪದಿನಲುಗುವ ಕರ್ಣಪೂರಪಾರಿಜಾತಮಂಜರಿಗಳ ಮದಾಳಿಮಾಳಿಕೆಯ ರುತಿಯಿಂ ಸುತಿಯ ಪವಣನವಟೈಸಿ ಪಾಡಿ ನಿಜಾಂಕಮಾಲಾಮಸೃಣಮಾದ ಗೀತಾಮೃತಾಸಾರಪೂರಮಂ ಕಾಟ್ಸುರಂ ಬರಿಯಿಪ ಸುರಸವೇಷಭಾಷಾ ಸಮುದ್ದಾಮರಾಮಣೀಯಕಾಮರಕಾಮಿನೀಜನದ ಮನದಮಹೋತ್ಸವಲತೆಯ ವಿಸರ್ಪಣಕ್ಕಡರ್ಪಾಗಿ ರಾಗದಿಂ ತೀರ್ಥಕರ ಪರಮದೇವನಿರ್ಪುದುಮಾಪ್ರಸ್ತಾವದೊಳ್—

ಕಂ॥ ಅತುಳ ಪ್ರಮೋದ ಮದದಿಂ ।
ತೃತೀಯ ಕಲ್ಯಾಣಲಕ್ಷ್ಮಿ ಕಳಿಪಿದದೂತೀ ॥
ಸತಿಯೆನಿಸಿದ ವಿತತ ವಿರ ।
ಕ್ತತೆ ಜಿನನಂ ಭಜಿಯಿಸಿತ್ತು ವರ ಸನ್ಮತಿಯಂ ॥ (೮೬)

ವ॥ ಅಂತು ವಿನಯಾಭಿನಿಬೋಧಿತ ವಿಕಾಶವಿದಿತ ಸಮಸ್ತವಸ್ತು ವೈಚಿತ್ರ್ಯ ಪಾತ್ರಮಾದ ಪದದೊಳ್ ತೊಟ್ಟನೆ ಪುಟ್ಟಿ ಸಜ್ಜನಸ್ತವನ ಸೌಭಾಗ್ಯಯೋಗ್ಯಮಾದ

ವೈರಾಗ್ಯಭಾಗ್ಯವರ್ಧನದೊಳಾಬುಧಸ್ವರ್ಧೇನುವೆನಿಸಿದ ವರ್ಧಮಾನಭಾನುವನ್ಯೂನ ಪಾವನಾವಧಿಬೋಧದೀಧಿತಿ ಪುಷ್ಟದೃಷ್ಟಿಯಿಂ ಅತೀತಾತ್ಮೀಯಾಮೇಯ ನರನಾರ ಕತಿರ್ಯಗಾದಿ ಪರ್ಯಾಯನಿಕಾಯಮಂ ನಿರಾಕುಳಂ ನಿರೀಕ್ಷಿಸಿ ವಿಚಕ್ಷಣಾಗ್ರಣಿ ಪರಿಭಾವಿಸಿದನಿಂತು—

ಉಪಜಾತಿ॥ ಅಸುಭೃತ್ಸತಿ ಕೊಂಡು ಕೊಂಡು ತಾಂ।
ಬಿಸುಡುತ್ತಿರ್ಪ ಕಳೇವರಂಗಳಂ॥
ಪೆಸರ್ಗೊಂಡಿನಿತೆಂದು ನಿಂದು ಲೆ।
ಕ್ಕಿಸಲೀಲೋಕದೊಳಾರ್ಗೆ ತೀರ್ಗುಮೋ॥ (೮೭)

ಕಂ॥ ಸರಣಂ ಸಮರಣವಿೂಸಂ।
ಸರಣಂ ಸುಖಮಿದಱೊಳಾವುದಿರ್ದಪುದದಱಿಂ॥
ದರಣಮುಮರಣಮೆನಿಪ್ಪಾ।
ಪರಮುಪದಂಬೊಕ್ಕು ಸುಖದಿನಿರ್ಪನೆ ಚದುರಂ॥ (೮೮)

ಸವಿಷಮಿದೆಂಬುದನಱಿಯದೆ।
ಸವಿಸವಿಯೆಂದನುಭವಿಪ್ಪ ಜೀವಕ್ಕಿಂತೀ॥
ಭವಸುಖಮುಸುಖಮೆ ನಿಖಿಳಮು।
ನವಟಯ್ಸುಗುಮಲ್ತೆ ಬಳವದಘವಿಳಸಿತಮಂ॥ (೮೯)

ಜೀವಿಪ ವಸ್ತುವನರ್ಜಿಪ।
ಭಾವನೆ ಮನದಲ್ಲಿ ತಿಣ್ಣಮೆನಿಸುವ ಬಹಿರಾ॥
ತ್ಮಾವಸ್ಥೆಯ ಜೀವಾವಳಿ।
ಭಾವಿಸುಗುಮೆ ಭಾವಿ ನಿತ್ಯಸೌಖ್ಯದ ದೆಸೆಯಂ॥ (೯೦)

ಕಿಡುವೊಡಲೊಡಮೆಗಳೆರಡಱೊ।
ಳಿಡೆಯುಡುಗದೆ ತೊಡರ್ದು ತೋರ್ಪಹಂ ಮಮಭಾವಂ॥
ಕೆಡಪದೆ ಬಿಡುಗುಮೆ ಸಂಸೃತಿ।
ಜಡಧಿಯ ಕಡಿದಪ್ಪ ಸುೞಿಯ ಕುೞಿಯೊಳ್ ಖಳನಂ॥ (೯೧)

ವ॥ ಎಂದು ದುರಂತ ದುಃಖಪರಿಪಾಕಕರಪರಾವರ್ತನಪರಂಪರಾಪರಿಣತಿ ಪರಿಕರಮನಂತಃಕರಣದೊಳ್ ಪಿರಿದುಂ ಪರಿಭಾವಿಸುತ್ತುಂ ಅಸಾರ ಸಂಸಾರಪರಾಙ್ಮುಖನುಮಪವರ್ಗ ನಿಸರ್ಗ ನಿರತಿಶಯ ಸೌಖ್ಯಾಭಿಮುಖನುಮಾಗಿ ಭವ್ಯಜನವತ್ಸಳಂ ವಿರಾಗಚಿತ್ತೇವೆಯೊಳಿರೆ ತತ್ಸಮಯದೊಳ್—

ಕಂ॥ ಸುಕೃತನಿಧಾನರ್ ಲೋಕಾಂ।
ತಿಕದೇವರ್ ದೇವದೇವನೊಳ್ ವೈರಾಗ್ಯಂ॥
ವಿಕಸಿತಮಾದುದನವಧಿ।
ಪ್ರಕಾಶದಿಂದಱಿದು ನೆಱೆದು ನಿಜದಿವದಿಂದಂ॥ (೯೨)

ಕಂ॥ ಬಂದೊಲವಿಂದೆ ನಮೇರುವ ।
ಮಂದಾರಪಾರಿಜಾತದಲರ್ಗಳ ಸರಿಯುಂ ॥
ಸಂದ ಜಿನೇಂದ್ರನ ಜಗದಭಿ ।
ವಂದಿತ ಚರಣಾರವಿಂದದೊಳ್ ಸುರಿದೆಂದರ್ ॥ (೯೩)

ಉ॥ ದೇವ ದಯಾರಸಂ ಮಿಸುಪ ನಿನ್ನಯ ಮಾನಸದೊಳ್ ವಿರಕ್ತಿರಾ ।
ಜೀವಮದಿಂದು ಕುಂದದ ವಿಕಾಸ ವಿಳಾಸಮನಾಂತು ಭವ್ಯ ಭೃಂ ॥
ಗಾವಳಿಯಾಗಮಕ್ಕೆ ಮಿಗೆ ಕಾರಣಮಾದುದು ಸದ್ಗುಣಾಶ್ರಯಂ ।
ಭಾವವಿಶುದ್ಧಿ ಸತ್ಪರಿಮಳಂ ವರಬೋಧ [ಪರಾಗರಂ]ಜಿತಂ ॥ (೯೪)

ಮ॥ ಸ್ರ॥ ಪರಮಶ್ರೀ ಪಾರ್ಶ್ವತೀರ್ಥೇಶ್ವರ [ನಮ್ರ] ತ ಪದಪ್ರಾಪ್ತನಾದಿಂಬಱಿಕ್ಕೀ ।
ಧರೆಯೊಳ್ ಸದ್ಧರ್ಮತೀರ್ಥವ್ಯವಹಿತಮೆನಿಸಿರ್ದತ್ತು ತತ್ತೀರ್ಥಮಂ ಬಿ ॥
ತ್ತರಿಸತ್ಯಾನಂದದಿಂದಂ ವಿನುತ ಜನತೆಯಂ ಮುಕ್ತಿಪರ್ಯಂತ [ಮೊಱ್ದ] ।
ದ್ಧರಿಸುದ್ಧೂತಾಘನೀನುಂತಳೆಬಱಿಕಮೃತಪ್ರಾಜ್ಯ ಸಾಮ್ರಾಜ್ಯದೊಳ್ಪಂ ॥ (೯೫)

ಕಂ॥ ಜಳಧಿಗೆ ಜಳಧಿಯ ಜಳಮಂ ।
ತಳೆದಂಜುಳಿಯಿಂದಮರ್ಘ್ಯಮೀವಂತೆ ನಿರಾ ॥
ಕುಳ ಸಕಳ ವಿಮಳ ಸಂವಿ ।
ಜ್ಜಳಧಿಗೆ ಜಿನ ನಿನಗೆ ತಿಳಿಪುವೆಮ್ಮುದ್ಯೋಗಂ ॥ (೯೬)
ಪರಮ ಭವದೀಯ ಸುರುಚಿರ ।
ಪರಿನಿಷ್ಕ್ರಮಣ ಪ್ರಭಾವಮಂ ನೋಡಿ ಕೃತಾ ।
ರ್ಥರೆವಪ್ಪೆವೆಂದು ಬಂದೆವು ।
ಬರವೆಮಗುಱಿದೆಂತು ಕಾಂತಕರಣೀಯಮೆ ಪೇೞ್ ॥ (೯೭)

ವ॥ ಎಂದಾ ವಿಚಿತ್ರ ರತ್ನಾಲೋಕದ ಸುಪ್ರಸಿದ್ಧ ಬ್ರಹ್ಮಲೋಕದ ಸಾರಸ್ವತ ಸಾರಸ್ವತಂತ್ರರಪ್ಪ ಸಾರಸ್ವತಾದಿತ್ಯವಹ್ನ್ಯರುಣ ಗರ್ದ್ಧತೋಯ ಕುಪಿತಾವ್ಯಾಬಾಧಾರಿಷ್ಟರೆಂಬ ಲೋಕಾಂತಿಕ ದೇವರೆಣ್ಬರುಮಾಮಹೋದಾರನಂ ವೀರನಂ ಶುಂಭದ್ಗಂಭೀರೋಚಿತ ವಾಚಾವಿತತಿಯಿಂ ಪ್ರತಿಬೋಧಿಸಿ ನಿಜಕ್ಲಿಪ್ತ ಪ್ರತಿಪತ್ತಿಯಂ ಮೆಱೆದು ಮಹಿಮೆಯೊಳ್ ನೆಱೆದನಂ ಬೀೞ್ಕೊಂಡು ಮುದಮನೊಳಕೊಂಡು ನಿಜನಿಳಯಕ್ಕೆ ನಿಳಿಂಪರುಷಿಗಳುಂ ಪೋದರನ್ನೆಗಮಿತ್ತಲ್—

ಕಂ॥ ನಿಜಜನನೀಜನಕರಬಂ ।
ಧುಜನದ ಪರಿಜನದ ಮೋಹಲತೆಯ ತೊಡರ್ಪಂ ॥
ತ್ರಿಜಗತ್ಪತಿ ಚತುರವಚೋ ।
ಭುಜಲತಿಕೆಗಳಿಂದೆ ಬಿಡಿಸಿದಂ ಪರಿವಿಡಿಯಿಂ ॥ (೯೮)

ವ॥ ಅಂತಾ ಗುರುಗುಣಂ ಗುರುಜನಾದಿಗಳನೊಡಂಬಡಿಸಿ ತಪೋನುಷ್ಠಾನ ವಿಧಾನದತ್ತಾವಧಾನನಾಗಿರ್ಪುದುಂ ಮತ್ತಮಾಪ್ರಸ್ತಾವದೊಳ್—

ಕಂ॥ ಅವಧಿಪ್ರಯೋಗದಿಂದೆನಿ ।
ರವಧಿ ಗುಣಾಸ್ಪದನೊಳಾದ ಪರಿನಿಷ್ಕ್ರಮಣಾ ॥
ಧ್ಯವಸಾಯಮನಱಿದು ಶಚೀ ।
ಧವನವಿಳಂಬಿತಮಮರ್ತ್ಯಸಮಿತಿಸಮೇತಂ ॥ (೯೯)

ವ॥ ಮಹಾವಿಭೂತಿಯಿಂ ಭೂತಳಕ್ಕವತರಿಸಿ ಭೂತಾನುಕಂಪಾಸಂಪನ್ನನಪ್ಪ ಸನ್ಮತೀಶ್ವರನಿರ್ದ ನಯನಾನಂದಕರ ಮಂದಿರಮಂ ಪುಗುತಂದು—

ಮಲ್ಲಿಕಾಮಾಲೆ॥ ಚಾರುಚಂದನ ಚಂಚದಕ್ಷತ ಜಾತದಿಂದತಿಪೂತದಿಂ ।
ಪಾರಿಜಾತದ ಸತ್ಫಳ ಪ್ರಸವಾಳಿಯಿಂ ಸಮುದಾಳಿಯಿಂ ॥
ವೀರನಾಥನ ಸನ್ನುತಾಂಘ್ರಿಯುಗಂಗಳಂ ಸುಖದಂಗಳಂ ।
ಧೀರನರ್ಚಿಸಿ ತಾಳ್ದಿದಂ ಮಿಗೆ ವಾಸವಂ ಸುವಿಳಾಸಮಂ ॥ (೧೦೦)

ವ॥ ಅಂತು ತದನಂತರಂ ಜಿನಜನನ ಜನಿತಸವನಕ್ಕೆ ಸಮನಿದೆನಿಸಿ—

ಉ॥ ತೀರ್ಥಜಳಂಗಳಂ ತರಿಸಿ ನಿರ್ಮಳ ಧರ್ಮ ಘಟಂಗಳಿಂದಮಾ ।
ತೀರ್ಥಕರಂಗೆ ಸಂಗಳಿಸಿ ಮಂಗಳ ಮಜ್ಜನಮಂ ಬೞಿಕ್ಕೆ ಪು ॥
ಣ್ಯಾರ್ಥಿ ಬಳಾರಿ ಬಿತ್ತರಿಸಿದಂ ಸುರಲೋಕದ ಸಾರವಸ್ತುವಿಂ ।
ದರ್ಥಿತದಾಯಕಂಗೆಸೆವ ಮಂಡನಮಂ ವಸುಧೈಕಬಾಂಧವಂ ॥ (೧೦೧)

ಗದ್ಯಂ

ಇದು ನಿಖಿಳ ಭುವನಜನ ವಿನೂತಸ್ಫೀತ ಮಹಿಮಾವದಾತ ವೀತರಾಗ ಸರ್ವಜ್ಞತಾ ಸಮೇತ ಖ್ಯಾತಜಿನಸಮಯ ಕಮಳನೀ ಕಳಹಂಸಾಯಮಾನ ಮಾನಿತ ಶ್ರೀ ನಂದಿಯೋಗೀಂದ್ರ ಪ್ರಸಾದ ವಾಚಾಮಹಿತ ಕೇಶವರಾಜಾನಂದ ನಂದನ ವಾಣೀವಲ್ಲಭ ವಿಸ್ತಾರಿತಮಪ್ಪ ವಸುಧೈಕಬಾಂಧವ ಶ್ರೀ ವರ್ಧಮಾನ ಪುರಾಣದೊಳ್ ಪರಮನ ಪರಿನಿಷ್ಕ್ರಮಣೋದ್ಯೋಗವರ್ಣನಂ ಚತುರ್ದಶಾಶ್ವಾಸಂ.

ಪಂಚದಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀ ವೀರಂಗಿದೆ ಚರಮಂ ।
ಭಾವಿಸೆ ಪಸದನಮೆನುತ್ತೆ ತತ್ಕೌಶಲಮಂ ॥
ಭಾವಕತೆಯಿಂದೆ ಮೆಱೆದಂ ।
ದೇವೇಂದ್ರಂ ಪಂಚಪರಮಗುರುಪದವಿನುತಂ ॥ (೧)

ವ॥ ಅಂತು ನಿಖಿಳಭುವನಾತಿಕೌತುಕಕರಂಡಮಾದ ಮಂಡನಮಂ ತ್ರಿಜಗನ್ಮಂಡನಂಗೆ ಮಂಡನಮನಳವಡಿಪುದುಮನಂತರಂ ನಿಳಿಂಪ ಶಿಲ್ಪಿರಚಿತಮುಂ, ವಿಚಿತ್ರರತ್ನನಿಚಯಖಚಿತಮುಂ, ಸ್ಫುರತ್ಪ್ರಭಾವಿಭಾಸಮಾನಮುಂ, ಚಂದ್ರಪ್ರಭಾಭಿಧಾನಮುಮಪ್ಪ ಯಾಪ್ಯಯಾನಮಂ ದೇದೀಪ್ಯಮಾನಾನೂನ ಭಕ್ತಿಭಾವದಿಂ ದೇವರ್ಕಳ ವಟಯಿಸೆ—

ಕಂ॥ ಭುವನತ್ರಯ ಹರ್ಮ್ಯಾಗ್ರ ।
ಪ್ರವರ ಪ್ರಥಮೋಪಬದ್ಧ ಸೋಪಾನಮನೇ ॥
ಉವ ತೆಱದಿನೇಱಿದಂ ಜಿನ ।
ರವಿ ಸಿವಿಗೆಯನಿಂದ್ರದತ್ತ ಹಸ್ತಾಳಂಬಂ ॥ (೨)

ಆ ಸಮಯದೊಳನಿಮಿಷಭೇ ।
ರೀಸಮುದಯ ಸಮುಚಿತಪ್ರಣಾದಂ ಸಕಳಾ ॥
ಶಾಸಮಿತ್ತಿಯನಂಬರಮುಮ ।
ನೋಸರಿಸದೆ ತುಂಬಿತಂದದೇಂ ವ್ಯಾಪಕಮೋ ॥ (೩)

ವ॥ ಆಗಳ್ ನಿಜಪ್ರತಿಪತ್ತಿಯನತಿಕ್ರಮಿಸದಾಭವ್ಯೋತ್ಪಳ ಶಶಾಂಕ ನಳಂಕರಿಸಿರ್ದಂ—

ಮ॥ ಶಿಬಿಕಾರತ್ನಮನಾಂತರೇೞಡಿವರಂ ಭೂಪೇಂದ್ರರಲ್ಲಿಂ ಬೞಿ ।
ಕ್ಕೆ ಬಲಾಢ್ಯರ್ ಖಚರೇಂದ್ರರೇೞಡಿವರಂ ಸದ್ಧ್ಯಾನದಿಂದಾತ್ತರ ॥
ತ್ತ ಬೞಿಕ್ಕುತ್ಸವದಿಂ ಸುರಾಸುರಚಯಂ ಬಂದಾಂತುದಲ್ಲಿಂದವ ।
ತ್ತ ಬೞಿಕ್ಕಂಬಿನೊಳಾಂತು ಮೇಲೆ ನಡೆದರ್ ದೇವೇಂದ್ರರಾನಂದದಿಂ ॥ (೪)

ವ॥ ಅಂತು ಗಗನಾಂಭೋನಿಧಾನಂ ವಿರಾಜಮಾನ ವಿಮಾನಫೇನಿಳಮಾಗೆ ಮಹಾವಿಭೂತಿಯಿಂ ನಡೆದು—

ಸ್ರ॥ ನಾನಾಭೂಜಪ್ರವಾಳಪ್ರಸವರಸವದುದ್ಯಕ್ಷಳಾನೀಕಶೋಭಾ ।
ದಾನಕ್ಕತ್ಯಂತಲೀಲಾಶ್ರಿತಶುಕಪಿಕಮತ್ತಾಳಿಮಾಳಾವಿಶಾಳ ॥
ಧ್ವಾನಕ್ಕಾಯತ್ತ ಸರ್ವರ್ತುಗೆ ಸುರಪಥದಿಂ ನಾಥಷಂಡಾಭಿಧಾನೋ ।
ದ್ಯಾನಕ್ಕಾನಂದದಿಂದಂದವತರಿಸಿದರಿಂದ್ರರ್ ಧೃತಶ್ರೀಜಿನೇಂದ್ರರ್ ॥ (೫)

ವ॥ ಅಂತು ಪರಮಪಾವನತಪೋವನಪ್ರಭಾವನೋಚಿತಮೆನಿಸಿದಾವನದ ಮಧ್ಯಾವನಿಗೆ ಭಾವನಾದಿದೇವನಿಗೆ ಭಾವನಾದಿದೇವನಿಕಾಯಜಯಜೀವನಂದಾರಾವ ನಿವಹಮಾವಗಂತೀವೆ ದೆಸೆಯಂ ದೇವನಾಯಕರವತರಿಸೆ ತದೀಯ ಬಂಧುರ ಸ್ಕಂಧ ಧಾರಿತ ಶಿಬಿಕೆಯಿ ನಿೞಿದು ಪುಳೋಮಜಾಪ್ರಸಾರಿತ ದುಕೂಲಪ್ರಚ್ಛದಾಚ್ಛಾದಿತಮಾದ ಮೇದಿನಿ ತನಗಂನುತಪಾದಪಲ್ಲವೋಲ್ಲಸಿತ ರಾಗಾಭೋಗದಿನಪೂರ್ವ ದಿವ್ಯಾಂಬರಾಚ್ಛಾದಿತಮಾದುದೆಂಬಶಂಕೆಯಂ ಭೋಂಕನೆ ಮಾಡೆ—

ಕಂ॥ ಪಟುಪಟಹರಟನಮಾಶಾ ।
ತಟಮಂ ತರ್ಕೈಸೆ ಮಂಜುಮೊಕಂದ ಮಹಾ ॥
ವಿಟಪಿಯ ಮೊದಲ ವಿಶಾಲ ।
ಸ್ಫಟಿಕಶಿಳಾತಳಕೆ ವಿಜಯಿ ಬಿಜಯಂಗೆಯ್ದಂ ॥ (೬)

ಪಿಡಿದ ಜವನಿಕೆಯ ಮಱೆಯೊಳ್ ।
ತೊಡವುಮನುಡುಗೆಯುಮನಂಗದಿಂ ಪಿಂಗಿಸಿ ಮುಂ ॥
ಬಡಗ ಮೊಗದಿಂದೆ ಮೂಜಗ ।
ದೊಡೆಯಂ ಕುಳ್ಳಿರ್ದನೆಸೆಯೆ ಸುಸ್ಥಾಸನದಿಂ ॥ (೭)

ವ॥ ಅಂತಾ ಕಲ್ಯಾಣಭಾಸನಂ ನಿಬಿಡನಿಬದ್ಧ ಪಲ್ಯಂಕಾಸನನಾಗಿ—

ಕಂ॥ ಭಾಸುರಮೆನಿಸಿದ ಮಾರ್ಗಶಿ ।
ರಾಸಿತದಶಮಿದಿನಾಪರಾಹ್ಣದೊಳಿಂದೂ ॥
ದ್ಭಾಸಿನಿಯುತ್ತರೆ ಸಮನಿಸೆ ।
ಪಾಸಟಿಯಿಲ್ಲೆನಿಪ ಶುಭಮುಹೂರ್ತೋದಯದೊಳ್ ॥ (೮)

ಸನ್ನುತಗುಣನಿಳಯಂ “ಸಿ ।
ದ್ಧಂ ನಮ”ಯೆಂದಖಿಳಸಂಗ ವಿರತಿ ಸಮೇತಂ ॥
ತನ್ನ ಶಿರೋರುಹತತಿಯಂ ।
ತನ್ನಯ್ಮೆ ಕರತಳದೆ ಕಿೞ್ತು ತಳೆದಂ ತಪಮಂ ॥ (೯)

ಉ॥ ಆಕಮನೀಯಕುಂತಳಕಳಾಪಮನುತ್ತಮರತ್ನಪಾತ್ರದಿಂ ।
ನಾಕನಿವಾಸಿಗಳ್ ತಳೆದು ಮಂಗಳವಾದ್ಯರವಂಗಳುಣ್ಮೆ ನಿ ॥
ರ್ವ್ಯಾಕುಳಮುಯ್ದು ಪಂಚಮಪಯೋಧಿಯ ಮಧ್ಯದೊಳಿಕ್ಕಿ ನೀಳರ ।
ತ್ನಾಕರಲಕ್ಷ್ಮಿಯಂ ತದಮೃತಾಬ್ಧಿಗೆ ಪೆತ್ತರುದಾತ್ತ ವೈಭವರ್ ॥ (೧೦)

ಶಾ॥ ಆಮೋದಾನುಗತ ಭ್ರಮದ್ಭ್ರಮರಮಾಳಾಮಂಜುಳಂ ಕೌಸುಮ ।
ಸ್ತೋಮಾಸಾರಮಪಾರಮಂದು ನಭದಿಂದಂ ಬಂದುದಾದಂ ಮರು ॥
ದ್ವ್ಯಾಮಾಮಂಗಳ ಗೀತಜಾತಕಳನಾದಂ ಕೂಡೆ ಪುಣ್ಯೋತ್ತ್ಸು ।
ತ್ರಾಮಂ ಪೂಜಿಸಿದಂ ಸುವಸ್ತುಚಯದಿಂ ಶ್ರೀ ವೀರಪಾದಂಗಳಂ ॥ (೧೧)

ಉ॥ ಇಂತು ಬಳಾರಿ ಚಾರುಪರಿನಿಷ್ಕ್ರಮಣೋತ್ಸವಮಂ ಪದದ್ವಯಾ ।
ಕ್ರಾಂತ ಜಗತ್ತ್ರಯಂಗೆಸೆವ ಸನ್ಮತಿ ಸನ್ಮುನಿನಾಯಕಂಗೆ ಚೈ ॥
ರಂತನ ತೀರ್ಥಕೃತ್ಸಮಯಶಂಗೆ ವಿನಿರ್ಮಿಸಿ ನಿರ್ಮಳಾಂತರಂ ।
ಗಂ ತಳರ್ದಂ ದಿವಕ್ಕೆ ವಿಹಿತಾನತಿ ತಾನತಿ ಹರ್ಷಿತಾಶಯಂ ॥ (೧೨)

ವ॥ ಇತ್ತಲ್—

ಕಂ॥ ಆರ್ಯನುತಂಗಾಯ್ತು ಮನಃ ।
ಪರ್ಯಾಯ ಬೋಧಂ ವಿಶುದ್ಧ ಸಪ್ತರ್ಧಿಗುಣಾ ॥
ಶ್ಚರ್ಯಂ ಜನಿಯಿಸಿತೆಸೆದುದು ।
ಧೈರ್ಯಂ ಸಮನಿಸಿತು ಸಕಳಸಂಯಮಸಾರಂ ॥ (೧೩)

ವ॥ ಅಂತಾ ಮುಮುಕ್ಷು ಜಗಚ್ಚಕ್ಷು ದೀಕ್ಷಾಗ್ರಹಣಗೃಹೀತ ವರಿಷ್ಠ ಷಷ್ಠೋಪವಾಸ ಪ್ರತಿಜ್ಞಾಪಾರಗಂ ಪರಮೈಶ್ವರ್ಯದಾನಸಮರ್ಥ ದಾನತೀರ್ಥಪ್ರವರ್ತನಾರ್ಥಂ ಚತುರ್ಥದಿನದೊಳ್ ಮುನಿಭೋಜನ ಸಮುಚಿತ ವೇಳೆಯೊಳ್ ಪರಮಸಂಯಮರಮಾರಮಣೀಯ ಸ್ವರ್ಣಕರ್ಣಕುಂಡಳಂ ಸಜ್ಜನನಿವಸನಾನುಕೂಲಮೆನಿಪ ಕೂಲಪುರಮಂ ಪೊಕ್ಕಾಶಕ್ರವಂದಿತನನಾಂದೋಳಿತ ಬಾಹುಯುಗಳನುಂ, ಅನತಿದ್ರುತವಿಳಂಬಿತಗಮನನುಂ, ಅವಿಕೃತಸಕಳಾವಯವನುಂ, ಅನಭಿಲಕ್ಷಿತದಾತೃದರ್ಶನನುಂ, ಅನವೇಕ್ಷಿತದಿಶಾನೀಕನುಂ, ಅನುಪಹತ ಜೀವಜಾಳನುಂ, ಅಪರಿತ್ಯಕ್ತ ಯುಗಾಂತರ ನಿರೀಕ್ಷಣನುಂ, ಅನಾದೃತನಿಜಾಂಗನುಮಸಂಸ್ಕಾರವಿಶೇಷಪೋಷಿತದೇಹನುಂ, ಅನವಧಾರಿತರಾಗಿಜನವಿನೋದವಾಕ್ಯನುಂ, ಅದೀನವದನಾರವಿಂದನುಂ, ಅಪಾದಪರಿಘಟ್ಟಿತ ಧರಣೀತಳನುಂ, ಅಪರಿಸ್ಪೃಷ್ಟ ಪರಕೀಯಕಾಯನುಂ, ಅನವಳೋಕಿತ ಗೃಹಾಂತರಾಳನುಂ, ಆಗಿ ಸ್ಥಳಕಮಳ ವಿಳಾಸಮಂ ಚರಣಕಮಳಯುಗಳಂ ಬೀಱೆ ರಾಜಮಾರ್ಗದೊಳ್ ಬರ್ಪಾಗಳ್—

ಕಂ॥ ಕೂಲಾಭಿಧಾನಧರಣೀ ।
ಪಾಲಂಗನುಕೂಲವೃತ್ತಿ ಪಡಿಯಱನೊರ್ವಂ ॥
ಲೀಲೆಯೊಳೆ ಪರಿದು ಪೇಳ್ದಂ ।
ಶೀಲಗುಣಾವನಿಯ ಬರವನಂದಾಸುರಪಂ ॥ (೧೪)

ವ॥ ಅಂತು ಪೇೞೆ—

ಕಂ॥ ಭೂತಳಪತಿ ಪದೆದು ಶುಚೀ ।
ಭೂತಂ ದಿವ್ಯಾರ್ಚನಾಸಮೇತಂ ಭವ್ಯ ॥
ವ್ರಾತಪರೀತಂ ಪರಮವಿ ।
ಭೂತಿಯಿನಂದಾ ತಪೋಧನಂಗಿದಿರ್ವಂದಂ ॥ (೧೫)

ಬಂದು ಬಲವಂದು ಪೂಜಿಸಿ ।
ಬಂದಿಸಿ ತತ್ಪದಪಯೋಜಮಂ ನಿಲ್ಲಿಂ ಸೀ ॥
ಮೆಂದೊಸೆದು ನಿಲಿಸಿದಂ ಶ್ರೀ ॥
ನಂದಿ ತಪೋನಿಧಿಯನಧಿಕವಾಣೀಕಾಂತಂ ॥ (೧೬)

ಸುರಭೂಜಂ ಚಿಂತಾಮಣಿ ।
ಪರುಷದ ಕಣಿ ಕಾಮಧೇನು ನವನಿಧಿತತಿ ಸಿ ॥
ದ್ಧರಸಂ ತನಗಿದಿರ್ವಂದವೊ ।
ಲರಸಂ ಸ್ಮರಹರನ ಬರವಿನೊಳ್ ಕರಮೊಸೆದಂ ॥ (೧೭)

ವ॥ ಅನಂತರಂ—

ಕಂ॥ ಬಿಜಯಂಗೆಯ್ಸಿದನುದ್ಯ ।
ಧ್ವಜ ವಿಳಸತ್ಪೂರ್ಣ ಕಳಶವಂದನಮಾಳಾ ॥
ವ್ರಜಪರಿರಂಜಿತವೆನಿಸಿದ ।
ನಿಜಧಾಮಕ್ಕಾ ಮಹಾನುಭಾವಸ್ತುತನಂ ॥ (೧೮)

ವ॥ ಅಂತು ಬಿಜಯಂಗೆಯ್ಸೆ—

ಮ॥ ಉಚಿತೋಚ್ಚಾಸನದಲ್ಲಿ ಕುಳ್ಳಿರಿಸಿ ಪಾದಕ್ಷಾಳನಂಗೆಯ್ದು ಮಂ ।
ತ್ರಚಯೋಚ್ಚಾರಣಪೂರ್ವಕಂ ಸಲಿಲದಿಂ ಸದ್ಗಂಧದಿಂದಕ್ಷಯಿಂ ॥
ಪ್ರಚುರಾಮೋದಲತಾಂತದಿಂ ಚರುಕದಿಂ ಸದ್ದೀಪದಿಂ ಧೂಪದಿಂ ।
ನಿಚಿತೋದ್ಯತ್ಫಲದಿಂದಮರ್ಚಿಸಿದನಾಭೂಪಂ ಜಗದ್ದೀಪನಂ ॥ (೧೯)

ಕಂ॥ ಇಂದೀ ಮದೀಯ ಜನ್ಮಂ ।
ಸಂದೆಯುಮೇಂ ಸಫಳಮಾಯ್ತು ಜಗದಾರಾಧ್ಯಂ ॥
ಬಂದಂ ಮಂದಿರಕೆಂದಾ ।
ನಂದದೊಳೊಂದಿದನುದಾತ್ತ ಕವಿಜನಮಿತ್ರಂ ॥ (೨೦)

ವ॥ ಅಂತಾ ಸಂವೀತ ಧೌತದುಕೂಲಂ ಕೂಲಾವನಿಪಾಲಂ ಪ್ರತಿಗ್ರಹಾದಿ ನವವಿಧ ನವಪುಣ್ಯಪ್ರಾವೀಣ್ಯನುಂ ಅತಿ ಪ್ರವೃದ್ಧಶ್ರದ್ಧಾದಿ ಸಮಸ್ತ ಗುಣವರೇಣ್ಯನುಮಾಗಿ—

ಕಂ॥ ಪರಮುಪವಿತ್ರನ ಕರಸರ ।
ಸಿರುಹಪುಟಾಂತರದೊಳಖಿಳ ಕರಣಪವಿತ್ರಂ ॥
ನಿರವದ್ಯಮನತಿಮುದದಿಂ ।
ಪರಮಾನ್ನಮನಿಕ್ಕಿದಂ ತ್ರಿವಾರವುದಾರಂ ॥ (೨೧)

ವ॥ ಅಂತಿಕ್ಕುವುದುಮಾಗಳಾಯೋಗಿಜನಕಾಂತಂ ನಿರಂತರಾಯನಿರ್ವರ್ತಿ ತಾತ್ಮೀಯ ಕಾಯಸ್ಥಿತಿಕನಾಗಿ ಕೆಯ್ಯೆತ್ತಿಕೊಂಡು—

ಕಂ॥ ದಾನಮಿದಕ್ಷಯಮಕ್ಕೆಂ ।
ದಾ ನಿರುಪಮ ಚಾರುಚರಿತನಪಗತದುರಿತಂ ॥
ಸೂನೃತ ವಚನಂ ಪರಸಿ ದ ।
ಯಾನಿಧಿ ತನ್ನಿಳಯದಿಂದೆ ಬಿಜಯಂಗೆಯ್ದಂ ॥ (೨೨)

ವ॥ ಆಗಳಾ ಕೂಲಭೂಪಾಳನಾಲಯಾಜಿರದೊಳ್—

ಕಂ॥ ಅಲರ್ಗಳಸರಿ ಪೊಂಗಳಮಱಿ ।
ಯೆಲರ್ಗಳ ತೀಟಂ ಸುರಾನಕದ ದನಿ ದಿವಿಜಾ ॥
ವಳಿಯ ಪೊಗೞ್ತೆಗಳೆಂಬೀ ।
ಲಲಿತಾಶ್ಚರ್ಯಂಗಳಾದವೊದವಿದುವಯ್ದುಂ ॥ (೨೩)

ವ॥ ಅತ್ತಲಾ ಮುಮುಕ್ಷುಮುಖ್ಯಂ—

ಕಂ॥ ಗ್ರಾಮ ನಗರ ಗಿರಿ ಕಂದರ ।
ಭೀಮಾರಣ್ಯಪ್ರದೇಶದೊಳ್ ವಿಹರಿಸಿದಂ ।
ಕಾಮಾರಣ್ಯಹುತಾಶಂ ।
ಭೂಮಹಿತಂ ಭೂಮಿಹಿತಚರಿತ್ರೋದಾತ್ತಂ ॥ (೨೪)

ಯಮಿಗೆ ಸಮನಿಸಿತಖಿಳಸ ।
ತ್ವಮೈತ್ರಿ ಸಂಕ್ಲಿಶ್ಯಮಾನದೊಳ್ ಕಾರುಣ್ಯಂ ॥
ವಿಮಳಗುಣದೊಳ್ ಪ್ರಮೋದಂ ।
ಸಮಂತು ದುರ್ವಿನಯ ಜನದೊಳೌದಾಸೀನ್ಯಂ ॥ (೨೫)

ಯತಿಪತಿಗೆ ಸಿಂಹನಿಷ್ಕ್ರೀ ।
ಡಿತಮಾಚಾಮ್ಲ ಪ್ರವರ್ಧನಂ ಮೊದಲಾದೂ ॥
ರ್ಜಿತ ನಿರಶನ ಭೇದಂಗಳೊ ।
ಳತಿಶಯದ ನೆಗೞ್ತೆ ಪೆತ್ತುದಃವಿಘ್ನತೆಯಂ ॥ (೨೬)

ಕ್ಷಿತಿವಳಯ ವಂದಿತಂ ಸ ।
ನ್ನುತಮೆನಿಸಿರ್ದುಗ್ರ ದೀಪ್ತ ತಪ್ತ ಮಹಾ ಘೋ ॥
ರ ತಪೋವಿಶೇಷ ವಿಧಿಯೊಳ್ ।
ರತಿಪತಿಯ ವಿರೋಧಿ ಯತ್ನಪರತೆಯನಾಂತಂ ॥ (೨೭)

ಕಂ॥ ಪದಿನೆಣ್ಛಾಸಿರ ಶೀಲದೊ ।
ಳೊದವಿದುದೆಣ್ಬತ್ತುನಾಲ್ಕು ಲಕ್ಕೆ ಗುಣದೊಳೊ ॥
ಪ್ಪಿದುದು ಯತಿರಾಜರಾಜನ ।
ಹೃದಯಂ ಸದಯಂ ಪ್ರಭೂತ ಮಹಿಮಾಭ್ಯುದಯಂ ॥ (೨೮)

ಪಂಚಮಹಾವ್ರತವಾರಿಧಿ ।
ಪಂಚದಶಮಿತ ಪ್ರಮಾದ ವಿಚ್ಛೇದಕರಂ ॥
ಪಂಚವಿಧಸಮಿತಿಯುಕ್ತಂ ।
ಪಂಚಭವಂಗಳ ವಿಡಂಬಮುಂ ಸ್ತಂಭಿಸಿದಂ ॥ (೨೯)

ವ॥ ಒಂದು ದೆವಸಮಾಮುನಿರಾಜಂ ವಿರಾಜಮಾನ ವಿವಿಧೋತ್ತುಂಗ ಮತ್ತವಾರಣಮೆನಿಪ ವಾರಣಾಸೀಪುರೋಪಾಂತದ ವಿಕಸದತಿಮುಕ್ತಕ ಪ್ರಸವ ಪರಿಮಳ ಪ್ರಸರದಿಂ ನಿಸದಮೆಸೆವತಿಮುಕ್ತಕ ಸಂಜ್ಞಾಸಮೇತ ಪರೇತವನದ ಪಾರ್ಶ್ವದಲ್ಲಿ—

ಮಾಳಿನಿ॥ ತಪನನಪರಪಾರಾವಾರಮುಂ ಸಾರೆ ವೀರಂ ।
ವ್ಯಪಗತಪದ ವಿಕ್ಷೇಪ ಕ್ರಿಯಂ ಶಕ್ರವಂದ್ಯಂ ॥
ಸ್ವಪರಹಿತಚರಿತ್ರಂ ನಿಃಪ್ರಕಂಪಾಂಗನಿರ್ದಂ ।
ಕ್ಷಪೆಯೊಳಘವಿಹೀನಂ ಹೇಮಶೈಲೋಪಮಾನಂ ॥ (೩೦)

ವ॥ ಅಂತು ರಾತ್ರಿ ಪ್ರತಿಮಾಯೋಗದೊಳಾಯೋಗಿಜನಪುಂಗವಂ ನಿಲ್ವುದುಂ ಆ ಪ್ರಸ್ತಾವದೊಳ್—

ಉ॥ ಸಂದ ಗವೇಂದ್ರನಂ ಭುಜಗಭೂಷಣನೇಱಿ ಬರುತ್ತು ತತ್ತಪೋ ।
ನಂದಿತನಂ ಜಿನೇಂದುವನಭೀಕ್ಷಿಸಿ ಪಾಣಿಪಯೋಜಯುಗ್ಮಮುಂ ॥
ತಂದು ನೊಸಲ್ಗೆ ತಾಂ ಮುಗಿದು ಭಕ್ತಿಭರಾನತಮೂರ್ಧನಾಗೆ ಪೂ ।
ರ್ಣೇಂದುನಿಭಾಸ್ಯೆಯಂದು ಗಿರಿನಂದನೆ ವಿಸ್ಮಯದಿಂದೆ ನೋಡಿದಳ್ ॥ (೩೧)

ಕಂ॥ ರತಿಪತಿಗೆತ್ತಣಿನೀನ ।
ಗ್ನತೆ ಸಮನಿಸಿದತ್ತೆನುತ್ತೆ ಮಾನಸದೊಳ್ ವಿ ॥
ಸ್ಮಿತೆಯಾದಳ್ ಪಾರ್ವತಿ ಯತಿ ।
ಪತಿಯ ಚಮತ್ಕೃತಿಯನೀವ ರೂಪಿಂಗೆ ಕರಂ ॥ (೩೨)

ವ॥ ಅನಂತರಮಾಕಾಂತೆ ನಿಜಕಾಂತಂಗಿಂತೆಂದಳ್—

ಕಂ॥ ಬಲ್ಲಿದರುಂ ನಿವಗಧಿಕರು ।
ಮಿಲ್ಲ ವಿಚಾರಿಪೊಡೆ ಸಕಳ ಭುವನಂಗಳೊಳೆಂ ॥
ದೆಲ್ಲರುಮೆಂಬರ್ ದೇವ ಜ ।
ಗಲ್ಲೋಚನ ನಿನ್ನನೆಱಗಿಪೀತನದಾವೊಂ ॥ (೩೩)

ಮಣಿವಿಭೂಷಣಂ॥ ಎಂದ ತನ್ನವಧುಗಾವಿಧುಶೇಖರನಾಗಳಿಂ।
ತೆಂದನೊರ್ನೊದಲಿ ಮೂಜಗಕುನ್ನತನಪ್ಪನಾ॥
ನಂದದಿಂದೆನಿಸುವೀವಿಭುಗಪ್ರತಿಮಾನಯೋ।
ಗೇಂದುಗಾನೆಱಗೆ ಮಾನಿನಿ ವಿಸ್ಮಯಮಾದುದೇ॥ (೩೪)

ವ॥ ಅದಲ್ಲದೆಯುಂ—

ಕಂ॥ ನಿಖಿಳಜಗಂಗಳೊಳಧಿಕನು।
ಮಖಂಡಶೌರ್ಯನುಮುಸಾರ ಸಂಸಾರ ಪರಾ॥
ಙ್ಮುಖನುಂ ನಿರುಪಮ ನಿರ್ಮಳ।
ಸುಖಸಾರನುಮೆನಿಪ ವೀರನಂ ನೀನಱಿಯಾ॥ (೩೫)

ವ॥ ಎಂದು ಚಂದ್ರಶೇಖರಂ ಭುವನತ್ರಯಶೇಖರನನುರುಮುದದಿಂ ಪರಿಕೀರ್ತಿಸುತ್ತುಮಿರ್ಪುದುಂ—

ಕಂ॥ ನಿನ್ನ ಪೊಗೞ್ತೆಗೆ ಪಕ್ಕಾ।
ದನ್ನನ ಸನ್ಮತಿಯ ಶಕ್ತಿಯುನ್ನತಿಯಂ ನೋ।
ೞ್ಪಂ ನೆಟ್ಟನೆ ತೋರ್ಪುದೆಲೇ।
ಪನ್ನಗಭೂಷಣ ಮದಿಷ್ಟಮಂ ಸಲಿಪುದಿದಂ॥ (೩೬)

ವ॥ ಎಂದು ನುಡಿದ ಮಡದಿಯ ನುಡಿಯಂ ಮೃಡನವಧರಿಸಿ ಮುಗ್ಧಭಾವಕ್ಕೆ ಮುಗುಳ್ನಗೆ ನಗುತ್ತುಂ ತದೀಯಾವಾರ್ಯ ಧೈರ್ಯಮಂ ಸಾಶ್ಚರ್ಯಮಪ್ಪಂತು ನೀಱಿಗೆ ತೋಱಿಸುವ ಬವಸೆಯಿಂ ಸ್ವವಶವರ್ತಿಗಳಪ್ಪ ಧೂರ್ತ ಪಿಶಾಚನಿಶಾಚರರ್ಗೆ ವಾಚಂಯಮವರ್ಯನ ಧೈರ್ಯಾಚಳಮಂ ವಿವಿಧೋಲ್ಬಣ ವೈಕುರ್ವಣ ವಿಡಂಬನ ಶಂಖಪಾತದಿಂ ತೂರ್ಣಂ ಚೂರ್ಣೀಕರಿಸಿಮೆಂದು ಬೆಸಸಿದಾಗಳ್—

ದ್ರುತವಿಳಂಬಿತಂ॥ ಮರುಳ ತಂಡದಿನಂಬರಮಂಡಳಂ।
ಧರಣಿಮಂಡಳಮೆಂಬಿವು ದಿಕ್ಚಯಂ॥
ಬೆರಸು ಬೇಗದೆ ತೀವಿದುವಟ್ಟಹಾ।
ಸರಸವಾರಿಧಿ ಮೀಱಿರೆ ಮೇರೆಯಂ॥ (೩೭)

ಉ॥ ನೆಕ್ಕ ಕದಂಪು ಕಂಪಿಪಧರಂ ಮಿಗೆ ಕೆಂಪಡರ್ದಕ್ಷಿ ಬಿಟ್ಟ ಬಾ।
ಯಕ್ಕುಳಿಸಿರ್ದ ಪೊಟ್ಟೆ ಪೊಱವಾಯ್ದೆರ್ದೆಯರ್ವಿಪ ಪುರ್ವು ಕೆಂಗದಿರ್॥
ಮಿಕ್ಕು ಮರಲ್ದ ದಾಡೆ ದಸಿಗಾಲ್ ಮಸಿಮೆಯ್ ಬಿಱುಸಾದ ಕಯ್ ಮರು।
ಳ್ವಕ್ಕದ ನಿಟ್ಟೊಡಲ್ ಮಸೆದ ಕತ್ತಿಗೆ ಕಣ್ಬೊಲನಾದುವೆತ್ತಲುಂ॥ (೩೮)

ಚಂ॥ ಒದಱಿ ಕುಕಿಲ್ದು ಬೆಟ್ಟುಗಳ ಕೆಯ್ದುಗಳುರ್ವಿದ ನೀರ ತೋರಗೆಂ।
ಡದ ಸರಿಯಂ ಸಮಂತು ಸುರಿದುಗ್ರವಿಷಾಹಿಗಳಂತೆ ತಳ್ತು ಕಂ॥
ಠದೊಳೆ ತಗುಳ್ಚಿ ಪೆರ್ವುಲಿಯ ಸಿಂಹದ ಜಂಗುಳಿಯಾಗಿ ಪಾಯ್ದು ಮಾ।
ಣದೆ ಬಿಱುಗಾಳಿ ದೂಳಿಗಳನಾಗಿಸಿ ಬಾಧಿಸಿಡತ್ತು ತದ್ಬಳಂ॥ (೩೯)

ವ॥ ಅಂತಾಮಹಾದ್ಭುತೋದ್ಭೂತ ಭೂತಪ್ರೇತಪಿಶಾಚನಿಶಾಚರನಿಚಯಂ ದೆಸೆದೆಸೆಯೊಳಸದಳಂ ಮುಸಗಿ ಪಲತೆಱದ ವಿಕ್ರಿಯೆಗಳಂ ವಿಗುರ್ವಿಸಿ ನಿರ್ವಂದದಿಂ ನಿರರ್ಗಳಮುಪಸರ್ಗವರ್ಗಮಂ ಭರ್ಗಪರಿವಾರಂ ವಾರಣಾಸಿಯ ಪೌರವಾರಂ ನೆರೆದು ನೀಡುಮೆಸಗಿಯುಸುವಱಿಯಾಗಿ ನಿರರ್ಥಕ ಪ್ರಯಾಸಂಬೆತ್ತು ಸುಜನಸರೋಜಸೂರ್ಯನ ಧೈರ್ಯಾಚಳಮುಂ ಚಳಿಯಿಸಲ್ ನೆಱಿಯದೆ ಅಂತರಂಗಭಂಗಭಾರದಿಂ ಜೋಲ್ದು ತೆಱದೆ ಬಱುತು ಪೆಱಗಣ್ಗೆ ಪಿಂಗೆ ಗಂಗಾಧರಂ ನಿರೀಕ್ಷಿಸಿ ನಿಜಾಂಗನೆಗಂ ದಿಂತೆಂದಂ—

ಕಂ॥ ತುಂಗತರಾವನಿಧರಮುಂ।
ಗುಂಗುಱುಕಾಯ್ದುವೊಲಿದಾಯ್ತು ಕಡಂಗಿ ಸತಿ ನೀ॥
ನಂಗಜಗಜಗಜರಿಪುವಂ।
ಭಂಗಿಪೆವೀಗಣದಿನೆಂಬ ನಮ್ಮುದ್ಯೋಗಂ॥ (೪೦)

ವ॥ ಎಂದು ವಿಸ್ಮಯಸ್ಮೇರನಯನಾರವಿಂದೆಯಾದ ಸುಂದರಿಗೆ ಮಂದರಾಚಳಸ್ಥಿರನ ಮುನಿವರನ ನಿರತಿಶಯ ಧೈರ್ಯಪ್ರಭಾವಮುಂ ವ್ಯಾವರ್ಣಿಸಿ ತಾನುಮಾಮಾನಿನಿಯುಮನೂನಾರ್ಚನಾನೀಕದಿಂ ಲೋಕಪೂಜ್ಯನಂ ಪೂಜಿಸಿ ಸುವೀರನುಮತಿವೀರನುಮೆಂದು ನಾಮಂಗಳಂ ಪ್ರೇಮದೆ ಜಿನಸ್ವಾಮಿಗಿಟ್ಟು ಪೊಡವಟ್ಟು ಪೋದರಿತ್ತಲ್—

ಕಂ॥ ಉಪಸರ್ಗವಿಜಯಿ ಜಿನಪತಿ।
ತಪನೋದಯದೊಳ್ ಸಮಾಪ್ತಯೋಗನಿಯೋಗಂ॥
ವಿಪುಳಯಶೋವ್ಯಾಪ್ತದಿಶಂ।
ಕ್ಷಪಿತಮಳಂ ವಿಪುಳ ಸಂಯಮಂ ತಳರ್ದಲ್ಲಿಂ॥ (೪೧)

ಚೋಳಾಂಧ್ರ ಮಗಧ ಗೂರ್ಜರ।
ಮಾಳವ ಕರ್ಣಾಟ ಲಾಟ ಕರಹಾಟಕ ಪಂ॥
ಚಾಳಾದಿ ನಿಖಿಳ ಜನಪದ।
ಜಾಳದೊಳೆ ವಿಹಾರಿಸುತ್ತುಮಿರ್ಪುದುಮಿತ್ತಲ್॥ (೪೨)

ವ॥ ಸಕಳ ಸಂಪದಾಳಂಬಮಾದ ಸಿಂಬಿಯೆಂಬ ಪೆಸರಿನೆಸೆವ ವಿಷಯದೊಳ್ ವಿಷಮಸಾಯಕಾಯತ್ತ ಚೂತಾಳಿಯುಂ ವೈತಾಳಿಯೆಂಬ ನಗರಿಯನಗಣಿತಲೀಲೆಯಿನಾಳ್ವ

ನಯವಿನಯವಿಕ್ರಮಾದಿ ಗುಣಪೇಟಕನೆನಿಪ ಚೇಟಕರಾಜಂಗಮತುಳಸೌಭಾಗ್ಯ ಭದ್ರೆಯೆನಿಸಿದ ಸುಭದ್ರೆಗಂ ಜನಿಯಿಸಿದ ಧನಚಂದ್ರ ಧನದತ್ತೋಪೇಂದ್ರ ಸುದತ್ತ ಸಿಂಹಚಂದ್ರಪತಂಗಾಕಂಪನ ಕಾಂಭೋಜ ಪ್ರಭಂಜನ ಪ್ರಭಾಸರೆಂಬ—

ಕಂ॥ ತನಯರ್ ಪದಿಂಬರೆಸೆದರ್ ।
ವಿನಯುಗುಣಾಭರಣರುತ್ಸವಾಂತಃಕರಣರ್ ॥
ಮನಸಿಜಮೂರ್ತಿಗಳಿಂದು ।
ದ್ಯುನದೀ ನಿರ್ಮಳಿನ ಕೀರ್ತಿಗಳ್ ಮತ್ತವರಿಂ ॥ (೪೩)

ವ॥ ಬೞಿಕ್ಕೆ ಪುಟ್ಟೆ ನೆಟ್ಟನೆಸೆವ ಪ್ರಿಯಕಾರಿಣಿಯುಂ, ಮೃಗಾವತಿಯುಂ, ಸುಪ್ರಭೆಯುಂ, ಸುಪ್ರಭಾವತಿಯುಂ, ಚೇಳಿನಿಯುಂ, ಜ್ಯೇಷ್ಠೆಯುಮೆಂಬ —

ಕಂ॥ ತನುಜೆಯರಱುವರುಮಭಿಮಾ ।
ನನಿಧಾನೆಯರನುಪಮಾನೆಯರ್ ಕರಮೆಸೆದರ್ ॥
ಮನಸಿಜ ವಿಜಯಪತಾಕೆಯ ।
ರನವದ್ಯ ವಿವೇಕೆಯರ್ ದಲವರಿಂ ಮತ್ತಂ ॥ (೪೪)

ದ್ರುತಪದಂ॥ ಕಿಱಿಯವಳ್ ಬಹುಕಳಾಜ್ಞತೆಯಿಂದಂ ।
ಮಿಱುಪ ರೂಪರಮಣೀಯತೆಯಿಂದಂ ॥
ನೆಱೆದ ಜವ್ವನದ ಸಂಗತಿಯಿಂದಂ ।
ಮೆಱೆವಳಿಂದುಮುಖಿ ಚಂದನೆಯೆಂಬಳ್ ॥ (೪೫)

ಕಂ॥ ಒಂದುದಿನಮಾಕೆ ತನ್ನಯ ।
ಮಂದಿರದಿಂ ಪಿಂದೆ ಮೆಱೆವ ಬನದೊಳ್ ಮನದೊಳ್ ॥
ಸಂದಣಿಸಿದ ಮುದದಿಂ ಮಾ ।
ಕಂದದೊಳಾಂದೋಳಕೇಳಿಲೀಳೆಯೊಳಿರ್ದಳ್ ॥ (೪೬)

ಚಂ॥ ಚತುರ ಸಖೀಜನಂಗಳ ವಿರಾಜಿಪ ಗೀತರಸಾಮೃತಂಗಳಿಂ ।
ವಿತತ ವನಾಂತರಾಳಮನೆ ತೆಕ್ಕನೆ ತೀವಿ ನೃಪಾತ್ಮಜಾತೆ ತಾ ॥
ನತಿ ಮುದದಿಂದೆ ಚಂದನೆ ವಲಂ ತಳಿರುಯ್ಯಲನಾಡೆ ನಾಡೆಯುಂ ।
ರತಿಪತಿ ನೋಡಿ ರಾಗರಸಸಾಗರದೊಳ್ ಜಳಕೇಳಿಯಾಡಿದಂ ॥ (೪೭)

ವ। ಆಗಳ್ ಮನೋವೇಗನೆಂಬನೊರ್ವನೆಂಬರಚರನಂಬರತಳದೊಳ್ ಸ್ವೇಚ್ಛಾವಿಹಾರಭರದಿಂ ಪೋಗುತ್ತುಮಿರ್ದು—

ಕಂ॥ ಸತಿಯರ ಗೀತರವಾಕ್ಷಿ।
ಶ್ರುತಿಗಳ್ ಕವಿತಂದು ಬೇಗದಿಂದಾತ್ಮೀಯ।
ಶ್ರುತಿ ವಲ್ಮೀಕ ವಿವರಮಂ।
ಪ್ರತಿವೇಶಿಸೆ ನಿಂದನಾಸ್ಮಿತಾಂತಃಕರಣಂ॥ (೪೮)

ವ॥ ತದುದ್ಯಾನಮಂ ನಯನಾತಿಕೌತುಕಾದಾಸೆಮಂ ಭೋಂಕೆನೆ ಕಂಡು ತದಂತ ರ್ಧಾಳಕ್ಕವತರಿಸಿ—

ಕಂ॥ ಅನಿಮಿಷವನಿತೆಗೆ ಚೆಲ್ವಿಂ।
ದೆನಸುಂ ಮಿಗಿಲೀಕೆಯೆನಿಪ ತಚ್ಛಂದನೆಯಂ॥
ವನಜಾನನೆಯಂ ನೃಪನಂ।
ದನೆಯಂ ತಳಿರುಯ್ಯಲಾಡುತಿರ್ದಂಗನೆಯಂ॥ (೪೯)

ವ॥ ಕಂಡತಿಪ್ರಚಂಡ ಕುಸುಮಕೋದಂಡಕಾಂಡಖಂಡಿತಹೃದಯನಾಗಿ ಬೇಗದಿಂ ಮಡದಿಯಂ ಪಿಡಿದುಕೊಂಡು ಗಗನಕ್ಕೊಗೆದು ವಿಮಾನದೊಳಿರಿಸಿ ಹರುಷದಿಂ ಮನೋವೇಗದಿಂ ಪೋಗುತ್ತುಮಾಗುಣವತಿಯನೇಗೆಯ್ದುಂ ತನಗೆ ಬಸಬಾಗಿಸಲ್ ನೆಱಿಯದಱಗುಲಿ ಮುಱುಗಿ ಕೋಪಾಟೋಪದಿಂ ಪೇರಡವಿಯೊಳಾರಮಣಿಯನೀಡಾಡಿ ಪೋಪುದುಂ, ಆಕೆ ಭೀಕರಾಕಾರಮಂ ತಳೆದು ಬಳೆದ ಪಱುವಂ ಬಳಸಿಯುಂ ನೋಡಿ—

ಕಂ॥ ಆನಂದನನಿಭವಿಭವೋ।
ದ್ಯಾನದೊಳಿರವೆತ್ತ ಸುತ್ತಲುಂ ಜೀರೆಂಬೀ॥
ಕಾನನದೊಳಿರ್ಪುದೆತ್ತ ಮ।
ದೇನಃಪರಿಪಾಕಮಿಂತಿದಲ್ಲದೆ ಪೆಱತೇಂ॥ (೫೦)

ಎಂದಾ ನರಪತಿನಂದನೆ।
ಚಂದನೆ ವಂದನೆಯನನಘ ಜಿನಚರಣಾಬ್ಜ॥
ಕ್ಕಂದಾನಂದದೆ ಮನದೊಳ।
ನಿಂದಿತೆ ಮಾಡುತ್ತುಮಿರ್ದಳಿರ್ಪುದುವೊರ್ವಂ॥ (೫೧)

ವ॥ ಕಿರಾತಕಾತರನಾ ತರುಣಿಯಂ ಕಂಡು ಮನದೆಗೊಂಡು ವಿಧುಲೇಖೆಯಂ ವಿಧುಂತುದಂ ಪಿಡಿವಂತೆ ಪಿಡಿದಿರ್ಪುದುಮಾಪ್ರಸ್ತಾವದೊಳ್—

ಕಂ॥ ವತ್ಸಾಭಿಧಾನವಿಷಯದ।
ತತ್ಸಂಪತ್ತಿಯನೆ ತಳೆದ ಕೌಶಾಂಬಿಯೊಳ॥
ಹರ್ತ್ಸಮಯವರ್ತಿ ಸಜ್ಜನ।
ವತ್ಸಳನೆನಿಸಿರ್ದ ವೃಷಭದತ್ತಾಭಿಖ್ಯಂ॥ (೫೨)

ವ॥ ಆ ವೈಶ್ಯೋತ್ತಮಂ ವನದ್ರವ್ಯಾಹರಣಪರಿಣತಿಯಿಂನಾದುರಂತ ಕಾಂತಾರಾಂತರಾಳದೊಳ್ ತೊಳಲ್ತುರುತುಂ ಕ್ರಿಯಾಪದಪ್ರಾಗ್ದೇಶದಂತುಪಸರ್ಗಾಕ್ರಾಂತೆಯಾಗಿರ್ದ ನಿಶಾಟನಿಕಟಕಾಂತೆಯುಂ ತೊಟ್ಟನೆ ಕಟ್ಟಿದಿರೊಳ್ ಕಂಡು ದಯಾಮಂಡಿತ ಮಾನಸನಪ್ಪುದಱಿಂ ಮೃದುಸದುಪದೇಶ ಪೇಶಲಂಗಳಪ್ಪ ವಚನನಿಚಯಂಗಳನಾ ನಿರೋಧಕನನಬಾಧಕನಪ್ಪಂತು ಬೋಧಿಸಿ ದೀನಾರಮನೇನಾನುಮನಿತ್ತು ತತ್ತರುಣಿಯ ಸೆಱೆಯುಂ ಪೆಱಪಿಂಗಿಸಿ ನಿಜಪುರೀವರಕ್ಕೊಡಗೊಂಡು ಪೋಗಿ—

ಕಂ॥ ನಿನತುಮಗಳಪ್ಪಳೀಕೆಯು ।
ನನುನಯದಿಂದೆಲಗೆ ಸಲಹು ಮನ್ನಿಸು ನೀನೆಂ ॥
ದನವದ್ಯವೃತ್ತನಿತ್ತಂ ।
ತನತ್ತು ವಲ್ಲಭೆಗೆ ಶೀಲವತಿಯಂ ಸತಿಯಂ ॥ (೫೩)

ವ॥ ಅಂತು ವೈಶ್ಯವದನದರ್ಪಣಂ ಸಮರ್ಪಿಸಿ ಪೋಗೆ ಚಂದನೆಯ ಚಂದಮಂ ಸೆಟ್ಟಿತಿ ದಿಟ್ಟಿಸಿ ನೋಡಿ—

ಉ॥ ಎತ್ತಣಿನಕ್ಕೆ ಬಂದಳವಳಪ್ಪೊಡೆ ನೆಟ್ಟನೆ ಗಾಡಿಕಾರ್ತಿ ಕ ।
ಣ್ಕೆತ್ತಿ ಮದೀಶನಂ ತನಗೆ ಮೆಲ್ಲನೆ ವಲ್ಲಭನಾಗೆ ಮಾಱ್ಕುಮು ॥
ದ್ವೃತ್ತತೆಯಿಂದಮೇಕೆ ನಮಗೀಕೆಯ ಕುತ್ತಮೆನುತ್ತೆ ಚಿತ್ತದೊಳ್ ।
ವೃತ್ತಪಯೋಧರದ್ವಿತಯೆ ಚಿಂತಿಸಿ ಕಂಡಳದೊಂದುಪಾಯಮಂ ॥ (೫೪)

ವ॥ ಅಂತು ಲಬ್ಧೋಪಾಯೆಯಪ್ಪ ವಣಿಗೀಶಜಾಯೆ ಚಂದನೆಯನೇನಾನುಮೊಂದು ಪೊಲ್ಲಮೆಯನಿಲ್ಲದುದನುದ್ಭವಿಸಿ ನೆವದಿಂ ಶೃಂಖಳಾ ಬಂಧನೆಯಂ ಮಾಡಿ ತಲೆವಾಗಿಲ ಕೆಲದ ಪುಲುಮನೆಯೊಳಿರಿಸಿ ಕೊಚ್ಚನಿಕ್ಕಿ ನಡಸುತ್ತುಮಿರ್ದಳಪ್ಪುದುಂ—

ತ್ರಿಪದಿ॥ ವೀರಭಟ್ಟಾರಕಂ ಕಾರುಣ್ಯಜಲಧಿ ವಿ ।
ಹಾರಿಸಿ ಸಕಳಜನಪದಂಗಳೊಳಘ ॥
ಹಾರಿ ತೆತ್ಪುರಕೆ ನಡೆತಂದಂ ॥ (೫೫)

ವ॥ ಅಂತು ವಿಹಿತವಿಶಿಷ್ಟೋಪವಾಸಂ ಪಾರಣಾವಾಸರದೊಳ್ ಕಾಯಸ್ಥಿತಿ ನಿಮಿತ್ತಂ ಚರ್ಯಾಮಾರ್ಗದೊಳ್ ಬರುತ್ತುಮಿರೆ ತದ್ವೃತ್ತಾಂತಮಂ ಸಸಂಭ್ರಮದ್ವಾರ ಪುರುಷರಿನವಧಾರಿಸಿ—

ಕಂ॥ ಚಂದನೆ ಮುನಿಯಂ ನಿಲಿಸುವೆ ।
ನೆಂದತಿ ಮುದದಿಂದೆ ಪರಿವ ಪದದೊಳ್ ಪದದೊಳ್ ॥
ಸಂಧಿಸಿದಾ ಸಂಕಲೆ ಪಱಿ ।
ದೊಂದಿನಿತುಂ ತೋಱದಂತಡಂಗಿದುದೆಳೆಯೊಳ್ ॥ (೫೬)

ವ॥ ಅಂತು ಜಗನ್ನಾಥ ಸನ್ನಿಧಿಗಮನ ಸಾಮರ್ಥ್ಯದಿಂ ಸತಿಯ ಸಂಕಲೆ ಭೋಂಕೆನೆ ಪಱಿದು ಪಾಱೆ ಲೀಲೆಯಿನಿದಿರ್ಗೊಂಡು ಸನ್ಮತಿಸ್ವಾಮಿಯುಂ ಸಮಯಸಮುಚಿತ ಕ್ರಮದಿಂ ನಿಲಿಸಿ ನಿಜನಿವಾಸಕ್ಕೆ ಬಿಜಯಂಗೆಯ್ಸಿ ಪೂತೋಚ್ಚಾಸನದೊಳಿರಿಸಿ—

ಚಂ॥ ಪದಯುಗಳಂಗಳಂ ತೊಳೆದು ಪೂಜಿಸಿ ಬಂದಿಸಿ ಕಾಂತೆ ಕಾಯ ವಾಕ್ ।
ಹೃದಯವಿಶುದ್ಧಿಯಿಂದೆ ನಿರವದ್ಯಮನನ್ನಮನೀಯೆ ತದ್ಗುಣಾ ॥
ಸ್ಪದನದನಾಂತು ತನ್ನುದರದೊಳ್ ನಿನಗಕ್ಷಯಮಕ್ಕೆ ದಾನಮೆಂ ।
ದುದಿತ ದಯಾಧ್ವಜಂ ಪರಸಿ ಪೋಪುದುಮಾಪದದೊಳ್ ಸುರಾಧ್ವದಿಂ ॥ (೫೭)

ಕಂ॥ ವಸುಕುಸುಮವರ್ಷಣಂ ಮಂ ।
ದಸಮೀರಣಮನಿಮಿಷಪ್ರಶಂಸೋಕ್ತಿ ಸುರೋ ॥
ಲ್ಲಸಿತ ಪಟಹಸ್ವನಂ ನಿಮಿ ।
ರ್ದೆಸೆದುವು ಚಂದನೆಯ ಮನೆಯ ಮಿಸುಪಂಗಣದೊಳ್ ॥ (೫೮)

ವ॥ ಅಂತು ಪೌರಾಶ್ಚರ್ಯಕಾರಿಯಾದ ಚಂಚತ್ಪಂಚಾಶ್ಚರ್ಯಪ್ರಪಂಚಮುಮನಕ್ಷೀಣದರ್ಶನಪ್ರಕಾಶನಮುಮಂ ಪ್ರತ್ಯಕ್ಷಮೀಕ್ಷಿಸಿ ವೃಷಭದತ್ತಂ ವಿಸ್ಮಯಾಯತ್ತಚಿತ್ತನಾಗಿ ಚಂದನೆಯಿರ್ದ ಮಂದಿರಕ್ಕೆ ಮಂದಗತಿಯಿಂ ಬಂದು ತದ್ವೃತ್ತಾಂತ ಪೂರ್ವಾಪರಾಂತಮಂ ಸವಿಸ್ತರಮಱಿದು ಕೃತಾಪರಾಧೆಯಪ್ಪ ತನ್ನ ಸತಿಯನಾಸನ್ನುತೆಯ ಪದಪಯೋಜಕ್ಕೆಱಗಿಸಿ ಮೆಱೆವ ವಸ್ತ್ರಾಭರಣರಾಜಿಯಿಂ ಪೂಜಿಸಿ ತದನಂತರಂ ತತ್ಕಾಂತೆಯುಂ ತಾನೆ ಮುಂದಿಟ್ಟೊಡಗೊಂಡು ಮಹಾವಿಭೂತಿಯಿಂ ನಡೆದು ನಂದನಾವಿಯೋಗ ದುಃಸಹದುಃಖನಾಟಕನಾಗಿರ್ದ ಚೇಟಕರಾಜಂಗೆ ಸಮರ್ಪಿಸಿ ಸಂತಸಮಂ ನಿಮಿರ್ಚಿದ ನೆನ್ನೆಗಮಿತ್ತಲ್—

ಮಲ್ಲಿಕಾಮಾಲೆ॥ ಘೋರವೀರತಪೋವಿಶೇಷ ವಿಧಾನದಿಂದೆಸೆವಾ ಮಹಾ ।
ವೀರಯೋಗಿಗೆ ಪೋಗಿ ಪನ್ನೆರಡಬ್ದಮುದ್ಧ ಯಶೋಧನಂ ॥
ಸ್ಫಾರವೈಭವದಿಂ ಬುಧಾವಳಿಯಿಂ ವಧೂಜನದಿಂ ಜಗ ।
ತ್ಸಾರಮಾದುದನೆಯ್ದಿದಂ ವರಜೃಂಭಿಕಾಪುರಮಂ ಜಿನಂ ॥ (೫೯)

ವ॥ ಅಂತೆಯ್ದಿ ತದುದ್ದಾಮ ಗ್ರಾಮಸೀಮ ಭೂಮಿಯೊಳ್ ಪರಿದು ಪಿರಿದು ಮೆಸವ ರಿಜುಕೂಲೆಯೆಂಬ ಮಹಾತರಂಗಿಣಿಯ ತೀರದಲ್ಲಿ—

ಕಂ॥ ಒದವಿರ್ದ ಶಾಲವೃಕ್ಷದ ।
ಮೊದಲೊಳ್ ಪಜ್ಜಳಿಪ ಜಂತುರಹಿತ ಶಿಳಾಪ ॥
ಟ್ಟದ ಮೇಲೆ ಮೂಡಮೊಗದಿಂ ।
ತ್ರಿದಶಾರ್ಚಿತ ಪಾದಪಂಕಜಂ ನಿಂದಿರ್ದಂ ॥ (೬೦)

ಕಂ॥ ಎರಡುಂ ಮೆಡಂಗಳೆಡೆನಾ।
ಲ್ವೆರಲೆರಡುಂ ತೊಳಗುವುಂಗುಟಂಗಳ ಮಧ್ಯಂ॥
ಪರಿಕಿಪೊಡೊರ್ಗೇಣ್ ತೆಱವಾ।
ಗಿರೆ ನಿಂದನಕಂಪನುಚಿತ ರುಜ್ವಾಗತದೊಳ್॥ (೬೧)

ನಯುನಯುಗಂ ನಾಸಾಗ್ರ।
ಪ್ರಯುಕ್ತಮವ್ಯಕ್ತವರ್ತನಂ ಪ್ರಾಣಾವಾ॥
ನಯುಗಂ ಸುಶ್ಲಿಷ್ಟಂ ಶೋ।
ಭೆಯನಾಂತುದು ಯೋಗನಿಷ್ಠನೋಷ್ಠದ್ವಿತಯಂ॥ (೬೨)

ಅವಯವಮನಿತಱಿಕೊಳಂ ವಿಕ್ರ।
ತಿವಲಂ ಪರಮಾಣುಮಾತ್ರಯೇಂ ನೋಱಿಪ್ಪೊಡೆ ತೋ॥
ಱುವುದಲ್ಲೆನಿಪ್ಪಯೋಗಿ।
ಪ್ರವರನ ನಿಲವೀಯದಾರ್ಗೆ ಪೆರ್ಚಿದ ನಲವಂ॥ (೬೩)

ವ॥ ಅಂತು ನಿತಾಂತಕಾಂತ ಶಾಂತರಸಪ್ರಸರ ಪ್ರಪೂರ್ಣ ಗಂಗಾತರಂಗಿಣೀ ಪ್ರಭವ ಪ್ರಾಳೇಯಶೈಳೇಂದ್ರಮೆನಿಸಿ ಸುರುಚಿರ ಪ್ರತಿಮಾಯೋಗನಿಯೋಗಯೋಗೀಂದ್ರನಿರ್ದ ತತ್ಪುಣ್ಯಾರಣ್ಯದಲ್ಲಿ—

ಮ॥ ಕರಿಯುಂ ಕೇಸರಿಯುಂ ಕುರಂಗಕುಳಮುಂ ಶಾರ್ದೂಲಮುಂ ಮಿಕ್ಕಮುಂ।
ಗುರಿಯುಂ ತೀವ್ರವಿಷಾಹಿಯುಂ ಚಟುಳ ಕಾಕಾನೀಕಮುಂ ಘೂಕಮುಂ॥
ಸ್ಫುರದಾತ್ಮೀಯ ವಿರೋಧವರ್ಧನಮನಾದಂ ಬಿಟ್ಟು ಮಿತ್ರತ್ವದೊಳ್।
ಪೊರೆದಲ್ಲಲ್ಲಿಗೆ ಲೀಲೆಯಿಂ ನಲಿವುವತ್ಯಾಶ್ಚರ್ಯಮಪ್ಪನ್ನೆಗಂ॥ (೬೪)

ವ॥ ಅಂತು ಪರಮ ಕೌತುಕಕಾರಿಯಾದ ಚಾರುಚತುರಯೋಗದೊಳಿರ್ದ ಯೋಗೀಶ್ವರಂ ಕ್ಷಾಯಿಕಸಮ್ಯಕ್ತ್ವಾದಿ ಪ್ರಸಿದ್ಧಸಿದ್ಧಗುಣಂಗಳೆಂಟುಮಂ ತತ್ಕಳಾಪ ಪ್ರಾಪಣೇಚ್ಛೆಯಿಂ ಪರಿಭಾವಿಸುತ್ತುಂ ಉತ್ತಮಧ್ಯಾನಾಧೀನಮಾನಸನಾಗಿ—

ಕಂ॥ ಭುವನಸ್ತುತನಾಜ್ಞಾಪಾ।
ಯವಿಚಯಮೆಂಬೆರಡುಮಂ ವಿಪಾಕ ಸುಸಂಸ್ಥಾ॥
ನವಿಚಯಮೆಂಬೆರಡುಮನುದಿ।
ತ ವಿಶೋಧಿ ವಿಶೇಷಭಾವದಿಂ ಭಾವಿಸಿದಂ॥ (೬೫)

ವ॥ ಮತ್ತಮನಿತ್ಯತಾದ್ಯನುಪ್ರೇಕ್ಷೆಗಳನೀರಾಱುಮಂ ಧ್ಯಾನಿಸುತ್ತುಮಿಂತು ನಿರ್ಮಳಧ್ಯಾನಾನಂತರಂ ವಿಶದಲೇಶ್ಯಾವಿಶುದ್ಧನಧಃಪ್ರವೃತ್ತಾದಿ ಕರಣತ್ರಯದಿನ

ನಂತಾನುಬಂಧಿಗಳನುಱಿದ ಪನ್ನಿತ್ತಱದ ಕಷಾಯಂಗಳೊಳ್ ವಿಸಂಯೋಜಿಸಿ, ಸಮನಂತರಮಿನಿತ್ತು ಬೇಗಂ ವಿಶ್ರಮಿಸಿ ಪ್ರಥಮಕಥಿತಕ್ರಮದಿಂ ದರ್ಶನಮೋಹನೀಯ ತ್ರಯಕ್ಕೆ ಲಯಮನಿತ್ತು—

ಕಂ॥ ಇಂತೇೞುಂ ಪ್ರಕೃತಿಗಳಂ ।
ಶಾಂತರಸಾಂಬೋಧಿ ಕಿಡಿಸಿ ತಕ್ಷಯದಿಂದ ॥
ತ್ಯಂತಂ ಕ್ಷಾಯಿಕ ಸಮ್ಯ ।
ಕ್ತ್ವಂ ತನ್ಮುನಿಪತಿಗೆ ಸಮನಿಸಿತ್ತಾಪದದೊಳ್ ॥ (೬೬)

ವ॥ ಅನಂತರಮಂತರ್ಮುಹೂರ್ತಪರ್ಯಂತಂ ಪ್ರಮತ್ತಾಪ್ರಮತ್ತ ಪರಾವರ್ತನ ಸಹಸ್ರಂಗಳಂ ಕಳಿಪಿ ಕ್ಷಪಕಶ್ರೇಣಿಪ್ರಾಯೋಗ್ಯಾಧಃಪ್ರವೃತ್ತಿಕರಣತಾತಿಶಯಾ ಪ್ರಮತ್ತಗುಣಸ್ಥಾನದೊಳ್ ಸ್ಥಿತಿಬಂಧಾಪಸರಣಂಗೆಯ್ದಿನಿತಾನುಂ ಬೇಗದಿನಪೂರ್ವ ಕರಣ ಕ್ಷಪಕಗುಣಸ್ಥಾನಮುಂ ಪೊರ್ದಿ ಪೃಥಕ್ತ್ವ ವಿತರ್ಕ ವಿಚಾರಮೆಂಬ ಮೊದಲ ಶುಕ್ಲಧ್ಯಾನಮಂ ಧ್ಯಾನಿಸುತ್ತುಮಾಯುಃಕರ್ಮಮುಱಿಯುಱಿದಖಿಳಕರ್ಮಂಗಳಂ ಸ್ಥಿತ್ಯನುಭಾಗಕಾಂಡಕ ಘಾತಗುಣಸಂಕ್ರಮಣ ಪ್ರದೇಶಗುಣಶ್ರೇಣೀನಿರ್ಜರೆಗಳಿ ನನುಕ್ರಮದಿಂ ಕಿಡಿಸುತ್ತುಂ ಅನಿವೃತ್ತಿಕರಣ ಕ್ಷಪಕಗುಣಸ್ಥಾನಮನೆಯ್ದಿಯಂತ ರ್ಮುಹೂರ್ತದೊಳ್ ನಿದ್ರಾನಿದ್ರಾ ಪ್ರಚಳಾಪ್ರಚಳಾ ಸ್ತ್ಯಾನಗೃದ್ಧಿ ನರಕತಿರ್ಯಗ್ಗತಿ ತತ್ಪ್ರಾಯೋಗ್ಯಾನುಪೂರ್ವ್ಯೇಕೇಂದ್ರಿಯ ವಿಕಳೇಂದ್ರಿಯ ಜಾತ್ಯಾತಪೋದ್ಯೋತ ಸ್ಥಾವರ ಸಾಧಾರಣ ಸೂಕ್ಷ್ಮಂಗಳೆಂಬಾ—

ಕಂ॥ ಪದಿನಾಱುಂ ಪ್ರಕೃತಿಗಳಂ ।
ಸದಮಳ ಚರಿತಾವಭಾಸಿ ಮುನಿಯಿನಿತುಱಿವಿ ॥
ಲ್ಲದ ತೆಱದಿಂದಮೆ ಪೆಱದೇಂ ।
ವಿದಳಿಸಿಯಂತರ್ಮುಹೂರ್ತದಿಂದಂ ಮತ್ತಂ ॥ (೬೭)

ವ॥ ವಿಶುದ್ಧ ಪರಿಣಾಮ ಪರತಂತ್ರನಪ್ರತ್ಯಾಖ್ಯಾನಪ್ರತ್ಯಾಖ್ಯಾನಮೆಂಬೆಂಟು ಕಷಾಯಂಗಳುಮಂ ನಪುಂಸಕವೇದ ಸ್ತ್ರೀವೇದ ಹಾಸ್ಯರತ್ಯರತಿ ಶೋಕಭಯ ಜುಗು ಪ್ಸಾಭಿದಾನನೋಕಷಾಯ ಪುರುಷವೇದ ಸಂಜ್ವಲನ ಕ್ರೋಧಮಾನಮಾಯಾ ಕಷಾಯಂ ಗಳುಮಂ ಬೇಱಿಬೇಱಿ ಪರಿವಿಡಿಯಿಂ ಕಿಡಿಸಿ ಬಾದರಲೋಭಸಂಜ್ವಲನಮುಮನದಿರ್ಪಿ ಸಾಮಯಿಕಚ್ಛೇದೋಪಸ್ಥಾಪನಾವಿಶುದ್ಧಿ ಸಂಯಮ ಸಮೇತಾನಿವೃತ್ತಿಕರಣ ಕ್ಷಪಕ ಗುಣಸ್ಥಾನಮುಂ ದಾಂಟಿ ಸೂಕ್ಷ್ಮ ಸಾಂಪರಾಯ ಸಂಯಮಸಮನ್ವಿತಂ ಸೂಕ್ಷ್ಮಸಾಂಪರಾ ಯಕ್ಷಪಕನಾಗಿ ಸೂಕ್ಷ್ಮಲೋಭ ಕಷಾಯಪ್ರಕೃತಿಯುಮಂ ನಷ್ಟಂ ಮಾಡಿಯಷ್ಟವಿಂಶತಿ ವಿಕಲ್ಪಮೋಹನೀಯ ಮಹಾವೈರಿಬಲಮನಿಂತು ಗೆಲ್ದು ವೀತರಾಗಯಥಾಖ್ಯಾತಚಾರಿತ್ರ

ಚರಿತ್ರನುಂ ಕ್ಷೀಣ ಕಷಾಯ ವೀತರಾಗಚ್ಛದ್ಮಸ್ಥ ಸಂಯಮಗುಣಸ್ಥಾನಮಂ ಪಡದೇಕತ್ವ ವಿತರ್ಕವಿಚಾರಮೆಂಬೆರಡನೆಯ ಶುಕ್ಲಧ್ಯಾನದಿಂ ಬಹಳಪ್ರದೇಶ ನಿರ್ಜರೆಗಳಂ ಮಾಡುತ್ತುಮಾಗುಣಸ್ಥಾನದುಪಾಂತ್ಯಸಮಯದೊಳ್ ನಿದ್ರಾಪ್ರಚಳೆಗಳಂ ಕಿಡಿಸಿ—

ಕಂ॥ ಚರಮಸಮಯದೊಳೆ ಬೋಧಾ।
ವರಣಮನಯ್ದಂತರಾಯಮಯ್ದುಱಿದ ದೃಗಾ॥
ವರಣಮವು ನಾಲ್ಕಿನಿತ್ತುಮ।
ನುರುಮಹಿಮಂ ತೂಳ್ದಿ ತಾಳ್ದಿದಂ ಗುಣಗಣಮಂ॥ (೭೮)

ವ॥ ಆಗಳ್—

ಸ್ರ॥ ಘಾತಿವ್ರಾತಾಂಧಕಾರಂ ಪರೆಯೆ ಸಕಳ ಸದ್ಭವ್ಯಸಂದೋಹ ಪಾಥೋ।
ಜಾತಕ್ಕುದ್ದ್ಯದ್ವಿಕಾಸಂ ಸಮನಿಸೆ ವಿಳಸದ್ಧರ್ಮಚಕ್ರಕ್ಕೆ ಹರ್ಷಂ॥
ಸ್ಫೀತಂ ತಾನಾಗೆ ಲೋಕತ್ರಿತಯನುತ ಮಹಾವೀರನಾಥೋದಯ ಪ್ರ।
ಖ್ಯಾತಾದ್ರೀಂದ್ರಾಗ್ರದೊಳ್ ಪುಟ್ಟಿದುದನುಪಮ ನಿರ್ವಾಣಬೋಧಾರ್ಕಬಿಂಬಂ॥ (೭೯)

ಕಂ॥ ನವಕೇವಲಲಬ್ಧಿಗಳು।
ದ್ಭವಿಸೆ ವಿರಾಜಿಸಿದ ಪರಮ ಪುರುಷನ ಚರಮ॥
ಪ್ರವಿಮಳವಪು ಕರಮೆಸೆದುದು।
ರವೀಂದುಕೋಟಿಪ್ರಭಾಪ್ರಭಾವೋದಯದಿಂ॥ (೮೦)

ವೈಶಾಖಮಾಸ ಸಿತದಶ।
ಮೀ ಶುಭದಿನ ಹಸ್ತತಾರೆಗಳ್ ದೊರೆಕೊಳೆ ನಿಃ॥
ಕಾಶಮನೆಯ್ದಿದುದನಘ ಜಿ।
ನೇಶನ ಘನಸಕಳ ವಿಮಳ ಕೇವಳಬೋಧಂ॥ (೮೧)

ಪರಮನ ಪರಮೌದಾರಿಕ।
ಶರೀರಮುಂ ಕೇವಳಾವಗಮದುದಯದೊಳು॥
ರ್ವರೆಯಿಂ ಗಗನಕ್ಕಯ್ದು।
ಸಿರ ಬಿಲ್ಲಂತರದಿನೊಗೆದು ಸೊಗಯಿಸಿತೆನಸುಂ॥ (೮೨)

ಮತಿಯುಂ ಶ್ರುತಮುಮವಧಿಯುಂ।
ವಿತತ ಮನಃಪರ್ಯಯಾವಗಮಮುಂ ಕಿಡೆ ಸ॥
ನ್ಮತಿಗೆ ಸಮನಿಸಿತು ಕೇವಳ।
ಮತೀಂದ್ರಿಯ ಜ್ಞಾನಮಕ್ರಮಮವ್ಯವಧಾನಂ॥ (೮೩)

ಪೃಥ್ವಿ॥ ಪ್ರಸನ್ನತೆಯನಾಂತುವಾಸ್ಪದದೊಳಾಸೆಗಳ್ ಪೆತ್ತುದಾ ।
ಗಸಂ ವಿಶದಭಾವಮಂ ತಿೞಿದು ಶೋಭೆವೆತ್ತಿರ್ದುದೀ ॥
ವಸುಂಧರೆಯ ಮೇಲೆ ತೋರ್ಪ ಸಲಿಲಾಶಯಂಗಳ್ ವಿರಾ ।
ಜಿಸಿತ್ತು ವಸುಧಾತಳಂ ಗತಕರಾಳಧೂಳೀಕುಳಂ ॥ (೭೪)

ಚಂ॥ ಸುರಿದುವು ಕಲ್ಪಭೂಮಿರುಹ ಸಂಕುಳದಿಂ ಸುರಭಿಪ್ರಸೂನಕೋ ।
ತ್ಕರಮಿರದೊಯ್ಯನೂದಿಱಿದು ಕಂಪಿನ ಸೊಂಪಮರ್ದಿರ್ದ ತಣ್ಣೆಲರ್ ॥
ಧರೆಯ ಸಮಸ್ತಭೂಜಲತಿಕಾದಿಗಳಾದಮ ಪಲ್ಲವಂಗಳಂ ।
ವರ ಸುಮನಃಫಳಂಗಳುಮನಾಂತು ವಿರಾಜಿಸುತ್ತಿರ್ದುವೆತ್ತಲುಂ ॥ (೭೫)

ಸ್ರ॥ ಪೀನಂ ಶಂಖಸ್ವನಂ ಭಾವನಭವನಸಮೂಹಂಗಳೊಳ್ ಭೂರಿ ಭೇರೀ ।
ಧ್ವಾನಂ ತತ್ಕಾಲದೊಳ್ ವ್ಯಂತರನಿಳಯನಿಕಾಯಂಗಳೊಳ್ ಮಿಕ್ಕ ಸಿಂಹ ॥
ಧ್ವಾನಂ ಜ್ಯೋತಿಷ್ಕಧಾಮಪ್ರಕರದೊಳುರು ಘಂಟಾರವಂ ಕಲ್ಪವಾಸಿ ।
ಸ್ಥಾನಾನೀಕಂಗಳೊಳ್ ಪೊಣ್ಮಿದುದೊದವಿದುದಸ್ವಪ್ನ ಪೀಠಪ್ರಕಂಪಂ ॥ (೭೬)

ಕಂ॥ ಏನಂ ಪೇೞ್ವುದೊ ಸಕಳ ।
ಜ್ಞಾನಂ ಸನ್ಮತಿಗೆ ಸಮನಿಸಿದ ಪದದೊಳ್ ಜೀ ॥
ವಾನೀಕಾಪ್ಯಾಯನಕರ ।
ಮಾನಂದಮನೂನಮಾಯ್ತು ಭುವನತ್ರಯದೊಳ್ ॥ (೭೭)

ಮ॥ಸ್ರ॥ ಇನಿತೊಂದಾಶ್ಚರ್ಯಮಂ ಕಂಡನಿಮಿಷರಮಣಂ ಸುಪ್ರಯುಕ್ತಾವಧಿಜ್ಞಾ ।
ನನಿಧಾನಂ ವರ್ಧಮಾನಪ್ರಭುಗೊಗೆದ ಲಸತ್ಕೇವಲಜ್ಞಾನಮಂ ಪಾ ॥
ವನ ಭಕ್ತಿಪ್ರಾಜಿತಂ ತಾನಱಿದಿಱಿದು ನಿಜೋಚ್ಚಾಸನೋತ್ಸಂಗದಿಂದಂ ।
ವಿನತಂ ತದ್ಬೋಧಪೂಜಾವಿಧಿಗೆ ಬುಧನುತಂ ಪೋಗಲುದ್ಯುಕ್ತನಾದಂ ॥ (೭೮)

ವ॥ ಅಂತು ಕಂತುಕೃತಾಂತನೆನಿಸಿದ ವೀರಭಟ್ಟಾರಕನ ಕೇವಲಾವಗಮಸಮು ತ್ಪತ್ತಿಯೊಳ್ ಕೃತ್ಯಮೆನಿಪ ಚತುರ್ಥ ಕಲ್ಯಾಣ ಮಹೋತ್ಸವ ವಿಧಿತ್ಸುತೆಯಿಂ ತತ್ಸು ರೇಶ್ವರಂ ಚತುರ ಚತುರಮರ ಸಮವಾಯಸಮನ್ವಿತಂ ಸುರಲೋಕದಿಂ ಧರೆಗೆ ಪರಮ ವಿಭೂತಿಯಿಂದವತರಿಪಾಗಳ್ ॥

ಚಂ॥ ಸುರುಚಿರ ರತ್ನಭೂಷಣಗಣದ್ಯುತಿಯುಂ ನಿಜಲೋಳಲೋಚನ ।
ಸ್ಫುರಿತ ಮರೀಚಿಯುಂ ಕರತಳಸ್ಥಿತ ಕಲ್ಪತರುಪ್ರಸೂನಕೋ ॥
ತ್ಕರವರಗಂಧಮುಂ ನಿಖಿಳದಿಗ್ವಳಯಾಂತರಮಂ ಮುಸುಂಕೆ ಭಾ ।
ಸುರಸುರಸುಂದರೀಜನದ ಸಂದಣಿ ಬಂದುದದೊಂದು ಲೀಲೆಯಿಂ ॥ (೭೯)

ಮಾಲಿನಿ॥ ಅಮರರಮಣನಿಂತಾಶ್ಚರ್ಯಮಂ ಮಾಡುತುಂ ಬಂ।
ದಮಳಿನನುತಿ ಮುನ್ನಂ ತನ್ನದೊಂದಾಜ್ಞೆಯಿಂದಂ॥
ಸಮೆಯೆ ಧನದನುದ್ಯದ್ಭಕ್ತಿಯಿಂ ಶೋಭೆವೆತ್ತಾ।
ಸಮವಸರಣದಂತರ್ಭಾಗಮಂ ಪೋಗಿ ಪೊಕ್ಕಂ॥ (೮೦)

ವ॥ ಅಂತು ಪೊಕ್ಕು ನಿಕ್ಕುವಂ ನಿಜವಿಳೋಚನಕ್ಕಂ ಮನಕ್ಕಂ ಪ್ರೀತಿಕೌತುಕಂಗಳಂ ಸಂಗಳಿಪ ಲಕ್ಷ್ಮೀಮಂಡಪಮಧ್ಯಾಧ್ಯಾಸಿತ ಭಾಸುರಕೇಸರಿವಿಷ್ಟರಾಗ್ರಮನಲಂಕರಿಸಿರ್ದ ತ್ರಿಲೋಕೇಶ್ವರನಂ ತ್ರಿಃಪ್ರದಕ್ಷಿಣಂಗೆಯ್ದು ಸರ್ವಾಂಗಾಲಿಂಗಿತೋರ್ವೀತಳನಾಗಿ ಸಮನಂತರಂ ನಿಂದಿರ್ದು ಸಮಭಿಮುಖನಮಂದಾನಂದನಂದಿತ ಪುಳಕಕಳಿಕಾವಳೀವಿಳಸಿತ ವಪುರ್ಲತಿಕನುಂ, ನಿಟಿಳತಟಘಟಿತ ಕರಸರೋಜ ಕುಟ್ಮಳನುಮಾಗಿ---

ಚಂ॥ ಜಯಜಯ ದೇವ[ದೇವ]ಪರಮೇಶ್ವರ ವಿಶ್ವಗುಣಾವಳಂಬ ನಿ।
ರ್ಭಯ ನಿರವದ್ಯ ನಿರ್ಮದ ನಿರಂಜನ ನಿಶ್ಚಳ ನಿತ್ಯಸೌಖ್ಯ ನಿ॥
ರ್ವ್ಯಯಪದ ನಿರ್ವಿಕಾರ ನಿಖಿಳಾಮಳಕೇವಳಬೋಧ ವೀರ ನಿ।
ನ್ನಯ ಪದಪದ್ಮಯುಗ್ಮಮೆಮಗೀಗೆ ಮನೋರಥ ಸಿದ್ಧಿಯಂ ಜಿನಾ॥ (೮೧)

ಮ॥ ನೆಱೆದಿರ್ದೈ ನೆಟ್ಟನೆ ಪುಣ್ಯದೊಂದು ವಿಳಸದ್ವೈರಾಗ್ಯಸಂಪತ್ತಿಯಿಂ।
ತೊಱೆದಿರ್ದೈ ತದ್ಬಹಿರಂತರಂಗ ನಿಖಿಳಗ್ರಂಥಪ್ರಪಂಚಂಗಳಂ।
ತೊಱೆದಿರ್ದೈ ಧ್ಯಾನಲವಿತ್ರಮಾತ್ರದೆ ವಿಚಿತ್ರಾಘೌಘ ಪಾಶಂಗಳಂ।
ಪಱೆದಿರ್ದೈ ನೀಂ ಜಿನ ಕೇವಳಾವಗಮದಿಂದಾಜನ್ಮಸಂದೋಹಮಂ॥ (೮೨)

ಚಂ॥ ಮದನ ಮದಾಂಧಕಾರಮನದಿರ್ಪ ಮಹೋದ್ಧತ ಮೋಹಮಲ್ಲನಂ।
ವಿದಳಿಸಿ ನಾಡೆ ರೂಢಿವಡೆದೊಪ್ಪುವನಂತ ಚತುಷ್ಟಯಾಭಿದಾ॥
ನದ ರಮೆಗೀಶನಾಗಿ ಭುವನತ್ರಯ ವರ್ತಿತ ಕೀರ್ತಿವೆತ್ತ ಪೆಂ।
ಪಿದು ಬುಧರಂ ಮರಳ್ಚುವುದು ಸನ್ಮತಿ ಸನ್ಮತಿಲೋಕವಂದಿತಾ॥ (೮೩)

ಘನತರ ಕರ್ಮಬಂಧನಮನಿಂಧನಮಂ ಸುಡುವಂತೆ ಸುಟ್ಟು ನೆ।
ಟ್ಟನೆ ನಿಜ ನಿರ್ವಿಕಾರ ಪರಮಾತ್ಮ ಸಮುದ್ಭವ ಭಾವನಾಹುತಾ॥
ಶನ ಬಲದಿಂದನಂತಗುಣ ಚಿನ್ಮಯನಾದ ಮಹಾನುಭಾವ ದೇ।
ವನೆನಗೆ ಜಿನೇಂದ್ರ ನಿನ್ನ ಚರಣಂ ಶರಣಕ್ಕೆ ಜಗತ್ತ್ರಯೇಶ್ವರಾ॥ (೮೪)

ದಯೆಯ ಪಯೋಧಿ ಸತ್ಯದ ತವರ್ಮನೆ ಶೀಲದ ಜನ್ಮಭೂಮಿ ಕಾಂ।
ತಿಯ ಕಣಿ ಶಾಂತಿಯಾಗರಮನಂತಗುಣಂಗಳ ಮಂಗಳಾಲಯಂ॥
ಜಯರಮೆಯಿಕ್ಕೆದಾಣಮೆನಿಸಿರ್ದ ಜಗನ್ನುತ ವರ್ಧಮಾನ ನಿ।
ನ್ನಯ ನಿರವದ್ಯಮಾರ್ಗಮೆಮಗೀಗಪವರ್ಗದ ಸಿದ್ಧಿಯಂ ಜಿನಾ॥ (೮೫)

ವ॥ ಎಂದು ಸಕಳಸುರೇಂದ್ರ ಸಂದೋಹಂ ಬೆರಸು ಪುರಂದರಂ ಪರಮ ಜಿನೇಂದ್ರನಂ ಸ್ತುತಿಯಿಸಿ ಶಚೀನಿಚಿತ ಶುಚಿತರಾನೇಕ ಪೂಜಾದ್ರವ್ಯನಿಚಯಂಗಳಿಂ ಪರಮಾರ್ಹಂತ್ಯಲಕ್ಷ್ಮೀಕಾಂತನ ಪಾದಪೀಠೋಪಾಂತಮಂ ನಿತಾಂತಮರ್ಚಿಸಿ—

ಕಂ॥ ನತಿ ನುತಿ ಪೂಜೆಗಳಂ ಸ।
ನ್ಮತಿ ಜಿನಪತಿಗಿಂತು ಭಕ್ತಿಯಿಂ ಮೊದಲೊಳ್ ಗೋ॥
ಪತಿ ಮಾಡಿ ನೋಡಿದಂ ದಶ।
ಶತನಯನದೆ ಸಮವಸೃತಿಯ ಶೋಭೋನ್ನತಿಯಂ॥ (೮೬)

ಆ ರಚಿತ ಸಮವಸರಣಂ।
ತಾರಾಪಥಲಕ್ಷ್ಮಿ ತಳೆದ ತೊಡವೆಂಬಿನಮೇಂ॥
ರಾರಾಜಿಸಿದುದೊ ಮಿಗೆ ನಾ।
ನಾರತ್ನಮರೀಚಿ ಪಿಂಜರಿತ ದಿಗ್ವಳಯಂ॥ (೮೭)

ವ॥ ಅದೆಂತೆನೆ—

ಉ॥ ಮೇದಿನಿಯಿಂದೆ ಮೇಲೆ ಮಿಗೆ ಪಂಚಸಹಸ್ರ ಶರಾಸನಾಂತರಂ।
ಪೋದೆಡೆಯಲ್ಲಿ ಕಣ್ಗೆಸೆದು ತೋರ್ಪುದು ವೀರಸಭಾಸಮುಲ್ಲಸ॥
ನ್ಮೇದಿನಿ ಯೋಜನಪ್ರಸರಮಪ್ರತಿಮಂ ಸಮವೃತ್ತರೂಪಮಾ।
ಹ್ಲಾದಕರಂ ವಿನೇಯಶರಣಂ ಹರಿನೀಳ ಮಹಾಶಿಳಾಮಯಂ॥ (೮೮)

ಕಂ॥ ಅದಱ ಕಡೆವಿಡಿದು ಘನಸ।
ಮ್ಮದಕರ ಕಿರ್ಮ್ಮೀರಕಿರಣಜಾಳಂ ಸಕಳಾ॥
ಭ್ಯುದಯ ವಿಶಾಳಂ ಶೋಭಿಸು।
ವುದು ಧೂಳೀಶಾಳಮಂಬರಶ್ರೀಭಾಳಂ॥ (೮೯)

ಎಸೆವಾ ಪ್ರಾಕಾರದ ನಾ।
ಲ್ದೆಸೆಯೊಳಮಿರ್ಪತ್ತು ಸಾಸಿರಂ ಸೋಪಾನಂ॥
ನಿಸದಂ ಸ್ಫಾಟಿಕಮಭಿರಂ।
ಜಿಸುಗುಂ ಪ್ರತ್ಯೇಕಮುದಿತ ವಿದಿತಾಳೋಕಂ॥ (೯೦)

ಮೊದಲದುವುಂ ತುದಿಯದುವುಂ।
ಪದಲೇಪೌಷಧಿಯನಾಂತು ಭವ್ಯಜನಂ ಬೇ॥
ಗದಿನಡರಲುಮಿೞಿಯಲುಮಾ।
ಸದಮಳ ಸೋಪಾನಚಯದೊಳೆರಡೆರಡೆಸೆಗುಂ॥ (೯೧)

ವ॥ ಮತ್ತಮಾಸೋಪಾನಪಜ್ತಿಗಳಗ್ರಭಾಗದೊಳುದಗ್ರರಶ್ಮಿಸಂಚಯಾಂಚಿತ ಪಂಚರತ್ನನೂತ್ನಕಳಶವಿಳಸಿತಂಗಳುಂ ಸ್ಫುರನ್ಮಯೂಖಲೇಖಾವಿಸ್ತಾರ ತೋರಣ ಶತಾನ್ವಿತಂಗಳುಂ ಕನತ್ಕನಕಕೂಟಪೇಟಕಭ್ರಾಜಿತಂಗಳುಂ ಜ್ಯೋತಿರಮರದೌವಾರಿಕ ಪಾಳಿಪಾಳಿತಂಗಳುಂ ಅಪ್ಪ ವಿತತಚತುರ್ಗೋಪುರಂಗಳಲ್ಲಿ—

ಕಂ॥ ಬಹಿರಂತರ್ಜಗತೀದ್ವಯ ।
ವಿಹಿತಂಗಳ್ ಬೇಱಿವೇಱಿ ನೂಱಿಂಟೆಂಬೀ ॥
ಮಹಿಮೆವಡೆದಷ್ಟಮಂಗಳ ।
ಸಹಿತಂ ನವನಿಧಿಗಳಾವಗಂ ಸೊಗಯಿಸುಗುಂ ॥ (೯೨)

ವ॥ ಮತ್ತಮಾ ಜಾತರೂಪ ಗೋಪುರಂಗಳಂತರಾಳ ವಿಶಾಳ ವೀಧಿಗಳ ನಡುವೆ—

ಶಾ॥ ಮಾನಸ್ತಂಭ ಚತುಷ್ಟಯಂ ಸೊಗಯಿಕುಂ ಶಾಳತ್ರಯಾಳಂಕೃತಂ ।
ಪೀನದ್ವಾದಶ ಗೋಪುರೋಪರುಚಿರಂ ಪೀಠತ್ರಯೋಪೇತಮು ॥
ನ್ಯೂನಾಂಭಃ ಪರಿಪೂರ್ಣ ಕುಂಡ ಸರಸಂ ಘಂಟಾಲಸತ್ಕಿಂಕಿಣೀ ।
ನಾನಾಚಾಮರ ಕೇತನಾತಿಸುಭಗಂ ಶ್ರೀಜೈನಬಿಂಬಾನ್ವಿತಂ ॥ (೯೩)

ಕಂ॥ ಸ್ತಂಭಮನೀವುವು ಮಾನ ।
ಸ್ತಂಭಂಗಳ್ ಕುನಯ ಜನದ ಮನದೊಳ್ ನಿಬಿಡಂ ॥
ಸಂಭವಿಪ ವಿಪುಳಮಾನದ ।
ದಂಭದ ದಳ್ಳುರಿಗೆ ಕರಮೆ ಕಂಡಾಕ್ಷಣದೊಳ್ ॥ (೯೪)

ವ॥ ಮತ್ತಮಾ ಮಹಿತ ಮಹೀತಳದೊಳ್ ಮಾನಸ್ತಂಭದಿಂ ಮಾನಸ್ತಂಭಂಬರಂ ಅಯ್ದಯ್ದು ಸೌಧಹರ್ಮ್ಯಂಗಳುಮವಱಿಡೆಯೊಳ್ ಒಂದೊಂದು ಸಮುತ್ತುಂಗ ಚೈತ್ಯ ಮಂದಿರಂಗಳುಂ ಅಳುಂಬಮೆಸೆವುವದಱಿನದರ್ಕೆ ಹರ್ಮ್ಯಚೈತ್ಯಭವನಭೂಮಿನಾಮಮಂ ನೆಗಟ್ಟುದಲ್ಲಿಂದತ್ತಲ್—

ಉ॥ ರಾಜಿತವೇದಿ ರತ್ನ ಖಚಿತಂ ಪ್ರಥಮೋಕ್ತ ಸಮಸ್ತವರ್ಣನ ।
ಭ್ರಾಜಿತಮುದ್ಧಗೋಪುರಚತುಷ್ಟಯಮಾವೃತಮಾಗೆ ನಾಡೆಯುಂ ।
ರಾಜಿಸುತಿರ್ಪುದಸ್ತಮಳಕೋಮಳ ಪೂರ್ಣಮೆನಿಪ್ಪ ಖಾತಿನಾ ।
ನಾಜಳಕೇಳಿಲೋಳ ಖಚರಾಮರ ತಾಮರಸೋತ್ಪಳಾನ್ವಿತಂ ॥ (೯೫)

ವ॥ ಮತ್ತಂ ತತ್ತೋಯಖಾತಿ ಭೂತಳದಿಂದತ್ತಲ್ ಜ್ಯೋತಿಷ್ಕದೇವದೌವಾರಿಕ ಪ್ರಕರಪ್ರಕೃಷ್ಟಾಷ್ಟಮಂಗಳನವನಿಧಿ ವಿಧೃತ ವಿವಿಧರತ್ನ ರಚಿತ ಜಗತೀ ಸಂಗತಂಗಳುಂ, ಸಮಣಿತೋರಣಂಗಳುಂ, ತಾರಮಯಂಗಳುಮಪ್ಪ ಚತುರ್ಗೋಪುರಂಗಳುಂ ನಿಸದಮೆ ಸೆವ ಹಿರಣ್ಮಯ ವೇದಿಕೆಯಿಂ ವೇಷ್ಟಿತಮಾಗಿ—

ಉ॥ ಭೂರಿಪರಾಗರಾಗ ವಿನಮನ್ಮಧುಪಾವಳಿ ಗೀತಿಕಾಮನೋ।
ಹಾರಿಗಳಾದ ಜಾದಿ ಪೊಸಪಾದರಿ ಕೇದಗೆ ಮೊಲ್ಲೆ ಮಲ್ಲಿಮಂ॥
ದಾರಮಪಾರ ಚೂತಲತೆಯೂಥಿಕೆ ಸಂದ ವಸಂತದೂತಿಯೆಂ।
ಬೀರಮಣೀಯ ವಲ್ಲಿಗಳಿನೊಪ್ಪುವುದಲ್ಲಿ ಲತಾಮಹೀತಳಂ॥ (೯೬)

ವ॥ ಮತ್ತಮಲ್ಲಿಂದತ್ತ ದೌವಾರಿಕ ಯಕ್ಷರಕ್ಷಿತ ತಾರಮಯೋದಾರ ಗೋಪುರ ಚತುಷ್ಕಮುಮಂ, ಅಮರ್ತ್ಯ ನರ್ತಕೀನರ್ತನೋಚಿತ ಷೋಡಶನಾಟಕಶಾಳಿಕಾಳಂಕೃತಮುಮಂ, ತತ್ಪ್ರಮಾಣಾವಿರಳ ಸಮುಚ್ಛಳದಗುರುಧೂಪಧೂಮಧೂಸರಿತ ಸುರಸರಣಿಮಣಿಮಯ ಧೂಪಘಟ ಸಮೇತಮುಮಂ ಅಪ್ಪ ಜಾತರೂಪಮಯ ವಿಶಾಳಶಾಳಂ ಬಳಸೆ ವಿಳಸಿತಮಾದ ಸಮುದ್ಯದುದ್ಯಾನ ಭೂಮಿಯಲ್ಲಿ—

ಕಂ॥ ಪರಿಗತಶಾಲತ್ರಯು ರ।
ತ್ನರಚಿತ ಪೀಠತ್ರಯ ಸ್ಥಿತಾರ್ಹತ್ಪ್ರತಿಮಾ॥
ಪರಿಕರ ಚೈತ್ಯದ್ರುಮ ಭಾ।
ಸುರ ಮಧ್ಯಸ್ಥಳಿಗಳುತ್ಪ್ರಪಾಳಾವಳಿಗಳ್॥ (೯೭)

ಅಸುಕೆಗಳೇಱಿಲೆವಾಱಗ।
ಳಸಮಂಗಳ್ ಚಂಪಕಂಗಳಾಮ್ರಕುಜಂಗಳ್॥
ಲಸದಮರವಧೂನೂಪುರ।
ವಿಸರದ್ರವಮುದ್ರಿತಂಗಳೆಸೆದುವು ನಿಸದಂ॥ (೯೮)

ವ॥ ಮತ್ತಮಲ್ಲಿಂದತ್ತಲ್ ಉತ್ತುಂಗರತ್ನತೋರಣಾದಿ ಪೂರ್ವೋಕ್ತ ಸುವ್ಯಕ್ತ ಪರಿಕರ ಪರಿಶೋಭಿತ ಯಕ್ಷದೌವಾರಿಕನಿಕರೋದಾರ ತಾರಗೋಪುರ ಚತುಷ್ಟಯೋಪೇತ ಕಳಧೌತ ವೇದಿಕಾವಳಯ ವಳಯಿತಮಾಗಿ—

ದ್ರುತವಿಳಂಬಿತಂ॥ ವರಮರಾಳ ಮಯೂರಮತಂಗಜ।
ದ್ವಿರದವೈಣ ವೃಷಾಂಶುಕ ಚಕ್ರವಾ॥
ರಿರುಹದಾಮ ಗರುತ್ಮ ಕುಳಧ್ವಜೋ।
ದ್ಧುರಿತ ಕೇತುಮಹೀತಳಮೊಪ್ಪುಗುಂ॥ (೯೯)

ವ॥ ಮತ್ತಮಲ್ಲಿಂದತ್ತ ಪೂರ್ವೋಕ್ತ ಸಮಗ್ರಸಾಮಗ್ರೀಸಮೇತ ಸದ್ರಾಗ ನಾಗಕುಮಾರ ದ್ವಾರಪಾಳಕ ಪಾಳನೀಯ ಸೌರೂಪ್ಯ ರೂಪ್ಯರಚಿತ ಸುಚತುರ್ಗೋಪುರ ವಿರಾಜಮಾನಾರ್ಜುನಮಯ ವಿಶಾಳಶಾಳವೇಲ್ಲಿತಮುಮಂ, ಪ್ರಸಿದ್ಧ ಸಿದ್ಧಪ್ರತಿಮಾ ಪ್ರತಿಭಾಸಿತ ಸಿದ್ಧಾರ್ಥ ಭೂಜಭ್ರಾಜಿತ ಮಧ್ಯಪ್ರದೇಶಮುಮಾಗಿ—

ಚಂ॥ ಸುರತರುಣೀಕರಾವಚಯ ಪಲ್ಲವಪುಷ್ಪಫಳೋಪಶೋಭಿಗಳ್ ।
ಸುರತರುಗಳ್ ತರಂತರದೆ ತಳ್ತು ತಳತ್ತಳಿಸುತ್ತು ಮಿರ್ಪಿನಂ ॥
ಸುರತರು ಭೂತಳಂ ಸೊಗಯಿಕುಂ ಭುವನತ್ರಯ ಸದ್ವುಧಾವಳೀ ।
ಸುರತರು ಸನ್ಮತೀಶ್ವರನ ವಿಶ್ವವಿನೂತ ಸಭಾಂತರಾಳದೊಳ್ ॥ (೧೦೦)

ವ॥ ಮತ್ತಮಲ್ಲಿಂದತ್ತಲ್—

ಕಂ॥ ನವನಿಧಿಮಂಗಳಸಂಗತ ।
ಪವನಾಶದ್ವಾರಪಾಳತಾರಮಯಚತುಃ ॥
ಪ್ರವಿಪುಳ ಗೋಪುರ ವರಕನ ।
ಕವೇದಿಕಾವಳಯ ಪರಿವೃತಂ ವಿಬುಧನುತಂ ॥ (೧೦೧)

ವ॥ ಎನಿಸಿ ಮಣಿತೋರಣಗಣಪ್ರಣೀತ ಜಿನಸಿದ್ಧಪ್ರತಿಮಾತಪತ್ರ ವಿಚಿತ್ರ ಚಾಮರಾದಿ ರಾಮಣೀಯಕ ನವನವಸೂತ್ರಪಕಳಾಪಮಹಿತ ಮಹಾವೀಥ್ಯಂತರಾಳಂಗಳಿಂ ಭಂಗಿವಡೆದ ಸಂಗೀತಸದನ ಭೂತಳದಲ್ಲಿ—

ಸ್ರ॥ ಗೀತಾತೋದ್ಯ ಪ್ರನೃತ್ಯತ್ರಯ ನಿಯತ ಕಳಾಕೋವಿದಾಮರ್ತ್ಯಮರ್ತ್ಯ ।
ವ್ರಾತೋದ್ಭೂತ ಪ್ರಮೋದ ಪ್ರಸರ ಪರಿಲಸನ್ನಾಟ್ಯಶಾಲಾಸಮೂಹಂ ॥
ಚೇತಃ ಪ್ರೀತಿಪ್ರದಂ ಶೋಭಿಸುವುದಸದಳಂ ನೂತ್ನರತ್ನಾವಳೀ ಪ್ರ ।
ದ್ಯೋತೋಪೇತಂ ಕವೀಂದ್ರಪ್ರಕರ ಬಹುವಿಧ ಸ್ತೋತ್ರಪಾತ್ರಂ ವಿಚಿತ್ರಂ॥ (೧೦೨)

ವ॥ ಮತ್ತಮಲ್ಲಿಂದತ್ತಲ್—

ಕಂ॥ ಗದೆ ಮೊದಲಾದುವನಾಂತಿ ।
ರ್ದ ದಿವಿಜದೌವಾರಿಕರ್ಕಳುಂ ನವನಿಧಿಯುಂ ॥
ವಿದಿತಾಷ್ಟಮಂಗಳಮುಮೊ ।
ಪ್ಪಿದ ಹರಿನೀಲಮಯ ಗೋಪುರ ಚತುಷ್ಟಯಮುಂ ॥ (೧೦೩)

ತಳೆದೆಸೆವ ನವಸ್ಫಟಿಕೋ ।
ಪಳ ನಿರ್ಮಿತ ಶಾಳವೇದಿಕೆಗಳೆರಡುಂ ಪ ॥
ಜ್ಜಳಿಸುವ ಭಿತ್ತಿಗಳಾಗಿರೆ ।
ಲಳಿತ ಶ್ರೀಮಂಡಪಂ ಕರಂ ಸೊಗಯಿಸುಗುಂ ॥ (೧೦೪)

ಹೃದಯಕ್ಕಂ ನಯನಕ್ಕಂ ।
ಮುದಮಂ ಮುಂದಿಡುವ ಪರಸು ಶೋಭೆಯ ಲಕ್ಷ್ಮೀ ॥
ಸದನದೊಳೀರಾಱಿಸೆವುವು ।
ಸದಮಳ ಕೋಷ್ಠಂಗಳಾಶ್ರಿತ ಶ್ರೇಷ್ಠಂಗಳ್ ॥ (೧೦೫)

ಮ॥ ಸ್ರ॥ ಯತಿವೃಂದಂ ಕಲ್ಪಕಾಂತಾವಳಿ ವರಗಣಿನೀ ಶ್ರಾವಿಕಾಸಂಚಯಂ ಚಾ।
ರುತರ ಜ್ಯೋತಿರ್ವಧೂವ್ಯಂತರವರವನಿತಾಸಂಕುಳಂ ಭಾವನ ಸ್ತ್ರೀ॥
ತತಿ ಭಾಸ್ವದ್ಭಾವನರ್ ವ್ಯಂತರರತಿ ಚತುರಜ್ಯೋತಿರಿಂದ್ರರ್ ಸುಕಲ್ಪ।
ಸ್ಥಿತರುದ್ಯನ್ಮಾನುಷರ್ ವಾರಣರಿಪು ಮೊದಲಾಗಿರ್ದ ತಿರ್ಯಕ್ಸಮೂಹಂ॥(೧೦೬)

ಕಂ॥ ಎಂಬೀ ದ್ವಾದಶಗಣವಿ।
ರ್ಕು೦ ಬಹುತರ ಶೋಭೆವೆತ್ತ ಕೋಷ್ಠಂಗಳೊಳಾ॥
ದಂ ಬಗೆಗೊಳಸುವುದನವರ।
ತಂ ಬೋಧಪಯೋಧಿ ಜಿನನ ಸಭೆಯಾತೆಱದಿಂ॥ (೧೦೭)

ವ॥ ಮತ್ತಮಲ್ಲಿಂದತ್ತಲ್—

ಕಂ॥ ಚಂಚದ್ವೈಡೂರ್ಯಮಯಂ।
ಕಾಂಚನಮಯಮುಮಳ ಸರ್ವರತ್ನಮಯಂ ಕ॥
ಣ್ಗೆಂ ಚೆಲ್ವಾದುದೊ ಪರಿವಿಡಿ।
ಯಿಂ ಚಿತ್ತಜರಿಪುವ ವಿಪುಳ ಪೀಠತ್ರಿತಯಂ॥ (೧೦೮)

ವಾಸ್ತವ ಭಕ್ತಿಸಮೇತರ್।
ಮಸ್ತಕವಿನ್ಯಸ್ತಧರ್ಮಚಕ್ರರ್ ಯಕ್ಷರ್॥
ವಿಸ್ತೃತ ಸತ್ಪೂಜಾದ್ರ।
ವ್ಯಸ್ತೋಮದಿನೆಸೆವ ಮೊದಲಪೀಠದೊಳಿರ್ಪರ್॥ (೧೦೯)

ಎರಡನೆಯ ಪೀಠದೊಳ್ ಬಂ।
ಧುರ ಧ್ವಜವ್ರಜಮುಮಷ್ಟಪುಂಗಳಮುಂ ಭಾ॥
ಸುರನವನಿಧಿಗಳುಮಧಿಕಾ।
ನುರಾಗಮಂ ನೋೞ್ಪಜನಕೆ ಜನಿಯಿಸುತಿರ್ಕುಂ॥ (೧೧೦)

ಎಸೆಗುಂ ತೃತೀಯ ಪೀಠದೊ।
ಳಸದೃಶ ಸುರಭಿಪ್ರಸೂನ ಕಾಳಾಗರುವಿಂ॥
ಲಸಿತ ನವದಿವ್ಯಗಂಧ।
ಪ್ರಸರಂ ಗಂಧಕುಟಿ ಬಂಧುರಾಕೃತಿ ಸತತಂ॥ (೧೧೧)

ವ॥ ಮತ್ತಮಾಗಂಧಕುಟಿಯ ನಡುವೆ ಬೆಡಂಗುವಡೆದು ಸಿಂಹಸಂಹತಿ ವಿಧೃತಮುಂ, ಶೋಣಮಾಣಿಕ್ಯದೀಪ್ತಿವ್ಯಾಪ್ತ ದಿಗಂತರಾಳಮುಂ, ಬಹುಳಾಮೋದಭದ್ರತರ ವಿನಿದ್ರ ಸಹಸ್ರದಳ ಕಳಧೌತ ಕಮಳಕರ್ಣಿಕಾಕಮನೀಯಮುಮುಂ ಅಪ್ಪ ಸರ್ವೋತ್ಕೃಷ್ಟ ಹರಿವಿಷ್ಟರಾಗ್ರದಲ್ಲಿ—

ಕಂ॥ ಮದನಾರಿ ನಾಲ್ವೆರಲ್ ಮು।
ಟ್ಟದೆ ಜಿನಪತಿ ವರ್ಧಮಾನನನುಪಮ ಮಹಿಮಾ॥
ಸ್ಪದನವನತಲೋಕತ್ರಯ।
ನುದಿತಯಶಂ ವಿದಿತವಿಶ್ವನೊಪ್ಪುತ್ತಿರ್ದಂ॥ (೧೧೨)

ಉ॥ ಇಂತು ನಿರಂತರಂ ನಿಖಿಳಭವ್ಯ ಮನೋಹರ ರೂಪಮಾದ ಪೆಂ।
ಪಂ ತಳೆದಿರ್ದ ಸನ್ಮತಿ ಜಿನೇಂದ್ರನ ರುಂದ್ರ ವಿಳಾಸಮಂದಿರಂ॥
ಸಂತಸಮಂ ನಿವಿರ್ಚಿ ನಲಿದಂ ವಿಬುಧಾಗ್ರಣಿ ಪುಣ್ಯಭಾಜನಂ।
ಸ್ವಾಂತದೊಳಿಂದು ನಿರ್ಮಳ ಯಶೋರಮಣಂ ವಸುಧೈಕಬಾಂಧವಂ॥ (೧೧೩)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತಜಿನಸಮಯ ಕಮಳಿನೀ ಕಳಹಂಸಾಯಮಾನ ಮಾನಿತ
ಶ್ರೀನಂದಿಯೋಗೀಂದ್ರ ಪ್ರಸಾದ ವಾಚಾಮಹಿತ ಕೇಶವರಾಜಾನಂದ
ನಂದನ ವಾಣೀವಲ್ಲಭ ವಿಸ್ತಾರಿತಮಪ್ರ ವಸುಧೈಕಬಾಂಧವ
ಶ್ರೀವರ್ಧಮಾನ ಪುರಾಣದೊಳ್ ತೀರ್ಥಕರ ಪರಮದೇವ
ಕೇವಲಜ್ಞಾನೋತ್ಪತ್ತಿ ವರ್ಣನಂ.
ಪಂಚದಶಾಶ್ವಾಸಂ.

ಷೋಡಶಾಶ್ವಾಸಂ

ಶ್ರೀ ಪಂಚಗುರುಭ್ಯೋನಮಃ—

ಕಂ॥ ಶ್ರೀ ತೀರ್ಥಕರನ ನಿರವಧಿ ।
ಕೌತುಕಕರಮೆನಿಪ ಸಮವಸರಣದ ಸಿರಿಯಂ ॥
ಪ್ರೀತಿಯೊಳೆ ಪೊಗೞ್ದನಿಂದ್ರಂ ।
ಪೂತಮನಂ ಪಂಚಪರಮಗುರುಪದವಿನತಂ ॥ (೧)

ವ॥ ಅಂತು ನಿತಾಂತಕಾಂತಮಾದ ಪರಮಪ್ರಮೋದಕರಣಮುಂ, ಭವ್ಯವರ ಪುಂಡರೀಕ ಶರಣಮುಂ, ಲೋಕತ್ರಯಲಕ್ಷ್ಮೀ ಲಲಿತಮೌಕ್ತಿಕಾಭರಣಮುಂ, ದುರಂತ ದುರಿತ ತಿಮಿರ ಸಹಸ್ರಕಿರಣಮುಂ, ಮಹಾವೀರ ಸಮವಸರಣಮುಂ, ಪಲವುಸೂೞುಮಲಘುಭಕ್ತಿ ಭಾವದಿಂ ನೋಡಿ ನೋಡಿ ಮೆಚ್ಚಿ ಬಿಚ್ಚಳಿಪ ನಿರ್ಮಳ ಧರ್ಮರಸಿಕನಾಸೌಧರ್ಮೇಂದ್ರನೊರ್ಮೆ ಪೆರ್ಮೆವೆತ್ತ ಸನ್ಮತೀಶ್ವರನ ಸಮೀಪದ ನಿಜೋಚಿತ ವರಿಷ್ಠ ಕೋಷ್ಠದೊಳ್ ಗರಿಷ್ಠ ವಿನಯವೈಭವದಿಂ ಕುಳ್ಳಿರ್ದು—

ಕಂ॥ ಪರಮ ಜ್ಞಾನನಿಧಾನನ ।
ಸುರುಚಿರ ವದನಾರವಿಂದದಿಂ ಪೊಣ್ಮುವ ಭಾ ॥
ಸುರ ದಿವ್ಯರವಮನತ್ಯಾ ।
ದರದಿಂದಂ ಕೇಳ್ವ ವಾಂಛೆ ವರ್ತಿಸೆ ಮನದೊಳ್ ॥ (೨)

ಸ್ರ॥ ಆ ನಾಕೇಶಂ ಜಿನೇಶಂಗನಘಗುಣಗಭೀರಂಗೆ ವೀರಂಗೆ ದಿವ್ಯ ।
ಧ್ವಾನಂ ತಾನಾಗದೇಕಿರ್ದುದೊ ತಡೆದೆನುತುಂ ವಿಸ್ಮಯಾಯತ್ತ ಚಿತ್ತಂ ॥
ಸ್ವಾನೂನೈಕಾವಧಿಜ್ಞಾನದೆ ಗಣಧರ ಸದ್ಗೌತಮಾಖ್ಯಂ ತದುದ್ಯ ।
ಧ್ವಾನಾರ್ಥಂ ಗ್ರಾಹಕಂ ಬಾರದೆ ಗಡ ತಡೆದತ್ತೆಂಬುದಂ ಕಂಡನಾಗಳ್॥ (೩)

ವ॥ ಅಂತು ಸರ್ವಜ್ಞ ದಿವ್ಯಭಾಷಾಸಮುತ್ಪತ್ತಿ ಹೇತುಭೂತನಂ ಗೌತಮಾಖ್ಯಾತನಂ ನಿಜಾವಧಿಪ್ರಯೋಗದಿಂ ಬೇಗದಿನಱಿದು—

ಚಂ॥ ನವತುಳಸೀದಳಾಂಕ ಶಿಖಿ ಮುಟ್ಟ್ಯಯ ಲಾಂಛನಮೊಳ್ಪುವೆತ್ತ ಜ ।
ನ್ನವಿರಮುದಂಶು ಕುಂಡಳಯುಗಂ ಕುಶಜಾತ ಪವಿತ್ರಮಾತ್ತ ಧೌ ॥
ತವಸನಮುದ್ಧಮೌಂಜಿ ಮೃಗಕುಂಡಿಯೆರಱುಶ್ವಾಸ ಕೌವಣಂಗಳೆಂ ।
ಬಿವು ಕಡುರಮ್ಯಮಾದ ಪಟುವೇಷಮನಾಂತನಂತರಂ ವೃಷಂ ॥ (೪)

ವ॥ ಅಂತು—

ಕಂ॥ ಕಪಟ ವಟುವೇಷಮುಂ ಪದೆ ।
ದು ಪಡೆದು ನಡೆದವನಿತಳಕೆ ತಿಳಕಮಿದೆನೆ ಶೋ ॥
ಭಿಪ ಗೌತಮಪುರವರಮಂ ।
ವಿಪುಳಯಶಂ ನಿಮಿಷಮಾತ್ರದಿಂ ಪುಗುತಂದಂ ॥ (೫)

ವ॥ ಅಂತು ಪೊಕ್ಕು ನಿಕ್ಕುವಂ ಪುರಮಧ್ಯದೊಳೆಸೆವಧ್ಯಯನಶಾಲೆಯನೆಯ್ದಿ ಪಂಚಶತಚ್ಛಾತ್ರಸಂಚಯಕ್ಕೆ ಚಂಚದರ್ಥಶಾಸ್ತ್ರಪ್ರಪಂಚಮನವಂಚಕತೆಯಿಂ ಕಾಂಚನಮಯಾಸನದೊಳಿರ್ದು ವಕ್ಖಣಿಪ ವಿದ್ವನ್ಮುಖ್ಯನಂ ಗೌತಮಾಖ್ಯನಂ ವೇದೋಕ್ತಮಾರ್ಗಾಚರಣಪಾತ್ರನಂ ಗೌತಮಗೋತ್ರ ಪವಿತ್ರನಂ ಧರಾಮರಾನೀಕವನವಸಂತನಂ, ಭುವನಾತಿಶಕೌತುಕ ಪ್ರತಿಭಾನಿಶಾಂತನಂ ಕಂಡು ಮನದೆಗೊಂಡು ಶಾಳಾಂತರಾಳಮಂ ಪೊಕ್ಕು ಮಾಣವಕಂ ಸ್ಥೂಣಾವಷ್ಟಬ್ಧನಾಗಿ—

ಕಂ॥ ನವಕನಿವಂ ಬಂದಂ ಮಾ ।
ಣವಕಂ ತಾನೆತ್ತಣಿಂದಮೆಂದಾ ವಿಪ್ರ ॥
ಪ್ರವರನ ಸಭೆ ಸುಭಗನೊಳೋ ।
ದುವುದುಂ ಮಾಣ್ದಿನಿತು ಬೇಗಮಿಕ್ಷಿಸುತಾಗಳ್ ॥ (೬)

ಗುರುಚರಣಪ್ರಣತಿಯನಾ ।
ದರದಿಂದಂ ಬಂದು ಮಾಡನಭಯಂ ಸಭೆಯಂ ॥
ಪರಿವೀಕ್ಷಿಸಿದಪನಿವನೇಂ ।
ಮರುಳೋ ಮೇಣ್ ಅಖಿಳ ಶಾಸ್ತ್ರಸಮಿತಿಯ ತಿರುಳೋ ॥ (೭)

ವ॥ ಎಂದು ವಿಸ್ಮಯಭಾಜನಮಾದ ತತ್ಸಭಾಜನಂ ಗುರುಹೂಂಕಾರ ಪ್ರೇರಿತಂ ಪುನರಧ್ಯಯನ ವಿಧಾವಾವಧಾನಮಾಗೆ—

ಕಂ॥ ಮೃದುಮಧುರ ಗಭೀರಧ್ವಾ ।
ನದ ಸದುಪನ್ಯಾಸದಿಂದಮನುಗತಮಪ್ಪ ॥
ರ್ಥದ ಸರಸವ್ಯಾಖ್ಯಾನಂ ।
ಹೃದಯಂಗಮಮಾಯ್ತು ವಿಬುಧಗೌತಮ ವಿಹಿತಂ ॥ (೮)

ಆ ವ್ಯಾಖ್ಯಾನಮನಂತಾ ।
ನೆವ್ಯಂ ಚುಂಬುಕೆಂದವಜ್ಞೆಯಿಂ ದಕ್ಷಿಣಹ ॥
ಸ್ತ ವ್ಯಾಪಾರದೆ ತೋಱಿದ ।
ನವ್ಯಗ್ರಮನಂ ಮನೀಷಪಟುಕಂ ವಟುಕಂ ॥ (೯)

ವ॥ ಅಂತಾಚಪಳಂ ಲಪನಕರತಳ ವಿಕೃತಿಸಂಜ್ಞೆಗಳಿಂ ಗೌತಮಾಖ್ಯಾನಮನವಜ್ಞೆಗೆಯ್ದು ಮತ್ತಂ ವಚನನಿಚಯದಿಂ ನಿರ್ಲೋಟಿಪ ಪಾಟವಮನವಳಂಬಿಸಿ—

ಕಂ॥ "ಏವಂ ನ ಭವತ್ಯರ್ಥ ।
ಸ್ತಾವದಮುಷ್ಯೋಕ್ತ ವಾಕ್ಯನಿವಹಸ್ಯ"ಯೆನು ॥
ತ್ತಾವಟು ಪೇೞತೊಂದರ್ಥಮು ।
ನಾವಿರ್ಭಾವಿಸಿದನತಿಶಯೋಪನ್ಯಾಸಂ ॥ (೧೮)

ವ॥ ಅಂತು ಪರಕೀಯ ಸಿದ್ಧಾಂತ ಸಮರ್ಥನ ಸಮರ್ಥ ಹೇತುಜಾತಮನಸಿದ್ಧ ವಿರುದ್ಧಾದಿಗಳಿನಾದಂ ದೂಷಿಸಿ ಪರವಾದಿ ವನಜಾಕರಹಿಮಕರನೆನೆ ಶೋಭಿಸುವ ವೇಷ ಧಾರಿಯಂ ಸೂರಿಕುಂಜರಂ ನಿವಾರಿಸಿ—

ಕಂ॥ ಎಲೆ ತಮ್ಮ ಗಿಳಿಯ ಚಪಳತೆ ।
ನೆಲೆವೆತ್ತುದು ನಿನ್ನೊಳಿನ್ನೆಗಂ ನಿನಗಿನಿತಂ ॥
ಕಲಿಸಿದ ಕೋವಿದನಾವೊಂ ।
ಜಲಕ್ಕನಱಿಪೆಂಬುದುಂ ಮುಗುಳ್ನಗೆ ನಗುತುಂ ॥ (೧೧)

ಮ॥ ಸ್ರ॥ ಪರಮಶ್ರೀವೀರಭಟ್ಟಾರಕನಮಿತ ದಯಾಧಾರಕಂ ವಿಶ್ವವಿದ್ಯಾ ।
ಭರಣಂ ನಿಶ್ಶೇಷ ಭವ್ಯೋದ್ಧರಣನಖಿಲ ಲೋಕೈಕಪೂತಂ ಪ್ರಣೂತಂ ॥
ಸ್ಮರದೂರಂ ನಿರ್ವಿಕಾರಂ ಸಮವಸರಣಕಾಂತಂ ಯಶಶ್ರೀನಿಶಾಂತಂ ।
ನಿರವದ್ಯಂ ಹೃದ್ಯನಸ್ಮದ್ಗುರು ಗುಣಗುರು ನಮ್ರಾಮರೇಂದ್ರಂ [ಜಿನೇಂದ್ರಂ] ॥ (೧೨)

ಕಂ॥ [ಎನೆ] ಕಹಕಹ ರುತಿಯಿಂ ನ ।
ಕ್ಕು ನಮ್ಮ ಸಿದ್ಧಾರ್ಥನಾತ್ಮಜಂ ಸನ್ಮತಿ ನ ॥
ಚ್ಚಿನ ಗುರುವೆ ನಿನಗಾಃ ನೆ ।
ಟ್ಟನಿಂದ್ರಜಾಲಿಗನ ವಿದ್ಯೆಯುಂ ಕಲ್ತಾತಂ ॥ (೧೩)

ಇನ್ನುಂ ಬಾಳಕನ್ಯೆ ನೀಂ ।
ನಿನ್ನೊಡನುದ್ಗ್ರಹಮನನುಚಿತಂ ಖಾದಿನೊಳಾ ॥
ನಿನ್ನ ಗುರು ವರ್ಧಮಾನಂ ।
ಬನ್ನಂಬಡುವಂತೆ ಮಾಡುವೆಂ ನಡೆ ಪೋಪಂ ॥ (೧೪)

ವ॥ ಎಂದಾಗೌತಮ ಬುಧೋತ್ತಮನಿಂದ್ರಭೂತಿಖ್ಯಾತಾಪರನಾಮಧೇಯ ನಾತ್ಮೀಯಸನ್ನುತಾಸನ್ನಭವ್ಯತಾಗುಣಪ್ರೇರಿತಮಾನಸಂ ದುರಭಿಮಾನ ಸಂಪತ್ತಿ ಸಂಗತರಪ್ಪಗ್ನಿಭೂತಿ ವಾಯುಭೂತಿಗಳೆಂಬ ತನ್ನ ತಮ್ಮಂದಿರುಂ ಅನುಮಾ ನವೀನ ಮಾಯಾಮಾಣವಕನೊಡನೆ ತಡೆಯದೆ ಕಡಂಗಿ ಪೊಱಮಟ್ಟು ನಡೆಯೆ—

ಕಂ॥ ತತ್ಸನ್ಮತಿ ಜಿನಪನ ಬುಧ ।
ವತ್ಸಳನ ಸಮಸ್ತ ಸದ್ಗುಣಾಭರಣನ ಭಾ ॥
ಸ್ವತ್ಸಮವಸೃತಿಯನಖಿಳ ಜ ।
ಗತ್ಸಾರಮನಾದ್ವಿಜೋತ್ತಮಂ ಪುಗುತಂದಂ ॥ (೧೫)

ವ॥ ಅಂತು ಪುಗುತಂದು—

ಕಂ॥ ಕೋಪಾವಳೇಪ ಯುಗಮುಂ ।
ಲೋಪಿಸಿದುದು ಬಿಡದೆ ಬಳೆದ ಮಿಥ್ಯಾತ್ವಮುಹಾ ॥
ತಾಪಸಮುಮಂ ತೂಳ್ದಿದುದವ ।
ಗರ್ಾಪದದೊಳ್ ನಿರುಪಮಾನ ಮಾನಸ್ತಂಭಂ ॥ (೧೬)

ಮಲ್ಲಿಕಾಮಾಲೆ॥ ಇಂದ್ರಭೂತಿಯ ವಹ್ನಿಭೂತಿಯ ವಾಯುಭೂತಿಯ ಚೇತದೊಳ್ ।
ಸಾಂದ್ರಮಾದ ಮಹಾಮದೋತ್ಕಟ ರೋಗಮಾಗಳೆ ಪೋಗೆ ದೇ ॥
ವೇಂದ್ರಸಗ್ಗದ ತನ್ನ ಸನ್ನುತ ಮೂರ್ತಿಯಂ ತಳೆದೊಪ್ಪಿದಂ ।
ರುಂದ್ರಮಪ್ಪ ಯಶೋಧಿಯಂ ತಳೆದತ್ತಶೇಷ ಸಭಾಜನಂ ॥ (೧೭)

ವ॥ ಅನಂತರಮಾಪೂತಚೇತೋನಿಕೇತನಂ ಗೌತಮಂ ಪರಮಪ್ರೀತಿಯಿಂ ನೂತ್ನರತ್ನರಚಿತ ವಿಶಾಳಶಾಳವೇದೀವಳಯ ವಿಳಸತ್ಪ್ರಾಸಾದ ಚೈತ್ಯಾವಾಸಾವದಾತ ಖಾತಿಕಾಸಮುತ್ಫುಲ್ಲವಲ್ಲೀವನ ಸಮುದ್ಯದುದ್ಯಾನ ಧ್ವಜವ್ರಜಾನಲ್ಪಕಲ್ಪಭೂಜರಾಜದುತ್ತುಂಗ ಸಂಗೀತ ದಾಮೋದ್ದಾಮವಷ್ಟಕೋಷ್ಠಾಧಾರತೋರಣ ಪ್ರಶಸ್ತವಸ್ತು ವಿಸ್ತಾರಗೋಪುರಸ್ತೂಪಧೂಪಘಟಮಂಡಳೀಮಂಡಿತ ಶ್ರೀ ಮಂಟಪ ಮಧ್ಯಾಧ್ಯಾಸಿತ ವಿಚಿತ್ರ ಪೀಠತ್ರಯಾಗ್ರಮಂ ನಿರತಿಶಯ ಶೋಭಾಸಮಗ್ರಮನಳಂಕರಿಸಿ ಕರಮೆಸೆವ ವಿಶದಾನಂತಗುಣಜನ್ಮಭೂಮಿಯಂ ಶ್ರೀ ವರ್ಧಮಾನಸ್ವಾಮಿಯಂ ಕಂಡು ಮೂಮೆ ಬಲಗೊಂಡು ಸರ್ವಾಂಗ ಪ್ರಣತಪ್ರಣುತಿ ಪ್ರಯತ್ನ ವದನವಾರಿಜಂ ನಿಟಿಳತಟ ಕುಟ್ಮಳಿತ ಕರವಾರಿಜನಾಗಿ ನಿಂದಿರ್ದು—

ಚಂ॥ ಜಯಜಯ ವರ್ಧಮಾನ ಪರಮೇಶ್ವರ ನಿನ್ನಯ ಪಾದಪಂಕಜ ।
ದ್ವಯಮನಮರ್ತ್ಯರತ್ನಮಕುಟದ್ಯುತಿ ಚುಂಬಿತಮುಂ ನಿತಾಂತಮಾ ॥
ಶ್ರಯಿಸಿದ ಜಂತು ಸಂತತಿ ಪರಸ್ಪರ ವೈರಮುಮಂ ಭಯಪ್ರವ್ರ ।
ತ್ತಿಯುಮನನೂನಮಾನಮುಮನಾಗಳೆ ಪೋಗಿಕುಮಿಂದ್ರವಂದಿತಾ ॥ (೧೮)

ಉ॥ ಸನ್ನುತ ಸನ್ಮತೀಶ್ವರ ಜಗತ್ತ್ರಯವಲ್ಲಭಸಾರಸೌಖ್ಯಸಂ ।
ಪನ್ನ ದಯಾಸಮುದ್ರ ದುರಘಾಂತಕ ಶಾಂತರಸಪ್ರಪೂರ್ಣ ಲೋ ॥
ಕೋನ್ನತ ಪಾವನಾಚರಣ ಭಾವಜಭಂಜನ ದೇವ ಕೇವಲಂ ।
ನಿನ್ನ ಪದಾರವಿಂದಯುಗಳಂ ಶರಣಕ್ಕೆಮಗೀಂದ್ರಮುಂದಿತಾ । (೧೯)

ಚಂ॥ ಅಪಗತದೋಷನಪ್ಪ ಜಿನ ನೀನುಮಶೇಷ ಪದಾರ್ಥಮಂ ಪ್ರಕಾ ।
ಶಿಪ ಭವದೀಯಬೋಧಮುನುತೀವ ಹಿತಂ ಭುವನತ್ರಯಕ್ಕೆ ಭಾ ॥
ವಿಪೊಡೆನೆ ಪೆಂಪುವೆತ್ತ ಭವದುಕ್ತಿಯುಮಕ್ಷಯ ಸೌಖ್ಯದೊಳ್ ನಿಯೋ ।
ಜಿಪ ಜಿನಮಾರ್ಗಮುಂ ವರದಮಕ್ಕೆಮಗಾವಗಮಿಂದ್ರವಂದಿತಾ ॥ (೨೦)

ವ॥ ಎಂದು ಸುತ್ರಾಮಸೂತ್ರಿತ ವಿಚಿತ್ರಸ್ತೋತ್ರಪಾತ್ರನಂ ಜಗತ್ರಯ ಪವಿತ್ರನಂ ಕೇವಲಜ್ಞಾನನೇತ್ರನನನೇಕ ಸ್ತೋತ್ರಂಗಳಿಂ ಸ್ತುತಿಯಿಸಿ ।

ಕಂ॥ ಪರುಷಂ ಪೊರ್ದಿದ ತತ್ಸಿ ॥
ದ್ಧರಸಂ ರಸಿಯಿಸಿದ ಲೋಹದೊಂದಂದಮನೇಂ ॥
ಧರಿಯಿಸಿದನೊ ಜಿನತನುರುಚಿ ।
ಪರಿಗತವಪು ಶುದ್ಧಹೃದಯದೀಪ್ರಂ ವಿಪ್ರಂ ॥ (೨೧)

ವ॥ ಅನಂತರಂ—

ಕಂ॥ ಆ ಪರಮಜಿನನ ಪದಪೀ ।
ಠೋಪಾಂತದೊಳಸ್ತ ನಿಖಿಳಸಂಗಂ ಸಕಳೋ ॥
ರ್ವೀ ಪಾವನಮಂ ಜೀನದೀ ।
ಕ್ಷಾಪದಮಂ ತಳೆದನನುಜ ಸಹಿತಂ ಮಹಿತಂ ॥ (೨೨)

ತಳೆಯಲೊಡಂ ದೀಕ್ಷೆಯನಾ ।
ಗಳೆ ಸಪ್ತರ್ಧಿಗಳ ಸಂಪದಂ ಸಮನಿಸಿತು ॥
ಜ್ವಳಿತ ಚತುರ್ಜ್ಞಾನಂಗಳ ।
ವಿಳಾಸಮುಳವಟ್ಟುದಾ ಪಿಶಿಷ್ಟವ್ರತಿಯೊಳ್ ॥ (೨೩)

ಸಮಿತಿಸಮಳಂಕೃತಂ ಪಂ ।
ಚಮಹಾವ್ರತ ಸಂಚಯಾಂಚಿತಂ ಶೀಲಗುಣೋ ॥
ತ್ತಮನಮಳಿನ ಗುಪ್ತಿಯುತಂ ।
ಯಮಿನಾಯಕನಿಂದ್ರವೃಂದವಂದಿತನಾದಂ ॥ (೨೪)

ವ॥ ಅಂತು ಮುಮುಕ್ಷುಮುಖ್ಯಪ್ರವೃತ್ತಿಯಂ ಪೆತ್ತು—

ಉ॥ ಚೇತನದಂದಮಂ ದುರಿತದಂದಮನಿಜಗದಂದಮಂ ಸುಧೀ ।
ನೂತನಯಪ್ರಮಾಣಚಯದಂದಮುಮಂ ಬೆಸಸೀಶ ನೀನೆನು ॥
ತ್ತಾತದ ಬೋಧಸಿಂಧುವ ಜಗತ್ರಯಬಂಧುವ ಮುಂದೆ ನಿಂದು ತ ।
ದ್ಗಾತಮುಯೋಗಿ ಕಯ್ಮುಗಿದು ತಾಂ ಬೆಸಗೊಂಡನತೀವ ಭಕ್ತಿಯಿಂ ॥ (೨೫)

ಕಂ॥ ಷಷ್ಟಿಸಹಸ್ರ ಪ್ರಶ್ನವಿ ।
ಶಿಷ್ಟ ವಚೋನಿಚಯ ನರ್ತಕೀ ನರ್ತನಮಾ ॥
ವಿಷ್ಟಪನುತ ಗಣಧರನು ।
ತ್ಕೃಷ್ಟಾನನರಂಗಸಂಗಮೆಸೆದುದು ನಿಸದಂ ॥ (೨೬)

ವ॥ ಅಂತಾಯೋಗಿವರ್ಯಂ ಪರ್ಯನುಯೋಗ ಭಾಗಿಯಾಗೆ—

ಚಂ॥ ಪವನನಿರೋಧಮಿಲ್ಲದ ಗಳೋಷ್ಠಪುಟಾದಿ ನಿಮಿತ್ತಮಿಲ್ಲದು ।
ದ್ಭವಿಸುವ ದೋಷಮಿಲ್ಲದ ಸಮಸ್ತಜನಂಗಳ ವಾಂಛಿತಾರ್ಥಮಂ ॥
ಸುವಿಶದಮಾಗೆ ಪೇಳ್ವ ಭುವನಾಖಿಳ ಭಾಷೆಗಳಾವಗಂ ತನ ।
ತ್ತವಯನಮಾದ ನಾದಮೊಗೆದತ್ತ ಭವಂಗೆ ಗಭೀರತಾಯುತಂ ॥ (೨೭)

ವ॥ ಅಂತತಿಕ್ರಾಂತ ಕರಣವರ್ಣಾಚರಣಮುಂ, ಸರಸ್ವತೀ ಸಮಳಂಕಾರ ಸಾತ್ಕಾರಲಾಂಛಿತಮುಂ, ಅಪಗತಾಕುಳಮುಂ, ಅಪುನರುಕ್ತಮುಂ, ಏಕಯೋಜನಾಂತರಾವಸ್ಥಿತ ಸಮಸ್ತಜನಸಂತಾನಸ್ವಾಂತಸುವ್ಯಕ್ತಮುಂ, ಅತ್ಯಂತ ಮೃದುಮಧುರತಾಯುಕ್ತಮುಂ, ಗಣಧರ ಕುಳಿಶಧರ ಚಕ್ರಧರ ಪ್ರಶ್ನ ವ್ಯತಿರೇಕಾನಿಃಶ್ರುತಮುಮಪ್ಪ ದಿವ್ಯರಾವಂ ಶ್ರಾವಣ ಬಹುಳಪಕ್ಷ ಪಕ್ಷತಿಯೊಳ್ ನೆಗಳ್ವುದುಂ ಅದಂ ಮುದದಿನವಧಾರಿಸಿ—

ಚಂ॥ ಚತುರನುಯೋಗಮಾಗಿರೆ ತದರ್ಥಮನಾವಿಭು ಗೌತಮಂ ಸುಸಂ ।
ಸ್ಕೃತ ವಚನಂಗಳಿಂ ಸಮೆದು ಸನ್ಮತಿ ತೀರ್ಥಕರಂಗೆ ವಿಶ್ವವಿ ॥
ಶ್ರುತಗಣನಾಥನಾಗಿ ಮಹಿಮೋನ್ನತಿವೆತ್ತು ವಿನೇಯಸಸ್ಯಸಂ ।
ತತಿಯನಲರ್ಚುತಿರ್ದನತಿನಿರ್ಮಳಧರ್ಮಸುಧಾಸಮೃದ್ಧಿಯಿಂ ॥ (೨೮)

ಕೆಲರೊಲವಿಂದೆ ದರ್ಶನವಿಶುದ್ಧಿ ಮಹಾವ್ರತಶುದ್ಧಿಯೆಂಬಿವಂ ।
ಕೆಲರೊಲವಿಂದೆ ದರ್ಶನವಿಶುದ್ಧಿಯಣುವ್ರತಶುದ್ಧಿಯೆಂಬಿವಂ ॥
ಕೆಲರೊಲವಿಂದೆ ದರ್ಶವಿಶುದ್ಧಿಯನೊಂದನೆ ಪೆತ್ತರಾ ಜಗ ।
ತ್ತಿಲಕನ ವರ್ಧಮಾನಜಿನರಾಜನ ಸಂದ ಸಭಾಂತರಾಳದೊಳ್ ॥ (೨೯)

ವ॥ ಇಂತು ಗೌತಮ ಗಣಾಗ್ರಣಿ ಪ್ರಮುಖ ಚತುರ ಚಾತುರ್ವರ್ಣ್ಯ ಸಂಘ ಸಂಗತನಾಮಹಾವೀರ ವೀತರಾಗಂ ಸುಮನೋವೃಷ್ಟಿ ಸಿಂಹವಿಷ್ಟರಂ ಪ್ರಭಾವಿತಾನ ದಿವ್ಯಧ್ವಾನ ಸೌರಭೇರೀ ಚಾರುಚಾಮರಾಶೋಕ ಪುಂಡರೀಕತ್ರಿತಯಾತಿಖ್ಯಾತ ಪ್ರಾತಿಹಾರ್ಯನಿಕಾಯಮಾಯತ್ತಮಾಗೆ ಮತ್ತಂ ಶತಗವ್ಯೂತಿಮಾತ್ರ ಕ್ಷೇತ್ರಸುಭಿಕ್ಷತೆಯುಂ, ಸರ್ವೋಪಸರ್ಗಾಭಾವಮುಂ ನಿಖಿಳಜೀವಜಾಳ ಹಿಂಸಾನಿವೃತ್ತಿಯುಂ ಅಂತರಿಕ್ಷಾವಸ್ಥಾನಮುಂ, ಚತುರಾಸ್ಯಸ್ವರೂಪಾವಭಾಸಮುಂ, ಸಮಸ್ತವಿದ್ಯಾಧಿಪತ್ಯಮುಂ ಅವ್ಯವಹಗಣರಾಹಿತ್ಯಮುಂ, ಅಪಗತಚ್ಛಾಯತ್ವಮುಂ, ಸಮಪ್ರಸಿದ್ಧನಖಕೇಶತ್ವಮುಂ ಅಪರಿಸ್ಪಂದಪಕ್ಷ್ಮಪಾಳಿತ್ವಮುಮೆಂಬ ಘಾತಿವಿಘಾತೋಪಜಾತವಿಶದದಶವಿಧಾತಿಶಯದೊಳ್ ಕೂಡಿ, ಸಂತತಾನಂತ ಚತುಷ್ಟಯ ಸ್ವಭಾವಪ್ರಭಾವಮನವಳಂಬಿಸಿ —

ಕಂ॥ ಶ್ರೀ ವರ್ಧಮಾನ ಸನ್ಮತಿ ।
ದೇವ ಮಹಾವೀರ ವೀರಮುಖ್ಯ ಸಮಸ್ತೋ ॥
ರ್ವೀವಳಯ ವಿನುತ ದಶಶತ ।
ಪಾವನ ನಾಮಂಗಳಂ ಜಿನಂ ತಳೆದೆಸೆದಂ ॥ (೩೦)

ವ॥ ಆ ಪರಮಾರ್ಹಂತ್ಯಲಕ್ಷ್ಮೀಕಾಂತಂಗೆ ನಿಖಿಳಗುಣನಿಶಾಂತಂಗೆ ಸಚ್ಚಿದಾನಂದಕಂದಳೀಜನ್ಮಭೂಮಿಗೆ ಸನ್ಮತಿಸ್ವಾಮಿಗೆ ಸಮಸ್ತ ಭವ್ಯಜನ ಪೂರ್ವಜನ್ಮೋಪಾರ್ಜಿತೋರ್ಜಿತ ಶ್ರೇಯೋನಿಕಾಯ ಪ್ರೇರಣೆಯಿಂ ಸಮನಿಪ ಸಮುಚಿತ ವಿಹಾರ ಪ್ರಾರಂಭಮಂ ಜಂಭಾರಿ ಭೂರಿ ಪ್ರಭಾವಸ್ವಾವಧಿಬೋಧ ಪ್ರಯೋಗದಿನಱಿದು ಬೇಗ ಮೆಯ್ತಂದು—

ಕಂ॥ ಮಂದಾರದ ಪೊಸಮಾಲೆಗ ।
ಳಿಂದಂ ಜಿನಪಾದಪದ್ಮಮಂ ಪೂಜಿಸಿಯಾ ॥
ನಂದದಿ ಬಿನ್ನವಿಸಿದನಿಂ ।
ತೆಂದು ಶಚೀರಮಣನಮಳ ಭಕ್ತಿಸಮೇತಂ ॥ (೩೧)

ಚಂ॥ ಕುನಯ ಘನಾಂಧಕಾರಮನಪಾರಮನೋವದೆ ತೂಳ್ದಲುಂ ವಿನೇ ।
ಯನಿಕರ ಚಿತ್ತನೇತ್ರ ವನಜಕ್ಕೆ ವಿಕಾಸವಿಳಾಸಲಕ್ಷ್ಮಿಯಂ ॥
ಜನಿಯಿಸಲುಂ ಪದಂ ದಲಿದು ದೇವ ಜಗತ್ತ್ರಯನೇತ್ರವೀರ ಪಾ ।
ವನ ಜಿನಭಾನು ನೀನೆಸಗು ವಿಶ್ವವಸುಂಧರೆಯೊಳ್ ವಿಹಾರಮಂ ॥ (೩೨)

ವ॥ ಎಂದು ಪುರಂದರಂ ವಿನಯದಿಂ ವಿಜ್ಞಾಪನಂಗೆಯ್ಯೆ—

ಕಂ॥ ವೃಂದಾರಕ ವೃಂದಾಹತಿ ।
ದುಂದುಭಿಸಂದೋಹ ಸಾಂದ್ರ ಮಂದ್ರೋಚ್ಚಧ್ವಾ ॥
ನಂ ದೆಸೆಗಳುಮಂ ನಭಮುಮ ।
ನಂದಾಕ್ರಮಿಸಿತ್ತು ಭವ್ಯಜನಹರ್ಷಕರಂ ॥ (೩೩)

ವ॥ ಮತ್ತಂ ತತ್ತೀರ್ಥಕರ ಪರಮದೇವ ಶ್ರೀ ವಿಹಾರದೊಳ್ ಸರ್ವತೋಭದ್ರ ಸರ್ವಜ್ಞ ಮನೋಜ್ಞ ಪದ್ಮವನಯಾನಮುಂ, ಸರ್ವಾರ್ಥ ಮಾಗಧೀಯ ಭಾಷಾವಿಶೇಷಮುಂ, ಸರ್ವಜನಮನೋನುರಾಗಾಭೋಗಮುಂ, ಸರ್ವಾನುಕೂಲ ಸುರಭಿಗಂಧಿ ಗಂಧವಾಹ ಮಂದಮಂದ ಪ್ರಚಾರಮುಂ, ಸರ್ವಪ್ರಯತ್ನ ಮರುತ್ಕುಮಾರ ಸಮ್ಮಾರ್ಜನಾತಿ ಶುದ್ಧಯೋಜನಮಾತ್ರ ಧಾತ್ರೀಭಾಗಮುಂ, ಸರ್ವಸಮ್ಮತಸ್ತನಿತಕುಮಾರ ತದ್ಧಾರಿಣೀ ವಿಸ್ತಾರಿತ ಪುಳಯರುಹ ಕಾಶ್ಮೀರಗಂಧಬಂಧುರವಾರಿನಿಷೇಕಮುಂ, ಸರ್ವರ್ತುಸಮುಚಿತ ನವಪ್ರವಾಳಪ್ರಸವ ರಸವತ್ಫಳಮಹೀಜರಾಜಿ ವಿಭ್ರಾಜಿತ ದರ್ಪಣಾಯಮಾನ ರತ್ನಮಯ ಮಹೀವಳಯಮುಂ, [ಸ]ರ್ವನಯನಾನಂದಸ್ಯಂದಿ ಫಳಭಾರ ನಮ್ರಕಮ್ರಶಾಳಿವ್ರೀಹ್ಯಾದಿ ಸಸ್ಯಸಂಪತ್ತಿಯುಂ, ಸರ್ವಜಂತುಸಂತಾನಾಂಗರಂಗ ಸಂಗತಾತ್ಯಂತ ವಿಚಿತ್ರಮೈತ್ರಿಯುಂ, ಸರ್ವಪಕ್ಷಿಪ್ರಚಾರ ಧಾರಾಧರ ವಿಗಮವಿಮಳೀಕೃತ ವಿಹಾಯಸಮುಂ ಸರ್ವದಿಶಾವಳಯಾಕಳಿತ ತಮೋರಜಃಪಟಳ ವಿಳಯ ವಿಸ್ಪಷ್ಟ ವೈಶದ್ಯಮುಂ ಸರ್ವಗೀರ್ವಾಣನಿಕಾಯಾಮೋಘ ಪ್ರೀತಿಪರಸ್ಪರಾಹ್ವಾನಧ್ವಾನಮುಂ, ಸರ್ವಭವ್ಯಜನ ಮನಃಸರೋಜಮಾರ್ತಂಡಮಂಡಳಾಯಮಾನಮಾನಿತಾಗ್ರೇಸರ ಧರ್ಮ

ಚಕ್ರಮುಂ, ಸರ್ವೋರ್ವರಾತಿಪ್ರಶಸ್ತ ಭೃಂಗಾರಾದಿ ಮಂಗಳೋಪಕರಣ ಧರಣ ರಮಣೀಯ ಕರಸರೋಜ ಪುರಂಧ್ರೀ ಪುರಸ್ಸರ ಮುಮೆಂಬ ನಿಳಿಂಪನಿರ್ಮಿತ ಚತುರ್ದಶಾತಿಶಯಂಗಳಖಿಳ ವಿಸ್ಮಯಾಶಯಮುಕುಶೇಶಯಂಗಳನಲರ್ಚೆ—

ಚಂ॥ ಕುರುಕರಹಾಟಲಾಟ ಖಚಗೂರ್ಜರಮಾಳವ ಚೋಳಮುಖ್ಯ ಬಂ।
ಧುರವಿಷಯಂಗಳೊಳ್ ಪರಮಧರ್ಮಸುಧಾರಸಮಂ ನಿರಂತರಂ॥
ನಿರುಪಮ ವೈಭವಂ ಕಱೆಯುತುಂ ವರವೀರಜಿನೇಶ್ವರಂ ಸಮು।
ದ್ಧರಿಸಿದನಿಂತು ತೀರ್ಥಮನನಂತ ಗುಣಾಂಬುಧಿ ಸದ್ವಿಹಾರದಿಂ॥ (೩೪)

ಕಂ॥ ಎಸೆವಾಜಿನರಾಜನ ಸಮ।
ವಸರಣಮಾಶ್ಚರ್ಯಕರಣಮದು ಕೂಡೆ ವಿಹಾ॥
ರಿಸುತುಂ ಬಂದುದು ರಾಜಗೃ।
ಹಸಮೀಪದ ವಿಪುಳಗಿರಿಗೆ ವಿಮಳೋತ್ಸವದಿಂ॥ (೩೫)

ಆ॥ ಆಗಳ್—

ಉ॥ ಕಂಪಿನ ಸೊಂಪನಾಂತೆಸೆಯೆ ತೀಡುವ ತಣ್ಣೆಲರಿಂ ಸಮಂತು ಚೆ।
ಲ್ವಂ ಪಡೆದಿರ್ದ ದಿಗ್ಗಗನದಿಂ ಸುರಭೇರಿಯ ಭೂರಿ ನಾದದಿಂ॥
ದಂ ಪರಿತಂದು ಬಿನ್ನವಿಪ ಮಾನವರಿಂ ಮಗಧಾಧಿಪಂಗೆ ನೈ।
ಳಿಂಪ ವಿನೂತ ಸನ್ಮತಿ ಸಮಾಗತಿಯಾಯ್ತು ಹಿತಂ ಸುನಿಶ್ಚಿತಂ॥ (೩೬)

ವ॥ ಅನಂತರಂ—

ಮ॥ ಸ್ರ॥ ವಸುಧೇಶಂ ಶ್ರೇಣಿಕಂ ಚೇಳಿನಿವೆರಸು ಮಹಾನಂದದಿಂ ಭವ್ಯಸಂದೋ।
ಹಸಮೇತಂ ಬಂದು ಭಾಸ್ವತ್ಸಮವ[ಸರಣ]ಮಂ ಪೊಕ್ಕು ತಚ್ಛೋಭೆಯಂ ವ॥
ರ್ಣಿಸಿ ವರ್ಣಿಸುತ್ತ್ಯನಂ ಸನ್ನುತಮತಿ ಒಲವಂದರ್ಚನಾ ದ್ರವ್ಯದಿಂದ।
ರ್ಚಿಸಿ ತಚ್ಛ್ರೀಪಾದಪೀಠಾಂತಮನವನತಿಯಂ ಮಾಡಿ ಸರ್ವಾಂಗದಿಂದಂ॥ (೩೭)

ವ॥ ನಿಂದಿರ್ದು ಭಾಳಸ್ಥಳಾಳಂಕೃತ ಕರಕಮಳಮುಕುಳನಾಗಿ—

ಕಂ॥ (೧) ಶ್ರೀಗೆ ವಚಃಶ್ರೀಗೆ ಜಯ।
ಶ್ರೀ[ಗಮೃತಶ್ರೀಗೆ ನೀನೆ ಶರಣೆಂಬ ಮಹಾ]॥
ಭಾಗಂ ಭಾಜನನಕ್ಕುಂ।
ಬೇಗದೆ ತೊದಳಾವುದಿಲ್ಲ ವರವೀರಜಿನಾ॥ (೩೮)

(೨) ಅರಿದಾರ್ಗಂ ಗೆಲಲೆನಿಸುವ।
ದುರಿತಮಹಾಭಟರ ಸೇನೆಯಂ ನೀನೆ ದಿಟಂ॥
ಶರಣೆಂಬ ನರಂ ನೆರೆಗುಂ।
ಹರಿಗುಂ ನಿರ್ವಾಣಪುರಕೆ ವರವೀರಜಿನಾ॥ (೩೯)

(೩) ಸಂಸಾರಮಹಾಂಬುಧಿಯಂ ।
ನೀಂ ಸರಣೆಂಬವನೊಳೊಂದು ಕುಡುತೆಯು ಕೊನೆಗಂ ॥
ಸಂಸಯಮೇಂ ನೆಱಿಯದ ತೆಱ ।
ದಿಂ ಸ್ಸಂತೋಷಿಸುಗುಮಲ್ತೆ ವರವೀರಜಿನಾ ॥ (೪೦)

(೪) ಸ್ಮರನಂ ಘಸ್ಮರನಂ ಕೇಳ್ ।
ಮರನಂ ಸುಡುವಂತೆ ಸುಟ್ಟು ನೀಂ ಶರಣೆಂಬಾ ॥
ಪುರುಷಂ ಪರುಷಾಘದಿನೋ ।
ಸರಿಕುಂ ಪಡೆಗುಂ ವಿಮುಕ್ತಿಯುಂ ವೀರಜಿನಾ ॥ (೪೧)

(೫) ಇನಿಸಂ ಮುನಿಸಂ ಜನದೊಳ್ ।
ಮನದೊಳ್ ತಳೆದಂದು ದಂದುಗಂ ಭವಭವದೊಳ್ ॥
ತನಗಕ್ಕುಮೆಂದು ನೀಂ ಶರ ।
ಣೆನುತಿರ್ಪವನನುಱಿಗುಮಂತದಂ ವೀರಜಿನಾ ॥ (೪೨)

(೬) ತೊದಳೇಂ ನೀಂ ಶರಣೆಂಬೀ ।
ಪದವುಂ ಮದಮುಂ ಬಿಸುಟ್ಟು ಜಪಿಯಿಪ ಬುಧನಾ ॥
ಸದಯಂ ಹೃದಯಂ ಸದಯಾ ।
ಭ್ಯುದಯಾಸ್ಪದಮಾಗದಿರ್ಕುಮೇ ವೀರಜಿನಾ ॥ (೪೩)

(೭) ಅಘವಂ ಮಘವಂ ನೆಟ್ಟನೆ ।
ವಿಘಟಿಸಲೆಂದಭವವಿಭವದಿಂದಂ ನಿನ್ನಂ ॥
ಸಘೃಣಿ ಸಲೆ ಪೂಜಿಪಂ ಪ್ರಾ ।
ಲಘುಗುಣ ನೀಂ ಶರಣೆನುತ್ತೆ ವರವೀರಜಿನಾ ॥ (೪೪)

(೮) ಭೃತಮುಂ ಬ್ರತಮುಂ ಪಾಳಿಪ ।
ಮತಿಯುಂ ಧೃತಿಯುಂ ಸಮಂತು ನೀಂ ಶರಣೆಂಬಾ ॥
ಕೃತಿಯೊಳ್ ಕ್ಷಿತಿಯೊಳ್ ಪುಣ್ಯಾ ।
ಕೃತಿಯೊಳ್ ಸತತಂ ವಿರಾಜಿಕುಂ ವೀರಜಿನಾ ॥ (೪೫)

ಎಂದು ವಿವಿಧಸ್ತವಾವಳಿ ।
ಯಿಂದಂ ಸನ್ಮತಿ ಜಿನೇಂದ್ರನಂ ಸ್ತುತಿಯಿಸೆ ಭೂ ॥
ವಂದಿತನಂ ಗೌತಮನಂ ।
ಬಂದಿಸಿದಂ ಬಂದು ಗಣಧರಾಗ್ರೇಸರನಂ ॥ (೪೬)

ವ॥ ಅಂತು ಬಂದಿಸಿ ಬೞಿಯಂ ನಿಜೋಚಿತ ಕೋಷ್ಠದೊಳಾ ನೃಪಾಳಶ್ರೇಷ್ಠಂ ಕುಳ್ಳಿರ್ದು ವಿನಯ ವಿಹಿತಪ್ರಶ್ನಂ ತತ್ವಶ್ರವಣದತ್ತಚಿತ್ತನಾಗಿ ಪೀಯೂಷಪ್ರವಾ

ಹಾಯಮಾನ ಗಂಭೀರೋದಾರ ಸುವ್ಯಕ್ತ ಸೂಕ್ತಿ ಪ್ರಸರದಿಂ ಪ್ರಸನ್ನ ಗಣಧರದೇವಂ ಬೆಸಸಿದಂ ಪಂಚತ್ಪಂಚಾಸ್ತಿಕಾಯ ಷಡ್ದ್ರವ್ಯಸಪ್ತತತ್ವ ನವಪದಾರ್ಥ ಸಾರ್ಥಮುಮಂ, ಪ್ರತಿನಿಯತಾವಸ್ಥಿತ ತ್ರಿಳೋಕತ್ರಿಕಾಲ ಪ್ರಪಂಚಮುಮಂ, ತ್ರಿಷಷ್ಟಿಶಲಾಕಾಪುರುಷ ಪುರಾಣಕಥಾಕಳಾಪಮುಮಂ, ಸಾಗಾರಾನಗಾರ ಭೇದಭಿನ್ನಾಚಾರ ವಿಸ್ತಾರಮುಮಂ ಮತ್ತಮತ್ಯಂತ ಹೇಯರೂಪಾಸಾರಸಂಸಾರವೃತ್ತಿಯುಮಂ, ಸಾಕ್ಷಾದುಪಾದೇಯರೂಪ ಪರಮಪವಿತ್ರ ರತ್ನತ್ರಯಮಾಹಾತ್ಮ್ಯಸಂಪತ್ತಿಯುಮಂ, ಸವಿಸ್ತರಮಱಿಪಿ—

ಕಂ॥ ಅಧಿಕೋತ್ಸವಪೀಯೂಷಾಂ ।
ಬುಧಿಯೊಳ್ ತನ್ನಂತರಂಗವೋಲಾಡೆ ಗುಣಾಂ ॥
ಬುಧಿ ಮಗಧಮಂಡಳೇಶಂ ।
ವಿಧು ವಿಶದಯಶೋವಿಭಾಸಿ ತಣ್ಣನೆ ತಣಿದಂ ॥ (೪೭)

ವ॥ ಅನಂತರಂ—

ಕಂ॥ ನರಪಂ ಕರಪಂಕಜಮಂ ।
ವರಪಂಡಿತ ಪುಂಡರೀಕ ಕೀರ್ತಿತಯಶನಾ ॥
ದರದಿಂ ಭರದಿಂ ಮುಗಿದಪು ।
ಹರನಂ ನಿಜಗತ ಭವಂಗಳಂ ಬೆಸಗೊಂಡಂ ॥ (೪೮)

ಬೆಸಗೊಳೆ ದಶನಮರೀಚಿ ।
ಪ್ರಸರಂ ಪೊಸಜೊನ್ನದಂತೆ ಪಜ್ಜಳಿಸಿ ವಿಕಾ ॥
ಶಿಸುತಿರೆ ನೃಪಹೃತ್ಕುಮುದಮ ।
ನಸದೃಶಯಶನಿಂತು ಬೆಸಸಲುದ್ಯತನಾವಂ ॥ (೪೯)

ವಿಂಧ್ಯಂ ನಗಮುಗಣಿತ ಸೌ ।
ಗಂಧ್ಯಂ ನಿಜಪದ್ಮರಾಗರುಚಿರಚಿತ ಮಹಾ ॥
ಸಾಂಧ್ಯಂ ಶಬರಕ್ರೀಡಾ ।
ವಂಧ್ಯಮದೀಭರತಭೂಗೆ ಭೂಷಣಮೆಸೆಗುಂ ॥ (೫೦)

ವ॥ ಆ ಮಹಾಮಹೀಧರದ ನಿಕಟದಲ್ಲಿ—

ಕಂ॥ ಘಟಕುಚದ ಬರ್ಹಿಕಚದವಿ ।
ಕಟ ಯೌವನಭರದ ವರಕೃಶೋದರದ ಮದೋ ॥
ತ್ಕಟದ ಶಬರಿಯರಿನೆಸೆವುದು ।
ಕುಟಜವನಂ ಕುಟಜಕುಟಜನನಮೃಗಭವನಂ ॥ (೫೧)

ಕಂ॥ ಅವನೀಶ್ವರ ನೀಂ ಪೆಱಗೀ ।
ಭವಕ್ಕೆ ಮೂಱನೆಯ ಭವದೊಳಾಕುಟಜ ಮಹಾ ॥
ಟವಿಯುಲ್ಲಿ ಖದಿರಸಾರಾ ।
ಖ್ಯೆವಲಂ ಸಮನಿಸಿದ ಶಬರನಾಯಕನಾದೈ ॥ (೫೨)

ಆ ಭಿಲ್ಲವಲ್ಲಭಂ ಹಿಂ ।
ಸಾಭಿರತಂ ಮದ್ಯಮಾಂಸಮಧು ಸಂತತಸೇ ॥
ವಾಭಿರತಂ ಬಹುವಿಷಯಸು ।
ಖಾಭಿರತಂ ದುರಿತಮೂರ್ತಿ ಜೀವಿಸುತಿರ್ದಂ ॥ (೫೩)

ಉತ್ಸವ॥ ಒರ್ಮೆ ತತ್ಕಿರಾತರಾಜನಾವನಾಂತರಾಳದೊಳ್ ।
ದುರ್ಮತಾಂಧಃಕಾರಸೂರನಂ ನಿರಸ್ತಮಾರನಂ ॥
ನಿರ್ಮಳತ್ರಿಗುಪ್ತಿಗುಪ್ತನಂ ಸಮಾಧಿಗುಪ್ತನಂ ।
ಪೆರ್ಮೆವೆತ್ತ ಜೈನಯೋಗಿಯಂ ಗುಣೋಪಯೋಗಿಯಂ ॥ (೫೪)

ಕಂ॥ ಕಂಡುಪಶಾಂತಸ್ವಾಂತಂ ।
ದಂಡಿತದುರಿತಂಗೆ ವಿನಯದಿಂದೆಱಗಿ ಮನಂ ॥
ಗೊಂಡಾಯತಿಪತಿಯೊಳ್ ಕೆ ।
ಯ್ಕೊಂಡನವಂ ಕಾಕಮಾಂಸವಿರತಿವ್ರತಮಂ ॥ (೫೫)

ಎಸೆವಾವ್ರತಮಂ ಪ್ರತಿಪಾ ।
ಳಿಸುತ್ತುಮಿರ್ದಂಗದೊರ್ಮೆ ಕರ್ಮದ ಬಸದಿಂ ॥
ನಸಿಗುತ್ತಂಪತ್ತಿ ವಿವ ।
ರ್ಧಿಸುತಿರ್ದುದು ಬಂಧುಜನದ ಮನದುಮ್ಮಳಮಂ ॥ (೫೬)

ವ॥ ಆಗಳಾತನ ಪುರಾತನ ಕಿರಾತನಾಯಕರೆಯ್ತಂದು ಕಡುಗುತ್ತದಿಂ ಬಡಪಟ್ಟ ನೊಡಲಂ ಬಿಡದೆ ನೋಡಿ ನಡನಡನಡುಗಿ ಕಾಗೆಯುಡಗಂ ತಡೆಯದೆ ಕೊಡಲೊಡಂ ಕಿಡುಗುಮಿಾ ಕಡಿದಪ್ಪ ರೋಗಮೆಂದು ನುಡಿವುದುಮಾ ಜಡರ ನುಡಿಯಂ ಶಬರರೊಡೆಯನವಧಾರಿಸಿ—

ಕಂ॥ ಪಿರಿಯರ ಪಕ್ಕದೊಳಾಂ ಮುಂ ।
ಧರಿಯಿಸಿದೆಂ ಕಾಕಮಾಂಸವಿರತಿವ್ರತಮಂ ॥
ಪರಿಹರಿಸುವೆನಲ್ಲೆನದಂ ।
ಹರಣಂಗಳ್ ಬಿಟ್ಟು ಪೋಪೊಡಂ ಕೇಳೆನಿದಂ ॥ (೫೭)

ವ॥ ಎಂದು ನಿಜಕೃತ ಪ್ರತಿಜ್ಞೆಯುಂ ಪ್ರತಿಪಾಳಿಪ್ಪ ಪುಳಿಂದಪುಂಗವನನೊಡಂಬಡಿಸಲ್ ನೆಱೆಯದಾತನ ಮೈದುನನಪ್ಪ ಸೂರಪುರದ ಸೂರವೀರನಲ್ಲಿಗಾವೃತ್ತಾಂತಮಂ ಪೇೞ್ದಟ್ಟದೊಡಾತನತಿತ್ವರಿತಗತಿಯಿಂ ಬರುತ್ತುಮಿರ್ಪಾಗಳ್—

ಕಂ॥ ಆಪೇರಡವಿಯೊಳೊರ್ವಳ್ ।
ರೂಪವತಿಯನೇಕ ಭೂಷಣಾನ್ವಿತೆ ರಸೆಯಂ ॥
ವ್ಯಾಪಿಪ ಬಹುಪ್ರಳಾಪ ಕ ।
ಳಾಪದಿನಬುತಿರ್ದಳಿರ್ಪುದುಂ ತದ್ರವಮಂ ॥ (೫೮)

ವ॥ ಕೇಳ್ದು ಪೆಣ್ಬುಯ್ಯಲಂ ವಿಚಾರಿಸದೆ 'ಪುರುಷಂ ಪೋಗಲಾಗದೆಂದು ತತ್ಸ ಮೀಪಮನೆಯ್ದಿ ವಟವಿಟಪಿಯ ಮೊದಲೊಳಿರ್ದಳಂ ಕಂಡು—

ಕಂ॥ ನೀನಾರ್ಗೇಕಟ್ಟುಪೆಯೆಲೆ ।
ಮಾನಿನಿ ಪೇಟೆಂದು ಶಬರವರನತಿದಯೆಯಿಂ ॥
ತಾನವಳಂ ಬೆಸಗೊಳೆ ನೆಗ ।
ಟ್ದಾನಾರಿ ಮನೋನುರಾಗದಿಂದಿಂತೆಂದಳ್ ॥ (೫೯)

ಉ॥ ಯಕ್ಷಿಯೆ ನಾಂ ವಲಂ ಖದಿರಸಾರನನಕ್ಕಟ ಕಾಕಮಾಂಸಮಂ ।
ಭಕ್ಷಿಸೆನೆಂಬ ಸದ್ವ್ರತದೆ ಸತ್ತೆನಗಂ ಪತಿಯಾಗಲಿರ್ದನಂ ॥
ಭಕ್ಷಿಸಲೆಂದು ಮಾಡಿ ನರಕಂಬುಗಿಸಲ್ ಬರುತಿರ್ಪ ನಿನ್ನನಾ ।
ನೀಕ್ಷಿಸಿ ಸೂರವೀರ ಪಿರಿದಪ್ಪಬಿಲಂ ತಳದೀಗಳಟ್ಟುಪೆಂ ॥ (೬೦)

ವ॥ ಎಂಬದುಮಾ ದೇವತೆಯ ವಾಕ್ಯತತಿಯನಾ[ಕರ್ಣಿ]ಸಿ ವಿಸ್ಮಿತಾಂತರಂಗಂ ತದ್ವ್ರತಭಂಗಮಂ ಸಂಗಳಿಸುವೆನಲ್ಲೆನೆಂದು ತಲ್ಲಲನೆಗೆ ಭಿಲ್ಲವಲ್ಲಭಂ ನಂಬೆ ನುಡಿದು ನಡೆದು ಶಬರ ಖದಿರಸಾರನಂ ಸಾರ್ದು ತತ್ಪರಿಣತಿಯಂ ಪರೀಕ್ಷಿಸಲೆಂದು ಕಾಕಪಿಶಿತಮುಸಿತ ಮಾಗೆ ಬೇಗದಿಂ ರೋಗಮಂ ನೀಗಿ ರಾಗದಿಂ ಬಾಟಿಪ್ಪಿಯದಱಿನದನೊಲ್ಲೆನೆಂದೆನ್ನೊಲ್ಲರಂ ಕೊಲ್ಲದೆ ಮಲ್ಲೆಂದು ಮೆಲ್ಲನೆ ನುಡಿ(ದೊ)ಡೆ ನೋಡಿ ಬೇಡರರಸಂ ನೀಡುಮಿಾತಾಡಿ ಕಾಡೊಡೆಯನಂ ಜಡಿದು ನುಡಿದಂತುಂ ಸಾವೆನಲ್ಲದೆ ಕಾವುದಂ ಮಾಣೆನಾಂ ವ್ರತಮ ನೆಂಬುದುಂ ಭಾವನ ಪಾವನ ಶೀಲಪ್ರಭಾವಕ್ಕೆ ಮೆಚ್ಚಿ—

ಕಂ॥ ನಿನಗಿಂ ಮೂಱೆ ದಿನಂ ಜೀ ।
ವನಮೊಳ್ಳಿತು ಗೆಯ್ದು ದೇವಗತಿಯೊಳ್ ತೊದಳೇಂ ॥
ಜನಿಯಿಸಿದಪೆ ಬರುತುಂ ಕೇ ।
ಳ್ದಿನಿಂತಿದಂ ಭಾವ ಯಕ್ಷಿದೇವಿಯ ದೆಸೆಯಿಂ ॥ (೬೧)

ವ॥ ಎಂದು—

ಕಂ॥ ಆಕರ್ಣಿತ ವೃತ್ತಕಮಂ ।
ಸಾಕಲ್ಯದೆ ಪೇಟೆ ಕೇಳ್ದು ಸಕಳ ವ್ರತಮಂ ॥
ಸ್ವೀಕರಿಸಿ ಕಾಯಮಂ ಬಿ ।
ಟ್ಟಾಕುಶಲಂ ಪ್ರಥಮಕಲ್ಪದೊಳ್ ಜನಿಯಿಸಿದಂ ॥ (೬೨)

ವ॥ ಅಂತು ಜನಿಯಿಸಿ ತತ್ಕಲ್ಪದನಲ್ಪಸುಖಮಂ ದ್ವಿಸಾಗರೋಪಮಾಯುರವಸಾನಂಬರಮುಂಡು ತದ್ದೇವನಪ್ಪ ನೀನಿಲ್ಲಿ ಬಂದು—

ಕಂ॥ ಭೂಮೀಶ್ವರ ಕುಣಿಕಂಗಂ।
ಶ್ರೀಮತಿಗಂ ಶ್ರೇಣಿಕಾಖ್ಯ ಸುತನಾದ್ಯೆ ಮ॥
ತ್ತೀಮಾತೊ ವಿಷಯಕಾಂಕ್ಷೆೞೀ।
ದ್ದಾಮತೆಯಿಂ ಪ್ರಥಮ ನರಕಮಂ ನೀಂ ಪುಗುವೈ॥ (೬೩)

ಕ್ಷಾಯಿಕ ಸಮ್ಯಕ್ತ್ವಂ ನಿ।
ಶ್ರೇಯಸಕರಮಾದುದಿಲ್ಲಿ ನಿನಗದಱಿಂ ಬ॥
ರ್ಪೀಯುತ್ಸರ್ಪಿಣಿಯೊಳ್ ನಿರ।
ಯಾಯಾತಂ ಪ್ರಥಮತೀರ್ಥಕರವರನಪ್ಪಯ್॥ (೬೪)

ವ॥ ಎಂದು ಗೌತಮಸ್ವಾಮಿ ಬೆಸಸೆ ನಿರಯನಿಪತನ ಭೀತಿಯಂ ತೀರ್ಥಕರತ್ವಪ್ರಾಪ್ತಿಪ್ರೀತಿಯಿಂ ಪ್ರಶಮಿಸಿ, ಜಿನಮುನಿಗಳಂ ಬೀೞ್ಕೊಂಡು ಸಮವಸರಣದಿಂ ಧರಣಿಗವತರಿಸಿ ನಿಜರಾಜಧಾನಿಯಂ ಮಹಾವಿಭವದಿಂ ಪೊಕ್ಕಂ. ಇತ್ತಲಾದೇವದೇವೋತ್ತಮಂ ಗೌತಮಪ್ರಮುಖೈಕಾದಶಗಣಧರರುಂ, ಶತತ್ರಯಪೂರ್ವಧರರುಂ, ತ್ರಿಶತಾಧಿಕ ಸಹಸ್ರಾವಧಿಜ್ಞಾನಿಗಳುಂ, ಸಪ್ತಶತಕೇವಳಿಗಳುಂ, ನವಶತ ವಿಕ್ರಿಯರ್ಧಿಪ್ರಾಪ್ತರುಂ, ಚತುಶ್ಶತವಾದಿಗಳುಂ, ನವಶತ ಶಿಕ್ಷಕರುಂ, ಚಂದನಾರ್ಯಿಕಾಪ್ರಮುಖ ಷಟ್ತ್ರಿಂಶತ್ಸಹಸ್ರ ಗುಣವದ್ಗಣಿನಿಯರುಂ, ಏಕಲಕ್ಷ ಶ್ರಾವಕರುಂ, ತ್ರಿಲಕ್ಷ ಶ್ರಾವಕಿಯರುಂ, ಅಸಂಖ್ಯಾತ ದೇವದೇವೀನಿಕಾಯಮುಂ ಸುರಸಮಿತಿಯುಂ ತಿರ್ಯಗ್ವರ್ಗಮುಂ ಬೆರಸು—

ಕಂ॥ ಬರಿಸಂಗಳ್ ಮೂವತ್ತೋ।
ಸರಿಸುವಿನಂ ಭವ್ಯಬಂಧು ಧರ್ಮಕ್ಷೇತ್ರೋ॥
ತ್ಕರದೊಳ್ ವಿಹಾರಮಂ ಬಿ।
ತ್ತರಿಸಿದನಾನತಶಿವಂಕರಂ ತೀರ್ಥಕರಂ॥ (೬೫)

ವ॥ ಅಂತು ವಿಹಾರಿಸುತ್ತುಂ ಚತುರ್ಥಕಾಲದೊಳ್ ತ್ರಿಸಂವತ್ಸರಂಗಳುಮಷ್ಟಮಾಸಂಗಳುಂ ಪಂಚದಶದಿನಂಗಳುಮವಶಿಷ್ಟಂಗಳಾದುವೆಂಬಂದು—

ಕಂ॥ ಪಾವಾಪುರವರದ ಬಹಿ।
ರ್ಭೂವಿಳಸಿತ ವಿತತವನಕೆ ಸುರುಚಿತಸರಸೀ॥
ಪಾವನ ವನಕೆ ಜಿನೇಂದ್ರಂ।
ಶ್ರೀವೀರಂ ಮಾರವಿಜಯಿ ಬಿಜಯಂಗೆಯ್ದಂ॥ (೬೬)

ವ॥ ಅಂತು ಬಿಜಯಂಗೆಯ್ದು ವಿ[ಸ]ರ್ಜಿತ ಸಮವಸರಣೋಪಾಶ್ರಿತಜನಸಮುದಯನುಂ, ದಿನದ್ವಯಪರಿತ್ಯಕ್ತವಿಹರಣಕ್ರಿಯನುಮಾಗಿ, ಸಹಸ್ರಯತಿವರವೃಷಭಸಮನ್ವಿತಮಲ್ಲಿಯೊಂದು ಸಮುಲ್ಲಸಿತ ನಿರ್ಜಂತುಕ ವಿಶಾಳ ಶಿಲಾಪಟ್ಟಕದ ಮೇಲೆ—

ಕಂ॥ ಅಪ್ರತಿಮ ಗುಣಾಂಬುಧಿ ಸುದೃ।
ಢ ಪ್ರತಿಮಾಯೋಗದಿಂದೆ ನಿಂದಂ ತ್ರೈಲೋ॥
ಕ್ಯಪ್ರಭು ತತ್ಸನ್ಮತಿ ಕೃ।
ತ್ಸ್ನಪ್ರಾಣಿಲಸದ್ದಯಾಕರಂ ತೀರ್ಥಕರಂ॥ (೬೭)

ವ॥ ಅಂತು ನಿಂದ[ಸೂಕ್ಷ್ಮಕ್ರಿಯಾಪ್ರತೀಕನಾಗಿ ಮೂಲಶರೀರಪ್ರಮಾಣಾವಸ್ಥಿತಾತ್ಮಪ್ರದೇಶಂ ಬಱಿಯಮಂತರ್ಮುಹೂರ್ತದಿಂ ಬಾದರಮನೋವಚನೋಚ್ಛ್ವಾಸಂ ಬಾದರಕಾಯೋಗ]ಸೂಕ್ಷ್ಮಮನೋವಚನೋಚ್ಛ್ವಾಸಂಗಳುಮಂ ನಿರೋಧಿಸಿ ಸೂಕ್ಷ್ಮಕಾಯಯೋಗನಾಗಿ ಸಮನಂತರಂ ತನ್ನಿರೋಧಂಗೆಯ್ದಯೋಗಿ ಕೇವಳಿಗುಣಸ್ಥಾನಸ್ಥಿತಂ ಸಮುಚ್ಛಿನ್ನಪ್ರಾಣೋಪಾನಪ್ರಚಾರನಾಗಿ ಸಮುಚ್ಛಿನ್ನಕ್ರಿಯಾನಿವೃತ್ತಿಯೆಂಬ ಚತುರ್ಥಪರಮಶುಕ್ಲಧ್ಯಾನದೊಳ್ ನಿಂದು, ಸಂರುದ್ಧಸರ್ವಾಸ್ರವಂ, ಸಂಪೂರ್ಣ ಸಕಳ ಶೀಳಗುಣಸಮಾಜಂ ನಿಜೋಪಾಂತಸಮಯದೊಳನ್ಯತರವೇದನೀಯ ದೇವಗತಿತತ್ಪ್ರಾಯೋಗ್ಯಾನುಪೂರ್ವ ಶರೀರಬಂಧನ ಸಂಘಾತವರ್ಣರಸಪ್ರತ್ಯೇಕ ಪಂಚಕ ಸಂಹನನ ಸಂಸ್ಥಾನಷಟ್ಕಗಂಧ ದ್ವಿತಯ ವಿಹಾಯಾಂಗೋಪಾಂಗ ದ್ವಿತಯ ವಿಹಾಯೋಗತಿ ದ್ವಿತಯ ಸ್ಪಷ್ಟಕಾಗುರುಲಘು ಚತುಷ್ಕ ಶುಭಾಶುಭ ಸ್ಥಿರಾಸ್ಥಿರ ಸುಸ್ವರ ದುಸ್ವರ ದುರ್ಭಗಪ್ರತ್ಯೇಕ ಶರೀರಾಯುಶಸ್ಕೀರ್ತ್ಯನಾದೇಯ ನಿರ್ಮಾಣಪರ್ಯಾಪ್ತ ನೀಚೈರ್ಗೋತ್ರಂಗಳೆಂಬ ದ್ವಾಸಪ್ತತಿ ಪ್ರಕೃತಿಗಳಂ ನಿರವಶೇಷಂ ಮಾಡಿ ನಿಜಚರಮ ಸಮಯದೊಳವಶಿಷ್ಟಾನ್ಯತರ ವೇದ್ಯಮನುಷ್ಯಾಯುರ್ಗತಿ ತತ್ಪ್ರಾಯೋಗ್ಯಾನುಪೂರ್ವ ಪಂಚೇಂದ್ರಿಯಜಾತಿ ತ್ರಸನಾಮ ಸುಭಗಾಧೇಯ ಪರ್ಯಾಪ್ತ ಬಾದರಯಶಸ್ಕೀರ್ತ್ಯುಚ್ಚೈರ್ಗೋತ್ರ ತೀರ್ಥವರನಾಮಂಗಳೆಂಬ ತ್ರಯೋದಶ ಪ್ರಕೃತಿಗಳುಮನುನ್ಮೂಲಿಸಿದನಿಂತು—

ಉ॥ ಧ್ಯಾನಮಣಿಪ್ರದೀಪದಿನಘಾತಿ ಮಳೌಘಮಹಾಂಧಕಾರ ಸಂ।
ತಾನಮನೆಯ್ದೆ ತೂಳ್ದಿ ನೆಗೞ್ದಷ್ಟಗುಣಂಗಳ ಪುಷ್ಟಿ ತನ್ನೊಳ॥
ನ್ಯೂನಮದಾಗೆ ಜೇಗದೆ ಜಗತ್ತ್ರಿತಯಾಗ್ರಮನೆಯ್ದಿ ಮೋಕ್ಷಲ।
ಕ್ಷ್ಮೀನಿಧಿಯಾದನಾ ಪರಮಪಾವನ ಸನ್ಮತಿ ತೀರ್ಥನಾಯಕಂ॥ (೬೮)

ಮ॥ ಎನಿತೊಂದುಂಟು ಗುಣಂ ಪ್ರಕೃಷ್ಟಮನಿತುಂ ಸಂಪತ್ತಿಯಂ ಪೆತ್ತು ವಾ।
ತ್ಮನೊಳೆಂಬೀ ವಿಳಸನ್ಮಹಾಮಹಿಮೆಯಂ ಕೆಯ್ಕೊಂಡು ಲೋಕತ್ರಯಾ॥
ಗ್ರನಿವಾಸೀದ್ಧ ವಿಶುದ್ಧ ಸಿದ್ಧಗಣಮಧ್ಯೋದ್ಭಾಸಿಯಾದಂ ನಿರಂ।
ಜನನುದ್ಯದ್ಭವ ಭಂಜನಂ ನಿರುಪಮ ಶ್ರೀವರ್ಧಮಾನಂ ಜಿನಂ॥ (೬೯)

ಕಂ॥ ವಿಳಸಿತಕಾರ್ತಿಕಮಾಸಾ।
ಕಳಿತಂ ಸಿತಪಕ್ಷವರ ಚತುರ್ದಶಿಯೊಳ್ ತಾಂ॥
ಬೆಳಗಪ್ಪ ಜಾವದೊಳ್ ಸಿ।
ರ್ಮಳಮುಕ್ತಿಶ್ರೀಗೆ ವೀರಜಿನನಿನನಾದಂ॥ (೭೦)

ಮ॥ ಸ್ರ॥ ನೆರೆದಂ ನಿರ್ವಾಣಲಕ್ಷ್ಮೀಲಲನೆಯೊಳನಘಂ ವೀರಭಟ್ಟಾರಕಂ ಬಂ।
ಧುರ ಬೋಧಾನಂದರೂಪಂ ಪರಮವರದನೀ ಪ್ರಾಂತಕಲ್ಯಾಣಪೂಜಾ॥
ಭರಮಂ ತ್ರೈಲೋಕ್ಯಲೀಲಾಕರಮನೆಸಗುವೆಂ ಬೇಗದಿಂದೆಂದು ಪುಣ್ಯಾ।
ಚರಣಂ ಚಾತುರ್ನಿಕಾಯಾಮರಸಮಿತಿ ಸಮನ್ವೀತನೆಯ್ತಂದನಿಂದ್ರಂ॥ (೭೧)

ಮ॥ ಸ್ಫುರಿತಾತೋದ್ಯನಿನಾದಮಾದಮಖಿಳಾಶಾದಂತಿ ಕರ್ಣಂಗಳಂ।
ತರಮಂ ತುಂಬಿದುದುದ್ಧರತ್ನಮಯ ನಾನಾಸದ್ವಿಮಾನೋಚ್ಚಳ॥
ತ್ಕಿರಣಂ ವ್ಯಾಪಿಸಿದತ್ತು ಮಿಕ್ಕ ಗಗನಾಂತರ್ಭಾಗಮಂ ಪರ್ವಿತೀ।
ಧರೆಯಂ ತತ್ಸುರಸೈನಿಕಾಗಮನದೊಳ್ ಪುಷ್ಪೋಲ್ಲಸದ್ವರ್ಷಣಂ॥ (೭೨)

ಉ॥ ಆವೆಡೆಯಲ್ಲಿ ನಿಂದು ನಿಖಿಳಾಘ ಮಹಾಭಟರಂ ಜಿನೇಂದ್ರನಂ।
ದೋವದೆ ಗೆಲ್ದನಾವಸುಮತೀತಳಮಂ ಪರಮಪ್ರಮೋದದಿಂ॥
ದೇವಕದಂಬಕಂ ಬೆರಸು ಮುಂ ಬಲವಂದು ಪುಲೋಮಜಾ ಪ್ರಿಯಂ।
ಪಾವನಮಪ್ಪ ವಸ್ತುಗಳಿನರ್ಚಿಸಿದಂ ವಸುಧೈಕಬಾಂಧವಂ॥ (೭೩)

ನಾಡೆ ಬೆಡಂಗುವೆತ್ತ ಮಣಿಭಾಜನ ದೀಪಕಳಾಪದಿಂ ಸಮಂ।
ತೀಡಿತಮಪ್ಪ ತದ್ಧರೆಯನೊಲ್ದು ನಿವಾಳಿಸಿದತ್ತು ರಾತ್ರಿಯೊಳ್॥
ಪಾಡುತುಮಾಡುತುಂ ಬಲಗೊಳುತ್ತುಮಮರ್ತ್ಯಚಯಂ ಪ್ರಮೋದದೊಳ್।
ಕೂಡಿದಲಾದುದಂದು ಮೊದಲಾಗಿ ಧರಿತ್ರಿಗೆ ದೀಪಿಕೋತ್ಸವಂ॥ (೭೪)

ವ॥ ಅನಂತರಮಾಶತಮಖಂ ಚತುರ್ನಿಕಾಯ ಸುರಸಮಿತಿ ಸಮೇತಂ ಕರಕಮಳ ಕುಟ್ಮಳಾಳಂಕೃತ ನಿಟಿಳತಟನಾಗಿ—

ಚಂ॥ ನಿರತಿಶಯಾಂಗಸಂಗತ ಮರೀಚಿ ದುರಾಚರಿತಾಂಧಕಾರಮಂ।
ಪರಿಹರಿಸಿತ್ತು ದೇವ ಭವದೀಯ ವಚೋರಮೆ ವಾಂಛಿತಾರ್ಥಮಂ॥
ನೆರೆದ ಸಭಾಜನಕ್ಕೆ ಕಱಿದತ್ತು ನಿರಾವರಣಾವಬೋಧಮಾ।
ವರಿಸಿದುದೆಲ್ಲಮಂ ನಿನತುಮಾಂತನಮೆಂತುಟೊ ಕಂತುಭಂಜನಾ॥ (೭೫)

[ದುರಿತನಿಪಾತ]ಮಂ ನಿಯಮದಿಂದೆ ನಿವಾರಿಪ ಭೂರಿಶಕ್ತಿ ಭೂ।
ಚರಖಚರಾಧಿರಾಜಪದದೊಳ್ ತೊದಳೇಂ ನಿಲಿಪೊಂದು ಬಲ್ಪು ಸಂ॥
ಸರಣಸಮುದ್ರದಿಂ ತೆಗೆದು ಮುಕ್ತಿನಿವಾಸಮನೆಯ್ದಿಪಾರ್ಪು ಬಾ।
ಹ್ವರೆ ನಿಜಪಾದಪದ್ಮಯುಗ ಭಕ್ತಿಗಿದೊಚ್ಚತಮಲ್ತೆ ಧೀರಧೀ॥ (೭೬)

ಮ॥ ಸ್ರ॥ ಹರಿಯಾದ್ಯೈ ದೇವನಾದ್ಯೈ [ಖಚರ ರಮಣನಾದ್ಯೈ] ಮರುನ್ಮುಖ್ಯನಾದ್ಯೈ।
ಹರಿಷೇಣಾಭಿಖ್ಯನಾದ್ಯೈ ತ್ರಿದಿವಜನಿತನಾದ್ಯೈ ಸುಚಕ್ರೇಶನಾದ್ಯೈ॥
ಸುರನಾದ್ಯೈ ನಂದನಾದ್ಯೈ ಕ್ಷಿತಿತಳಪತಿಯಾದ್ಯೈ ನಿಳಿಂಪೇಶನಾದ್ಯೈ।
ವರವೀರಸ್ವಾಮಿಯಾದ್ಯೈ ಬಱಿಕ ಶಿವಗತಿ ಶ್ರೀಶನಾದ್ಯೈ ಮಹಾತ್ಮಾ॥ (೭೭)

ಚಂ॥ ಜನನ ಜರಾರುಜಾಮರಣದುಃಸಹ ಘೋರದುರಂತದುಃಖ ಭಾ ।
ಜನಮೆನಿಸಿರ್ದ ಜೀವತತಿ ದೇವ ಭವತ್ಪದಪದ್ಮಯುಗ್ಮಮಂ ॥
ನೆನೆಯಲೊಡಂ ಸದಭ್ಯುದಯಸೌಖ್ಯಮುಮಂ ನಿರುಪದ್ರವಾತಿಪಾ ।
ವನತರ ನಿತ್ಯಮೋಕ್ಷಪದ ಸೌಖ್ಯಮುಮಂ ಪಡೆಗುಂ ಗುಣಾಂಬುಧೀ ॥ (೭೮)

ಒಸೆಯದೆಯುಂ ಪದಾನತರ್ಗೆ ಸೌಖ್ಯಸಮೃದ್ಧಿಯನೀವೆ ದೇವ ನೀಂ ।
ಬೆಸೆಯುದೆಯುಂ ಪದಾನತರ್ಗೆ ದುಃಖಸಹಸ್ರಮನಾವಗಂ ವಿಸ ॥
ರ್ಜಿಸುವೆ ಮನೋವಿಕಾರಭರಮಿಲ್ಲದೆಯುಂ ವರಮುಕ್ತಿಲಕ್ಷ್ಮಿಗೊ ।
ಪ್ಪಿಸಿದೆ ನಿಜಾತ್ಮನಂ ನಿನತು ವೃತ್ತಿ ವಿಚಿತ್ರತರಂ ಧರಿತ್ರಿಯೊಳ್ ॥ (೭೯)

ಅಪಗತ ದೋಷರೋಷಪರಿತೋಷತೆಯಿಂದೆ ಜಗತ್ತ್ರಯಕ್ಕೆ ನೀ ।
ನುಪಕೃತಿಯಂ ನಿಜಾಮಳ ವಚೋಮೃತ ಕೋಮಳದೃಷ್ಟಿಯಿಂದೆ ವಿ ॥
ಷ್ಟಪಪತಿವಂದ್ಯ ಸಂದೆಯುಮದೇಂ ಮೊದಲೊಳ್ ದಯೆಗೆಯ್ದು ದೇವ ಮ ।
ತ್ತಪವಪುವಾಗಿ ಬೇಗದೊಳೆ ಸಾಧಿಸಿದೈ ಜಿನ ಸಿದ್ಧಿಲಕ್ಷ್ಮಿಯಂ ॥ (೮೦)

ಮ॥ ನಿಜಮಾರ್ಗಂ ನಿಜಮಾರ್ಗಬೋಧಿತ ಲಸಜ್ಜೀವಸ್ವರೂಪಂ ದಲಾ ।
ನಿಜಮುಂ ಮಾನಿ ಜನಂಗಳಲ್ಲದವರೋವಂತಿರ್ದುದಿಂ ತೀರ್ದುದೆಂ ॥
ದು ಜಡವ್ಯಾಹೃತಿಯಿಂ ಗಡಂ ಗಳಪುವರ್ ಚಿದ್ರೂಪ ತದ್ರೂಪಮಂ ।
ಸುಜನ[ರ್]ತ್ವನ್ಮತವರ್ತಿಗಳ್ ಜಿನ ಯಥಾರ್ಥೋದ್ಭಾಸಿಯಂ ಭಾಷಿಪರ್ ॥ (೮೧)

ಭವಸಂತಾಪವಿಲೋಪಮಂ ನಿಯಮದಿಂದಿಜ್ಜ್ಯಪವಂ ನಿಚ್ಚಮು ।
ತ್ಸವದಿಂ ತ್ವಚ್ಚರಣೋಚ್ಚ ಭಕ್ತಿರಮೆಯಾ ಪಚ್ಚ್ಯಂ ಚಿರಂ ನಚ್ಚಿಮೆ ॥
ಚ್ಚಿವಲಂ ವರ್ತಿಕೆ ತತ್ಪ್ರಸಾದಮನನಂ ತದ್ದುಃಖದಿಂ ಪಿಂಗಿಕುಂ ॥
ರವಿಪಾದಂ ಬೆಳಪಲ್ಲಿ ನಿಲ್ಕುಮೆ ತಮಂ ಶ್ರೀವೀರಧೀರಾಗ್ರಣೀ ॥ (೮೨)

ವ॥ ಎಂದನೇಕ ಪ್ರಶಸ್ತ ಸಂಸ್ತವಂಗಳಿಂ ಸ್ತುತಿಯಿಸಿ ಗೀರ್ವಾಣರಮಣಂ ನಿರ್ವರ್ತಿತ ಸರ್ವಜ್ಞ ಪರಿನಿರ್ವಾಣ ಕಲ್ಯಾಣಮಾಂಗಲ್ಯನಾಗಿ ನಾಕಲೋಕಕ್ಕೆ ಪೋದನಗಣ್ಯ ಭಕ್ತಿವರೇಣ್ಯಂ ಚಾತುರ್ವರ್ಣ್ಯಸಂಘಂ ತದುರ್ವೀತಳಮನಗುರ್ವಿನರ್ಚನೆಗಳಿನರ್ಚಿಸಿ ಪರಮಪ್ರಮೋದಪ್ರದ ಪ್ರದ ಕ್ಷಿಣೀಕರಣ ಪರಿಣತಂ ರೂಪಸ್ತವ [ವಸ್ತುಸ್ತವ]ಗುಣಸ್ತವನಿವಹಾನೂನ ಧ್ವಾನಬಧಿರಿತಾಶಾವಳಯಮಾಗಿ—

ಕಂ॥ ಪರಿನಿರ್ವಾಣಕ್ರಿಯೆಯಂ ।
ಪರಮೋತ್ಸವದಿಂದೆ ತೀರ್ಚಿ ಸಕಳವಿನೇಯೋ ॥
ತ್ಕರಮಂದು ನಯದೆ ನಿಜನಿಜ ।
ಧರೆಗಳ್ಗಲ್ಲಿಂದೆ ತಳರ್ದು ಪೋಯ್ತು ಕೃತಾರ್ಥಂ ॥ (೮೩)

ವ॥ ಅನಂತರಂ—

ಕಂ॥ ಯುವರಾಜಂಗಧಿರಾಜ ।
ತ್ವವಿಭವಮುಪ್ಪಂ[ತೆ ಕೇವಲತ್ವಂ ಘಾತಿ] ॥
ಪ್ರವಿನಾಶದೆ ಗೌತಮಯತಿ ।
ಧವಂಗೆ ಸಮನಿಸಿತು ಸಕಳಭುವನವಿನೂತಂ ॥ (೮೪)

ದ್ವಾದಶವರ್ಷಂಬರಮೆಸೆ ।
ವಾದಿವಿಜಸ್ತುತಜಿನಂ ವಿಹಾರಿಸಿ ಧರೆಯೊಳ್ ॥
ಭೇದಿಸಿಯಘಾತಿ ಮಳಮಯ ।
ನಾದಂ ಪ್ರವ್ಯಕ್ತ ಮುಕ್ತಿಲಕ್ಷ್ಮೀರಮಣಂ ॥ (೮೫)

ವ॥ ಅಲ್ಲಿಂ ಬಱಿಕ್ಕೆ—

ಕಂ॥ ಅನುಬದ್ಧ ಕೇವಳಿಗಳಾ ।
ಗಿ ನೆಗಟ್ಟಿರೆಸೆವಾಸು [ಧರ್ಮಜಂಬೂನಾ]ಮರ್ ॥
ಘನಯಶರವರಿಂ ಬಱಿಕೊ ।
ರ್ವನುಮಿಲ್ಲೀಕ್ಷೇತ್ರದಲ್ಲಿ ಲಬ್ಧಾರ್ಹಂತ್ಯಂ ॥ (೮೬)

ಶ್ರುತಕೇವಳಿತ್ವದಿಂ ಕ್ಷಿತಿ ।
ನುತಿವಡೆದರ್ ವಿಷ್ಣುನಂದಿ ಯಮಧರನಪರಾ ॥
ಜಿತಯತಿ ಗೋವರ್ಧನಮುನಿ ।
ಪತಿ ಜನನುತ ಭದ್ರಬಾಹುವೆಂದಿವರಯ್ವರ್ ॥ (೮೭)

ಯಮಿಗಳ್ ವಿಶಾಖದತ್ತ ।
ಪ್ರಮುಖರ್ ದಶಪೂರ್ವಧಾರಿಗಳ್ ತೊ[ಳಗಿದರು ॥
ತ್ತಮಜ]ಯಪಾಳಪ್ರಭೃತಿಗ ।
ಳಮಳಿನರೇಕಾದಶಾಂಗಧಾರಿಗಳೆಸೆದರ್ ॥ (೮೮)

ಅವರಿಂ ಬಱಿಕ್ಕೆ ಸಿದ್ಧಾಂ ।
ತವಿದ್ಯೆಯಾಧರಣಿತಳದೊಳೆಡೆವಱಿಯದೆ ಪ ॥
ಲ್ಲವಿಸಿತ್ತು ಭೂತಬಲ್ಯಾ ।
ದಿವೀರಸೇನಾಂತಕಾಂತಯತಿತತಿಯಿಂದಂ ॥ (೮೯)

ಉ॥ ಶ್ರೀ ವಸುಧೈಕಬಾಂಧವನ ಬಂಧುರ ಭಕ್ತಿಗೆ ವೆ [ಚ್ಚಿ ಕೇಶಿರಾ] ।
ಜಾವನಿದೇವನಾವಿಬುಧ ಚಾಮುಸಮನ್ವಿತನಂದು ಪೇಱುತುಂ ॥
ದೈವನಿಯೋಗದಿಂದೆ ಗಡ ನಿಂದುದನೀ ವರವೀರಕಾವ್ಯಮಂ ।
ಭಾವಿಸಿಯಾಚಿರಾಜವಿಭು ಪೂರಿಸಿದಂ ಜಿನಭಕ್ತ ಸೂಕ್ತಿಯಿಂ ॥ (೯೦)

ಚಂ॥ ವರವಸುಧೈಕಬಾಂಧವನೆ ಬಂಧುರಭುಗ್ಯನ ದಂಡನಾಥ ರೇ।
ಚರಸನ ಮಾನಸಪ್ರಿಯಮೆನಿಪ್ಪ ಜಗನ್ನುತ ವರ್ಧಮಾನ ಸ॥
ಚ್ಚರಿತಮನಿಂತಿದಂ ನಯದೆ ಭಾವಿಸಿ ಭಾವಿಸಿ ನೋಡಿ ಬಿಟ್ಟು ಮು।
ಚ್ಚರಮನತಿಪ್ರಮೋದದೊಳೆ ತಿರ್ದುಗೆ ಕಾವ್ಯಕಳಾವಿಶಾರದರ್॥ (೯೧)

ಸ್ರ॥ ಶ್ರೀ ವಾಣೀವಲ್ಲಭಾಖ್ಯಾನಮನತಿಮುದದಿಂ ಪೆತ್ತು ವರ್ತಿಪ್ಪ ಧಾತ್ರೀ।
ದೇವಂ ಸಂದಾಚಿರಾಜಂ ಪುರಿಕರನಗರಾಧೀಶಶಂಖಾಗ್ರಜಾರ್ಹ॥
ತ್ಸೇವಾಸಕ್ತಾಶಯಂ ಬಿತ್ತರಿಸಿದ ವಿಬುಧಶ್ರವ್ಯಮೀ ವೀರಕಾವ್ಯಂ।
ಭೂವಿಖ್ಯಾತಾವದಾತಂ ಸಕಳಸಭೆಗಳೊಳ್ ವರ್ತಿಕಾಚಂದ್ರತಾರಂ॥ (೯೨)

ಮ॥ ಎಸೆವೀ ವೀರಜಿನೇಂದ್ರ ಚಾರು ಚರಿತಂ ಸದ್ಭಕ್ತಿಯಿಂ ಸಂತತಂ।
ಪೆಸರ್ಗೊಳ್ವೋದಿಸುವೋದುವಾದರಿಪ ಯೋಗ್ಯರ್ಗೀವ ಭಾವಿಪ್ಪ ಪೂ॥
ಜಿಸುವಾದಂ ಬರೆಯಿಪ್ಪ ತಾಂ ಬರೆವ ಸದ್ವ್ಯಾಖ್ಯಾನಮಂ ಮಾಳ್ಪ ಭ।
ವ್ಯಸಮೂಹಕ್ಕಿರದೀಗುಮಭ್ಯುದಯಮಂ ನಿಶ್ಶ್ರೇಯಸಶ್ರೀಯುಮಂ॥ (೯೩)

ಗದ್ಯಂ

ಇದು ನಿಖಿಳಭುವನ ಜನವಿನೂತ ಸ್ಫೀತಮಹಿಮಾವದಾತ ವೀತರಾಗ ಸರ್ವಜ್ಞತಾ
ಸಮೇತ ಖ್ಯಾತ ಜಿನಸಮಯ ಕಮಳಿನೀ ಕಳಹಂಸಾಯಮಾನ
ಮಾನಿತ ಶ್ರೀ ನಂದಿಯೋಗೀಂದ್ರಪ್ರಸಾದ ವಾಚಾಮಹಿತ
ಕೇಶವರಾಜಾನಂದನಂದನ ವಾಣೀವಲ್ಲಭ ವಿಸ್ತಾ
ರಿತಮಪ್ಪ ವಸುಧೈಕಬಾಂಧವ ಶ್ರೀವರ್ಧ
ಮಾನ ಪುರಾಣದೊಳ್ ವೀರಸ್ವಾಮಿ
ನಿರ್ವಾಣಭೂಮಿಗಮನವರ್ಣನಂ

ಷೋಡಶಾಶ್ವಾಸಂ.

THOMPSON & Co., LTD., MADRAS.

ಅನುಬಂಧ ೧

ಶಾಸನಗಳಲ್ಲಿ ಬರುವ ರೇಚಣನ ಗುಣವರ್ಣನೆ:—

(1) ಶಿಕಾರಿಪುರ 119ರಲ್ಲಿ—

ವೈರಿನೃಪಾಳಪಟ್ಟಮಹಿಷೀವರಪಾಂಡುರಗಂಡಕಾಂತಿಯಂ।
ಸೈರಣೆಗೆಟ್ಟು ಚಾತಕಕುಳಂ ಹಿಮದೀಧಿತಿಯೆಂದು ಷಟ್ಪದಂ ॥
ಚಾರು ಸಿತಾಬ್ಜಮೆಂದು ಕಳಹಂಸಕುಳಂ ಬಿಸಕಾಂಡಮೆಂದು ಸಂ।
ಚಾರಿಸಿ ಲೋಕಮಂ ನಗಿಸುಗುಂ ವಿಭುರೇಚಣದಂಡನಾಥನಾ ॥

(2) ಶಿಕಾರಿಪುರ 123ರಲ್ಲಿ—

ಅಮಳಗುಣನಮಳಕುಳನ।
ತ್ಯಮಳ ಚರಿತ್ರೈಕನಿಳಯನಮಳನಯ ಪ್ರ ॥
ಕ್ರಮನಮಳಯಶೋರೋಚಿ।
ಸ್ಸಮಾವೃತಾಶಾಳಿಯೆನಿಸಿದಂ ರೇಚರಸಂ ॥

(3) ಶಿಕಾರಿಪುರ 185ರಲ್ಲಿ—

ಸರಸೀರುಹತತಿ ದಿನಕರ।
ಕರದಿಂದಲರ್ವಂತೆ ಜನದ ಮನಮಲರ್ವಿನೆಗಂ ॥
ಸರಸೋಕ್ತಿಯುಕ್ತಿಯಿಂ ರೇ।
ಚರಸಂ ಧರ್ಮಪ್ರಸಂಗಮಂ ಪುಟ್ಟಿಸಿದಂ ॥

(4) ಶಿಕಾರಿಪುರ 197ರಲ್ಲಿ—

ಕಳಚುರ್ಯಕ್ಷಿತಿಪಾಳರಾಜ್ಯಲತೆಪರ್ವಲ್ ತನ್ನದೋಃಶಾಖೆಯುಂ।
ವಿಳಸನ್ಮಂದರಸಾನುಗಂ ವಿಬುಧಸೇವ್ಯಂ ವಿಸ್ತೃತಚ್ಛಾಯನ ॥
ಸ್ಖಳಿತೌದಾರ್ಯವಿಳಾಸಭಾಸಿ ಸುಮನಸ್ಸಂಪೂರ್ಣನುದ್ಯದ್ಯಶಃ।
ಫಳದಿಂ ರೇಚಣದಂಡನಾಥನೆಸೆದಂ ಲೋಕೈಕ ಕಲ್ಪದ್ರುಮಂ ॥

ಜಿನನಂ ತನ್ನ ಮನಂ ಮನಃಪ್ರಕೃತಿಯಂ ಸದ್ವಿದ್ಯೆಯಾವಿದ್ಯೆಯಂ।
ತನುವಂತಾತನುವಂ ವಿಳಾಸಮುದನುದ್ಯಲ್ಲಕ್ಷ್ಮಿಯಾಲಕ್ಷ್ಮಿಯಂ ॥
ವಿನುತೌದಾರ್ಯಮುದಂ ಜಗಂ ಜಗಮನಿಂಬಿಂ ಕೀರ್ತಿಯಾಲಿಂಗಿಸಲ್।
ಜನವಂದ್ಯಂ ವಿಭುರೇಚಿರಾಜನೆಸೆದಂ ಚಾರಿತ್ರರತ್ನಾಕರಂ ॥

ಕವಿತತಿ ಬಲ್ಮೆಗೋಲಗಿಸೆ ಕಾಮಿನಿಯರ್ ಸೊಬಗಿಂಗೆ ಸೋಲೆ ಬೇ।
ಬ್ಬಿವರ್ಗಳುದಾರವೃತ್ತಿಗೊಲವಿಂ ನರಶಾಸನಮಾಗೆ ರಾಜ್ಯಮು॥
ದ್ಭವದಿನೊಡರ್ಚೆ ಜೈನಸಮಯಾಂಬುಧಿ ಕೀರ್ತಿಸುಧಾಂಶುವಿಂ ಪೊದ।
ಟ್ಟಿವಡೆಯೆ ರೇಚಿರಾಜನೆಸೆದಂ ಜಸದಿಂ ವಸುಧೈಕಬಾಂಧವಂ॥

ನಡೆದ ನೆಲಂ ರಣೋರ್ವರೆಯೊಳಂತನಿತುಂ ತನಗಜ್ಜಪಜ್ಜರಿಂ।
ಪಡೆದನೆಲಂ ದಲೆಂಬಿನಸಿಗನ್ಯನೃಪಾಳರನಿಕ್ಕದುಂತೆಕಿ॥
ಟಿತ್ತೊಡೆ ಕಡುದೋಸವೆಂಬನಸಹಂ ಮಿಗೆ ಬೆಂಗುಡೆ ಪತ್ತೆ ತಾನೆ ಬೆಂ।
ಗುಡುವವೊಲೆಂಬನೇನದಟನೋ ಕಲಿರೇಚಣ ದಂಡನಾಯಕಂ॥

ಅನುಪಮದಾನಶೌರ್ಯರಣಶೌರ್ಯಮನೇವೊಗಟ್ದಪ್ಪೆನಾಂ ದ್ವಿಷ।
ಜ್ಜನಪರೊಳೊಂದುವಚ್ಚರಸೆಯರ್ಗೆ ಸಯಂಬರವಾಗೆ ಸಗ್ಗದೊಳ್॥
ಜನಿಯಿಸಿತಿಂದ್ರಭೂರುಹಕೆ ತೋರಣದಿಂ ತವಿಲ್ಗೆಂಬುದೆಯ್ದಮೇ।
ದಿನಿ ವಸುಧೈಕಬಾಂಧವ ಚಮೂಪತಿ ರೇಚಣನೇಂ ಕೃತಾರ್ಥನೋ॥

ಪೆಡೆವಣಿ ಶೇಷನೊಳ್ ಸರಸಿಜೋದರನಂಬುಧಿಯೊಳ್ ಮೃಗಾಂಕನುಂ।
ದುಡುಪನೊಳದ್ರಿಜಾರ್ಧಮಭವಾಂಗದೊಳಾ ಮದಲುಬ್ಧ ಭೃಂಗಮಿ॥
ರ್ಪೆಡೆ ದಿಗಿಭಂಗಳೊಳ್ ಕುಱುಪುದೋರ್ಪಿನೆಗಂ ಜಗಮುಂ ಮುಸುಂಕಿತಿಂ।
ಗಡಲಿನೆ ಕೀರ್ತಿ ರೇಚನೆಸೆದಂ ಜಸದಿಂ ವಸುಧೈಕಬಾಂಧವಂ॥

ಶ್ರೀವಚ್ಚಂ ಸಿರಿಯಿಂ ಸಮೃದ್ಧನೆಸೆವಾ ನಾಗಾಂಬಿಕಾಸೂನು ಭೋ।
ಗಾವಾಸಂ ವಸುಧೈಕಬಾಂಧವನುದಾರಂ ಸ್ತುತ್ಯ ಗೌರೀಸುಖ॥
ಶ್ರೀವಿಷ್ಟಂ ವೃಷಭಧ್ವಜಪ್ರಿಯತಮಂ ನಾರಾಯಣಾತ್ಮೋದ್ಭವಂ।
ಭಾವಂಬೆತ್ತಿರೆ ಚೆಲ್ವನೆಂದೆನಿಸಿದಂ ಶ್ರೀ ರೇಚದಂಡಾಧಿಪಂ॥

(5) ಅರಸಿಕೆರೆ 77ರಲ್ಲಿ—

ವದನಂ ವಾಗ್ವನಿತಾವಿಳಾಸಸದನಂ ವಕ್ಷಂ ರಮಾನರ್ತಕೀ।
ವಿದಿತಾನರ್ತವುದಾರವರ್ತಿ ಜನತಾ ಸಂತರ್ಪಣಂ ಕೀರ್ತಿಕೌ॥
ಮುದಿ ಜೈನಾರ್ಣವ ವರ್ಧನಂ ಗುಣಗಣಂ ಭೂಭೂಷಣಂ ಮೂರ್ತಿ ಚಾ।
ರುದಯಾನ್ವಿತಮೆನಲ್ಕೆ ರೇಚಣ ಚಮೂಪಂ ಪೆರ್ಮೆಯಂ ತಾಳ್ದಿದಂ॥

ಒಸೆದವರಿವರೆನ್ನದೆಸಂ।
ತಸಮುಪ್ಪಿನವಿತ್ತುಪಡೆದನೀ ವಸುಮತಿಯೊಳ್॥
ವಸುಧೈಕಬಂಧುವೆಂಬೀ।
ಪೆಸರಂ ರೇಚರಸನುಂತು ದೇಸಿಯಿನಾಯ್ತೆ॥

ಅನುಬಂಧ ೨
ಚಾವುಂಡರಾಯಕೃತ ವರ್ಧಮಾನ ಪುರಾಣಂ

ಕಂ॥ ಶ್ರೀ ವೀರಜಿನಂ ಮುಕ್ತಿ ।
ಶ್ರೀವಲ್ಲಭನಖಿಲಲೋಕಬಂಧು ಪದಾಂಭೋ॥
ಜಾವನತಭವನನೆಮಗಮ್ಯ ।
ತ್ಥಾವಾಸಮನೀಗೆ ವರ್ಧಮಾನ ಜಿನೇಂದ್ರಂ ॥

ಮಂಗಳಾದಿನಿರೂಪಣಪೂರ್ವಕಂ ಪುರಾಣಂಗಳಂ ಪೇೞ್ವುದು; ಅವಱೊಳ್ ಶ್ರೀ ವರ್ಧಮಾನಭಟ್ಟಾರಕರ ಚರಿತಮನಭಿವರ್ಣಿಸುವೆನದೆಂತೆಂದೊಡೆ—

ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಬಡಗಣತಡಿಯ ಪುಷ್ಕಳಾವತೀವಿಷಯದ ಪುಂಡರೀಕಿಣೀ ನಗರದ ಮಧೂಕವನದೊಳ್ ಪುರೂರವನೆಂಬ ಬೇಡನಾತನ ಪೆಂಡಿತಿ ಕಾಳೆಯೆಂಬಳಾಗೆ ಮತ್ತೊಂದುದೆವಸಮಾಕಾನನದೊಳ್ ಪೊಲಗೆಟ್ಟು ಸುೞಿವ ಸಾಗರಸೇನರೆಂಬ ಮುನಿಯಂ ಕಂಡು ವಂದಿಸಿ ಧರ್ಮಮಂ ಕೇಳ್ದು ಮಧುಮದ್ಯಮಾಂಸನಿವೃತ್ತಿಗೆಯ್ದು ಜೀವಿತಾಂತ್ಯದೊಳ್ ಸೌಧರ್ಮಕಲ್ಪದೊಳ್ ಸಾಗರೋಪಮ ಸುಖಮನುಂಡು ಬಂದು ಜಂಬೂದ್ವೀಪದ ಭರತದ ಕೌಶಲವಿಷಯದ ವಿನೀತಾ ನಗರಮನಾಳ್ವ ಭರತಂಗಮನಂತಸೇನೆಗಂ ಮರೀಚಿಯೆಂಬ ಮಗನಾಗಿ ವೃಷಭನಾಥನ ಪರಿತ್ಯಾಗ ಕಾಲದೊಳ್ ತಾನುಂ ಸರ್ವಸಂಗ ಪರಿತ್ಯಾಗಂಗೆಯ್ದು ಕ್ಷುತ್ಪಿಪಾಸಾದಿ ಪರೀಷಹಂಗಳಂ ಸೈರಿಸಲಾಱದೆ ಭವ್ಯನಾಗಿಯುಂ ದೀರ್ಘಸಂಸಾರಿಯಪ್ಪುದಱಿಂ ಪರಿವ್ರಾಜಕ ದೀಕ್ಷೆಯಂ ಕೆಯ್ಕೊಂಡು ತನ್ನನಾಶ್ರಯಿಸಿದವರ್ಗಮದನುಪದೇಶಂಗೆಯ್ದು ಅರ್ಹತ್ಪ್ರವಚನಮಂ ಕೇಳ್ದುಂ ಸದ್ಧರ್ಮಮಂ ಕೆಯ್ಕೊಳ್ಳದೆ ಪುರುದೇವನೆಂತು ತನ್ನಿಂದಮೆ ಸರ್ವಸಂಗ ಪರಿತ್ಯಾಗಂಗೆಯ್ದು ತ್ರಿಭುವನಕ್ಷೋಭಕಾರಿಯಪ್ಪ ಮಾಹಾತ್ಮ್ಯಮನೆಯ್ದಿದೊಂ ನಾನುಮಂತೆ ಜಗದೊಳಿನ್ನ ಮತಮನೊಂದಂ ಮಾಡಿ ಮಹಾಪ್ರಭಾವಮನೆಯ್ದುವೆನೆಂಬ ಮಾನಕಷಾಯೋದಯದಿಂ ಕುಮಾರ್ಗಮಂ ಪತ್ತುವಿಡದೆ ಕಮಂಡಳನುಂ ತ್ರಿದಂಡಹಸ್ತನುಂ ಗೈರಿಕರಕ್ತಜವರಪರಿಧಾನನುಂ ಮುಂಡಿತಶಿರಸ್ಕನುಂ ಉದ್ಬಂಧಶಿಖರನುಂ ನಿರ್ಗತಸಂಭವ ಜಲಸ್ನಾನ ಕಂದಮೂಲಾದ್ಯುಪಯೋಗನಿರತನುಮಾಗಿ ತನ್ನ ತತ್ವಮನಱಿಯದುದಂ ಪ್ರಕಟಂ ಮಾಡುತ್ತುಮಿಂದ್ರಜಾಲಿಕನಂತೆ ತತ್ವಾಭಾಸಮಂ ಕಪಿಳಾದಿಗಳಪ್ಪ ಶಿಷ್ಯವರ್ಗಕ್ಕಱಿಪುತ್ತುಂ ಜಗದೊಳ್ ಪರಿಭ್ರಮಿಸಿ ಜೀವಿತಾಂತ್ಯದೊಳ್ ಬ್ರಹ್ಮಕಲ್ಪದೊಳ್ ಪುಟ್ಟಿ ಪತ್ತು ಸಾಗರೋಪಮದ ಕಡೆಯೊಳ್ ಅಲ್ಲಿಂ ಬಂದು ಸಾಕೇತದೊಳ್ ಕಪಿಲನೆಂಬ ಪಾರ್ವಂಗಂ ಕಾಂಪಿಲ್ಯೆಗಂ ಜಟಿಳನೆಂಬ ಮಗನಾಗಿ ಪರಿವ್ರಾಜಕ ತಪದೊಳ್ ನೆಗೞ್ದು ಸೌಧರ್ಮಕಲ್ಪದೊಳ್ ಪುಟ್ಟಿ ಸಾಗರೋಪಮಾಂತದೊಳ್ ಅಲ್ಲಿಂ ಬಂದು ಭರತದ ಶ್ವೇತಿಕಾನಗರದೊಳ್ ಅಗ್ನಿಭೂತಿಗಂ ಗೌತಮಿಗಂ ಅಗ್ನಿಸಹನೆಂಬ ಮಗನಾಗಿ ಮತ್ತಂ ಪರಿವ್ರಾಜಕದೀಕ್ಷೆಯಿಂ ಸನತ್ಕುಮಾರಕಲ್ಪದೊಳ್ ಸಪ್ತ ಸಾಗರೋಪಮಾಂತದೊಳ್ ಅಲ್ಲಿಂ ಬಂದು ಭರತದ ಮಂದಿರಪುರದ ಗೌತಮಂಗಂ ಕೌಶಿಕಿಗಂ ಅಗ್ನಿ

ಮಿತ್ರನೆಂಬ ಸೂನುವಾಗಿ ಪಾರಿವ್ರಾಜಕದೀಕ್ಷಿತಂ ಮಹೇಂದ್ರಕಲ್ಪದೊಳ್ ಪುಟ್ಟಿ ಬಂದು ಮಂದಿರಪುರದೊಳ್ ಸಾಳಂಕಾಯನಂಗಂ ಮಂದಿರೆಗಂ ಭಾರದ್ವಾಜನೆಂಬ ಮಗನಾಗಿ ಪರಿಗ್ರಹೀತ ಪಾರಿವ್ರಾಜಕವೇಷಂ ಮಹೇಂದ್ರಕಲ್ಪದೊಳ್ ಪುಟ್ಟಿ ಸಪ್ತಸಾಗರೋಪಮಾಂತದೊಳ್ ಅಲ್ಲಿಂ ಬಂದು ದುರ್ಮಾರ್ಗಪ್ರವರ್ತನ ಫಲದಿಂ ನರಕಾದಿಗಳೊಳಂ ತ್ರಸಸ್ಥಾನಂಗಳೊಳಂ ಅಸಂಖ್ಯಾತಕಾಲಂ ಪರಿಭ್ರಮಿಸಿ ಬಂದು ಜಂಬೂದ್ವೀಪದ ರಾಜಗೃಹದೊಳ್ ಶಾಂಡಿಲ್ಯಂಗಂ ಪಾರಾವತಿಗಂ ಸ್ಥಾವರನೆಂಬ ತನಯನಾಗಿ ಮತ್ತಂ ಪಾರಿವ್ರಾಜಕನಾಗಿ ಮಹೇಂದ್ರಕಲ್ಪದೊಳ್ ಪುಟ್ಟಿ ಬಂದು ಭರತದ ರಾಜಗೃಹಮನಾಳ್ವ ವಿಶ್ವಭೂತಿಗಂ ಜೈನಿದೇವಿಗಂ ವಿಶ್ವನಂದಿಯೆಂಬ ಮಗನಾಗಿ ಪುಟ್ಟೆ ವಿಶ್ವಭೂತಿಯ ತಮ್ಮನಪ್ಪ ವಿಶಾಖಭೂತಿಗಂ ಲಕ್ಷ್ಮಣಾದೇವಿಗಂ ವಿಶಾಖನಂದಿಯೆಂಬ ಮಗನಾಗಿ ಸುಖಮಾಗಿರ್ದೊಂದು ದೆವಸಂ ಮುಗಿಲ್ ಕರಗಿದುದಂ ಕಂಡು ವಿಶ್ವಭೂತಿ ತನ್ನನುಜಂಗೆ ರಾಜ್ಯಮಂ ಕೊಟ್ಟು ಮಗಂಗೆ ಯುವರಾಜಪದಮನಿತ್ತು ಶ್ರೀಧರಗುರುಗಳ ಪಕ್ಕದೇೞ್ನೂರ್ವರರಸುಗಳ್ವೆರಸು ತಪಂಬಡೆ ತಮ್ಮಯ್ಯಂ ಪುಸಿಯ ಬೆಸನಟ್ಟ [ಬನಮಂ ವಿಶಾಖನಂದಂಗೆ] ಕೊಟ್ಟುದನಱಿದು ವಿಶ್ವನಂದಿ ಮುನಿದು ಬರೆ ವಿಶಾಖನಂದನೇಱಿ ಕಪಿತ್ಥದ್ರುಮಮಂ ಮಱೆಗೊಳ್ವುದುಮದಂ ಕಿೞ್ತೀಡಾಡೆ ಕಲ್ಲಕಂಬಮಂ ಮಱೆಗೊಳ್ವುದುಮದಂ ಕರಪ್ರಹಾರದಿಂ ಶತಚೂರ್ಣಂ ಮಾಡೆ ಮತ್ತಂ ಬೆಳ್ಕುತ್ತೋಡುವ ವಿಶಾಖನಂದನಂ ಕಂಡು ಕರುಣಿಸಿ ಕರೆದು ರಾಜ್ಯಮನಾತಂಗೆ ಕೊಟ್ಟು ಸಂಭೂತಗುರುಗಳ ಪಕ್ಕದೆವಿಶ್ವನಂದಿ ದೀಕ್ಷೆಗೊಂಡು ಒರ್ಮೆ ಮಧುರೆಗೆ ಚರಿಗೆವೊಕ್ಕಲ್ಲಿ ಕೆಂಗೋಲ್ಮಸಗಿದ ಪಯನಾವಿಱಿಯೆ ಕೆಡೆವುದುಮಲ್ಲಿಗೆ ರಾಜ್ಯಭ್ರಷ್ಟನಾಗಿ ಪೆಱನ ಬೆಸದೊಳೋಲೆಯನೊಯ್ಯುತ್ತುಂ ಬಂದು ಪ್ರಾಸಾದಸೌಧದೊಳಿರ್ದ ವಿಶಾಖನಂದಂ ಕಂಡು ನಿನ್ನ ಶಿಲಾಸ್ತಂಭಮಂ ಕೀೞ್ವಂದಿನ ದರ್ಪಮೀಗಳೆತ್ತವೋದುದೆಂದುನಗೆ ನಿನ್ನಂ ಕೊಲ್ವೆನಕ್ಕೆಂದು ನಿದಾನಂಗೆಯ್ದು ವಿಶ್ವನಂದಿಮುನಿಯುಂ ವಿಶಾಖಭೂತಿಯುಂ [ಮಹಾಶುಕ್ರಸ್ವರ್ಗಮಂ ಪೊಂದಿದರ್. ಅಲ್ಲಿಂ ಬೞಿಯುಂ ವಿಶಾಖಭೂತಿ ಪ್ರಜಾಪತಿ ಮಹಾರಾಜನ ಪಿಱಿಯರಸಿ ಜಯಾವತಿಗೆ ವಿಜಯನೆಂಬ ಮಗನಾದೊಂ. ಕಿಱಿಯರಸಿ ಮೃಗಯಾವತಿಗೆ ವಿಶ್ವನಂದಿ ತ್ರಿವಿಷ್ಟನೆಂಬ ಮಗನಾದೊಂ. ಆ ವಿಶಾಖನಂದನುಂ ಸಂಸಾರದೊಳ್ ತಿಱಿದು ವಿಜಯಾರ್ಧದುತ್ತರಶ್ರೇಣಿಯೊಳಳಕಾಪುರಮನಾಳ್ವ ಮಯೂರಗ್ರೀವಂಗಂ ನೀಳಾಂಜನೆಗಂ ಅಶ್ವಗ್ರೀವನೆಂಬ ಮಗನಾಗಿ ದಕ್ಷಿಣಶ್ರೇಣಿಯ ರಥನೂಪುರಾಧಿಪಂ ಜ್ವಲನಜಟಗಂ ದಿವಿತಿಳಕಮನಾಳ್ವ ಚಂದ್ರಾಭಂಗಂ ಸುಭದ್ರೆಯ ಮಗಳಪ್ಪ ವಾಯುವೇಗೆಗಮರ್ಕಕೀರ್ತಿಯೆಂಬ ಮಗನುಂ ಸ್ವಯಂಪ್ರಭೆಯೆಂಬ ಮಗಳುಂ ಆಗೆ ತ್ರಿವಿಷ್ಟಪಂಗಂ ಸ್ವಯಂಪ್ರಭೆಗಂ ವಿವಾಹಮಂ ಮಾಡಿ ಸಿಂಹವಾಹಿನಿ ಗರುಡವಾಹಿನಿ ವಿದ್ಯೆಗಳಂ ಕೊಟ್ಟೊಡೆ ಅಶಂಗ್ರೀವಂಕೇಳ್ದು ಮುನಿದು ರಥಾವರ್ತಗಿರಿಯೊಳ್ ಚತುರಂಗ ಬಲಮನೊಡ್ಡಿ ನಿಲ್ವುದ್ವು ತ್ರಿಪಿಷ್ಟನಾತನೊಳ್ ಮಾಯಾದ್ವಂದ್ವಯುದ್ಧದೊಳ್ ಗೆಲಿ ಕಾದೆ ಚಕ್ರದೊಳಿಡುವುದುಂ ತ್ರಿಪೃಷ್ಟನಾಚಕ್ರದೊಳಶ್ವಗ್ರೀವನಂ ಕೊಂದು ತ್ರಿಖಂಡಪತಿಯಾಗಿ ಜೀವಿತಾಂತ್ಯದೊಳ್ ಸಪ್ತಮಪೃಥ್ವಿಗೆ ಸಂದು ಮೂವತ್ತುಮೂಱು ಸಾಗರೋಪಮಾಂತದೊಳಲ್ಲಿಂ ಬಂದು ಜಂಬೂದ್ವೀಪದ ಭರತದ ಗಂಗಾಸಮೀಪದ ಸಿಂಹಗಿರಿಯೊಳ್ ಸಿಂಹನಾಗಿ ಪುಟ್ಟಿ ಮೊದಲ ನರಕಕ್ಕೆ ಪೋಗಿ ಸಾಗರೋಪಮಾಂತದೊಳಲ್ಲಿಂ ಬಂದು ಜಂಬೂದ್ವೀಪದ ಸಿದ್ಧಕೂಟದ

ಪೂರ್ವಭಾಗದ ಹಿಮಗಿರಿಸಾನುವಿನೊಳ್ ಮೃಗಪತಿಯಾಗಿ ಪುಟ್ಟಿ ಮತ್ತೊಂದು ಮೃಗ
ಮಂ ಪಾಯ್ದು ಪಿಡಿದು ತಿಂಬಾಗಳ್ ಅಜಿತಂಜಯರುಮಮಿತಗುಣರುಮೆಂಬ ಚಾರ
ಣರುಮಾ ಪ್ರಸ್ತಾವದೊಳ್ ಕಂಡಾಸಿಂಗದ ಪೂರ್ವಭವಸಂಬಂಧಮುಮಂ ಭಾವಿ
ತೀರ್ಥಕರತ್ವಮುಮನಱಿದೆಯಿದೆಬಂದೆಲೆ ಮೃಗೇಂದ್ರ ನೀಂ ತ್ರಿಪಿಷ್ಟನಾದ ಭವದೊಳ್
ಪರಾರ್ಧ್ಯ ಪಂಚವರ್ಣಮೃದುಶಯನತಳದೊಳ್ ಮನೋನಯನವಲ್ಲಭೆಯೊಡನೆ ಮದನ
ವಿಳಾಸದಿಂ ಪವಡಿಸಿಯುಂ ತಿಕ್ತಕಟುಕಷಾಯಾಮ್ಲಲವಣಮಧುರರಸಮನೋಹರ
ದಿವ್ಯಾಹಾರಮನಾರೋಗಿಸಿಯುಂ ಅತಿಸುರಭಿಮಾಲ್ಯಧೂಪಾನುಲೇಪಾದಿಗಳನಾಘ್ರಾಣಿ
ಸಿಯುಂ, ಶೃಂಗಾರಾದಿ ನವರಸವಿಚಿತ್ರಚಿತ್ರಕರ್ಮನಾಟಕಾದಿಗಳಂ ನಿರೀಕ್ಷಿಸಿಯುಂ,
ಷಡ್ಜವೃಷಭಗಾಂಧಾರಮಧ್ಯಮಪಂಚಮಧೈವತನಿಷಾದಂಗಳೆಂಬ ಸಪ್ತಸ್ವರದೊಳ್
ಶ್ರವಣರಮಣೀಯಮಾಗೆ ಪಾಡುವ ದಿವ್ಯಗೇಯಮನಾಲಿಸಿಯುಂ, ಇಂತು ಪಂಚೇಂದ್ರಿಯ
ಸುಖಮನನುಭವಿಸಿ ತಣಿಯದಿಷ್ಟಾನಿಷ್ಟವಸ್ತುಗೋಚರಪ್ರವೃದ್ಧರಾಗದ್ವೇಷಮೋಹ
ಚೌರ್ಯಪ್ರಾಣಿಹಿಂಸನಪರದಾರಗಮನಾದಿಗಳೊಳ್ ಮೆಚ್ಚಿಟ್ಟು ನೆಗೞ್ದು ನರಕದೊಳ್
ಪುಟ್ಟಿ ಮಹಾತ್ಯುಗ್ರಶೀತೋಷ್ಣಬಾಧೆಯೊಳಂ ಕ್ಷುತ್ಪಿಪಾಸಾದ್ಯಸುರವಿಕ್ರಿಯಾಸಮು
ದ್ಭೂತ ಭೀಮವೈತರಣೀ ಪ್ರವೇಶದೊಳಂ ಅವಿತಸ್ಫುಲಿಂಗ ಪರ್ವತಾರೋಹಣದೊಳಂ
ವಳೂಕಧೂಮಜ್ವಲಿತ ಚಿತ್ತಕಾರ್ಪಣ್ಯದೊಳಂ ತಪ್ತಾಯಸಪುತ್ರಿಕಾಶ್ಲೇಷಣದೊಳಂ ಅಸಿ
ಪತ್ರವನಾಕೃತ್ತನದೊಳಂ ನಾನಾವಿಧವೃಕ್ಷಮೃಗವಿಹಗಕೃಷ್ಣಕುಕ್ಕುಟಾದ್ಯುಗ್ರನಿಗ್ರಹ
ದೊಳಂ ಪರಸ್ಪರಾಭಿಘಾತತಾಡನತರ್ಜನಬಂಧನಶಿರಃಕರೋಷ್ಠನಾಸಿಕಾಚ್ಛೇದನದೊಳಂ
ಶೂಲಾರೋಹಣದೊಳಂ ಒದವಿದ ಮಹಾದುಃಖಮನನುಭವಿಸುತ್ತುಂ ಕ್ರಂದನರೋ
ದನವಿಳಾಪಾದಿ ನಾನಾವಿಧ ದಾರುಣತೆಯಿಂ ಜೀವಿತಾಂತದೊಳಲ್ಲಿಂಬಂದು ತಿರ್ಯಗ್ಜಾತಿ
ಯೊಳ್ ಪುಟ್ಟಿ ವಾತಾತಪವರ್ಷಶೀತಾದಿಬಾಧೆಯೊಳಂ ಕ್ಷುತ್ಪಿಪಾಸಪರೀಷಹದೊಳಂ
ಮುಲುಗುತ್ತಿರ್ದು ಮತ್ತಂ ಪ್ರಾಣಿಹಿಂಸನಂಗೆಯ್ದು ಮಾಂಸಾಹಾರದಿಂ ಪಾಪಮಂ
ನೆಱಪಿ ನರಕಂಬೊಕ್ಕು ದುಃಖಮನನುಭವಿಸಲ್ ಬೇಡ ನೀನಪ್ಪೊಡಮಜ್ಞಾನಮಂ
ಪತ್ತುವಿಟ್ಟು ಧರ್ಮತತ್ವದೊಳ್ ನೆಗೞ್ವುದೆನೆ ಮುನಿವಚನಮನವಧಾರಿಸಿ ಜಾತಿ
ಸ್ಮರನುಂ ಸಂಸಾರದುಃಖಭಯಚಕಿತಹೃದಯನುಮಾಗಿ ಕಣ್ಣನೀರ್ಗಳಂ ನೆಱಪಿ ಮೃಗ
ರಾಜನುಪಶಮಭಾವನೆಯೊಳಿರ್ದುದನಱಿದು ಸಮ್ಯಕ್ತ್ವಮಂ ಕಯ್ಕೊಳ್ಗುಮೆಂದು ನಿಶ್ಚ
ಯಿಸಿ ಮುನಿಪತಿಗಳ್ ಮತ್ತಮಿಂತೆಂದರ್— ಮುನ್ನ ನೀಂ ಮರೀಚಿಯಾಗಿ ಸನ್ಮಾರ್ಗ
ದೂಷಣಮುಮಂ ಕುಮಾರ್ಗಪ್ರಕಟನಮುಮಂಗೆಯ್ದು ಮಿಥ್ಯಾದೃಷ್ಟಿಯುಂ ಮಾಡಿದ
ಫಲದಿಂ ನರಕದೊಳ್ ಮಹಾದುಃಖಮನನುಭವಿಸಿ ತ್ರಸಸ್ಥಾನದೊಳಮಸಂಖ್ಯಾತ ಕಾಲಂ
ತಿರ್‍ರ್ಸೆ ತಿರಿದು ಬಂದು ವಿಶ್ವನಂದಿಯಾದ ಭವದೊಳ್ ಸಂಯಮಮುಮಂ ಕಯ್ಕೊಂಡು ನಿನ್ನ
ತಪಮೆಂಬಮೃತಮುಂ ನಿದಾನಮೆಂಬ ವಿಷದೂಷಿತಂ ಮಾಡಿ ನೀಂ ನರಕಂಬೊಕ್ಕು ಬಂದು
ಮೃಗಪತಿಯಾಗಿ ಪುಟ್ಟಿದೆಯದಱಿಂ ಸಂಸಾರಕಾರಣಮಪ್ಪ ಮಿಥ್ಯಾದರ್ಶನಮನಿಂದು
ಮೊದಲಾಗೆ ಪತ್ತುವಿಡುವುದುಮಾಪ್ತಾಗಮಪದಾರ್ಥಶ್ರದ್ಧಾನಸಹಿತಮಭ್ಯುದಯ
ನಿಶ್ರೇಯಸನಿಮಿತ್ತಮುಂ ಸಮ್ಯಕ್ತ್ವಮಂ ಕಯ್ಕೊಳ್ವುದೆನೆ, ಮುನಿಪತಿಯುಗಳಮಂ
ಮೂಱುಸೂೞ್ ಬಲವಂದು ಮಯ್ಯನಿಕ್ಕಿ ಪೊಡೆವಟ್ಟು ಸಮ್ಯಕ್ತ್ವಮಂ ಶ್ರಾವಕವ್ರತ

ಮಂ ಕೆಯ್ಕೊಂಡು ಕಾಲಾಂತದೊಳ್ ಸನ್ಯಸನವಿಧಿಯಿಂ ಸೌಧರ್ಮದೊಳ್ ಸಿಂಹ ಕೇತುವೆಂಬ ದೇವನಾಗಿರ್ದೆರಡುಸಾಗರೋಪಮದ ಕಡೆಯೊಳ್ ಅಲ್ಲಿಂ ಬಂದು ಧಾತಕೀ ಷಂಡದ ಮೂಡಣಮಂದರದ ಪೂರ್ವವಿದೇಹದ ಮಂಗಳಾವತೀ ವಿಷಯದ ವಿಜಯಾರ್ಧ ದುತ್ತರಶ್ರೇಣಿಯ ಕನಕಪ್ರಭನಗರಮನಾಳ್ವ ಕನಕಮುಖನೆಂಬ ನೃಪತಿಗಂ ಕನಕಮಾಲೆ ಗಂ ಕನಕೋಜ್ವಳನೆಂಬ ಮಗನಾಗಿ ಕನಕವತಿಯೆಂಬ ಮನೋನಯನವಲ್ಲಭೆವೆರಸು ಮಂ ದರಗಿರಿಗೆ ಕ್ರೀಡಾರ್ಥದಿಂ ಪೋಗಿ ಪ್ರಿಯಮಿತ್ರರೆಂಬ ಚಾರಣರನವಧಿಜ್ಞಾನಿಗಳಂ ಕಂಡು ಬಲಗೊಂಡು ವಂದಿಸಿ ಧರ್ಮಮಂ ಕೇಳ್ದು ನಿರ್ವೇಗದಿಂ ಸರ್ವಸಂಗಪರಿತ್ಯಾಗಂಗೆಯ್ದು ಜೀವಿತಾಂತದೊಳ್ ಸಪ್ತಮನರಕದೊಳ್ ಪುಟ್ಟಿ ಪದಿಮೂಱು ಸಾಗರೋಪಮಾಂತ ದೊಳ್ ಅಲ್ಲಿಂ ಬಂದು ಜಂಬೂದ್ವೀಪದ ಕೌಶಲವಿಷಯದ ಸಾಕೇತಪುರಮನಾಳ್ವ ವಜ್ರ ಸೇನನೃಪತಿಗಂ ಶೀಲವತಿಗಂ ಹರಿಷೇಣನೆಂಬ ಮಗನಾಗಿ ಶ್ರುತಸಾಗರ ಮುನಿಯ ಸಮೀ ಪದೊಳ್ ದೀಕ್ಷೆಗೊಂಡು ಕಾಲಾಂತದೊಳ್ ಮಹಾಶುಕ್ರಕಲ್ಪದೊಳ್ ಪುಟ್ಟಿ ಷೋಡಶ ಸಾಗರೋಪಮಾಂತದೊಳಲ್ಲಿಂ ಬಂದು ಧಾತಕೀಷಂಡದ ಮೂಡಣಮಂದರದ ಪೂರ್ವ ವಿದೇಹದ ಪುಷ್ಕಲಾವತೀ ವಿಷಯದ ಪುಂಡರೀಕಿಣಿಯನಾಳ್ವ ಸುಮಿತ್ರ ನರಪತಿಗಂ ಸುವ್ರತಾದೇವಿಗಂ ಪ್ರಿಯಮಿತ್ರನೆಂಬ ಮಗನಾಗಿ ಪ್ರೋಷ್ಠಿಲ ಗುರುಗಳ ಪಕ್ಕದೆ ಧರ್ಮ ಮಂ ಕೇಳ್ದು ನಿರ್ವೇಗದಿಂ ಸಂಯಮಮುಮಂ ಕೆಯ್ಕೊಂಡು ಏಕಾದಶಾಂಗಧರಂ ಭಾವಿತ ದ್ವ್ಯಷ್ಟಕಾರಣದಿಂ ಬದ್ಧತೀರ್ಥಕರ ಮಹಃಪುಣ್ಯಂ ಜೀವಿತಾಂತದೊಳ್ ಚತುರ್ವಿಧಾ ರಾಧನಾಪೂರ್ವಕಂ ಅಚ್ಯುತಕಲ್ಪದ ಪುಷ್ಪೋತ್ತರ ವಿಮಾನದೊಳ್ ದೇವನಾಗಿ ದ್ವಾವಿಂ ಶತಿ ಸಾಗರೋಪಮಾಯುಷ್ಯನುಂ, ಅರತ್ನಿತ್ರಯ ಪ್ರಮಾಣೋತ್ಸೇಧನುಂ, ಶುಕ್ಲಲೇ ಶ್ಯಾಪರಿಣಾಮನುಂ, ಏಕಾದಶಮಾಸನಿಶ್ವಾಸನುಂ, ದ್ವಾವಿಂಶತಿಸಹಸ್ರವರ್ಷಮಾನಸಾ ಹಾರನುಂ, ಮನಃಪ್ರವೀಚಾರಸುಖನುಂ, ಷಷ್ಠಮಪೃಥ್ವೀಗತಾವಧಿಜ್ಞಾನನುಂ, ಆತ್ಮಾ ವಧಿಕ್ಷೇತ್ರ ಪ್ರಮಾಣಬಲ ಪ್ರಕಾಶವಿಕ್ರಿಯಾಸಮರ್ಥನುಂ, ಸಾಮಾನಿಕಾದಿ ನವವಿಧದೇವ ವಿವಿಧದೇವಸಹಸ್ರಪರಿವೃತನುಮಾಗಿ ದಿವ್ಯಸುಖವನ್ನನುಭವಿಸುತ್ತಿರ್ಪನ್ನೆಗಂ—

ಇತ್ತ ಭರತದ ವಿದೇಹವಿಷಯದ ಕುಂಡಲಪುರಮನಾಳ್ವ ಸಿದ್ಧಾರ್ಥ ಮಹಾರಾಜನ ಪ್ರಿಯಕಾರಿಣಿ ಮಹಾದೇವಿಯರಮನೆಯೊಳ್ ಮುನ್ನಱುದಿಂಗಳುಂಟೆನೆ ಮೂಱು ಕೋಟಿ ಯುಮಱೆ ವಸುಧಾರೆಯನಿಂದ್ರನಾಜ್ಞೆಯಿಂ ಧನದಂ ಸುರಿಯೆ ಪ್ರಿಯಕಾರಿಣಿ ಮಹಾ ರಾಣಿಯರಾಷಾಢಶುದ್ಧಷಷ್ಠಿಯೊಳುತ್ತರಾಷಾಢಾನಕ್ಷತ್ರದೊಳ್ ಸಪ್ತತಳಪ್ರಾಸಾದನಂ ದ್ಯಾವರ್ತಗರ್ಭಗೃಹದ ರತ್ನಪರ್ಯಂಕದೊಳ್ ರೌದ್ರರಾಕ್ಷಸಗಾಂಧರ್ವಮೆಂಬ ಮೂಱು ಜಾವಮುಂ ಪೋಗೆ ಮನೋಹರಮೆಂಬ ಬೆಳಗಪ್ಪ ಜಾವದೊಳ್ ಷೋಡಶಶುಭಸ್ವಪ್ನದರ್ಶ ನಾನಂತರಂ ನಿಜಮುಖಾರವಿಂದಪ್ರವೇಶಿ ಗಜರೂಪಮಂ ಕಂಡು ಮಂಗಳಪಾಠಕಧ್ವನಿಯಿ ನೆೞ್ಚತ್ತಭಿಷೇಕ ಪುಣ್ಯಪ್ರಸಾದಮಂಗಳದರ್ಪಣಾಲೋಕನವಿಧಿಗಳಂ ತೀರ್ಚಿಸಿ ಸಿದ್ಧಾರ್ಥ ಮಹಾರಾಜನಲ್ಲಿಗೆ ಪೋಗಿ ಪಾದಪ್ರಣಾಮಪೂರ್ವಕಮರ್ಧಾಸನದೊಳ್ ಕುಳ್ಳಿರ್ದು ತನ್ನ ಕಂಡ ಕನಸುಗಳನೞಿಪಿ ತತ್ಫಲಮನರಸನೞಿಪೆ ಸುಖಮಿರ್ಪಿನಂ ಸ್ವರ್ಗಾವತರಣಕಲ್ಯಾಣ ಪೂರ್ವಕಂ ಪುಷ್ಪೋತ್ತರವಿಮಾನದಾದೇವನಾದೇವಿಯ ಗರ್ಭಕ್ಕವತರಿಸಿ ಪಾರ್ಶ್ವಭಟ್ಟಾರ ಕರತೀರ್ಥಸಂತಾನಂ ಮುನ್ನೂಱಯ್ವತ್ತು ವರ್ಷಂ ಪೋದೊಡಾಕಾಲದೊಳ್ ಚೈತ್ರಶುದ್ಧ

ತ್ರಯೋದಶಿಯೊಳುತ್ತರಫಲ್ಗುನಿಯೊಳ್ ಶಶಾಂಕಯೋಗದೊಳ್ ತ್ರಿಜ್ಞಾನಧರಂ ಪುಟ್ಟೆ ಸೌಧರ್ಮೇಂದ್ರಂ ಪುಲೋಮಕನ್ಯಾಸಹಿತಂ ಬಂದು ಮಹಾವಿಭೂತಿಯಿಂ ಕುಮಾರನಂ ಮಂದರಗಿರಿಗೊಯ್ದು ಪಾಂಡುಕವನದ ಪೂರ್ವೋತ್ತರ ದಿಗ್ಭಾಗದ ಪಾಂಡುಕರಕ್ತ ಶಿಲಾತಳದ ಮೇಗಣ ಸಿಂಹಾಸನದೊಳಿರಿಸಿ ದುಗ್ಧಾಬ್ಧಿಜಲದಿಂ ಜನ್ಮಾಭಿಷೇಕಕಲ್ಯಾಣ ಮಂ ಮಾಡೆ ಕುಮಾರನ ನಾಸಾಪುಟದೊಳ್ ಜಲಕಣಂಗಳ್ ಪುಗೆ ಮೂಗಿಱಿವುದು ಮಮರಸಮಿತಿ ತರಗೆಲೆಗಳಂತೆ ಪಾಱೆ ಮಹಾಶ್ಚರ್ಯದಿನಭಿಷೇಕಾನಂತರಂ ವೀರನಾಥ ನೆಂದು ಪೆಸರಿಟ್ಟು ಮಾತಾಪಿತೃಗಳಿಗೆ ಕೊಟ್ಟು ಸೌಧರ್ಮೇಂದ್ರಂ ಪೋದಂ. ಕಿಂಚಿ ದೂನ ದ್ವಾಸಪ್ತತಿವರ್ಷ ಪರಮಾಯುಷ್ಯನುಂ, ಸಪ್ತರತ್ನಿಪ್ರಮಾಣೋತ್ಸೇಧನುಂ ಸು ವರ್ಣವರ್ಣನುಂ ದಶವಿಧನಿಸ್ಸ್ವೇದತ್ವಾದಿ ಸ್ವಾಭಾವಿಕ ಗುಣಸಮನ್ವಿತನುಮೆನಿಸಿ ಕುಮಾರಜನ್ಮದೊಳ್ ಸಂಜಯವಿಜಯರೆಂಬ ಚಾರಣರ್ ಪದಾರ್ಥಂಗಳೊಳ್ ತಮಗೆ ಸಂಶಯಮಾಗಿ ಬಂದು ತೀರ್ಥಕರಕುಮಾರನಂ ಕಾಣಲೊಡಂ ನಿಸ್ಸಂದೇಹಮಾಗೆ ತಮಗೆ ಸನ್ಮತಿಹೇತುವಪ್ಪುದಱಿಂ ಸನ್ಮತಿಯೆಂದು ಪೆಸರನಿಟ್ಟು ಪೋದರ್.

ಇತ್ತ ಮತ್ತೊಂದು ದೆವಸಮಿಂದ್ರನ ಸಭೆಯೊಳನುಪಮ ವೀರಸ್ವಾಮಿಯಿಂದಗ್ಗ ಳಂ ಶೂರರಿಲ್ಲೆಂದು ನುಡಿಯೆ ಸಂಗಮನೆಂಬ ದೇವಂ ಪರೀಕ್ಷಿಸಲೆಂದು ಬಂದುದ್ಯಾನವನ ದೊಳ್ ಸಮಾನವಯಸ್ಕರುಂ, ಚಳಕಾಕಪಕ್ಷಧರರುಮಪ್ಪ ರಾಜಕುಮಾರರೊಡನೆ ತರು ಕ್ರೀಡಾಪರಾಯಣನಾಗಿರ್ದ ಕುಮಾರನಂ ಕಂಡಂಜಿಸಲೆಂದು ಮರಮೊದಲಿಂ ತಗಳ್ದು ತುದಿವರಂ ಪರ್ವಿ ಮಹಾನಾಗರೂಪದೊಳಿರೆ ತತ್ಕ್ಷಣಾಮುಂಡಪಮನಾಶ್ರಯಿಸಿ ವಿಗತ ಭಯನಾಗಿ ಮತ್ತಂ ಕ್ರೀಡಿಸುತ್ತಿರ್ದ ಕುಮಾರನಂ ಕಂಡು ಅತಿಪ್ರೀತನಾಗಿ ಮಹಾವೀರ ನೆಂದು ಪೆಸರನಿಟ್ಟು ಸಂಗಮದೇವಂ ಪೋದಂ.

ಇತ್ತ ಮೂವತ್ತುವರ್ಷಂ ಕುಮಾರಕಾಲಂ ಪೋದ ಬೞಿಯಂ ಮತ್ತೊಂದು ದೆವಸಮಾಭಿನಿಬೋಧಿತಜ್ಞಾನಪ್ರಕೃಷ್ಟಕ್ಷಯೋಪಶಮವಿಜೃಂಭಿತಬೋಧನಾತ್ಮಭವ ಸಂಬಂಧಮಂ ನೆನೆದು ಲೋಕಾಂತಿಕದೇವರ್ ಪ್ರತಿಬೋಧಿಸೆ ಸೌಧರ್ಮಕೃತ ಪರಿನಿಷ್ಕ್ರ ಮಣಕಲ್ಯಾಣಾಭಿಷೇಕಂ ಬಂಧುವಿಸರ್ಜನಂಗೆಯ್ದು ಚಂದ್ರಪ್ರಭಮೆಂಬ ಶಿಬಿಕೆಯೊಳ ನೇಕತರುಕುಸುಮಕಿಸಲಯಪಲ್ಲವಾಂಕುರಸ್ವಾದುಮತ್ತಮಧುಕರಕೋಕಿಳಶುಕಕುಳ ಸನಾ ಥಮಪ್ಪ ಷಂಡವನಕ್ಕೆ ಷಷ್ಠೋಪವಾಸದಿಂ ಪೋಗಿ ಮಣಿಶಿಲಾತಳದೊಳುತ್ತರಾ ಭಿಮುಖನಾಗಿರ್ದು ಮಾರ್ಗಶಿರ ಬಹುಳದಶಮಿಯಪರಾಹ್ಣದೊಳುತ್ತರಫಾಲ್ಗುನ ನಕ್ಷತ್ರ ದೊಳ ಕುಮಾರಕಾಲದೊಳ್ ಸಿದ್ಧನಮಸ್ಕಾರಪೂರ್ವಕಂ ಪಂಚಮುಷ್ಟಿಯಿಂ ತಲೆಯಂ ಪಱಿಯೆ ಪಂಚಮಾಂಬುಧಿಯೊಳಳಿಕುಳನೀಳಕುಂತಳಂಗಳಂ ರತ್ನಫಲಕೆಯೊಳ್ ಕೊಂ ಡೊಯ್ದು ಸೌಧರ್ಮೇಂದ್ರನಿಕ್ಕಿಬಂದಂ.

ಇತ್ತ ಸಾಮಯಿಕಶುದ್ಧಸಂಪನ್ನಸಂಯಮಧಾರಣದಿಂದಂ ಚತುರ್ಜ್ಞಾನಧರ ನಾಗಿ ಪಾರಣಾವಿಧಿಯೊಳ್ ಕೂಟಗ್ರಾಮದೊ ಽ ಪ್ರಿಯಂಗು ಕುಸುಮವರ್ಣನಪ್ಪ ಕೂಳ ನೆಂಬರಸನ ಮನೆಯೊಳ್ ನಿಲ್ಲು ವಸುಧಾರೆಯುಂ, ದೇವದುಂದುಭಿಯುಂ, ಪುಷ್ಪವೃಷ್ಟಿ ಯುಂ, ಮಂದಾನಿಳನ:ಂ, ದಿವಿಜಪ್ರಶಂಸಾರವಮುಮೆಂಬ ಪಂಚಾಶ್ಚರ್ಯಂ ನೆಗೞೆ ಭಟ್ಟಾರಕರಿಚ್ಛೆಯೊಳತಿಮುಕ್ತಕಶ್ಮಶಾನದೊಳ್ ರಾತ್ರಿ ಪ್ರತಿಮಾಯೋಗದೊಳಿರ್ಪುದು

ಮಿಾಶ್ವರಂ ಗೌರಿವೆರಸು ಬಂದು ಧೈರ್ಯಮಂ ಪರೀಕ್ಷೆಗೆಯ್ಯಲೆಂದು ವಿಕ್ರಿಯೆಯಿಂ ತಾಮ್ರ ತರಳಲೋಚನನುಮತಿವಿಕಟಭೀಷಣಭ್ರೂಭಂಗನುಂ, ಪಾದನ್ಯಾಸ ಪ್ರಕಂಪಿತಮಹೀ ತಳನುಮಾಗಿ ಭೇತಾಳರೂಪುಗಳುಮನಾನೆಲಾಗ ಫಣೀಂದ್ರ ಗಜೇಂದ್ರ ಸಿಂಹರೂಪುಗಳು ಮಂ ಕಿರಾತಸೈನ್ಯಮುಮಂ ವಿದ್ಯಾಪ್ರಭಾವದಿಂ ವಿಗುರ್ವಿಸಿ ಮಸಗಿ ಬಂದು ಕಹಳಾಟ್ಟ ಹಾಸಂಗೆಯ್ದು ವಿವಿಧೋಪಸರ್ಗದಿನೆಂತುಂ ಚಲಿಯಿಸಲಾಱದೆ ಮಹತಿಮಹಾವೀರ ನೆಂದು ಪೆಸರನಿಟ್ಟು ಪೋದಂ.

ಇತ್ತಲೊಂದು ದೆವಸಂ ಚೇಟಕಮಹಾರಾಜನ ನಂದನೆ ಚಂದನೆಯೆಂಬೊಳನೊರ್ವಂ ವಿದ್ಯಾಧರಂ ಬಂದು ಜನದಿಂ ವಂಚಿಸಿ ಕೊಂಡೊಯ್ದು ತನ್ನ ಪೆಂಡಿತಿಗಂಜಿ ತಂದ ಚಂದ ನೆಯುನಡವಿಯೊಳ್ ಬಿಸುಟ್ಟು ಪೋಪುದುಮೊರ್ವ ವನೇಚರಂ ಕಂಡು ಪಿಡಿತಂದು ವೃಷಭ ಸೇನನೆಂಬ ಪರದಂಗೆ ಧನಲೋಭದಿಂ ಕೊಟ್ಟೊಡಾಪರದನ ಪೆಂಡಿತಿ ಸುಭದ್ರೆಯೆಂಬೊಳಾಕೆ ಗಾತನೆಂತಾನುಮಳಿಪುಗುಮೆಂಬ ಶಂಕೆಯಿಂ ನವನಾಳಸಂಮಿಶ್ರಮಪ್ಪ ಕೋದ್ರವಾಹಾರ ಮಂ ಶರಾವಪಾತ್ರದೊಳಿಕ್ಕಿ ಕುಡೆ ಸಂಕಲೆಯೊಳ್ ನಮೆಯುತ್ತಿರ್ಪಿನಂ ಒಂದು ದೆವಸಂ ವತ್ಸವಿಷಯದ ಕೌಶಾಂಬೀ ನಗರಮಂ ಚರಿಗೆವೊಕ್ಕ ಮಹಾವೀರಭಟ್ಟಾರಕರನಾದರ ದಿಂ ನಿಲಿಸಲೆಂದಿದಿರಂ ನಡೆವಾಗಳ್ ತನಗೆ ತಾನೆ ಸಂಕಲೆ ಪಱಿದುಪೋಗೆ ಪರಾರ್ಧ್ಯ ವಸ್ತ್ರಾಭರಣಭೂಷಿತೆಯುಂ ಅಳಿಕುಳವಿನೀಳಶಿಥಿಲಕೇಶಭಾರವಿಗಳಿತನವಸುರಭಿಕುಸುಮ ಮಾಲಾಲಂಕೃತೆಯುಮಾಗೆ ತದೀಯಶೀಲಮಾಹಾತ್ಮ್ಯದಿನಾ ಶರಾವಪಾತ್ರೆಯೆ ಸುವರ್ಣಪಾತ್ರಮಾಗೆಯುಂ, ಕೋದ್ರವಾಹಾರಮೆ ಶಾಲಿತಂಡುಲಾಹಾರಮಾಗೆಯುಂ ವಿಧಿ ಪೂರ್ವಕಂ ನಿಲಿಸೆ ಪಂಚಾಶ್ಚರ್ಯಮಾಗೆ ಚಂದನೆಯವೃತ್ತಕಮನಱಿದು ಸೆಟ್ಟಿ ಮನ್ನಿಸುವುದುಂ ಆಕೆಯ ಬಂಧುಗಳ್ ಬಂದೊಯ್ಯೆ ಪೋದಳ್.

ಇತ್ತ ವರ್ಧಮಾನ ಭಟ್ಟಾರಕರ್ ದ್ವಾದಶವರ್ಷಂ ಛದ್ಮಕಾಲಂ ಪೋಗೆ ಜೃಂಭ ಗ್ರಾಮ ಸಮಿಾಪದ ಋಜುಗತಿಯೆಂಬ ತೊಱೆಯ ತಡಿಯ ಮನೋಹರೋದ್ಯಾನದ ವಿ ಶಾಲಪಟ್ಟಕದೊಳಾತಪಯೋಗದೊಳ್ ಷಷ್ಠೋಪವಾಸದಿಂ ಶಾಳದ್ರುಮದಡಿಯೊಳಿರೆ ವೈಶಾಖಶುದ್ಧದಶಮಿಯಪರಾಹ್ಣದೊಳ್ ಭದ್ರಹಸ್ತೋತ್ತರ ಮಧ್ಯಮಾರುತಮಾಗೆ ಕೇವಲಜ್ಞಾನೋತ್ಪತ್ತಿಯಪ್ಪುದುಂ ತತ್ಕಲ್ಯಾಣಪೂಜಾಪೂರ್ವಕಂ ಅಪಾಯಪ್ರಾಪ್ತಿ ವಾಕ್‌ಪೂಜಾತಿಶಯಭಾಗಿಯುಂ ಪರಮಾತ್ಮೋಪಲಕ್ಷಣೋಪೇತನುಮಾಗಿರ್ಪಿನಂ ದೇವರಾಜನಾಗಮೋಪದೇಶ ಹೇತುಭೂತಮಪ್ಪನನವಧಿಯಿನಱಿದು ಗೌತಮಗ್ರಾಮದ ಗೌತಮಗೋತ್ರದೊಳಾದಿತ್ಯವಿಮಾನದಿಂ ಬಂದು ಇಂದ್ರಭೂತಿಯೆಂಬ ಪೆಸರೊಳಭಿ ಮಾನಧರಂ ಬ್ರಾಹ್ಮಣನಾಗಿರ್ದೊಡಾತನನುಪಾಯದಿಂದೊಳ್ ಭಟ್ಟಾರಕರ ಸಮಿಾಪಕ್ಕೆ ತರೆ ಜೀವಾದಿಪದಾರ್ಥತತ್ವಮಂ ಸಾಮಾನ್ಯವಿಶೇಷನಿಬಂಧನ ದ್ರವ್ಯಾರ್ಥಿಕ ಪರ್ಯಾ ಯಾರ್ಥಿಕ ನಯಪ್ರರೂಪಣದಿನಱಿಪೆ ಪಂಚಶತ ಬ್ರಾಹ್ಮಣಸೂನುಗಳ್ವೆರಸು ಇಂದ್ರವಿ ಭೂತಿ ಸಂಯಮಮಂ ಕಯ್ಕೊಂಡು ಬುದ್ಧಿಕ್ರಿಯಾದ್ಯಷ್ಟವಿಧರಿದ್ಧಿಸಂಪನ್ನನಾಗಿ ಶ್ರಾವಣ ಮಾಸದ ಬಹುಳ ಪಾಡಿವದ ಪೂರ್ವಾಹ್ನದೊಳ್ ಭಟ್ಟಾರಕೋಪದೇಶದಿಂ ದ್ವಾದಶಾಂಗ ದರ್ಥಪದಂಗಳುಮಂ ಕೇಳ್ದು ಸಮಸ್ತದ್ವಾದಶಾಂಗ ಚತುರ್ದಶಪೂರ್ವಾರ್ಥಿಕತ್ವವೇದಿ ಯಾಗಿ ಪೂರ್ವರಾತ್ರದೊಳಂಗಂಗಳ್ಗೆ ಪಶ್ಚಿಮರಾತ್ರದೊಳ್ ಪೂರ್ವಂಗಳ್ಗೆ ವಚನರಚನೆ

ಯಿಂ ಮಾಡಿ ಪ್ರಥಮಗಣಧರರಾಗಿರ್ದಲ್ಲಿಂ ಬಳಿಯಂ ವಾಯುಭೂತಿಯುಮಗ್ನಿಭೂತಿಯುಂ ಸುಧರ್ಮಮೌರ್ಯರುಂ ಪುತ್ರರುಂ, ಮೈತ್ರಿಯರುಂ, ಅಕಂಪನರುಂ, ಪ್ರಭಾಸನರುಮೆಂಬ ಪದಿಂಬರ್ ಗಣಧರರಾಗೆ ಶ್ರೀವರ್ಧಮಾನಭಟ್ಟಾರಕರಂತು ಗೌತಮರ್ಮೊದಲಾಗೆ ಪನ್ನಿರ್ವರ್ ಗಣಧರರುಂ, ಇತ್ತ ಪಾರ್ಶ್ವಭಟ್ಟಾರಕನೆಂಬೇಕಾದಶಾಂಗಧಾರಿಯುತಂ ತನ್ನ ವಿದ್ಯಾಶಕ್ತಿಯಿಂ ವಿಗುರ್ವಿಸಿರೆ ಜನಂ ಭ್ರಾಂತಿಗೊಂಡಿರೆ ದಿವ್ಯಧ್ವನಿಯಿಂ ಮಾ ಯು ವಾ ಗೆ ಮಾನಕಷಾಯವಿನುಮತಿಸುಶ್ರುತವಿಭಂಗಜ್ಞಾನದಿನಜ್ಞಾನಮಿಥ್ಯಾರೂಪಮಾದ ಮುಸ್ಕರಿಪುರಾಣಮುಂ ಮಾಡಿದಂ.

ಅತ್ತ ತ್ರೈಲೋಕ್ಯಸ್ವಾಮಿಗೆ ಮೂನೂರ್ವರ್ ಪೂರ್ವಧರರುಂ, ಒಂಬಯ್ಸಾಸಿರದೊಂಬಯ್ನೂರ್ವರ್ ಶಿಕ್ಷಕರುಂ, ಸಾಸಿರದ ಮುನ್ನೂರ್ವರವಧಿ ಜ್ಞಾನಿಗಳುಂ, ಏೞ್ನೂರ್ವರ್ ಕೇವಲಿಗಳುಂ ಒಂಬಯ್ನಾಸಿರ್ವರ್ ವಿಕ್ರಿಯಾರ್ಧಿ ಸಂಪನ್ನರುಂ ಅಯ್ನೂರ್ವರ್ ಮನಃಪರ್ಯಯಜ್ಞಾನಿಗಳುಂ, ನಾನೂರ್ವರ್ ವಂದಿಗಳುಂ ಚಂದನಾರ್ಯಿಕೆಯರ್ ಮೊದಲಾಗೆ ಮೂವತ್ತಱುಸಾಸಿರ್ವರ್ ಅರ್ಜಿಯರುಂ, ಒಂದುಲಕ್ಕೆ ಶ್ರಾವಕರುಂ, ಮೂಱುಲಕ್ಕೆ ಶ್ರಾವಕಿಯರುಂ, ಅಸಂಖ್ಯಾತದೇವರುಂ, ದೇವಿಯರುಂ ಸಂಖ್ಯಾತತಿರ್ಯಗ್ಜಾತಿಗಳುಂ ಇಂತು ದ್ವಾದಶಗಣಂಬೆರಸು ವರ್ಧಮಾನ ಭಟ್ಟಾರಕರುಂ ಸಿಂಹಾಸನಮಧ್ಯಗತಮಾಗಿ ಷಡ್ದ್ರವ್ಯ ಸಪ್ತತತ್ವ ನವಪದಾರ್ಥ ಸಂಸಾರಮೋಕ್ಷಹೇತುಫಲಪ್ರಪಂಚನಯಪ್ರಮಾಣನಿಕ್ಷೇಪಾದಿಗಳನರ್ಧಮಾಗಧೀಭಾಷೆಯಿಂ ಬೆಸಸೆ ಕೇಳ್ದು ಕೆಲಂಬರ್ ಸಂಯಮಮುಂ ಕೆಯ್ಕೊಂಡರ್, ಕೆಲಂಬರ್ ಸಂಯಮಾಸಂಯಮಮುಂ ಕೆಯ್ಕೊಂಡರ್, ಕೆಲಂಬರ್ ಸಮ್ಯಕ್ತ್ವಮುಂ ಕೆಯ್ಕೊಂಡರ್. ಅಂತು ವರ್ಧಮಾನಾದ್ಯನ್ವರ್ಥ ಸಹಸ್ರಾಷ್ಟನಾಮಧರಂ ಧರ್ಮೋಪದೇಶಂಗೆಯ್ವುತ್ತುಂ ಕ್ರಮದಿಂ ರಾಜಗೃಹಮನೆಯ್ದಿ ವಿಪುಳಗಿರಿಯೊಳಿರ್ಪುದುಂ ಶ್ರೇಣಿಕಮಹಾರಾಜಂ ಚತುರಂಗ ಬಲಸಹಿತನುಮಷ್ಟಸಹಸ್ರಮಕುಟಬದ್ಧಪರಿವೃತನುಮಾಗಿ ಬಂದು ದೇವರಂ ಪ್ರದಕ್ಷಿಣಂಗೆಯ್ದು ಗಂಧಮಾಲ್ಯಾದಿಗಳಿನರ್ಚಿಸಿ ಧರ್ಮಶ್ರವಣಾನಂತರಂ ತನ್ನ ಪೂರ್ವಭವ ಸಂಬಂಧಮಂ ಬೆಸಗೊಳೆ ಗೌತಮಸ್ವಾಮಿಗಳಿಂತೆಂದು ಬೆಸಸಿದರ್:—

ನೀನೀಭವಕ್ಕೆ ಮೂಱನೆಯ ಭವದೊಳ್ ಜಂಬೂದ್ವೀಪದ ವಿಂಧ್ಯಪುರದ ಮಲಯದ ಕುಟಜವನದೊಳ್ ಕದಿರಸಾಗರನೆಂಬ ಕಿರಾತಮುಖ್ಯನೊಂದುದೆವಸಂ ಸಮಾಧಿಗುಪ್ತರೆಂಬ ಮುನಿಯರಂ ಕಂಡು ಪೊಡೆವಡೆ ಧರ್ಮಲಾಭಮಕ್ಕೆಂದು ಪರಸೆ ಧರ್ಮಮೆಂಬುದೇನದಱಿನಪ್ಪ ಲಾಭಮೆಂಬುದೇನೆನೆ ಮಧುಮದ್ಯಮಾಂಸಾದಿನಿವೃತ್ತಿ ಧರ್ಮಮೆಂಬುದು. ಅದಂ ಪಡೆವುದು ಲಾಭಮೆಂಬುದು. ಅದಱಿಕೊಳ್ ಸ್ವರ್ಗಾದಿಸುಖಮುಂ ಪಡೆಯಲಕ್ಕುಮೆನೆ ಕಿರಾತನನಿತುಮಂ ಪತ್ತುವಿಡಲಾಱೆನೆಂಬುದುಂ ಮುನಿಪತಿಗಳಾತನ ಚಿತ್ತವೃತ್ತಿಯನಱಿದು ನೀಂ ಮುನ್ನಮೆ ಕಾಕಮಾಂಸಭಕ್ಷಣಂಗೆಯ್ದಱಿವಾ ಎಂಬುದುಂ ಅಱಿಯೆನೆನೆ ನೀನಂತಪ್ಪೊಡಾವ್ರತಮಂ ಕೆಯ್ಕೊಳ್ಳೆನೆ ಕೆಯ್ಕೊಂಡಿರ್ಪನಂ ಕೆಲವು ದೆವಸದಿಂ ವ್ಯಾಧಿಪುಟ್ಟೆ ವೈದ್ಯರಿದರ್ಕೆ ಕಾಕಮಾಂಸಭಕ್ಷಣಂ ಗೆಯ್ವುದೆನೆ ಕಂಠಗತಪ್ರಾಣನಾಗಿಯುಮದಂ ನೆನೆಯದೆ ಮುನ್ನ ರಿಷಿಯರಲ್ಲಿ ಕೊಂಡ ವ್ರತಮನೆ ಬಗೆದೊಲ್ಲದಿರ್ಪನಂ ಅದನೂಡಲೆಂದು ಆತನ ಮೆಯ್ದುನಂ ಕದಿರಸಾರಪುರಮನಾಳ್ವ ಸೂರ

ವೀರನೆಂಬೊಂ ಬರುತುಂ ವನಗಹನದ ವಟವೃಕ್ಷದಡಿಯೊಳಳುತಿರ್ದೊರ್ವ ಸ್ತ್ರೀಯಂ ಕಂಡು ನೀನಾರ್ಗೇಕೞ್ತಿಪೆಯೆಂದೊಡಾಂ ಯಕ್ಷಿಯೆಂ ವ್ಯಾಧಿಪೀಡಿತನಪ್ಪ ನಿನ್ನ ಮೆಯ್ದುನಂ ಕದಿರಸಾಗರಂ ಕಾಕಮಾಂಸಭಕ್ಷಣವಿರಮಣವ್ರತಫಲದಿನೆನಗಧಿಪತಿಯಾದಪ್ಪೊನಾತನಂ ನೀಂ ಪೋಗಿ ಕಾಕಮಾಂಸಮನೂಡಿ ನಾರಕನಪ್ಪಂತು ಮಾಡಿದಪ್ಪೆಯುದಱಿನೞ್ತಿಪೆನೆಂಬುದುಂ, ಅದಂ ಮಾೞ್ಪನಲ್ಲೆನೆಂದು ಪೋಗಿ ತನ್ನ ಮೆಯ್ದುನನಂ ಕಂಡು ನಿನ್ನ ವ್ಯಾಧಿಗೆ ಕಾಕಮಾಂಸಮಂ ಕೊಳ್ಳಲ್ವೇೞ್ಕುಮೆನೆ ನಿನ್ನಿಂದಗ್ಗಳಂ ಪ್ರಾಣಸಮಾನ ಮಿತ್ರರಿಲ್ಲದಱಿನೆನಗೆ ನೀಂ ಹಿತಮಪ್ಪುದನೆ ಪೇೞ್ವುದು ಇಂತು ನರಕಗತಿಪ್ರಾಣಹೇತುವಪ್ಪುದಂ ಪೇೞಲಾಗದಿಂತೆ ಸಾವೊಡಂ ಸಾವೆನೆನ್ನ ಕೆಯ್ಕೊಂಡ ವ್ರತಮಂ ಬಿಸುೞ್ಪನಲ್ಲೆನೆಂದೊಡಾತನಭಿಪ್ರಾಯಮನಱಿದು ತನಗೆ ಯಕ್ಷಿ ಪೇೞ್ದುದೆಲ್ಲಮನಾತಂಗಱಿಪಿದೊಡೆ ಅವನವಧಾರಿಸಿ ಮತ್ತಮಹಿಂಸಾದಿವ್ರತಂಗಳಂ ಕೆಯ್ಕೊಂಡು ಜೀವಿತಾಂತದೊಳ್ ಸೌಧರ್ಮಕಲ್ಪದೊಳ್ ದೇವನಾಗಿ ಪುಟ್ಟೆ ಸೂರವೀರಂ ನಿಜನಿವಾಸಕ್ಕೆ ಪೋಗುತ್ತುಂ ಯಕ್ಷಿಯುಂ ಕಂಡೆನ್ನ ಮೆಯ್ದುನಂ ನಿನಗೆ ಪತಿಯಾದನೆ ಪೇೞುಮೆಂಬುದುಮಾತನಹಿಂಸಾದಿವ್ರತಮಂ ಕೆಯ್ಕೊಂಡು ವ್ಯಂತರಗತಿಯೊಳ್ ಪುಟ್ಟದೆ ಶ್ರಾವಕವ್ರತಂಗಳಂ ಕೆಯ್ಕೊಂಡಂ. ಕದಿರಸಾಗರನುಂ ಎರಡು ಸಾಗರೋಪಮಾಂತದೊಳ್ ಅಲ್ಲಿಂ ಬಂದು ಕುಣಿಕನರಪತಿಗಂ ಶ್ರೀಮತೀದೇವಿಗಂ ಶ್ರೇಣಿಕನೆಂಬ ಮಗನಾಗಿರೆ ಕುಣಿಕನೊಂದು ದೆವಸಂ ಎನ್ನ ಮಕ್ಕಳೊಳಾವಂ ರಾಜ್ಯಾರ್ಹನಕ್ಕುಮೆಂದು ನೈಮಿತ್ತಿಕನಂ ಬೆಸಗೊಳೆ ನಿನ್ನ ಮಕ್ಕಳ್ಗುಣಲಿಕ್ಕುವಲ್ಲಿ ಪರಮಾನ್ನಮನಾವನೊರ್ವಂ ಕಿಡಲೀಯದುಂಡನಾತನೆ ರಾಜ್ಯಾರ್ಹನಕ್ಕುಮೆಂದು ಇವು ಮೊದಲಾಗೆ ಪೆಱವುಂ ನಿಮಿತ್ತಂಗಳಂ ನೋಡಿ ಪೇೞೆ ನಿನ್ನನನಿತಱಿೞೊಳ್ ಪರೀಕ್ಷಿಸಿ ನಿನಗೆ ಕೂರ್ತು ದಾಯಿಗರ ದೆಸೆಯೊಳಪ್ಪಪಾಯಕ್ಕಂ ಪುಸಿಮುಳಿದು ನಡೆಯೆನೆ ದೇಶಾಂತರಕ್ಕೆ ಪೋಗೆಯುರಸರ ಗೂಢಪ್ರಣಿಧಿಗಳನುಮತದಿಂ ನಂದಿಗ್ರಾಮದ ಜನಂಗಳುಂ ಮನ್ನಿಸದೆ ಕಳೆಯೆ ನೀನೊರ್ವಂ ಬ್ರಾಹ್ಮಣನೊಡನೆ ಬರುತುಂ ಪೇವರಾಜಾತಿಪಾಷಂಡ ಲೋಕಪ್ರತಿವಿಧಾಯಿಗಳಪ್ಪ ಕಥೆಗಳಂ ಪೇೞೆ ಪಾರ್ವಂ ತನ್ನ ಮನೆಗೊಯ್ದು ವಾಗ್ಮಿತ್ವಮಂ ಕವಿತ್ವಾದಿಗಳಂ ಮೆಚ್ಚಿ ನಿನಗೆ ತನ್ನ ಮಗಳಂ ಕುಡುವುದುಂ ಇತ್ತ ಕುಣಿಕಮಹಾರಾಜಂ ರಾಜ್ಯಮಂ ಪತ್ತುವಿಡಲ್ ಬಗೆದು ನಿನ್ನಂ ಬರಿಸಿ ರಾಜ್ಯಮನೀಯೆ ನಂದಿಗ್ರಾಮದೊಳಿಪ್ಪ ನಿನ್ನ ಮುಳಿಸಂ ಪೆಱರಱಿಯದಂತದನುಪಾಯದಿಂ ನಿಗ್ರಹಂಗೆಯ್ಯಲ್ ಬಗೆದು ನಿರ್ವಹಿಸಲಱಿಯವಪ್ಪ ಬೆಸಂಗಳಂ ಪೇೞ್ದಿಟ್ಟುವುದುಂ ನಿನಗಂ ಬ್ರಾಹ್ಮಣನ ಕನ್ನಿಕೆಗಂ ಪುಟ್ಟಿದಭಯಕುಮಾರಂ ನಿನ್ನಂ ಬಂದು ಕಂಡು ನಂದಿಗ್ರಾಮದೊಳಪ್ಪ ಚಿತ್ತಕಾಲುಷ್ಯಮನುಪಾಯಕೌಶಲಂ ಪ್ರಶಮಿಸೆ ದೌಹೃದಯಶಿಶುಮಾಸಾದಿ ನಿಬಂಧಂಗಳಭಯಕುಮಾರಂ ಪ್ರಕೃತಿಗಳಾಗಿ ನೀಂ ನಯವಾದ ಕುಶಲಚಯಪಂಡಿತನೆಂದು ಪೆಸರನಿಡೆ ನೀನುಂ ನಿನ್ನ ಮಗನುಮಿಲ್ಲಿಗೆ ಬಂದಿರೆಂಬುದುಂ ಅದನವಧಾರಿಸಿ ಮಹಾವ್ರತಕ್ಕುಮಣುವ್ರತಮೆನಗೆ ಮನಂದರಲ್ಬಾರದಾನೇನಭವ್ಯನೊ ಭವ್ಯನೊ ಬೆಸಸಿಮೆನೆ ನೀನಾಸನ್ನಭವ್ಯನೆಯಾದೊಡಂ ಬಹ್ವಾರಂಭ ಪರಿಗ್ರಹಾದಿ ಭೋಗಾಸಕ್ತಿಯಿಂ ಬದ್ಧನಂಕಾಯುಷ್ಯನಾದೆಯದಱಿಂ ನಿನಗೆ ವ್ರತಂ ಕೊಳ್ವ ಬಗೆಯಿಲ್ಲಾ ಸಮ್ಯಗ್ದರ್ಶನಮಂ ಕೆಯ್ಕೊಳ್ವುದು

* * *

ನೀಂ ಮುನ್ನಂ ಶಾಂತಿಪುರಾಣದೊಳ್ ಸವಿಸ್ತರಂ ಪೇೞ್ದ ದರ್ಶನವಿಶುದ್ಧ್ಯಾದಿ ಷೋಡಶಭಾವನೆಗಳಿಂ ವ್ಯಸ್ತಮುಂ ಸಮಸ್ತಮುಂ ಕಾರಣಮುಮಪ್ಪವಂ ಭಾವಿಸಿ ತೀರ್ಥಕರ ಪುಣ್ಯಮಂ ಕಟ್ಟಿ ಪ್ರಥಮನರಕದೊಳ್ ಪುಟ್ಟಿ ಸಂಖ್ಯೆಯ ವರ್ಷದಿನಲ್ಲಿಂ ಬಂದುತ್ಸರ್ಪಿಣಿ ಕಾಲದೊಳೀ ಭರತಕ್ಷೇತ್ರದೊಳ್ ಮಹಾಪದ್ಮನೆಂಬ ಪ್ರಥಮ ತೀರ್ಥ ಕರನಪ್ಪೆಯೆಂಬುದುಂ ಶ್ರೇಣಿಕಮಹಾರಾಜಂ ಮುನಿಪತಿ ವಚನದಿಂ ಸಮುಪಲಬ್ಧೋ ತ್ಕೃಷ್ಟ ಶುಭ ಪರಿಣಾಮನುಂ ಪರಿಗ್ರಹೀತಕಾಲಕರಣೋಪಯೋಗಭಾವಲಬ್ಧಿಯುಂ ಉಪಶಮಸಮ್ಯಕ್ತ್ವಭಾಗಾಂತರ್ಮುಹೂರ್ತದಿಂ ವೇದಕಸಮ್ಯಗ್ದೃಷ್ಟಿಯುಂ ಬೞಿಯ ಮಂತರ್ಮುಹೂರ್ತಕಾಲದಿನಧಃಪ್ರವೃತ್ತಿಕರಣಂ ಅಪೂರ್ವಕರಣಂ ಅನಿವೃತ್ತಿಕರಣಂಗ ಳಿಂದನಂತಾನುಬಂಧಿಗಳಂ ಸಂಯೋಜಿಸಿ ಮತ್ತಮಂತರ್ಮುಹೂರ್ತಮಂ ವಿಶ್ರಮಿಸಿ ಅಧಃಪ್ರವೃತ್ತಾಪೂರ್ವಕರಣಂಗಳುಂ ಪೋಗೆ ನಿವೃತ್ತಿಕರಣ ಬಹುಭಾಗಂ ಪೋಗೆ ಏಕ ಭಾಗಮುಂಟೆನೆ ದರ್ಶನಮೋಹನೀಯದ ಮಿಥ್ಯಾತ್ವಮುಮಂ ಸುಮ್ಯಗ್ಮಿಥ್ಯಾತ್ವಮುಮಂ ಸಮ್ಯಕ್ತ್ವಪ್ರಕೃತಿಯುಮಂ ಕ್ಷಮಿಯಿಸಿ ಸಮ್ಯಕ್ತ್ವಪ್ರಕೃತಿಗಳಂ ಕಿಡಿಸಿ ಕ್ಷಾಯಿಕ ಸಮ್ಯಗ್ದೃಷ್ಟಿಯಾಗಿ ಪರಮಸುಖಕಾರಣಮಪ್ಪ ಸಮ್ಯಗ್ದರ್ಶನಲಾಭದಿಂದಾಗಳೆಮುಕ್ತ ನಾದಂತೆ ಸಂತಸಂ[ಬಟ್ಟಂ.] * * * *

ಮತ್ತೊಂದು ದೆವಸಂ ಶ್ರೇಣಿಕಂ ಪ್ರಥಮಗಣಿನಿಯರಪ್ಪ ಚಂದನಾರ್ಯಿಕೆಯರ ಜನ್ಮಸಂಬಂಧಮಂ ಬೆಸಗೊಳೆ ಗೌತಮಸ್ವಾಮಿಗಳಿಂತೆಂದು ಬೆಸಸಿದರ್:—

ಶಿಲ್ಪಿವಿಷಯದ ವೈಶಾಲಿ ನಗರಮನಾಳ್ವ ಪರಮಾರ್ಹಚ್ಚೇಟಕಮಹೀಪತಿಗಂ ಸುಭ ದ್ರೆಗಂ ಪುಟ್ಟಿದ ಧನದತ್ತನುಂ ಧನಭದ್ರನುಂ ಮಹೇಂದ್ರನುಂ ಸುದತ್ತನುಂ, ಸಿಂಹಭದ್ರ ನುಂ, ಕಾಂಭೋಜನುಂ, ಅಕಂಪನುಂ, ಪತಂಗನುಂ, ಪ್ರಭಂಜನನುಂ, ಪ್ರಭಾಸನುಮೆಂಬ ಪದಿಂಬರ್ ತನಯರುಂ, ಪ್ರಿಯಕಾರಿಣಿಯುಂ, ಮೃಗಾವತಿಯುಂ, ಸುಪ್ರಭೆಯುಂ, ಪ್ರಭಾವತಿಯುಂ, ಚೇಳಿನಿಯುಂ, ಜ್ಯೇಷ್ಠೆಯುಂ, ಚಂದನೆಯುಂ, ಎಂಬರೇೞ್ವರ್ ಮಗಳ್ದಿ ರಾಗೆ ವಿದೇಹವಿಷಯದ ಕುಂಡಳಿಪುರಮನಾಳ್ವ ನಾಥಾನ್ವಯದ ಸಿದ್ಧಾರ್ಥಂಗೆ ಪ್ರಿಯಕಾರಿ ಣಿಯಂ ಕುಡೆ, ದಶಾರ್ಣವಿಷಯದ ಸಾರಕಚ್ಛನಗರಮನಾಳ್ವ ಸೂರ್ಯವಂಶದ ದಶರಥಂಗೆ ಸುಪ್ರಭೆಯಂ ಕುಡೆ ಕಚ್ಛವಿಷಯದ ವಸ್ವಾಮಿನಗರಮನಾಳ್ವೊತಾಥಯನಂಗೆ ಪ್ರಭಾವತಿ ಯಂ ಕೊಟ್ಟೊಡಾಕೆ ಶೀಲಮಂ ತಾಳ್ದಿ ಶೀಲವತಿಯೆಂಬ ಜಗತ್ಪ್ರಸಿದ್ಧಿಯಂ ಪಡೆದಳ್.

*ಶ್ರೇಣಿಕಂ ಚೇಳಿನಿಯಂ ಪರಿಗ್ರಹಿಸಿ ಮಹಾದೇವಿಪಟ್ಟಂಗಟ್ಟಿದನಿತ್ತ ಚಂದನೆ ಯುಂ ಯಶಸ್ವತಿಕಂತಿಯರ ಪಕ್ಕದೆ ಸಮ್ಯಕ್ತ್ವಮುಮಂ, ಶ್ರಾವಕವ್ರತಮುಮಂ, ಕೆಯ್ಕೊಂಡು ವೊಂದುದೆವಸಮಶೋಕವನದೊಳ್ ಕ್ರೀಡಿಸುತ್ತಿರ್ಪಿನಂ ರಜತಗಿರಿಯ ದಕ್ಷಿಣ ಶ್ರೇಢಿ ಸುದೀರ್ಘನಗರಮನಾಳ್ವ ಮನೋವೇಗನೆಂಬಂ ತನ್ನ ಪೆಂಡಿತಿ ಮನೋವೇಗೆ ವೆರಸು ವಿಹಾರಿಸುತ್ತುಂ ಬಂದು ಚಂದನೆಯಂ ಕಂಡು ಕುಸುಮಶರವಶೀಕೃತಮತಿಯಾಗಿ ಮನೋವೇಗೆಯಂ ಪೊೞಲನೆಯ್ದಿಸಿ ಸ್ವರೂಪಿಣೀ ವಿದ್ಯೆಯಿಂ ತನ್ನ ರೂಪಂ ಸಿಂಹಾಸನ ದೊಳಿರ್ಪಂತು ಮಾಡಿ ಮತ್ತಮಶೋಕವನಕ್ಕೆವಂದು ಚಂದನೆಯಂ ಪಿಡಿದೊಯ್ಯೆ ಮನೋವೇಗೆಯುಮಾತಂ ವಂಚಿಸಿ ಪೋದುದನಱಿದು ಸ್ವರೂಪಿಣೀ ವಿದ್ಯೆಯಿಂ ಪಾದದೊ

ಳೊದೆವ್ವುದುಮುದಟ್ಟಹಾಸಂ ಗೆಯ್ದು ಪೋಪುದುಮವಳ್ ಭೋಗಿನೀವಿದ್ಯೆಯಿಂದಾತನಿರ್ದೆಡೆಯನೆಱಿದು ಬೞಿಯಂ ತಗುೞ್ದಿಯ್ದಿ ನೀನಿವಳಂ ಬಿಸುಡೆಂದು ಭಯಂಗೊಳಿಬಗ್ಗಿಸಿ ಭೂತರಮಣವೆಂಬರಣ್ಯದೊಳೈರಾವತಿಯೆಂಬ ತೊಱೆಯ ತೆಂಕಣ ತಡಿಯೊಳ್ ಪರ್ಣಲಘು ವಿದ್ಯೆಯಿಂ ಬಿಸುಟ್ಟು ಪೋಗೆ ಚಂದನೆಯುಂ ಯಶಸ್ವತಿಕಂತಿಯರ ಪಕ್ಕದೆ ಸಮ್ಯಕ್ತ್ವಮಂ ಕೆಯ್ಕೊಂಡು ಪಂಚನಮಸ್ಕಾರಂಗಳನುಚ್ಚರಿಸುತ್ತುಮಿರುಳಂ ಕಳಿಪೆ ನೇಸಱ್ ಮೂಡಿದಾಗಳ್ ಕಾಳಶಂಬರಂ ಚಂದನೆಯ ಕೊಟ್ಟ ಮೂಲ್ಯಮಪ್ಪ ತೊಡುಗೆಗಳಂ ಕೊಂಡು ಸಂತುಷ್ಟನಾಗಿ ಧರ್ಮತತ್ವಮನಾಕೆಯಲ್ಲಿಯೆ ಕೇಳ್ದು ಭೀಮಕೂಟಪರ್ವತದ ತಪ್ಪಲ ಭಯಂಕರಮಪ್ಪ ಬೇಡ ವಟ್ಟಿನೊಳಿರ್ಪ ಸಿಂಹಕನೆಂಬ ಶಬರಂಗೆ ಆಕೆಯಂ ಕೊಂಡೊಯ್ದು ಕುಡುವುದುಮಾಕೆಯ ಸೌಂದರ್ಯಕ್ಕೆ ಸೋಲ್ತು ತನಗೆ ಮಾಡಲೆಂದು ನಿಗ್ರಹಂಗೆಯ್ವುದುಮವರಬ್ಬೆ ಬಂದು ನೀನೀಕೆಯಂ ಪ್ರತ್ಯಕ್ಷದೇವತೆಯಂ ನಿಗ್ರಹಂಗೆಯ್ಯದಿರೀಕೆ ಮುಳಿದೊಡೆ ಶಾಪಂಗುಡಲ್ ಸಮರ್ಥೆಯೆಂದು ಮಾಣಿಸಿ ಸ್ನಾನಶಯನಭೋಜನಾದಿಗಳಿನೊಳ್ಳಿತ್ತಾಗಿ ನಡೆಯಿಸೆ ಕೆಲವು ಕಾಲಮಲ್ಲಿರ್ಪಿನಂ ವತ್ಸವಿಷಯದ ಕೌಶಾಂಬೀನಗರದ ವೃಷಭಸೇನಸೆಟ್ಟಿಯ ಮನೆಗೆ ಮುಖ್ಯಮಿತ್ರನೆಂಬಂಗೆ ಚಂದನೆಯಂ ವ್ಯಾಧರಾಜಂ ಕೊಟ್ಟೊಡಾತಂ ಸ್ವಾಮಿಭಕ್ತನಾಗಿ ತಂದು ತನ್ನ ಸೆಟ್ಟಿಗೆ ಕೊಟ್ಟೊಡಮವಡೆದಿರ್ಪಿನಂ, ಆ ವೃತ್ತಾಂತಮಂ ವೃಷಭಸೇನ ಸೆಟ್ಟಿತಿ ಸುಭದ್ರೆವೊಂದುದೆವಸಂ ಚಂದನೆ ನೀರ್ಗುಡಿವಲ್ಲಿ ನೆಲದೊಳೊಕ್ಕ ನೀರೊಳಲೆವ ಪ್ರಳಂಬಕೇಶಕಳಾಪಮಂ ಸೆಟ್ಟಿ ಮುಡಿಯಿಸುವುದಂ ಕಂಡು ಸೆಟ್ಟಿತಿ ಮುಳಿದು ನೀನೀಕೆಯಂ ಪೊಂದಲ್ ಬುದ್ಧಿಯಿಂ ಸಂಕಲ್ಪಂ ಮಾಡಲ್ ಬಗೆದೆಯಕ್ಕುಮೆಂದು ಕಡುಮುಳಿದು ಚಂದನೆಯಂ ಸಂಕಲೆಯೊಳಿಕ್ಕಿ ದುರಾಹಾರಪ್ರದಾನ ಕಟುಕವಚನತರ್ಜನಾದಿಗಳಿಂ ಬಾರಿಸೆ ಪೂರ್ವಕೃತಪಾಪವಿಪಾಕದಿನೆನಗಿನಿತಾದುದಿದಕ್ಕೆ ಸೆಟ್ಟಿತ್ತಿಯೇಗೆಯ್ವಳೆಂದು ತನ್ನಂ ತಾನೇ ನಿಂದಿಸಿ ತತ್ಪುರಮನಾಳ್ವ ತನ್ನ ಭಾವಂ ಶತಾನೀಕಂಗಂ ತಮ್ಮಕ್ಕಂ ಮೃಗಯಾವತಿಗಮಪ್ಪೊಡಂ ತನ್ನ ಮುಖಮನಱಿಪದೆ ಕ್ಷಮೆಯಾಗಿರ್ಪಿನಂ ಛದ್ಮಸ್ಥಕಾಲದೊಳ್ ತ್ರೈಲೋಕ್ಯಸ್ವಾಮಿ ಚರಿಗೆವಂದೊಡಿದಿರೆಬ್ದು ನಿಲಿಸೆ ಸಂಕಲೆ ತನಗೆ ತಾನೆ ಪಱಿಯೆ ಸರ್ವಾಭರಣಭೂಷಿತೆಯಾಗಿ ಭೋಜನಭಾಜನಾದಿಗಳಾಗೆ ಯಥಾವಿಧಿಯಿಂ ನಿಲಿಸೆನೆಗಬ್ದಾಶ್ಚರ್ಯ ಪಂಚಕಮಂ ಕಂಡು ತನ್ನ ಮಗನುದಯನಂ ಬೆರಸು ಮೃಗಾವತಿ ಬಂದು ತನ್ನ ತಂಗೆಯ ನರ್ಚನಾಪ್ರಶಂಸೆಪೂರ್ವಕಂ ಮನೆಗೊಯ್ಯೆ ಸೆಟ್ಟಿಯುಂ ಸೆಟ್ಟಿತಿಯುಂ ಬಂದು ಶರಣ್ಬೊಕ್ಕು ಚಂದನೆಯ ಕಾಲ್ಗೆಱಗೆ ತದ್ವಾರ್ತಾಕರ್ಣನದಿಂ ಸಂತೋಷಂಬಟ್ಟು ಬಂಧುಗಳೆಲ್ಲಂ ತಮ್ಮಯ್ಯನಲ್ಲಿಗುಯ್ವುದುಂ ವಂದನಾರ್ಘಂ ಬಂದ ಬಂಧುಜನಂಗಳಂ ವಿಸರ್ಜಿಸಿ ದೀಕ್ಷೆಗೊಂಡು ಗಣಿನಿಪದದೊಳ್ ನಿಂದಳ್. * * * *

ಈ ಪೇೞ್ದ ಚತುರ್ವಿಧಧ್ಯಾನಂಗಳೊಳ್ ಶುಕ್ಲಧ್ಯಾನದಿಂ ಸಕಲ ಪಾಪಕರ್ಮ ನಿರ್ಮೂಲನಂಗೆಯ್ದು ಶ್ರೀ ವರ್ಧಮಾನ ಭಟ್ಟಾರಕರ್ ಮೋಕ್ಷಲಕ್ಷ್ಮೀವಲ್ಲಭರುಂ ತ್ರಿಲೋಕ ಚೂಡಾಮಣಿಗಳುಂ ಆದರ್, ಇತ್ತ ದೇವೇಂದ್ರರೆಲ್ಲರುಂ ಬಂದು ಆದಿ ಭಟ್ಟಾರಕರ್ಗೆ ಮಾಡಿದಂದದೊಳ್ ಪರಿನಿರ್ವಾಣ ಕಲ್ಯಾಣ ಪೂಜೆಯಂ ಮಾಡಿ ತದನಂತರ ಮಾನಂದ ನೃತ್ಯಮನಾಡಿ ಪೋದರ್.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಂಙ್ತಿ	ಅಶುದ್ಧ	ಶುದ್ಧ
4	೧	ಮುದ್ವ	ಮುದ್ಧ
,,	೨೦	ಸುಧಾನು ಭಕ್ತಿಯಿಂ	ಭವೋತ್ಥಶಕ್ತಿಯಿಂ
11	೩	ಸುರಿವಂಗನ	ಸುರಿವಂಗಣ
,,	೧೭	ದೃತವಿಳಂಬಿತಂ	ದ್ರುತವಿಳಂಬಿತಂ
,,	೧೭	ಸಕಳಸಂಗಿಜ	ಸಕಳಸಂ ನಿಜ
12	೫	ವಿವರ	ವಿರವ
16	೩	ಸಂತನ್ನೊಳ್	ಶಂತನ್ನೊಳ್
,,	೧೮	ಶ್ರಿಧವಾಖ್ಯ	ಶ್ರೀಧವಾಖ್ಯ
24	೯	ಜನತಾಧೀಶ್ವರಂ	ಜನತಾಧೀಶರಂ
31	೧೧	ವಿಧು	ವಿಧ
38	೩೦	ತ್ರಿಸಿಷ್ಟ	ತ್ರಿಪಿಷ್ಟ
41	೭	ಶುಕೌಘ	ಪುರೌಘ
,,	೧೩	ನಿಮುಂಜ	ನಿಕುಂಜ
,,	೨೪	ದ್ವಾರವಯಂ	ದ್ವಾರವಮಂ
45	೨೪	ಕೇಶ	ಕೇತ
46	೧೨	ಸಾಮಂತಾದಿಂಗಳಂ	ಸಾಮತಾದಿ ಸ್ವಜನಂಗಳಂ
,,	೨೦	ನಿತಂಮೆಂಬಿನಂ	ನಿತಂಬಮೆಂಬಿನಂ
,,	೨೧	ಮನಂಗರಾಜ್ಯ	ಮದನಂಗರಾಜ್ಯ
51	೧೮	ಲಾಲನೆ	ಲಾಲಸೆ
54	೨೩	ಪುಗೆಲನೆ	ಪುಗೆ ನೆಲನ
56	೧೭	ತನನೊಳ್	ತನದೊಳ್
95	೨೪	ಮಹತ್ತಕರ್	ಮಹತ್ತರರ್
108	೨೩	ಲ್ವದೆ	ಲ್ಲದೆ
110	೨೦	ವೈಶಂ	ವೈರಂ
115	೫	ಕಂ	ಚಂ
,,	೧೭	ತೀರ್ದು	ಪೀರ್ದು
,,	,,	ದಿನಪದ್ವಿಮಾನ	ದಿನಕೃದ್ವಿಮಾನ
116	೧೨	ಕಲ್ಪಶಶಿ	ಕಲ್ಪಶಿಖಿ
124	೯	ಮನೆಯೊಳ್	ಮೊನೆಯೊಳ್
128	೯	ಮುಂಟಪ್ಸೆಡಕ್ಕು	ಮುಂಟಪ್ಪೊಡಕ್ಕು

ಪುಟ	ಪಂಙ್ತಿ	ಅಶುದ್ಧ	ಶುದ್ಧ
149	೨೫	ದಾರೂಡಾರೂಢ	ಧಾರೂಢಾರೂಢ
171	೮	ಮೆಱಿವ	ಮೆಱಿದ
172	೩೨	ಪ್ರಖಳ	ಪ್ರಖರ
207	೨	ಪ್ರಸ್ನಂ	ಪ್ರಶ್ನಂ
235	೧೮	ಮಂಗಳಾಕರಣ	ಮಂಗಳಕಾರಣ
237	೪	ನಂದನನೆಂದು	ನಂದನರೆಂದು
,,	೧೦	ವಿಟವಿಟಪಿ	ವಟವಿಟಪಿ
244	೨೧	ದಿಂದಾತ್ತರ	ದಿಂದಾಂತರ
256	೧೦	ಮೊತ್ರಯೇಂ	ಮಾತ್ರಮೇಂ
270	೨೬	ಮುಂದಿತಾ	ವಂದಿತಾ
281	೨೬	ಹ್ಸುರೆ	ಪ್ಸುರೆ
282	೧೭	ದಿಜ್ಜ್ವಲಪವಂ	ದಿಚ್ಫ್ವಲಪವಂ